# ಸಮಾಜವಿಜ್ಞಾನ I & II

# SOCIAL SCIENCE I & II

## ಅಧ್ಯಾಪಕ ಪತ್ಯ

## TEACHER TEXT

**STANDARD**

**ತರಗತಿ**

X

ಕೇರಳ ಸರಕಾರ
ಶಿಕ್ಷಣ ಇಲಾಖೆ

ತಯಾರಿಸಿದವರು

ರಾಜ್ಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಸಮಿತಿ (SCERT), ಕೇರಳ
2016

## TEXT BOOK DEVELOPMENT COMMITTEE

### SOCIAL SCIENCE - I

**Abdul Aziz VP,** V.P.K.M.M.H.S.S. Puthur Pallikkal, Malappuram

**Jamal.K,** RA.C.H.S.S. Kadameri, Kozhikode

**Jaya Krishnan.O.K**, K.P.C.H.S.S.Pattannur, Kannur

**Pradeepan.T,** G.H.S.S. Kallachi, Kozhikode

**Muralidharan Nair P.N,** N.S.S.H.S.S.Anikode, Kottayam

**Yusuf Kumar S.M,** Govt. Model Boys H.S.S Attingal, Thiruvananthapuram

**Rathanakaran T.** G..B.H.S.S. Malappuram

**Dr. P.T. Shri Kumar**, M.N.K.M.H.S.S. Palakkad

**Hari Pradeep S,** S.V.H.S. Pullad, thiruvalla, Pathanamthitta

**Prasad.V.G,** G..H.S.S. kadamanitta, Pathanamthitta

**Sabu. C.G,** Yeldoo.P. V.G.H.S.S. Thodupuzha

### SOCIAL SCIENCE - II

**Nishanth Mohan. M,** Govt. Tamil HSS Chala, Thiruvananthapuram

**Willfred Jhone. S,** M.G.H.S.S. kaniyapuram, Thiruvananthapuram

**Vijaya Kumar. C.R.**, G..H.S.S. Mithyamala, Thiruvananthapuram

**Unni Krishanan U.,** G..H.S.S. Venharmudu, Thiruvananthapuram

**Shanlal A.B,** G..H.S.S, Harippad

**Shajumon.S,** P.N.M.G.H.S.S, Kunthalloor, Chirayinkizhu

**Dr. P. Babukuttan,** DIET Kollam

**E.C. Mohanan, G.**T.T.Z. Chitoor, Palakkad

**Thomas .K.J,** G.V.H.S.S. Kunali, Idukki

**Varghees Pothan,** St.Jhons H.S.S. Muttam, Mavelikkara, Alapuzha

**Yahiya .P,** G.G.M.G.H.S.S. Chalappuram, Kozhikode (proof reading)

### EXPERTS

**Dr. P.P Abdul Razak**
Associate Professor, P.S. College, Thirurangadi

**Dr. I.P Joseph**
Acadamic Co - ordinator (Reld) S.C.E.R.T, Kerala

### Acadamic Co - ordinator

**Chithra Madhavan**
Research Officer, SCERT, Thiruvananthapuram.

**Manoj K.V**
Research Officer, SCERT, Thiruvananthapuram.

### Kannada Version Participants

**Ganesh Kumar S**
H.S.A., S.G.K.H.S. Kudlu

**Bhanu A.C.**
H.S.A. G.V.H.S.S. Mulleria

**Suresh P.,** H.S.A., G.H.S.S. Bekur

**Sanjeeva M.**
H.S.A., G.H.S.S. Paivalike

### Kannada Language Experts

Dr. Shrikrishna Bhat P.
Professor (Rtd), Govt College Kasaragod
Dr. Subrahmanya Bhat,
(Rtd. Principal), Govt. College, Kasaragod
Prof. Rama Bhat,
Rtd. HOD, Govt. College, Kasaragod

*Prepared by:* State Council of Educational Research & Training (SCERT)
Poojappura, Thiruvananthapuram -12, Kerala. E-mail:scertkerala@gmail.com

*Type setting by:* SCERT Computer Lab.

©
Government of Kerala
Education Department
2016

ಪ್ರಿಯ ಅಧ್ಯಾಪಕರೇ,

ಕೇರಳ ಶಾಲಾ ಪಠ್ಯಕ್ರಮ 2013 ಸಮಗ್ರವಾದ ಪಠ್ಯಕ್ರಮ ಪರಿಷ್ಕರಣೆಯಾಗಿದೆ. ಸಮಗ್ರ ಪರಿಷ್ಕರಣೆ ಎಂಬುದರಿಂದ ಉದ್ದೇಶಿಸುವುದೇನೆಂದರೆ ಕಿರಿಯ ಪ್ರಾಥಮಿಕ ತರಗತಿಯಿಂದ ಹೈಯರ್ ಸೆಕೆಂಡರಿ ಹಂತದವರೆಗೆ ಪಠ್ಯಕ್ರಮವನ್ನು ಸುಧಾರಣೆಗೆ ಒಳಪಡಿಸುವುದು. 2013 ರಲ್ಲಿ ಒಂದು, ಮೂರು, ಐದು, ಏಳು ಎಂಬೀ ತರಗತಿಗಳಲ್ಲಿ  ಪಠ್ಯಕ್ರಮವನ್ನು ಪರಿಷ್ಕರಣೆ ಮೂಡಿದ ಬಳಿಕ 2016ರಲ್ಲಿ ಒಂಭತ್ತು ಮತ್ತು ಹತ್ತನೇ ತರಗತಿಗಳಿಗೆ ತಲುಪುವಾಗ ಪರಿಷ್ಕರಣೆಯು ಪೂರ್ಣಗೊಂಡಿತು. ಪಠ್ಯಕ್ರಮದ ಸಮೀಪಕ್ಕನುಗುಣವಾಗಿ ನಿರಂತರತೆ ಹಾಗೂ ಪ್ರಗತಿಯನ್ನು ಖಾತರಿಪಡಿಸುವ ರೀತಿಯಲ್ಲಿ ಸಮಾಜವಿಜ್ಞಾನ ಪಠ್ಯಕ್ರಮವನ್ನು ತಯಾರಿಸಲಾಗಿದೆ.  ಹತ್ತನೇ ತರಗತಿಯ ಸಮಾಜವಿಜ್ಞಾನದ ಎರಡು ಪಾಠಪುಸ್ತಕಗಳನ್ನು ಒಟ್ಟಿಗೆ ಸೇರಿಸಿಕೊಂಡು ಸಮಾಜವಿಜ್ಞಾನ ಅಧ್ಯಾಪಕರ ಪಠ್ಯವನ್ನು ತಯಾರಿಸಲಾಗಿದೆ.

ಸಮಾಜವಿಜ್ಞಾನ 1ನೇ ಭಾಗದಲ್ಲಿರುವ ಚರಿತ್ರೆ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಎಂಬಿವುಗಳ ಹಾಗೂ ಸಮಾಜವಿಜ್ಞಾನ ಎರಡನೇ ಬಾಗದ ಭೂಗೋಳಶಾಸ್ತ್ರ, ಅರ್ಥಶಾಸ್ತ್ರ ಎಂಬಿವುಗಳ ವಿಷಯ ವಲಯಗಳಿಗೆ ಅನುಸಾರವಾಗಿ ಅಧ್ಯಾಪಕರ ಪಠ್ಯವನ್ನು ತಯಾರಿಸಲಾಗಿದೆ. ವಿದ್ಯಾರ್ಥಿ ಕೇಂದ್ರೀಕೃತವೂ ಪ್ರಕ್ರಿಯಾಧಾರಿತವೂ ಆದ ಕಲಿಕಾ ಸಮೀಪನಗಳಿಗನುಸಾರವಾಗಿ ಪಾಠಪುಸ್ತಕಗಳನ್ನೂ ಅಧ್ಯಾಪಕರ ಪಠ್ಯವನ್ನೂ ತಯಾರಿಸಲಾಗಿದೆ. ಪಠ್ಯಪುಸ್ತಕದೊಂದಿಗೆ ಬೆರೆತು ಪಠ್ಯಪುಸ್ತಕವನ್ನು ಅಭಿವೃದ್ಧಿಗೊಳಿಸಲಾಗಿದೆ. ನೂತನವಾದ ಕಲಿಕಾ ಚಟುಟವಟಿಕೆಗಳೂ, ಕಲಿಕಾ ತಂತ್ರಗಳೂ, ಮಾಹಿತಿತಂತ್ರಜ್ಞಾನದ ಫಲಪ್ರದವಾದ ಉಪಯೋಗ ಸಾಧ್ಯತೆಗಳೂ, ಮೌಲ್ಯನಿರ್ಣಯ ಸೂಚಕಗಳೂ ಈ ಅಧ್ಯಾಪಕರ ಪಠ್ಯವನ್ನು ಸಮೃದ್ಧಿಗೊಳಿಸುತ್ತದೆ.

ಪಠ್ಯಪುಸ್ತಕ ಮತ್ತು ಅಧ್ಯಾಪಕ ಪಠ್ಯದ ಎಲ್ಲಾ ಸಾಧ್ಯತೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಂಡು ಕಲಿಕಾ ಪ್ರಕ್ರಿಯೆಯನ್ನು ಮುಂದುವರೆಸಬೇಕು. ಎಲ್ಲ ಪಠ್ಯಕ್ರಮವೂ ಪರಿಪೂರ್ಣವಾಗುವುದು ತರಗತಿಗಳಲ್ಲಾಗಿದೆ. ತರಗತಿಯ ಚಟುವಟಿಕೆಗಳನ್ನು ಸಕ್ರಿಯಾವಾಗಿ, ಸೃಜನಾತ್ಮಕವಾಗಿ, ಸಂವಾದಾತ್ಮಕವಾಗಿ ಮಾಡುವುದರ ಮೂಲಕ ಮಾತ್ರವೇ ಅರ್ಥ ಪೂರ್ಣವಾದ ಜ್ಞಾನ ನಿರ್ಮಾಣ ಪ್ರಕ್ರಿಯೆಯು ಸಾಧ್ಯವಾಗುವುದು. ಅಧ್ಯಾಪಕ ಪಠ್ಯವು ಅದಕ್ಕಿರುವ ದಾರಿದೀಪವಾಗಿರಬೇಕು. ಕಲಿಕಾ ಸಾಧನೆಗಳನ್ನು ಖಾತರಿಪಡಿಸಲು, ಮೌಲ್ಯಗಳನ್ನು ಮತ್ತು ಮನೋಭಾವಗಳನ್ನು ಬೆಳೆಸಲು, ಕಲಿಕಾ ಪ್ರಕ್ರಿಯೆಯ ಯೋಜನೆಗೆ, ವಿಭಿನ್ನ ಕಲಿಕಾ ತಂತ್ರಗಳ ಪ್ರಯೋಗ ಸಾಧ್ಯತೆಗಳಿಗೆ ವಿಷಯದ ಫಲಪ್ರದವಾದ ವಿನಿಮಯಕ್ಕೆ ಸಮಾಜವಿಜ್ಞಾನ ಅಧ್ಯಾಪಕ ಪಠ್ಯ ಸಹಾಯವಾಗಬಹುದೆಂದು ಆಶಿಸುತ್ತೇನೆ.

ಶುಭಹಾರೈಕೆಯೊಂದಿಗೆ,

**ಡಾ. ಜೆ. ಪ್ರಸಾದ್**

ನಿರ್ದೇಶಕರು

ಎಸ್.ಸಿ.ಇ.ಆರ್.ಟಿ.  ಕೇರಳ

# ಅನುಕ್ರಮಣಿಕೆ

## ಭಾಗ – 1


1 ಪಠ್ಯಕ್ರಮ – ಸಾಮಾನ್ಯ ಸಮೀಪನ 05
2 ಮೌಲ್ಯನಿರ್ಣಯ ಸಮೀಪನ 36


## ಭಾಗ – 2


3 ಸಮಾಜವಿಜ್ಞಾನ ಕಲಿಕಾ ಸಮೀಪನ 45
4 ಕಲಿಕಾ ಸಾಧನೆಗಳು 56
5 ವಾರ್ಷಿಕ ಯೋಜನೆ 57


## ಭಾಗ – 3

### ಸಮಾಜವಿಜ್ಞಾನ - I

**ಅಧ್ಯಾಯದೆಡೆಗೆ**


**01.** ಜಗತ್ತನ್ನು ಪರಿವರ್ತಿಸಿದ ಕ್ರಾಂತಿಗಳು ........ **65**
**02.** ಇಪ್ಪತ್ತನೇ ಶತಮಾನದ ಜಗತ್ತು ........ **79**
**03.** ಬ್ರಿಟಿಷರ ಶೋಷಣೆ ಹಾಗೂ ಪ್ರತಿಭಟನೆಗಳು ........ **89**
**04.** ಸಂಸ್ಕೃತಿ ಹಾಗೂ ರಾಷ್ಟ್ರೀಯತೆ ........ **99**
**05.** ಹೋರಾಟ ಮತ್ತು ಸ್ವಾತಂತ್ರ್ಯ ........ **108**
**06.** ಸ್ವಾತಂತ್ರ್ಯನಂತರ ಭಾರತ ........ **1117**
**07.** ಕೇರಳವು ಆಧುನಿಕತೆಯ ಕಡೆಗೆ ........ **129**
**08.** ಸಾರ್ವಜನಿಕ ಆಡಳಿತ ........ **139**
**09.** ರಾಷ್ಟ್ರ ಹಾಗೂ ರಾಜ್ಯಶಾಸ್ತ್ರ ........ **149**
**10.** ಪೌರ ಪ್ರಜ್ಞೆ ........ **159**
**11.** ಸಮಾಜಶಾಸ್ತ್ರ ಕಲಿಕೆಗೊಂದು ಮುನ್ನುಡಿ ........ **171**


### ಸಮಾಜವಿಜ್ಞಾನ - II


**01.** ಋತುಭೇದಗಳು ಮತ್ತು ಸಮಯ ........ **181**
**02.** ಮಾರುತಗಳ ಮೂಲಗಳನ್ನು ಹುಡುಕಿ ........ **191**
**03.** ಭಾರತದಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿ ಭೂಪಟಗಳ ಮೂಲಕ ........ **202**
**04.** ಭೂಮೇಲ್ಮೈ ವಿಶ್ಲೇಷಣೆ ........ **211**
**05.** ಸಾರ್ವಜನಿಕ ವೆಚ್ಚ ಮತ್ತು ಸಾರ್ವಜನಿಕ ಆದಾಯ ........ **221**
**06.** ಆಕಾಶ ಕಣ್ಣುಗಳು ಮತ್ತು ಜ್ಞಾನದ ವಿಶ್ಲೇಷಣೆ ........ **232**
**07.** ವೈವಿಧ್ಯಗಳ ಭಾರತ ........ **242**
**08.** ಭಾರತದ ಸಂಪನ್ಮೂಲಗಳು ........ **258**
**09.** ಆರ್ಥಿಕ ಸಂಸ್ಥೆಗಳು ಮತ್ತು ಸೇವೆಗಳು ........ **269**
**10.** ಬಳಕೆಗಾರ; ಸಂತೃಪ್ತಿ ಮತ್ತು ಸಂರಕ್ಷಣೆ ........ **276**

# ಕೇರಳ ಶಾಲಾ ಪಠ್ಯಕ್ರಮ 2013
# ಸಾಮಾನ್ಯ ಸಮೀಪನಗಳು

## 1.1 ಪೀಠಿಕೆ

ಸಾಮಾಜಿಕ ಬದುಕಿನ ಗುಣಮಟ್ಟದ ಹಿನ್ನೆಲೆಯಲ್ಲಿ ಹೇಳುವುದಾದರೆ ಕೇರಳವು ದೇಶಕ್ಕೆ ಮಾದರಿಯಾಗಿದೆ. ಸಾರ್ವಜನಿಕ ಶಿಕ್ಷಣದ ವ್ಯಾಪಕತೆ, ಸಾರ್ವಜನಿಕ ಆರೋಗ್ಯದ ಗುಣಮಟ್ಟ ಎಂಬಿವುಗಳೇ ಕೇರಳದ ಈ ಸಾಧನೆಗೆ ಪ್ರಧಾನ ಕಾರಣವಾಗಿವೆ. ಸಮಾಜದ ಎಲ್ಲ ವರ್ಗಗಳ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗಿದ್ದರೂ, ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಎಂಬುದು ಕೇರಳದ ಶಿಕ್ಷಣ ಕ್ಷೇತ್ರವು ಎದುರಿಸುವ ಅತಿ ದೊಡ್ಡ ಸವಾಲಾಗಿದೆ. 1986 ರ ರಾಷ್ಟ್ರೀಯ ಶಿಕ್ಷಣ ನೀತಿಯ ಅಂಗವಾಗಿ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಅಧ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇದರೊಂದಿಗೆ ಪಠ್ಯಕ್ರಮವನ್ನು ಶಿಶುಕೇಂದ್ರಿತ, ಚಟುವಟಿಕೆ ಆಧಾರಿತ, ಪ್ರಕ್ರಿಯಾತ್ಮಕ ಹಾಗೂ ಕಾಲೋಚಿತವಾಗಿ ಪರಿಷ್ಕರಿಸುವ ಪ್ರಯತ್ನಗಳಾಗಿವೆ. ಇದರ ಪರಿಣಾಮವಾಗಿ ತರಗತಿಗಳಲ್ಲಿ ಜ್ಞಾನ ನಿರ್ಮಾಣ ಪ್ರಕ್ರಿಯೆಗಳು ನಡೆಯಬೇಕು ಎಂಬ ತಿಳುವಳಿಕೆ ಮೂಡಿತು. ಇದರಂತೆ ಮಗುವನ್ನು ಶೈಕ್ಷಣಿಕ ಪ7ಿಕ್ರಿಯೆಗಳ ಕೇಂದ್ರಸ್ಥಾನದಲ್ಲಿ ಇರಿಸುವ ಚಟುವಟಿಕೆಗಳಿಗೆ ನಾಂದಿ ಹಾಡಲು ನಮಗೆ ಸಾಧ್ಯವಾಗಿದೆ.

ಬದುಕಿನ ಎಲ್ಲಾ ಕ್ಷೇತ್ರಗಳೂ ಪ್ರತಿ ಕ್ಷಣ ಬದಲಾಗುತ್ತಿವೆ. ಅಧ್ಯಾಪನ ಶಾಸ್ತ್ರ, ಅಧ್ಯಯನ ಮನಶ್ಶಾಸ್ತ್ರ ಮೊದಲಾದ ವಿಷಯಗಳ ಹೊಸ ಸಂಶೋಧನೆಗಳು ಮತ್ತು ಪ್ರಾಯೋಗಿಕವಾದ ಅನುಭವಗಳು ಉತ್ತಮ ರೀತಿಯ ಕಲಿಕೋಪಕರಣಗಳ ನಿರ್ಮಾಣ ಹಾಗೂ ಕಲಿಕಾನುಭವಗಳ ವಿನಿಮಯ ಮತ್ತು ಮೌಲ್ಯಮಾಪನವನ್ನು ನಡೆಸಲು ನಮ್ಮನ್ನು ಪ್ರೇರೇಪಿಸಿವೆ. ಎಲ್ಲಾ ವರ್ಗದ ಮಕ್ಕಳ ಕಲಿಕೆಯ ಪ್ರಗತಿಯನ್ನು ನಾವು ಗುರಿಯಿರಿಸಿಕೊಂಡಿದ್ದೇವೆ.

“ವಿಭಿನ್ನವಾದ ಸಾಮಾಜಿಕ, ಆರ್ಥಿಕ ಹಿನ್ನೆಲೆಯುಳ್ಳ, ವಿಭಿನ್ನ ದೈಹಿಕ, ಮಾನಸಿಕ, ಬೌದ್ಧಿಕ ಸಾಮರ್ಥ್ಯಗಳಿರುವ ಎಲ್ಲ ಮಕ್ಕಳಿಗೆ ಕಲಿಯಲು ಹಾಗೂ ಶಾಲೆಗಳಲ್ಲಿ ಉತ್ತೀರ್ಣರಾಗಲು ಸಾಧ್ಯವೆಂದು ದೃಢಪಡಿಸಬೇಕು. ಲಿಂಗ, ಜಾತಿ, ಭಾಷೆ, ಸಂಸ್ಕೃತಿ, ಧರ್ಮ, ಅಂಗವೈಕಲ್ಯಗಳೇ ಮೊದಲಾದ ಕಾರಣಗಳಿಂದ ಉಂಟಾಗುವ ಸಮಸ್ಯೆಗಳನ್ನು ಮೀರಲು ಯೋಜನೆಗಳು ಮತ್ತು ಶಿಕ್ಷಣ ನೀತಿಗಳು ಮಾತ್ರ ಸಾಲದು. ಎಳೆಯ ಪ್ರಾಯದಿಂದಲೇ ಯೋಗ್ಯವಾದ ಕಲಿಕಾ ಗುರಿಗಳನ್ನೂ, ಅಧ್ಯಾಪನ ರೀತಿಗಳನ್ನೂ ಆರಿಸಿ ರೂಪಿಸಬೇಕಾಗಿದೆ. (NCF 2005, ಪು.27)

- ವಿಭಿನ್ನ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯುಳ್ಳವರು.
- ವಿಭಿನ್ನ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಸಾಮರ್ಥ್ಯವುಳ್ಳವರು.

ಹೀಗೆ ಎಲ್ಲಾ ವರ್ಗಗಳಿಗೆ ಸೇರಿದವರಿಗೆ ಕಲಿಕಾ ಸಾಧನೆಯನ್ನು ಗಳಿಸಲು ಶಿಕ್ಷಣ ಪ್ರಕ್ರಿಯೆಯ ಎಲ್ಲಾ ವಲಯಗಳಲ್ಲಿ

ಸೂಕ್ಷ್ಮವೂ ಶಾಸ್ತ್ರೀಯವೂ ಆಗಿರುವ ಧೋರಣೆಗಳನ್ನು ಸ್ವೀಕರಿಸಬೇಕಾದುದು ನಮ್ಮ ದೃಷ್ಟಿಕೋನವಾಗಬೇಕು ಎಂದು ಎನ್.ಸಿ.ಎಫ್. ನಿರ್ದೇಶಿಸುತ್ತದೆ. ಕಾಲೋಚಿತವಾಗಿ ಪಠ್ಯಕ್ರಮವನ್ನು ನವೀಕರಿಸುವುದು ಮತ್ತು ಈ ವ್ಯವಸ್ಥೆಯನ್ನು ಕ್ರಿಯಾತ್ಮಕವಾಗಿಸುವುದರಿಂದ ಮಾತ್ರ ಈ ಗುರಿಯನ್ನು ಸಾಧಿಸಬಹುದು. ಈ ದೃಷ್ಟಿಕೋನದ ಹಿನ್ನೆಲೆಯಲ್ಲಿ ಈಗ ಪಠ್ಯಕ್ರಮವನ್ನು ಪರಿಷ್ಕರಿಸಲಾಗುತ್ತಿದೆ. ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಎಲ್ಲರ ಅನುಭವ, ಸಂಶೋಧನೆ ಹಾಗೂ ಅಧ್ಯಯನ ಶೋಧಗಳನ್ನು ಬಳಸಿಕೊಂಡು ಇದನ್ನು ಮಾಡಲಾಗುವುದು. ಸಮರ್ಪಕತೆಯಿಂದ ಮತ್ತಷ್ಟು ಸಮರ್ಪಕತೆಗೆ ಎಂಬ ವೈಜ್ಞಾನಿಕ ಸಮೀಪನವನ್ನು ಇಲ್ಲಿ ಸ್ವೀಕರಿಸಲಾಗುವುದು.

## 1.2 ಪಠ್ಯಕ್ರಮ ಪರಿಷ್ಕರಣೆಯ ಅಗತ್ಯ

ಕಳೆದ ಐದು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಹೊಸ ಆಶಯಗಳು ಮೂಡಿಬಂದಿವೆ. ಭಾರತದಲ್ಲಿ 2009 ರಲ್ಲಿ ಜ್ಯಾರಿಗೆ ಬಂದ ವಿದ್ಯಾಭ್ಯಾಸ ಹಕ್ಕು ಕಾಯಿದೆಯಿಂದ ಶಿಕ್ಷಣವು ಮಕ್ಕಳ ಹಕ್ಕಾಗಿ ಬದಲಾಗಿದೆ. ಹಕ್ಕು ಆಧಾರಿತ ವಿದ್ಯಾಲಯ (Right based Educational Institution) ಎಂಬ ಗುರಿಯನ್ನು ಸಾಧಿಸಲು ನಮ್ಮ ಪಠ್ಯಕ್ರಮವನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸಬೇಕಾಗಿದೆ. ಅಂತಾರಾಷ್ಟ್ರೀಯ ಗುಣಮಟ್ಟ ಎಂಬುದು ಯಾವುದೇ ಒಂದು ದೇಶದ ಗುಣಮಟ್ಟವಲ್ಲ. ಇದು ಒಂದು ಪ್ರತ್ಯೇಕ ಹಂತವನ್ನು ದಾಟುವ ಮಗು ಜಗತ್ತಿನ ಯಾವುದೇ ಪ್ರದೇಶದಲ್ಲಿದ್ದರೂ ಆರ್ಜಿಸಬೇಕಾದ ಜ್ಞಾನ ಮತ್ತು ಅನುಭವಗಳ ಒಟ್ಟು ಮೊತ್ತವಾಗಿದೆ. ಜಾಗತಿಕ ಮಟ್ಟದಲ್ಲಿ ಜ್ಯಾರಿಗೊಂಡಿರುವ ಉತ್ತಮ ಅಧ್ಯಯನ, ಅಧ್ಯಾಪನ ಮಾದರಿಗಳು ಕೇರಳದ ಮಕ್ಕಳಿಗೂ ಸಿಗಬೇಕಾದುದು ಅಗತ್ಯ ಎಂಬುದನ್ನು ಇದು ಸೂಚಿಸುತ್ತದೆ.

ಶಿಕ್ಷಣ ಹಕ್ಕು ಕಾಯ್ದೆಯಲ್ಲಿ ಪಠ್ಯಕ್ರಮ, ಮೌಲ್ಯಮಾಪನ ಎಂಬಿವುಗಳ ಸಂಬಂಧಪಟ್ಟ ಕಾನೂನುಗಳು ಪಠ್ಯಕ್ರಮ ಪರಿಷ್ಕರಣೆಯಲ್ಲಿ ಪರಿಗಣಿಸುವುದು ಅಗತ್ಯವಾಗಿದೆ.

## ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ 2009

### ಸೆಕ್ಷನ್ –29 (ಅಧ್ಯಾಯ 5)

### ಪಠ್ಯಕ್ರಮ ಹಾಗೂ ಮೌಲ್ಯನಿರ್ಣಯ ಸೂಚಕಗಳು

1) ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನಗಳನ್ನು ಆಯಾ ಸರಕಾರದ ಅಧಿಸೂಚನೆಯ ಮೂಲಕ ಸೂಚಿಸಲಾಗುವ ಒಂದು ಶೈಕ್ಷಣಿಕ ಅಧಿಕಾರ ಸ್ಥಾನದ ಮೂಲಕ ಪ್ರತಿಪಾದಿಸಬೇಕು.

2) ಶೈಕ್ಷಣಿಕ ಅಧಿಕಾರ ಸ್ಥಾನ 1 ನೇ ಉಪವಿಭಾಗದ ಪ್ರಕಾರ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನವನ್ನು ಪ್ರತಿಪಾದಿಸುವಾಗ ಕೆಳಗಿನ ಅಂಶಗಳನ್ನು ಪರಿಗಣಿಸಬೇಕಾಗಿದೆ.

*a) ಸಂವಿಧಾನದಲ್ಲಿ ಹೇಳಲಾದ ಮೌಲ್ಯಗಳ ಹೊಂದಿಕೆ.*

*b) ಮಗುವಿನ ಸರ್ವತೋಮುಖವಾದ ಬೆಳವಣಿಗೆ.*

*c) ಮಗುವಿನ ಜ್ಞಾನ, ಸಾಮರ್ಥ್ಯ, ಕೌಶಲ್ಯಗಳನ್ನು ಕ್ರಮೇಣ ಹೆಚ್ಚಿಸುವುದು.*

*d) ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಗಳ ಸಂಪೂರ್ಣ ಬೆಳವಣಿಗೆ.*

*e) ಮಗುವಿಗೆ ಇಷ್ಟವಾದ, ಶಿಶು ಕೇಂದ್ರಿತವಾದ ಚಟುವಟಿಕೆಗಳಿರುವ ಕಲಿಕೆ.*

*f) ಕಲಿಕೆಯ ಮಾಧ್ಯಮವನ್ನು ಮಗುವಿನ ಮಾತೃಭಾಷೆಯಲ್ಲಿಯೇ ನೀಡುವುದನ್ನು ಆದಷ್ಟು ಪ್ರಾಯೋಗಿಕಗೊಳಿಸಬೇಕು.*

*g) ಭಯ, ಮಾನಸಿಕ ಒತ್ತಡ ಉಂಟಾಗುವ ಸ್ಥಿತಿ, ಆತಂಕ ಇವುಗಳಿಂದ ಮಗುವನ್ನು ಮುಕ್ತಗೊಳಿಸಿ, ಸ್ವತಂತ್ರವಾಗಿ ಅಭಿಪ್ರಾಯ ಪ್ರಕಟಿಸಲು ಮಗುವಿಗೆ ಸಹಾಯ ನೀಡುವುದು.*

*h) ಮಗುವಿನ ಜ್ಞಾನಗ್ರಹಣ ಮತ್ತು ಅದನ್ನು ಪ್ರಯೋಗಿಸುವ ಸಾಮರ್ಥ್ಯದ ಸಮಗ್ರ ಮತ್ತು ನಿರಂತರ ಮೌಲ್ಯಮಾಪನ.*

## ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಿರುವ ಮಕ್ಕಳ ಹಕ್ಕು ಕೇರಳದ ಕಾನೂನುಗಳು ಹಾಗೂ ಪರಿಚ್ಛೇದಗಳು 2011

**ಶೈಕ್ಷಣಿಕ ಅಧಿಕಾರಗಳು**

1. 29ನೇ ಪರಿಚ್ಛೇದದ ಪ್ರಕಾರ ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಮಿತಿ (SCERT) ಶೈಕ್ಷಣಿಕ ಅಧಿಕಾರಗಳನ್ನು ನೀಡಲಾಗಿದೆ.
2. (1)ನೇ ಉಪಪರಿಚ್ಛೇದದ ಅಡಿಯಲ್ಲಿ ಪ್ರಕಟಿಸಿರುವ ಪ್ರಕಾರ ಶೈಕ್ಷಣಿಕ ಅಧಿಕಾರವನ್ನು ಹೊಂದಿರುವ ಸಂಸ್ಥೆಯ ಪಠ್ಯಕ್ರಮ, ಮೌಲ್ಯಮಾಪನ ಸೂಚಕ ತಯಾರಿಸುವಾಗ ಈ ಕಾನೂನಿನ 29ನೇ ಪರಿಚ್ಛೇದದ (2)ನೇ ಉಪಪರಿಚ್ಛೇದದ ಅಂಶ (a) ಯಿಂದ (f) ವರೆಗಿನ ನಿಬಂಧನೆಗಳಿಗೆ ಭಾದಕವಾಗದಂತೆ;
   (a) ಸಕಾಲಿಕಲವೂ ಪ್ರಾಯಕ್ಕನುಗುಣವೂ ಆಗಿರುವ ಪಠ್ಯಕ್ರಮ ಮತ್ತು ಪಾಠಪುಸ್ತಕಗಳಿಗೆ ಮೂಲಭೂತವಾದ ಜೀವನ ನೈಪುಣ್ಯವನ್ನು ರೂಢಿಸಿಕೊಳ್ಳಲು ಅಗತ್ಯವಾದ ಕಲಿಕಾ ಸಾಮಗ್ರಿಗಳೂ ಒಳಗೊಂಡಂತೆ ಇತರ ಕಲಿಕಾ ಸಾಮಗ್ರಿಗಳಿಗೆ ರೂಪು ನೀಡುವುದು;
   (b) ಒಂದರಿಂದ ಎಂಟರ ವರೆಗಿನ ತರಗತಿಗಳಲ್ಲಿ ಪ್ರತಿಯೊಂದು ವಿಷಯಕ್ಕೂ ಅಗತ್ಯವಾದ ಕನಿಷ್ಠ ಕಲಿಕಾ ಪರಿಣಾಮಗಳನ್ನು ನಿರ್ಣಯಿಸಬೇಕಲ್ಲದೆ ಮಕ್ಕಳಿಗಾಗಿ ಮೌಲಿಕವಾದ ಸೂಚಕಗಳನ್ನು ವಿಕಾಸಗೊಳಿಸಿ ಮಕ್ಕಳ ಕಲಿಕಾ ಪರಿಣಾಮಕ್ಕಾಗಿ ಅಧ್ಯಾಪಕರ ಜವಾಬ್ದಾರಿಯ ಮಾನದಂಡಗಳಿಗೆ ರೂಪು ನೀಡುವುದು;
   (c) ಕಲಿಕೆ ಮತ್ತು ಬೋಧನೆಯ ಪರಿಣಾಮಗಳ ಆಧಾರದಲ್ಲಿ ಸೇವಾಕಾಲದ ಅಧ್ಯಾಪಕ ತರಬೇತಿ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು;
   (d) 1995ರ ನ್ಯೂನತೆಗಳಿರುವ ವ್ಯಕ್ತಿಗಳಿಗಾಗಿರುವ (ಸಮಾನ ಹಕ್ಕುಗಳು, ಹಕ್ಕುಗಳ ಸಂರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ನಿಯಮಗಳಿಗನುಸಾರವಾಗಿ ನ್ಯೂನತೆಗಳಿರುವ ಮಕ್ಕಳಿಗೆ ಶಿಕ್ಷಣವನ್ನು ನೀಡುವುದಕ್ಕಾಗಿ ಅಧ್ಯಾಪಕರಿಗೆ ಸೇವಾಪೂರ್ವ ಮತ್ತು ಸೇವಾಕಾಲದ ತರಬೇತಿ ಕಾರ್ಯಕ್ರಮಗಳಿಗೆ ರೂಪು ನೀಡುವುದು;
   (e) ನಿರಂತರವೂ ಸಮಗ್ರವೂ ಆದ ಮೌಲ್ಯಮಾಪನವನ್ನು ಜಾರಿಗೆ ತರುವುದಕ್ಕಾಗಿ ಅಗತ್ಯವಾದ ಸೂಚನೆಗಳನ್ನೂ ಮಾಹಿತಿಗಳನ್ನೂ ತಯಾರಿಸುವುದು.
   (f) ಶೈಕ್ಷಣಿಕ ಧೋರಣೆಗಳು ಹಾಗೂ ಕಾರ್ಯಕ್ರಮಗಳು, ಪಠ್ಯಕ್ರಮ, ಬೋಧನೆಯ ಮೂಲಕ ಮಕ್ಕಳ ಮೇಲಾಗುವ ಪರಿಣಾಮ ಇತ್ಯಾದಿಗಳ ಕುರಿತು ಸಂಶೋಧನೆಗಳನ್ನೂ ಅಧ್ಯಯನಗಳನ್ನೂ ಕೈಗೊಳ್ಳುವುದು ಮತ್ತು ಅದನ್ನು ಜಾರಿಗೊಳಿಸುವುದು.

ಶಿಕ್ಷಣ ಹಕ್ಕು ಕಾಯ್ದೆಯ ಹಿನ್ನೆಲೆಯಲ್ಲಿ ನಿರಂತರ ಹಾಗೂ ಸಮಗ್ರವಾದ ಮೌಲ್ಯಮಾಪನವು ಸಾಂವಿಧಾನಿಕ ಬಾಧ್ಯತೆಯಾಗಿದೆ. ಇದನ್ನು ಗಮನದಲ್ಲಿರಿಸಿಕೊಂಡು ಪಠ್ಯಕ್ರಮವನ್ನು ಪರಿಷ್ಕರಿಸಬೇಕು. ಈ ಹಿನ್ನೆಲೆಯಲ್ಲಿ ಪಾಠಪುಸ್ತಕ ಪರಿಷ್ಕರಣೆಯನ್ನು ನಾವು ಕಾಣಬೇಕು.

**ಕೇರಳ ಶಾಲಾ ಪಠ್ಯಕ್ರಮದ (2013) ವೈಶಿಷ್ಟ್ಯಗಳನ್ನು ನೋಡೋಣ.**

1) ವಿದ್ಯಾರ್ಥಿ ಕೇಂದ್ರಿತ, ಪ್ರಕ್ರಿಯಾತ್ಮಕ, ಚಟುವಟಿಕೆ ಪ್ರಧಾನ, ಮೌಲ್ಯಾಧಾರಿತ ಪಠ್ಯಕ್ರಮ.

2) ಬೌದ್ಧಿಕ ಹಂತದಲ್ಲಿ, ಪ್ರಕ್ರಿಯೆಗಳ ಹಂತದಲ್ಲಿ, ಮನೋಭಾವ ಹಂತದಲ್ಲಿ ಹಾಗೂ ಮೌಲ್ಯಗಳ ಹಂತದಲ್ಲಿ ಮಗುವಿನ ಕಲಿಕಾ ಸಾಧನೆಗಳಿಗೆ ಒತ್ತು ನೀಡಲಾಗಿದೆ.

3) ಜ್ಞಾನ ನಿರ್ಮಾಣ ಎಂಬ ತಾತ್ವಿಕ ನೆಲೆಗಟ್ಟಿನಲ್ಲಿರುವ ಪಠ್ಯಕ್ರಮ.

4) ವಿನಿಮಯ ಪ್ರಕ್ರಿಯೆಯಲ್ಲಿ ವೈವಿಧ್ಯಪೂರ್ಣವೂ ಯೋಗ್ಯವೂ ಆದ ಅಧ್ಯಾಪನ ತಂತ್ರಗಳನ್ನು ಸ್ವೀಕರಿಸಿ ಉಪಯೋಗಿಸಲು ಅಧ್ಯಾಪಕರಿಗೆ ಸ್ವಾತಂತ್ರ್ಯವಿದೆ.

5) ಕಲಿಕಾಸಾಧನೆ, ಮಕ್ಕಳ ವಿಭಿನ್ನ ಗುಣಮಟ್ಟ ಇವುಗಳನ್ನು ತಿಳಿದು ವಿವಿಧ ಕಲಿಕಾ ವಿಧಾನಗಳನ್ನು ಅನುಷ್ಠಾನಗೊಳಿಸುವುದು. ಕಂಡು ಹಿಡಿಯುವ ಕಲಿಕೆ, ಆಶಯಗ್ರಹಣ ರೀತಿ, ಹೊಸ ಚಿಂತನೆಗಳು, ಯೋಚಿಸುವ ಸಾಮರ್ಥ್ಯವನ್ನು ಬೆಳೆಸುವುದು. ಸಹಕಾರ ಕಲಿಕೆ, ಸಹವರ್ತಿ ಕಲಿಕೆ, ಚಿಂತನೆಗಳ ಪ್ರತಿಫಲನ, ವೈಯಕ್ತಿಕ ಮತ್ತು ಗುಂಪಿನ ಅವಕಾಶಗಳನ್ನು ಒದಗಿಸುವುದು ಮೊದಲಾದ ವಿಧಾನಗಳನ್ನು ಪರಿಗಣಿಸುವುದು.

6) ಉಚಿತ ಸಾರ್ವಜನಿಕ ಶಿಕ್ಷಣ ಎಂಬ ಹಾಗೆ ಎಲ್ಲ ಮಕ್ಕಳ ಕಲಿಕಾ ಸಾಧನೆಗೆ ಪ್ರಾಧಾನ್ಯ ನೀಡಬೇಕು.

7) ಪ್ರಿ–ಪ್ರೈಮರಿಯಿಂದ ಹೈಯರ್ ಸೆಕಂಡರಿ ವರೆಗೆ ಸಮಗ್ರವಾದ ಪಠ್ಯಕ್ರಮ.

8) ಪ್ರತಿಯೊಂದು ತರಗತಿಗೂ ವಿವಿಧ ವಿಷಯಗಳ ಹೂರಣವನ್ನು ರಾಷ್ಟ್ರೀಯ ಮಟ್ಟದ ವಿಷಯಗಳ ಹೂರಣದೊಂದಿಗೆ ಏಕೀಕರಿಸಿ, ಕೇರಳದ ಪಾಠಪುಸ್ತಕಗಳನ್ನು ತಯಾರಿಸಲಾಗುವುದು.

9) ರಾಷ್ಟ್ರೀಯ ಮಟ್ಟದಲ್ಲಿರುವಂತೆ ಒಂದು ಮತ್ತು ಎರಡನೇ ತರಗತಿಗಳಿಗೆ ಮಾತೃಭಾಷೆ(ಪರಿಸರ ಅಧ್ಯಯನದೊಂದಿಗೆ) ಗಣಿತ ಮತ್ತು ಇಂಗ್ಲಿಷ್ ಎಂಬ ಮೂರು ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.

10) ಒಂದರಿಂದ ನಾಲ್ಕನೇ ತರಗತಿಯವರೆಗಿನ ಇಂಗ್ಲಿಷ್ ಮಾಧ್ಯಮ ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.

11) ಶಾಸ್ತ್ರೀಯ ಭಾಷೆ ಹಾಗೂ ಮಾತೃಭಾಷೆ ಎಂಬ ನೆಲೆಯಲ್ಲಿ ಕನ್ನಡ ಭಾಷಾ ಕಲಿಕೆಗೆ ವಿಶೇಷವಾದ ಪ್ರಾಧಾನ್ಯ ನೀಡಲಾಗುವುದು.

12) ಪ್ರಿ–ಪ್ರೈಮರಿ ಶಿಕ್ಷಣಕ್ಕಾಗಿ ಏಕೀಕೃತ ಪಠ್ಯಕ್ರಮವನ್ನು ರೂಪಿಸಿ, ಔಪಚಾರಿಕ ಶಿಕ್ಷಣದ ಅಂಗವಾಗಿ ಬದಲಾಯಿಸಲು ನಿರ್ದೇಶಿಸಲಾಗುವುದು.

13) ಮಾಹಿತಿ ತಂತ್ರಜ್ಞಾನವನ್ನು (ICT) ಒಂದು ಪಠ್ಯವಿಷಯ ಎನ್ನುವುದಕ್ಕಿಂತ ಪಠ್ಯವಿಷಯಗಳನ್ನು ಸಂವಹನಮಾಡುವ ಮಾಧ್ಯಮವಾಗಿ ಬಳಸಬೇಕು.

14) ವಿಶೇಷವಾದ ಪರಿಗಣನೆಗೆ ಅರ್ಹರಾದ ಮಕ್ಕಳಿಗೆ ವಿಭಿನ್ನ ಹಾಗೂ ನೂತನವಾದ ಕಲಿಕಾ ತಂತ್ರಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು ಮತ್ತು ವಿಭಿನ್ನವಾದ ಮೌಲ್ಯಮಾಪನ ಚಟುವಟಿಕೆಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು.

15) ಕಲಿಕಾ ಸಾಧನೆಗಳನ್ನು ಅವಲಂಬಿಸಿದ ಸಮಗ್ರ ಮತ್ತು ನಿರಂತರವಾದ ಮೌಲ್ಯ ಮಾಪನ (CCE) ನಡೆಸಬೇಕು.

16) ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ, ಕಲೆಯ ಶಿಕ್ಷಣ, ವೃತ್ತಿ ಪರಿಚಯ ಇವುಗಳನ್ನು ಕಡ್ಡಾಯ ಪಠ್ಯವಿಷಯಗಳಾಗಿ ಪರಿಗಣಿಸಲಾಗಿದೆ.

17) ಹೈಯರ್ ಸೆಕಂಡರಿ ವಿಭಾಗದಲ್ಲಿ ಕಾಲಾನುಸಾರಿಯಾಗಿ ಪಾಠ ಪುಸ್ತಕಗಳನ್ನು ಸಿದ್ಧಪಡಿಸಬೇಕು.

18) ರಾಷ್ಟ್ರೀಯ ಶಿಕ್ಷಣ ನಿಯಮದ ಬೆಳಕಿನಲ್ಲಿ ಹಕ್ಕು ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕು.

19) ಪ್ರತಿಯೊಬ್ಬ ಅಧ್ಯಾಪಕನೂ ಓರ್ವ ಸಹರಕ್ಷಕ (Mentor)ನ ಸ್ಥಾನಕ್ಕೇರಿ, ಬೇಕಾದ ಕಾಳಜಿಯನ್ನು, ರಕ್ಷಣೆಯನ್ನು ಶಾಲೆಯಲ್ಲಿ ಮತ್ತು ತರಗತಿಯಲ್ಲಿ ಮಗುವಿಗೆ ಒದಗಿಸಬೇಕು.

20) ಅಧ್ಯಾಪಕರು ಪಾಲಿಸಬೇಕಾದ ವೃತ್ತಿ ನೀತಿ ಸಂಹಿತೆಗೆ (Code of Professional Ethics for School Teacher) ಒತ್ತು ನೀಡಲಾಗುವುದು.

21) 21ನೇ ಶತಮಾನದ ಕಲಿಕಾ ನೈಪುಣ್ಯಗಳು (21st Century Learning skills) ಕಾಲೋಚಿತವಾಗಿ ಗಳಿಸಿಕೊಳ್ಳುವುದಕ್ಕೆ ಯೋಗ್ಯವಾಗಿವೆ.

22) ಮಾನವೀಯ ಮೌಲ್ಯಗಳನ್ನು ಒಳಗೊಂಡ ತಲೆಮಾರನ್ನು ಸೃಷ್ಟಿಸಲು ಸಮರ್ಥವಾಗಿದೆ.

23) ಸಮಾನ ಅವಕಾಶ ಮತ್ತು ಸಮಾನತೆ (Equity and Equality) ಲಭಿಸುವ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಂಡಿದೆ.

ಸಹಜವಾದ ಕಲಿಕೆ, ಕಲಿಯುವ ಮಕ್ಕಳ ಬೌದ್ಧಿಕ, ಮಾನಸಿಕ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು ತಲೆ, ಹೃದಯ, ಹಸ್ತ ಸಮನ್ವಯಗೊಂಡ ಪಠ್ಯಕ್ರಮ (Curriculum for the harmony of head, Heart and Hand) ಎಂಬ ಕಾಣ್ಕೆಯೊಂದಿಗೆ ಪಠ್ಯಕ್ರಮವನ್ನು ನಾವು ಮಾಡಬೇಕು.

ಹಾಗಾದರೆ ಪಠ್ಯಕ್ರಮ ಸಮೀಪನ ಹೇಗಿರಬೇಕು? ಅದರ ಸೈದ್ಧಾಂತಿಕ ಮತ್ತು ಪ್ರಾಯೋಗಿಕವಾದ ಅಡಿಪಾಯ ಹೇಗಿರಬೇಕು?

## 1.3 ಪಠ್ಯಕ್ರಮ ಸಮೀಪನ

ಪಂಚೇಂದ್ರಿಯಗಳನ್ನು ಬಳಸಿ ಸುತ್ತುಮುತ್ತಲಿನ ಪರಿಸರದಿಂದ ಕಲಿಯಲಿರುವ ಸಹಜ ಸಾಮರ್ಥ್ಯಗಳೊಂದಿಗೆ ಮಗು ಹುಟ್ಟುತ್ತದೆ. ಜಗತ್ತನ್ನು ಹೊಸ ರೀತಿಯಲ್ಲಿ ನೋಡಲು, ಅರ್ಥಮಾಡಲು, ವ್ಯವಹರಿಸಲು, ಮೌಲ್ಯಮಾಪನ ಮಾಡಲು ಶಾಲೆಯ ಶಿಕ್ಷಣದ ಮೂಲಕ ಮಗುವಿಗೆ ಸಾಧ್ಯವಾಗಬೇಕು. ತನ್ನ ಮುಂದಿರುವ ಸಮಸ್ಯೆಗಳನ್ನು ಎದುರಿಸಿ, ಆ ಸಮಸ್ಯೆಗಳನ್ನು ಪರಿಹರಿಸಿಕೊಂಡು ಕಲಿಕೆ ನಡೆಯುತ್ತದೆ. ಪಠ್ಯಕ್ರಮ ವಿನಿಮಯ ಸಮೀಪನದ ಲಕ್ಷಣಗಳು ಯಾವುವು?

- ಚಟುವಟಿಕೆ ಆಧಾರಿತವಾದುದು.
- ಪ್ರಕ್ರಿಯೆಗಳಿಂದ ಕೂಡಿದ್ದು.
- ಕಲಿಕೆಯನ್ನು ಗಟ್ಟಿಗೊಳಿಸುವುದು.

- ಕಲಿಕಾ ಸಾಧನೆಗಳನ್ನು ಸಫಲಗೊಳಿಸಲು ಸಮರ್ಥವಾದುದು.
- ಪರಿಸರ ಆಧಾರಿತವಾದುದು.
- ವಿಕಾಸದ ವಲಯಗಳನ್ನು ಪರಿಗಣಿಸುವುದು.
- ವಿದ್ಯಾರ್ಥಿಯ ಸ್ವಭಾವಕ್ಕೆ ಅನುಗುಣವಾದುದು.
- ಕಲಿಕೆಯೊಂದಿಗೆ ಮೌಲ್ಯ ನಿರ್ಣಯವೂ ಜತೆಯಾಗಿರುವುದು.

ಜ್ಞಾನನಿರ್ಮಾಣ ಆಧಾರಿತವಾದ ಕಲಿಕಾ ರೀತಿಯು ಪಠ್ಯಕ್ರಮಕ್ಕೆ ಆಧಾರವಾಗಿದೆ. ವಿದ್ಯಾರ್ಥಿಯ ಆರ್ಜಿತ ಜ್ಞಾನ ಮತ್ತು ಆಶಯ ಪರಿಸರವನ್ನು ಪರಿಗಣಿಸಿಕೊಂಡು ಪ್ರಯೋಜನಕಾರಿಯಾದ ಕಲಿಕಾ ಚಟುವಟಿಕೆಗಳನ್ನು ಏರ್ಪಡಿಸುವುದರಿಂದ ಸಹಜ ಜ್ಞಾನವನ್ನು ರೂಪಿಸಲು ಸಾಧ್ಯ ಎಂಬುದು ಈ ದೃಷ್ಟಿಕೋನದ ವೈಶಿಷ್ಟ್ಯ.

## ಕಲಿಕಾನುಭವಗಳು

ಬದುಕಿನ ವಿಭಿನ್ನ ಹಿನ್ನೆಲೆಗಳಿಂದ ಬರುವ ವಿದ್ಯಾರ್ಥಿಗಳ ಆರ್ಜಿತ ಜ್ಞಾನ, ಸಾಮರ್ಥ್ಯ, ಆಸಕ್ತಿ ಇವುಗಳು ವಿಭಿನ್ನವಾಗಿರುವವಲ್ಲವೇ. ಈ ವೈಶಿಷ್ಟ್ಯವನ್ನು ಪರಿಗಣಿಸಿಕೊಂಡು ವ್ಯಕ್ತಿ ಭಿನ್ನತೆಯನ್ನೂ ಬಹುಮುಖವಾದ ಬುದ್ಧಿಮತ್ತೆಯನ್ನೂ ಗಮನದಲ್ಲಿರಿಸಿಕೊಂಡು ಕಲಿಕೆಯ ಅನುಭವಗಳನ್ನು ರೂಪಿಸಬೇಕಾದುದು ಮುಖ್ಯವಾಗಿದೆ.

## ಕಲಿಕಾ ಪರಿಸರ

ವಿದ್ಯಾರ್ಥಿಯ ಆಸಕ್ತಿ ಹಾಗೂ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು,

ಮಕ್ಕಳು ತೊಡಗಿಕೊಂಡಿರುವ ಜ್ಞಾನ ನಿರ್ಮಾಣ ಪ್ರಕ್ರಿಯೆಯಲ್ಲಿ ಅಧ್ಯಾಪಕರು ಸಕ್ರಿಯವಾಗಿ ಭಾಗವಹಿಸಿದರೆ, ಅದು ಮಕ್ಕಳ ತಿಳುವಳಿಕೆಯನ್ನು ಗಟ್ಟಿಗೊಳಿಸಲು ಸಹಾಯಕವಾಗುವುದು. ಕಲಿಕೆಯಲ್ಲಿ ತೊಡಗಿಸಿಕೊಂಡಿರುವ ಮಕ್ಕಳು ತಮ್ಮ ಜ್ಞಾನವನ್ನು ತಾವೇ ನಿರ್ಮಿಸಿಕೊಳ್ಳುತ್ತಾರೆ. ತಾವು ಶಾಲೆಯಲ್ಲಿ ಕಲಿತಿರುವುದನ್ನು ಹೊರಗಿನ ವಿಷಯಗಳೊಂದಿಗೆ ಅನ್ವಯಿಸಿ ಪ್ರಶ್ನೆಗಳನ್ನು ಕೇಳುವಂತೆ ಪ್ರೋತ್ಸಾಹಿಸಬೇಕು. ಬಾಯಿಪಾಠ ಹೊಡೆದು ಒಂದೇ ಒಂದು ಸರಿಯಾದ ಉತ್ತರವನ್ನು ಕಂಡುಕೊಳ್ಳುವುದಕ್ಕಿಂತ, ತಮ್ಮದೇ ವಾಕ್ಯಗಳಲ್ಲಿ ಸ್ವತಂತ್ರವಾಗಿ ಉತ್ತರವನ್ನು ಹೇಳುವಂತೆ ಪ್ರೋತ್ಸಾಹಿಸಬೇಕು. ಇವುಗಳೆಲ್ಲಾ ತಮ್ಮ ಜ್ಞಾನವನ್ನು ವಿಸ್ತರಿಸುವ ಮಕ್ಕಳಿಗೆ ಸಹಾಯ ಮಾಡುವ ಪ್ರಧಾನ ಹೆಜ್ಜೆಗಳಾಗಿವೆ. ಬೌದ್ಧಿಕವಾದ ಊಹೆ ಅರ್ಥವತ್ತಾದ ಒಂದು ಬೋಧನ ಕ್ರಮವಾಗಿದೆ. ಇದನ್ನು ಪ್ರೋತ್ಸಾಹಿಸಬೇಕು. ಹಲವಾರು ಬಾರಿ ತಮ್ಮ ದೈನಂದಿನ ಅನುಭವಗಳಿಂದ ಅಥವಾ ಮಾಧ್ಯಮ ಸಂಪರ್ಕದಿಂದ ಮಕ್ಕಳ ಮನಸ್ಸಿನಲ್ಲಿ ಕೆಲವು ಆಶಯಗಳು ರೂಪುಗೊಂಡಿರಬಹುದು. ಆದರೆ ಅಧ್ಯಾಪಕರು ನಿರೀಕ್ಷಿಸುವ ಮಾತುಗಳಲ್ಲಿ ಅವುಗಳನ್ನು ಅವರಿಗೆ ಪ್ರಕಟಿಸಲು ಸಾಧ್ಯವಾಗದು. ತಿಳಿದಿರುವುದು ಮತ್ತು ತಿಳಿಯದಿರುವುದರ ಮಧ್ಯೆ ಹೊಸ ಜ್ಞಾನದ ಸೃಷ್ಟಿಯಾಗುತ್ತದೆ. ಶಾಲೆಯ ಹೊರಗೆ ಮನೆ ಅಥವಾ ಸಮಾಜದಲ್ಲಿ ಬೆಳೆಸುವ ಕರಕೌಶಲ್ಯದ ರೂಪದಲ್ಲಿ ಇಂತಹ ಜ್ಞಾನ ಸೃಷ್ಟಿಯಾಗುವುದು. ಇಂತಹ ಎಲ್ಲ ತಿಳುವಳಿಕೆಗಳನ್ನು ಗೌರವಿಸಬೇಕು. ತಿಳುವಳಿಕೆ ಮತ್ತು ಸಂವೇದನಶೀಲತೆಯಿರುವ ಅಧ್ಯಾಪಕರು ಈ ಕುರಿತು ಪ್ರಜ್ಞಾವಂತರಾಗಿರುತ್ತಾರೆ. ಮಕ್ಕಳ ವಿಕಾಸ ಸಾಧ್ಯತೆಯನ್ನು ಮನಗಂಡು, ಚಟುವಟಿಕೆಗಳನ್ನು ಒದಗಿಸಿ ಹಾಗೂ ಪ್ರಶ್ನೆಗಳನ್ನು ಕೇಳಿ ಅವರನ್ನು ಮುನ್ನಡೆಸಲು ಅಧ್ಯಾಪಕರಿಗೆ ಸಾಧ್ಯ.

ಅನ್ವೇಷಣೆ, ನಿರೀಕ್ಷಣೆ, ಪ್ರಶ್ನೆಗಳನ್ನು ಕೇಳುವುದು, ಚರ್ಚಾಕೂಟಗಳು ಇವುಗಳ ಮೂಲಕ ಸಿದ್ಧಾಂತ ರೂಪೀಕರಣ ಮತ್ತು ಆಶಯ ಸೃಷ್ಟಿಗಳಾಗುತ್ತವೆ. ಇವುಗಳು ಸಕ್ರಿಯ ಭಾಗವಹಿಸುವಿಕೆಯ ಭಾಗವಾಗಿವೆ. ಶಾಲೆಗಳು ಪ್ರಶ್ನೆಗಳನ್ನು ಕೇಳುವುದಕ್ಕೂ ಚರ್ಚಿಸುವುದಕ್ಕೂ ಶೋಧಿಸುವುದಕ್ಕೂ ವಿಶ್ಲೇಷಿಸುವುದಕ್ಕೂ ನಿಗಮನವನ್ನು ಕಂಡುಕೊಳ್ಳಲೂ ಅವಕಾಶವನ್ನು ಒದಗಿಸಬೇಕು.

ಎನ್.ಸಿ.ಎಫ್. 2005 ಪುಟ. 41,42

ವೈವಿಧ್ಯಪೂರ್ಣ ಕಲಿಕಾ ಚಟುವಟಿಕೆಗಳಲ್ಲಿ ಭಾಗಿಯಾಗಲು ಅನುಕೂಲವಾಗುವಂತೆ ತರಗತಿಗಳನ್ನು ಸಿದ್ಧಪಡಿಸಬೇಕು. ವಿದ್ಯಾರ್ಥಿ ಕೇಂದ್ರಿತ ಕಲಿಕಾ ಚಟುವಟಿಕೆಗಳಿಗೆ ಸಹಾಯಕವಾಗುವಂತೆ ಚಟುವಟಿಕೆ ಆಧಾರಿತ ಕಲಿಕೆಯನ್ನು ಹೇಗೆ ಮಾಡಬೇಕೆಂದು ನಾವು ತಿಳಿದುಕೊಂಡೆವಲ್ಲವೇ?

### ಕಲಿಕಾ ಪ್ರಕ್ರಿಯೆ

- ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಅನುಭವಗಳ ಆಧಾರದಲ್ಲಿ ಜ್ಞಾನ ನಿರ್ಮಾಣ (Knowledge Construction) ಮಾಡುವನು.
- ಜ್ಞಾನ ನಿರ್ಮಾಣವನ್ನು ವೈಯುಕ್ತಿಕ ಮತ್ತು ಸಾಮಾಜಿಕ ಹಂತಗಳಲ್ಲಿ ಮಾಡಬೇಕು.
- ವಿವಿಧ ಕಲಿಕಾ ಶೈಲಿಗಳನ್ನು (Learning Style) ಪರಿಗಣಿಸಿಕೊಂಡು ವಿವಿಧ ಇಂದ್ರಿಯಾನುಭವಗಳನ್ನು (Multisensory Experiences) ನೀಡುವ ಮೂಲಕ ಕಲಿಕೆಯನ್ನು ಯಶಸ್ವಿಗೊಳಿಸಬಹುದು.
- ಕಲಿಕಾನುಭವಗಳನ್ನು ಸಕ್ರೀಯವಾಗಿ (spiralling) ಮಂಡಿಸುವ ಮೂಲಕ ಕಲಿಕೆಯು ಸಾಕಷ್ಟು ಫಲಕಾರಿಯಾಗುತ್ತದೆ.
- ಕಲಿಕಾ ಚಟುವಟಿಕೆಗಳಿಗೆ ಯೋಗ್ಯವಾದ ನಮನೀಯತೆ (Flexibility), ಹೊಂದಾಣಿಕೆ (Adaptations), ಕಲಿಕಾ ಚಟುವಟಿಕೆಗಳ ಆಯ್ಕೆ (Selection) ಇವುಗಳನ್ನು ನಡೆಸುವ ಮೂಲಕ ವಿಭಿನ್ನ ಅಭಿರುಚಿಯ ಕಲಿಕೆಯ ಆಸಕ್ತರನ್ನು ಪರಿಗಣಿಸಬಹುದು.
- ಸಾಕಷ್ಟು ಕಲಿಕಾನುಭವಗಳು ಪ್ರತಿಯೊಬ್ಬ ವಿದ್ಯಾರ್ಥಿಗೆ ದೊರಕಿದಾಗಲೇ ಕಲಿಕಾ ಸಾಧನೆ (Learning outcome) ದೃಢವಾಗುವುದು.
- ಕಲಿಕೆ ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳು ನಿರಂತರವಾಗಿ ನಡೆಯಬೇಕಾಗಿರುವುದು.
- ವಿಷಯಾಧಾರಿತ ವಸ್ತು, ವಿದ್ಯಾರ್ಥಿಯ ಕಲಿಕೆಯ ಅಗತ್ಯ ಇವುಗಳನ್ನು ಹೊಂದಿಕೊಂಡು ವಿವಿಧ ಕಲಿಕಾ ಬೋಧನ ತಂತ್ರಗಳನ್ನು ಬಳಸಿಕೊಂಡರೆ ಎಲ್ಲರಿಗೂ ಕಲಿಕಾ ಸಾಧನೆ (Learning Outcome) ಯನ್ನು ಗಳಿಸಿಕೊಳ್ಳಲು ಸಾಧ್ಯ.
- ಪ್ರತಿಯೊಂದು ಮಗುವಿನ ಸಮಗ್ರ ಪ್ರಗತಿಯನ್ನು (Allround development) ಉದ್ದೇಶ ವಾಗಿರಿಸಿಕೊಂಡು ಕಲಿಕಾ ಪ್ರಕ್ರಿಯೆಗಳನ್ನು ನಿರ್ಧರಿಸಬೇಕು.

### 1.4 ಕಲಿಕಾ ಸಾಧನೆಗಳು (Learning Outcomes)

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನೀಡಲಾಗುವ ಕಲಿಕಾ ಚಟುವಟಿಕೆಗಳ ಫಲವಾಗಿ ಜ್ಞಾನ, ಕೌಶಲ್ಯ, ಮನೋಭಾವ, ಮೌಲ್ಯಗಳು ಮಗುವಿನಲ್ಲಿ ರೂಪುಗೊಳ್ಳುತ್ತವೆ. ಇವುಗಳಲ್ಲಿ ಕೆಲವನ್ನು ಸ್ವಲ್ಪ ಕಾಲದಲ್ಲಿ ಸಂಪಾದಿಸಬಹುದು ಮತ್ತು ಕೆಲವಕ್ಕೆ ದೀರ್ಘಕಾಲ ಬೇಕಾಗುವುದು. ಹೀಗೆ ಮಗುವಿನಲ್ಲಿ ಉಂಟಾಗುವ ಬದಲಾವಣೆಗಳನ್ನು ನಮಗೆ ಮುಂಚಿತವಾಗಿ ನಿರ್ಧರಿಸಲು ಸಾಧ್ಯವಿದೆ. ಪಠ್ಯಕ್ರಮವನ್ನು ಸಿದ್ಧಪಡಿಸುವಾಗ ಶಾಲಾ

ಶಿಕ್ಷಣದ ವಿವಿಧ ಹಂತಗಳಲ್ಲಿ ಮಗು ಸಾಧಿಸಬೇಕಾದ ಗುರಿಗಳನ್ನು ನಾವು ಕಲಿಕಾ ಸಾಧನೆಗಳೆಂದು ಹೇಳುತ್ತೇವೆ. ಕೆಲವು ಕಲಿಕಾ ಚಟುವಟಿಕೆಗಳ ಸರಣಿಯ ಮೂಲಕ ಪ್ರತಿಯೊಂದು ಘಟಕದಲ್ಲಿಯೂ ವಿದ್ಯಾರ್ಥಿ ಸಾಧಿಸುವ ಕಲಿಕಾ ಸಾಧನೆಗಳು ವಿಕಾಸಗೊಂಡು ತರಗತಿಯ ಕೊನೆಯಲ್ಲಿ ಗಳಿಸುವ ಕಲಿಕಾ ಸಾಧನೆಗಳಾಗುತ್ತವೆ. ಅನಂತರ ನಿಗದಿತ ಶಿಕ್ಷಣ ಕಾಲಾವಧಿಯ ಕಲಿಕಾ ಸಾಧನೆಗಳಾಗಿ ಅವು ಬೆಳೆಯುತ್ತವೆ. ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ (observable) ಅಳೆಯಲೂ (measurable) ಸಾಧ್ಯವಿರುವುದು ಅದರ ವೈಶಿಷ್ಟ್ಯವಾಗಿದೆ. ಪ್ರತಿಯೊಂದು ಘಟಕದ, ತರಗತಿಯ, ಅವಧಿಯ ಕೊನೆಯಲ್ಲಿ ಮಗು ಗಳಿಸಬೇಕಾದ ಜ್ಞಾನ ಕೌಶಲ್ಯ, ಮೌಲ್ಯ, ಮನೋಭಾವಗಳನ್ನು ಗಳಿಸಲಾಗಿದೆಯೇ ಎಂದು ಮೌಲ್ಯಮಾಪನ ಮಾಡಲು ಕಲಿಕಾಸಾಧನೆಗಳ ವಿಶ್ಲೇಷಣೆಯಿಂದ ಸಾಧ್ಯ. ಪಠ್ಯಕ್ರಮದ ಸರಿಯಾದ ವಿನಿಮಯದ ಮೂಲಕ ಎಲ್ಲ ಮಕ್ಕಳ ಕಲಿಕಾ ಸಾಧನೆಗಳನ್ನು ದೃಢಪಡಿಸಲು ನಮಗೆ ಸಾಧ್ಯವಾಗಬೇಕು.

ಕಲಿಕಾ ಸಾಧನೆಗಳ ವೈಶಿಷ್ಟ್ಯಗಳನ್ನು ಹೀಗೆ ಸಂಗ್ರಹಿಸಬಹುದು.

- ವಿಷಯನಿಷ್ಠವಾದ ಕಲಿಕೆಯ ಮೂಲಕ ವಿದ್ಯಾರ್ಥಿ ಗಳಿಸಿಕೊಳ್ಳಬೇಕಾದ ಜ್ಞಾನ (knowledge), ಕೌಶಲ್ಯ (skills), ಮನೋಭಾವ ಮತ್ತು ಮೌಲ್ಯ (attitude and value)ಗಳನ್ನು ಕಲಿಕಾ ಸಾಧನೆ ಒಳಗೊಂಡಿರುತ್ತದೆ.
- ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ, ಅಳೆಯಲೂ ಸಾಧ್ಯವಿದೆ.
- ಹ್ರಸ್ವ ಮತ್ತು ದೀರ್ಘಕಾಲದಲ್ಲಿ ಗಳಿಸುವ ವಿಭಿನ್ನ ಕಲಿಕಾ ಸಾಧನೆಗಳಿವೆ.

## 1.5 ಕಲಿಕಾ ಸಂಪನ್ಮೂಲಗಳು ಮತ್ತು ಕಲಿಕಾ ವ್ಯವಸ್ಥೆಗಳು

ಪಠ್ಯಕ್ರಮವನ್ನು ವಿನಿಮಯ ಮಾಡಲು ಬಳಸುವ ವಿವಿಧ ಘಟಕಗಳೇ ಕಲಿಕಾ ಸಂಪನ್ಮೂಲಗಳು. ಕಲಿಕಾ ಪ್ರಕ್ರಿಯೆಯ ಪೂರ್ಣತೆಗೆ ಕಲಿಕಾ ಸಂಪನ್ಮೂಲಗಳನ್ನು ಉಪಯೋಗಿಸಿಯೇ ತೀರಬೇಕು.

- ಗ್ರಂಥಾಲಯ
- ಪ್ರಯೋಗಾಲಯ (ಭಾಷೆ, ಗಣಿತ, ವಿಜ್ಞಾನ)
- ಕಲಿಕೋಪಕರಣಗಳು
- ಡಿಸ್‌ಪ್ಲೇ ಫಲಕಗಳು
- ಕಂಪ್ಯೂಟರ್ ಲ್ಯಾಬ್
- ಬಹುಮಾಧ್ಯಮ ಉಪಕರಣಗಳು

ಇದರ ಹೊರತಾಗಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಪ್ರಕಟಿಸುವ ಅನೇಕ ವೇದಿಕೆಗಳು ಶಾಲೆಗಳಲ್ಲಿವೆಯಲ್ಲವೇ? ಇವುಗಳನ್ನು ಕಲಿಕಾ ಸಾಧನೆಗಳನ್ನು ಗಳಿಸಿಕೊಳ್ಳಲು ಬಳಸಿಕೊಳ್ಳಬಹುದು.

- ಬಾಲಸಭೆ
- ಅಸೆಂಬ್ಲಿ
- ಕ್ಲಬ್‌ಗಳು
- ಚರ್ಚಾ ಕೂಟಗಳು
- ಶೈಕ್ಷಣಿಕ ಪ್ರವಾಸಗಳು
- ಸ್ವಯಂ ಸೇವಾ ಸಂಸ್ಥೆಗಳು (SPC, NSS, Scout, NCC)

ಮಕ್ಕಳ ಪರಿಪೂರ್ಣವಾದ ಬೆಳವಣಿಗೆಗೆ ಇಂತಹ ಘಟಕಗಳು ಅತಿ ಅಗತ್ಯವಾಗಿವೆ.

## 1.6 ಕಲೆ ಮತ್ತು ವೃತ್ತಿಪರಿಚಯ ಕಲಿಕೆ

### ಕಲೆಯ ಕಲಿಕೆ

ಸೃಜನಶೀಲತೆ, ನಿರೀಕ್ಷಣ ಸಾಮರ್ಥ್ಯ ಮತ್ತು ಬುದ್ಧಿಮತ್ತೆಯನ್ನು ಮಕ್ಕಳಲ್ಲಿ ಬೆಳೆಸಲು ಕಲೆಯ ಕಲಿಕೆ ಅತಿ ಅಗತ್ಯವಾಗಿದೆ. ಹೊಸ ಪಠ್ಯಕ್ರಮದಲ್ಲಿ ಸಾಮಾನ್ಯ ವಿಷಯಗಳೊಂದಿಗೆ  ಕಲೆಯ ಕಲಿಕೆಗೂ ಮಹತ್ವವನ್ನು ನೀಡಲಾಗಿದೆ. ಶಾಲಾ ಪಠ್ಯಕ್ರಮದಲ್ಲಿ ಕಲೆಯ ಕಲಿಕೆಯ ವ್ಯಾಪ್ತಿಯಲ್ಲಿ ಸಂಗೀತ, ನೃತ್ಯ, ಚಿತ್ರರಚನೆ, ಶಿಲ್ಪರಚನೆ, ನಾಟಕ, ಸಿನಿಮಾ ಮೊದಲಾದ ಪ್ರಕಾರಗಳನ್ನು ಸೇರಿಸಿಕೊಳ್ಳಲಾಗಿದೆ. ಮಕ್ಕಳ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹವನ್ನು ನೀಡುವುದು ಅಗತ್ಯವಾಗಿದೆ. ಕಲೆಯ ಕಲಿಕೆಯ ಸಾಮಾನ್ಯ ಉದ್ದೇಶಗಳು.

- ವಿದ್ಯಾರ್ಥಿಯ ಸಹಜವಾದ ಕಲೆಯ ಅಭಿರುಚಿಗಳನ್ನು ಪ್ರೋತ್ಸಾಹಿಸುವುದು.
- ವಿವಿಧ ಕಲೆಗಳನ್ನು ತಿಳಿದುಕೊಂಡು, ಮಕ್ಕಳ ಅಭಿರುಚಿಗೆ  ಹೊಂದಿಕೊಂಡು ಕಲೆಗಳನ್ನು ಅಭ್ಯಾಸ ಮಾಡಲು ಅವಕಾಶಗಳನ್ನು ಒದಗಿಸುವುದು.
- ವಿವಿಧ ಕಲೆಗಳನ್ನು ಆಸ್ವಾದಿಸಿ, ಕಲೆಯ ಸೌಂದರ್ಯವನ್ನು ತಿಳಿದುಕೊಳ್ಳುವುದು.
- ಕಲೆಯ ಆಸ್ವಾದನೆ ಮಾಡಿ ಸಮಾಜ ಜೀವನದಲ್ಲಿ ಮಾನವೀಯ ದೃಷ್ಟಿಕೋನಗಳನ್ನು ಮೂಡಿಸುವುದು.
- ಸಾಂಸ್ಕೃತಿಕ ವೈವಿಧ್ಯವನ್ನು ಅರಿತುಕೊಂಡು ಸಂಸ್ಕೃತಿ ಪ್ರೇಮವನ್ನು ಬೆಳಸುವುದು.
- ಕಲೆಯ ಸತ್ವವನ್ನು ಅರಿತುಕೊಂಡು ಹೊಸ ಚಿಂತನೆಗಳನ್ನು ಮಾಡುವುದು ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸುವುದು.
- ಕಲೆಯನ್ನು ಬಳಸಿ ಇತರ ವಿಷಯಗಳ ಕಲಿಕೆಯನ್ನು ಫಲಪ್ರದಗೊಳಿಸುವುದು (Art applied learning)
- ಬಹುಮುಖವಾದ ಬೌದ್ಧಿಕ ವಿಕಾಸದ ಸಾಧ್ಯತೆಗಳನ್ನು ಉತ್ತಮ ಪಡಿಸುವುದು.
- ವಿಭಿನ್ನ ಕೌಶಲ್ಯಗಳಿರುವ ವಿದ್ಯಾರ್ಥಿಗಳನ್ನು ಕಲಿಕಾ ಚಟುವಟಿಕೆಗಳಿಗೆ ಆಕರ್ಷಿಸುವುದು.
- ಮಕ್ಕಳ ಆಸ್ವಾದನೆಯ ಮಟ್ಟವನ್ನು ಉತ್ತಮಪಡಿಸುವುದು.

### ವೃತ್ತಿ ಪರಿಚಯ

ಭಾವನಾತ್ಮಕ ಮತ್ತು ವಿಜ್ಞಾನ ಕ್ಷೇತ್ರಗಳ ಸಮನ್ವಯ ಹಾಗೂ ಪ್ರಗತಿಗಾಗಿ ವೃತ್ತಿ ಪರಿಚಯ ಶಿಕ್ಷಣ ಅನಿವಾರ್ಯವಾಗಿದೆ. ಪ್ರತಿಯೊಂದು ವೃತ್ತಿ ಪರಿಚಯ ತರಗತಿಯ ಅಡಿಪಾಯವು ಮಾನವ ಸಂಪನ್ಮೂಲದ ಪ್ರಗತಿಯಾಗಬೇಕು. ಎಲ್ಲ ಪ್ರಜೆಗಳ ಸಾಮರ್ಥ್ಯಗಳನ್ನೂ, ಕೌಶಲ್ಯಗಳನ್ನೂ ರಾಷ್ಟ್ರ ನಿರ್ಮಾಣಕ್ಕಾಗಿ ಬಳಸುವಂತೆ ಬೆಳೆಸುವುದೇ ಮಾನವ ಸಂಪನ್ಮೂಲ ಪ್ರಗತಿಯ ಉದ್ದೇಶವಾಗಿದೆ. ವೃತ್ತಿಯಲ್ಲಿ ಆಸಕ್ತಿ ಮೂಡಿಸುವುದು, ವ್ಯಕ್ತಿಗಳನ್ನು ಹೊಸ ವೃತ್ತಿ ಸಂಸ್ಕೃತಿಯ ವಕ್ತಾರರನ್ನಾಗಿ ಮಾಡುವುದು ವೃತ್ತಿ ಕಲಿಕೆಯ ಪ್ರಮುಖ ಉದ್ದೇಶಗಳಾಗಿವೆ.

- ಮಾನವ ಸಂಪನ್ಮೂಲದ ಅಭಿವೃದ್ಧಿ
- ರಾಷ್ಟ್ರೀಯ ಅಭಿವೃದ್ಧಿ

- ವೃತ್ತಿ ಸನ್ನದ್ಧತೆ
- ಉತ್ಪಾದನ ವಲಯದಲ್ಲಿ ಸ್ವಾಯತ್ತತೆ
- ಸಂತುಲಿತ ವ್ಯಕ್ತಿತ್ವ ವಿಕಾಸ
- ಮೌಲ್ಯ ಹಾಗೂ ಮನೋಭಾವಗಳ ಬೆಳವಣಿಗೆ

ಕಲೆ ಮತ್ತು ವೃತ್ತಿ ಕಲಿಕೆಗೆ ಪ್ರಾಧಾನ್ಯವನ್ನು ನೀಡಿ ಪಠ್ಯಕ್ರಮವನ್ನು ರೂಪಿಸಬೇಕು. ಇವುಗಳ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳೊಂದಿಗೆ ವಿನಿಮಯ ಮಾಡುವುದು ಅಗತ್ಯವಾಗಿದೆ.

## 1.7 ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ

ಪ್ರಾಥಮಿಕ ಶಾಲಾ ಹಂತವು ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಯ ಮುಖ್ಯ ಹಂತವಾಗಿದೆ. ಆದುದರಿಂದ ಈ ಹಂತದಲ್ಲಿ ಎಲ್ಲ ಮಕ್ಕಳಿಗೆ ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಅನುಭವಗಳು ಲಭಿಸುತ್ತವೆ ಎಂಬುದನ್ನು ದೃಢಗೊಳಿಸಬೇಕು. ಮಗುವಿನ ಆರೋಗ್ಯ ಮತ್ತು ಕ್ರೀಡಾ ಮನೋಭಾವವನ್ನು ಪೋಷಿಸುವುದು, ಆರೋಗ್ಯಕರ ಜೀವನ ಶೈಲಿಯನ್ನು ರೂಪಿಸುವುದು ಈ ಕಲಿಕೆಯ ಪ್ರಧಾನ ಉದ್ದೇಶವಾಗಿದೆ. ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳನ್ನು ವಿನಿಮಯ ಮಾಡುವುದು ಅಗತ್ಯವಾಗಿದೆ.

**ಆರೋಗ್ಯ ಮತ್ತು ಕ್ರೀಡಾ ಕಲಿಕೆಯ ಪ್ರಧಾನ ಉದ್ದೇಶಗಳು**

- ವಿವಿಧ ಸಂದರ್ಭಗಳಲ್ಲಿ ಯೋಗ್ಯವಾದ ರೀತಿಯಲ್ಲಿ ದೇಹವನ್ನು ಚಲಿಸುವಂತೆ ಮಾಡುವ ಕೌಶಲ್ಯವನ್ನು ಸಂಪಾದಿಸುವುದು.
- ದೇಹದ ಚಲನೆಯನ್ನು ನಿಯಂತ್ರಿಸುವ ವಿವಿಧ ಹಂತಗಳನ್ನು ತಿಳಿದುಕೊಂಡು, ಅವುಗಳನ್ನು ಸೃಜನಾತ್ಮಕ ಚಲನೆಗಳ ಮಾಧ್ಯಮವಾಗಿ ಅಭಿವೃದ್ಧಿಪಡಿಸುವುದು.
- ಸಾಮಾಜಿಕವಾದ ಜವಾಬ್ದಾರಿಗಳನ್ನು ಅರಿತುಕೊಂಡು, ಪ್ರಜಾಪ್ರಭುತ್ವ ರೀತಿಯ ಜೀವನ ಶೈಲಿಯನ್ನು ರೂಢಿಸಿಕೊಳ್ಳುವುದು ಮತ್ತು ಆಸ್ವಾದಿಸುವುದು.
- ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ದೃಢಪಡಿಸುವುದು.

## 1.8 ಒಳಗೊಂಡಿರುವ ಶಿಕ್ಷಣ (Inclusive Education)

*ಶಾಲೆಯಲ್ಲಿ ಉತ್ತಮ ಪ್ರದರ್ಶನವನ್ನು ನೀಡುವ ತಮ್ಮ ಸಹಪಾಠಿಗೆ ವಾಸವಾಗಲು ಮನೆಯಿಲ್ಲವೆಂದೂ, ರಸ್ತೆ ಬದಿಯ ಪೈಪಿನಡಿಯಲ್ಲಿ ಕಟ್ಟಿದ ಡೇರೆಯೇ ಅವನ ಮನೆಯೆಂದೂ ತಿಳಿದಾಗ ಅದು ಚರ್ಚೆಗೆ ಗ್ರಾಸವಾಯಿತು. ಕಷ್ಟಗಳನ್ನು ಪರಸ್ಪರ ಹಂಚಿಕೊಳ್ಳುವುದರಿಂದ ಮಾತ್ರ ಪರಿಹಾರ ಉಂಟಾಗುವುದಿಲ್ಲ ಎಂದು ಅರಿತುಕೊಂಡ ವಿದ್ಯಾರ್ಥಿಗಳು ಅಧ್ಯಾಪಕರ ಸಹಾಯದೊಂದಿಗೆ ಹಣವನ್ನು ಸಂಗ್ರಹಿಸಿ ಗೆಳೆಯನಿಗೆ ಮನೆ ನಿರ್ಮಿಸಿಕೊಟ್ಟು ಮಾದರಿಯಾದರು.*

*(ಒಂದು ಶಾಲೆಯ ಅನುಭವ)*

ತರಗತಿ ಕೋಣೆಯಲ್ಲಿ ಎಲ್ಲರನ್ನೂ ಒಂದುಗೂಡಿಸುವ, ಯಾರನ್ನೂ ಹೊರ ಹಾಕದ ಕಲಿಕೆಯ ಒಂದು ವಾತಾವರಣವನ್ನು ಸೃಷ್ಟಿಸಬೇಕಾಗಿದೆ. ನಮ್ಮ ಶಾಲೆಗಳಲ್ಲಿ ಮುಖ್ಯವಾಗಿ ಎರಡು ವಿಭಾಗಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನೂ, ಸಹಾಯವನ್ನೂ ನೀಡಿ ನ್ಯಾಯಯುತವಾದ ಗುಣಮಟ್ಟದ ಶಿಕ್ಷಣವನ್ನು (Equitable Quality Education) ದೃಢಗೊಳಿಸಬೇಕಾಗಿದೆ.

**ವಿಶೇಷ ಗಮನ, ಕಲಿಕಾ ಸಹಾಯ ಮತ್ತು ರಕ್ಷಣೆ ಅಗತ್ಯವಿರುವುದು ಯಾರಿಗೆ?**

## (ಎ) ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಹೊರಹಾಕಲ್ಪಟ್ಟವರ ಮಕ್ಕಳು

- ವಿಭಿನ್ನ ಮತ್ತು ವೈವಿಧ್ಯಪೂರ್ಣವಾದ ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಹಿನ್ನೆಲೆಯಲ್ಲಿ ತಾರತಮ್ಯವನ್ನು ಅನುಭವಿಸುವ ಮಕ್ಕಳು, ತೀವ್ರ ಬಡತನವನ್ನು ಎದುರಿಸುವವರು, ಬುಡಕಟ್ಟು ಆದಿವಾಸಿಗಳು, ಹೆಣ್ಮಕ್ಕಳು, ಪರಿಶಿಷ್ಟ ಜಾತಿ, ಪಂಗಡಗಳಿಗೆ ಸೇರಿದವರು, ಬೇರೆ ರಾಜ್ಯಗಳಿಂದ ವಲಸೆ ಬಂದವರು, ಖಾಯಂ ಮನೆಗಳಿಲ್ಲದವರು–ಹೀಗೆ ಅನೇಕ ಸಂಕಷ್ಟಗಳನ್ನು ಎದುರಿಸುವವರು ಈ ವಿಭಾಗದಲ್ಲಿ ಸೇರುತ್ತಾರೆ.

ವಿಭಿನ್ನತೆಗಳನ್ನು, ಪರಿಮಿತಿಗಳನ್ನು ಅರಿತುಕೊಂಡು, ಅವರನ್ನು ಗುರುತಿಸಿ ಗೌರವಿಸಬೇಕಾದುದು ನಮ್ಮ ಸಮೀಪನವಾಗಿರಬೇಕು. ಶಾಲೆಯ ಒಗ್ಗಟ್ಟಿನ ಕಾರ್ಯ ಚಟುವಟಿಕೆಗಳ ಮೂಲಕ ಇಂಥವರ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದು.

## (ಬಿ) ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರು

ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರಿಗೂ, ಕಲಿಕೆಯಲ್ಲಿ ಕಷ್ಟವನ್ನು ಅನುಭವಿಸುವ ಮಕ್ಕಳಿಗೂ ಪ್ರತ್ಯೇಕವಾದ ಕಲಿಕಾ ವಿಧಾನದ ಅಗತ್ಯಗಳಿವೆ (special educational needs). ಕಿವುಡುತನ, ದೃಷ್ಟಿದೋಷ, ಬೌದ್ಧಿಕ ಮತ್ತು ಚಲನೆಯ ಪರಿಮಿತಿಗಳು, ಓಟಿಸಂ, ಸೆರೆಬ್ರಲ್ ಪಾಲ್ಸಿ, ಬಹುಮುಖವಾದ ವೈಕಲ್ಯಗಳು, ಭಾವನಾತ್ಮಕವಾದ ಅಸಮತೋಲನವಿರುವ ಮಕ್ಕಳು, ಗಮನಹರಿಸುವಲ್ಲಿ ಪರಿಮಿತಿಗಳಿರುವ ಮಕ್ಕಳು ಮುಂತಾದವರು ವಿಭಾಗದಲ್ಲಿ ಸೇರುತ್ತಾರೆ.

**ಪಠ್ಯಕ್ರಮದ ವಿನಿಮಯ ಹಾದಿಯಲ್ಲಿ ನಾವು ಏನನ್ನು ಅನುಸರಿಸಬೇಕು?**

- ಕಲಿಕೆಯ ಅಗತ್ಯಗಳು, ಅಭಿರುಚಿ ಇವುಗಳನ್ನು ಪರಿಗಣಿಸಿ ಕಲಿಕಾ ಚಟುವಟಿಕೆಗಳ ಯೋಜನೆಗಳು.
- ಕಲಿಕಾ ಚಟುವಟಿಕೆಗಳಲ್ಲಿ ಎಲ್ಲರ ಭಾಗವಹಿಸುವಿಕೆ ಇರುವಂತೆ ಪಾಠಯೋಜನೆಯಲ್ಲಿ ಹೊಂದಾಣಿಕೆ.
- ವಿಭಿನ್ನವಾದ ಕಲಿಕಾ ವೇಗ, ಕಲಿಕಾ ಶೈಲಿ ಇವುಗಳನ್ನು ಪರಿಗಣಿಸಿಕೊಂಡು ವಿವಿಧ ಇಂದ್ರಿಯಾಧಾರಿತ ಸಮೀಪನ (multisensory approach) ಅನುಷ್ಠಾನ.
- ಪರಿಹಾರ ಚಟುವಟಿಕೆಗಳು (Remedial Practices), ಪೋಷಕ ಚಟುವಟಿಕೆಗಳು (Enrichment Practice) ಇವುಗಳನ್ನು ಪ್ರತಿಯೊಬ್ಬ ಮಗುವಿನ ಅಗತ್ಯವನ್ನು ಅನುಸರಿಸಿ ಅನುಷ್ಠಾನಗೊಳಿಸುವುದು.

- ವಿವಿಧ ಮೌಲ್ಯಮಾಪನ ಸಾಧ್ಯತೆಗಳನ್ನು ಜಾರಿಗೊಳಿಸುವುದು.
- ಸಂಪನ್ಮೂಲ ಅಧ್ಯಾಪಕರ ಹಾಗೂ ಇತರ ತಜ್ಞರ ಸಹಾಯವನ್ನು ದೃಢಪಡಿಸುವುದು.
- ಮಗುವಿನ ಕಲಿಕೆ, ಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಹೆತ್ತವರ ನಿರಂತರ ಬೆಂಬಲವನ್ನು ದೃಢಪಡಿಸುವುದು.

ಈ ಎರಡು ವಿಭಾಗದ ಮಕ್ಕಳಲ್ಲದೆ, ವಿಶೇಷ ಗಮನ ಹಾಗೂ ಪರಿಗಣನೆ ನೀಡಬೇಕಾದ ಪ್ರತ್ಯೇಕ ಅಭಿರುಚಿ ಮತ್ತು ಸಾಮರ್ಥ್ಯಗಳಿರುವ ಮಕ್ಕಳೂ (Gifted Childrens) ಇದ್ದಾರೆ. ಹೀಗೆ ಎಲ್ಲ ವಿಭಾಗದ ಮಕ್ಕಳನ್ನು ಒಳಗೊಳ್ಳುವ ರೀತಿಯಲ್ಲಿ ಶಾಲೆಯ ಚಟುವಟಿಕೆಗಳನ್ನೂ ಭೌತಿಕ ಹಿನ್ನೆಲೆಗಳನ್ನೂ ಶಾಸ್ತ್ರೀಯವಾಗಿ ರೂಪಿಸಬೇಕಾಗಿದೆ.

## 1.9 ಮಾಹಿತಿ ತಂತ್ರಜ್ಞಾನ – ಸಾಧ್ಯತೆ

ಮಾಹಿತಿ ವಿನಿಮಯಕ್ಕೆ ಅನೇಕ ವ್ಯವಸ್ಥೆಗಳು ಇಂದು ಬಳಕೆಯಲ್ಲಿವೆ ಅಲ್ಲವೇ? **ICT** ಬಳಕೆಯು ಇವುಗಳಲ್ಲಿ ತುಂಬ ಪ್ರಯೋಜನಕರವಾದುದು. ಮಕ್ಕಳು ಇದರ ತಂತ್ರಜ್ಞಾನವನ್ನು ಹೆಚ್ಚು ಕಡಿಮೆ ತಿಳಿದವರೇ ಆಗಿದ್ದಾರೆ. ಈ ತಿಳುವಳಿಕೆಯನ್ನು ತರಗತಿಯ ಕಲಿಕೆಗೆ ಬಳಸಿಕೊಳ್ಳಬೇಕಾಗಿದೆ. ಕಲಿಕೆಯನ್ನು ಅನಾಯಾಸಕರ ಹಾಗೂ ಸಂತೋಷದಾಯಕವನ್ನಾಗಿಸಲು ಇದರಿಂದ ಸಾಧ್ಯ.

### ಅಗತ್ಯ

ಪಠ್ಯಕ್ರಮ ವಿನಿಮಯದ ನಿರ್ದಿಷ್ಟ ಹಂತದಲ್ಲಿ ಯೋಗ್ಯವಾದ **ICT** ಸಾಮಗ್ರಿಗಳನ್ನು ಅಗತ್ಯವಾದರೆ ಮಾತ್ರ ಬಳಸಿದರೆ ಸಾಕು. ಮುದ್ರಣ ಮಾಧ್ಯಮದಲ್ಲಿರುವ ಪಾಠಪುಸ್ತಕಗಳ ಮಿತಿಗಳಾದ ಚಲನಶೀಲತೆ, ಶಬ್ದಗಳನ್ನು ಕೇಳಿಸಲು ಆಗದಿರುವುದು ಮೊದಲಾದ ಕೊರತೆಗಳನ್ನು **ICT** ಸಾಧ್ಯತೆಗಳ ಮೂಲಕ ಪರಿಹರಿಸಬಹುದು. **ICT** ಬಳಕೆಯ ಅಗತ್ಯ ಯಾವ ಯಾವ ಸಂದರ್ಭಗಳಲ್ಲಿ ಬೇಕಾಗಿದೆ ಎಂದೂ ಅದರ ಪ್ರಯೋಜನವನ್ನು ಹೇಗೆ ಪಡೆಯಬಹುದೆಂದೂ ನಿರ್ಧರಿಸಲು ಅಧ್ಯಾಪಕರಿಗೆ ಸಾಧ್ಯವಾಗಬೇಕು.

### ಹೊಂದಾಣಿಕೆ

ಮಗುವಿನ ಬುದ್ಧಿಯನ್ನೂ ಪ್ರತಿಭೆಯನ್ನೂ ಪ್ರಚೋದಿಸುವ **ICT** ಸಾಧ್ಯತೆಗಳು ಬೇಕಾಗಿವೆ. ಜಿಜ್ಞಾಸೆ ಮತ್ತು ಆಕಾಂಕ್ಷೆಯೊಂದಿಗೆ ಪಠ್ಯ ವಿಷಯದ ಬಗ್ಗೆ ಆಸಕ್ತಿ ಮೂಡುವಂತೆ **ICT** ಯನ್ನು ಬಳಸಬೇಕು. ಇಂದ್ರಿಯ ವೈಕಲ್ಯವುಳ್ಳವರಿಗೆ ಇದರ ಪ್ರಯೋಜನ ಹೆಚ್ಚು. ಶಬ್ದ ಹಾಗೂ ದೃಶ್ಯಗಳಿಂದ ವಿಷಯಗಳನ್ನು ಅನುಭವಕ್ಕೆ ತರಲು **ICT** ಪ್ರಯೋಜನಕಾರಿಯಾಗಿದೆ. ವಿಭಿನ್ನವಾದ ಕಲಿಕೆಯ ಶೈಲಿಗಳನ್ನು ಅಳವಡಿಸಿಕೊಂಡಿರುವ ಕಲಿಕೆಯ ಅನುಭವಗಳನ್ನು ಒದಗಿಸಲು ಇದು ಸಹಾಯಕವಾಗಿದೆ.

### ವಿಶ್ವಸನೀಯತೆ

ಕಲಿಕಾ ಸಾಮಗ್ರಿಗಳ ಬಗೆಗಿನ ವಿಶ್ವಸನೀಯತೆಯನ್ನು ದೃಢಪಡಿಸಬೇಕು. ಸರಕಾರಿ ಇಲಾಖೆಗಳ ಸೈಟುಗಳು, ಶೈಕ್ಷಣಿಕ ವೆಬ್‌ಸೈಟುಗಳು, ಪೋರ್ಟಲುಗಳು, ಬ್ಲಾಗುಗಳು, ಸಾಮಾಜಿಕ ಜಾಲ ತಾಣಗಳು ಮೊದಲಾದವುಗಳಿಂದ ಮಾಹಿತಿಗಳನ್ನು ಸಂಗ್ರಹಿಸುವಾಗ ಅದು ಅಧಿಕೃತವೇ ಎಂದು ದೃಢಪಡಿಸಬೇಕು. ತರಗತಿ ಕೋಣೆಯಲ್ಲಿ ಬಳಸುವ ಸಾಮಗ್ರಿಗಳ ಪ್ರಾಯೋಗಿಕ ನೆಲೆಯನ್ನು ದೃಢಪಡಿಸಬೇಕು. ಇಂತಹ ಸಾಮಗ್ರಿಗಳು ಕಾರ್ಯ ನಿರ್ವಹಿಸುವುದಕ್ಕೆ ಯೋಗ್ಯವಾದ ಸೋಫ್ಟ್‌ವೇರ್‌ಗಳು ಸುಲಭದಲ್ಲಿ ದೊರಕುವಂಥದ್ದೂ, ಉಪಯೋಗಕ್ಕೆ ಸಿಗುವಂಥದ್ದೂ ಆಗಿರಬೇಕು. **ICT** ಸಾಧ್ಯತೆಗಳು ಮಗುವಿನ ವಯಸ್ಸು, ಮಾನಸಿಕ ಸ್ಥಿತಿ ಇವುಗಳಿಗೆ ಹೊಂದಿಕೆಯಾಗುವಂತಿರಬೇಕು.

## 1.10 ಮೌಲ್ಯಗಳು, ಮನೋಧರ್ಮಗಳು, ಕಾಳಜಿ ಇವುಗಳನ್ನು ಬೆಳೆಸುವ ವಲಯಗಳು

ವಿದ್ಯಾರ್ಥಿಯಲ್ಲಿ ಮಾನವೀಯ ಮೌಲ್ಯ ಹಾಗೂ ಸಾಂವಿಧಾನಿಕ ಮೌಲ್ಯಗಳ ಕುರಿತು ಅರಿವು ಮೂಡಿಸುವುದು, ಸಾಮಾಜಿಕ ಜೀವನವನ್ನು ಬಲಗೊಳಿಸುವ ಮನೋಧರ್ಮವನ್ನು ಮೂಡಿಸುವುದು, ಸಾಮಾಜಿಕ ಕಾಳಜಿಯನ್ನು ಬೆಳೆಸುವುದು ಮೊದಲಾದವು ಪಠ್ಯ ಕ್ರಮದ ಪ್ರಥಮ ಪರಿಗಣನೆಯ ವಿಷಯಗಳಾಗಿವೆ. ಇವುಗಳನ್ನು ಬೆಳೆಸಲು ಸೂಚಿಸಲಾದ ಆಶಯ ವಲಯಗಳನ್ನು ಕೆಳಗೆ ನೀಡಲಾಗಿದೆ.

### ಪ್ರಜಾಪ್ರಭುತ್ವ ಪ್ರಜ್ಞೆ

ವಿವಿಧ ವಿಷಯಗಳನ್ನು ಆಯ್ಕೆ ಮಾಡುವಾಗ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಂಬಂಧಿಸಿದ ದೃಷ್ಟಿಕೋನಗಳನ್ನು ಪರಿಗಣಿಸಬೇಕು. ಕಲಿಕಾ ಚಟುವಟಿಕೆಗಳ ಯೋಜನೆಯಲ್ಲಿಯೂ ವಿನಿಮಯ ಪ್ರಕ್ರಿಯೆಯಲ್ಲಿಯೂ ಪ್ರಜಾಪ್ರಭುತ್ವದ ಸಮೀಪನ ಇರಬೇಕಾಗಿದೆ. ಪ್ರಜಾಪ್ರಭುತ್ವ ರೀತಿಯ ತರಗತಿ, ಶಾಲಾ ಪ್ರದೇಶಗಳು (ಪ್ರಜಾಪ್ರಭುತ್ವ ರೀತಿಯ ವೇದಿಕೆಗಳು), ಪ್ರಜಾಪ್ರಭುತ್ವ ಜೀವನ ಸಮೀಪನ ಮೊದಲಾದವುಗಳಿಂದ ಈ ಪ್ರಜ್ಞೆಯನ್ನು ಬೆಳೆಸುವುದು ಪಠ್ಯಕ್ರಮದ ಉದ್ದೇಶವಾಗಿದೆ.

### ಸಾಂವಿಧಾನಿಕ ಮೌಲ್ಯಗಳು

ನಮ್ಮ ಸಂವಿಧಾನವು ಎತ್ತಿ ಹಿಡಿದಿರುವ ಮೌಲ್ಯಗಳನ್ನೂ ಗುರಿಗಳನ್ನೂ ಪಠ್ಯಕ್ರಮವು ಪ್ರತಿಫಲಿಸುವಂತಿರಬೇಕು. ಸಾಂವಿಧಾನಿಕ ಮೌಲ್ಯಗಳನ್ನು ಸಾಧಿಸುವುದಕ್ಕಾಗಿ ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿಸುವ ಪಾಠಗಳನ್ನೂ ವಿನಿಮಯ ಪ್ರಕ್ರಿಯೆಗಳನ್ನೂ ಆಯ್ಕೆ ಮಾಡುವತ್ತ ಗಮನಿಸಬೇಕು.

### ಜಾತ್ಯತೀತ ಮನೋಭಾವ

ಜಾತ್ಯತೀತ ಮನೋಧರ್ಮವನ್ನು ಬೆಳೆಸುವಂಥ ವಿಷಯಗಳನ್ನು ಪಾಠಪುಸ್ತಕದಲ್ಲಿ ಅಳವಡಿಸಿಕೊಂಡು,

ಯೋಗ್ಯವಾದ ಕಲಿಕಾ ರೀತಿಯನ್ನು ಸ್ವೀಕರಿಸಬೇಕು.

**ಸಹಿಷ್ಣುತೆ**

ಭಿನ್ನಾಭಿಪ್ರಾಯವುಳ್ಳವರನ್ನೂ ಸಹನೆಯಿಂದ ಕಾಣುವುದು ಎಂಬ ಮೂಲ ತತ್ವವನ್ನು ಪಠ್ಯಕ್ರಮವು ಗುರಿಯಾಗಿಸಬೇಕು.

**ಕ್ರಿಯಾಶೀಲ – ಸೃಜನಶೀಲ ಚಿಂತನೆ**

ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲವೂ ಸೃಜನಶೀಲವೂ ಆಗಿರುವ ಚಿಂತನೆಗಳನ್ನೂ, ಸಂಶೋಧನ ಬುದ್ಧಿಯನ್ನೂ ಬೆಳೆಸಬೇಕಾಗಿದೆ. ಪಠ್ಯಕ್ರಮದ ಪಠ್ಯ ವಿಷಯಗಳಲ್ಲಿ ಹಾಗೂ ಕಲಿಕಾ ತಂತ್ರಗಳಲ್ಲಿ ಸೃಜನಶೀಲ ಹುಡುಕಾಟಕ್ಕೆ ಅವಕಾಶವಿರಬೇಕು. ಬಹುಮುಖ ಬೌದ್ಧಿಕತೆ (multiple intelligence) ಯ ಹಂತಗಳನ್ನು ಇದಕ್ಕಾಗಿ ಪರಿಗಣಿಸಬೇಕು.

**ಸಂಸ್ಕೃತಿ ಹಾಗೂ ಪರಂಪರೆಯನ್ನು ಗೌರವಿಸುವುದು**

ನಮ್ಮ ಸಾಂಸ್ಕೃತಿಕ ಪರಂಪರೆ ಹಾಗೂ ಇತಿಹಾಸವನ್ನು ಗೌರವಿಸುವ ಮನೋಧರ್ಮದ ನಿರ್ಮಾಣ ಎಂಬುದು ಪಠ್ಯಕ್ರಮವು ಪೂರೈಸಬೇಕಾದ ಮುಖ್ಯ ಗುರಿಗಳಲ್ಲಿ ಒಂದಾಗಿದೆ.

**ಸಮತ್ವ ಎಂಬ ಆಶಯ**

ಬೇರೆ ಬೇರೆ ಸಂದರ್ಭಗಳಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಸಮಾನತೆ, ಸಮತ್ವ ಮೊದಲಾದವುಗಳನ್ನು ದೃಢಪಡಿಸಬೇಕಾದುದು ಅನಿವಾರ್ಯವಾಗಿದೆ.

**ನಾಯಕತ್ವಗುಣ**

ಹೊಸ ಸಹಸ್ರಮಾನದ ಸವಾಲುಗಳನ್ನು ಎದುರಿಸಲೂ, ಸಾಧ್ಯತೆಗಳನ್ನು ವಿನಿಯೋಗಿಸಲೂ ಸಮರ್ಥರಾದ ನಾಯಕರನ್ನು ಸೃಷ್ಟಿಸಲು ಯೋಗ್ಯವಾದ ಕಲಿಕಾ ತಂತ್ರಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ತರಗತಿಯ ಚಟುವಟಿಕೆಗಳಲ್ಲಿ ಎಲ್ಲ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ದೃಢಗೊಳಿಸಿ, ನಾಯಕತ್ವ ಗುಣಗಳನ್ನು ಅಭಿವೃದ್ಧಿ ಪಡಿಸುವ ಪರಿಸರವನ್ನು ಸೃಷ್ಟಿಸಬೇಕಾದ ಅಗತ್ಯವಿದೆ.

**ಜೀವನ ಕೌಶಲ್ಯ ಶಿಕ್ಷಣ**

ದೈನಂದಿನ ಬದುಕಿನಲ್ಲಿ ವ್ಯಕ್ತಿಗಳು ಅನುಭವಿಸುವ ಸಮಸ್ಯೆ ಹಾಗೂ ಸವಾಲುಗಳನ್ನು ಫಲಪ್ರದವಾಗಿ ಎದುರಿಸಲು ಸಹಾಯಕವಾದ ಸ್ವಭಾವಗಳನ್ನು ಗಳಿಸಿಕೊಳ್ಳುವ ಸಾಮರ್ಥ್ಯವೇ ಜೀವನ ಕೌಶಲ್ಯಗಳು. ತನ್ನನ್ನು

ತಾನು ಅರಿತುಕೊಳ್ಳುವುದು, ಇತರರನ್ನು ಅರಿತುಕೊಳ್ಳುವುದು, ವಿಚಾರ ವಿನಿಮಯ ಸಾಮರ್ಥ್ಯ, ವ್ಯಕ್ತಿಗಳ ನಡುವಿನ ಸಂಬಂಧ, ಸೃಜನಶೀಲ ಚಿಂತನೆ, ವಿಮರ್ಶಾತ್ಮಕ ಚಿಂತನೆ, ತೀರ್ಮಾನಗಳನ್ನು ಕೈಗೊಳ್ಳುವ ಸಾಮರ್ಥ್ಯ, ಸಮಸ್ಯೆಗಳ ಪರಿಹಾರ, ಭಾವನಾತ್ಮಕ ಸಮತೋಲನ, ಒತ್ತಡದ ನಿಭಾಯಿಸುವಿಕೆ ಮೊದಲಾದವು ಜೀವನಕೌಶಲ್ಯಗಳಾಗಿವೆ. ಮಕ್ಕಳ ಪರಿಸರವನ್ನು ಹೊಂದಿಕೊಂಡು ಈ ವಲಯಗಳ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕಾಗಿದೆ. ಬದುಕಿನಲ್ಲಿ ಆತ್ಮವಿಶ್ವಾಸದೊಂದಿಗೆ ಮುಂದುವರಿಯಲು ಇಂತಹ ಕೌಶಲ್ಯಗಳು ವಿದ್ಯಾರ್ಥಿಗೆ ಸಹಾಯಕವಾಗುತ್ತವೆ.

### ಪೌರಧರ್ಮ

ರಾಷ್ಟ್ರಗಳು ಪ್ರಜೆಗಳಿಗೆ ಹೇಗೋ ಹಾಗೆಯೇ ಪ್ರಜೆಗಳು ರಾಷ್ಟ್ರಕ್ಕೆ ಸಲ್ಲಿಸಬೇಕಾದ ಕೆಲವು ಧರ್ಮಗಳೂ, ಕರ್ತವ್ಯಗಳೂ ಇವೆ. ಒಂದು ರಾಷ್ಟ್ರದ ಅಭಿವೃದ್ಧಿ ಎಂದರೆ ಮಾನವ ಸಂಪನ್ಮೂಲದ ಅಭಿವೃದ್ಧಿ ಎಂದು ತಿಳಿಯುವ ಈ ಕಾಲದಲ್ಲಿ ಪೌರಪ್ರಜ್ಞೆಯಿರುವ ಜನರನ್ನು ಸೃಷ್ಟಿಸುವುದು ಶಿಕ್ಷಣದ ಪ್ರಧಾನ ಕರ್ತವ್ಯವಾಗಿದೆ. ಸ್ವತಂತ್ರವಾದ ಸಮಾಜ ಸೃಷ್ಟಿಯೊಂದಿಗೆ ಜವಾಬ್ದಾರಿ ಮತ್ತು ಶಿಸ್ತಿನಿಂದ ಕೂಡಿದ ಪ್ರಜೆಗಳನ್ನು ಸೃಷ್ಟಿಸುವುದು ಶಿಕ್ಷಣ ವ್ಯವಸ್ಥೆಯ ಗುರಿಯಾಗಿದೆ.

### ಮಾನವ ಹಕ್ಕುಗಳು

ಮಾನವ ಎಂಬ ನೆಲೆಯಲ್ಲಿ ಈ ಭೂಮಿಯಲ್ಲಿ ಗೌರವದಿಂದ ಬದುಕುವ ವ್ಯಕ್ತಿಯ ಹಕ್ಕುಗಳೇ ಮಾನವ ಹಕ್ಕುಗಳು. ಸಂಯುಕ್ತರಾಷ್ಟ್ರ ಸಂಘದ ಮಾನವ ಹಕ್ಕುಗಳ ಘೋಷಣೆಯಲ್ಲಿ ಸಾರ್ವತ್ರಿಕವಾಗಿ ಅಂಗೀಕಾರ ಲಭಿಸಿದ ಮಾನವ ಹಕ್ಕು ಗಳಿಗೆ ಪಠ್ಯಕ್ರಮದಲ್ಲಿಯೂ ಪಾಠವಿನಿಮಯ ಪ್ರಕ್ರಿಯೆಯಲ್ಲಿಯೂ ಸೂಕ್ತ ಪ್ರಾಧಾನ್ಯವನ್ನು ನೀಡಬೇಕಾಗಿದೆ.

### ಮಕ್ಕಳ ಹಕ್ಕುಗಳು

ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸಬೇಕಾದ ಜವಾಬ್ದಾರಿ ನಮ್ಮ ಕರ್ತವ್ಯವಾಗಿದೆ.

### ಪ್ರಕೃತಿ – ಪ್ರಕೃತಿ ಸಂಪನ್ಮೂಲ ಸಂರಕ್ಷಣೆ, ಪರಿಸರ ಶುಚಿತ್ವ

ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆ, ಪರಿಸರ ಶುಚಿತ್ವ, ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಕುರಿತು ಪ್ರಾಥಮಿಕ ದೃಷ್ಟಿಕೋನಗಳನ್ನು ಪ್ರಾಥಮಿಕ ತರಗತಿಗಳಿಂದಲೇ ಅಳವಡಿಸಿಕೊಳ್ಳಬೇಕು. ವ್ಯಕ್ತಿ ಶುಚಿತ್ವದಂತೆಯೇ ಪರಿಸರ ಶುಚಿತ್ವವೂ ಅಗತ್ಯ ಎಂಬ ಶುಚಿತ್ವದ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಾಗಿದೆ. ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳು ಕೇವಲ ಮಾನವನಿಗೆ ಮಾತ್ರ ಸೇರಿದ್ದಲ್ಲ ಮತ್ತು ಪ್ರಕೃತಿಯ ಸಮತೋಲನವನ್ನು ಕಾಪಾಡದಿದ್ದರೆ ವ್ಯಾಪಕವಾದ ದುರಂತಗಳಿಗೆ ಕಾರಣವಾಗುವುದು ಎಂಬ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಪ್ರಾಕೃತಿಕ ಸಂಪನ್ಮೂಲ ಸಂರಕ್ಷಣೆ ಹಾಗೂ ಪರಿಸರ

ಶುಚಿತ್ವವನ್ನು ಒಂದು ಜೀವನ ಮೌಲ್ಯವಾಗಿ ಮತ್ತು ಮನೋಧರ್ಮವಾಗಿ ಬದಲಾಯಿಸುವ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕು.

### ಶಾಂತಿಯ ಶಿಕ್ಷಣ

ವೈಯುಕ್ತಿಕವಾಗಿಯೂ ಸಾಮಾಜಿಕವಾಗಿಯೂ ಶಾಂತಿ ಮತ್ತು ಸಮಾಧಾನವನ್ನು ಕಾಪಾಡುವ ಸಾಮರ್ಥ್ಯ ಮತ್ತು ಮನೋಭಾವಗಳನ್ನು ಬೆಳೆಸುವುದು ಶಾಂತಿ ಶಿಕ್ಷಣದ ಮುಖ್ಯ ಗುರಿ. ಸಂಘರ್ಷಗಳು ಹಾಗೂ ಅವುಗಳಿಗೆ ಕಾರಣವಾಗುವ ಹಿನ್ನೆಲೆಗಳನ್ನು ಬಿಟ್ಟು ಶಾಂತಿ, ಸೌಹಾರ್ದ ಹಾಗೂ ಸಮಾಧಾನದ ಸಾಧ್ಯತೆಗಳನ್ನು ಪಠ್ಯಕ್ರಮದ ವಿವಿಧ ವಿಷಯಗಳಲ್ಲಿ ಅಳವಡಿಸಬೇಕಾದುದು ಈ ಶಿಕ್ಷಣ ನೀತಿಯ ಅಗತ್ಯವಾಗಿದೆ.

### ಕಾನೂನು ಸಾಕ್ಷರತೆ

ಕಾನೂನು ಸಂಬಂಧವಾದ ತಿಳುವಳಿಕೆಯು ಪ್ರಜಾಪ್ರಭುತ್ವ ದೇಶದ ಪ್ರಜೆಗಳಿಗೆ ಅತಿ ಅಗತ್ಯವಾಗಿದೆ. ಕಾನೂನು ಸಾಕ್ಷರತೆಯನ್ನು ದೃಢಪಡಿಸುವ ಪಾಠಭಾಗಗಳನ್ನು ವಿಷಯಕ್ಕೆ ಹೊಂದಿಕೊಂಡು ಅಳವಡಿಸಬೇಕಾದುದು ಕಾಲದ ಅಗತ್ಯವಾಗಿದೆ. ಕಾನೂನು ಸಹಾಯ ವೇದಿಕೆ, ಕಾನೂನು ಕ್ಲಬ್‌ಗಳು, ಕಾನೂನು ಕ್ಲಿನಿಕ್‌ಗಳು, ಕಾನೂನು ತಿಳುವಳಿಕಾ ಶಿಬಿರಗಳು ಮೊದಲಾದ ವಿಭಿನ್ನ ಚಟುವಟಿಕೆಗಳನ್ನು ಆಯೋಜಿಸಬಹುದು.

### ಸೈಬರ್ ಅಪರಾಧಗಳ ಕುರಿತಾಗಿರುವ ತಿಳುವಳಿಕೆ

ಮಾಹಿತಿ ತಂತ್ರಜ್ಞಾನದ ಬಳಕೆಯಿರುವ ಸಮಕಾಲೀನ ಜಗತ್ತಿನಲ್ಲಿ ಪ್ರತಿದಿನವೆಂಬಂತೆ ಸೈಬರ್ ದುರುಪಯೋಗ ಮತ್ತು ಅಪರಾಧ ಚಟುವಟಿಕೆಗಳು ಹೆಚ್ಚುತ್ತಿವೆ. ಮಕ್ಕಳನ್ನು ಇಂತಹ ಚಟುವಟಿಕೆಗಳಿಂದ ದೂರವಿರಿಸುವ ತಿಳುವಳಿಕೆಯನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕು. ಇ–ಮೈಲ್, ಇಂಟರ್‌ನೆಟ್, ಸಾಮಾಜಿಕ ಜಾಲತಾಣಗಳು ಮೊದಲಾದವುಗಳ ಉಪಯೋಗವನ್ನು ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನೂ ಅವುಗಳ ಬಳಕೆಯ ಗುಣ ದೋಷಗಳನ್ನೂ ಮಕ್ಕಳಿಗೆ ಒದಗಿಸಬೇಕು. ಸೈಬರ್ ಅಪರಾಧಗಳಿಗಿರುವ ಶಿಕ್ಷೆ ಹಾಗೂ ಇಂಟರ್‌ನೆಟ್ ಬಳಕೆಯ ನೈತಿಕತೆಯನ್ನು ಪಠ್ಯಕ್ರಮದ ಮೂಲಕ ತಿಳಿಸಬೇಕು.

### ಮಾಧ್ಯಮ ತಿಳುವಳಿಕೆ

ಪತ್ರಿಕೆ ಹಾಗೂ ದೃಶ್ಯಮಾಧ್ಯಮಗಳಿಗೆ ನಮ್ಮ ಸಮಾಜದಲ್ಲಿ ಬಹಳ ಪ್ರಾಧಾನ್ಯವಿದೆ. ದೃಶ್ಯಮಾಧ್ಯಮಗಳು ಮಕ್ಕಳ ಮೇಲೆ ಬೀರುವ ಪರಿಣಾಮ ಅಪಾರ. ಹೀಗೆ ಮಾಧ್ಯಮ ಸಂಬಂಧಿ ಮಾಹಿತಿಗಳನ್ನು ನೀಡುವ ಘಟಕಗಳನ್ನು ಪಠ್ಯಕ್ರಮದಲ್ಲಿ ಸೇರ್ಪಡೆಗೊಳಿಸುವುದು ಅಗತ್ಯವಾಗಿದೆ.

## ಶಾಶ್ವತ ಅಭಿವೃದ್ಧಿ ದೃಷ್ಟಿಕೋನ

ಈ ಭೂಮಿಯು ಮಾನವನಿಗೆ ಮಾತ್ರ ಸೇರಿದ್ದಲ್ಲ ಎಂಬ ಪರಿಸರ ಪ್ರಜ್ಞೆಯನ್ನು ಪಠ್ಯಕ್ರಮವು ಒದಗಿಸಬೇಕಾಗಿದೆ. ಪರಿಸರ ಸಂಬಂಧವಾದ ಸವಾಲುಗಳು, ಪರಿಸರ ನಾಶಕ್ಕೆ ಕಾರಣವಾಗುವ ಮಾನವನ ಕೈವಾಡಗಳು ಹಾಗೂ ಪರಿಸರವನ್ನು ದುರಂತಗಳಿಂದ ಪಾರುಮಾಡುವ ದಾರಿಗಳ ಕುರಿತು ಪ್ರಜ್ಞೆಯನ್ನು ಮೂಡಿಸಬೇಕಾದುದು ಇಂದಿನ ಅಗತ್ಯವಾಗಿದೆ. ಪರಿಸರ ಮತ್ತು ಅಭಿವೃದ್ಧಿಯನ್ನು ಸಂಯೋಜಿಸುವುದು ಹೇಗೆ ಎಂಬುದನ್ನೂ ಶಾಶ್ವತವಾದ ಅಭಿವೃದ್ಧಿಯ ದೃಷ್ಟಿಕೋನಗಳನ್ನೂ ಸಂಶೋಧನೆಗಳನ್ನೂ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಸಮಗ್ರವಾದ ಪರಿಸರ ಪ್ರಜ್ಞೆಯನ್ನು ಹುಟ್ಟಿಸುವುದು ಪಠ್ಯಕ್ರಮದ ಮುಖ್ಯ ಉದ್ದೇಶಗಳಲ್ಲಿ ಒಂದು.

## ಬಾಲ್ಯ ಶಿಕ್ಷಣ

ಮಕ್ಕಳ ಮನಶಾಸ್ತ್ರಜ್ಞರು, ಆರೋಗ್ಯ ಕಾರ್ಯಕರ್ತರು, ವೈದ್ಯರು ಹಾಗೂ ಅಧ್ಯಾಪಕರ ಸಂಯುಕ್ತ ಪರಿಶ್ರಮಗಳ ಮೂಲಕ ಬಾಲ್ಯ ಶಿಕ್ಷಣಕ್ಕೆ ಯೋಗ್ಯವಾದ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲು ಪರಿಗಣಿಸಬೇಕು. ವಿದ್ಯಾರ್ಥಿಗಳ ಆರೋಗ್ಯ, ಶುಚಿತ್ವ ಇವುಗಳಿಗೆ ಸಂಬಂಧಿಸಿದ ಸಂಶಯಗಳನ್ನು ಪರಿಹರಿಸಲು ವೈಜ್ಞಾನಿಕವಾದ ಮಾಹಿತಿಗಳನ್ನು ಪರಿಗಣಿಸುವುದು ಅಗತ್ಯವಾಗಿದೆ.

## ಉಪಭೋಗ ಸಂಸ್ಕೃತಿ–ದುಷ್ಪರಿಣಾಮಗಳು

ಉಪಭೋಗ ಸಂಸ್ಕೃತಿಯ ದುಷ್ಪರಿಣಾಮಗಳ ಕುರಿತಾದ ಸತ್ಯಾಂಶಗಳನ್ನು ಪ್ರಾಥಮಿಕ ಶಾಲಾ ಮಟ್ಟದಿಂದಲೇ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಬಳಕೆದಾರ ಎಂಬ ನೆಲೆಯಲ್ಲಿ ನಮ್ಮ ಹಕ್ಕುಗಳನ್ನೂ, ಬಳಕೆದಾರರಿಗೆ ನೆರವಾಗುವ ಕಾನೂನುಗಳನ್ನೂ ಮಕ್ಕಳಿಗೆ ತಿಳಿಸಿಕೊಡಬೇಕು.

## ಮಾದಕ ದ್ರವ್ಯ ವಿರೋಧಿ ನಿಲುವು

ಮದ್ಯ, ಮಾದಕ ವಸ್ತುಗಳು, ಹೊಗೆ ಸೊಪ್ಪು ಹಾಗೂ ಇತರ ಮಾದಕ ದ್ರವ್ಯಗಳ ಬಳಕೆಯು ಹೊಸ ತಲೆಮಾರಿನ ಆರೋಗ್ಯವನ್ನು ಕೆಡಿಸುತ್ತದೆ ಎಂಬ ಅರಿವು ನಮ್ಮದಾಗಬೇಕು. ಮುಂದಿನ ತಲೆಮಾರನ್ನು ಇವುಗಳಿಂದ ಮುಕ್ತಗೊಳಿಸಿ ರಕ್ಷಿಸಬೇಕು. ಅದಕ್ಕಾಗಿ ಮಾದಕದ್ರವ್ಯಗಳ ಉಪಯೋಗದಿಂದ ಉಂಟಾಗುವ ದೈಹಿಕ ಮಾನಸಿಕ ತೊಂದರೆಗಳನ್ನು ತಿಳಿಸುವ ಚಿತ್ರಗಳು, ಲಘು ಬರಹಗಳು, ದೃಶ್ಯಗಳನ್ನು ಪಠ್ಯಕ್ರಮದ ವಿಷಯಗಳಲ್ಲಿ ಅಳವಡಿಸಬೇಕು. ಮಾದಕ ದ್ರವ್ಯ ವಿರೋಧಿ ನಿಲುವನ್ನು ಸೃಷ್ಟಿಸುವುದು ಇವುಗಳ ಮುಖ್ಯ ಗುರಿಯಾಗಿರಬೇಕು.

### ಲಿಂಗ ಸಮಾನತೆ

ಪಠ್ಯಕ್ರಮವು ಲಿಂಗ ಸಮಾನತೆಯನ್ನು ದೃಢಪಡಿಸುವಂತಿರಬೇಕು. ಗಂಡು – ಹೆಣ್ಣು ಎಂಬ ಭೇದಭಾವಗಳು ಪಠ್ಯಕ್ರಮದಲ್ಲಿ ನುಸುಳಬಾರದು. ಪಾಠಪುಸ್ತಕಗಳ ಚಿತ್ರಗಳಲ್ಲಿ ಕೂಡಾ ಲಿಂಗ ಸಮಾನತೆಯ ದೃಷ್ಟಿಕೋನವಿರಬೇಕು. ಕಲಿಕಾ ಚಟುವಟಿಕೆಗಳ ಸಂದರ್ಭಗಳಲ್ಲಿಯೂ ಈ ಲಿಂಗ ಸಮಾನತೆಯನ್ನು ದೃಢಪಡಿಸಬೇಕಾದುದು ಅಧ್ಯಾಪಕರ ಕರ್ತವ್ಯವಾಗಿದೆ.

### ಮಿತವ್ಯಯ ಗುಣ

ಪ್ರಾಥಮಿಕ ಶಾಲಾ ಹಂತದಲ್ಲಿಯೇ ಮಿತವ್ಯಯ ಗುಣವನ್ನು ಮಕ್ಕಳಿಗೆ ಕಲಿಸಬೇಕು. ಮಿತವ್ಯಯ ಗುಣದ ಅಗತ್ಯ ಮತ್ತು ಮಹತ್ವವನ್ನು ತಿಳಿಸಿಕೊಡಬೇಕು. ಮಿತವ್ಯಯವನ್ನು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ತಿಳಿಸಿಕೊಡಬೇಕು.

### ರಸ್ತೆ ಸುರಕ್ಷೆ

ರಸ್ತೆಯಲ್ಲಿ ಪಾಲಿಸಬೇಕಾದ ನಿಮಯಗಳು, ರಸ್ತೆ ಅಪಘಾತಗಳನ್ನು ತಪ್ಪಿಸಲು ಇರುವ ಪ್ರಾಯೋಗಿಕ ಸೂಚನೆಗಳು, ಚಟುವಟಿಕೆಗಳು ಮೊದಲಾದವು ರಸ್ತೆ ಸುರಕ್ಷೆಯ ಘಟಕಗಳಾಗಿವೆ. ರಸ್ತೆಯು ಸಾರ್ವಜನಿಕ ಸ್ಥಳವೆಂದೂ, ನಮ್ಮ ಹಾಗೆ ಇತರರಿಗೂ ರಸ್ತೆಯನ್ನು ಬಳಸುವ ಸ್ವಾತಂತ್ರ್ಯವಿದೆ ಎಂದೂ ಪೌರಪ್ರಜ್ಞೆಯನ್ನು ಹುಟ್ಟಿಸಬೇಕು. ರಸ್ತೆ ಸುರಕ್ಷತೆಯ ಸಂಬಂಧವಾಗಿ ಚಟುವಟಿಕೆಗಳಿಗೆ ಪ್ರಾಧಾನ್ಯ ನೀಡಬೇಕು.

ಪಠ್ಯಕ್ರಮದ ಸ್ವಾಭಾವಿಕವಾದ ವಿನಿಮಯದಲ್ಲಿ ಈ ಘಟಕಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಕಲಿಕಾ ಸಾಧನೆಗಳನ್ನು ದೃಢಪಡಿಸಬೇಕು. ವಿವಿಧ ವಿಷಯಗಳ ಒಳ ಹೂರಣದ ಆಶಯಗಳ ಆಯ್ಕೆಯಲ್ಲಿಯೂ ಕಲಿಕಾ ಚಟುವಟಿಕೆಗಳನ್ನು ಕ್ರಮೀಕರಿಸುವಾಗಲೂ ಸಾಕಷ್ಟು ಪರಿಗಣನೆಯನ್ನು ನೀಡಬೇಕಾಗಿದೆ. ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗಳಲ್ಲಿ ಸಾಗುವಾಗ ಇಂತಹ ಆಶಯಗಳಿಗೆ ಸಂಬಂಧಿಸಿದ ತಿಳುವಳಿಕೆ, ಕೌಶಲ್ಯ, ಮನೋಭಾವ ಇವುಗಳಿಗೆ ಒತ್ತು ನೀಡಬೇಕು. ನಿರಂತರ ಮೌಲ್ಯಮಾಪನ ಪ್ರಕ್ರಿಯೆಗಳ ಮೂಲಕ ಈ ಗುರಿಗಳನ್ನು ಈಡೇರಿಸಲು ಸಾಧ್ಯವಾಗಿದೆಯೇ ಎಂದು ಪರಿಶೋಧಿಸಲು ಸಾಧ್ಯವಾಗಬೇಕು. ವಿವಿಧ ಕ್ಲಬ್‌ಗಳ ಚಟುವಟಿಕೆಗಳು, SPC, NCC, Scouts & Guides, JRC, ವಿದ್ಯಾರಂಗ ಕಲಾ ಸಾಹಿತ್ಯವೇದಿಕೆ, ಗಾಂಧೀದರ್ಶನ ಮೊದಲಾದ ವ್ಯವಸ್ಥೆಗಳು ಮೌಲ್ಯಗಳನ್ನೂ ಮನೋಧರ್ಮಗಳನ್ನೂ ಕಾಳಜಿಯನ್ನೂ ಬೆಳೆಸುವ ವೇದಿಕೆಗಳಾಗಬೇಕು.

## 1.11 ಹಕ್ಕು ಆಧಾರಿತ ಶಿಕ್ಷಣ (Right Based Education)

ಮಕ್ಕಳ ಹಕ್ಕುಗಳನ್ನು ನಿರ್ಣಯಿಸಿ ಜಗತ್ತಿನಾದ್ಯಂತ ಅನುಷ್ಠಾನಗೊಳಿಸಲು ಯುನೆಸ್ಕೋ ನೇತೃತ್ವ ವಹಿಸಿದೆ. ಈ ಹಿನ್ನೆಲೆಯಲ್ಲಿ ವಿವಿಧ ದೇಶಗಳಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಅನೇಕ ಕಾನೂನುಗಳನ್ನು ರಚಿಸಲಾಗಿದೆ.

ಭಾರತದಲ್ಲಿ ರಾಷ್ಟ್ರೀಯ ಶಿಕ್ಷಣ ಹಕ್ಕು ನಿಯಮ– 2009 ಕಾರ್ಯಗತವಾಗಿರುವುದು ಈ ನಿಟ್ಟಿನಲ್ಲಿ ಒಂದು ಮೈಲಿಗಲ್ಲು. ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸುವ ಜವಾಬ್ದಾರಿಯು ಹಿರಿಯರಾದ ನಮ್ಮ ಕರ್ತವ್ಯವಾಗಿದೆ. ಶಿಕ್ಷಣ ಹಕ್ಕುಗಳ ಕುರಿತು ಹೇಳುವಾಗ ಅವುಗಳನ್ನು ಮೂರು ಮುಖ್ಯ ಘಟಕಗಳಾಗಿ ವಿಂಗಡಿಸಬಹುದು.

- ಭಾಗವಹಿಸುವಿಕೆ (Participation)
- ಲಭ್ಯತೆ (Provision)
- ಸಂರಕ್ಷಣೆ (Protection)

**ಭಾಗವಹಿಸುವಿಕೆ (Participation)**

- ಮಕ್ಕಳಿಗೆ ಸಂಬಂಧಿಸಿದ ಎಲ್ಲ ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯವನ್ನು ಕೇಳುತ್ತಾರೆ.
- ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯಕ್ಕೆ ಮುಖ್ಯ ಪರಿಗಣನೆ ಇದೆ.
- ನನ್ನ ಸಾಮರ್ಥ್ಯ ಹಾಗೂ ಮಿತಿಗಳಿಗೆ ಹೊಂದಿಕೊಂಡು ನೀಡಲಾಗುವ ಚಟುವಟಿಕೆಗಳಲ್ಲಿ ಭಾಗವಹಿಸಲು ನನಗೆ ಅವಕಾಶ ಲಭಿಸುತ್ತದೆ.
- ನನ್ನ ಸಾಮರ್ಥ್ಯಗಳನ್ನು ಪೋಷಿಸಲೂ ಮಿತಿಗಳನ್ನು ದಾಟಲೂ ಯೋಗ್ಯವಾದ ಕಲಿಕಾ ಪ್ರಕ್ರಿಯೆಗಳ ಮೂಲಕ ಸಾಗಲು ಸಾಧ್ಯವಾಗುತ್ತದೆ.
- ತರಗತಿಯಲ್ಲಿ ನಡೆಯುವ ಚಟುವಟಿಕೆಗಳಲ್ಲಿ ನನಗೂ ಸಹಪಾಠಿಗಳಿಗೂ ಕ್ರಿಯಾಶೀಲವಾದ ಭಾಗವಹಿಸುವಿಕೆ ಲಭಿಸುತ್ತಿದೆ.
- ನನ್ನ ಸಾಮರ್ಥ್ಯಗಳನ್ನು ಪ್ರದರ್ಶಿಸಲು ನನಗೆ ಅವಕಾಶ ಸಿಗುತ್ತದೆ.

**ಲಭ್ಯತೆ (Provision)**

- ಸರಿಯಾದ ಶೈಕ್ಷಣಿಕ ಯೋಗ್ಯತೆಯಿರುವ, ಜ್ಞಾನವನ್ನು ಕಾಲಕ್ಕನುಸರಿಸಿ ನವೀಕರಿಸುವ ಅಧ್ಯಾಪಕರ ಸೇವೆ ನನಗೆ ಲಭಿಸುತ್ತಿದೆ.
- ನಿರ್ದಿಷ್ಟ ಸಮಯದಲ್ಲಿ ಕಲಿಕಾನುಭವಗಳು ಸರಿಯಾದ ಕಾಲಕ್ಕೆ ಸಿಗುತ್ತಿವೆ.
- ದೈಹಿಕ, ಮಾನಸಿಕ ಬೆಳವಣಿಗೆಗೆ ಪೂರಕವಾಗಿರುವ ತರಗತಿ ಪರಿಸರ ನನಗೆ ಲಭಿಸುತ್ತಿದೆ.
- ಕಲಿಕಾ ಚಟುವಟಿಕೆಗಳಿಗೆ ಅಗತ್ಯವಾದ ಕಲಿಕೋಪಕರಣಗಳನ್ನು ಯಥಾಕಾಲಕ್ಕೆ ಒದಗಿಸಿಕೊಡಲು ನನ್ನ ಅಧ್ಯಾಪಕರಿಗೆ ಸಾಧ್ಯವಾಗುತ್ತದೆ.
- ಕಲೆ ಮತ್ತು ಕ್ರೀಡೆಯ ಬೆಳವಣಿಗೆಗೆ ಅಗತ್ಯವಾದ ಉಪಕರಣಗಳೂ ಅವಕಾಶಗಳೂ ನನಗೆ ಸಿಗುತ್ತಿವೆ.

**RTE 2009 ಹೀಗೆ ಹೇಳುತ್ತದೆ**

- 1 ರಿಂದ 5 ರ ವರೆಗಿನ ತರಗತಿಗಳಲ್ಲಿ ಕಲಿಯುವ ಮಕ್ಕಳಿಗೆ 200 ಕಲಿಕೆಯ ದಿವಸಗಳೂ 800 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.
- 6 ರಿಂದ 8 ರ ವರೆಗಿನ ತರಗತಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ 220 ಕಲಿಕೆಯ ದಿವಸಗಳೂ 1000 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.

**ಸಂರಕ್ಷಣೆ (Protection)**

- ಶಾಲೆಯಲ್ಲಿ ಹಾಗೂ ಹೊರಗೆ ಯಾವುದೇ ಭೇದಭಾವವನ್ನು ನಾನು ಅನುಭವಿಸುವುದಿಲ್ಲ.
- ನನ್ನನ್ನು ಯಾರೂ ಕೂಡಾ ಯಾವುದೇ ರೀತಿಯಲ್ಲಿ ಕಡೆಗಣಿಸುವುದಿಲ್ಲ.
- ಯಾರೂ ಕೂಡಾ ದೈಹಿಕ ಅಥವಾ ಮಾನಸಿಕ ದೌರ್ಜನ್ಯವೆಸಗುವುದಿಲ್ಲ.
- ಅಧ್ಯಾಪಕರಲ್ಲಿ ನಿರ್ಭೀತಿಯಿಂದ ವ್ಯವಹರಿಸಲು ನನಗೆ ಸಾಧ್ಯವಾಗುತ್ತದೆ.
- ಮಗುವಾದರೂ ನನಗೆ ಖಾಸಗಿತನವಿದೆ. ನನ್ನನ್ನು ಎಲ್ಲರೂ ಅಂಗೀಕರಿಸುತ್ತಾರೆ.
- ಶಾಲೆಯಲ್ಲಿಯೂ ಮನೆಯಲ್ಲಿಯೂ ನಾನು ಸುರಕ್ಷಿತನಾಗಿದ್ದೇನೆ ಎಂಬ ಭರವಸೆ ನನಗಿದೆ.

**ಕೇರಳ ರಾಜ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

2002 ಮೇ ತಿಂಗಳಲ್ಲಿ ಸೇರಿದ ಸಂಯುಕ್ತ ರಾಷ್ಟ್ರ ಸಭೆಯ ಮಕ್ಕಳಿಗಾಗಿರುವ ವಿಶೇಷ ಸಮ್ಮೇಳನವು 'ಮಕ್ಕಳಿಗೆ ಯೋಗ್ಯವಾದ ಒಂದು ಜಗತ್ತು' ಎಂಬ ಶೀರ್ಷಿಕೆಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಿತು. ಇದರ ಆಧಾರದಲ್ಲಿ ಕೇಂದ್ರ ಸರಕಾರವು ನಿರ್ಮಿಸಿದ 2005ರ ಬಾಲಕರ ಹಕ್ಕು ಸಂರಕ್ಷಣ ಆಯೋಗ ಕಾಯಿದೆಯ ಹಾಗೂ 2012ರ ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ನಿಯಮಗಳ ಆಧಾರದಲ್ಲಿ 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಆಯೋಗ' ಕಾರ್ಯಾಚರಿಸುತ್ತಿದೆ. ನಮ್ಮ ಸಂವಿಧಾನವು ಹೇಳುವ ಮೂಲಭೂತ ಹಕ್ಕುಗಳನ್ನು ಹಾಗೂ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವುದು ಆಯೋಗದ ಕೆಲಸವಾಗಿದೆ.

ಈ ಮಕ್ಕಳ ಹಕ್ಕುಗಳನ್ನು ದೃಢಪಡಿಸಲು ತಾನು ಏನು ಮಾಡಿದೆನೆಂದೂ ಇನ್ನು ಏನು ಮಾಡಬಹುದೆಂದೂ ಪ್ರತಿಯೊಬ್ಬ ಅಧ್ಯಾಪಕನೂ ಯೋಚಿಸಬೇಕಾಗಿದೆ.

## 1.12 ಮೆಂಟರಿಂಗ್

ರಾಷ್ಟ್ರೀಯ ಶಿಕ್ಷಣ ಹಕ್ಕು ಕಾಯ್ದೆಯು ಅಧ್ಯಾಪಕ/ಅಧ್ಯಾಪಿಕೆಯನ್ನು ಮೆಂಟರ್ (mentor) ಎಂಬುದಾಗಿ ಪರಿಗಣಿಸುತ್ತದೆ. ಸಮಗ್ರ ಶಾಲಾ ಅಭಿವೃದ್ಧಿ ವಲಯದಲ್ಲಿ ಮೆಂಟರಿಂಗ್‌ಗೆ ಬಹಳಷ್ಟು ಪ್ರಾಧಾನ್ಯವಿದೆ. ಕಲಿಕೆಯ ಸಾಧನೆಗಳನ್ನು ರುಜುವಾತುಪಡಿಸಲು ಸಮಗ್ರವಾದ ಮಾರ್ಗಸೂಚಿಗಳು ಅತಿ ಅವಶ್ಯಕ.

ಶಿಕ್ಷಣ ಪ್ರಕ್ರಿಯೆಯ ಮುಖ್ಯ ಘಟಕವಾದ ಅಧ್ಯಾಪಕ – ವಿದ್ಯಾರ್ಥಿ ಸಂಬಂಧದಲ್ಲಿ ಇಂದು ಬಹಳಷ್ಟು ವ್ಯತ್ಯಾಸಗಳಾಗಿವೆ. ವಿದ್ಯಾರ್ಥಿಗೆ ಜ್ಞಾನವನ್ನು ಹಸ್ತಾಂತರಿಸುವ ವ್ಯಕ್ತಿ ಮಾತ್ರವಲ್ಲದೆ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಗಳಿಸಲಿರುವ ವೈವಿಧ್ಯಪೂರ್ಣ ಅವಕಾಶಗಳನ್ನು ಒದಗಿಸಿಕೊಡುವ ವ್ಯಕ್ತಿಯಾಗಿಯೂ ಅಧ್ಯಾಪಕ/ಅಧ್ಯಾಪಿಕೆ ಕಾರ್ಯನಿರ್ವಹಿಸಬೇಕಾಗಿದೆ.

ಮನೆಯನ್ನು ಹೊರತುಪಡಿಸಿದರೆ ವಿದ್ಯಾರ್ಥಿಗೆ ಶಾಲೆ ಎಂಬುದು ಮತ್ತೊಂದು ಮನೆಯಿದ್ದಂತೆ. ಶಾಲೆ ಮನೆಯೇ ಆದಾಗ ವಿದ್ಯಾರ್ಥಿಗೆ ಅಧ್ಯಾಪಕ ವೃಂದವು ಮನೆಯ ಸದಸ್ಯರೇ ಆಗುತ್ತಾರೆ. ವಿದ್ಯಾರ್ಥಿಗೆ ಮನೆಯಿಂದ ಲಭಿಸುವ ಪ್ರೀತಿ, ಕಾಳಜಿ, ರಕ್ಷಣೆ, ಅಂಗೀಕಾರ ಮುಂತಾದವುಗಳು ಗರಿಷ್ಠ ಅಥವಾ ಕನಿಷ್ಠ ಮಟ್ಟದಲ್ಲಿ ಲಭಿಸುತ್ತಿವೆ ಎಂಬುದನ್ನು ಪ್ರತಿಯೊಬ್ಬ ಅಧ್ಯಾಪಕ ಅಥವಾ ಅಧ್ಯಾಪಿಕೆ ಮನದಟ್ಟು ಮಾಡಿಕೊಳ್ಳಬೇಕು. ಇದನ್ನು ತಿಳಿದಾದ ಬಳಿಕ ಪ್ರತಿಯೊಂದು ಮಗುವಿಗೂ ಅವಶ್ಯಕವಾದ ರೀತಿಯಲ್ಲಿ ಇವುಗಳನ್ನು ನೀಡುವ ಹೊಣೆಗಾರಿಕೆ ಅಧ್ಯಾಪಕರಿಗಿದೆ. ಹೀಗಾದಾಗ ಮಾತ್ರ ಶಾಲೆಯೂ ಮನೆಯೆನಿಸಿಕೊಳ್ಳುವುದು.

ಪ್ರತಿಯೊಂದು ಮಗುವಿನ ವ್ಯಕ್ತಿಗತವಾದ ಮತ್ತು ಕೌಟುಂಬಿಕವಾದ ಹಿನ್ನೆಲೆಗಳನ್ನು ಅರ್ಥಮಾಡಿಕೊಳ್ಳಲು ಅಧ್ಯಾಪಕರು ಈ ಕೆಳಗಿನ ವಿಷಯಗಳನ್ನು ಗಮನಿಸಬೇಕಾಗುತ್ತದೆ.

- ಗೃಹ ಸಂದರ್ಶನ
- ಹೆತ್ತವರೊಂದಿಗಿನ ಆಶಯ ವಿನಿಮಯ
- ಮಗುವಿನ ನಿರಂತರ ನಿರೀಕ್ಷಣೆ
- 

ಹೀಗೆ ಮಗುವಿಗೆ ಪ್ರೀತಿ, ಅಂಗೀಕಾರ ಮತ್ತು ಸಂರಕ್ಷಣೆ ಇತ್ಯಾದಿಗಳನ್ನು ನೀಡಿ, ನಾವು ಅಧ್ಯಾಪಕರು ಮಗುವಿನ ಸಹರಕ್ಷಕರಾಗಿ ಜವಾಬ್ದಾರಿ ವಹಿಸಿಕೊಂಡಾಗ ಮಾತ್ರ ಹೊಸ ಕಾಲಮಾನದ ಅಧ್ಯಾಪಕ/ಅಧ್ಯಾಪಿಕೆಯಾಗಿ ನಾವು ಗುರುತಿಸಿಕೊಳ್ಳಬಹುದು.

ಮೆಂಟರಿಂಗ್ ಮೂಲಕ ಮಾರ್ಗದರ್ಶನ, ಸಲಹೆ, ಬೆಂಬಲ, ಜ್ಞಾನವನ್ನು ಉತ್ತಮಪಡಿಸಲು ಬೇಕಾದ ಅವಕಾಶ ಮುಂತಾದುವುಗಳನ್ನು ಅಧ್ಯಾಪಕರು ಮಗುವಿಗೆ ಒದಗಿಸಿಕೊಡುತ್ತಾರೆ. ಅನುಭವಿಯಾದ ನೇತಾರ ಎಂಬ ನೆಲೆಯಲ್ಲಿಯೂ ಅನುಕರಣೀಯ ಆದರ್ಶ ವ್ಯಕ್ತಿ ಎಂಬ ನೆಲೆಯಲ್ಲಿಯೂ ಮೆಂಟರಿಂಗ್‌ನ ಕಾರ್ಯಚಟುವಟಿಕೆಗಳು ಮುಂದುವರಿಯಬೇಕು. ಬೋಧನೆಗೆ ಬೇಕಾದ ಸೂಚನೆಗಳು, ಕೌನ್ಸಿಲಿಂಗ್ ಇತ್ಯಾದಿಗಳೆಲ್ಲ ಇದರ ಭಾಗಗಳಾಗಿವೆ. ವಿದ್ಯಾರ್ಥಿಯ ಒಳಗೆ ಸುಪ್ತವಾಗಿರುವ ಪ್ರತಿಭೆಯನ್ನು ಹೊರಗೆ ತರಲು ಸಮರ್ಥ ಮೆಂಟರ್‌ನಿಂದ ಮಾತ್ರ ಸಾಧ್ಯ.

### ಮೆಂಟರಿಂಗ್ ಮೂಲಕ

- ಅಧ್ಯಾಪಕ ಹಾಗೂ ವಿದ್ಯಾರ್ಥಿಗೆ ಉತ್ತಮ ಶಿಕ್ಷಣ ಅನುಭವಗಳು ಲಭಿಸುತ್ತವೆ.
- ಅಧ್ಯಾಪಕ ಹಾಗೂ ವಿದ್ಯಾರ್ಥಿಯ ಜ್ಞಾನ ವಲಯ ವಿಸ್ತಾರಗೊಳ್ಳುತ್ತದೆ.

- ವಿದ್ಯಾರ್ಥಿ ಮತ್ತು ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುತ್ತದೆ.
- ವಿದ್ಯಾರ್ಥಿಯ ಕಲಿಕೆಯಲ್ಲಿ ಪ್ರಗತಿ ಹಾಗೂ ವ್ಯಕ್ತಿತ್ವ ವಿಕಾಸ ಉಂಟಾಗುತ್ತದೆ.
- ಚಟುವಟಿಕೆಗಳ ಮೂಲಕ ಸಾಮಾಜಿಕ ಪ್ರಜ್ಞೆ ಬೆಳೆಸಲು ಮತ್ತು ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಾಗುವುದು.
- ಹೆತ್ತವರು ಹಾಗೂ ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುವುದಲ್ಲದೆ ವಿದ್ಯಾರ್ಥಿಯ ಕಲಿಕೆಯ ಗುಣಮಟ್ಟದ ಕುರಿತು ತಿಳಿಯಲು ಸಾಧ್ಯವಾಗುತ್ತದೆ.
- ಕಲೆ, ಕ್ರೀಡೆ, ಆರೋಗ್ಯ, ವೃತ್ತಿ ಪರಿಚಯ ಮೊದಲಾದ ಕಲಿಕಾ ವಲಯಗಳಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಮತ್ತು ಮೌಲ್ಯಮಾಪನವನ್ನು ಗಟ್ಟಿಗೊಳಿಸುತ್ತದೆ.

ಮೆಂಟರಿಂಗ್‌ಗೆ ಸಾಧ್ಯವಿರುವ ರೀತಿಯಲ್ಲಿ ನಕಾಶೆಗಳನ್ನು ರೂಪಿಸಿ, ಇದೊಂದು ಪರಿಹಾರ ಬೋಧನೆ ಪ್ರಕ್ರಿಯೆಯಾಗಿಯೂ ನಿರಂತರ ಮೌಲ್ಯನಿರ್ಣಯ ಮತ್ತು ವಿದ್ಯಾರ್ಥಿಯ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕವಾಗುವ ಪ್ರಕ್ರಿಯೆಯನ್ನಾಗಿಯೂ ರೂಪುಗೊಳಿಸಬೇಕಾಗಿದೆ.

ಶಾಲೆಯ ಎಲ್ಲಾ ಅಧ್ಯಾಪಕರನ್ನು 'ಮೆಂಟರ್ಸ್' ಎಂಬುದಾಗಿಯೂ ವಿದ್ಯಾರ್ಥಿಗಳನ್ನು 'ಮೆಂಟಿ' ಗಳನ್ನಾಗಿಯೂ ಪರಿಗಣಿಸುವ ಮೂಲಕ ಮೆಂಟರಿಂಗ್ ರೂಪುಗೊಳ್ಳಬೇಕು. ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಸಣ್ಣ ಸಣ್ಣ ಗುಂಪುಗಳೆಂದು ಭಾವಿಸಿಕೊಂಡು, ಪ್ರತಿಯೊಂದು ಗುಂಪಿನ ಪ್ರಗತಿಯನ್ನು ಸಮರ್ಪಕ ರೀತಿಯಲ್ಲಿ ತಿಳಿಯಲು ಆಯಾ ತರಗತಿಯಲ್ಲಿ ಕಲಿಸುವ ಅಧ್ಯಾಪಕರಿಗೆ ಗುಂಪಿನ ಜವಾಬ್ದಾರಿಯನ್ನು ನೀಡಬಹುದು.

## 1.13 ಅಧ್ಯಾಪಕರು ಪಾಲಿಸಬೇಕಾದ ಪ್ರಮುಖ ವೃತ್ತಿಪರ ನೀತಿಸಂಹಿತೆ

(Code of Professional Ethics for School Teachers)

### 1. ವಿದ್ಯಾರ್ಥಿಗಳೊಂದಿಗಿರುವ ಜವಾಬ್ದಾರಿಗಳು

1.1 ಎಲ್ಲ ವಿದ್ಯಾರ್ಥಿಗಳೊಂದಿಗೆ ಪ್ರೀತಿ, ವಾತ್ಸಲ್ಯದಿಂದ ವರ್ತಿಸುವುದು.

- ಎಲ್ಲ ವಿದ್ಯಾರ್ಥಿಗಳೊಂದಿಗೆ ಸಮಾನ ರೀತಿಯಿಂದ ವರ್ತಿಸುವುದು.
- ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳಿಗೆ ವಿಶೇಷ ಪರಿಗಣನೆ ನೀಡುವುದು.
- ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಆಸಕ್ತಿ ಮುಂತಾದುವುಗಳನ್ನು ಮೂಡಿಸುವ ರೀತಿಯಲ್ಲಿ ವ್ಯವಹರಿಸುವುದು.

1.2 ಜಾತಿ, ಮತ, ವರ್ಗ, ವರ್ಣ, ಆರ್ಥಿಕ ಸ್ಥಿತಿಗತಿ, ಭಾಷೆ, ಲಿಂಗ, ಜನ್ಮಸ್ಥಳ ಎಂಬೀ ವಿಷಯಗಳಲ್ಲಿ ಭೇದಭಾವವಿಲ್ಲದೆ, ನಿಷ್ಪಕ್ಷಪಾತ ಹಾಗೂ ನ್ಯಾಯಯುತವಾದ ಮೌಲ್ಯಗಳನ್ನು ಗೌರವಿಸುವುದು.

- ಪ್ರಜಾಪ್ರಭುತ್ವ ತತ್ವಸಿದ್ಧಾಂತಗಳಲ್ಲಿ, ಸಹಿಷ್ಣುತೆಯ ವಿಷಯಗಳಲ್ಲಿ, ಸಾಮಾಜಿಕ ವಿಚಾರಗಳಲ್ಲಿ ಅಧ್ಯಾಪಕರಿಗಿರುವ ನಂಬಿಕೆ ಮತ್ತು ವಿಶ್ವಾಸವನ್ನು ವಿದ್ಯಾರ್ಥಿಗಳಲ್ಲಿಯೂ ಮೂಡಿಸುವುದು.
- ಅಧ್ಯಾಪಕರ ವ್ಯಕ್ತಿಗತವಾದ ನಂಬಿಕೆಗಳು ಸಂವಿಧಾನದ ತತ್ವಗಳಿಗೆ ವಿರುದ್ಧವಾದರೆ ಅದು ಶಾಲೆಯ ಒಟ್ಟು ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರಬಹುದು.

1.3 ವಿದ್ಯಾರ್ಥಿಯ ದೈಹಿಕ, ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಸದಾಚಾರಗಳ ಬೆಳವಣಿಗೆಗಳಿಗೆ ಸೂಕ್ತ ವಾತಾವರಣದ ಸೃಷ್ಟಿ.

- ಶಾಲಾ ಶಿಕ್ಷಣವು ವಿದ್ಯಾರ್ಥಿಯ ಶಾರೀರಿಕ ಮತ್ತು ಬೌದ್ಧಿಕವಾದ ಕೌಶಲ್ಯಗಳನ್ನು ಪರಿಪೂರ್ಣತೆಯತ್ತ ಕೊಂಡೊಯ್ಯುವ ಕಾಲಘಟ್ಟವಾಗಿದೆ.
- ಶಿಕ್ಷಣವು ವಿದ್ಯಾರ್ಥಿಯ ಬೌದ್ಧಿಕ ಬೆಳವಣಿಗೆಗೆ ಮಾತ್ರ ಸೀಮಿತವಾಗಿರಬಾರದು.
- ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಯು ಶಿಕ್ಷಣದ ಮುಖ್ಯ ಲಕ್ಷ್ಯವಾಗಿರಬೇಕು.

1.4 ಶಾಲಾ ಶಿಕ್ಷಣದ ಎಲ್ಲಾ ಘಟ್ಟಗಳಲ್ಲಿಯೂ ವಿದ್ಯಾರ್ಥಿಯ ವ್ಯಕ್ತಿತ್ವವು ಗೌರವಿಸಲ್ಪಡಬೇಕು.

- ವ್ಯಕ್ತಿ ಎಂಬ ನೆಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಿರುವ ಪ್ರಜಾಪ್ರಭುತ್ವ ಪರವಾದ ಹಕ್ಕುಗಳು ಹಾಗೂ ಸ್ಥಾನಮಾನಗಳನ್ನು ಗಮನಿಸಬೇಕು.
- ಅಧ್ಯಾಪಿಕೆಯ ಭಾಗದಿಂದ ಬರಬಹುದಾದ ಯಾವುದೇ ಪ್ರತಿಕೂಲ ಅಭಿಪ್ರಾಯಗಳು ವಿದ್ಯಾರ್ಥಿಯ ಸ್ವಾಭಿಮಾನವನ್ನು ಘಾಸಿಗೊಳಿಸುವುದಲ್ಲದೆ ಅವು ಆತನ ಕಲಿಕೆಯ ಮೇಲೆ ದುಷ್ಪರಿಣಾಮವನ್ನುಂಟು ಮಾಡಬಹುದು.
- ಶಾಲೆಯ ಎಲ್ಲಾ ಕಾರ್ಯಚಟುಟಿಕೆಗಳಲ್ಲಿಯೂ ಎಲ್ಲ ವಿದ್ಯಾರ್ಥಿಗಳ ಸಕ್ರಿಯವಾದ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ ನೀಡಬೇಕು.
- ಸಂಯುಕ್ತ ರಾಷ್ಟ್ರ ಸಂಘ ಅಂಗೀಕರಿಸಿದ ಹಾಗೂ ಭಾರತವು ಒಪ್ಪಿರುವ ಮತ್ತು ಪಾಲಿಸಿಕೊಂಡು ಬಂದಿರುವ ಮಕ್ಕಳ ಹಕ್ಕು ಕಾಯ್ದೆಗಳನ್ನು ಹಾಗೂ ಮಕ್ಕಳ ಹಕ್ಕು ಸಂರಕ್ಷಣಾ ಸಮಿತಿಯ ವರದಿಗಳನ್ನು ಅಧ್ಯಾಪಕರು ಗಮನದಲ್ಲಿಟ್ಟು ವ್ಯವಹರಿಸಬೇಕಾಗಿದೆ.
- ಶಾಲೆಯ ಶಿಸ್ತುಕ್ರಮ ಪಾಲನೆಗಾಗಿ ರೂಪಿಸುವ ನಿಯಮಾವಳಿಗಳು ವಿದ್ಯಾರ್ಥಿಯ ಮಾನವೀಯ ಹಕ್ಕುಗಳಿಗೆ ಧಕ್ಕೆಯನ್ನುಂಟುಮಾಡಬಾರದು.

1.5 ವಿದ್ಯಾರ್ಥಿಯಲ್ಲಿ ಸುಪ್ತವಾಗಿರುವ ಕೌಶಲ್ಯ ಮತ್ತು ಪ್ರತಿಭೆಯು ಪ್ರಕಟಗೊಳ್ಳಲು ಸೂಕ್ತವಾದ ಹಾಗೂ ಅಚ್ಚುಕಟ್ಟಾದ ಯೋಜನೆಗಳನ್ನು ರೂಪಿಸಬೇಕು.

- ಶೈಕ್ಷಣಿಕ ಸಾಧನೆ ಮಾತ್ರವಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ವಿಶೇಷ ಕೌಶಲ್ಯ ಮತ್ತು ಪ್ರತಿಭೆಯನ್ನು ಗುರುತಿಸುವುದು ಅಧ್ಯಾಪಿಕೆಯ ಬಹುಮುಖ್ಯ ಕರ್ತವ್ಯವಾಗಿದೆ.
- ವಿದ್ಯಾರ್ಥಿಯ ಎಲ್ಲಾ ವಿಧದ ಕೌಶಲ್ಯಗಳನ್ನು ಬೆಳೆಸುವ ಚಟುವಟಿಕೆಗಳು ಇರಬೇಕು.

1.6 ಪಠ್ಯಕ್ರಮವು ಸಂವಿಧಾನವು ತಿಳಿಸುವ ಮೌಲ್ಯಗಳು ಮತ್ತು ವಿಚಾರಧಾರೆಗಳನ್ನು ಒಳಗೊಂಡಿರಬೇಕು.

- ಪ್ರಜಾಪ್ರಭುತ್ವ, ಜಾತ್ಯತೀತತೆ, ಸಮತ್ವ, ನೈತಿಕತೆ, ಸ್ವಾತಂತ್ರ್ಯ ಮುಂತಾದ ಸಂವಿಧಾನದ ಮೌಲ್ಯಗಳು ಪಠ್ಯಕ್ರಮ ಯೋಜನೆಯ ಪ್ರಧಾನ ಅಂಶಗಳಾಗಿರಬೇಕು.
- ಪೌರರ ಕರ್ತವ್ಯಗಳ ಕುರಿತು ಹೇಳಿರುವ ಸಂವಿಧಾನದ ಪರಿಚ್ಛೇದ (ಆರ್ಟಿಕಲ್) 51 ಎ ಯನ್ನು ಅರ್ಥಮಾಡಿಕೊಂಡು, ಅದರಲ್ಲಿನ 'ಎ' ಯಿಂದ 'ಕೆ' ವರೆಗಿನ ಆಶಯಗಳನ್ನು

ಗಮನದಲ್ಲಿಟ್ಟುಕೊಂಡು ವ್ಯವಹರಿಸಬೇಕು.

1.7 ವಿದ್ಯಾರ್ಥಿಗಳ ಅಗತ್ಯಗಳಿಗನುಸಾರ ಅಧ್ಯಾಪಿಕೆಯ/ಅಧ್ಯಾಪಕನ ಬೋಧನ ರೀತಿಯನ್ನು ಪರಿಷ್ಕರಿಸಬೇಕು.

- ನಿರಂತರ ಮೌಲ್ಯನಿರ್ಣಯದ ಆಧಾರದಲ್ಲಿ ವಿದ್ಯಾರ್ಥಿಯ ಸ್ವಭಾವ, ಗಳಿಸಿದ ಜ್ಞಾನ, ಅಭಿರುಚಿ, ಕಲಿಕೆಯ ರೀತಿ ಮುಂತಾದುವುಗಳನ್ನು ಪರಿಗಣಿಸಿ, ಬೋಧನೆಯ ವಿಧಾನಗಳಲ್ಲಿ ಅಗತ್ಯವಾದ ಪರಿಷ್ಕಾರವನ್ನು ನಿರಂತರ ನಡೆಸುತ್ತಿರಬೇಕು.

1.8 ವಿದ್ಯಾರ್ಥಿಗಳು ನೀಡುವ ಅವರ ವ್ಯಕ್ತಿಗತವಾದ ವಿಚಾರಗಳ ಗೌಪ್ಯತೆಯನ್ನು ಕಾಪಾಡುವುದು ಮತ್ತು ಇಂತಹ ವಿಷಯಗಳನ್ನು ಕಾನೂನುಬದ್ಧವಾಗಿ ಯಾರಿಗೆ ತಿಳಿಸಬಹುದೋ ಅವರಿಗೆ ಮಾತ್ರ ತಿಳಿಸುವುದು.

- ಕೌನ್ಸಿಲರ್ ಕೂಡಾ ಆಗಿರುವ ಅಧ್ಯಾಪಿಕೆಗೆ ವಿದ್ಯಾರ್ಥಿಯ ವ್ಯಕ್ತಿಗತವಾದ ವಿಷಯಗಳನ್ನು ತಿಳಿಯಲು ಸಾಧ್ಯ.
- ಈ ವಿವರಗಳನ್ನು ವಿದ್ಯಾರ್ಥಿಯ ಒಳಿತಿಗಾಗಿ ವಿವೇಕದಿಂದ ಉಪಯೋಗಿಸತಕ್ಕದ್ದು.

1.9 ವಿದ್ಯಾರ್ಥಿಗಳನ್ನು ಗದರಿಸುವುದು, ಆತಂಕಕ್ಕೀಡುಮಾಡುವುದು, ಶಾರೀರಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ದೌರ್ಜನ್ಯವೆಸಗುವುದು ಮುಂತಾದುವುಗಳನ್ನು ಮಾಡಬಾರದು.

- ಲೈಂಗಿಕ ದೌರ್ಜನ್ಯದಿಂದ, ಕಡೆಗಣಿಸುವಿಕೆಯಿಂದ, ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವ ಜವಾಬ್ದಾರಿ ಅಧ್ಯಾಪಕರಿಗಿದೆ.
- ಉತ್ತಮ ಕಲಿಯುವಿಕೆಗೆ ಶಿಕ್ಷೆ ಸಹಕಾರಿ ಎಂಬ ತಪ್ಪು ಕಲ್ಪನೆ ದೂರವಾಗಬೇಕು.
- ಇಂತಹ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗೆ ಲಭಿಸುವ ಕಾನೂನು ರಕ್ಷಣೆಗಳ ಕುರಿತು ಅಧ್ಯಾಪಕರು ತಿಳಿದಿರಬೇಕು.

1.10 ಯಾವುದೇ ರೀತಿಯ ಲೈಂಗಿಕ ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವುದು.

- ಯಾವುದೇ ರೀತಿಯ ಲೈಂಗಿಕ ಶೋಷಣೆ, ದೈಹಿಕ ಗಾಯಗಳು ಮಾತ್ರವಲ್ಲದೆ, ದೀರ್ಘಕಾಲ ಉಳಿದುಕೊಳ್ಳುವ ಮಾನಸಿಕ ಆಘಾತವೂ ವಿದ್ಯಾರ್ಥಿಯನ್ನು ಅಧೀರನನ್ನಾಗಿಸುತ್ತದೆ.

ಉದ್ಯೋಗ ಸ್ಥಳಗಳಲ್ಲೂ, ಶಾಲೆಗಳಲ್ಲೂ ನಡೆಯುವ ಲೈಂಗಿಕ ಶೋಷಣೆಯ ವಿರುದ್ಧ ಭಾರತದ ಗೌರವಾನ್ವಿತ ಸುಪ್ರೀಂ ಕೋರ್ಟು ಮತ್ತು ಎನ್.ಸಿ.ಪಿ. ನೀಡಿದ ಮಾರ್ಗಸೂಚಿಗಳನ್ನು ಅಧ್ಯಾಪಕರು ಪಾಲಿಸಬೇಕಾಗಿದೆ.

## 2. ರಕ್ಷಕರು ಮತ್ತು ಸಮಾಜದೊಂದಿಗೆ ಇರಬೇಕಾದ ಜವಾಬ್ದಾರಿಗಳು

2.1 ತಂದೆ–ತಾಯಿಯರೊಂದಿಗೆ ಮತ್ತು ರಕ್ಷಕರೊಂದಿಗೆ ವಿನಯಪೂರ್ವಕವಾದ ವರ್ತನೆ ಇರಬೇಕು.

- ವಿದ್ಯಾರ್ಥಿಗಳ ಕುರಿತು ಹೆಚ್ಚು ತಿಳಿಯುವುದಕ್ಕಾಗಿ ಅವರ ಹೆತ್ತವರೊಂದಿಗೂ ಗೆಳೆಯರೊಂದಿಗೂ ಉತ್ತಮ ಸಂಪರ್ಕ ಇಟ್ಟುಕೊಳ್ಳುವುದು ಅಗತ್ಯ.

- ಅಧ್ಯಾಪಿಕೆ ಮತ್ತು ಹೆತ್ತವರ ಬಾಂಧವ್ಯವು ವಿದ್ಯಾರ್ಥಿ ಮತ್ತು ಅಧ್ಯಾಪಿಕೆಯ ಸಂಬಂಧವನ್ನು ಹೆಚ್ಚು ನಿಕಟಗೊಳಿಸುತ್ತದೆ.
- ತಮ್ಮ ಮಕ್ಕಳ ಶಾಲೆಯೊಳಗಿನ ಮತ್ತು ಹೊರಗಿನ ಚಟುವಟಿಕೆಗಳ ಕುರಿತು ಅಧ್ಯಾಪಕರಿಂದ ತಿಳಿಯಲು ಹೆಚ್ಚಿನ ಹೆತ್ತವರು ಬಯಸುತ್ತಾರೆ.
- ಬೆಳವಣಿಗೆಯ ಸಂದರ್ಭದಲ್ಲಿ ವಿದ್ಯಾರ್ಥಿಗೆ ಉಂಟಾಗುವ ಪ್ರಮಾದಗಳನ್ನು ಹೆತ್ತವರೊಂದಿಗೆ ಚರ್ಚಿಸುವುದರಿಂದ ಮುಂದೆ ಸಂಭವಿಸಬಹುದಾದ ಹೊಸ ದುರಂತಗಳನ್ನು ತಪ್ಪಿಸಲು ಸಾಧ್ಯವಾಗಬಹುದು.

2.2 ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ತರುವ ಚಟುವಟಿಕೆಗಳಿಂದ ದೂರವಿರುವುದು.

- ಇತರ ವಿದ್ಯಾರ್ಥಿಗಳ ಮುಂದೆ ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುವ ರೀತಿಯಲ್ಲಿ ಮಾತನಾಡುವುದನ್ನು ಬಿಟ್ಟುಬಿಡಬೇಕು.
- ಅದೇ ರೀತಿಯಲ್ಲಿ ಹೆತ್ತವರ ಸ್ವಾಭಿಮಾನವನ್ನು ಪ್ರಶ್ನಿಸಬಾರದು.
- ಯಾವುದಾದರೂ ಒಂದು ವಿಭಾಗದ ವಿದ್ಯಾರ್ಥಿಗಳನ್ನು ಮಾತ್ರ ಹಿನ್ನೆಲೆಯಾಗಿರಿಸಿ (ಜಾತಿ, ಮತ, ಆರ್ಥಿಕ ಸ್ಥಿತಿ, ...) ಹೊಗಳುವುದರಿಂದ ಉಳಿದ ವಿದ್ಯಾರ್ಥಿಗಳಲ್ಲಿ ದ್ವೇಷ ಮನೋಭಾವ ಉಂಟಾಗುವುದು.

2.3 ಭಾರತದ ಸಾಂಸ್ಕೃತಿಕ ಪರಂಪರೆಯ ಕುರಿತು ವಿದ್ಯಾರ್ಥಿಗಳಿಗೆ ಆದರ ಹಾಗೂ ಗೌರವ ಉಂಟಾಗುವಂತೆ ಮಾಡುವುದು.

- ಭಾರತವು ವಿವಿಧ ಸಂಸ್ಕೃತಿ, ಭಾಷೆ, ಮತ, ನಂಬಿಕೆಗಳ ದೇಶ. ಈ ವೈವಿಧ್ಯವನ್ನು ಪ್ರತಿಯೊಂದು ತರಗತಿಗಳಲ್ಲೂ ಕಾಣಬಹುದು.
- ಭಾರತದಲ್ಲಿ ವಿವಿಧತೆಯಲ್ಲಿ ಏಕತೆಯಿದೆ.
- ಪ್ರತಿಯೊಬ್ಬನಲ್ಲೂ ಪರಸ್ಪರ ಸಹಿಷ್ಣುತೆ ಮತ್ತು ಎಲ್ಲಾ ಸಂಸ್ಕೃತಿಗಳನ್ನು ಗೌರವಿಸುವ ಮನೋಭಾವ ಇರಬೇಕು.
- ಈ ಮನೋಭಾವ ಅಥವಾ ತತ್ವಗಳನ್ನು ಪಠ್ಯಕ್ರಮದ ಮೂಲಕ ಬೆಳೆಸುವ ಪ್ರಜ್ಞಾಪೂರ್ವಕ ಪ್ರಯತ್ನ ಅಗತ್ಯವಾಗಿದೆ.

2.4 ವಿವಿಧ ಜನಸಮುದಾಯಗಳೊಳಗೆ ಪರಸ್ಪರ ದ್ವೇಷ, ಹಗೆತನವನ್ನು ಬೆಳೆಸುವ ರೀತಿಯ ಕಾರ್ಯಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು.

- ಎಲ್ಲ ಮತ, ನಂಬಿಕೆ ಮತ್ತು ಭಾಷೆಗಳಲ್ಲಿ ಸಮಾನ ಗೌರವವನ್ನು ಉಂಟುಮಾಡುವ ರೀತಿಯ ಚಟುವಟಕೆಗಳು ತರಗತಿಯಲ್ಲಿ ನಡೆಯಬೇಕು.
- ರಾಷ್ಟ್ರೀಯ ಭಾವೈಕ್ಯದ ದೃಷ್ಟಿಯಿಂದ ಪ್ರತಿಯೊಬ್ಬನೂ ಮೊದಲಿಗೆ ಭಾರತೀಯ. ಬಳಿಕ ಮಾತ್ರವೇ ಒಂದು ಸಮುದಾಯದ ಸದಸ್ಯ ಎಂಬುದು ಮುಖ್ಯ ವಿಷಯವಾಗಬೇಕು.

- ಯಾವುದಾದರೂ ಒಂದು ನಿರ್ದಿಷ್ಟ ಗುಂಪಿನ ಪ್ರಚಾರಕ್ಕಾಗಿ ಶಾಲೆ/ತರಗತಿಯನ್ನು ಬಳಸಬಾರದು.
- ಸಮಕಾಲೀನ ಸಾಮಾಜಿಕ, ರಾಜಕೀಯ ಬೆಳವಣಿಗೆಗಳನ್ನು ಚರ್ಚೆ ಮಾಡುವಾಗ ಅಧ್ಯಾಪಕ/ ಅಧ್ಯಾಪಿಕೆ ಯಾವುದಾದರೂ ಒಂದು ಪಕ್ಷದ ಪರವಾಗಿ ಮಾತನಾಡಬಾರದು.

**3. ಅಧ್ಯಾಪನ ವೃತ್ತಿಯಲ್ಲಿ ಹಾಗೂ ಸಹೋದ್ಯೋಗಿಗಳೊಡನೆ ಇರಬೇಕಾದ ಜವಾಬ್ದಾರಿಗಳು**

3.1 ವೃತ್ತಿ ಪರಿಣತಿಯನ್ನು ಬೆಳೆಸಲು ನಿರಂತರ ಪ್ರಯತ್ನಿಸುವುದು.

- ಒಬ್ಬ ವಿದ್ಯಾರ್ಥಿಯನ್ನು ನಿರಂತರ ಕಲಿಕೆಯವನನ್ನಾಗಿ ಮಾಡುವುದರೊಂದಿಗೆ ಅಧ್ಯಾಪಕನು ತಾನೂ ಕಲಿಯುತ್ತಿರಬೇಕು.
- ನಿರಂತರವಾಗಿ ಬೆಳೆಯುತ್ತಿರುವ ಜ್ಞಾನ ವಲಯಗಳ ಕುರಿತು, ಅಧ್ಯಾಪನ ರೀತಿಯ ಕುರಿತು ಜ್ಞಾನವನ್ನು ಸಂಪಾದಿಸಲೂ ಅದನ್ನು ಕಾರ್ಯರೂಪಕ್ಕೆ ತರಲೂ ಸಾಧ್ಯವಾಗಬೇಕು.
- ಯಾವ ಯಾವ ಮೂಲಗಳಿಂದ ತನಗೆ ಹೊಸ ಅರಿವು ಲಭಿಸಬಹುದೆಂಬ ಹುಡುಕಾಟ ಅಧ್ಯಾಪಕನ ಕರ್ತವ್ಯವಾಗಿರಬೇಕು.

3.2 ಸಹೋದ್ಯೋಗಿಗಳೊಂದಿಗೆ ಹಾಗೂ ಇತರರೊಂದಿಗೆ ಪರಸ್ಪರ ಆಶಯ ವಿನಿಮಯ ಮಾಡುವುದರಿಂದ ಹೊಸತಾದ ಜ್ಞಾನ ವಲಯ ಸೃಷ್ಟಿಯಾಗುವುದು.

- ಶಾಲೆಯಲ್ಲಿ ಶೈಕ್ಷಣಿಕ ಜಾಗೃತಿಯನ್ನು ಮೂಡಿಸುವುದು ಮತ್ತು ಎಲ್ಲ ಅಧ್ಯಾಪಕರಿಗೆ ತಮ್ಮದೇ ಆದ ಕೊಡುಗೆ ನೀಡುವ ಅವಕಾಶವನ್ನು ಕಲ್ಪಿಸಿ ಉತ್ತಮ ವಾತಾವರಣವನ್ನು ಉಂಟುಮಾಡುವುದು.
- ಇಂತಹ ಸನ್ನಿವೇಶವುಂಟಾಗಲು ಪೂರ್ವಯೋಜನೆ ಮತ್ತು ಫಲಪ್ರದವಾದ ಸಹಕಾರ ಮನೋಭಾವ ಎಲ್ಲ ಅಧ್ಯಾಪಕರಲ್ಲೂ ನಿರ್ಮಾಣವಾಗಬೇಕು.
- ಶಾಲೆಯ ಯಾವುದೇ ರೀತಿಯ ಸಮಸ್ಯೆಗಳನ್ನು ಪರಿಹಾರ ಮಾಡುವಲ್ಲಿ ಎಲ್ಲ ಅಧ್ಯಾಪಕರ ಒಗ್ಗಟ್ಟು, ಚರ್ಚೆ, ಕ್ರಿಯಾತ್ಮಕ ಮಾರ್ಗದರ್ಶನ ಹಾಗೂ ಫಲಪ್ರದ ಕಾರ್ಯಚಟುವಟಿಕೆ ಇರಬೇಕು.
- ಅಧ್ಯಾಪಕರನ್ನು ಮಾತ್ರವಲ್ಲದೆ ಶಾಲೆಯ ವಿಷಯಗಳಲ್ಲಿ ಮುತುವರ್ಜಿಯಿರುವ ಎಲ್ಲರನ್ನು ಇಂತಹ ಕ್ರಿಯಾಚಟುವಟಿಕಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಅಧ್ಯಾಪಕನಿಗೆ ಸಾಧ್ಯವಾಗಬೇಕು.

3.3 ಸಹೋದ್ಯೋಗಿಗಳೊಡನೆ ಗೌರವಾದರಗಳೊಂದಿಗೆ ವ್ಯವಹರಿಸಬೇಕು.

- ಶಾಲೆಯ ಎಲ್ಲ ಅಧ್ಯಾಪಕರೊಡನೆ ಅವರ ವಿದ್ಯಾಭ್ಯಾಸ ಯೋಗ್ಯತೆ, ಅವರು ಯಾವ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದಾರೆ ಎಂಬುದನ್ನು ನೋಡದೆ ಅವರೊಂದಿಗೆ ಗೌರವಾದರಗಳಿಂದ ವ್ಯವಹರಿಸಬೇಕು.

3.4 ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ತರಗತಿಗಳನ್ನು ನಡೆಸುವುದು ಅಥವಾ ಇತರ ಖಾಸಗಿ ಶಿಕ್ಷಣ

ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಸಮರ್ಪಕವಲ್ಲ.

- ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ನಡೆಸುವುದರಿಂದ ಅಧ್ಯಾಪಕನ ಶಾಲಾ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು.
- ಖಾಸಗಿ ಟ್ಯೂಶನ್ ನಡೆಸುವುದರಿಂದ ಶಾಲೆಯ ನೈತಿಕ ತತ್ವ ಸಿದ್ಧಾಂತಗಳಿಗೆ ಧಕ್ಕೆಯುಂಟಾಗುವಂಥ ವ್ಯವಹಾರಗಳಿಗೆ ಕಾರಣವಾಗುವುದು.

3.5 ತನ್ನ ಚಟುವಟಿಕೆಗಳು ಮತ್ತು ತೀರ್ಮಾನಗಳು ಪರರ ಪ್ರಭಾವಕ್ಕೊಳಗಾಗದಂತೆ ನೋಡಿಕೊಳ್ಳಲು ಯಾವುದೇ ವಿಧವಾದ ಉಡುಗೊರೆ ಅಥವಾ ಇತರ ಸಹಾಯಗಳನ್ನು ಸ್ವೀಕರಿಸುವುದಿಲ್ಲ.

- ಯಾವುದೇ ರೀತಿಯ ಸೌಲಭ್ಯಗಳನ್ನು ನಿರೀಕ್ಷಿಸಿಕೊಂಡು ಕೊಡಮಾಡುವ ಬೆಲೆಬಾಳುವ ಉಡುಗೊರೆಗಳನ್ನು ಅಧ್ಯಾಪಕರು ವಿದ್ಯಾರ್ಥಿಯಿಂದ ಅಥವಾ ಹೆತ್ತವರಿಂದ ಸ್ವೀಕರಿಸಬಾರದು.

3.6 ಸಹೋದ್ಯೋಗಿಗಳಿಗೆದುರಾಗಿ ಮತ್ತು ಮೇಲಿನ ಅಧಿಕಾರಿಗಳಿಗೆದುರಾಗಿ ಅನಗತ್ಯವಾದ ಆರೋಪಗಳನ್ನು ಮಾಡುವುದಿಲ್ಲ.

- ಪರಸ್ಪರ ತಪ್ಪು ಹೊರಿಸುವ ಗುಂಪುಗಾರಿಕೆ ಅಧ್ಯಾಪಕರಲ್ಲಿ ಇರಬಾರದು.
- ಸಾಕ್ಷ್ಯಗಳಿಲ್ಲದೆ ಸಹೋದ್ಯೋಗಿಗಳ ಮೇಲೆ ಆರೋಪ ಮಾಡಬಾರದು.
- ಯಾವುದಾದರೂ ಸಹೋದ್ಯೋಗಿ/ಸಹೋದ್ಯೋಗಿಗಳಲ್ಲಿ ಗಂಭೀರವಾದ ಅಪರಾಧ ಕಂಡುಬಂದರೆ ಅದನ್ನು ಹಿರಿಯ ಅಧ್ಯಾಪಕರ ಗಮನಕ್ಕೆ ತರಬೇಕು.

3.7 ಸಹೋದ್ಯೋಗಿಗಳ, ವಿದ್ಯಾರ್ಥಿಗಳ ಅಥವಾ ಹೆತ್ತವರ ಎದುರಲ್ಲಿ ಸಹೋದ್ಯೋಗಿಯೊಬ್ಬನ ಮೇಲೆ ದೋಷಾರೋಪಣೆ ಮಾಡಬಾರದು.

- ಅಧ್ಯಾಪಕರ ಬಗ್ಗೆ ವಿಭಿನ್ನ ರೀತಿಯ ಅಭಿಪ್ರಾಯಗಳಿರಬಹುದು. ಅವುಗಳನ್ನು ಯೋಗ್ಯ ರೀತಿಯಲ್ಲಿ ವ್ಯಕ್ತಪಡಿಸಬೇಕು.
- ಸಹೋದ್ಯೋಗಿಯ ಅಧ್ಯಾಪನ ರೀತಿಯನ್ನು ಅಪಹಾಸ್ಯ ಮಾಡುವ ರೀತಿಯಲ್ಲಿ ಮಾತನಾಡಬಾರದು.

3.8 ಸಹೋದ್ಯೋಗಿಗಳ ಬೋಧನ ಗುಣಮಟ್ಟವನ್ನು ಗೌರವಿಸುವುದು.

- ಅಧ್ಯಾಪನದಲ್ಲಿ ಉತ್ತಮ ಸಾಧನೆ ಮಾಡಿದವರ ಚಟುವಟಿಕೆಗಳನ್ನು ಶ್ಲಾಘಿಸಬೇಕು. ಮಾತ್ರವಲ್ಲದೆ ಅಂತಹ ಸಾಧನೆಯನ್ನು ಮಾಡಲು ಪ್ರಯತ್ನಿಸಬೇಕು. ಆದರೆ ಅದು ಅಂಧಾನುಕರಣೆಯಾಗಲೇಬಾರದು.

3.9 ಸಹೋದ್ಯೋಗಿಗಳ ಕುರಿತು ತಿಳಿದಿರುವ ವೈಯಕ್ತಿಕ ವಿವರಗಳನ್ನು ಗೌಪ್ಯವಾಗಿಡಬೇಕು. ಅಗತ್ಯವಾದಾಗ ಮಾತ್ರ ಕಾನೂನು ಪ್ರಕಾರ ತಿಳಿಯಪಡಿಸುವುದು.

- ಯಾವುದಾದರೂ ಅಗತ್ಯಕ್ಕಾಗಿ ಸಂಗ್ರಹಿಸಲ್ಪಟ್ಟ ಸಹೋದ್ಯೋಗಿಗಳ ವೈಯಕ್ತಿಕ ವಿವರಗಳು ಗೌಪ್ಯವಾಗಿಡುವಂಥವುಗಳಾಗಿದ್ದಲ್ಲಿ ಅವುಗಳನ್ನು ಕಾನೂನುಬದ್ಧವಾದ ಕಾರ್ಯಗಳಿಗೆ ಮಾತ್ರ ತಿಳಿಯಪಡಿಸತಕ್ಕದ್ದು.

## 1.14 ಟೀಚಿಂಗ್ ಮ್ಯಾನುವೆಲ್

ಕಲಿಕಾ ಸಾಧನೆಗಳನ್ನು ಉದ್ದೇಶವಾಗಿಟ್ಟು ತಮ್ಮ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರತಿಯೋರ್ವ ಅಧ್ಯಾಪಕನಿಗೂ ಸಾಧ್ಯವಾಗಬೇಕು. ಪಠ್ಯಪುಸ್ತಕದಲ್ಲಿ ಮತ್ತು ಅಧ್ಯಾಪಕರ ಪಠ್ಯದಲ್ಲಿ ನೀಡಿರುವ ಚಟುವಟಿಕೆಗಳನ್ನು ತರಗತಿಯ ಮಕ್ಕಳಿಗೆ ಅನುಕೂಲವಾದ ರೀತಿಯಲ್ಲಿ ತಿದ್ದಿಕೊಳ್ಳುವ ಅಥವಾ ಸೇರಿಸಿಕೊಳ್ಳುವ ಯೋಜನೆಯಿರಬೇಕು. ಪ್ರತಿಯೊಂದು ಕಲಿಕಾಸಾಧನೆ ಈಡೇರಲು ಬೇಕಾಗುವಷ್ಟು ಕಾರ್ಯಚಟುವಟಿಕೆಗಳು ಯೋಜನೆಯಲ್ಲಿರಬೇಕು.

ಕಲಿಕಾ ಚಟುವಟಿಕೆಗಳ ಜೊತೆಗೆ ಮೌಲ್ಯನಿರ್ಣಯವನ್ನೂ ಒಳಗೊಂಡಿರುವ ಯೋಜನೆಗಳು ಪಾಠಪ್ರಕ್ರಿಯೆಯ ಪುಟದಲ್ಲಿರಬೇಕು. ನಿರಂತರ ಮೌಲ್ಯಮಾಪನದಲ್ಲಿ ಲಭಿಸುವ ವಿವರಗಳ ದಾಖಲಾತಿಯು ಮೌಲ್ಯನಿರ್ಣಯ ಪುಟದಲ್ಲಿರಬೇಕು.

ಮುಂದಿನ ಒಂದು ವಾರಕ್ಕೆ ಬೇಕಾಗಿ ತಯಾರಿಸುವ ಟೀಚಿಂಗ್ ಮ್ಯಾನುವೆಲ್, ಸ್ಕೂಲ್ ರಿಸೋರ್ಸ್ ಗ್ರೂಪ್ (SRG) ನಲ್ಲಿ / ವಿಷಯ ಸಮಿತಿಗಳಲ್ಲಿ (Subject Councils) ಮಂಡಿಸುವುದು ಉತ್ತಮ. ಒಂದು ವಾರದ ಮೌಲ್ಯಮಾಪನ ಪುಟದ ವಿವರಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಾಪಕನು ಸರಳವಾದ ಅವಲೋಕನ ಟಿಪ್ಪಣಿ (Reflection Note) ತಯಾರಿಸಿ, **SRG/SC** ಯಲ್ಲಿ ಚರ್ಚೆ ಮಾಡಬಹುದು. ಈ ಟಿಪ್ಪಣಿಯ ಆಧಾರದಲ್ಲಿ ಅಧ್ಯಾಪಕನ ಮುಂದಿನ ಯೋಜನಾ ಟಿಪ್ಪಣಿಗಳು ತಯಾರಾಗಬೇಕು.

ಟೀಚಿಂಗ್ ಮ್ಯಾನುವೆಲ್‌ನ ನಮೂನೆಯನ್ನು ಕೊಡಲಾಗಿದೆ.

# ಟೀಚಿಂಗ್ ಮ್ಯಾನುವೆಲ್

ಪಾಠದ ಹೆಸರು :

ದಿನಾಂಕ :

ಸಮಯ :

ವಿಷಯ (Theme) :

ಕಲಿಕಾ ಸಾಧನೆಗಳು :

ಆಶಯಗಳು :

ಕೌಶಲ್ಯಗಳು :

ಭಾಷಾ ಸತ್ಯಾಂಶಗಳು (ಭಾಷೆಗೆ ಮಾತ್ರ) :

ವ್ಯವಹಾರ ರೂಪಗಳು (ಭಾಷಾ ವಿಷಯಕ್ಕೆ ಮಾತ್ರ) :

ಮೌಲ್ಯಗಳು – ಮನೋಭಾವಗಳು :

ಕಲಿಕೋಪಕರಣಗಳು :

ಉತ್ಪನ್ನಗಳು :

| ಪ್ರಕ್ರಿಯೆ | ಮೌಲ್ಯನಿರ್ಣಯ |
|---|---|
| ಚಟುವಟಿಕೆ ಮತ್ತು ಮೌಲ್ಯಮಾಪನಗಳನ್ನೊಳಗೊಂಡ ಪ್ರಕ್ರಿಯೆ | (ಮೌಲ್ಯನಿರ್ಣಯದ ವಿವರಗಳನ್ನು ಇಲ್ಲಿ ದಾಖಲಿಸಬೇಕು) |

ಮುಖ್ಯೋಪಾಧ್ಯಾಯನಿ/ಮುಖ್ಯೋಪಾಧ್ಯಾಯರ ಸಹಿ          ಅಧ್ಯಾಪಕ/ಅಧ್ಯಾಪಿಕೆಯ ಸಹಿ

## ಅವಲೋಕನ ಟಿಪ್ಪಣಿ (Reflections)

ನನ್ನ ನಿಗಮನಗಳು ಮತ್ತು ಹೊಸ ಅರಿವುಗಳು (ಕಲಿಕಾ ಚಟುವಟಿಕೆಗಳು ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳಿಂದ ಲಭಿಸಿದ ಮಾಹಿತಿಗಳ ಆಧಾರದಲ್ಲಿ)

- 
- 
- 
- 

ಮುಂದುವರಿದ ಚಟುವಟಿಕೆಗಳು ಮತ್ತು ಪರಿಹಾರ ಚಟುವಟಿಕೆಗಳು

- 
- 
- 
- 
- 

### ಅವಲೋಕನ ಟಿಪ್ಪಣಿ (Reflection note) ಯಾಕೆ?

ನಿರ್ದಿಷ್ಟ ಕಲಿಕಾ ಸಾಧನೆಗಳಿಗನುಸಾರವಾಗಿ ನಡೆಸಲಾದ ಕಲಿಕಾ ಚಟುವಟಿಕೆಗಳು ಪೂರ್ತಿಯಾದ ಬಳಿಕ ಅವಲೋಕನ ಟಿಪ್ಪಣಿ ತಯಾರಿಸಬೇಕು.

- ಈ ಟಿಪ್ಪಣಿಗಳನ್ನು ಪ್ರತಿವಾರದ **SRG** ಸಭೆಯಲ್ಲಿ ಮಂಡಿಸಬೇಕು.
- ಮುಂದಿನ ಯೋಜನೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು.
- ಒಂದು ಅವಧಿಯ **C.E.** ಕ್ರೋಡೀಕರಿಸುವುದಕ್ಕಾಗಿ.

# ಮೌಲ್ಯಮಾಪನ ಸಮೀಪನ

ಕಲಿಕೆ (Learning) ಎಂಬುದು ಮಕ್ಕಳಲ್ಲಿ ಸ್ವಾಭಾವಿಕವಾಗಿ ಮತ್ತು ನಿರಂತರವಾಗಿ ನಡೆಯುವ ಒಂದು ಮಾನಸಿಕ ಪ್ರಕ್ರಿಯೆ. ಕಲಿಕೆಯು ಪರಿಣಾಮಕಾರಿ ಯಾಗಬೇಕಿದ್ದಲ್ಲಿ ನೀಡುವ ಅನುಭವಗಳು ನಿರ್ದಿಷ್ಟ ಉದ್ದೇಶಗಳನ್ನು ಈಡೇರಿಸುವಂಥದ್ದಾಗಿರಬೇಕು. ಮಗು ಗಳಿಸಬೇಕಾದ ಕೌಶಲ್ಯಗಳ ಕುರಿತು ಅಧ್ಯಾಪಕನಿಗೆ ಸ್ಪಷ್ಟವಾದ ಕಲ್ಪನೆ ಉಂಟಾಗಬೇಕು. ಪ್ರತಿಯೊಂದು ಪಾಠಭಾಗದಿಂದಲೂ ಗಳಿಸಬೇಕಾದ ಕಲಿಕಾ ಸಾಧನೆ (Learning Outcomes) ಗಳನ್ನು ಮೊದಲೇ ರೂಪಿಸಬೇಕು. ಈ ಚಟುವಟಿಕೆಗಳನ್ನು ಬದುಕಿನ ವಿವಿಧ ಸಂದರ್ಭಗಳಿಗೆ ಹೊಂದಿಸಿಕೊಂಡು ಮಂಡಿಸಬೇಕು.

ಈ ಪ್ರಕಾರ ಗಳಿಸಿದ ಕೌಶಲ್ಯಗಳು, ನಿರ್ಣಯಗಳು, ಕಲಿಕೆಯ ಸಾಧನೆಗಳನ್ನು ನಿರ್ಧರಿಸಲು ಎಷ್ಟು ಸಮರ್ಪಕ? ಕಲಿಕಾ ಸಾಧನೆಗಳನ್ನು ಗಳಿಸಲು ಇನ್ನು ಯಾರೆಲ್ಲ ಉಳಿದಿದ್ದಾರೆ? ಅವರಿಗೆ ನೀಡಬೇಕಾದ ಮುಂದುವರಿದ ಪ್ರಕ್ರಿಯೆಗಳೇನಾಗಿರಬೇಕು? ಅವುಗಳನ್ನು ಹೇಗೆ ನೀಡಬೇಕು? ಈ ರೀತಿಯ ಅಧ್ಯಾಪಕನ ಯೋಚನೆಗಳು ಮೌಲ್ಯನಿರ್ಣಯ ಮಾಡಲು ಸಹಾಯವೊದಗಿಸುತ್ತವೆ.

ಒಂದು ಪಾಠಭಾಗದ/ಘಟಕದ ವಿನಿಮಯದ ಬಳಿಕ 'ಏನೆಲ್ಲ ಕಲಿಯಲಾಯಿತು' ಎಂದು ನಿರ್ಣಯಿಸುವ ಪ್ರಕ್ರಿಯೆಯನ್ನು **ಕಲಿಕೆಯ ಮೌಲ್ಯನಿರ್ಣಯ (Assessment of Learning)** ಎಂದು ಕರೆಯಲಾಗುತ್ತದೆ. ಪಾಠಭಾಗದ ಕಲಿಕೆಯ ಬಳಿಕ ವಿದ್ಯಾರ್ಥಿಯ ಸಾಮರ್ಥ್ಯ, ಕಲಿಕಾ ಗುಣಮಟ್ಟ ಎಂಬಿವುಗಳನ್ನು ನಿರ್ಣಯಿಸಲಾಗುತ್ತದೆ. ಇದು ಮೌಲ್ಯನಿರ್ಣಯದ ಒಂದು ಹಂತ ಮಾತ್ರ.

ಆದರೆ ಕಲಿಕೆಯನ್ನು ಖಾತ್ರಿಪಡಿಸಲು ನಡೆಸಲಾಗುವ ಮೌಲ್ಯನಿರ್ಣಯವು ಹೆಚ್ಚು ಪ್ರಮುಖವೆನಿಸುತ್ತದೆ. ಕಲಿಕೆ ನಡೆಯುವ ವೇಳೆಯಲ್ಲಿ ಅದರ ದಕ್ಷತೆಗಾಗಿ ಅಧ್ಯಾಪಕ ಅಥವಾ ಸಹಪಾಠಿಗಳ ಬೇರೆ ಬೇರೆ ರೀತಿಯ ಪಾಲ್ಗೊಳ್ಳುವಿಕೆ ನಡೆಯಬಹುದು. ಕಲಿಕೆಯೊಂದಿಗಿರುವ ಈ ಮೌಲ್ಯನಿರ್ಣಯವು ಮತ್ತು ಫೀಡ್‌ಬ್ಯಾಕ್ (Feed Back) ಮೌಲ್ಯನಿರ್ಣಯದ ಇನ್ನೊಂದು ಹಂತವಾಗಿದೆ. ಇದನ್ನು **ಕಲಿಕೆಗಿರುವ ಮೌಲ್ಯನಿರ್ಣಯ (Assessment for Learning)** ಎಂದು ಕರೆಯಬಹುದು. ಕಲಿಕೆಯ ಪ್ರಗತಿಗಾಗಿ ಇದು ನಿರಂತರ ನಡೆಯಬೇಕಾದ ಪ್ರಕ್ರಿಯೆ.

ಇದರೊಂದಿಗೆ ಕಲಿಕೆಯಲ್ಲಿ ಗಳಿಸಿದ ಆಶಯಗಳನ್ನು ಮತ್ತು ನಿರ್ಣಯಗಳನ್ನು ಸ್ವವಿಮರ್ಶೆಗೊಳಪಡಿಸಿ ಬದಲಾವಣೆ ಮಾಡಿಕೊಳ್ಳುವ 'ತಿದ್ದುಪಡಿ ಪ್ರಕ್ರಿಯೆ'ಯೂ ಇದೆ. ಇದನ್ನು ವೈಯಕ್ತಿಕ ಮೌಲ್ಯನಿರ್ಣಯವೆಂದು ಗುರುತಿಸಬಹುದು. ಈ ಪ್ರಕಾರ ವೈಯಕ್ತಿಕ ಮೌಲ್ಯನಿರ್ಣಯದ ಮೂಲಕವೂ ಕಲಿಕೆ ಸಾಧ್ಯವಾಗುತ್ತದೆ. ಇದನ್ನು **'ಮೌಲ್ಯನಿರ್ಣಯವೇ ಕಲಿಕೆ' (Assessment as Learning)** ಎಂದು ಕರೆಯಬಹುದು.

ಕಲಿಕೆಯ ದಕ್ಷತೆಯನ್ನು ಹೆಚ್ಚಿಸಲು 'ಕಲಿಕೆಗಾಗಿರುವ ಮೌಲ್ಯನಿರ್ಣಯ' ಮತ್ತು 'ಮೌಲ್ಯನಿರ್ಣಯವೇ ಕಲಿಕೆ' ಎಂಬಿವುಗಳಿಗೆ ಪ್ರಾಧಾನ್ಯ ಕಲ್ಪಿಸಿಕೊಡಬೇಕು. ಕಲಿಕೆಯು ಫಲಪ್ರದವೂ, ಪರಿಣಾಮಕಾರಿಯೂ ಆಗಲು ಸಹಾಯಕವಾಗುವಂತಹ ಮೌಲ್ಯನಿರ್ಣಯ ಸಮೀಪನವನ್ನು ನಾವು ಸ್ವೀಕರಿಸಿಕೊಳ್ಳಬೇಕು.

ಕಲಿಕಾ ಸಾಧನೆಗಳನ್ನು ನಿರ್ಣಯಿಸುವ ರೀತಿಯ ಕಲಿಕಾ ಸಮೀಪನವನ್ನು ಸ್ವೀಕರಿಸುವಾಗ ಅದಕ್ಕನುಗುಣವಾದ ರೀತಿಯಲ್ಲಿ ಮೌಲ್ಯನಿರ್ಣಯ ಸಮೀಪನವನ್ನು ಆಯ್ಕೆ ಮಾಡಿಕೊಳ್ಳಬೇಕು. ಆದುದರಿಂದ ಕಲಿಕಾ ಸಾಧನೆಗೆ ಒತ್ತು ನೀಡುವ ಮೌಲ್ಯನಿರ್ಣಯ ಸಮೀಪನ (Outcome focussed assessment approach) ವನ್ನು ಆಯ್ಕೆ ಮಾಡಿಕೊಳ್ಳಬೇಕು. ಕಲಿಕಾ ಸಾಧನೆಗಳು ಮುಖ್ಯವಾಗಿರುವ ಕಲಿಕಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಯ 'ಸಕ್ರಿಯ ಪಾಲ್ಗೊಳ್ಳುವಿಕೆ' ಯನ್ನು ಖಾತ್ರಿಪಡಿಸಬೇಕು. ವಿಮರ್ಶಾತ್ಮಕ ಆಲೋಚನೆ, ವೈಚಾರಿಕ

ಚಿಂತನೆ, ಕಲಿಕೆಯ ಪ್ರತಿಫಲನ, ಅಭಿವ್ಯಕ್ತಿ, ಪರಸ್ಪರ ಪೂರಕವಾದ ಜ್ಞಾನ ಇವೆಲ್ಲ ಕಲಿಕಾ ಸಾಧನೆಗಳ ಮುಖ್ಯವಾಗಿರುವ ಕಲಿಕೆಯ ವೈಶಿಷ್ಟ್ಯಗಳಾಗಿವೆ.

## ನಿರಂತರ ಮತ್ತು ಸಮಗ್ರವಾದ ಮೌಲ್ಯನಿರ್ಣಯ (CCE)

ನಿರಂತರ ಮತ್ತು ಸಮಗ್ರವಾದ ಮೌಲ್ಯನಿರ್ಣಯ ರೀತಿಯನ್ನು ಶಾಲಾಮಟ್ಟದಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಕಲಿಯುವಿಕೆಯು ಮಗುವಿನಲ್ಲಿ ನಿರಂತರವಾಗಿ ನಡೆಯುವ ಒಂದು ಪ್ರಕ್ರಿಯೆ. ಈ ಕಾರಣದಿಂದ ನೈಪುಣ್ಯಗಳನ್ನು ಮತ್ತು ತಿಳುವಳಿಕೆಗಳನ್ನು ಎಷ್ಟರ ಮಟ್ಟಿಗೆ ಗಳಿಸಿದ್ದಾನೆಂಬುದನ್ನು ನಿರ್ಧರಿಸುವ ಮೌಲ್ಯನಿರ್ಣಯ ಪ್ರಕ್ರಿಯೆಯು ನಿರಂತರ ನಡೆಯುತ್ತಿರಬೇಕು. ವಿದ್ಯಾರ್ಥಿಯ ವೈಜ್ಞಾನಿಕ, ಸಾಮಾಜಿಕ, ಭಾವನಾತ್ಮಕವಾದ ಬೆಳವಣಿಗೆಯನ್ನು ಸರ್ವತೋಮುಖ ಪ್ರಗತಿ ಎಂದು ಕರೆಯುತ್ತೇವೆ. ಪ್ರಕ್ರಿಯೆಯ ಸಮಗ್ರತೆ ಮತ್ತು ಮುಂದುವರಿಕೆಯನ್ನು ನಿರ್ಧರಿಸಲು ಈಈಊ ಯಲ್ಲಿ ಎರಡು ಪ್ರಮುಖ ವಲಯಗಳನ್ನು ಪರಿಗಣಿಸಬಹುದು.

## ಗ್ರೇಡಿಂಗ್ ರೀತಿ

ನಿರಂತರವೂ ಸಮಗ್ರವೂ ಆದ ಮೌಲ್ಯನಿರ್ಣಯವನ್ನು ಗ್ರೇಡಿಂಗ್ ರೀತಿಯಲ್ಲಿ ಮಾಡಬೇಕು. ಪ್ರೈಮರಿ ಹಂತದಲ್ಲಿ ಗ್ರೇಡಿಂಗ್‌ಗಾಗಿ ಸಾಮಾನ್ಯವಾಗಿ ಐದು ಪೋಯಿಂಟ್ ಗ್ರೇಡಿಂಗ್ ಉಪಯೋಗಿಸುತ್ತಾರೆ. ಐದು ಪೋಯಿಂಟ್ ಗ್ರೇಡಿಂಗ್‌ನಲ್ಲಿ ಗ್ರೇಡ್ ಪೋಯಿಂಟ್ ಮತ್ತು ಶೇಕಡಾ ಕೊಡಲಾಗಿದೆ.

| ಗ್ರೇಡ್ ಪೋಯಿಂಟ್ ಶೇಕಡಾ | ಗ್ರೇಡ್ |
|---|---|
| 90-100 | A+ |
| 80-89 | A |
| 70-79 | B+ |
| 60-69 | B |
| 50-59 | C+ |
| 40-49 | C |
| 30-39 | D+ |
| 20-29 | D |
| 20 ರ ಕೆಳಗೆ | E |

ಮೌಲ್ಯನಿರ್ಣಯ ಪ್ರಕ್ರಿಯೆಯು ನಿರಂತರವೂ ಸಮಗ್ರವೂ ಆಗಿದೆಯೆಂದು ದೃಢಪಡಿಸಬೇಕಾಗಿದೆ.

## CCE ವಲಯಗಳು

1. ವೈಜ್ಞಾನಿಕ ವಲಯಕ್ಕೆ ಸಂಬಂಧಿಸಿದ ಮೌಲ್ಯನಿರ್ಣಯ.
2. ಸಾಮಾಜಿಕ, ಭಾವನಾತ್ಮಕ ವಲಯದ ಪ್ರಗತಿ ಇವುಗಳನ್ನು ವಿವರವಾಗಿ ತಿಳಿಯೋಣ.

## ವೈಜ್ಞಾನಿಕ ವಲಯದ ವಿಕಾಸಕ್ಕೆ ಸಂಬಂಧಿಸಿದ ಮೌಲ್ಯನಿರ್ಣಯ

ಮಗು ಕಲಿಯುತ್ತಿರುವ ಎಲ್ಲ ವಿಷಯಗಳು ವೈಜ್ಞಾನಿಕ ವಲಯದ ಪಟ್ಟಿಯಲ್ಲಿ ಸೇರುತ್ತವೆ. ಭಾಷಾಕಲಿಕೆ, ವಿಜ್ಞಾನ ವಿಷಯಗಳು (ಮೂಲವಿಜ್ಞಾನ, ಗಣಿತ ವಿಜ್ಞಾನ, ಸಮಾಜ ವಿಜ್ಞಾನ), ಕಲೆಯ ಕಲಿಕೆ, ವೃತ್ತಿ ಪರಿಚಯ ಕಲಿಕೆ ಹಾಗೂ ಆರೋಗ್ಯ ಕ್ರಿಡಾ ಶಿಕ್ಷಣ ಮುಂತಾದ ಎಲ್ಲ ವಿಷಯಗಳನ್ನು ಈ ವಲಯಕ್ಕೆ ಸೇರಿಸಬಹುದು. ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದಂತೆ ಕಲಿಕಾ ಸಾಧನೆಗಳನ್ನು ಗುರುತಿಸಿ, ಅದು ಎಷ್ಟರಮಟ್ಟಿಗೆ ಯೋಗ್ಯವೆಂದು ನೋಡಿಕೊಂಡು ಮೌಲ್ಯನಿರ್ಣಯ ನಡೆಸಬೇಕು. ಇಲ್ಲಿ ಎರಡು ವಿಧದ ಮೌಲ್ಯಮಾಪನಗಳನ್ನು ಕೊಡಲಾಗಿದೆ.

1. ನಿರಂತರ ಮೌಲ್ಯಮಾಪನ (C.E.)
2. ಅವಧಿ ಮೌಲ್ಯಮಾಪನ (T.E.)

## ನಿರಂತರ ಮೌಲ್ಯಮಾಪನ (C.E.)

ಪ್ರಾಥಮಿಕ ಹಂತದಲ್ಲಿ ಭಾಷಾ ವಿಷಯಗಳ ಕಲಿಕೆ ಅನೇಕ ಕೌಶಲ್ಯಗಳನ್ನು ಬೆಳೆಸಬೇಕಾಗಿದೆ. ಅಂದರೆ ಇದರಲ್ಲಿ ಆಶಯಗಳು, ಸತ್ಯಾಂಶಗಳು, ವಿವಿಧ ವಿಜ್ಞಾನ ವಲಯಗಳು, ಸೃಜನಶೀಲ ರಚನೆಗಳು ಎಂಬೀ ವಿಷಯಗಳನ್ನೊಳ ಗೊಂಡಿರುತ್ತವೆ. ಇವುಗಳನ್ನುಳಿದು ಭಾಷಾ ಕೌಶಲ್ಯಗಳನ್ನು ನಿರ್ಧರಿಸಲು ಕಷ್ಟಸಾಧ್ಯ. ಕೇಳಿ, ಓದಿ ವಿಷಯಗಳನ್ನು ಗ್ರಹಿಸುವುದು, ಮೌಖಿಕವಾಗಿ ಹೇಳುವ ಮೂಲಕ, ಬರೆಯುವ ಮೂಲಕ ಅಭಿವ್ಯಕ್ತಪಡಿಸುವುದು, ಸೃಜನಾತ್ಮಕ ಬರಹಗಳ ಮೂಲಕ ಪ್ರಕಟಿಸುವುದು ಮೊದಲಾದ ಕೌಶಲ್ಯಗಳನ್ನು ಭಾಷಾಕಲಿಕೆಯ ಮೂಲಕ ವೃದ್ಧಿಸಿಕೊಳ್ಳಬೇಕು. ಆದುದರಿಂದ ಭಾಷಾಕಲಿಕೆಯನ್ನು ಕೇವಲ ಕೌಶಲ್ಯಗಳನ್ನಾಗಿಯೋ, ಜ್ಞಾನವೊದಗಿಸುವ ವಿಷಯವನ್ನಾಗಿಯೋ ಬೇರ್ಪಡಿಸಲು ಸಾಧ್ಯವಿಲ್ಲ.

1 ಮತ್ತು 2ನೇ ತರಗತಿಗಳಲ್ಲಿ ವಿಷಯಾಧಾರಿತ (Theme) ನೆಲೆಯಲ್ಲಿ ಭಾಷೆ, ಗಣಿತ, ಪರಿಸರ ಅಧ್ಯಯನ ಎಂಬ ವಿಷಯಗಳಲ್ಲಿ ಚಟುವಟಿಕೆಗಳನ್ನು ಸಿದ್ಧಪಡಿಸಲಾಗಿದೆ. ಆದುದರಿಂದ ಈ ತರಗತಿಗಳ ಹೂರಣ ವಲಯವಾಗಿ ಪ್ರಸ್ತುತ ವಿಷಯವನ್ನು ನಮಗೆ ನಿರ್ಧರಿಸಬಹುದು. ಪ್ರಾಥಮಿಕ ಹಂತದ ವಿದ್ಯಾರ್ಥಿಯ ವಾಚಿಕ ಮತ್ತು ಬರವಣಿಗೆಯ ಕೌಶಲಗಳ ಬೆಳವಣಿಗೆಗೆ ಆಲಿಸುವಿಕೆ, ಓದುವಿಕೆ, ಲಿಪಿ ವಿನ್ಯಾಸದ ಬಗೆಗೆ ತಿಳಿಯುವುದು, ಉಚ್ಚಾರ ಶುದ್ಧಿಯೊಂದಿಗೆ ಓದುವುದು, ಸರಿಯಾದ ಬರವಣಿಗೆ ಇವೆಲ್ಲವೂ ಆವಶ್ಯಕ.

ವಿಜ್ಞಾನ ವಿಷಯಗಳಲ್ಲಿ ಪ್ರತಿಯೊಂದು ಆಶಯ ರೂಪೀಕರಣದ ಹಂತದಲ್ಲಿ ಮಗು ಆರ್ಜಿಸಿದ ಆಶಯಗಳು, ತಿಳುವಳಿಕೆಗಳು ಮತ್ತು ಸಾಧಿಸಿದ ಕೌಶಲಗಳು ಎಂಬಿವುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇಲ್ಲಿ ಮೂರು ವಿಧದ ನಿರಂತರ ಮೌಲ್ಯಮಾಪನವನ್ನು ಸೂಚಿಸಲಾಗಿದೆ.

- ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನ
- ಪೋರ್ಟ್‌ಫೋಲಿಯೋ ಮೌಲ್ಯಮಾಪನ
- ಘಟಕ ಮಟ್ಟದ ಮೌಲ್ಯಮಾಪನ (ಪ್ರತಿಯೊಂದು ಘಟಕದ ಒಟ್ಟು ಕಲಿಕಾ ಸಾಧನೆಗಳ ಮೌಲ್ಯಮಾಪನ) ಇವುಗಳನ್ನು ವಿವರವಾಗಿ ಪರಿಶೀಲಿಸೋಣ.

## ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನ

ಕಲಿಕೆಯ ನಿರ್ವಹಣೆಯ ವೇಳೆಯಲ್ಲಿ ಪ್ರಕ್ರಿಯೆಯ ಮೌಲ್ಯಮಾಪನವು ತುಂಬಾ ಪ್ರಧಾನವಾಗಿದೆ. ಕಲಿಕಾ ಪ್ರಕ್ರಿಯೆಯ ಪ್ರತಿಯೊಂದು ಘಟ್ಟವನ್ನು ಮೌಲ್ಯಮಾಪನ ಮಾಡಿ ಅಗತ್ಯವಾದ ಬೆಂಬಲವನ್ನು ನೀಡಬೇಕು. ಚಟುವಟಿಕೆಯ ಮೂಲಕ ಗಳಿಸಿದ ಆಶಯ ಮತ್ತು ತಿಳುವಳಿಕೆಗಳು, ಗಳಿಸಿದ ಕೌಶಲಗಳು ಎಂಬಿವುಗಳನ್ನು ಮೌಲ್ಯಮಾಪನ ಮಾಡಬೇಕು. ಸ್ವ–ಮೌಲ್ಯಮಾಪನ, ಪರಸ್ಪರ ಮೌಲ್ಯಮಾಪನ ಮತ್ತು ಅಧ್ಯಾಪಕರ ಮೌಲ್ಯಮಾಪನಗಳಿಗೆ ಯೋಗ್ಯವಾದ ಸೂಚಕಗಳನ್ನು ಘಟಕಗಳ ವಸ್ತುವಿಗೆ ಅನುಸರಿಸಿ ರೂಪಿಸಿ ಬಳಸಬೇಕು. ಪ್ರಕ್ರಿಯೆಗಳ ಮೌಲ್ಯಮಾಪನಕ್ಕೆ ಸಾಮಾನ್ಯವಾಗಿ ಕೆಳಗೆ ಕೊಡಲಾದ ಸೂಚಕಗಳನ್ನು ಬಳಸಬಹುದು.

1. ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ (ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವ ಸನ್ನದ್ಧತೆ, ವೈಯಕ್ತಿಕ ಚಟುವಟಿಕೆಗಳನ್ನು ನಿಭಾಯಿಸುವ ಸಾಮರ್ಥ್ಯ, ಗುಂಪು ಪಾಲ್ಗೊಳ್ಳುವಿಕೆ, ಆಶಯ ವಿನಿಮಯ.)
2. ಆಶಯ ತಿಳುವಳಿಕೆ
3. ಕೌಶಲಗಳ ಸಂಪಾದನೆ
4. ಅಭಿವ್ಯಕ್ತಿ/ಮಂಡನೆ
5. ದಾಖಲಿಸುವುದು/ಸಿದ್ಧಪಡಿಸುವುದು

ಪ್ರಕ್ರಿಯೆಯ ಮೌಲ್ಯನಿರ್ಣಯಕ್ಕೆ ನೀಡಲಾಗಿರುವ ಸೂಚಕಗಳ ಹಿನ್ನೆಲೆಯಲ್ಲಿ ಪ್ರತಿಯೊಂದು ಚಟುವಟಿಕೆಯನ್ನು ಮೌಲ್ಯನಿರ್ಣಯ ಮಾಡಿ ಮೌಲ್ಯಮಾಪನ ಪುಟದಲ್ಲಿ ದಾಖಲಿಸಬೇಕು. ಮಗುವಿನ ನೋಟ್‌ಬುಕ್ಕನ್ನು ಪ್ರಕ್ರಿಯೆಯ ಮೌಲ್ಯಮಾಪನದ ಸಾಕ್ಷ್ಯವಾಗಿ ಉಪಯೋಗಿಸಬೇಕು. ಅವಧಿಯ ಕೊನೆಯಲ್ಲಿ ಮಾತ್ರ ಇವುಗಳನ್ನು ಗ್ರೇಡಿಗೆ ಬದಲಾಯಿಸಿ ನಿರ್ದಿಷ್ಟ ನಮೂನೆಯಲ್ಲಿ ದಾಖಲಿಸಬೇಕು.

**1 ರಿಂದ ತೊಡಗಿ ಮುಂದುವರಿಯುವ ವಿಷಮ ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯಲು ಆ ವಿಷಮ ಸಂಖ್ಯೆಗಳ ಸಂಖ್ಯೆಯನ್ನು ಅದರಿಂದಲೇ ಗುಣಿಸಿದರೆ ಸಾಕು.**

## 1. ಟೀಚಿಂಗ್ ಮ್ಯಾನುವೆಲ್‌ನ ವಿವರಗಳು

ಕಲಿಕೆಯ ಚಟುವಟಿಕೆಗಳನ್ನು ಸುಸೂತ್ರವಾಗಿ ಸಂಯೋಜನೆ ಮಾಡುವುದಕ್ಕೂ, ಶಾಸ್ತ್ರೀಯವಾದ ನಿರಂತರ ಮೌಲ್ಯಮಾಪನವನ್ನು ಮಾಡುವುದಕ್ಕೂ ಟೀಚಿಂಗ್ ಮ್ಯಾನುವೆಲ್‌ನ್ನು ಸಿದ್ಧಪಡಿಸುವುದು ಅವಶ್ಯಕವಾಗಿದೆ.

ಟೀಚಿಂಗ್ ಮ್ಯಾನುವೆಲ್‌ಗಳಲ್ಲಿ ಕೆಳಗೆ ನೀಡಲಾದ ಘಟಕಗಳನ್ನು ಕೊಡಬಹುದಾಗಿದೆ.

- ಕಲಿಕಾ ಸಾಧನೆಗಳು
- ಆಶಯಗಳು/ತಿಳುವಳಿಕೆಗಳು
- ಕೌಶಲಗಳು
- ಮೌಲ್ಯಗಳು/ಮನೋಭಾವಗಳು
- ಕಲಿಕೋಪಕರಣಗಳು
- ನಿರೀಕ್ಷಿಸುವ ಉತ್ಪನ್ನಗಳು
- ಸಮಯ

- ಚಟುವಟಿಕೆಗಳು ಮತ್ತು ಮೌಲ್ಯಮಾಪನ ಒಳಗೊಂಡ ಪ್ರಕ್ರಿಯಾ ಪುಟ, ಮೌಲ್ಯಮಾಪನದ ಮಾಹಿತಿಗಳನ್ನು ದಾಖಲಿಸಿದ ಮೌಲ್ಯನಿರ್ಣಯದ ಪುಟ.
- ಮೌಲ್ಯನಿರ್ಣಯದ ಪುಟದ ಮಾಹಿತಿಗಳನ್ನು ಆಧರಿಸಿದ ಅವಲೋಕನ ಟಿಪ್ಪಣಿಗಳು

ಮ್ಯಾನುವೆಲ್‌ನಲ್ಲಿ ಹೊಂದಾಣಿಕೆಯಿಂದ ಕೂಡಿದ ಕಲಿಕಾ ಚಟುವಟಿಕೆಗಳ ಯೋಜನೆ, ಮೌಲ್ಯನಿರ್ಣಯ ಸಂದರ್ಭಗಳು, ತಂತ್ರಗಳು, ಉಪಕರಣಗಳಿರಬೇಕು.

## 2. ವಿಷಯಾಧಾರಿತ ನೋಟ್‌ಬುಕ್ ಸಂಬಂಧಿಸಿದ ವಿವರಗಳು

ವಿದ್ಯಾರ್ಥಿಯ ನೋಟ್ ಪುಸ್ತಕವು ವೈಜ್ಞಾನಿಕ ವಲಯದ ಮೌಲ್ಯಮಾಪನಕ್ಕೆ ಆಧಾರವಾಗಿವ ಪ್ರಧಾನ ದಾಖಲೆಯಾಗಿದೆ. ಕಲಿಕೆಯ ಪ್ರಕ್ರಿಯೆಗಳಿಗನುಸರಿಸಿ ವಿವಿಧ ಚಟುವಟಿಕೆಗಳನ್ನು ಪೂರ್ತೀಕರಿಸಲು ನೋಟ್‌ಪುಸ್ತಕವು ಸಹಕಾರಿಯಾಗಿದೆ. ವಿದ್ಯಾರ್ಥಿಯ ಸೃಜನಶೀಲತೆ, ಚಿಂತನ ಪ್ರಕ್ರಿಯೆಗಳು, ಭಾಷಾ ನೈಪುಣ್ಯ ಮೊದಲಾದವುಗಳು ನೋಟ್ ಪುಸ್ತಕದಲ್ಲಿ ಪ್ರತಿಫಲಿಸುತ್ತವೆ. ಪಾಠ ವಿನಿಮಯ ಮಾಡುವುದಕ್ಕೆ ಬಳಸುವ ವಿವಿಧ ತಂತ್ರಗಳು, ಅವುಗಳ ಪೂರ್ತೀಕರಣಕ್ಕೆ ವಿದ್ಯಾರ್ಥಿ ನಡೆಸುವ ಸಿದ್ಧತೆಗಳು, ಚಟುವಟಿಕೆಗಳ ವಿವಿಧ ಹಂತಗಳ ಪಾಲ್ಗೊಳ್ಳುವಿಕೆ ಮೊದಲಾದ ಎಲ್ಲಾ ಮಾಹಿತಿಗಳು ನೋಟ್ ಪುಸ್ತಕದಲ್ಲಿರಬೇಕು. ಚಟುವಟಿಕೆಗಳ ಮೂಲಕ ರೂಪುಗೊಂಡ ಉತ್ಪನ್ನಗಳಿಗೆ ಸಂಬಂಧಿಸಿದ ವಿವರಗಳನ್ನು ನೋಟ್‌ಪುಸ್ತಕದಲ್ಲಿಯೇ ದಾಖಲಿಸಬೇಕು.

ನಿರ್ದಿಷ್ಟ ಸಮಯದೊಳಗೆ ಸಾಧನೆಗಳ ಮೌಲ್ಯಮಾಪನ ಮಾಡಿ ಕಲಿಕೆಯ ಪ್ರಗತಿಗೆ ಅಗತ್ಯವಾದ ಸೂಚನೆಗಳನ್ನು, ಮಾರ್ಗದರ್ಶನವನ್ನು ಅಧ್ಯಾಪಕರು ನೀಡಬೇಕು. ಘಟಕದ ಕೊನೆಯಲ್ಲಿ ಕಲಿಕಾ ಸಾಧನೆಗಳನ್ನು ವಿದ್ಯಾರ್ಥಿ ಗಳಿಸಿಕೊಂಡಿರುವನೋ? ಎಂದು ಪರೀಕ್ಷಿಸುವ ದಾಖಲೆಯಾಗಿ ನೋಟ್‌ಪುಸ್ತಕಗಳು ಕಾರ್ಯ ನಿರ್ವಹಿಸಬೇಕು.

ನೋಟ್‌ಪುಸ್ತಕವು ಆಶಯಸ್ಪಷ್ಟತೆಯಿಂದ ಕೂಡಿರುವುದು, ಆಶಯ ಮತ್ತು ಸನ್ನಿವೇಶಗಳಿಗೆ ಯೋಗ್ಯವಾದ ಉಲ್ಲೇಖಗಳಿರುವುದು, ತನ್ನ ಚಿಂತನೆಗಳನ್ನು ಒಳಗೊಂಡಿರುವುದು ಮತ್ತು ಪ್ರತಿಫಲಿಸುವಂತಹದು ಆಗಿರಬೇಕು. ವಿಷಯಗಳನ್ನು ನಿಖರವಾಗಿ ಮಂಡಿಸಿರಬೇಕು. ನೋಟ್‌ಪುಸ್ತಕಕ್ಕೆ ಸಮಗ್ರತೆ ಮತ್ತು ಮುಂದುವರಿಕೆಯಿರಬೇಕು.

## ಪೋರ್ಟ್‌ಫೋಲಿಯೋ ಮೌಲ್ಯಮಾಪನ

ಕಲಿಕಾ ಚಟುವಟಿಕೆಯಲ್ಲಿ ಮುಂದುವರಿಯುವಾಗ ಸಿಗುವ ಎಲ್ಲಾ ಉತ್ಪನ್ನಗಳನ್ನು ಪೋರ್ಟ್‌ಫೋಲಿಯೋದಲ್ಲಿ ಅಳವಡಿಸಿ ಮೌಲ್ಯಮಾಪನ ಮಾಡಬೇಕು. ಕಲಿಕೆಗೆ ಸಂಬಂಧಿಸಿ ಮಗುವಿಗೂ ಹೆತ್ತವರಿಗೂ ಫೀಡ್‌ಬ್ಯಾಕ್ ನೀಡುವ ಕೆಲಸವನ್ನು ಪೋರ್ಟ್‌ಫೋಲಿಯೋ ನೀಡುತ್ತದೆ. ಇದು ಕಲಿಕೆಯನ್ನು ತ್ವರಿತಗೊಳಿಸುತ್ತದೆ.

ಪೋರ್ಟ್‌ಫೋಲಿಯೋದಲ್ಲಿ,

- ನೋಟ್‌ಬುಕ್
- ಇತರ ರಚನೆಗಳು (ವೈಯಕ್ತಿಕ ರಚನೆ, ಉತ್ತಮಗೊಳಿಸಿದ ರಚನೆ)
- ಇತರ ಕಲಿಕಾ ಸಾಕ್ಷ್ಯಗಳು (ಚಿತ್ರಗಳು, ಸಂಗ್ರಹಗಳು, ಕಲಿಕೋಪಕರಣಗಳು)
- ಸೃಜನಶೀಲ ರಚನೆಗಳು
- ವರ್ಕ್‌ಶೀಟ್‌ಗಳು

ಈ ಮೊದಲಾದುವು ಸೇರಿಕೊಂಡಿವೆ.

ಪೋರ್ಟ್‌ಫೋಲಿಯೋ ಮೌಲ್ಯಮಾಪನಕ್ಕೆ ಕೆಳಗೆ ಕೊಡಲಾದ ಸೂಚಕಗಳನ್ನು ಬಳಸಬಹುದು.

- ಆಶಯ ಸ್ಪಷ್ಟತೆ
- ತಿಳುವಳಿಕೆಗಳನ್ನು ತನ್ನದಾಗಿಸಿರುವುದು
- ಯೋಗ್ಯವಾದ ಸಂರಚನೆ
- ಪೂರ್ಣತೆ
- ನೈಜತೆ

ಪೋರ್ಟ್‌ಫೋಲಿಯೋ ಮೌಲ್ಯಮಾಪನಕ್ಕೆ ಸಂಬಂಧಿಸಿ ಒಂದು ಉದಾಹರಣೆಯನ್ನು ನೋಡೋಣ.

## ಘಟಕ ಮಟ್ಟದ ಮೌಲ್ಯಮಾಪನ

ಒಂದು ಘಟಕದಲ್ಲಿ ವಿವಿಧ ಕಲಿಕಾ ಸಾಧನೆಗಳಿಗಿರುವ ಚಟುವಟಿಕೆಗಳು ಪರಸ್ಪರ ಸಂಬಂಧದೊಂದಿಗೆ ವಿನ್ಯಾಸಗೊಂಡಿರುತ್ತವೆ. ಇದಕ್ಕೊಂದು ಸಮಗ್ರ ಸ್ವರೂಪವಿದೆ. ಒಂದು ಘಟಕವನ್ನು ಮೌಲ್ಯಮಾಪನ ಮಾಡುವುದರ ಮೂಲಕ ಈ ಸಮಗ್ರತಾ ಪ್ರಜ್ಞೆ (ಎಲ್ಲಾ ಕಲಿಕಾ ಸಾಧನೆಗಳನ್ನು ಪರಿಗಣಿಸಿ) ಯನ್ನು ಬೆಲೆಗಟ್ಟುವುದಾಗಿದೆ. ವಾಚಿಕದ ಮೌಲ್ಯಮಾಪನ, ರಸಪ್ರಶ್ನೆ ಕಾರ್ಯಕ್ರಮ, ಓಪನ್ ಬುಕ್ ಮೌಲ್ಯಮಾಪನ, ಪ್ರಶ್ನೆ ತಯಾರಿ ಮತ್ತು ಉತ್ತರ ಕಂಡುಹಿಡಿಯುವುದು, ಹೊಸ ರಚನೆಗಳ ಮೌಲ್ಯಮಾಪನ ಮೊದಲಾದುವುಗಳನ್ನು ಘಟಕ ಮೌಲ್ಯಮಾಪನಕ್ಕೆ ಪರಿಗಣಿಸಬೇಕು. ನಿರ್ದಿಷ್ಟ ಘಟಕದ ಕಲಿಕಾ ಸಾಧನೆಗಳ ವಿಷಯದಲ್ಲಿ ಮಗು ಯಾವ ಹಂತದಲ್ಲಿದ್ದಾನೆಂದು ತಿಳಿಯಲು ಸಹಾಯಕವಾದ ರೇಟಿಂಗ್ ಸ್ಕೇಲ್, ಚೆಕ್‌ಲಿಸ್ಟ್ ಮೊದಲಾದುವುಗಳನ್ನು ಉಪಯೋಗಿಸಬೇಕು. ಘಟಕ ಮೌಲ್ಯಮಾಪನವು ಕಲಿಕಾ ಚಟುವಟಿಕೆಯೊಂದಿಗೆ ಸಹಜವಾಗಿ ನಡೆಯಬೇಕಾಗಿದೆ.

ಘಟಕ ಮೌಲ್ಯಮಾಪನದ ಸೂಚಕಗಳ ಆಧಾರದಲ್ಲಿ ಅಂಕಗಳನ್ನು ನೀಡಿ, ಗ್ರೇಡಿಗೆ ಪರಿವರ್ತಿಸಿ, ಅವಧಿಯ ಕೊನೆಯಲ್ಲಿ ನಿಗದಿತ ನಮೂನೆಯಲ್ಲಿ ದಾಖಲಿಸಬೇಕು. ಒಂದು ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಘಟಕಗಳ ಮೌಲ್ಯಮಾಪನವಿರುವುದರಿಂದ ಘಟಕ ಮೌಲ್ಯಮಾಪನದ ಸರಾಸರಿಯನ್ನು ಅವಧಿಯ ಕೊನೆಯಲ್ಲಿ ದಾಖಲಿಸಬೇಕು. ಇದಕ್ಕೆ ಬಳಸಿದ ಮಾಪನದ ಸ್ವಭಾವಕ್ಕನುಸರಿಸಿ ಸೂಚಕಗಳನ್ನು ಅಧ್ಯಾಪಕರು ತಯಾರಿಸಬೇಕು. ಕಲೆಯ ಕಲಿಕೆ, ವೃತ್ತಿ ಪರಿಚಯ ಕಲಿಕೆ, ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ ಎಂಬ ವಿಷಯಗಳಿಗೆ ಪ್ರಕ್ರಿಯೆ, ಪೋರ್ಟ್‌ಫೋಲಿಯೋ, ಘಟಕ ಮಟ್ಟ – ಎಂಬ ಮೌಲ್ಯಮಾಪನಗಳನ್ನು ನಡೆಸಿ ಗ್ರೇಡ್ ನೀಡಬೇಕು.

## CE ಗ್ರೇಡ್ ಕಂಡುಹಿಡಿಯುವ ವಿಧಾನ

ಪ್ರತಿಯೊಂದು ವಿಷಯದ ಪ್ರಕ್ರಿಯೆ, ಪೋರ್ಟ್‌ಫೋಲಿಯೋ, ಘಟಕ ಮಟ್ಟದ ಮೌಲ್ಯಮಾಪನ ಎಂಬಿವುಗಳಲ್ಲಿ ಪ್ರತಿಯೊಂದರ ಗ್ರೇಡನ್ನು ಲೆಕ್ಕ ಮಾಡಿದ ಬಳಿಕ ಅವುಗಳನ್ನು A, B, C, D, E ಗ್ರೇಡ್‌ಗಳಿಗೆ ಅನುಕ್ರಮವಾಗಿ 5, 4, 3, 2, 1 ಎಂಬ ಹಾಗೆ ಅಂಕಗಳನ್ನು ನೀಡಬೇಕು. ಹೀಗೆ ಸಿಗುವ ಒಟ್ಟು ಗ್ರೇಡ್ ಪಾಯಿಂಟ್‌ಗಳ ಆಧಾರದಲ್ಲಿ ವಿದ್ಯಾರ್ಥಿಯ CE ಗ್ರೇಡನ್ನು ಕಂಡುಹಿಡಿಯಬಹುದು.

$$\text{CE ಗ್ರೇಡ್} = \frac{\text{ಒಟ್ಟು ಲಭಿಸಿದ ಗ್ರೇಡ್ ಪಾಯಿಂಟ್}}{\text{ಗರಿಷ್ಠ ಗ್ರೇಡ್ ಪಾಯಿಂಟ್}} \times 100$$

ಉದಾಹರಣೆಗೆ, ಒಂದು ಮಗುವಿಗೆ ಕನ್ನಡದಲ್ಲಿ ಪ್ರಕ್ರಿಯೆ, ಪೋರ್ಟ್‌ಫೋಲಿಯೋ ಮತ್ತು ಘಟಕ

ಮಟ್ಟದ ಮೌಲ್ಯಮಾಪನ ಇವುಗಳ ಗ್ರೇಡ್ ಅನುಕ್ರಮವಾಗಿ A, B, B ಎಂದು ಭಾವಿಸಿರಿ. ಎಂದರೆ ಒಟ್ಟು ಲಭಿಸಿದ ಗ್ರೇಡ್ ಪಾಯಿಂಟ್ $5 + 4 + 4 = 13$ ಆಗಿದೆ. ಗರಿಷ್ಠ ಸಿಗಬಹುದಾದ ಗ್ರೇಡ್ ಪಾಯಿಂಟ್ 15.

ಗ್ರೇಡ್ ಪಾಯಿಂಟ್ (ಶೇಕಡಾದಲ್ಲಿ $\frac{13}{15} \times 100 = 86.67$)

ಕೆಳಗಿನ ಪಟ್ಟಿಯ ಪ್ರಕಾರ ಕನ್ನಡದ CE ಗ್ರೇಡ್ A ಆಗಿದೆ. ಕೆಳಗೆ ಕೊಟ್ಟಿರುವ ಪಟ್ಟಿಯನ್ನುಪಯೋಗಿಸಿ CE ಗ್ರೇಡನ್ನು ಕಂಡುಹಿಡಿಯಬಹುದು.

## ಅವಧಿ ಮೌಲ್ಯಮಾಪನ (TE)

9, 10 ಶಾಲಾ ಹಂತದಲ್ಲಿ ಭಾಷಾ ವಿಷಯಗಳಿಗೆ ಅವಧಿಯನ್ನು ಪರಿಗಣಿಸಿಕೊಂಡು ಘಟಕಗಳ ಕಲಿಕಾ ಸಾಧನೆಗಳನ್ನು ನಿರ್ಧರಿಸಬೇಕು. ಭಾಷೆಯ ವ್ಯವಹಾರ ರೂಪಗಳು, ಭಾಷಾ ಸತ್ಯಾಂಶಗಳು, ಭಾಷಾ ಕೌಶಲ್ಯಗಳು ಎಂಬ ವಲಯಗಳನ್ನು ಪರಿಗಣಿಸಿಕೊಂಡು ಅವಧಿ ಮೌಲ್ಯಮಾಪನವನ್ನು ನಡೆಸಬೇಕು. ಒಳಹೂರಣ ವಲಯಗಳಿಗೆ ಮತ್ತು ಕೌಶಲ್ಯಗಳಿಗೆ ಒತ್ತು ನೀಡಿರುವ ವೈವಿಧ್ಯಪೂರ್ಣ ಪ್ರಶ್ನೆಗಳ ಮಾದರಿಗಳು ಒಳಗೊಂಡಿರಬೇಕು. ವಿಜ್ಞಾನ ವಿಷಯಗಳಿಗೆ ಅವಧಿಯಲ್ಲಿ ಒಳಗೊಂಡಿರುವ ಘಟಕಗಳ ಒಳ ಹೂರಣಗಳನ್ನು ಆಧರಿಸಿ ಅವಧಿ ಮೌಲ್ಯಮಾಪನ ನಡೆಸಬೇಕು. ಕಲಿಕಾ ಸಾಧನೆಗಳಿಗೆ ಒತ್ತು ಕೊಡುವ ರೀತಿಯಲ್ಲಿ ಆಶಯಗಳನ್ನು ಮತ್ತು ಕೌಶಲ್ಯಗಳನ್ನು ಮೌಲ್ಯಮಾಪನ ಮಾಡುವುದಕ್ಕೆ ಯೋಗ್ಯವಾದ ಪ್ರಶ್ನೆಗಳನ್ನು ತಯಾರಿಸಬೇಕು.

ಪ್ರತಿಯೊಂದು ಘಟಕ/ಆಶಯ ವಲಯಗಳಿಗೂ ವಿವಿಧ ಹಂತದ ಮಾನಸಿಕ ಪ್ರಕ್ರಿಯೆಗಳಿಗೂ (ಜ್ಞಾನ ಕರಗತ ಮಾಡುವುದು/ತಿಳುವಳಿಕೆಯ ಸಾಧನೆ, ಆಶಯಗಳು/ತಿಳುವಳಿಕೆಗಳು ಇವುಗಳ ಪ್ರಯೋಗ, ನಿಗಮನ ರೂಪಿಸುವುದು, ಮೌಲ್ಯನಿರ್ಣಯ, ಸೃಜನಾತ್ಮಕ ಮಾನಸಿಕ ಪ್ರಕ್ರಿಯೆಗಳು) ಸರಿಯಾದ ವೆಯ್ಟೇಜ್ (Weightage) ನೀಡಿ ನೀಲಿನಕಾಶೆ ತಯಾರಿಸಿ, ವೈವಿಧ್ಯಪೂರ್ಣ ಪ್ರಶ್ನೆಗಳಿವೆಯೆಂದು ಖಾತ್ರಿಪಡಿಸಿ, ಪ್ರಶ್ನೆಪತ್ರಿಕೆ ತಯಾರಿಸಬೇಕು. ಪ್ರಶ್ನೆಗಳಿಗೆ ಯೋಗ್ಯವಾದ ಸೂಚಕಗಳನ್ನು ರೂಪಿಸಿ, ಅವುಗಳ ಆಧಾರದಲ್ಲಿ ಮೌಲ್ಯಮಾಪನವನ್ನು ನಿರ್ವಹಿಸಬೇಕು.

ಕಲೆಯ ಕಲಿಕೆ, ವೃತ್ತಿ ಪರಿಚಯ ಕಲಿಕೆ, ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ ಎಂಬೀ ವಿಷಯಗಳಿಗೆ ಸಂಬಂಧಿಸಿ ಟರ್ಮಿನಲ್ ಮೌಲ್ಯಮಾಪನವನ್ನು ಪ್ರದರ್ಶನ ಮಾಲ್ಯಮಾಪನ (Performance Assessment) ವಾಗಿ ನಡೆಸಬೇಕು.

ಅದಕ್ಕಿರುವ ಮಾದರಿಗಳನ್ನು ಆಯಾ ವಿಷಯಗಳ ಕೈಪಿಡಿಗಳಲ್ಲಿ ನೀಡಲಾಗಿದೆ. ಕಲೆಯ ಕಲಿಕೆ, ವೃತ್ತಿಪರಿಚಯ ಕಲಿಕೆ, ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ ಎಂಬಿವುಗಳಿಗೆ ಈ ರೀತಿಯಲ್ಲಿ ಗ್ರೇಡ್ ನೀಡಬೇಕಾಗಿದೆ.

## ಸಾಮಾಜಿಕ, ಭಾವನಾತ್ಮಕ ವಲಯದ ಮೌಲ್ಯಮಾಪನ

ವೈಜ್ಞಾನಿಕ ವಲಯದಂತೆಯೇ ಸಾಮಾಜಿಕ, ಭಾವನಾತ್ಮಕ ವಲಯಗಳ ಮೌಲ್ಯಮಾಪನವು ಪ್ರಧಾನವಾದುದು. Learning to know, Learning to do, Learning together, Learning to be ಎಂಬ ನೈಪುಣ್ಯಗಳನ್ನು ಇಲ್ಲಿ ಪರಿಗಣಿಸಬೇಕು. ಸಾಮಾಜಿಕ, ಭಾವನಾತ್ಮಕ ವಲಯಗಳ ಮೌಲ್ಯಮಾಪನಕ್ಕೆ ಸಂಬಂಧಿಸಿ ಕೆಳಗೆ ಕೊಟ್ಟಿರುವ ನೈಪುಣ್ಯಗಳನ್ನು ಮೌಲ್ಯಮಾಪನ ಮಾಡಬೇಕು.

1. ವಿಚಾರ ವಿನಿಮಯ ಕೌಶಲ (Communication Skills)
2. ಅಂತರ್‌ವ್ಯಕ್ತಿ ನೈಪುಣ್ಯ (Inter Personal Skills)

3. ಸಹಭಾವ (Empathy)
4. ಭಾವನೆಗಳೊಂದಿಗೆ ಹೊಂದಾಣಿಕೆ (Coping with Emotions)
5. ಮಾನಸಿಕ ಒತ್ತಡದೊಂದಿಗೆ ಹೊಂದಾಣಿಕೆ (Copying with stress)
6. ಸಮಸ್ಯೆ ಪರಿಹಾರ ಕೌಶಲ (Problem solving skills)
7. ತೀರ್ಮಾನ ಕೈಗೊಳ್ಳುವುದು (Decision making)
8. ವಿಮರ್ಶಾತ್ಮಕ ಚಿಂತನೆ (Critical thinking)
9. ಸೃಜನಶೀಲ ಚಿಂತನ ಕೌಶಲ (Creative thinking skills)
10. ಸ್ವ ನಿರ್ವಹಣೆ (Self management)

ವೈಜ್ಞಾನಿಕ ವಲಯದ ವಿಷಯಗಳನ್ನು ನಿರ್ವಹಿಸುವ ಅಧ್ಯಾಪಕರೇ ಇವುಗಳ ಮೌಲ್ಯಮಾಪನವನ್ನು ಮಾಡಬೇಕು. ಆಯಾ ವಿಷಯಗಳ ಪ್ರಕ್ರಿಯೆ ಮೌಲ್ಯಮಾಪನದ ಭಾಗವಾಗಿ, ಈ ಮೌಲ್ಯಮಾಪನವನ್ನು ನಡೆಸಬೇಕು. ಇಲ್ಲಿ ಪ್ರಕ್ರಿಯಾ ಕೌಶಲದ ಮೌಲ್ಯಮಾಪನ ರೂಪುಗೊಳ್ಳುತ್ತದೆಯೋ ಎಂಬುದನ್ನು ಮೌಲ್ಯಮಾಪನ ಮಾಡಬೇಕು.

ಸಾಮಾಜಿಕ – ಭಾವನಾತ್ಮಕ ವಲಯದಲ್ಲಿ ವಿದ್ಯಾರ್ಥಿಯ ಸಾಮರ್ಥ್ಯವನ್ನು ಸಂಬಂಧಿಸಿದ ಧನಾತ್ಮಕವಾದ ಅಂಶಗಳನ್ನು ಗುರುತಿಸಿ ದಾಖಲಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯ ಧನಾತ್ಮಕವಾದ ನೈಪುಣ್ಯಗಳನ್ನು ಪ್ರೋತ್ಸಾಹಿಸಬೇಕು.

ಈ ಸಂಬಂಧವಾದ ದಾಖಲೆಗಳು ಟೀಚಿಂಗ್ ಮ್ಯಾನುವೆಲ್‌ನಲ್ಲಿರಬೇಕು. ಸಾಮಾಜಿಕ, ಭಾವನಾತ್ಮಕ ವಲಯದ ಮೌಲ್ಯಮಾಪನವನ್ನು ವಾರ್ಷಿಕ ಕ್ರೋಡೀಕರಣ ನಮೂನೆಯಲ್ಲಿ ದಾಖಲಿಸಬೇಕು. ಇದಕ್ಕಾಗಿ ನಮೂನೆಯಲ್ಲಿ ಪ್ರತ್ಯೇಕವಾದ ಕಾಲಂಗಳನ್ನು ನೀಡಲಾಗಿದೆ. ವಿದ್ಯಾರ್ಥಿಯ ಕಲಿಕಾ ಪ್ರಗತಿಯ ದಾಖಲೆಯಲ್ಲಿಯೂ ಈ ಸಂಬಂಧವಾದ ಗುಣಾತ್ಮಕವಾದ ದಾಖಲಾತಿ ಇರಬೇಕು.

ಸಾಮಾಜಿಕ – ಭಾವನಾತ್ಮಕ ಮಂಡಲಗಳ ನೈಪುಣ್ಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಸಂಬಂಧಿಸಿ ಅತ್ಯುತ್ತಮವಾದುದನ್ನು ಕಾಲಂನಲ್ಲಿ ದಾಖಲಿಸಬೇಕು. ಉತ್ತಮವಾಗಿ ಪ್ರದರ್ಶಿಸಲ್ಪಡದ ನೈಪುಣ್ಯವನ್ನು ದಾಖಲಿಸಬೇಕಾಗಿಲ್ಲ.

ಹೀಗೆ ವೈಜ್ಞಾನಿಕ ಮಂಡಲದಲ್ಲೂ ಸಾಮಾಜಿಕ ಭಾವನಾತ್ಮಕ ಮಂಡಲದಲ್ಲೂ ಮಗುವಿನ ಉತ್ತಮ ಪ್ರದರ್ಶನವನ್ನು ಮೌಲ್ಯನಿರ್ಣಯಿಸಿ ದಾಖಲಿಸಬೇಕು. ಉತ್ತಮ ಮನೋಭಾವ ಮೂಡಿಬರಲು ಅಗತ್ಯವಾದ ಕಾರ್ಯಗಳನ್ನು ಕೈಗೊಂಡು ಅವನ ಅತ್ಯುತ್ತಮವಾದ ಗ್ರೇಡನ್ನು ಮಾತ್ರ ದಾಖಲಿಸಿದರೆ ಸಾಕು.

ಮೌಲ್ಯಮಾಪನ ಒಂದೇ ನೋಟದಲ್ಲಿ

**ಮೌಲ್ಯಮಾಪನ**

ಸಮೀಪನ : ಕಲಿಕಾ ಸಾಧನೆಗಳಿಗೆ ಒತ್ತು ಕೊಡುವ ಸಮೀಪನ

ನಿರಂತರ ಹಾಗೂ ಸಮಗ್ರವಾದ ಮೌಲ್ಯಮಾಪನ (CCE)

- ವೈಜ್ಞಾನಿಕ ವಲಯ
  - ನಿರಂತರ ಮೌಲ್ಯಮಾಪನ
    - ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನ
    - ಪೋರ್ಟ್‌ಫೋಲಿಯೋ ಮೌಲ್ಯಮಾಪನ
    - ಘಟಕ ಮಟ್ಟದ ಮೌಲ್ಯಮಾಪನ
  - ಅವಧಿ ಮೌಲ್ಯಮಾಪನ
    - ಆಶಯಗಳು ಪ್ರಕ್ರಿಯೆಗಳು ಮೊದಲಾದುವು
- ಸಾಮಾಜಿಕ, ಭಾವನಾತ್ಮಕ ವಲಯ
  1. ವಿಚಾರ ವಿನಿಮಯ ಸಾಮರ್ಥ್ಯ (Communication Skills)
  2. ಅಂತರ್ವ್ಯಕ್ತಿ ನೈಪುಣ್ಯ (Interpersonal Skills)
  3. ಸಹಭಾವ (Empathy)
  4. ಭಾವನೆಗಳೊಂದಿಗೆ ಹೊಂದಿಕೆ (Coping with emotions)
  5. ಮಾನಸಿಕ ಒತ್ತಡದೊಂದಿಗೆ ಹೊಂದಾಣಿಕೆ (Coping with stress)
  6. ಸಮಸ್ಯೆ ಪರಿಹಾರ ಕೌಶಲ (Problem Solving Skills)
  7. ತೀರ್ಮಾನ ಕೈಗೊಳ್ಳುವುದು (Decision making)
  8. ವಿಮರ್ಶಾತ್ಮಕ ಚಿಂತನೆ (Critical thinking)
  9. ಸೃಜನಶೀಲ ಚಿಂತನ ಕೌಶಲ (Creative thinking skills)
  10. ಸ್ವನಿರ್ವಹಣೆ (Self management)

# ಸಮಾಜವಿಜ್ಞಾನ ಕಲಿಕಾ ಸಮೀಪನ

ಸಮಾಜವಿಜ್ಞಾನವೆಂಬುದು ಸಾಮಾಜಿಕ ಪ್ರಗತಿಯ ಮೇಲೆ ಪ್ರಭಾವ ಬೀರುವ ಘಟನೆಗಳು, ಆಶಯಗಳು, ವಿದ್ಯಮಾನಗಳು, ಸಂಸ್ಥೆಗಳು ಇತ್ಯಾದಿಗಳ ಕುರಿತಾದ ಪರಸ್ಪರ ಸಂಬಂಧಿತವಾದ ಹಾಗೂ ಮಾನವ ಕೇಂದ್ರೀಕೃತವಾದ ಅಧ್ಯಯನವಾಗಿದೆ. ಸಮಾಜವಿಜ್ಞಾನ ಅಧ್ಯಯನವು ವ್ಯಕ್ತಿಗಳೊಳಗೆ, ವ್ಯಕ್ತಿ ಮತ್ತು ಸಮಾಜದೊಳಗೆ, ಸಮಾಜ ಮತ್ತು ಪ್ರಕೃತಿಗಳೊಳಗಿನ ಸಂಬಂಧದ ಕುರಿತಾದ ಅನ್ವೇಷಣೆಯಾಗಿದೆ. ಆಶಯವಿನಿಮಯದ ಸೌಕರ್ಯಕ್ಕಾಗಿ ಚರಿತ್ರೆ, ಭೂಗೋಳಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರವೆಂಬ ವಿಭಿನ್ನ ವಿಷಯಗಳಾಗಿ ವರ್ಗೀಕರಿಸುವಾಗಲೂ ಅವುಗಳು ತಮ್ಮೊಳಗಿರುವ ಪರಸ್ಪರ ಸಂಬಂಧವು ಮೇಲೆ ಸೂಚಿಸಲಾದ ಸಂಬಂಧಗಳನ್ನು ವಿಶ್ಲೇಷಿಸಲು ಅನಿವಾರ್ಯವಾಗಿದೆ.

### ಸಮಾಜವಿಜ್ಞಾನ ಕಲಿಕೆ ಯಾಕೆ?

ಸಮಾಜದ ಇದುವರೆಗಿನ ವಿಕಾಸದ ಪರಿಣಾಮಗಳನ್ನು ತಿಳಿಯಲು, ಸಮಾಜವನ್ನು ಉತ್ತಮಪಡಿಸಲಿರುವ ಒಗ್ಗಟ್ಟಿನ ಪರಿಶ್ರಮದಲ್ಲಿ ತನ್ನ ಪಾತ್ರವನ್ನು ತಿಳಿದು ಅದಕ್ಕೆ ತಕ್ಕಂತೆ ಕಾರ್ಯೋನ್ಮುಖರಾಗಲು ಮಕ್ಕಳನ್ನು ಪ್ರಾಪ್ತರನ್ನಾಗಿಸುವುದು ಸಮಾಜವಿಜ್ಞಾನ ಕಲಿಕೆಯ ಉದ್ದೇಶವಾಗಿದೆ. ಸಾಮಾಜಿಕ ಬದಲಾವಣೆಗಳಲ್ಲಿ ಸಹಭಾಗಿಯಾಗುವುದರೊಂದಿಗೆ ಸಮಾಜವನ್ನು ಮುನ್ನಡೆಸುವ ಜವಾಬ್ದಾರಿಯನ್ನು ನೆರವೇರಿಸಲು ವ್ಯಕ್ತಿಗಳನ್ನು ಪ್ರಾಪ್ತರನ್ನಾಗಿಸುವುದೂ ಸಮಾಜವಿಜ್ಞಾನ ಕಲಿಕೆಯ ಉದ್ದೇಶವಾಗಿದೆ. ಸಾಮಾಜಿಕ ಬದಲಾವಣೆಗಳಿಗಾಗಿ ಕಾರ್ಯನಿರತರಾದ ವ್ಯಕ್ತಿಗಳನ್ನು ರೂಪಿಸಲು ಸಮಾಜ ವಿಜ್ಞಾನ ಕಲಿಕೆಯಿಂದ ಸಾಧ್ಯವಾಗಬೇಕು. ಪ್ರಜಾಪ್ರಭುತ್ವ ಪ್ರಜ್ಞೆ, ಜಾತ್ಯತೀತತೆ, ಜಾತ್ಯಾತೀತ ಚಿಂತನೆ, ರಾಷ್ಟ್ರೀಯ ಪ್ರಜ್ಞೆ, ಸಹಿಷ್ಣುತೆ, ಸಹಕಾರ ಮನೋಭಾವ, ಸಂಘಪ್ರಜ್ಞೆ, ಪ್ರತಿಕ್ರಿಯಾ ಸಾಮರ್ಥ್ಯ ಇತ್ಯಾದಿ ಮೌಲ್ಯಗಳನ್ನು ಬೆಳೆಸಲು ಸಮಾಜವಿಜ್ಞಾನ ಕಲಿಕೆಯಿಂದ ಸಾಧ್ಯವಾಗುತ್ತದೆ. ಇವು ಸಮಾಜವಿಜ್ಞಾನ ಕಲಿಕೆಯ ಸಾಮಾನ್ಯ ಉದ್ದೇಶಗಳು ಮೇಲೆ ಸೂಚಿಸಿರುವವುಗಳಾದರೂ ವಿಭಿನ್ನ ವಿಷಯಗಳ ಕಲಿಕಾ ಉದ್ದೇಶಗಳೂ ಕಲಿಕಾ ವಿಧಾನಗಳೂ ಸೂಕ್ಷ್ಮ ಹಂತದಲ್ಲಿ ವಿಭಿನ್ನವಾಗಿದೆ.

ಮಾನವ ಹಾಗೂ ಪ್ರಕೃತಿಗಳೊಳಗಿನ ಸಂಬಂಧವು ಭೂಗೋಳ ಶಾಸ್ತ್ರದ ಪ್ರಧಾನ ಆಶಯವಾಗಿದೆ. ಪ್ರಾಕೃತಿಕ ವಿದ್ಯಮಾನಗಳು ಮಾನವನ ಜೀವನದಲ್ಲಿ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿಯಲು ಮತ್ತು ಮಾನವನ ಹಸ್ತಕ್ಷೇಪವು ಭೂಮಿಯ ವಾತಾವರಣದಲ್ಲಿ ಉಂಟುಮಾಡುವ ಬದಲಾವಣೆಗಳು ಯಾವುವೆಂದು ತಿಳಿಯಲು ಭೂಗೋಳಶಾಸ್ತ್ರವು ಸಹಾಯಕವಾಗಿದೆ. ಇಂತಹ ವಿದ್ಯಮಾನಗಳನ್ನು ನಿರೀಕ್ಷಣೆ ಮಾಡಲು ಹಾಗೂ ವಿಶ್ಲೇಷಿಸಲು ಪರಿಸರ ಸಂರಕ್ಷಣೆ, ಪ್ರಗತಿಶೀಲ ಅಭಿವೃದ್ಧಿ ಎಂಬೀ ಆಶಯಗಳನ್ನು ಸ್ವಾಯತ್ತಗೊಳಿಸಲು ಭೂಗೋಳಶಾಸ್ತ್ರ ಕಲಿಕೆಯಿಂದ ಸಾಧ್ಯವಾಗುತ್ತದೆ.

ಮಾನವನು ತನ್ನ ಜೀವನದಲ್ಲೂ ಪರಿಸರದಲ್ಲೂ ಮಾಡುವ ಹಸ್ತಕ್ಷೇಪಗಳ ಮತ್ತು ಉಂಟುಮಾಡುವ ಬದಲಾವಣೆಗಳ ಸಂಕಲನವೇ ಚರಿತ್ರೆಯಾಗಿದೆ.

ವರ್ತಮಾನ ಕಾಲದ ಸನ್ನಿವೇಶಗಳನ್ನು ಭೂತಕಾಲದ ಹಿನ್ನಲೆಯಲ್ಲಿ ವಿಶ್ಲೇಷಿಸಿ ಭವಿಷ್ಯಕಾಲದ ಕುರಿತು ದೃಷ್ಟಿಕೋನಗಳನ್ನು ರೂಪಿಸಲು ಚರಿತ್ರೆಯ ಕಲಿಕೆಯು ಸಹಾಯಕವಾಗಿವೆ. ಸಾಮಾಜಿಕ ವಿಕಾಸದ ವಿಭಿನ್ನ ಹಂತಗಳಲ್ಲಿ ರೂಪುಗೊಂಡು ಹಾಗೂ ಬದಲಾವಣೆಗಳಿಗೆ ಒಳಗಾದ ಅಧಿಕಾರದ ರಚನೆ, ಆರ್ಥಿಕ ಸಂಬಂಧಗಳು, ವೈಜ್ಞಾನಿಕ ವಲಯಗಳು ಇತ್ಯಾದಿಗಳಿಗೆ ಸಂಬಂಧಿಸಿ ನಿಗಮನಗಳನ್ನು ರೂಪಿಸಲು ಚರಿತ್ರೆಯ ಕಲಿಕೆಯ ಮೂಲಕ ಮಕ್ಕಳಿಗೆ ಸಾಧ್ಯವಾಗುತ್ತದೆ. ವಿಭಿನ್ನ ದೃಷ್ಟಿಕೋನಗಳನ್ನು ಸ್ಪಷ್ಟವಾದ ಸಾಕ್ಷ್ಯಾಧಾರಗಳ ಆಧಾರದಲ್ಲಿ ಮೌಲ್ಯನಿರ್ಣಯಮಾಡಿ ಸ್ವಂತ ದೃಷ್ಟಿಕೋನವನ್ನು ರೂಪಿಸಲು ಸಂದರ್ಭವು ಚರಿತ್ರೆಯ ಕಲಿಕೆಯಿಂದ ಮಗುವಿಗೆ ಲಭಿಸುತ್ತದೆ.

ರಾಜ್ಯಶಾಸ್ತ್ರವು ಜನರು, ರಾಷ್ಟ್ರ, ಆಡಳಿತ ವಿಧಾನ ಇತ್ಯಾದಿಗಳ ಕುರಿತಾದ ಅಧ್ಯಯನವಾಗಿದೆ. ಪೌರರ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಇದರಲ್ಲಿ ಚರ್ಚಿಸಲಾಗಿದೆ. ವಿವಿಧ ಆಡಳಿತ ಕ್ರಮಗಳನ್ನೂ ಅಧಿಕಾರಗಳನ್ನೂ ವಿಶ್ಲೇಷಿಸಲು ಹಾಗೂ ಅವುಗಳನ್ನು ಮಾನವನ ಪ್ರಗತಿಗಾಗಿ ಉಪಯೋಗಿಸುವುದು ಹೇಗೆಂದು ಅರ್ಥೈಸಿಕೊಂಡು ಅಗತ್ಯವಿರುವ ಸಂದರ್ಭಗಳಲ್ಲಿ ಮಧ್ಯಪ್ರವೇಶಿಸಲು ರಾಜ್ಯಶಾಸ್ತ್ರ ಕಲಿಕೆಯು ಮಕ್ಕಳನ್ನು ಪ್ರಾಪ್ತರನ್ನಾಗಿಸುತ್ತದೆ.

ಉತ್ಪಾದನೆ, ವಿತರಣೆ, ಬಳಕೆ, ಸಂಪತ್ತಿನ ವಿತರಣೆ ಎಂಬಿವುಗಳು ಮಾನವರ ಜೀವನದಲ್ಲಿ ಹೇಗೆ ಪ್ರಭಾವ ಬೀರುತ್ತದೆ ಎಂಬುದರ ಕುರಿತಾದ ಕಲಿಕೆಯೇ ಅರ್ಥಶಾಸ್ತ್ರವಾಗಿದೆ. ಭೂಮಿಯಲ್ಲಿರುವ ಸಂಪನ್ಮೂಲಗಳ ನ್ಯಾಯೋಚಿತವಾದ ಹಾಗೂ ವೈಜ್ಞಾನಿಕವಾದ ವಿತರಣೆ ಮತ್ತು ಬಳಕೆಯನ್ನು ಖಾತರಿಪಡಿಸುವ ವಿಧದ ಆರ್ಥಿಕ ದೃಷ್ಟಿಕೋನವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಸಹಾಯಕವಾಗಿದೆ.

ಸಮಾಜಶಾಸ್ತ್ರವು ಸಾಮಾಜಿಕ ಜೀವಿಯಾದ ಮಾನವನ ಸಾಮಾಜಿಕ ಸಂಬಂಧಗಳ ಕುರಿತಾದ ಕಲಿಕೆಯಾಗಿದೆ. ಸಾಮಾಜಿಕ ಸಂಬಂಧಗಳನ್ನು ತಿಳಿದುಕೊಂಡು ಸಾಮಾಜಿಕ ಬದಲಾವಣೆಗಳಲ್ಲಿ ಭಾಗಿಯಾಗಿ ಸಮಾಜವನ್ನು ಮುನ್ನಡೆಸುವಲ್ಲಿ ತನ್ನ ಪಾತ್ರವನ್ನು ತಿಳಿದುಕೊಳ್ಳುವುದೇ ಸಮಾಜಶಾಸ್ತ್ರ ಕಲಿಕೆಯ ಉದ್ದೇಶವಾಗಿದೆ. ತನ್ನನ್ನೊಳಗೊಂಡ ಸಮಾಜದ ಸಮಸ್ಯೆಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯನಿರ್ಣಯ ಮಾಡಿ ಸ್ವ ನಿಲುವುಗಳನ್ನು ರೂಪಿಸಿ ಪ್ರತಿಕ್ರಿಯೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು ಇದು ವಿದ್ಯಾರ್ಥಿಗಳನ್ನು ಪ್ರಾಪ್ತರನ್ನಾಗಿಸುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ಸರಿಯಾದ ಸಾಮಾಜಿಕ ದೃಷ್ಟಿಕೋನ ಮತ್ತು ಪರಿಸರ ಪ್ರಜ್ಞೆಯನ್ನು ಬೆಳೆಸಲು ಸಹಾಯಕವಾದ ತಿಳುವಳಿಕೆಗಳು ಮನೋಭಾವಗಳು, ಮೌಲ್ಯಗಳು ಹಾಗೂ ಕೌಶಲ್ಯಗಳು ಎಂಬಿವುಗಳನ್ನು ಬೆಳೆಸಲು ಸಮಾಜವಿಜ್ಞಾನ ಕಲಿಕೆಯು ಸಹಾಯಕವಾಗಿದೆ.

### ಸಮಾಜವಿಜ್ಞಾನ ಕಲಿಕೆ ಹೇಗೆ?

ಏನನ್ನು ಕಲಿಯಬೇಕು ಎಂಬಂತೆಯೇ ಹೇಗೆ ಕಲಿಯಬೇಕು ಎಂಬುದು ಕೂಡ ಪ್ರಧಾನವಾಗಿದೆ. ಆದಕಾರಣ ಸಮಾಜವಿಜ್ಞಾನ ಕಲಿಕೆಯಲ್ಲಿ ವಿಷಯಕ್ಕೂ ಪ್ರಕ್ರಿಯೆಗೂ ಸಮಾನ ಪ್ರಾಧಾನ್ಯವಿರಬೇಕು.

ಸಮಾಜವಿಜ್ಞಾನ ಕಲಿಕೆಯ ಅಂಗವಾಗಿ ಗಳಿಸಬೇಕಾದ ಪ್ರಧಾನ ಪ್ರಕ್ರಿಯಾ ಸಾಮರ್ಥ್ಯಗಳನ್ನು ಕೆಳಗೆ ಕೊಡಲಾಗಿದೆ.

- ನಿರೀಕ್ಷಣೆ
- ಮಾಹಿತಿ ಸಂಗ್ರಹ

- ವರ್ಗೀಕರಣ
- ಹೋಲಿಕೆ
- ವಿಶ್ಲೇಷಣೆ
- ಸಾಮಾನ್ಯೀಕರಣ
- ನಿಗಮನಗಳನ್ನು ರೂಪಿಸುವುದು
- ಊಹೆ ಮತ್ತು ಪ್ರವಚನ
- ಉಪಕರಣಗಳನ್ನು ಉಪಯೋಗಿಸುವುದು.

ಸಾಮರ್ಥ್ಯಗಳು, ಮನೋಭಾವಗಳು ಮತ್ತು ಮೌಲ್ಯಗಳನ್ನು ಬೆಳೆಸಲು ಸಹಾಯಕವಾದ ಸಂದರ್ಭಗಳು ಮಕ್ಕಳಿಗೆ ಲಭಿಸಬೇಕು. ಗುಂಪು ಚಟುವಟಿಕೆಗಳಿಗೆ ಅನೇಕ ಸಂದರ್ಭಗಳನ್ನೊದಗಿಸಗಿಸಬೇಕು. ಸಾಮಾಜಕ್ಕೆ ಸಂಬಂಧಿಸಿದ ಸಮಸ್ಯೆಗಳು ವಿದ್ಯಮಾನಗಳು ಎಂಬಿವುಗಳಿಗೆ ಸಂಬಂಧಿಸಿದ ಚರ್ಚೆಗಳು, ಅವುಗಳ ಕಾರಣಗಳನ್ನು ಅನ್ವೇಷಣೆ ಮಾಡುವುದು, ಮಾಹಿತಿಗಳನ್ನು ಸಂಗ್ರಹಿಸುವುದು, ವಿಶ್ಲೇಷಿಸುವುದು, ನಿಗಮನಗಳನ್ನು ರೂಪಿಸುವುದು ಇವೇ ಮೊದಲಾದ ಚಟುವಟಿಕೆಗಳನ್ನು ಪಾಠಭಾಗಕ್ಕೆ ಸಂಬಂಧಿಸಿ ಕೈಗೊಳ್ಳಬೇಕು. ಅದಕ್ಕಾಗಿ ಪಾಠಪುಸ್ತಕ ಮತ್ತು ಇತರ ಪ್ರಾಥಮಿಕ – ದ್ವಿತೀಯ ಮೂಲಗಳನ್ನು ಆಶ್ರಯಿಸಬೇಕಾಗಬಹುದು. ಸಮಾಜವಿಜ್ಞಾನ ಕಲಿಕೆಗಾಗಿ ಕೆಳಗೆ ಸೂಚಿಸಲಾದ ಮೂಲಗಳನ್ನು ಉಪಯೋಗಿ ಸಬಹುದು.

- ಪಠ್ಯಪುಸ್ತಕಗಳು
- ಇನ್ನಿತರ ಪುಸ್ತಕಗಳು
- ಪತ್ರಿಕೆಗಳು, ಮಾಸಿಕಗಳು
- ದೃಶ್ಯ ಮಾಧ್ಯಮಗಳು
- ಚರಿತ್ರೆಯ ದಾಖಲೆಗಳು
- ಭೂಪಟಗಳು, ಅಟ್ಲಾಸ್
- ಚಾರಿತ್ರಿಕ ಸ್ಮಾರಕಗಳು
- ಚಿತ್ರಗಳು/ಫೋಟೋಗಳು
- ಸಿನಿಮಾ/ ನಾಟಕ
- ಐ.ಸಿ.ಟಿ. ಸಾಧ್ಯತೆಗಳು ಇತ್ಯಾದಿ.

ಚರಿತ್ರೆ, ಭೂಗೋಳಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಹಾಗೂ ಸಮಾಜಶಾಸ್ತ್ರ ಎಂಬೀ ವಿಷಯಗಳ ಕಲಿಕಾ ಸಾಧನೆಗಳನ್ನು ದೃಢಪಡಿಸುವುದರೊಂದಿಗೆ ಸಮಾಜವಿಜ್ಞಾನದ ಶಾಖೆಗಳೆಂಬ ನೆಲೆಯಲ್ಲಿ ಅವುಗಳ ಪರಸ್ಪರ ಸಂಬಂಧಗಳನ್ನು ವಿಶ್ಲೇಷಣೆಗೆ ಒಳಪಡಿಸಬೇಕು. ಸಮಾಜವಿಜ್ಞಾನ ಕಲಿಕೆಯ ಪ್ರಧಾನ ಉದ್ದೇಶಗಳಾದ ಸಂಘಪ್ರಜ್ಞೆ, ಸಹಕಾರ ಮನೋಭಾವ, ಸಹಿಷ್ಣುತೆ, ಪ್ರಜಾಪ್ರಭುತ್ವ ಪ್ರಜ್ಞೆ, ವಿಮರ್ಶಾತ್ಮಕ ಚಿಂತನೆ, ಪ್ರತಿಕ್ರಿಯಾ ಸಾಮರ್ಥ್ಯ ಇತ್ಯಾದಿಗಳ ವಿಕಾಸಕ್ಕೆ ಅಗತ್ಯವಾದ ಕಲಿಕಾ ಅನುಭವಗಳು ಪ್ರತಿಯೊಂದು ವಿದ್ಯಾರ್ಥಿಗೂ

ಲಭಿಸುವ ರೀತಿಯಲ್ಲಿ ಸಮಾಜವಿಜ್ಞಾನ ಕಲಿಕೆಯ ಯೋಜನೆಯನ್ನು ತಯಾರಿಸಬೇಕು. ಇದಕ್ಕಾಗಿ ವಿವಿಧ ರೀತಿಯ ಕಲಿಕಾತಂತ್ರಗಳನ್ನು ಉಪಯೋಗಿಸಬೇಕು. ಸಮಾಜ ವಿಜ್ಞಾನ ಕಲಿಕೆಗಾಗಿ ಉಪಯೋಗಿಸಬಹುದಾದ ಕೆಲವು ಕಲಿಕಾತಂತ್ರಗಳನ್ನು ಕೆಳಗೆ ಕೊಡಲಾಗಿದೆ.

ಕಲಿಕಾ ತಂತ್ರಗಳು

- ವಿಚಾರಗೋಷ್ಠಿ
- ಗುಂಪು ಚರ್ಚೆ
- ಸಂವಾದ
- ಸಂದರ್ಶನ
- ಬಯಲು ಪ್ರವಾಸ
- ಪ್ರೊಜೆಕ್ಟ್

**ವಿಚಾರಗೋಷ್ಠಿ (ಸೆಮಿನಾರ್)**

ಇದು ಸಮಾಜವಿಜ್ಞಾನ ಕಲಿಕೆಯಲ್ಲಿ ಫಲಪ್ರದವಾಗಿ ಬಳಸಬಹುದಾದ ಕಲಿಕಾತಂತ್ರಗಳಲ್ಲೊಂದಾಗಿದೆ. ಸೆಮಿನಾರ್ ಎಂಬುದು ಒಂದು ವಿಷಯಕ್ಕೆ ಸಂಬಂಧಿಸಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಮಂದಿ ಪ್ರಬಂಧ ತಯಾರಿಸಿ ಎಲ್ಲರ ಮುಂದೆ ಮಂಡಿಸಿ ಚರ್ಚೆಯ ಮೂಲಕ ಸಮಗ್ರಗೊಳಿಸುವ ಒಂದು ಕಲಿಕಾತಂತ್ರವಾಗಿದೆ. ವಿಷಯವು ವಿಶಾಲವಾಗಿದ್ದರೆ ಅದನ್ನು ಹಲವು ಉಪವಿಭಾಗಗಳಾಗಿ ವರ್ಗೀಕರಿಸಲು ಸಾಧ್ಯವಿದೆ. ಆದರೆ ವಿಷಯವು ಸರಳವಾಗಿದ್ದರೆ ಒಬ್ಬರು ಪ್ರಬಂಧವನ್ನು ಮಂಡಿಸಿದರೆ ಸಾಕು. ಉದಾಹರಣೆಗೆ 7ನೇ ತರಗತಿಯಲ್ಲಿ 'ಕಲೆ, ಸಾಹಿತ್ಯ ಹಾಗೂ ವಿಜ್ಞಾನದಲ್ಲಿ ನವೋತ್ಥಾನ ಬೀರಿದ ಪ್ರಭಾವ' ಎಂಬ ಶೀರ್ಷಿಕೆಯಲ್ಲಿ ಒಂದು ಸೆಮಿನಾರನ್ನು ನಡೆಸಲು ಸೂಚಿಸಲಾಗಿದೆ. 7ನೇ ತರಗತಿಯ ಹಂತದಲ್ಲಿ ಮಕ್ಕಳಲ್ಲಿ ಒಬ್ಬರಿಗೇ ಇದರ ಎಲ್ಲ ವಲಯಗಳನ್ನು ಒಳಪಡಿಸಿಕೊಂಡು ಸೆಮಿನಾರ್ ಪ್ರಬಂಧವನ್ನು ಮಂಡಿಸಬಹುದು. ಇದನ್ನೇ ಮೂರು ಮಂದಿಗೆ ಸೆಮಿನಾರ್ ಪ್ರಬಂಧವಾಗಿಯೂ ಮಂಡಿಸಬಹುದು.

- ನವೋತ್ಥಾನವು ಕಲೆಯ ಮೇಲೆ ಬೀರಿದ ಪ್ರಭಾವ
- ಸಾಹಿತ್ಯದಲ್ಲಿ ನವೋತ್ಥಾನ
- ವೈಜ್ಞಾನಿಕ ಕ್ಷೇತ್ರದಲ್ಲಿ ನವೋತ್ಥಾನ

**ಸೆಮಿನಾರಿನ ಹಂತಗಳು**

- ವಿಷಯದ ಆಯ್ಕೆ (ಸ್ವಾಭಾವಿಕವಾಗಿರಬೇಕು)
- ಮಾಹಿತಿಸಂಗ್ರಹ ಮಾಡುವುದು (ಮಾಹಿತಿ ಸಂಗ್ರಹಕ್ಕಾಗಿ ಸಾಮಗ್ರಿಗಳನ್ನು ನೀಡಬೇಕು/ ಎಲ್ಲಿ ಲಭಿಸುತ್ತವೆಯೆಂಬ ತಿಳುವಳಿಕೆಯನ್ನಾದರೂ ನೀಡಬೇಕು)
- ಪ್ರಬಂಧ ತಯಾರಿ
- ಮಂಡನೆ
- ಚರ್ಚೆ

- ಕ್ರೋಡೀಕರಣ
- ವರದಿ ತಯಾರಿ

ಪ್ರತಿಯೊಂದು ಹಂತದಲ್ಲಿಯೂ ಅಧ್ಯಾಪಕರ ಪಾಲ್ಗೊಳ್ಳುವಿಕೆಯು ಅನಿವಾರ್ಯವಾಗಿದೆ. ಕ್ರಮಪ್ರಕಾರವಾಗಿ ಸೆಮಿನಾರನ್ನು ಪೂರ್ತಿಗೊಳಿಸಿದರೆ ಕಲಿಕಾಸಾಧನೆಯನ್ನು ಸಮರ್ಪಕವಾಗಿ ಮಗುವಿಗೆ ತಲುಪಿಸಲು ಈ ತಂತ್ರವು ಯೋಗ್ಯವಾಗಿದೆ.

### ಕಾರ್ಯಯೋಜನೆ (ಪ್ರೊಜೆಕ್ಟ್)

ಪ್ರೊಜೆಕ್ಟ್ ಎಂಬುದು ವೈಜ್ಞಾನಿಕವಾದ ಸಮಸ್ಯಾಪರಿಹಾರದ ಚಟುವಟಿಕೆಗಳಲ್ಲೊಂದಾಗಿದೆ. ತರಗತಿಯ ಚಟುವಟಿಕೆಯ ಅಂಗವಾಗಿ ಉಂಟಾಗುವ ಸಾಮಾನ್ಯವಾದ ಒಂದು ಸಮಸ್ಯೆಯನ್ನು ವೈಜ್ಞಾನಿಕವಾದ ಹಂತಗಳ ಮೂಲಕ ಪೂರ್ತಿಗೊಳಿಸುವ ಪ್ರಕ್ರಿಯೆಯು ನಡೆಯುವುದು. ಸಮಸ್ಯಾ ಪರಿಹಾರಕ್ಕೆ ಅಗತ್ಯವಾದ ಮಾಹಿತಿಸಂಗ್ರಹಕ್ಕೂ, ಕ್ರೋಡೀಕರಣಕ್ಕೂ, ವಿಶ್ಲೇಷಣೆಗೂ ನಿಗಮನ ರೂಪೀಕರಣಕ್ಕೂ ಇಲ್ಲಿ ಸಂದರ್ಭ ಲಭಿಸುತ್ತದೆ.

### ಪ್ರೊಜೆಕ್ಟ್‌ನ ಹಂತಗಳು

- ಸಮಸ್ಯೆಯನ್ನು ಆಯ್ಕೆಮಾಡುವುದು
- ಊಹೆ
- ಮಾಹಿತಿ ಸಂಗ್ರಹ
- ಮಾಹಿತಿಗಳನ್ನು ಕ್ರೋಡೀಕರಿಸುವುದು
- ಕ್ರೋಡೀಕರಿಸಿದ ಮಾಹಿತಿಗಳನ್ನು ವಿಶ್ಲೇಷಿಸುವುದು
- ನಿಗಮನ ರೂಪೀಕರಣ
- ಮಂಡನೆ
- ಪ್ರೊಜೆಕ್ಟ್‌ನ ವರದಿ ತಯಾರಿ

## ಗುಂಪು ಚರ್ಚೆ (Group Discussion)

ಚರ್ಚಿಸಬೇಕಾದ ವಿಷಯವನ್ನು ಗುಂಪಿನಲ್ಲಿ ಮಂಡಿಸುವುದು. ಅದಕ್ಕೆ ಸಂಬಂಧಿಸಿದ ಆಶಯಗಳನ್ನು ಗುಂಪಿನ ಸದಸ್ಯರು ಹಂಚುವುದು. ಗುಂಪಿನ ಅಭಿಪ್ರಾಯವನ್ನು ಕ್ರೋಡೀಕರಿಸಿ ಮಂಡಿಸುವುದು. ಆಶಯಗಳ ವಿನಿಮಯ ತನ್ನ ಸರದಿಯನ್ನು ಕಾದು ನಿಲ್ಲುವುದು ಮುಂತಾದ ಅನೇಕ ಮೌಲ್ಯಗಳನ್ನು ಬೆಳೆಸಲು ಈ ತಂತ್ರವನ್ನು ಉಪಯೋಗಿಸಬಹುದು. ಚರ್ಚೆಯಲ್ಲಿ ಎಲ್ಲ ಸದಸ್ಯರು ಪಾಲ್ಗೊಳ್ಳುತ್ತಾರೆ ಎಂಬುದನ್ನೂ ಕೇವಲ ಕೆಲವರ ಅಮಿತ ಪ್ರಭಾವವಿಲ್ಲವೆಂದೂ ಅಂತಿಮ ಉತ್ಪನ್ನವು ಎಲ್ಲರ ಪರಿಶ್ರಮದ ಫಲವಾಗಿದೆಯೆಂಬುದನ್ನೂ ಅಧ್ಯಾಪಕರು ಖಚಿತಪಡಿಸಬೇಕು. ಎಲ್ಲರಿಗೂ ಮಂಡಿಸಲು ಸಂದರ್ಭವನ್ನೊದಗಿಸಬೇಕು.

## ಸಂವಾದ (Debate)

ಅನುಕೂಲವಾಗಿ ಹಾಗೂ ಪ್ರತಿಕೂಲವಾಗಿ ಅಭಿಪ್ರಾಯವನ್ನು ಹೇಳಲು ಸಾಧ್ಯವಾಗುವ ವಿಷಯಗಳು ಮಾತ್ರವೇ ಸಂವಾದದ ಪರಿಧಿಗೆ ಬರುವುದು. ಸಂವಾದದಲ್ಲಿ ಇತರರು ಮಂಡಿಸುವ ವಾದಗತಿಗಳನ್ನು ಯುಕ್ತಿಪೂರ್ವಕ ಖಂಡಿಸಲು ಸಂದರ್ಭವು ಲಭಿಸುತ್ತದೆ.

**ಹಂತಗಳು**

- ಸೂಕ್ತವಾದ ವಿಷಯದ ಆಯ್ಕೆ
- ಜವಾಬ್ದಾರಿಯ ಹಂಚುವಿಕೆ
- ಮಾಹಿತಿ ಸಂಗ್ರಹ
- ಮೋಡರೇಟರರ ಸಮ್ಮುಖದಲ್ಲಿ ಅನುಕೂಲ ಹಾಗೂ ಪ್ರತಿಕೂಲ ವಾದಗತಿಗಳ ಮಂಡನೆ.
- ಮೋಡರೇಟರ ಕ್ರೋಢೀಕರಣ

## ಸಂದರ್ಶನ (Interview)

ಮಾಹಿತಿ ಸಂಗ್ರಹಕ್ಕೆ ಮತ್ತು ಆಶಯ ರೂಪೀಕರಣಕ್ಕೆ ಫಲಪ್ರದವಾಗಿ ಈ ತಂತ್ರವನ್ನು ಉಪಯೋಗಿಸಬಹುದು. ವಿಷಯವನ್ನು ಆಯ್ಕೆಮಾಡಿ ಸೂಕ್ತ ವ್ಯಕ್ತಿಗಳನ್ನು ಕಂಡುಕೊಳ್ಳುವುದು ಇದರಲ್ಲಿ ಪ್ರಧಾನವಾಗಿದೆ.

ಸಂದರ್ಶನಕ್ಕೆ ಮೊದಲು

- ವಿಷಯದ ಆಯ್ಕೆ.
- ಸೂಕ್ತವಾದ ವ್ಯಕ್ತಿಯನ್ನು ಗುರುತಿಸಿ ಆಮಂತ್ರಿಸುವುದು.
- ಪ್ರಶ್ನೆಗಳನ್ನು ತಯಾರಿಸುವುದು.
- ಸ್ಥಳ ಮತ್ತು ಸಮಯವನ್ನು ನಿರ್ಧರಿಸುವುದು.

ಸಂದರ್ಶನದ ವೇಳೆ

- ಆಮಂತ್ರಿಸಿದ ವ್ಯಕ್ತಿಯನ್ನು ಪರಿಚಯಿಸುವುದು.
- ಪ್ರಶ್ನೆಗಳನ್ನು ಕೇಳುವುದು.
- ಉತ್ತರಗಳನ್ನು ದಾಖಲಿಸುವುದು.
- ಧನ್ಯವಾದ ಸಮರ್ಪಣೆ

ಸಂದರ್ಶನದ ಅನಂತರ

- ವಿಷಯ ಮತ್ತು ಉತ್ತರಗಳನ್ನು ಆಧಾರವಾಗಿರಿಸಿ ಸಂದರ್ಶನದ ವರದಿ ತಯಾರಿ.
- ವರದಿಯ ಮಂಡನೆ.

## ಕಲಿಕಾ ಪ್ರವಾಸ (Field Trip)

ಇದು ನೇರ ಅನುಭವವನ್ನು ಲಭಿಸಲು ಸೂಕ್ತವಾದ ಒಂದು ಕಲಿಕಾತಂತ್ರವಾಗಿದೆ. ವಿವಿಧ ಪ್ರಕ್ರಿಯಾ ಸಾಮರ್ಥ್ಯಗಳ ಮೂಲಕ ಮಗುವನ್ನು ಸಾಗಿಸಲು ಇದರ ಮೂಲಕ ಸಂದರ್ಭ ಲಭಿಸುತ್ತದೆ.

ಪ್ರಾಧಾನ್ಯ

- ಪರಿಸರ ಸಂಬಂಧಿ
- ಮೌಲ್ಯಗಳನ್ನು ಬೆಳೆಸಲು ಸೂಕ್ತ
- ಅನುಭವಗಳನ್ನು ಹಂಚಲು ಸಂದರ್ಭ
- ನೇರವಾದ ಅನುಭವವುಂಟಾಗುತ್ತದೆ

ಹಂತಗಳು

- ಯೋಜನೆ
- ನಿರ್ವಹಣೆ
- ವರದಿ ತಯಾರಿ

ಯೋಜನೆ ತಯಾರಿಸುವ ಸಂದರ್ಭದಲ್ಲಿ ಕಲಿಕಾ ಪ್ರವಾಸವನ್ನು ಫಲಪ್ರದವಾಗಿ ಪೂರ್ತಿಗೊಳಿಸಲು ಅಗತ್ಯವಿರುವ ಎಲ್ಲ ಚಟುವಟಿಕೆಗಳನ್ನು ತಯಾರಿಸಬೇಕು.

- ಹೋಗಬೇಕಾದ ಸ್ಥಳ, ದಿನಾಂಕವನ್ನು ನಿಗದಿಪಡಿಸುವುದು.
- ಒಪ್ಪಿಗೆ ಪಡೆಯುವುದು.
- ಸಂಗ್ರಹಿಸಬೇಕಾದ ಮಾಹಿತಿಗಳನ್ನು ನಿರ್ಧರಿಸುವುದು.
- ಜವಾಬ್ದಾರಿಯ ಹಂಚುವಿಕೆ

ಯಾವೆಲ್ಲ ಯೋಜನೆಗಳನ್ನು ಮಾಡಲಾಗಿದೆಯೋ ಅವುಗಳನ್ನು ನಿರ್ವಹಣೆಯ ಹಂತದಲ್ಲಿ ಜಾರಿಗೊಳಿಸಬೇಕು. ನಿಶ್ಚಯಿಸಲಾದ ವಿಷಯಗಳು/ಪ್ರಕ್ರಿಯೆಗಳು ಸಮಯಬಂಧಿತವಾಗಿ ನಡೆಯುತ್ತಿವೆಯೆಂದು ಈ ಹಂತದಲ್ಲಿ ಖಾತರಿಪಡಿಸಬೇಕು.

ಕ್ಷೇತ್ರ ಸಂದರ್ಶನದ ತರುವಾಯ ಪ್ರತಿಯೊಂದು ಮಗುವೂ ವರದಿಯನ್ನು ತಯಾರಿಸಬೇಕು. ಕಂಡುಕೊಂಡ ಮಾಹಿತಿಗಳನ್ನು ಕ್ರಮಪ್ರಕಾರವಾಗಿ ಸೇರಿಸಲಾಗಿದೆಯೆಂದೂ ಅವುಗಳು ಸತ್ಯಸಂಧವಾಗಿದೆಯೆಂದೂ ಕಲಿಕಾ ಸಾಧನೆಗಳಿಗೆ ಸಂಬಂಧಿಸಿದ ಮಾಹಿತಿಗಳು ಲಭ್ಯವಾಗಿದೆಯೆಂದೂ ಖಾತರಿಪಡಿಸಬೇಕು.

### ಸರ್ವೇ

ಸರ್ವೇಯು ಸಮಾಜವಿಜ್ಞಾನ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಕ್ಕಾಗಿ ಬಳಸಬಹುದಾದ ಕಲಿಕಾತಂತ್ರಗಳಲ್ಲಿ ಒಂದಾಗಿದೆ. ಕ್ಷೇತ್ರಗಳಿಂದ ಮಾಹಿತಿಗಳನ್ನು ಸಂಗ್ರಹಿಸುವ ಮೂಲಕ ವಿದ್ಯಾರ್ಥಿಗೆ ಸ್ವ ಅನುಭವದ ಮೂಲಕ ತಿಳುವಳಿಕೆಯನ್ನು/ಜ್ಞಾನವನ್ನು ಅರ್ಜಿಸಲು ಸಾಧ್ಯವಾಗುತ್ತದೆ. ದೊಡ್ಡ ಗುಂಪುಗಳಿಂದ ಮಾಹಿತಿಗಳನ್ನು ಸಂಗ್ರಹಿಸಲು ಈ ಕಲಿಕಾ ವಿಧಾನವು ಪ್ರಯೋಜನಕಾರಿಯಾಗಿದೆ. ವಿಷಯದ ಸ್ವಭಾವಕ್ಕೆ ಹೊಂದಿಕೊಂಡು ಪ್ರಶ್ನಾವಳಿಯಾಗಿಯೋ ಪಟ್ಟಿ ರೂಪದಲ್ಲಿಯೋ ಸರ್ವೇಫಾರಂ ತಯಾರಿಸಬಹುದು.

## ಬುಲೆಟಿನ್ ಬೋರ್ಡ್

ಕಲಿಕಾ ಚಟುವಟಿಕೆಯ ಅಂಗವಾಗಿ ಸಂಗ್ರಹಿಸುವ ಚಿತ್ರಗಳು, ಪಟ್ಟಿಗಳು, ಗ್ರಾಫ್, ವಾರ್ತಾ ತುಣುಕುಗಳು ಇತ್ಯಾದಿಗಳೆಲ್ಲ ತರಗತಿಯ ಎಲ್ಲ ಮಕ್ಕಳಿಗೆ ಲಭಿಸಿದರೆ ಮಾತ್ರವೇ ಕಲಿಕಾ ಚಟುವಟಿಕೆಗಳನ್ನು ಫಲಪ್ರದವಾಗಿ

ಮುಂದುವರಿಸಲು ಸಾಧ್ಯ. ಹೀಗೆ ಸಂಗ್ರಹಿಸುವವುಗಳನ್ನೆಲ್ಲ ಪ್ರದರ್ಶಿಸಲು ಬುಲೆಟಿನ್ ಬೋರ್ಡ್ ಸಹಾಯಕವಾಗಿದೆ. ನಿರಂತರವಾಗಿ ಸಂಗ್ರಹಿಸುವ ಮತ್ತು ಡೊಕ್ಯುಮಂಟೇಶನ್ ತಯಾರಿಸುವ ಅಭ್ಯಾಸವನ್ನು ರೂಢಿಸಿಕೊಳ್ಳುವಂತೆ ಮಾಡಲು ಬುಲೆಟಿನ್ ಬೋರ್ಡ್ ಸಹಾಯಕವಾಗಿದೆ.

## ಆಲ್ಬಂ ತಯಾರಿ

ಕಾರ್ಯದಕ್ಷತೆಯಿಂದ ಕೂಡಿದ ಸಮಾಜವಿಜ್ಞಾನ ಕಲಿಕೆಗೆ ನಿರಂತರವಾದ ಮಾಹಿತಿ ಸಂಗ್ರಹ ಚಟುವಟಿಕೆಯು ಪ್ರಾಥಮಿಕ ಹಂತದಿಂದಲೇ ಆರಂಭಿಸಬೇಕು. ವಿಭಿನ್ನ ಸಮಾಜವಿಜ್ಞಾನ ವಲಯಗಳಿಗೆ ಸಂಬಂಧಿಸಿದ ಆಲ್ಬಂಗಳನ್ನು ನಿರಂತರವಾಗಿ ವಿಕಾಸಗೊಳಿಸಬೇಕು. ಆಲ್ಬಂ ಎಂಬುದು ದೊಡ್ಡದಾದ ಮತ್ತು ಹೆಚ್ಚು ವೆಚ್ಚದಾಯಕವಾದ ಪುಸ್ತಕವೆಂಬ ಧೋರಣೆಯ ಬದಲಾಗಿ ವಿಷಯದ ಸಾಧ್ಯತೆಗೆ ಹೊಂದಿಕೊಂಡು ಚಿಕ್ಕ ಕಾರ್ಡಿನಿಂದ ಆರಂಭಿಸಿ ಅದನ್ನೊಂದು ಆಲ್ಬಂ ಆಗಿ ವಿಕಾಸಗೊಳಿಸಲು ಸಾಧ್ಯವಿದೆಯೆಂಬ ಸಂದೇಶವನ್ನು ಮಕ್ಕಳಿಗೆ ನೀಡಬೇಕು. ಅಚ್ಚುಕಟ್ಟಾಗಿ ಸಂರಕ್ಷಿಸಿ ಮುಂದಿನ ದಿನಗಳಲ್ಲಿ ಮತ್ತಷ್ಟೂ ವಿಚಾರಗಳನ್ನು ಸೇರಿಸುವಾಗ ಸಮಾಜವಿಜ್ಞಾನಕ್ಕೆ ಸಂಬಂಧಿಸಿದ ಮಾಹಿತಿಗಳ ಸಂಗ್ರಹವನ್ನು ವಿಕಾಸಗೊಳಿಸುವ ಅಭಿರುಚಿಯೆಡೆಗೆ ಮಕ್ಕಳನ್ನು ಸಾಗಿಸಲು ಸಾಧ್ಯವಾಗುವುದು.

### ಮ್ಯಾಗಸಿನುಗಳು, ಭಿತ್ತಿಪತ್ರಿಕೆಗಳು, ಸಂಚಿಕೆಗಳು

ತರಗತಿಯಲ್ಲಿ ನಡೆಸುವ ಚಟುವಟಿಕೆಗಳ ಉತ್ಪನ್ನವೆಂಬ ನೆಲೆಯಲ್ಲಿ ಮ್ಯಾಗಸಿನುಗಳು ಮತ್ತು ಭಿತ್ತಿಪತ್ರಗಳು ರೂಪುಗೊಳ್ಳಬೇಕು. ಇವುಗಳನ್ನು ಜಾಗ್ರತೆಯಿಂದ ಸಂರಕ್ಷಿಸಿಡಬೇಕು. ಅಗತ್ಯವಿದ್ದರೆ ಮುಂದಿನ ಚಟುವಟಿಕೆಗಳಿಗೆ ಅನುಬಂಧವಾಗಿ ಉಪಯೋಗಿಸಬಹುದು. ನಿರಂತರ ಮೌಲ್ಯನಿರ್ಣಯಕ್ಕೆ ಇಂತಹ ಉತ್ಪನ್ನಗಳನ್ನು ಆಯ್ಕೆಮಾಡಬಹುದು. ಇದಕ್ಕೆಲ್ಲ ಮಿಗಿಲಾಗಿ ಬೋಧನಾಶಾಸ್ತ್ರಪರವಾದ ಮತ್ತೊಂದು ಪ್ರಾಧಾನ್ಯವೂ ಇದಕ್ಕಿದೆ. ಪ್ರದರ್ಶಿಸಲು ಹಾಗೂ ಆ ಮೂಲಕ ಅಂಗೀಕಾರವನ್ನು ಗಳಿಸುವಂತಹ ಜಿಜ್ಞಾಸೆಯು ಮಕ್ಕಳ ಸ್ವಭಾವದ ಭಾಗವಾಗಿದೆಯಲ್ಲವೇ. ತನ್ನ ಕಂಡುಕೊಳ್ಳುವಿಕೆಗಳನ್ನು, ಸೃಷ್ಟಿಗಳನ್ನು (ಉತ್ಪನ್ನಗಳನ್ನು) ಪ್ರದರ್ಶಿಸಲು ಹಾಗೂ ಆ ಮೂಲಕ ಸಾಮಾಜದ ಅಂಗೀಕಾರವನ್ನು ಗಳಿಸಲು ಇರುವ ಸಂದರ್ಭವನ್ನು ಮ್ಯಾಗಸಿನುಗಳು ಭಿತ್ತಿಪತ್ರಿಕೆಗಳು ಮತ್ತು ಸಂಚಿಕೆಗಳು ಮಕ್ಕಳಿಗೆ ಒದಗಿಸುತ್ತವೆ.

### ಭೂಪಟ ವಿಶ್ಲೇಷಣೆ

ಭೂಪಟ ವಿಶ್ಲೇಷಣೆಯು ಸಮಾಜವಿಜ್ಞಾನ ಕಲಿಕೆಗೆ ಅತ್ಯಂತ ಅಗತ್ಯವಾಗಿದೆ. ಭೂಗೋಳ ಶಾಸ್ತ್ರ ಮತ್ತು ಚರಿತ್ರೆಗೆ ಸಂಬಂಧಿಸಿದ ಆಶಯ ರೂಪೀಕರಣಕ್ಕೆ ಸಂಬಂಧಿಸಿದ ಭೂಪಟಗಳನ್ನು ವಿಶ್ಲೇಷಿಸುವುದು ಸಮಾಜವಿಜ್ಞಾನ ಕಲಿಕೆಗೆ ತುಂಬಾ ಸಹಾಯಕವಾಗಿದೆ. ಭೂಪಟಗಳಲ್ಲಿ ಪ್ರಕೃತಿದತ್ತವಾದ ಮತ್ತು ಮಾನವನಿರ್ಮಿತವಾದ ಭೂಮಾಹಿತಿಗಳನ್ನು ಸೇರಿಸಲಾಗಿದೆ. ಇವುಗಳನ್ನು ಸೂಚಕಗಳನ್ನುಪಯೋಗಿಸಿ ತಿಳಿದುಕೊಂಡು ಇಂತಹ ಮಾಹಿತಿಗಳೊಳಗಿನ ಪರಸ್ಪರ ಸಂಬಂಧವನ್ನು ಕಂಡುಹಿಡಿಯಬೇಕಾಗಿದೆ. ಇದಕ್ಕಾಗಿ ಪಠ್ಯಪುಸ್ತಕದಲ್ಲಿರುವ ಭೂಪಟಗಳು, ಭಿತ್ತಿ ಭೂಪಟಗಳು, ಅಟ್ಲಾಸ್ ಮುಂತಾದುವುಗಳನ್ನು ಒದಗಿಸಬೇಕು. ಪ್ರತಿಯೊಂದು ಮಗುವಿಗೂ ಭೂಪಟವನ್ನು ನಿರೀಕ್ಷಣೆ ಮಾಡಲು ಸಂದರ್ಭವು ಲಭಿಸಿದೆಯೆಂದು ಖಾತರಿಪಡಿಸಬೇಕು. ಏನನ್ನು ನಿರೀಕ್ಷಣೆ ಮಾಡಬೇಕೆಂದೂ ವಿಶ್ಲೇಷಿಸಬೇಕೆಂದೂ ಸ್ಪಷ್ಟವಾದ ನಿರ್ದೇಶನವನ್ನು ಅಧ್ಯಾಪಕರು ನೀಡಬೇಕು. ಗುಂಪಿನಲ್ಲಿ ಕಂಡುಹಿಡಿದ ಮಾಹಿತಿಗಳು ಮತ್ತು ರೂಪಿಸಿದ ನಿಗಮನಗಳನ್ನು ಮಂಡಿಸಿ ಕ್ರೋಡೀಕರಿಸಬೇಕು. ನಿರೀಕ್ಷಣೆ

ಮಾಡಿ ಹಾಗೂ ವಿಶ್ಲೇಷಿಸಿ ಆಶಯಗಳನ್ನು ರೂಪಿಸಲು ಭೂಪಟ ವಿಶ್ಲೇಷಣೆಯು ಪ್ರಧಾನವಾದೊಂದು ಉಪಾಧಿಯಾಗಿದೆ.

ಪ್ರತಿಯೊಂದು ಕಲಿಕಾ ಚಟುವಟಿಕೆಯ ಪ್ರಕ್ರಿಯೆ ಮತ್ತು ರೂಪುಗೊಳ್ಳುವ ಉತ್ಪನ್ನವನ್ನು ಪ್ರತಿಯೊಂದು ಮಗುವೂ ನೋಟುಪುಸ್ತಕದಲ್ಲಿ ದಾಖಲಿಸಬೇಕು. ಸಂಚಿಕೆ, ಆಲ್ಬಂ, ಇತರ ಸಂಗ್ರಹಗಳನ್ನು ಪ್ರತ್ಯೇಕವಾಗಿ ತಯಾರಿಸಬೇಕು. ನೋಟುಪುಸ್ತಕ ಮತ್ತು ಇಂತಹ ಉತ್ಪನ್ನಗಳನ್ನೊಳಗೊಂಡಿರುವವುಗಳೇ ಪ್ರತಿಯೊಂದು ಮಗುವಿನ ಪೋರ್ಟ್‌ಫೋಲಿಯೋ ಆಗಿರುತ್ತದೆ.

## ಸಮಾಜ ವಿಜ್ಞಾನ ಪ್ರಯೋಗಾಲಯ

ನಿರೀಕ್ಷಣೆ, ಮಾಹಿತಿಸಂಗ್ರಹ, ವಿಶ್ಲೇಷಣೆ ಹಾಗೂ ನಿಗಮನ ರೂಪೀಕರಣ ಎಂಬಿವು ಸಾಮಾನ್ಯವಾಗಿ ಸಮಾಜವಿಜ್ಞಾನ ಕಲಿಕೆಯಲ್ಲಿ ಅಳವಡಿಸುವ ವಿಧಾನಗಳಾಗಿವೆ. ಕಲಿಕೆಯ ಅಂಗವಾಗಿ ಮಕ್ಕಳಿಗೆ ಭೂಪಟ, ಚಾರ್ಟ್, ಪಟ್ಟಿ ಎಂಬಿವುಗಳಲ್ಲದೆ ಇಂಟರ್‌ನೆಟ್ ಸೌಕರ್ಯವನ್ನೂ ವ್ಯಾಪಕವಾಗಿ ಉಪಯೋಗಿಸಬೇಕಾಗಿದೆ. ಸಮಾಜವಿಜ್ಞಾನ ಪ್ರಯೋಗಾಲಯವೆಂಬ ಆಶಯವು ಮೇಲೆ ಸೂಚಿಸಲಾದ ಎಲ್ಲ ಸೌಕರ್ಯಗಳನ್ನೊಳಗೊಂಡ ವೇದಿಕೆಯಾಗಿದೆ.

ಶಾಲೆಯ ಯಾವುದಾದರೊಂದು ಕೋಣೆಯನ್ನು ಸಮಾಜವಿಜ್ಞಾನ ಪ್ರಯೋಗಾಲಯವಾಗಿ ಸಿದ್ಧಪಡಿಸಬೇಕು. ವಿಭಿನ್ನ ಮಾದರಿಯ ಭೂಪಟಗಳು, ಚಾರ್ಟುಗಳು, ಪಟ್ಟಿಗಳು, ಗ್ರಾಫ್‌ಗಳು, ಚಿತ್ರಗಳು, ಚಾರಿತ್ರಿಕ ಅವಶೇಷಗಳು, ವಿಶೇಷವಾದ ವಿಚಾರಗಳು ಇತ್ಯಾದಿಗಳ ಸಂಗ್ರಹ, ಕಲಿಕೆಯ ಅಂಗವಾಗಿ ಮಕ್ಕಳು ಸಂಗ್ರಹಿಸುವ ಸಾಮಗ್ರಿಗಳು, ಕಂಪ್ಯೂಟರ್, ಔಈಉ ಪ್ರೋಜೆಕ್ಟರ್ ಎಂಬಿವುಗಳನ್ನು ಸೂಕ್ತವಾದ ರೀತಿಯಲ್ಲಿ ಸಮಾಜ ವಿಜ್ಞಾನ ಪ್ರಯೋಗಾಲಯದಲ್ಲಿ ಕ್ರಮೀಕರಿಸಬೇಕು.

ಕಲಿಕೆಯ ಅಂಗವಾಗಿ ಪ್ರಯೋಗಾಲಯದಲ್ಲಿ ಕಲಿಕಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಲು ಮತ್ತು ಸ್ವ ಅನುಭವವನ್ನು ಗಳಿಸಲು ಮಕ್ಕಳಿಗೆ ಸಂದರ್ಭವನ್ನೊದಗಿಸಬೇಕು.

## ಸಮಾಜ ವಿಜ್ಞಾನ ಕ್ಲಬ್

ಸಮಾಜ ವಿಜ್ಞಾನ ಕ್ಲಬ್ಬುಗಳ ಮೂಲಕ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಲು ಸಹಾಯಕವಾದ ಚಟುವಟಿಕೆಗಳನ್ನು ಆಯೋಜಿಸಬೇಕು. ತರಗತಿ ಕೋಣೆಯಲ್ಲಿ ಮಾತ್ರ ಹುದುಗಿಕೊಳ್ಳದೆ ಸಾರ್ವಜನಿಕರಿಗೂ ಪ್ರಯೋಜನಕಾರಿಯಾಗುವಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಧಾನ್ಯವನ್ನು ನೀಡಬೇಕು. ಇಂತಹ ಚಟುವಟಿಕೆಗಳನ್ನು ಆಯೋಜಿಸುವಾಗ ಸಾರ್ವಜನಿಕರನ್ನೂ ಅದರಲ್ಲಿ ಭಾಗವಹಿಸುವಂತೆ ಮಾಡುವುದು ಉಚಿತವಾಗಿದೆ. ಕ್ಲಬ್ಬಿನ ಚಟುವಟಿಕೆಗಳಿಗೆ ಸಮಾಜವಿಜ್ಞಾನದ ಅಧ್ಯಾಪಕರು ನೇತೃತ್ವವನ್ನು ನೀಡುವಾಗ ಗಮನಿಸಬೇಕಾದುದೇನೆಂದರೆ ಅದನ್ನು ಜಾರಿಗೊಳಿಸುವಾಗ ಮಕ್ಕಳಿಗೆ ನೇತೃತ್ವವನ್ನು ನೀಡಬೇಕು. ಹಾಗಾದರೆ ಮಾತ್ರವೇ ತರಗತಿಯಲ್ಲಿ ಮಾಡುವ ಚಟುವಟಿಕೆಗಳ ಸರಿಯಾದ ಉದ್ದೇಶವನ್ನು ಈಡೇರಿಸಲು ಸಾಧ್ಯ.

■ ತರಗತಿಯಲ್ಲಿ ಕೈಗೆತ್ತಿಕೊಂಡು ಜಾರಿಗೊಳಿಸಬಹುದಾದ ಕೆಲವು ಚಟುವಟಿಕೆಗಳು

- ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ದಿನಾಚರಣೆಗಳು
- ಪ್ರದರ್ಶನಗಳು
- ಸ್ಪರ್ಧೆಗಳು
- ಸಂದರ್ಶನಗಳು/ಚರ್ಚೆಗಳು

ಪ್ರಾದೇಶಿಕ ಸಂಪನ್ಮೂಲಗಳನ್ನು (ಮಾನವ ಸಂಪನ್ಮೂಲ, ನೈಸರ್ಗಿಕ ಸಂಪನ್ಮೂಲ, ಮಾನವ ನಿರ್ಮಿತವಾದ ಸಂಪನ್ಮೂಲ) ಸಾಧ್ಯವಿರುವಷ್ಟು ಉಪಯೋಗಿಸಲಿರುವ ಸಂದರ್ಭವನ್ನು ತರಗತಿಯ ಚಟುವಟಿಕೆಗಳ ಮೂಲಕ ಲಭ್ಯವಾಗುವಂತೆ ಮಾಡಬೇಕು. ಸಮಾಜ ವಿಜ್ಞಾನ ಕ್ಲಬ್ಬಿನ ಚಟುವಟಿಕೆಗಳು ಯಾಂತ್ರಿಕವಲ್ಲದ ಹಾಗೂ ವೈವಿಧ್ಯದಿಂದೊಡಗೂಡಿದ ಚಟುವಟಿಕೆಗಳಿಂದ ಸಂಪದ್ಭರಿತವಾಗಿರಬೇಕು.

### ಪಠ್ಯಪುಸ್ತಕ ಮತ್ತು ವಿನಿಮಯ

ಪಠ್ಯಪುಸ್ತಕವು ವಿದ್ಯಾರ್ಥಿಯ ಪ್ರಧಾನ ಕಲಿಕಾ ಸಾಮಾಗ್ರಿಯಾಗಿದೆಯಲ್ಲವೇ. ಸಮಾಜ ವಿಜ್ಞಾನ ತರಗತಿಯ ಕಲಿಕೆಯು ಕೇವಲ ವಿವರಣೆಯ ಆಧಾರದಲ್ಲಿ ಆಗಿರಬಾರದು. ಪಠ್ಯಪುಸ್ತಕವು ನಿರೀಕ್ಷಣೆ, ಪರೀಕ್ಷಿಸುವಿಕೆ, ಹೋಲಿಕೆ, ವಿಶ್ಲೇಷಣೆ, ನಿಗಮನ ರೂಪೀಕರಣ ಇತ್ಯಾದಿ ಪ್ರಕ್ರಿಯೆಗಳಿಗೆ ಸಹಾಯಕವಾದ ಪ್ರೇರಣೆ ಮತ್ತು ಸೂಚನೆಯನ್ನು ನೀಡುವ ಪ್ರಧಾನ ಉಪಾಧಿಯಾಗಿದೆ. ಸ್ವತಃ ಕಲಿಕೆಗೆ ಪ್ರೇರೇಪಿಸುವ, ಸಹಾಯಕವಾದ ವಿಧದಲ್ಲಿ ಇದನ್ನು ಉಪಯೋಗಿಸಬೇಕು. ಪಠ್ಯಪುಸ್ತಕವು ಸಮಾಜವಿಜ್ಞಾನದ ಆಶಯಗಳನ್ನು ಜೀವನದೊಂದಿಗೆ ಜೊತೆಗೂಡಿಸುವುದಕ್ಕಿರುವ ಅನೇಕ ಉಪಾದಿಗಳಲ್ಲೊಂದಾಗಿದೆ. ಮಕ್ಕಳಲ್ಲಿ ಬೆಳೆಸಬೇಕಾದ ಸಾಮರ್ಥ್ಯಗಳು, ಮೌಲ್ಯಗಳು. ಆಶಯಗಳು ಹಾಗೂ ತೀರ್ಮಾನಗಳು ಇತ್ಯಾದಿಗಳ ಆಧಾರದಲ್ಲಿ ಪ್ರತಿಯೊಂದು ಮಗುವಿಗೂ ಸಮರ್ಪಕವಾಗಿ ಪಾಲ್ಗೊಳ್ಳಲು ಸಾಧ್ಯವಾಗುವ ಕಲಿಕಾ ಸನ್ನಿವೇಶಗಳನ್ನೂ ಅನುಭವಗಳನ್ನೂ ಅಧ್ಯಾಪಕರು ಸಿದ್ಧಪಡಿಸಬೇಕು. ಕಲಿಕಾ ಸಾಧನೆಗಳನ್ನು ಖಚಿತಪಡಿಸುವ ನೈತಿಕ ಜವಾಬ್ದಾರಿಯು ಅಧ್ಯಾಪಕರಿಗಿದೆ.

### ಅಧ್ಯಾಪಕರ ಪಠ್ಯ

ಅಧ್ಯಾಪಕರ ಪಠ್ಯವು ಪ್ರತಿಯೊಂದು ವಿದ್ಯಾರ್ಥಿಗೂ ಕಲಿಕಾ ಸಾಧನೆಗಳನ್ನು ಕರಗತ ಮಾಡಿಕೊಳ್ಳಲು ಸಾಧ್ಯವಾಗುವ ರೀತಿಯಲ್ಲಿ ಸಮಾಜವಿಜ್ಞಾನ ತರಗತಿಯನ್ನು ನಡೆಸಲು ಅಧ್ಯಾಪಕರಿಗೆ ಸಹಾಯವನ್ನೀಯುತ್ತದೆ. ಒಂದು ಪಾಠಭಾಗದ ಮೂಲಕ ಮಗುವಿಗೆ ಲಭಿಸಬೇಕಾದ ಸಾಮರ್ಥ್ಯಗಳು, ಆಶಯಗಳು, ತಿಳುವಳಿಕೆಗಳು, ಮನೋಭಾವಗಳು ಹಾಗೂ ಮೌಲ್ಯಗಳಳನ್ನು ಕಂಡುಹಿಡಿದು ಅದಕ್ಕನುಗುಣವಾಗಿ ಕಲಿಕಾ ಚಟುವಟಿಕೆಗಳನ್ನು ಆಯೋಜಿಸಿ ಜಾರಿಗೊಳಿಸಲು ಮತ್ತು ಕಾರ್ಯದಕ್ಷತೆಯಿಂದ ಮೌಲ್ಯನಿರ್ಣಯ ಮಾಡಲು ಸಹಾಯಕವಾಗುವ ಒಂದು ಉಪಾಧಿಯಾಗಿ ಅಧ್ಯಾಪಕರ ಪಠ್ಯವನ್ನು ವಿನಿಯೋಗಿಸಬೇಕು.

### ಯೋಜನೆ

ಯಾವುದೇ ಒಂದು ಸಂಸ್ಥೆಯ/ಉದ್ಯೋಗದ ಉದ್ದೇಶದ ಈಡೇರಿಕೆಯು ವೈಜ್ಞಾನಿಕವಾದ ಯೋಜನೆಯನ್ನು ಆಶ್ರಯಿಸಿಕೊಂಡಿದೆ. ಔಪಚಾರಿಕ ವಿದ್ಯಾಭ್ಯಾಸದ ವಿಚಾರದಲ್ಲಿ ಇದು ಅತ್ಯಧಿಕ ಪ್ರಸಕ್ತಿಯನ್ನು ಪಡೆದಿದೆ. ಫಲಪ್ರದವಾದ ಕಲಿಕೆಯು ಸಾಧ್ಯವಾಗಬೇಕಾದರೆ ವಿದ್ಯಾಭ್ಯಾಸ ಮನೋವಿಜ್ಞಾನ ಸಿದ್ಧಾಂತಗಳ ಹಾಗೂ ಬೋಧನಾಶಾಸ್ತ್ರ ಪರವಾದ ದೃಷ್ಟಿಕೋನಗಳ ಆಧಾರದಲ್ಲಿರುವ ಯೋಜನೆಯು ಅನಿವಾರ್ಯವಾಗಿದೆ. ಕಾರ್ಯದಕ್ಷತೆಯಿಂದ ಕೂಡಿದ ಕಲಿಕಾ ವಾತಾವರಣವನ್ನು ಒದಗಿಸುವುದರ ಮುಖ್ಯ ಶಿಲ್ಪಿ ಎಂಬ ನೆಲೆಯಲ್ಲಿ ಅಧ್ಯಾಪಕರಿಗಾಗಿದೆಯಲ್ಲವೇ ಪ್ರಥಮ ಸ್ಥಾನ.

ಕಲಿಕಾ ಸಾಧನೆಗಳನ್ನು ಗುರಿಯಾಗಿಟ್ಟುಕೊಂಡು ಚಟುವಟಿಕಾಧಾರಿತ ಮತ್ತು ಪ್ರಕ್ರಿಯಾಬಂಧಿತವಾಗಿ ನಡೆಯಬೇಕಾದ ಸಮಾಜವಿಜ್ಞಾನ ಕಲಿಕಾ ಬೋಧನ ಪ್ರಕ್ರಿಯೆಯ ಯೋಜನೆಯನ್ನು ಅತ್ಯಂತ ಜಾಗ್ರತೆಯಿಂದ ಮಾಡಬೇಕಾಗಿದೆ. ಪಠ್ಯಯೋಜನೆಯ ವಿನಿಮಯದಲ್ಲಿ ಘಟಕ ಯೋಜನೆ ಮತ್ತು ದೈನಂದಿನ ಯೋಜನೆಯು ಫಲಪ್ರದವಾದ ಜಾರಿಗೊಳ್ಳಬೇಕಾಗಿದೆ.

## ಘಟಕ ಯೋಜನೆ

ಘಟಕದ ಹೆಸರು :

ತರಗತಿ :

ಸಮಯ :

| ಆಶಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಮಗ್ರಿಗಳು | ಕಲಿಕಾ ಸಾಧನೆಗಳು | ಮೌಲ್ಯಗಳು/ ಮನೋಭಾವಗಳು | ಮೌಲ್ಯ ನಿರ್ಣಯ |
|---|---|---|---|---|---|
| | | | | | |

## ಘಟಕ ಯೋಜನೆ

ಪ್ರತಿಯೊಂದು ಘಟಕದ ಸಮಗ್ರ ಯೋಜನೆಯನ್ನು ತಯಾರಿಸಬೇಕು. ಉದ್ದೇಶಿಸುವ ಕಲಿಕಾ ಸಾಧನೆಗಳು, ಕಲಿಕಾತಂತ್ರಗಳು, ತಯಾರಿಸಬೇಕಾದ ಕಲಿಕಾ ಉತ್ಪನ್ನಗಳು, ಕಲಿಕಾ ಸಾಮಗ್ರಿಗಳು, ಮೌಲ್ಯನಿರ್ಣಯ, ಸಮಯ ಮುಂತಾದುವುಗಳನ್ನು ಮೊದಲೇ ನಿಶ್ಚಯಿಸಬೇಕು. ಸಮಾಜವಿಜ್ಞಾನದ ಘಟಕ ಯೋಜನೆಗೆ ಉಪಯೋಗಿಸಬಹುದಾದ ಫಾರ್ಮೇಟನ್ನು ಕೆಳಗೆ ಕೊಡಲಾಗಿದೆ.

## ದೈನಂದಿನ ಯೋಜನೆ

ಘಟಕ ಯೋಜನೆಯ ಆಧಾರದಲ್ಲಿ ತರಗತಿಯಲ್ಲಿ ಪ್ರತಿಯೊಂದು ದಿನವೂ ಏನನ್ನು ಮಾಡಬೇಕೆಂದು ಮೊದಲೇ ನಿಶ್ಚಯಿಸಿ ಅಗತ್ಯವಾದ ತಯಾರಿಗಳನ್ನು ಮಾಡಬೇಕು. ಇದಕ್ಕಾಗಿ ವಿವರವಾದ ದೈನಂದಿನ ಯೋಜನೆಯನ್ನು ತಯಾರಿಸಬೇಕು. ಕಲಿಕಾ ಸಾಧನೆಗಳನ್ನು ಮುಂದಿಟ್ಟುಕೊಂಡು ಕಲಿಕಾ ಚಟುವಟಿಕೆಗಳಲ್ಲಿ ಸೂಕ್ಷ್ಮವಾದ ಮಾಹಿತಿಗಳನ್ನು ಸೇರಿಸಿಕೊಂಡು ದೈನಂದಿನ ಯೋಜನೆಯನ್ನು ತಯಾರಿಸಬೇಕು. ಮಕ್ಕಳು ಮಾಡಬೇಕಾದ ವಿಚಾರಗಳು, ಅಧ್ಯಾಪಕರ ಪಾತ್ರ, ರೂಪುಗೊಳ್ಳಬೇಕಾದ ಆಶಯಗಳು, ಮೌಲ್ಯಗಳು, ಮನೋಭಾವಗಳು, ಅಗತ್ಯವುಳ್ಳ ಕಲಿಕಾ ಸಾಮಗ್ರಿಗಳಂತಹ  ವಿಚಾರಗಳು ಇದರಲ್ಲಿ ಒಳಗೊಳ್ಳಬೇಕು. ಪ್ರತಿಯೊಂದು ಕಲಿಕಾ ಚಟುವಟಿಕೆಯ ಅನಂತರವೂ ಮಕ್ಕಳ ಪ್ರತಿಕ್ರಿಯೆಗಳನ್ನು, ಸಾಧನೆಗಳನ್ನು ಹಾಗೂ ಇತಿಮಿತಿಗಳನ್ನು ದಾಖಲಿಸಬೇಕು. ಇದರ ಆಧಾರದಲ್ಲಿ ಮುಂದಿನ ಕಲಿಕಾ ಚಟುವಟಿಕೆಗಳನ್ನು ತೀರ್ಮಾನಿಸಬೇಕು. ಸಮಾಜವಿಜ್ಞಾನದಲ್ಲಿ  ತಯಾರಿಸಿದ ದೈನಂದಿನ ಯೋಜನೆಯನ್ನು ಕೆಳಗೆ ಕೊಡಲಾಗಿದೆ.  ಅದನ್ನು ಗಮನಿಸುವಿರಲ್ಲವೇ.

# ವಾರ್ಷಿಕ ಪಾಠಯೋಜನೆ 2015–16

## ಸಮಾಜವಿಜ್ಞಾನ – ತರಗತಿ 10

| ತಿಂಗಳು | ಸಮಾಜವಿಜ್ಞಾನ I | ಸಮಾಜವಿಜ್ಞಾನ II |
|---|---|---|
| ಜೂನ್ | ಜಗತ್ತನ್ನು ಪರಿವರ್ತಿಸಿದ ಕ್ರಾಂತಿಗಳು<br>ಇಪ್ಪತ್ತನೇ ಶತಮಾನದ ಜಗತ್ತು | ಋತುಭೇದಗಳು ಮತ್ತು ಸಮಯ |
| ಜುಲೈ | ಇಪ್ಪತ್ತನೇ ಶತಮಾನದ ಜಗತ್ತು<br>ಸಾರ್ವಜನಿಕ ಆಡಳಿತ (ಮುಂದುವರಿಕೆ) | ಮಾರುತಗಳ ಮೂಲಗಳನ್ನು ಹುಡುಕಿ<br>ಭಾರತದಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿ |
| ಆಗಸ್ಟ್ | ಬ್ರಿಟಿಷರ ಶೋಷಣೆ ಹಾಗೂ ಪ್ರತಿಭಟನೆಗಳು | ಭಾರತದಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿ (ಮುಂದುವರಿಕೆ) |
| **ಒಂದನೇ ಕಾಲುವಾರ್ಷಿಕ ಮೌಲ್ಯಮಾಪನ** | | |
| ಸೆಪ್ಟಂಬರ್ | ಸಂಸ್ಕೃತಿ ಹಾಗೂ ರಾಷ್ಟ್ರೀಯತೆ<br>ಹೋರಾಟ ಮತ್ತು ಸ್ವಾತಂತ್ರ್ಯ | ಭೂಮೇಲ್ಮೈ ವಿಶ್ಲೇಷಣೆ<br>ಭೂಪಟಗಳ ಮೂಲಕ |
| ಒಕ್ಟೋಬರ್ | ಹೋರಾಟ ಮತ್ತು ಸ್ವಾತಂತ್ರ್ಯ(ಮುಂದುವರಿಕೆ)<br>ರಾಷ್ಟ್ರ ಹಾಗೂ ರಾಜ್ಯಶಾಸ್ತ್ರ | ಸಾರ್ವಜನಿಕ ವೆಚ್ಚ ಮತ್ತು<br>ಸಾರ್ವಜನಿಕ ಆದಾಯ |
| ನವೆಂಬರ್ | ರಾಷ್ಟ್ರ ಹಾಗೂ ರಾಜ್ಯಶಾಸ್ತ್ರ (ಮುಂದುವರಿಕೆ)<br>ಸ್ವಾತಂತ್ರ್ಯನಂತರ ಭಾರತ | ಆಕಾಶ ಕಣ್ಣುಗಳು ಮತ್ತು<br>ಜ್ಞಾನದ ವಿಶ್ಲೇಷಣೆ |
| ಡಿಸೆಂಬರ್ | ಪೌರ ಪ್ರಜ್ಞೆ | ವೈವಿಧ್ಯಗಳ ಭಾರತ |
| **ಎರಡನೇ ಕಾಲುವಾರ್ಷಿಕ ಮೌಲ್ಯಮಾಪನ** | | |
| ಜನವರಿ | ಕೇರಳವು ಆಧುನಿಕತೆಯ ಕಡೆಗೆ | ಭಾರತದ ಸಂಪನ್ಮೂಲಗಳು<br>ಆರ್ಥಿಕ ಸಂಸ್ಥೆಗಳು ಮತ್ತು ಸೇವೆಗಳು |
| ಫೆಬ್ರವರಿ | ಸಮಾಜಶಾಸ್ತ್ರ ಕಲಿಕೆಗೊಂದು ಮುನ್ನುಡಿ | ಬಳಕೆಗಾರ; ಸಂತೃಪ್ತಿ<br>ಮತ್ತು ಸಂರಕ್ಷಣೆ |

## ಚರಿತ್ರೆ – ಸಮೀಪನ

ಚರಿತ್ರೆಗೆ ಸಂಬಂಧಿಸಿದ ಐದು ಅಧ್ಯಾಯಗಳನ್ನು ಎಂಟನೇ ತರಗತಿಯ ಪಾಠಪುಸ್ತಕದಲ್ಲಿ ಒಳಪಡಿಸಲಾಗಿದೆ. ಪ್ರಾಚೀನ ಚರಿತ್ರೆಗೆ ಸಂಬಂಧಿಸಿ ಐದನೇ ತರಗತಿಯಲ್ಲಿರುವ ಆಶಯಗಳಿಗಿಂತ ಸ್ವಲ್ಪ ಉನ್ನತ ಹಂತದ ವಾಸ್ತವಿಕತೆಗಳು, ತಿಳುವಳಿಕೆಗಳನ್ನು ಈ ಮಜಲಿನಲ್ಲಿ ಸೇರಿಸಲಾಗಿದೆ.

ಎಂಟನೇ ತರಗತಿಯ ಚರಿತ್ರೆ ಪಾಠಭಾಗಗಳ ಹೂರಣಕ್ಕೆ ಸಂಬಂಧಿಸಿದ ಸಮೀಪನಗಳು ಈ ಕೆಳಗಿನಂತಿವೆ.

- ಐದನೇ ತರಗತಿಯಲ್ಲಿರುವ ಚರಿತ್ರೆ ಭಾಗಗಳ ಸುರುಳಿಯಾಗಿ ಸ್ವಲ್ಪ ಉನ್ನತ ಹಂತದ ವಾಸ್ತವಿಕತೆಗಳು ಹಾಗೂ ಆಶಯಗಳನ್ನು ಎಂಟನೇ ತರಗತಿಯಲ್ಲಿ ಒಳಪಡಿಸಲಾಗಿದೆ.
- ಚರಿತ್ರೆಗೆ ಅನುಗುಣವಾದ ಪ್ರಕ್ರಿಯೆಗಳನ್ನು ಪರಿಗಣಿಸಿಕೊಂಡು ಪಾಠಗಳನ್ನು ತಯಾರಿಸಲಾಗಿದೆ. ಚರಿತ್ರೆಯ ಪ್ರತಿಯೊಂದು ಕಾಲದಲ್ಲಿಯೂ ಅದಕ್ಕೆ ಸಮೀಪನದ ಮುಂದುವರಿಕೆಯೆಂಬ ದೃಷ್ಟಿಕೋನದಲ್ಲಿ ಪಾಠಗಳನ್ನು ತಯಾರಿಸಲಾಗಿದೆ.
- ಚರಿತ್ರೆಯ ಮೂಲಗಳನ್ನೂ ಪುರಾವೆಗಳನ್ನೂ ಆಧಾರವಾಗಿರಿಸಿ ಚರಿತ್ರೆಯ ವಾಸ್ತವಾಂಶಗಳನ್ನು ಮಂಡಿಸುವ ಸಮೀಪನವನ್ನು ಸ್ವೀಕರಿಸಲಾಗಿದೆ.
- ಸಮಕಾಲೀನ ಚರಿತ್ರಾನ್ವೇಷಣೆಗಳನ್ನೂ ನೂತನ ಕಂಡುಹಿಡಿತಗಳನ್ನೂ ಹೂರಣದಲ್ಲಿ ಸೇರಿಸಲಾಗಿದೆ.
- ಕೇರಳದ ಚರಿತ್ರೆ, ಭಾರತದ ಚರಿತ್ರೆ, ಜಾಗತಿಕ ಚರಿತ್ರೆ, ಎಂಬಂತೆ ಚರಿತ್ರೆಯನ್ನು ಸಮಗ್ರವಾಗಿ ಒಳಪಡಿಸಲಾಗಿದೆ.
- ಚಿತ್ರ, ಚಾರ್ಟ್, ಪುರಾವೆ, ರೆಫರೆನ್ಸ್ ಮೊದಲಾದವುಗಳನ್ನು ಉಪಯೋಗಿಸಿ ಚರಿತ್ರೆಯ ಪಾಠಗಳ ಮಂಡನೆಯನ್ನು ಮಾಡಲಾಗಿದೆ.
- ಚಟುವಟಿಕಾಧಾರಿತವೂ ಪ್ರಕ್ರಿಯಾ ಸಂಬಂಧಿಯೂ ಆಗಿ ಚರಿತ್ರೆಯನ್ನು ಮಂಡಿಸಲು ಸಾಧ್ಯವಾಗುವ ರೀತಿಯಲ್ಲಿ ಹೂರಣವನ್ನು ಮಂಡಿಸಲಾಗಿದೆ.
- ಪ್ರತಿಯೊಂದು ಕಾಲದಲ್ಲೂ ಉಂಟಾದ ಮಾನವ ಜೀವನದ ಪ್ರಗತಿ ಹಾಗೂ ಚರಿತ್ರೆಯ ವಿಕಾಸವನ್ನು ವಿಶ್ಲೇಷಣೆ ಮಾಡಲು ಮಕ್ಕಳು ಪ್ರಾಪ್ತರಾಗುವ ವಿಧದಲ್ಲಿ ಚರಿತ್ರೆಯ ಪಾಠಗಳ ಚಟುವಟಿಕೆಗಳನ್ನು ಕ್ರಮೀಕರಿಸಲಾಗಿದೆ.
- ಪುರಾತತ್ವ ಶಾಸ್ತ್ರ, ಮಾನವಶಾಸ್ತ್ರ, ನಾಣ್ಯಗಳ ಅಧ್ಯಯನ, ಶಿಲಾಲಿಖಿತ ಅಧ್ಯಯನ ಹೀಗೆ ವಿಭಿನ್ನ ಅಧ್ಯಯನ ಶಾಖೆಗಳನ್ನು ಬಳಸಿಕೊಂಡು ಚರಿತ್ರೆಯ ಪಾಠಗಳನ್ನು ರೂಪಿಸಲಾಗಿದೆ.

## ರಾಜಕೀಯ ಶಾಸ್ತ್ರ – ಕಲಿಕಾ ಸಮೀಪನ

ನಮ್ಮ ಸರಕಾರ ಎಂಬ ಅಧ್ಯಾಯವನ್ನು ರಾಜಕೀಯ ಶಾಸ್ತ್ರದ ಕಲಿಕೆಯ ಭಾಗವಾಗಿ ಒಂಭತ್ತನೇ ತರಗತಿಯಲ್ಲಿ ಒಳಪಡಿಸಲಾಗಿದೆ.

- ರಾಜಕೀಯ ಶಾಸ್ತ್ರದ ಕಲಿಕೆಯ ಕುರಿತಾದ ಕೆಲವು ಮೂಲಭೂತ ತಿಳುವಳಿಕೆಯನ್ನು ಪ್ರತಿಯೊಬ್ಬ ಪೌರನೂ ಹೊಂದಿರಬೇಕೆಂಬ ಸಮೀಪನವನ್ನು ರಾಜಕೀಯ ಶಾಸ್ತ್ರದ ಕಲಿಕೆಗಾಗಿ ಸ್ವೀಕರಿಸಲಾಗಿದೆ.
- ರಾಜಕೀಯ ತತ್ವಶಾಸ್ತ್ರವೆಂಬ ದೃಷ್ಟಿಯಲ್ಲಿ ಪ್ರಜಾಪ್ರಭುತ್ವದ ಕುರಿತು ಅದರೊಂದಿಗೆ ಸಂವಿಧಾನ, ಸಂವಿಧಾನಾತ್ಮಕ ಸಂಸ್ಥೆಗಳು ಎಂಬಿವುಗಳ ಕುರಿತೂ ತಿಳುವಳಿಕೆಯನ್ನು ಗಳಿಸಲು ಸಾಧ್ಯವಾಗುವ ರೀತಿಯಲ್ಲಿ ಐದನೇ ತರಗತಿಯಿಂದಲೇ ರಾಜಕೀಯ ಶಾಸ್ತ್ರದ ಹೂರಣವನ್ನು ಅಭಿವೃದ್ಧಿಪಡಿಸ ಲಾಗಿದೆ.
- ಸರಕಾರದ ವಿವಿಧ ಘಟಕಗಳ ಕುರಿತಾಗಿ ಎಂಟನೇ ತರಗತಿಯ ನಮ್ಮ ಸರಕಾರ ಎಂಬ ಅಧ್ಯಾಯದಲ್ಲಿ ಹೇಳಲಾಗಿದೆ.
- ಅಧಿಕೃತವಾದ ಆಕರಗ್ರಂಥಗಳನ್ನುಪಯೋಗಿಸಿ ಪಾಠವನ್ನು ತಯಾರಿಸಲಾಗಿದೆ.
- ಕಲಿಕಾ ಚಟುವಟಿಕೆಗಳಿಗೂ ಜ್ಞಾನ ನಿರ್ಮಾಣಕ್ಕೂ ಸೂಕ್ತವಾದ ಪ್ರಕ್ರಿಯೆಗಳನ್ನು ಪಾಠದಲ್ಲಿ ಸೂಚಿಸಲಾಗಿದೆ.
- ನಿರಂತರ ಹಾಗೂ ಅನುಕ್ರಮವಾದ ವಿಕಾಸವನ್ನು ಖಚಿತಪಡಿಸುವ ವಿಧದಲ್ಲಿ ರಾಜಕೀಯ ಶಾಸ್ತ್ರದ ಹೂರಣವನ್ನು ಸಂಯೋಜಿಸಲಾಗಿದೆ.

## ಸಮಾಜಶಾಸ್ತ್ರ – ಕಲಿಕಾ ಸಮೀಪನ

ಸಾಮಾಜಿಕ ಸಂಘಟನೆ ಹಾಗೂ ಸಾಮಾಜಿಕ ನಿಯಂತ್ರಣ ಎಂಬ ಅಧ್ಯಾಯವನ್ನು ಎಂಟನೇ ತರಗತಿಯಲ್ಲಿ ಸಮಾಜಶಾಸ್ತ್ರ ಕಲಿಕೆಯ ಭಾಗವಾಗಿ ಒಳಪಡಿಸಲಾಗಿದೆ.

- ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಪ್ರಾಥಮಿಕ ತಿಳುವಳಿಕೆಗಳನ್ನು ಖಚಿತಪಡಿಸಲು ಸಾಧ್ಯವಾಗುವ ರೀತಿಯಲ್ಲಿ ಎಂಟನೇ ತರಗತಿಯ ವರೆಗಿನ ಸಮಾಜಶಾಸ್ತ್ರ ಪಾಠಗಳನ್ನು ಅಭಿವೃದ್ಧಿಪಡಿಸಲಾಗಿದೆ.
- ಮಾನವನ ಸಾಮಾಜಿಕ ಜೀವನವನ್ನೂ ಸಾಮಾಜೀಕರಣವನ್ನೂ ಸ್ಪಷ್ಟಪಡಿಸುವ ಆಶಯಗಳನ್ನು ಸಮಾಜಶಾಸ್ತ್ರ ಕಲಿಕೆಯಲ್ಲಿ ಒಳಪಡಿಸಲಾಗಿದೆ.
- ಸಮಾಜಶಾಸ್ತ್ರದ ಸಮಕಾಲೀನ ಅಧ್ಯಯಗಳನ್ನೂ ತಿಳುವಳಿಕೆಗಳನ್ನೂ ಪಾಠದಲ್ಲಿ ಸೇರಿಸಲಿರುವ ಗರಿಷ್ಠ ಪ್ರಯತ್ನವನ್ನು ಮಾಡಲಾಗಿದೆ.
- ಸಾಮಾಜಿಕ ಪರಸ್ಪರ ಹೊಂದಾಣಿಕೆ ಹಾಗೂ ಸಾಮಾಜಿಕ ನಿಯಂತ್ರಣದ ಔಚಿತ್ಯವನ್ನೂ ಅನಿವಾರ್ಯತೆಯನ್ನೂ ಹೂರಣದ ಭಾಗವಾಗಿ ಸೇರಿಸಲಾಗಿದೆ.
- ಮಕ್ಕಳಲ್ಲಿ ಸಂಘಪ್ರಜ್ಞೆಯನ್ನೂ ನಡತೆಯ ವಿಧಾನಗಳನ್ನೂ ಮೌಲ್ಯಗಳನ್ನು ಉಂಟುಮಾಡುವಂತಹ ಹೂರಣವನ್ನು ಪ್ರಕ್ರಿಯಾಧಾರಿತವಾಗಿ ಒಳಪಡಿಸಲಾಗಿದೆ.

## ಭೂಗೋಳ ಶಾಸ್ತ್ರ – ಸಮೀಪನ

9ನೇ ತರಗತಿಯಲ್ಲಿ 5 ಯೂನಿಟ್ಟುಗಳನ್ನು ಭೂಗೋಳ ಶಾಸ್ತ್ರಕ್ಕೆ ಸಂಬಂಧಿಸಿದ ಪಾಠಗಳಿಗಾಗಿ ನೀಡಲಾಗಿದೆ. ಭೂಪಟಗಳ ಕಲಿಕೆ, ಭೂಮಿಯ ಹೊದಿಕೆ, ಭೌಮರಹಸ್ಯಗಳನ್ನು ಹುಡುಕಿ, ಭೂಮಿಯಲ್ಲಿನ ಜಲ ಎಂಬಿವುಗಳಾಗಿವೆ.

ಒಂಭತ್ತನೇ ತರಗತಿಯಲ್ಲಿರುವ ಭೂಗೋಳಶಾಸ್ತ್ರ ಯೂನಿಟ್ಟುಗಳ ಸಾಮಾನ್ಯ ವಿಶೇಷತೆಗಳನ್ನು ಕೆಳಗೆ ಕೊಡಲಾಗಿದೆ. ಈ ಯೂನಿಟ್ಟುಗಳಿಗೆ ಸಂಬಂಧಿಸಿದ ಕೆಲವು ಸಾಮಾನ್ಯ ನಿರೀಕ್ಷಣೆಗಳನ್ನೂ ಕೆಳಗೆ ನೀಡಲಾಗಿದೆ.

- ♦ ಗೃಹಾಂತರಿಕ್ಷದಿಂದ ಹೊರಬಂದು ಸುತ್ತುಮುತ್ತಲಿನ ಪರಿಸರವನ್ನು ಅರ್ಥಪೂರ್ಣವಾಗಿ ವೀಕ್ಷಿಸುವ ಎಂಟನೇ ತರಗತಿಯ ಮಗುವಿನ ಜಿಜ್ಞಾಸೆಯನ್ನು ಪೂರ್ಣವಾಗಿ ಪರಿಹರಿಸುವ ರೀತಿಯಲ್ಲಿ ಯೂನಿಟ್ಟುಗಳ ಹೂರಣವನ್ನು ಬೆಸೆಯಲಾಗಿದೆ.
- ♦ ವಿಕಾಸದತ್ತ ಸಾಗುವ ಭೂಗೋಳಶಾಸ್ತ್ರ ಎಂಬ ದೃಷ್ಟಿಕೋನಕ್ಕೆ ಒತ್ತನ್ನು ನೀಡಿ, ಭೂಗೋಳಶಾಸ್ತ್ರದ ವಿವಿಧ ಆಶಯಗಳನ್ನು ಸರಳವಾಗಿ ಪ್ರತಿಪಾದಿಸುವ ರೀತಿಯಲ್ಲಿ ಎಲ್ಲ ಯೂನಿಟ್ಟುಗಳನ್ನು ಕ್ರಮೀಕರಿಸಲಾಗಿದೆ.
- ♦ ಚಿತ್ತಾಕರ್ಷಕವಾದ ಚಿತ್ರ, ಪಟ್ಟಿ ಮೊದಲಾದವುಗಳನ್ನು ಸುಂದರವಾಗಿ ನೀಡಿರುವುದು ಆಶಯಗ್ರಹಣಕ್ಕೆ ತುಂಬಾ ಸಹಕಾರಿಯಾಗಿದೆ.
- ♦ ಕೆಳಗಿನ ತರಗತಿಗಳಲ್ಲಿ ಪ್ರತಿಪಾದಿಸಿರುವ ಆಶಯಗಳಿಗೆ ಸುರುಳಿಯನ್ನು ದೃಢಪಡಿಸುವಂತಹ ರಚನಾ ವಿಧಾನವನ್ನು ಸ್ವೀಕರಿಸಲಾಗಿದೆ.
- ♦ ಪ್ರಕ್ರಿಯಾಧಾರಿತ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಹುದುಗಿರುವ ಕಲಿಕೆ ಎಂಬಿವುಗಳನ್ನು ಸರಿಯಾಗಿ ಸಮನ್ವಯಗೊಳಿಸುವಂತಹ ರಚನಾ ವಿಧಾನವನ್ನು ಸಾಮಾನ್ಯವಾಗಿ ಸ್ವೀಕರಿಸಲಾಗಿದೆ.
- ♦ ಯೂನಿಟ್ಟುಗಳ ಕೊನೆಯಲ್ಲಿ ಸ್ವಮೌಲ್ಯನಿರ್ಣಯಕ್ಕಿರುವ ಚೆಕ್‌ಲಿಸ್ಟ್‌ಗಳನ್ನು ನೀಡಲಾಗಿದೆ.
- ♦ ಪ್ರತಿಯೊಂದು ಯೂನಿಟ್ಟಿನ ಕೊನೆಯಲ್ಲಿ ಯೂನಿಟ್ಟಿಗೆ ಸಂಬಂಧಿಸಿ ಮಗುವಿಗೆ ತಲುಪಿಸಬೇಕಾದ ಸಂದೇಶವನ್ನೂ ಕೊಡಲಾಗಿದೆ.
- ♦ ಪ್ರಕೃತಿಯಲ್ಲಿರುವ ವೈವಿಧ್ಯಗಳನ್ನು ಸ್ವೀಕರಿಸಲೂ ಪ್ರಕೃತಿ ರಕ್ಷಣೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲೂ ಇಂತಹ ಚಟುವಟಿಕೆಗಳಿಗೆ ಪೂರಕವಾದ ಮನೋಭಾವವು ಮಕ್ಕಳಲ್ಲಿ ರೂಪುಗೊಳಿಸಲಿರುವ ಪ್ರಜ್ಞಾಪೂರ್ವಕವಾದ ಪ್ರಯತ್ನವನ್ನು ಯೂನಿಟ್ಟುಗಳ ಮೂಲಕ ನಡೆಸಲಾಗಿದೆ.

## ಅರ್ಥಶಾಸ್ತ್ರ – ಕಲಿಕಾ ಸಮೀಪನ

ಅರ್ಥಶಾಸ್ತ್ರ ಚಿಂತನೆಗಳು, ಭಾರತ ಮತ್ತು ಆರ್ಥಿಕ ಯೋಜನೆ ಎಂಬೀ ಅಧ್ಯಾಯಗಳನ್ನು ಅರ್ಥಶಾಸ್ತ್ರದ ಭಾಗವಾಗಿ ಒಂಭತ್ತನೇ ತರಗತಿಯಲ್ಲಿ ಒಳಪಡಿಸಲಾಗಿದೆ.

- ಅರ್ಥಶಾಸ್ತ್ರದ ಮೂಲಭೂತ ಆಶಯಗಳು, ಚಿಂತನೆಗಳು, ಮೂಲಭೂತ ಆರ್ಥಿಕ ಸಮಸ್ಯೆಗಳು ಇತ್ಯಾದಿಗಳನ್ನು ಅರ್ಥಶಾಸ್ತ್ರ ಚಿಂತನೆಗಳು ಎಂಬ ಅಧ್ಯಾಯದಲ್ಲಿ ಒಳಪಡಿಸಲಾಗಿದೆ.
- ಅರ್ಥ ವ್ಯವಸ್ಥೆಯ ಮೂಲಭೂತ ಸಮಸ್ಯೆಗಳಾದ ಯಾವುದು? ಹೇಗೆ? ಯಾರಿಗಾಗಿ ಉತ್ಪಾದಿಸಬೇಕು ಎಂಬುದನ್ನು ಪಾಠದಲ್ಲಿ ಚರ್ಚಿಸುತ್ತೇವೆ.
- ಅರ್ಥಶಾಸ್ತ್ರವು ಮಾನವ ಸಂಪನ್ಮೂಲ ಸಾಮರ್ಥ್ಯದ ವಿನಿಯೋಗದ ಕುರಿತಾದ ಅಧ್ಯಯನವಾಗಿದೆ ಎಂಬ ದೃಷ್ಟಿಕೋನದಲ್ಲಿ ಆಶಯಗಳನ್ನು ರೂಪಿಸಲಾಗಿದೆ.
- ಪಾಶ್ಚಾತ್ಯ ಅರ್ಥಶಾಸ್ತ್ರ ಚಿಂತಕರ ಹೊರತಾಗಿ ಭಾರತೀಯ ಅರ್ಥಶಾಸ್ತ್ರ ಚಿಂತನೆಗಳನ್ನು ಹೂರಣದಲ್ಲಿ ಸೇರಿಸಲಾಗಿದೆ.
- ಆರ್ಥಿಕ ಯೋಜನೆ, ಅಭಿವೃದ್ಧಿ ಪ್ರಕ್ರಿಯೆ, ಯೋಜನೆಯ ಪ್ರಾಧಾನ್ಯ, ಯೋಜನೆಯ ಮೈಲುಗಲ್ಲುಗಳನ್ನು ಹೂರಣದಲ್ಲಿ ಒಳಪಡಿಸಲಾಗಿದೆ.

## ಕಲಿಕಾ ಸಾಧನೆ

ಮಗು ಗಳಿಸಿದ ಸಾಮರ್ಥ್ಯ, ಜ್ಞಾನ, ಮೌಲ್ಯಗಳು, ಮನೋಭಾವ ಇತ್ಯಾದಿಗಳನ್ನು ಮೌಲ್ಯಮಾಪನಗೊಳಿಸಲು ಸಾಧ್ಯ. ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ಏನನ್ನು ಪಡೆದುಕೊಂಡೆ ಎಂದು ಮಗುವಿಗೂ ಏನನ್ನು ವಿನಿಮಯ ಮಾಡಿದೆನೆಂದು ಅಧ್ಯಾಪಕರಿಗೂ ಹಾಗೂ ಮಗುವಿಗುಂಟಾದ ಕಲಿಕಾ ಪ್ರಗತಿಯ ಕುರಿತು ಹೆತ್ತವರಿಗೂ ಕಲಿಕಾ ಸಾಧನೆಗಳ ಪ್ರಸ್ತಾವನೆಯ ಮೂಲಕ ಮೌಲ್ಯನಿರ್ಣಯಿಸಲು ಸಾಧ್ಯ. ಪ್ರತಿಯೊಂದು ಅಧ್ಯಾಯದ ಎಲ್ಲಾ ಕಲಿಕಾ ಸಾಧನೆಗಳನ್ನು ಮಗು ಗಳಿಸಿದೆಯೆಂದು ಖಾತರಿಪಡಿಸಿದ ನಂತರವೇ ಅನಂತರದ ಅಧ್ಯಾಯವನ್ನು ಆರಂಭಿಸಬೇಕು. ಎಲ್ಲಾ ವಿದ್ಯಾರ್ಥಿಗಳಿಗೂ ಕಲಿಕಾ ಸಾಧನೆಗಳನ್ನು ಗಳಿಸಲು ಸಾಧ್ಯವಾಗದಿದ್ದಲ್ಲಿ ಪರಿಹಾರ ಭೋಧನಾ ಪ್ರಕ್ರಿಯೆಯ ಮೂಲಕ ವ್ಯತ್ಯಸ್ತವಾದ ಕಲಿಕಾ ತಂತ್ರಗಳನ್ನು ಉಪಯೋಗಿಸಿಕೊಂಡು ಪ್ರಯತ್ನವನ್ನು ಮುಂದುವರಿಸಬೇಕು. ಅಧ್ಯಾಯದಲ್ಲಿ ಸೂಚಿಸಿರುವುದಕ್ಕಿಂತಲೂ ಹೊರತಾದ ಕಲಿಕಾ ಸಾಧನೆಗಳನ್ನು ಪ್ರತಿಭಾಶಾಲಿಗಳಾದ ವಿದ್ಯಾರ್ಥಿಗಳಿಗಾಗಿ ಅಧ್ಯಾಪಕರು ರೂಪಿಸಬೇಕು.

## ಕಲಿಕಾ ಚಟುವಟಿಕೆಗಳು

ಸಮಾಜ ವಿಜ್ಞಾನದ ವಿಷಯಗಳ ಕಲಿಕೆಯು ಆಕರ್ಷಕ ಹಾಗೂ ಆಸಕ್ತಿದಾಯಕವಾಗುವಂತೆ ಮಾಡಲು ವಿಭಿನ್ನವಾದ ಹಲವಾರು ಕಲಿಕಾ ಚಟುವಟಿಕೆಗಳನ್ನು ನಾವು ಉಪಯೋಗಿಸಬಹುದಾಗಿದೆ. ಸೆಮಿನಾರ್, ಡಿಬೇಟ್, ಗುಂಪುಚರ್ಚೆ, ಸಂವಾದ, ಸರ್ವೇ, ಪ್ರೋಜೆಕ್ಟ್, ಸಿಂಪೋಸಿಯಂ, ವಾರ್ತಾ ವಿಶ್ಲೇಷಣೆ, ಚಿತ್ರವಿಶ್ಲೇಷಣೆ, ಪಟ್ಟಿ ವಿಶ್ಲೇಷಣೆ, ವಾರ್ತಾ ಚಿತ್ರಗಳ ಆಲ್ಬಂ, ಕೊಲಾಶ್, ಫ್ಲೋಚಾರ್ಟ್ ಸಂಗ್ರಹ ಹಾಗೂ ವಿಶ್ಲೇಷಣೆ, ಭೂಪಟ ಕಲಿಕೆ, ಬಯಲು ಪ್ರವಾಸ, ಮ್ಯೂಸಿಯಂ ಸಂದರ್ಶನ, ನ್ಯೂಸ್‌ರೀಡಿಂಗ್, ಪ್ರಾದೇಶಿಕ (ಸ್ಥಳೀಯ) ಚರಿತ್ರೆ ಅನ್ವೇಷಣೆ, ಮೋಡೆಲ್ ಪಾರ್ಲಿಮೆಂಟ್, ಕ್ವಿಜ್, ರೋಲ್‌ಪ್ಲೇ  ವೀಡಿಯೋ ಪ್ರದರ್ಶನ, ವಿಶ್ಲೇಷಣೆ, ಸಂದರ್ಶನ ಹೀಗೆ ನೂತನವೂ ಭಾಗವಹಿಸುವಿಕೆಗೆ ಅನುಕೂಲಕರವೂ ಅದ ಹಲವಾರು ಕಲಿಕಾತಂತ್ರಗಳನ್ನು ಉಪಯೋಗಿಸಬಹುದು.

ಮಕ್ಕಳ ಕಲಿಕಾ ಶೈಲಿ ಹಾಗೂ ಕಲಿಕಾ ವೇಗಗಳಲ್ಲಿರುವ ವ್ಯತ್ಯಾಸಗಳು, ಶಾಲೆಯ ಭೌತಿಕ ಹಾಗೂ ಸಾಮಾಜಿಕ ಸ್ಥಿತಿಗತಿ, ಸಮಯ ಇತ್ಯಾದಿಗಳನ್ನು ಪರಿಗಣಿಸಿಕೊಂಡು ಸೂಕ್ತವಾದ ಕಲಿಕಾ ಚಟುವಟಿಕೆಗಳನ್ನು ಆಯೋಜಿಸಬೇಕು. ಚಟುವಟಿಕೆಗಳಲ್ಲಿ ಕಲಿಕಾ ವಿಮುಖತೆ (Process monotony) ಉಂಟುಮಾಡುವುದಿಲ್ಲವೆಂದು ಖಚಿತಪಡಿಸುವುದು ಅನಿವಾರ್ಯವಾಗಿದೆ.

## ಸಮಾಜ ವಿಜ್ಞಾನದಲ್ಲಿ ನಿರಂತರ ಹಾಗೂ ಸಮಗ್ರವಾದ ಮೌಲ್ಯನಿರ್ಣಯ

ಸಮಾಜ ವಿಜ್ಞಾನದಲ್ಲಿ ನಿರಂತರವೂ ಸಮಗ್ರವೂ ಆದ ಮೌಲ್ಯನಿರ್ಣಯ ಕ್ರಮವನ್ನು ಸ್ವೀಕರಿಸಲಾಗಿದೆ. ಮೌಲ್ಯನಿರ್ಣಯ ಪ್ರಕ್ರಿಯೆಯು ಕಲಿಕೆಯೊಂದಿಗೆ ನಡೆಯಬೇಕಿದೆ. ಕಲಿಕಾ ಸಾಧನೆಗಳು ಮಕ್ಕಳಿಗೆ ಗಳಿಸಲು ಸಾಧ್ಯವಿರುವಂತಹದ್ದಾಗಿರಬೇಕು

ಕಲಿಕೆಯು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾದುದರಿಂದ ಮೌಲ್ಯನಿರ್ಣಯ ಪ್ರಕ್ರಿಯೆಯೂ ನಿರಂತರವಾಗಿರಬೇಕು. ವಿದ್ಯಾರ್ಥಿಯ ವೈಜ್ಞಾನಿಕ, ಸಾಮಾಜಿಕ, ಹಾಗೂ ಭಾವನಾತ್ಮಕ ವಲಯಗಳ ಮೌಲ್ಯನಿರ್ಣಯವೇ ಸಮಗ್ರವಾದ ಮೌಲ್ಯನಿರ್ಣಯ ಎಂದು ಅರ್ಥೈಸಬಹುದು.

ಸಮಾಜ ವಿಜ್ಞಾನದಲ್ಲಿ ಕಲಿಕಾ ಪ್ರಕ್ರಿಯೆಯ ಮೌಲ್ಯನಿರ್ಣಯ, ಕಲಿಕೋತ್ಪನ್ನಗಳ ಮೌಲ್ಯನಿರ್ಣಯ,ಘಟಕ ಮಟ್ಟದ ಮೌಲ್ಯನಿರ್ಣಯ ಎಂಬೀ ರೀತಿಯಲ್ಲಿ ಮೌಲ್ಯನಿರ್ಣಯ ನಡೆಯುತ್ತಿರಬೇಕು. ಕಲಿಕಾ ಪ್ರಕ್ರಿಯೆಯ ಮೌಲ್ಯನಿರ್ಣಯದ ಭಾಗವಾಗಿ ನಿರ್ದಿಷ್ಟವಾದ ಸೂಚಕಗಳನ್ನು ಉಪಯೋಗಿಸಿಕೊಂಡು ತರಗತಿಯ ಎಲ್ಲಾ ಚಟುವಟಿಕೆಗಳ ಮೌಲ್ಯನಿರ್ಣಯಿಸಬೇಕು.

ಪಾಲ್ಗೊಳ್ಳುವಿಕೆ, ಅಶಯಗ್ರಹಿಕೆ, ಸಾಮರ್ಥ್ಯ, ಮಂಡನೆ, ದಾಖಲಿಸುವುದು ಇತ್ಯಾದಿ ಸೂಚಕಗಳನ್ನುಪಯೋಗಿಸಿಕೊಂಡು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲ ಕಲಿಕಾ ಚಟುವಟಿಕೆಗಳನ್ನು ಮೌಲ್ಯನಿರ್ಣಯಿಸಬಹುದು.


## ಕಾನ್‌ಸೆಪ್ಟ್ ಮೇಪ್

ಪ್ರತಿಯೊಂದು ಅಧ್ಯಾಯದಲ್ಲೂ ಕೊಟ್ಟಿರುವ ಪಾಠಭಾಗಗಳನ್ನು ಆಧಾರವಾಗಿಸಿಕೊಂಡು ಕಾನ್‌ಸೆಪ್ಟ್‌ಮೇಪ್ ತಯಾರಿಸಲಾಗಿದೆ. ಇದು ಅಧ್ಯಾಯದಲ್ಲಿ ಚರ್ಚಿಸಲ್ಪಡುವ ಅಶಯಗಳ ಸಂಕ್ಷಿಪ್ತವಾದ ಚಿತ್ರಣವಾಗಿದೆ. ಪಾಠಭಾಗದಲ್ಲಿರುವ ವಿವಿಧ ಆಶಯ ವಲಯಗಳು ಹಾಗೂ ಅವುಗಳ ನಡುವಿನ ಪರಸ್ಪರ ಸಂಬಂಧ ಮತ್ತು ಅವುಗಳ ಮುಂದುವರಿಕೆಯನ್ನು ಸ್ಪಷ್ಟಪಡಿಸಲು ಕಾನ್‌ಸೆಪ್ಟ್‌ಮೇಪ್ ತುಂಬಾ ಪ್ರಯೋಜನಕರವಾಗಬಹುದು. ಸಮಗ್ರ ಯೋಜನೆ ಹಾಗೂ ದೈನಂದಿನ ಯೋಜನೆಯಲ್ಲೂ ಈ ರೀತಿಯ ಕಾನ್‌ಸಪ್ಟ್‌ಮೇಪ್‌ಗಳನ್ನು ಉಪಯೋಗಿಸಬಹುದು.

## ಚೆಕ್‌ಲಿಸ್ಟ್

ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ಸ್ವಮೌಲ್ಯಮಾಪನದ ಒಂದು ಚೆಕ್‌ಲಿಸ್ಟ್‌ನ್ನು ನೀಡಲಾಗಿದೆ. ಅಧ್ಯಾಯದ ಅಶಯಗಳ ಕಲಿಕೆಯ ನಂತರ ಮಕ್ಕಳಲ್ಲಿ ಯಾವೆಲ್ಲಾ ತಿಳುವಳಿಕೆಗಳು ರೂಪುಗೊಂಡಿವೆಯೆಂದೂ ಏನೆಲ್ಲಾ ಕಂಡುಕೊಳ್ಳಲು ಸಾಧ್ಯವಾಯಿತೆಂದೂ ಯಾವುದನ್ನೆಲ್ಲಾ ವಿವರಿಸಲೂ ವಿಶ್ಲೇಷಿಸಲೂ ಸಾಧ್ಯವಾಯಿತೆಂದೂ ಮಕ್ಕಳು ಸ್ವತಃ ಮೌಲ್ಯಮಾಪನಮಾಡಲು ಚೆಕ್‌ಲಿಸ್ಟನ್ನು ಉಪಯೋಗಿಸಬೇಕು. ಪೂರ್ಣವಾಗಿ ಎಂಬ ಕಾಲಂನಲ್ಲಿ ಹೆಚ್ಚಿನ ಚೆಕ್ (✓) ಮಾರ್ಕ್‌ಗಳಿದ್ದಲ್ಲಿ ಅವರು ಉತ್ತಮ ಕಲಿಕಾ ಚಟುವಟಿಕೆಗಳನ್ನು ನಡೆಸಿದರೆಂದು ಹಾಗೂ ಕಲಿಕಾ ಸಾಧನೆಗಳನ್ನು ಗಳಿಸಿದ್ದಾರೆಂದೂ ಹೇಳಬಹುದು. ಆದರೆ ಭಾಗಿಕವಾಗಿ ಉತ್ತಮಪಡಿಸಬೇಕು. ಎಂಬೀ ಕಾಲಂಗಳಲ್ಲಿ ಚೆಕ್ (✓) ಮಾರ್ಕ್ ಅಧಿಕವಿದ್ದಲ್ಲಿ ಪರಿಹಾರ ಬೋಧನೆಯ ಮೂಲಕ ಕಲಿಕಾ ಸಾಧನೆಗಳನ್ನು ಖಚಿತಪಡಿಸಲಿರುವ ತಂತ್ರಗಳನ್ನು ಮುಂದುವರಿಸಬೇಕು.

# ಸಮಾಜವಿಜ್ಞಾನ I



# 1

# ಜಗತ್ತನ್ನು ಪರಿವರ್ತಿಸಿದ ಕ್ರಾಂತಿಗಳು

ಜಗತ್ತಿನ ವಿವಿಧ ಭಾಗಗಳಲ್ಲಿ ನಡೆದ ಕೆಲವು ಕ್ರಾಂತಿಗಳ ಕುರಿತು ಈ ಪಾಠದಲ್ಲಿ ಚರ್ಚಿಸಲಾಗಿದೆ. ಆ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿದ್ದ ಆಡಳಿತ ವ್ಯವಸ್ಥೆಯನ್ನು ಬದಲಾಯಿಸಿ ನೂತನವಾದುದೊಂದನ್ನು ಸ್ಥಾಪಿಸುವುದೇ ಇವುಗಳ ಉದ್ದೇಶವಾಗಿತ್ತು. ಆಧುನಿಕ ಜಗತ್ತಿನ ಮಾನವ ಜೀವನ ಹಾಗೂ ದೃಷ್ಟಿಕೋನವನ್ನು ರೂಪಿಸುವಲ್ಲಿ ಇವುಗಳು ಪ್ರಧಾನ ಪಾತ್ರ ವಹಿಸಿದವು. ಶೋಷಣೆ ಮುಕ್ತವಾದ ಜಗತ್ತಿನ ಸೃಷ್ಟಿಗಾಗಿ ನಮ್ಮ ಪೂರ್ವಿಕರು ನಡೆಸಿದ ಹೋರಾಟ ಹಾಗೂ ಅವರು ಅನುಭವಿಸಿದ ತ್ಯಾಗ ಮೊದಲಾದವುಗಳ ಮೌಲ್ಯವನ್ನರಿಯುವಂತೆ ಹಾಗೂ ಅಂಗೀಕರಿಸುವಂತೆ ಕಲಿಕಾರ್ಥಿಗಳನ್ನು ಪ್ರೇರೇಪಿಸುವ ರೀತಿಯಲ್ಲಿ ಈ ಪಾಠದ ವಿನಿಮಯವನ್ನು ಮಾಡಬೇಕು. ಪಾಠದಲ್ಲಿ ಉಲ್ಲೇಖಿಸಿರುವ ಚಿಂತಕರ ಆಶಯಗಳು ಹಾಗೂ ಅವುಗಳ ಪ್ರಭಾವದ ಕುರಿತು ಹೆಚ್ಚಿನ ಅನ್ವೇಷಣೆಗೆ ಈ ಪಾಠದ ವಿನಿಮಯವು ಕಲಿಕಾರ್ಥಿಗಳಿಗೆ ಸಹಕಾರಿಯಾಗಬೇಕು.

ಯೂನಿಟ್ ಫ್ರೇಂ

# I. ಜಗತ್ತನ್ನು ಪರಿವರ್ತಿಸಿದ ಕ್ರಾಂತಿಗಳು

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
| --- | --- | --- |
| • ಕ್ರಾಂತಿ – ಅಮೇರಿಕಾದ ಸ್ವಾತಂತ್ರ್ಯ ಹೋರಾಟ–ಹಿನ್ನೆಲೆ–ಅಮೇರಿಕಾದ 13 ಬ್ರಿಟಿಷ್ ವಸಾಹತುಗಳು–ಮರ್ಕಂಡಲಿಸಂ–ಕೋಂಟಿನೆಂಟಲ್ ಕಾಂಗ್ರೆಸ್–ಸ್ವಾತಂತ್ರ್ಯ ಘೋಷಣೆ–ಜೋರ್ಜ್ ವಾಷಿಂಗ್ಟನ್<br>• ಫ್ರೆಂಚ್ ಕ್ರಾಂತಿ–ಮಧ್ಯಮ ವರ್ಗದ ಬೆಳವಣಿಗೆ. ವಾಲ್ಟೇರ್, ರುಸ್ಸೋ, ಮೊಂಟೆಸ್ಕ್ಯೂ–ಫಿಸಿಯೋಕ್ರೇಟುಗಳು ರಾಷ್ಟ್ರೀಯ ಅಸೆಂಬ್ಲಿ–ಬಾಸ್ಟಿಲ್ ಕೋಟೆಯ ಪತನ–ಮಾನವ ಹಕ್ಕುಗಳ ಘೋಷಣೆ–ಸಂವಿಧಾನ–ರಾಷ್ಟ್ರೀಯ ಸಭೆ–ನೆಪೋಲಿಯನ್–ಆಡಳಿತಾ ಸುಧಾರಣೆಗಳ<br>• ಲ್ಯಾಟಿನ್ ಅಮೇರಿಕಾದ ಕ್ರಾಂತಿಗಳು–ಹಿನ್ನೆಲೆ–ಮಿರಾಂಡ–ಸೈಮನ್ ಬೊಲಿವರ್–ಸಾನ್ ಮಾರ್ಟಿನ್<br>• ರಷ್ಯಾದ ಕ್ರಾಂತಿ–ಕಾರಣವಾದ ಘಟಕಗಳು–ಫೆಬ್ರವರಿಯ ಕ್ರಾಂತಿ–ಅಕ್ಟೋಬರ್ ಕ್ರಾಂತಿ–ಪ್ರಭಾವ ಹಾಗೂ ಪ್ರಾಧಾನ್ಯ<br>• ಚೀನಾದ ವಿಮೋಚನೆ–ಚೀನಾದಲ್ಲಿನ ವಿದೇಶಾಡಳಿತ–ಮೊಂಚು ಆಡಳಿತ–ಸನ್‌ಯಾತ್ ಸೇನ್ – 1911ರ ಕ್ರಾಂತಿ–ಕುಮಿಂಗ್ ತಾಂಗ್ ಆಡಳಿತ– ಮಾವೋತ್ಸೆ ತುಂಗ್–ಲೋಂಗ್ ಮಾರ್ಚ್–ಚೀನಾ ಜನತಾ ಗಣರಾಜ್ಯ. | • ಅಮೇರಿಕಾ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯನ್ನು ಚರ್ಚಿಸುವುದು.<br>• ಅಮೇರಿಕಾದ ಭೂಪಟವನ್ನು ನಿರೀಕ್ಷಿಸಿ13 ವಸಾಹತುಗಳ ಪಟ್ಟಿ ತಯಾರಿಸುವುದು.<br>• 1776ರ ಸ್ವಾತಂತ್ರ್ಯ ಘೋಷಣೆಯನ್ನು ವಿಶ್ಲೇಷಣೆ ಮಾಡಿ ಅಮೇರಿಕಾ ಸ್ವಾತಂತ್ರ್ಯ ಹೋರಾಟದ ಪ್ರಾಧಾನ್ಯದ ಬಗ್ಗೆ ಟಿಪ್ಪಣಿ ತಯಾರಿಸುವುದು.<br>• ವಾಲ್ಟೇರ್, ರುಸ್ಸೋ, ಮೊಂಟೆಸ್ಕ್ಯೂ ಮೊದಲಾದವರ ಆಶಯಗಳನ್ನು ಚರ್ಚಿಸಿ, ಫ್ರೆಂಚ್ ಕ್ರಾಂತಿಗೆ ವೇದಿಕೆಯನ್ನು ಸಿದ್ಧಪಡಿಸಿದ ಘಟಕಗಳ ಕುರಿತು ಟಿಪ್ಪಣಿ ತಯಾರಿಸುವುದು.<br>• ಫ್ರಾನ್ಸಿನ ಸಾಮಾಜಿಕ ಜೀವನದ ಕುರಿತಾದ ಚರ್ಚೆ<br>• ಫ್ರೆಂಚ್ ಕ್ರಾಂತಿಯ ವಿವಿಧ ಹಂತಗಳನ್ನು ಫ್ಲೋಚಾರ್ಟಿನ ರೂಪದಲ್ಲಿ ದಾಖಲಿಸುವುದು.<br>• ನೆಪೋಲಿಯನ್ನನ ಸುಧಾರಣೆಗಳ ಪಟ್ಟಿ ತಯಾರಿಸುವುದು.<br>• ಲ್ಯಾಟಿನ್ ಅಮೇರಿಕಾದ ವಿಮೋಚನೆಗೆ ವಿವಿಧ ನೇತಾರರು ವಹಿಸಿದ ಪಾತ್ರವನ್ನು ಚರ್ಚಿಸುವುದು.<br>• ಮ್ಯಾಕ್ಸಿಂ ಗೋರ್ಕಿಯ ಅಮ್ಮ, ಟಾಲ್‌ಸ್ಟಾಯಿಯ ಯುದ್ಧ ಮತ್ತು ಶಾಂತಿ ಎಂಬೀ ಕೃತಿಗಳ ಕೆಲವು ಭಾಗಗಳನ್ನು ಓದಿ ರಷ್ಯಾ ಕ್ರಾಂತಿಗೆ ದಾರಿ ಮಾಡಿಕೊಟ್ಟ ಘಟಕಗಳನ್ನು ಚರ್ಚಿಸುವುದು.<br>• ಫೆಬ್ರವರಿಯ ಕ್ರಾಂತಿ ಮತ್ತು ಅಕ್ಟೋಬರದ ಕ್ರಾಂತಿಗಳನ್ನು ತುಲನೆ ಮಾಡಿ ಟಿಪ್ಪಣಿ ತಯಾರಿಸುವುದು.<br>• ರಷ್ಯಾ ಕ್ರಾಂತಿಯ ಪ್ರಭಾವವನ್ನು ಚರ್ಚಿಸುವುದು.<br>• ಚೀನಾದ ವಿಮೋಚನೆಗೆ ದಾರಿ ಮಾಡಿಕೊಟ್ಟ ಕ್ರಾಂತಿಗಳ ಕುರಿತು ವಿಚಾರಗೋಷ್ಠಿಯನ್ನು ಏರ್ಪಡಿಸುವುದು.<br>• ಜಗತ್ತಿನ ವಿವಿಧ ಕ್ರಾಂತಿಗಳನ್ನು ತುಲನೆ ಮಾಡಿ ಪಟ್ಟಿ ತಯಾರಿಸುವುದು. | • ಅಮೇರಿಕಾ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯನ್ನು ವಿಶ್ಲೇಷಿಸುತ್ತಾರೆ.<br>• ಅಮೇರಿಕಾದ ಸ್ವಾತಂತ್ರ್ಯ ಹೋರಾಟಕ್ಕೆ ಜಾಗತಿಕ ಚರಿತ್ರೆಯಲ್ಲಿರುವ ಪ್ರಾಧಾನ್ಯವನ್ನು ವಿವರಿಸುತ್ತಾರೆ.<br>• ಫ್ರೆಂಚ್ ಕ್ರಾಂತಿಯ ಹಿನ್ನೆಲೆಯನ್ನು ವಿಶ್ಲೇಷಿಸುತ್ತಾರೆ.<br>• ಫ್ರೆಂಚ್ ಕ್ರಾಂತಿಯ ವಿವಿಧ ಹಂತಗಳ ಪಟ್ಟಿ ತಯಾರಿಸುತ್ತಾರೆ.<br>• ಫ್ರೆಂಚ್ ಕ್ರಾಂತಿಯ ಪ್ರಭಾವವನ್ನು ವಿವರಿಸುತ್ತಾರೆ.<br>• ನೆಪೋಲಿಯನ್ನನ ಸುಧಾರಣೆಗಳನ್ನು ವಿವರಿಸುತ್ತಾರೆ.<br>• ಲ್ಯಾಟಿನ್ ಅಮೇರಿಕಾದ ರಾಷ್ಟ್ರೀಯ ಚಟುವಳಿಯ ಹಿನ್ನೆಲೆ ಹಾಗೂ ಪ್ರಾಧಾನ್ಯವನ್ನು ವಿಶ್ಲೇಷಿಸುತ್ತಾರೆ.<br>• ರಷ್ಯಾ ಕ್ರಾಂತಿಗೆ ಕಾರಣವಾದ ಘಟಕಗಳನ್ನು ವಿಶ್ಲೇಷಿಸುತ್ತಾರೆ.<br>• ಇಂದಿನ ಜಾಗತಿಕ ಚರಿತ್ರೆಯಲ್ಲಿ ರಷ್ಯಾ ಕ್ರಾಂತಿಯು ಬೀರಿದ ಪ್ರಭಾವವನ್ನು ಗುರುತಿಸುತ್ತಾರೆ.<br>• ಚೀನಾ ಕ್ರಾಂತಿಯ ವಿವಿಧ ಹಂತಗಳನ್ನು ವಿವರಿಸುತ್ತಾರೆ. |

## ಅಧ್ಯಾಯದೆಡೆಗೆ...

ಸ್ವಾತಂತ್ರ್ಯದ ಪ್ರಾಧಾನ್ಯವನ್ನು ತಿಳಿಸುವ ಕುಮಾರನಾಶಾನರ ಕವಿತೆಯ ಕೆಲವು ಸಾಲುಗಳನ್ನು ಪಾಠದ ಆರಂಭದಲ್ಲಿ ನೀಡಲಾಗಿದೆ. ಅದರ ಕುರಿತಾದ ಚರ್ಚೆಯ ಮೂಲಕ ಪಾಠವನ್ನು ಆರಂಭಿಸಬಹುದು. ಸ್ವಾತಂತ್ರ್ಯಕ್ಕೆ ಮಾನವನ ಜೀವನದಲ್ಲಿರುವ ಪ್ರಾಧಾನ್ಯವು ಇದರ ಮೂಲಕ ಕಲಿಕಾರ್ಥಿಗೆ ಮನದಟ್ಟಾಗಬೇಕು. ಜಗತ್ತಿನ ವಿವಿಧ ಭಾಗಗಳಲ್ಲಿ ಸ್ವಾತಂತ್ರ್ಯವು ನಿಷೇಧಿಸಲ್ಪಟ್ಟ ಜನರು ನಡೆಸಿದ ಕ್ರಾಂತಿಗಳ ಕುರಿತು ಚರ್ಚಿಸೋಣ ಎಂದು ಹೇಳುವ ಮೂಲಕ ಕ್ರಾಂತಿಗಳಿಗೆ ಪ್ರೇರಣೆ ನೀಡಿದ ಕೆಲವು ಸಾಮಾನ್ಯ ಘಟಕಗಳ ಕುರಿತು ಚರ್ಚಿಸಬೇಕು. ಏಳನೇ ತರಗತಿಯಲ್ಲಿ ಚರ್ಚಿಸಿದ ನವೋತ್ಥಾನದ ವಿಶೇಷತೆಗಳು ಹಾಗೂ ಪ್ರಭಾವವನ್ನು ಕಂಡುಹಿಡಿಯುತ್ತಾರೆ.

- ಮಾನವೀಯತೆ
- ವೈಜ್ಞಾನಿಕ ಪ್ರಜ್ಞೆ
- ಉಚಿತಾನುಚಿತ ಚಿಂತನೆ
- ವಿಮರ್ಶಾತ್ಮಕ ಬುದ್ಧಿ
- ಅನ್ವೇಷಣೆಯ ಕುತೂಹಲ
- ಪ್ರಾದೇಶಿಕ ಭಾಷೆಗಳ ಬೆಳವಣಿಗೆ
- ಜ್ಞಾನೋದಯ

ಅನಂತರ ಅಮೇರಿಕಾದ ಸ್ವಾತಂತ್ರ್ಯ ಹೋರಾಟವನ್ನು ವಿಶ್ಲೇಷಿಸುತ್ತಾರೆ.

### ಅಮೇರಿಕಾದ ಸ್ವಾತಂತ್ರ್ಯ ಹೋರಾಟ

ಅಮೇರಿಕಾದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅಲ್ಲಿನ ಜನರು ಘೋಷಿಸಿದ 'ಪ್ರಾತಿನಿಧ್ಯವಿಲ್ಲದೆ ತೆರಿಗೆಯಿಲ್ಲ' ಎಂಬ ಘೋಷಣೆಯ ಚರ್ಚೆಯೊಂದಿಗೆ ಪಾಠಭಾಗವನ್ನು ಆರಂಭಿಸಬಹುದು. ಆ ಮೂಲಕ ಜನರ ಬೇಡಿಕೆಗಳನ್ನು ಕಂಡುಹಿಡಿಯುತ್ತಾರೆ.

- ಆಡಳಿತದಲ್ಲಿ ಜನರ ಪಾಲ್ಗೊಳ್ಳುವಿಕೆಯಿರಬೇಕು.
- ಜನ ಪ್ರಾತಿನಿಧ್ಯವಿಲ್ಲದ ಆಡಳಿತವು ಜನವಿರೋಧಿಯಾಗಿದೆ.
- ಆಡಳಿತದಲ್ಲಿ ಪ್ರಾತಿನಿಧ್ಯವನ್ನೀಯದ ಜನರಿಂದ ತೆರಿಗೆ ಸಂಗ್ರಹಿಸಬಾರದು.

ಭೂಪಟವನ್ನು ನಿರೀಕ್ಷಿಸಿ ಅಮೇರಿಕಾದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ 13 ವಸಾಹತುಗಳ ಪಟ್ಟಿ ತಯಾರಿಸುತ್ತಾರೆ.

- ನ್ಯೂಹಾಂಪ್‌ಷಯರ್
- ನ್ಯೂಯೋರ್ಕ್
- ಮಸಾಚುಸೆಟ್ಸ್
- ರೋಡ್ ಐಲೆಂಡ್
- ಕನಕ್ಟಿಕಟ್ಸ್
- ಪೆನ್ಸಿಲ್ವೇನಿಯಾ
- ನ್ಯೂಜೆರ್ಸಿ
- ದಲಾವಯರ್
- ವರ್ಜೀನಿಯಾ
- ಮೇರಿ ಲ್ಯಾಂಡ್
- ನೋರ್ತ್ ಕರೋಲಿನ
- ಸೌತ್ ಕರೋಲಿನ
- ಜೋರ್ಜಿಯಾ

ಅನಂತರ ಅಮೇರಿಕಾದ ಜನರ ಹೋರಾಟಕ್ಕಿರುವ ಕಾರಣಗಳನ್ನು ವಿಶ್ಲೇಷಿಸುತ್ತಾರೆ. ಮರ್ಕಂಡಲಿಸ್ಟ್ ಕಾನೂನಿನ ಭಾಗವಾಗಿ ಬ್ರಿಟನ್‌ನ ವಸಾಹತುಗಳಲ್ಲಿ ಜಾರಿಗೊಳಿಸಿದ ವಿವಿಧ ನಿಯಮಗಳನ್ನು ಸೂಚಕಗಳ ಆಧಾರದಲ್ಲಿ ಚರ್ಚಿಸಿ ಕೆಳಗೆ ನೀಡಿರುವ ಮಾಹಿತಿಗಳನ್ನು ಕಂಡುಕೊಳ್ಳುತ್ತಾರೆ.

| .... | .... |
|---|---|
| • ವಸಾಹತುಗಳಲ್ಲಿನ ಪ್ರಾದೇಶಿಕ ವ್ಯಾಪಾರ | • ವಾಣಿಜ್ಯ ವಲಯದಲ್ಲಿ ಜಾರಿಗೊಳಿಸಿದ ನಿಯಂತ್ರಣಗಳು ಹಾಗೂ ತೆರಿಗೆಗಳು ಪ್ರಾದೇಶಿಕ ವ್ಯಾಪಾರಕ್ಕೆ ಪ್ರತಿಕೂಲವಾಯಿತು. |
| • ಹಕ್ಕುಗಳ ನಿಷೇಧ | • ರಫ್ತಿಗೆ ನಿಯಂತ್ರಣ ಹೇರಿದರು.<br>• ಇಂಗ್ಲೆಂಡಿನ ಸೈನ್ಯವನ್ನು ವಸಾಹತುಗಳಲ್ಲಿ ಇರಿಸಿಕೊಳ್ಳಬೇಕು.<br>• ಎಲ್ಲ ದಾಖಲೆಗಳಿಗೂ ಇಂಗ್ಲೆಂಡಿನ ಮುದ್ರೆಯನ್ನೊತ್ತಬೇಕು. |
| • ಬೆಲೆಯೇರಿಕೆ | • ಅಧಿಕ ತೆರಿಗೆ ಹಾಗೂ ಮುದ್ರೆ ಪತ್ರ ಕಾನೂನು ಬೆಲೆಯೇರಿಕೆಗೆ ಕಾರಣವಾಯಿತು. |
| • ಶೋಷಣೆ | • ರಫ್ತಿಗೆ ನಿಯಂತ್ರಣ, ತೆರಿಗೆ ಹೆಚ್ಚಳ, ಮುದ್ರೆ ಪತ್ರ ಕಾನೂನು, ಇಂಗ್ಲೆಂಡಿನ ಸೈನ್ಯವನ್ನಿರಿಸಿಕೊಳ್ಳಬೇಕೆಂಬ ಕಾನೂನು ಎಂಬಿವುಗಳು ಶೋಷಣೆಗೆ ದಾರಿಮಾಡಿಕೊಟ್ಟಿತು. |
| • ಸ್ವೇಚ್ಛಾಧಿಪತ್ಯ | ಮರ್ಕಂಡಲಿಸ್ಟ್ ಕಾನೂನುಗಳು ವಸಾಹತಿನ ಜನರ ಹಕ್ಕುಗಳನ್ನು ಹಾಗೂ ಸ್ವಾತಂತ್ರ್ಯವನ್ನು ನಿಷೇಧಿಸುವವುಗಳಾಗಿದ್ದವು. |

ಇಂತಹ ಸನ್ನಿವೇಶವು ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ಬದಲಾಯಿಸುವಂತೆ ಅಮೇರಿಕನ್ನರನ್ನು ನಿರ್ಬಂಧಿಸಿತು ಎಂಬುದನ್ನು ಜೋನ್ ಆಡಮ್ಸ್‌ನ ಹೇಳಿಕೆಯು ಸ್ಪಷ್ಟಪಡಿಸುತ್ತದೆ. ಬ್ರಿಟಿಷರ ಶೋಷಣೆಗೆದುರಾಗಿ ಹೋರಾಡಲು ಸಿದ್ಧರಾದ ಅಮೇರಿಕಾದ ಜನತೆಗೆ ದಾರಿ ತೋರಿದ ಹಾಗೂ ಪ್ರಚೋದನೆಯನ್ನಿತ್ತ ಕೆಲವು ಚಿಂತಕರ ಆಶಯಗಳನ್ನು ಪಾಠಭಾಗದಲ್ಲಿ ಕೊಡಲಾಗಿದೆ. ಅವು ಯಾವ ಯಾವ ರೀತಿಯಲ್ಲಿ ಪ್ರಚೋದನೆಯನ್ನಿತ್ತವು ಎಂಬುದನ್ನು ಚರ್ಚಿಸಿ ಟಿಪ್ಪಣಿ ತಯಾರಿಸಬಹುದು.

- ಅಮೇರಿಕನ್ನರ ಮೂಲಭೂತ ಹಕ್ಕುಗಳನ್ನು ಬ್ರಿಟನ್ ನಿಷೇಧಿಸಿತು.
- ಉತ್ತರ ಅಮೇರಿಕಾ ಎಂಬ ಬೃಹತ್ ಭೂಖಂಡವನ್ನು ವಿದೇಶಿ ಶಕ್ತಿ ಹಾಗೂ ಕೇವಲ ಒಂದು ದ್ವೀಪವಾಗಿರುವ ಬ್ರಿಟನ್ ದೀರ್ಘಕಾಲ ಕೈವಶವಿರಿಸಿಕೊಂಡು ಆಳುವುದು ಉಚಿತವಾದ ಯುಕ್ತಿಯುಕ್ತವಲ್ಲ.
- ಆದುದರಿಂದ ಬ್ರಿಟನ್‌ನಿಂದ ವಿಮೋಚನೆ ಹೊಂದಲಿರುವ ಚಟುವಟಿಕೆಗಳಲ್ಲಿ ಅಮೇರಿಕದ ಜನರು ಪಾಲ್ಗೊಳ್ಳಬೇಕು.

ಅಮೇರಿಕಾದ 13 ವಸಾಹತುಗಳು ಬ್ರಿಟನಿಗೆದುರಾಗಿ ಹೋರಾಡಿ ಸ್ವಾತಂತ್ರ್ಯವನ್ನು ಗಳಿಸಿದವು. ಅನಂತರ ಅವು ಒಂದುಗೂಡಿ ಅಮೇರಿಕಾದ ಸಂಯುಕ್ತ ಪ್ರಾಂತ್ಯಗಳು ರೂಪುಗೊಂಡವು. ಪಾಠಪುಸ್ತಕದ ಸಹಾಯದಿಂದ ಇದಕ್ಕೆ ಕಾರಣವಾದ ಘಟಕಗಳನ್ನು ಗುಂಪಿನಲ್ಲಿ ಚರ್ಚಿಸಿ ಫ್ಲೋಚಾರ್ಟೊಂದನ್ನು ತಯಾರಿಸಿ ಮಂಡಿಸಬಹುದು.

**ಅಮೇರಿಕಾ ಸಂಯುಕ್ತ ಪ್ರಾಂತ್ಯಗಳು ರೂಪೀಕರಣ**

**1774**

- ಪ್ರಥಮ ಕೋಂಟಿನೆಂಟಲ್ ಕಾಂಗ್ರೆಸ್

↓

- ಇಂಗ್ಲೆಂಡಿನ ರಾಜನಿಗೆ ದೂರನ್ನು ಸಲ್ಲಿಸಿದರು

↓

- ಇಂಗ್ಲೆಂಡ್ ಮತ್ತು ವಸಾಹತುಗಳ ಮಧ್ಯೆ ಯುದ್ಧ ಆರಂಭವಾಯಿತು.

**1775**

- ಎರಡನೇ ಕೋಂಟಿನೆಂಟಲ್ ಕಾಂಗ್ರೆಸ್

↓

- ಜೋರ್ಜ್ ವಾಷಿಂಗ್ಟನ್ ಕೋಂಟಿ ನೆಂಟಲ್ ಸೈನ್ಯದ ನಾಯಕನಾದನು.

↓

- ಥೋಮಸ್ ಪೈನ್ ಇಂಗ್ಲೆಂಡಿನ ಆಡಳಿತದಿಂದ ಸ್ವತಂತ್ರಗೊಳ್ಳಲು ವಸಾಹತಿನ ಜನರಿಗೆ ಕರೆ ನೀಡಿದನು.

↓

**1776**

- ಕೋಂಟಿನೆಂಟಲ್ ಕಾಂಗ್ರೆಸ್ ಸ್ವಾತಂತ್ರ್ಯ ಘೋಷಣೆಯನ್ನು ಹೊರಡಿಸಿತು

↓

**1781**

- ಇಂಗ್ಲೆಂಡು ಮತ್ತು ವಸಾಹತುಗಳ ನಡುವಿನ ಯುದ್ಧವು ಕೊನೆಗೊಂಡಿತು.

↓


**1783**

- ಪ್ಯಾರಿಸ್ ಒಪ್ಪಂದದ ಪ್ರಕಾರ ಇಂಗ್ಲೆಂಡು 13 ವಸಾಹತುಗಳ ಸ್ವಾತಂತ್ರ್ಯವನ್ನು ಅಂಗೀಕರಿಸಿತು .
- ಅಮೇರಿಕಾಕ್ಕೆ ಒಂದು ಸಂವಿಧಾನವನ್ನು ರಚಿಸಿದರು.
- ಅಮೇರಿಕಾ ಸಂಯುಕ್ತ ಪ್ರಾಂತ್ಯ (ಯು.ಎಸ್.ಎ)ವನ್ನು ರೂಪಿಸಿದರು.
- ಜೋರ್ಜ್ ವಾಷಿಂಗ್ಟನ್ ಅಮೇರಿಕಾ ಸಂಯುಕ್ತ ಪ್ರಾಂತ್ಯಗಳ ಪ್ರಥಮ ಅಧ್ಯಕ್ಷನಾದನು.

ಅನಂತರ ಪಾಠಪುಸ್ತಕದ ಸಹಾಯದಿಂದ ಅಮೇರಿಕಾದ ಸ್ವಾತಂತ್ರ್ಯ ಹೋರಾಟವು ನಂತರದ ಜಾಗತಿಕ ಚರಿತ್ರೆಯ ಮೇಲೆ ಬೀರಿದ ಪ್ರಭಾವವನ್ನು ಚರ್ಚಿಸಿ ಟಿಪ್ಪಣಿ ತಯಾರಿಸುವುದು. ಹಿಂದಿನ ತರಗತಿಗಳಲ್ಲಿ ಭಾರತದ ಸಂವಿಧಾನದ ಕುರಿತಾದ ಮಾಹಿತಿಗಳನ್ನು ತಿಳಿದಿರುತ್ತಾರೆ. ಅದರ ಆಧಾರದಲ್ಲಿ ಭಾರತದ ಸಂವಿಧಾನದಲ್ಲಿ ಅಮೇರಿಕಾದ ಸ್ವಾತಂತ್ರ್ಯ ಹೋರಾಟವು ಮುಂದಿರಿಸಿದ ಯಾವೆಲ್ಲ ಆಶಯಗಳಿವೆಯೆಂಬುದನ್ನು ಕಂಡುಹಿಡಿಯುತ್ತಾರೆ.


- ಗಣರಾಜ್ಯ ಆಡಳಿತ ವಿಧಾನ
- ಲಿಖಿತ ಸಂವಿಧಾನ
- ಸಂಯುಕ್ತ ರಾಷ್ಟ್ರ

### ಜೋನ್ ಲೋಕ್



ಜೋನ್ ಲೋಕ್‌ನು ಇಂಗ್ಲೆಂಡಿನವನಾದ ಪ್ರಸಿದ್ಧ ತತ್ವಚಿಂತಕನಾಗಿದ್ದನು. ಏಕಾಧಿಪತ್ಯ ಮತ್ತು ರಾಜಾಡಳಿತವನ್ನು ಅವನು ಕಟುವಾಗಿ ವಿಮರ್ಶಿಸಿದನು. ಅವನ ಅಭಿಪ್ರಾಯದ ಪ್ರಕಾರ ಪ್ರಕೃತಿ ನಿಯಮವನ್ನು ಕಾರ್ಯದಕ್ಷತೆಯಿಂದ ಜ್ಯಾರಿಗೊಳಿಸಬೇಕೆಂಬ ಆವಶ್ಯಕತೆಯಿಂದಾಗಿ ಆಡಳಿತವು ರೂಪುಗೊಂಡಿತು. ಜನರ ನಡುವಿನ ಒಂದು ಪರಸ್ಪರ ಒಪ್ಪಂದದ ಆಧಾರದಲ್ಲಿ ಆಡಳಿತಾಧಿಕಾರಿಯು ಆಡಳಿತವನ್ನು ನಡೆಸುತ್ತಾನೆ.

### ಥೋಮಸ್ ಜೆಫರ್‌ಸನ್



ಚರಿತ್ರೆಗಾರ ಹಾಗೂ ತತ್ವಚಿಂತಕನೂ ಆಗಿದ್ದ ಥೋಮಸ್ ಜೆಫರ್‌ಸನ್‌ನು ಅಮೇರಿಕಾದ ಸ್ವಾತಂತ್ರ್ಯ ಘೋಷಣೆಯನ್ನು ಸಿದ್ಧಪಡಿಸುವುದರಲ್ಲಿ ಪ್ರಧಾನ ಪಾತ್ರ ವಹಿಸಿದ್ದನು. ಎರಡು ಬಾರಿ ಅಮೇರಿಕದ ಅಧ್ಯಕ್ಷನಾಗಿದ್ದ ಅವನು ವರ್ಜೀನಿಯಾ ವಿಶ್ವವಿದ್ಯಾಲಯದ ಸ್ಥಾಪನೆಯಲ್ಲಿ ಪ್ರಧಾನ ಪಾತ್ರ ವಹಿಸಿದ್ದನು. ಅಮೇರಿಕಾದ 13 ವಸಾಹತುಗಳು ಯಾಕೆ ಬ್ರಿಟನ್‌ನಿಂದ ಸ್ವಾತಂತ್ರ್ಯಗಳಿಸಬೇಕು ಎಂಬುದನ್ನೂ ಪೌರರ ಹಕ್ಕುಗಳ ಪ್ರಾಧಾನ್ಯವನ್ನೂ ಆತನು ಸ್ವಾತಂತ್ರ್ಯ ಘೋಷಣೆಯಲ್ಲಿ ಸ್ಪಷ್ಟಪಡಿಸಿದನು.

### ಥೋಮಸ್ ಪೈನ್



ಥೋಮಸ್ ಪೈನ್‌ನು ಜನಿಸಿದ್ದು ಇಂಗ್ಲೆಂಡಿನಲ್ಲಿ ಹಾಗೂ ಮರಣ ಹೊಂದಿದ್ದು ಅಮೇರಿಕಾದಲ್ಲಿ. ಇವನೊಬ್ಬ ಚಿಂತಕನೂ ಕ್ರಾಂತಿಕಾರಿಯೂ ಆಗಿದ್ದನು. ಅಮೇರಿಕಾ ಸಂಯುಕ್ತ ಪ್ರಾಂತ್ಯಗಳ ಸ್ಥಾಪಕರಲ್ಲೊಬ್ಬನಾದ ಪೈನ್‌ನ ಪ್ರಾಧಾನ್ಯದ ಕುರಿತು ಜೋನ್ ಆಡಮ್ಸ್ ಹೀಗೆ ಹೇಳುತ್ತಾನೆ. "ಕೋಮನ್‌ಸೆನ್ಸ್ ರಚಿಸಿದವನ ಪೆನ್ನಿಲ್ಲದಿರುತ್ತಿದ್ದರೆ ವಾಷಿಂಗ್ಟನ್ ಎತ್ತಿದ ಖಡ್ಗವು ವಿಫಲವಾಗುತ್ತಿತ್ತು" ಗಣರಾಜ್ಯದ ಆಶಯ ಹಾಗೂ ಅಮೇರಿಕಾವು ಬ್ರಿಟನ್‌ನಿಂದ ಬೇರ್ಪಡಬೇಕಾದ ಆವಶ್ಯಕತೆಯನ್ನು ಜನರಿಗೆ ಮನದಟ್ಟು ಮಾಡುವಲ್ಲಿ ಅವನು ಬರೆದ ಕೋಮನ್ ಸೆನ್ಸ್ ಎಂಬ ಕಿರು ಲೇಖನವು ಪ್ರಧಾನ ಪಾತ್ರ ವಹಿಸಿತ್ತು. ರಾಜಾಡಳಿತವನ್ನು ಬಲವಾಗಿ ವಿರೋಧಿಸಿದ ಅವನು ಶಾಂತಿ ಸಮಾಧಾನದಿಂದೊಡಗೂಡಿದ ಪ್ರಜಾಪ್ರಭುತ್ವಕ್ಕಾಗಿ ವಾದಿಸಿದನು.

### ಬೆಂಜಮಿನ್ ಫ್ರಾಂಕ್ಲಿನ್



ರಾಜತಂತ್ರಜ್ಞನೂ ಬರಹಗಾರನೂ ವಿಜ್ಞಾನಿಯೂ ಆಗಿದ್ದ ಬೆಂಜಮಿನ್ ಫ್ರಾಂಕ್ಲಿನ್‌ನು ಅಮೇರಿಕಾದ ಸ್ವಾತಂತ್ರ್ಯ ಘೋಷಣೆಯನ್ನು ತಯಾರಿಸುವುದರಲ್ಲಿ ಭಾಗವಹಿಸಿದ್ದನು. ಅಮೇರಿಕಾದ ಪ್ರಥಮ ಸಂವಿಧಾನವಾದ ಆರ್ಟಿಕಲ್ಸ್ ಆಫ್ ಕೋನ್‌ಫೆಡರೇಶನ್‌ನ್ನು ಸಿದ್ಧಪಡಿಸುವುದರಲ್ಲಿಯೂ ಅವನು ಪ್ರಧಾನ ಪಾತ್ರ ವಹಿಸಿದನು.

## ಫ್ರೆಂಚ್ ಕ್ರಾಂತಿ

ಫ್ರಾನ್ಸನ್ನು ಆಳುತ್ತಿದ್ದ ಬೂರ್ಬನ್ ರಾಜರ ಕೆಲವು ಅಭಿಪ್ರಾಯಗಳನ್ನು ಹಾಗೂ ಅವರ ಆಡಳಿತ ಕೇಂದ್ರವಾದ ವರ್ಸಾಯಿ ಅರಮನೆಯ ಚಿತ್ರವನ್ನು ಪಾಠಭಾಗದ ಆರಂಭದಲ್ಲಿ ಕೊಡಲಾಗಿದೆ. ಅವುಗಳನ್ನು ವಿಶ್ಲೇಷಿಸುವುದರ ಮೂಲಕ ಫ್ರಾನ್ಸಿನಲ್ಲಿದ್ದ ಆಡಳಿತ ವ್ಯವಸ್ಥೆಯ ಕುರಿತು ತಿಳುವಳಿಕೆಯನ್ನು ಗಳಿಸಬಹುದು. ಅವುಗಳನ್ನು ವಿಶ್ಲೇಷಿಸುವ ಮೂಲಕ ಕೆಳಗೆ ಕೊಟ್ಟಿರುವವುಗಳನ್ನು ಕಂಡುಹಿಡಿಯಬಹುದು.

- ಫ್ರಾನ್ಸಿನಲ್ಲಿ ಏಕಾಧಿಪತ್ಯ ಆಡಳಿತವಿತ್ತು.
- ಆಡಳಿತಾಧಿಕಾರಿಗಳು ದುಂದುವೆಚ್ಚಗಾರರಾಗಿದ್ದರು.
- ರಾಜಾಧಿಕಾರವು ದೈವದತ್ತವಾದುದೆಂಬ ತತ್ವದಲ್ಲಿ ರಾಜರು ನಂಬಿಕೆಯಿರಿಸಿದ್ದರು.
- ಜನರ ಪ್ರಾಥಮಿಕ ಆವಶ್ಯಕತೆಗಳನ್ನು ಕೂಡಾ ಪರಿಹಾಸ್ಯ ಮಾಡಿದರು.
- ಜನರು ದುರಿತದ ಜೀವನವನ್ನು ನಡೆಸಬೇಕಾಯಿತು.

ಅನಂತರ ಫ್ರೆಂಚ್ ಸಮಾಜದ ಕುರಿತಾದ ಚಾರ್ಟನ್ನು ವಿಶ್ಲೇಷಿಸುವುದರ ಮೂಲಕ ಅಂದಿನ ಸಾಮಾಜಿಕ ವ್ಯವಸ್ಥೆಯ ಕುರಿತು ತಿಳುವಳಿಕೆಯನ್ನು ಗಳಿಸಬಹುದು.

- ಒಂದು ಮತ್ತು ಎರಡನೇ ಎಸ್ಟೇಟಿನವರು ಫ್ರಾನ್ಸಿನಲ್ಲಿ ಉನ್ನತ ಸಾಮಾಜಿಕ ಪದವಿ ಹಾಗೂ ಹಕ್ಕುಗಳನ್ನು ಹೊಂದಿದ್ದು ಆಡಂಬರದ ಜೀವನವನ್ನು ನಡೆಸುತ್ತಿದ್ದರು.
- ಹೆಚ್ಚಿನ ಜನರು ಮೂರನೇ ಎಸ್ಟೇಟಿಗೆ ಸೇರಿದವರಾಗಿದ್ದರು.
- ಪುರೋಹಿತರು ಹಾಗೂ ಪ್ರಭುಗಳು ಜನರನ್ನು ಶೋಷಣೆ ಮಾಡಿ ಸಂಪತ್ತನ್ನು ವಶಪಡಿಸಿಕೊಂಡರು.
- ಮೂರನೇ ಎಸ್ಟೇಟಿನವರು ಫ್ರಾನ್ಸಿನಲ್ಲಿದ್ದ ಸಾಮಾಜಿಕ ವ್ಯವಸ್ಥೆ ಬದಲಾಗಬೇಕೆಂದು ಆಗ್ರಹಿಸಿದರು.

### ಮಧ್ಯಮವರ್ಗ ಹಾಗೂ ಮೂರನೇ ಎಸ್ಟೇಟ್

ವ್ಯಾಪಾರವನ್ನು ಮಾಡುತ್ತಿದ್ದ ನಗರವಾಸಿಗಳು ಫ್ರಾನ್ಸಿನ ಮಧ್ಯಮವರ್ಗದವರಾಗಿದ್ದರು. ಇವರು ಶ್ರೀಮಂತರೂ ವಿದ್ಯಾಸಂಪನ್ನರೂ ಆಗಿದ್ದರು. ಕೃಷಿಕರು ಮತ್ತು ಕರಕುಶಲ ಕೆಲಸಗಾರರು ಮೂರನೇ ಎಸ್ಟೇಟಿನಲ್ಲಿದ್ದರೂ ಅವರು ಮಧ್ಯಮ ವರ್ಗದಲ್ಲಿ ಒಳಗೊಂಡಿರಲಿಲ್ಲ.

ಫ್ರಾನ್ಸಿನಲ್ಲಿ ಅಸ್ತಿತ್ವದಲ್ಲಿದ್ದ ವ್ಯವಸ್ಥೆ ಬದಲಾಗಬೇಕೆಂದು ಆಗ್ರಹಿಸಿದ ಜನರಿಗೆ ಕೆಲವು ಚಿಂತಕರ ಆಶಯಗಳು ಪ್ರಚೋದನೆಯನ್ನಿತ್ತುವು. ಪಾಠಭಾಗದಲ್ಲಿ ನೀಡಿರುವ ಆಶಯಗಳನ್ನು ಅಮೇರಿಕಾದ ಕ್ರಾಂತಿಗೆ ಪ್ರೇರಣೆ ನೀಡಿದ ಆಶಯಗಳೊಂದಿಗೆ ತುಲನೆ ಮಾಡಿ ಟಿಪ್ಪಣಿ ತಯಾರಿಸಬಹುದು. ಅಮೇರಿಕಾದ ತತ್ವಚಿಂತಕರು ಪ್ರಜಾಪ್ರಭುತ್ವ, ಮಾನವ ಹಕ್ಕುಗಳು, ಮರ್ಕಂಡಲಿಸ್ಟ್ ನಿಯಮಗಳಿಗೆದುರಾದ ಆಶಯಗಳು ಇತ್ಯಾದಿಗಳಿಗಾಗಿ ವಾದಿಸಿದಾಗ ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಯುಕ್ತಿ ಚಿಂತನೆ, ಮಧ್ಯಮ ವರ್ಗದ ಬೆಳವಣಿಗೆ ಮೊದಲಾದವುಗಳಿಗೆ ಫ್ರಾನ್ಸಿನ ಚಿಂತಕರು ಒತ್ತನ್ನು ನೀಡಿದರು.

### ಅಮೇರಿಕಾದ ಸ್ವಾತಂತ್ರ್ಯ ಹೋರಾಟ ಹಾಗೂ ಫ್ರಾನ್ಸ್

ಅಮೇರಿಕಾದ ಸ್ವಾತಂತ್ರ್ಯ ಹೋರಾಟವನ್ನು ಫ್ರಾನ್ಸ್ ಸೈನ್ಯ ಹಾಗೂ ಸಂಪತ್ತನ್ನು ನೀಡಿ ಬೆಂಬಲಿಸಿತು. ಬ್ರಿಟನ್ನಿನ ನಿಯಂತ್ರಣದಲ್ಲಿರುವ ಅಮೇರಿಕಾದ ವಸಾಹತುಗಳ ಉತ್ತರದಲ್ಲಿರುವ ಕೆನಡಾವು ಫ್ರಾನ್ಸಿನ ನಿಯಂತ್ರಣದಲ್ಲಿರುವುದೇ ಇದಕ್ಕೆ ಕಾರಣವಾಗಿದೆ. ಫ್ರಾನ್ಸ್ ಮತ್ತು ಬ್ರಿಟನ್ ಶತ್ರುಗಳಾಗಿದ್ದರು. ಆದುದರಿಂದ ಬ್ರಿಟನಿಗೆದುರಾದ ಸ್ವಾತಂತ್ರ್ಯ ಹೋರಾಟಕ್ಕೆ ಫ್ರಾನ್ಸ್ ಬೆಂಬಲವನ್ನಿತ್ತಿತು.

ಫ್ರೆಂಚ್ ಕ್ರಾಂತಿಯ ಆರಂಭ ಹಾಗೂ ಅನಂತರ ನಡೆದ ಘಟನೆಗಳ ಕುರಿತು ಪಾಠಭಾಗದಲ್ಲಿ ನೀಡಿರುವ ಚಾರ್ಟ್, ಪಟ್ಟಿ ಎಂಬಿವುಗಳನ್ನು ವಿಶ್ಲೇಷಿಸಿ ತಿಳುವಳಿಕೆಯನ್ನು ಗಳಿಸುತ್ತಾರೆ.

ಒಂದು ಮತ್ತು ಎರಡನೇ ಎಸ್ಟೇಟಿನವರು ಒಂದೊಂದು ಎಸ್ಟೇಟಿಗೆ ಒಂದೊಂದು ಮತದಂತೆ ನೀಡಬೇಕೆಂದೂ ಮೂರನೇ ಎಸ್ಟೇಟಿನವರು ಪ್ರತಿಯೊಂದು ಸದಸ್ಯನಿಗೆ ಒಂದೊಂದು ಮತವನ್ನು ಚಲಾಯಿಸುವ ಹಕ್ಕನ್ನು ನೀಡಬೇಕೆಂದೂ ಇರುವ ಬೇಡಿಕೆಯನ್ನು ಮುಂದಿಡಲು ಕಾರಣವೇನೆಂಬುದನ್ನು ಪಟ್ಟಿಯ ಮೂಲಕ ಕಂಡುಕೊಳ್ಳಬೇಕು.

ಒಂದನೇ ಎಸ್ಟೇಟಿನ ಮತ = 285
ಎರಡನೇ ಎಸ್ಟೇಟಿನ ಮತ = 308
593
ಮೂರನೇ ಎಸ್ಟೇಟಿನ ಮತ = 621

ಪ್ರತಿಯೊಂದು ಎಸ್ಟೇಟಿನ ಪ್ರತಿಯೊಬ್ಬ ಸದಸ್ಯನಿಗೂ ಒಂದೊಂದು ಮತದಂತೆ ನೀಡಿದರೆ ಮೂರನೇ ಎಸ್ಟೇಟಿನವರಿಗೆ ಬಹುಮತ ಲಭಿಸುತ್ತದೆ. ಅದಕ್ಕೆ ಬದಲಾಗಿ ಪ್ರತಿಯೊಂದು ಎಸ್ಟೇಟಿಗೂ ಒಂದೊಂದು ಮತದಂತೆ ನೀಡಿದರೆ ಒಂದು ಮತ್ತು ಎರಡನೇ ಎಸ್ಟೇಟಿನವರು ಒಂದಾಗಿ ಮೂರನೇ ಎಸ್ಟೇಟಿನವರನ್ನು ಪರಾಜಯಗೊಳಿಸಲು ಸಾಧ್ಯವಾಗುತ್ತದೆ.

ಫ್ರೆಂಚ್‌ಕ್ರಾಂತಿಯ ವಿವಿಧ ಘಟನೆಗಳನ್ನು ಪಾಠಪುಸ್ತಕದ ಸಹಾಯದಿಂದ ಅವಲೋಕಿಸಿ ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಎಂಬೀ ಉದ್ದೇಶಗಳನ್ನು ಪೂರ್ಣವಾಗಿ ಗಳಿಸಲು ಸಾಧ್ಯವಾಗಲಿಲ್ಲ ಎಂಬುದನ್ನು ಕಂಡುಕೊಳ್ಳುತ್ತಾರೆ. ಅನಂತರ ಫ್ರೆಂಚ್ ಕ್ರಾಂತಿಯ ಪ್ರಭಾವದ ಕುರಿತಾದ ಚರ್ಚೆಯ ಪೂರ್ವ ತಯಾರಿಯಾಗಿ ಪಾಠಭಾಗದಲ್ಲಿ ನೀಡಿರುವ ಮೆಟರ್ನಿಕನ ಅಭಿಪ್ರಾಯದ ಪ್ರಾಧಾನ್ಯವನ್ನು ಪರಿಶೀಲಿಸುತ್ತಾರೆ. ಅವನ ಈ ಅಭಿಪ್ರಾಯವು ಫ್ರೆಂಚ್ ಕ್ರಾಂತಿಯು ಯುರೋಪಿನಾದ್ಯಂತ ಪ್ರಭಾವ ಬೀರಲು ಸಾಧ್ಯವಾದುದಕ್ಕೆ ಉದಾಹರಣೆ ಎಂಬುದನ್ನು ಕಂಡುಕೊಳ್ಳುತ್ತಾರೆ. ಅನಂತರ ಗುಂಪುಗಳಲ್ಲಿ ಫ್ರೆಂಚ್ ಕ್ರಾಂತಿಯ ಪ್ರಭಾವವನ್ನು ಬರೆದಿರುವ ಚಾರ್ಟನ್ನು ಹಾಗೂ ಮಾನವ ಹಕ್ಕುಗಳ ಘೋಷಣೆಯನ್ನು ವಿಶ್ಲೇಷಿಸಿ ಟಿಪ್ಪಣಿಯನ್ನು ತಯಾರಿಸುತ್ತಾರೆ. ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಎಂಬೀ ಉದ್ದೇಶಗಳ ಪ್ರಭಾವವು ಇದರಲ್ಲಿ ಪ್ರತಿಫಲಿಸುತ್ತದೆ ಎಂಬ ಕ್ರೋಡೀಕರಣದ ಮೂಲಕ ಚರ್ಚೆಯು ಪೂರ್ತಿಗೊಳ್ಳುತ್ತದೆ.

### ನೆಪೋಲಿಯನ್ ಹಾಗೂ ಫ್ರೆಂಚ್ ಕ್ರಾಂತಿ

ಫ್ರೆಂಚ್ ಕ್ರಾಂತಿಯ ನಂತರ ಫ್ರಾನ್ಸ್‌ನಲ್ಲಿ ಅಧಿಕಾರಕ್ಕೆ ಬಂದ ನೆಪೋಲಿಯನ್ನನ ಮೇಲೆ ಫ್ರೆಂಚ್ ಕ್ರಾಂತಿಯು ಎಷ್ಟರ ಮಟ್ಟಿಗೆ ಪ್ರಭಾವ ಬೀರಿತು? ಎಂಬ ಪ್ರಶ್ನೆಯ

ಮೂಲಕ ಪಾಠಭಾಗವನ್ನು ಆರಂಭಿಸಬಹುದು. ಅನಂತರ ಗುಂಪುಗಳಲ್ಲಿ ಪಾಠಪುಸ್ತಕವನ್ನು ಪರಿಶೀಲಿಸಿ ನೆಪೋಲಿಯನ್ನನ ಧೋರಣೆ ಹಾಗೂ ಸುಧಾರಣೆಗಳನ್ನು ವಿಶ್ಲೇಷಿಸುತ್ತಾರೆ. ಅನಂತರ ಅವುಗಳನ್ನು ಫ್ರೆಂಚ್ ಕ್ರಾಂತಿಯ ಉದ್ದೇಶ ಹಾಗೂ ಆಶಯಗಳೊಂದಿಗೆ ತುಲನೆ ಮಾಡಿ ಪಾಠದಲ್ಲಿ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸುತ್ತಾರೆ.

| ಫ್ರೆಂಚ್ ಕ್ರಾಂತಿಯು ಮುಂದಿರಿಸಿದ ಆಶಯಗಳು/ಉದ್ದೇಶಗಳು | ನೆಪೋಲಿಯನ್ನನ ಸುಧಾರಣೆಗಳು/ ಧೋರಣೆಗಳು |
|---|---|
| • ಮಧ್ಯಮ ವರ್ಗದ ಬೆಳವಣಿಗೆ | • ಪುರೋಹಿತರ ಮೇಲೆ ನಿಯಂತ್ರಣವನ್ನು ಹೇರಿದನು.<br>• ಬೇಂಕ್ ಆಫ್ ಫ್ರಾನ್ಸಿನ ಸ್ಥಾಪನೆ.<br>• ನಿಯಮ ಸಂಹಿತೆ<br>• ರಸ್ತೆಗಳನ್ನು ನಿರ್ಮಿಸಿದನು.<br>• ಸಿಂಕಿಂಗ್ ಫಂಡ್ |
| • ಫ್ಯೂಡಲಿಸಂನ ಅಂತ್ಯ | • ಕೃಷಿಕರನ್ನು ಕೃಷಿ ಭೂಮಿಯ ಒಡೆಯರನ್ನಾಗಿ ಮಾಡಲಾಯಿತು.<br>• ಪುರೋಹಿತರ ಮೇಲೆ ನಿಯಂತ್ರಣ<br>• ನಿಯಮ ಸಂಹಿತೆ |
| • ರಾಷ್ಟ್ರೀಯತೆ | • ಸಾರಿಗೆ ಪ್ರಗತಿ<br>• ಬೇಂಕ್ ಆಫ್ ಫ್ರಾನ್ಸ್<br>• ನಿಯಮ ಸಂಹಿತೆ |

## ಲ್ಯಾಟಿನ್ ಅಮೇರಿಕಾದ ಕ್ರಾಂತಿ

ದಕ್ಷಿಣ ಅಮೇರಿಕಾದ ಪ್ರಾಚೀನ ನಾಗರೀಕತೆಯ ಕೇಂದ್ರವಾದ ಮಾಚ್ಚುಪಿಕ್ಚುವಿನ ಕುರಿತಾದ ಕವಿತೆಯನ್ನು ವಿಶ್ಲೇಷಿಸುವ ಮೂಲಕ ಪಾಠವನ್ನು ಆರಂಭಿಸಬಹುದು. ಕವಿತೆಯಿಂದ ಕೆಳಗೆ ಕೊಟ್ಟಿರುವವುಗಳನ್ನು ಕಂಡುಕೊಳ್ಳಬಹುದು.

- ಜನರ ಸಂಪತ್ತನ್ನು ವಸಾಹತು ಅಧಿಕಾರಿಗಳು ಕೊಳ್ಳೆ ಹೊಡೆದರು.
- ವಸಾಹತಿನ ಜನರನ್ನು ಗುಲಾಮರನ್ನಾಗಿಸಿದರು.
- ವಸಾಹತಿನ ಅಧಿಕಾರಿಗಳ ಸುಖ ಜೀವನಕ್ಕಾಗಿ ಅವರು ವಸಾಹತಿನ ಸಂಪತ್ತನ್ನೂ ಜನರ ಜೀವನವನ್ನೂ ಬಳಸಿಕೊಂಡರು.

ಭೂಪಟದ ಸಹಾಯದಿಂದ ಲ್ಯಾಟಿನ್ ಅಮೇರಿಕಾದ ಪ್ರದೇಶಗಳು ಹಾಗೂ ದೇಶಗಳನ್ನು ಕಂಡುಹಿಡಿಯುತ್ತಾರೆ.

- ಲ್ಯಾಟಿನ್ ಅಮೇರಿಕಾದ ದೇಶಗಳ ಭಾಷೆ ಯಾವುದು ?
- ಗೇಬ್ರಿಯಲ್ ಗಾರ್ಸ್ಯ ಮಾರ್ಕ್ವೆಸ್ ಎಂಬ ಮೆಕ್ಸಿಕೋದ ಬರಹಗಾರನು ಯಾವ ಭಾಷೆಯಲ್ಲಿ ತನ್ನ ಕೃತಿಗಳನ್ನು ರಚಿಸಿದನು ?
- ಅಂತರ್ಜಾಲ ಹಾಗೂ ಇತರ ಪುಸ್ತಕಗಳ ಸಹಾಯದಿಂದ ಈ ಪ್ರಶ್ನೆಗಳಿಗಿರುವ ಉತ್ತರವನ್ನು ಕಂಡುಹಿಡಿಯುತ್ತಾರೆ.
- ಯುರೋಪಿನ ಭಾಷೆಗಳಾದ ಸ್ಪಾನಿಷ್, ಪೋರ್ಚುಗೀಸ್ ಎಂಬಿವುಗಳು ಲ್ಯಾಟಿನ್

ಅಮೇರಿಕಾ ದೇಶಗಳ ಅಧಿಕೃತ ಭಾಷೆಗಳಾಗಲು ಕಾರಣವೇನು?

ಅನಂತರ ವಿವಿಧ ಗುಂಪುಗಳಾಗಿ ವಿಭಜಿಸಿ, ಪಾಠಭಾಗವನ್ನು ಚರ್ಚಿಸಿ, ಯುರೋಪಿನ ವಸಾಹತೀಕರಣವು ಲ್ಯಾಟಿನ್ ಅಮೇರಿಕಾದ ದೇಶಗಳನ್ನು ಹೇಗೆ ಬಾಧಿಸಿತೆಂಬುದನ್ನು ಕಂಡುಹಿಡಿಯುತ್ತಾರೆ. ಕಂಡುಕೊಂಡ ವಿಚಾರಗಳನ್ನು ಸೇರಿಸಿಕೊಂಡು ಟಿಪ್ಪಣಿ ತಯಾರಿಸುತ್ತಾರೆ.

- ಲ್ಯಾಟಿನ್ ಅಮೇರಿಕಾದ ಪ್ರಾದೇಶಿಕ ಸಂಸ್ಕೃತಿಯು ನಾಶ ಹೊಂದಿತು.
- ಯುರೋಪಿನ ಸಂಸ್ಕೃತಿ ಹಾಗೂ ಜೀವನ ವಿಧಾನಗಳು ವಸಾಹತುಗಳಲ್ಲಿ ಜಾರಿಗೊಂಡವು.
- ವಸಾಹತಿನ ಜನರಲ್ಲಿ ವಂಶೀಯಬೇಧಭಾವವನ್ನು ಸೃಷ್ಟಿಸಿದರು.
- ವಸಾಹತಿನ ಜನರ ಸಂಪತ್ತನ್ನು ಬೃಹತ್ ಪ್ರಮಾಣದಲ್ಲಿ ಕೊಳ್ಳೆ ಹೊಡೆದರು.
- ವಾಣಿಜ್ಯ ನಿಯಂತ್ರಣಗಳನ್ನೇರ್ಪಡಿಸಿದರು.
- ವಸಾಹತಿನ ಜನರನ್ನು ಗುಲಾಮರನ್ನಾಗಿ ಮಾಡಿದರು.

**ಲ್ಯಾಟಿನ್ ಅಮೇರಿಕಾ ಹಾಗೂ ಕಾಲ್ಚೆಂಡು (ಫುಟ್‌ಬಾಲ್)**

ಕಾಲ್ಚೆಂಡು ಲ್ಯಾಟಿನ್ ಅಮೇರಿಕನ್ನರ ಪ್ರಾಣವಾಯುವಾಗಿದೆ. ಲ್ಯಾಟಿನ್ ಅಮೇರಿಕಾದ ಹೆಚ್ಚಿನ ದೇಶಗಳೂ ಕಾಲ್ಚೆಂಡಿನಲ್ಲಿ ಗಮನ ಸೆಳೆದವುಗಳಾಗಿವೆ. 'ಕೋಪ್ಪ' ಅಮೇರಿಕಾವು ಲ್ಯಾಟಿನ್ ಅಮೇರಿಕಾದ ದೇಶಗಳಿಗಾಗಿ ನಡೆಸುವ ಕಾಲ್ಚೆಂಡು ಪಂದ್ಯಾಟವಾಗಿದೆ. ಪೈಲೆ, ಮರಡೋನ, ಮೆರ್ಸಿ ಮೊದಲಾದ ಪ್ರಸಿದ್ಧ ಆಟಗಾರರನ್ನು ಲ್ಯಾಟಿನ್ ಅಮೇರಿಕಾವು ಜಗತ್ತಿಗೆ ನೀಡಿದೆ.

ಹೀಗೆ ಜೀವನ ಹಾಗೂ ಸಂಸ್ಕೃತಿಯನ್ನು ಕಳೆದುಕೊಂಡ ಜನತೆಯು ಅವುಗಳನ್ನು ಪುನಃ ಗಳಿಸುವುದಕ್ಕಾಗಿ ನಡೆಸಿದ ಹೋರಾಟವೇ ಲ್ಯಾಟಿನ್ ಅಮರಿಕಾದ ಕ್ರಾಂತಿ ಎಂಬ ತಿಳುವಳಿಕೆಯ ಮೂಲಕ ಚರ್ಚೆಯನ್ನು ಕ್ರೋಢೀಕರಿಸಬೇಕು. ಅನಂತರ ಯುರೋಪಿಯನ್ನರಿಂದ ವಿಮೋಚನೆ ಹೊಂದಿದ ಕೆಲವು ಲ್ಯಾಟಿನ್ ಅಮೇರಿಕಾದ ದೇಶಗಳನ್ನು ಭೂಪಟದ ಸಹಾಯದಿಂದ ಕಂಡುಹಿಡಿದು ಪಟ್ಟಿ ತಯಾರಿಸುತ್ತಾರೆ.

- ಮೆಕ್ಸಿಕೋ
- ಕೊಲಂಬಿಯಾ
- ವೆನಿಜುವೆಲಾ
- ಈಕ್ವಡೋರ್
- ಪೆರು
- ಬ್ರೆಝಿಲ್
- ಬೊಲಿವಿಯಾ
- ಚಿಲಿ
- ಅರ್ಜೆಂಟಿನಾ

**ರಷ್ಯಾದ ಕ್ರಾಂತಿ**

ಮಾಕ್ಸಿಂ ಗೋರ್ಕಿಯ 'ಅಮ್ಮ' ಎಂಬ ಕಾದಂಬರಿಯ ಒಂದು ಭಾಗವನ್ನು ಪಾಠಪುಸ್ತಕದಲ್ಲಿ ಕೊಡಲಾಗಿದೆ. ಅದನ್ನು ವಿಶ್ಲೇಷಿಸುತ್ತಾ ಪಾಠವನ್ನಾರಂಭಿಸಬಹುದು. ಅದರಿಂದ ಅಂದಿನ ರಷ್ಯಾ ಸಮಾಜದ ಕುರಿತು ಕೆಳಗೆ ಕೊಟ್ಟಿರುವವುಗಳನ್ನು ಕಂಡುಹಿಡಿಯಬಹುದು.

- ಎಲ್ಲ ಉತ್ಪಾದನೆಯ ಮೂಲಭೂತ ಘಟಕ ಕಾರ್ಮಿಕನಾಗಿದ್ದಾನೆ.
- ಆದರೆ ಕಾರ್ಮಿಕನಿಗೆ ಯಾವುದೇ ಹಕ್ಕುಗಳಿಲ್ಲ.
- ಕಾರ್ಮಿಕರನ್ನು ಶೋಷಣೆ ಮಾಡಿ ಬಂಡವಾಳಗಾರರು ಲಾಭ ಗಳಿಸುತ್ತಾರೆ..

**ಕಾರ್ಮಿಕರ ಆವಶ್ಯಕತೆಗಳಾವುವು?**

- ಖಾಸಗಿ ಸೊತ್ತು ಸಂಪ್ರದಾಯವನ್ನು ಕೊನೆಗೊಳಿಸಬೇಕು.
- ಎಲ್ಲರೂ ದುಡಿಯಬೇಕು.
- ಕೆಲಸಗಾರರಿಗೆ ಹಾಗೂ ಜನರಿಗೆ ಎಲ್ಲ ಅಧಿಕಾರಗಳನ್ನು ನೀಡಬೇಕು.
- ಉತ್ಪಾದನೆಯ ಎಲ್ಲ ಘಟಕಗಳೂ ಜನರದ್ದಾಗಬೇಕು.

ಇಂತಹ ಆವಶ್ಯಕತೆಗಳನ್ನು ಮುಂದಿಡಲು ಜನರನ್ನು ಪ್ರೇರೇಪಿಸಿದ ಘಟಕಗಳು ಯಾವುವು? ಲಿಯೋ ಟಾಲ್‌ಸ್ಟಾಯ್, ಆಂಟನ್ ಚೆಕೋವ್, ಇವಾನ್ ತುರ್ಗನೇವ್ ಮೊದಲಾದವರ ಸಾಹಿತ್ಯ ಕೃತಿಗಳನ್ನು ಓದಿ ಚರ್ಚಿಸುವ ಮೂಲಕ ಅಂದಿನ ರಷ್ಯಾ ಸಮಾಜದ ಕುರಿತಾದ ಸ್ಪಷ್ಟವಾದ ತಿಳುವಳಿಕೆಯನ್ನು ಗಳಿಸಲು ಸಾಧ್ಯವಿದೆ.

ಅನಂತರ ವಿವಿಧ ಗುಂಪುಗಳಲ್ಲಿ ಪಾಠಪುಸ್ತಕವನ್ನು ಓದಿ ರಷ್ಯಾದ ಕ್ರಾಂತಿಗಿರುವ ವಿವಿಧ ಕಾರಣಗಳನ್ನು ಕಂಡುಹಿಡಿದು, ಚರ್ಚಿಸಿ, ಟಿಪ್ಪಣಿ ತಯಾರಿಸುತ್ತಾರೆ.

- ಝಾರ್ ಚಕ್ರವರ್ತಿಗಳ ಏಕಾಧಿಪತ್ಯ
- ಕೃಷಿಕರು ಹಾಗೂ ಕಾರ್ಮಿಕರು ಎದುರಿಸಿದ ಕಷ್ಟಗಳು
- ಕೃಷಿ– ಕೈಗಾರಿಕಾ ರಂಗಗಳಲ್ಲುಂಟಾದ ಉತ್ಪಾದನೆಯ ಕುಸಿತ.
- ಕೈಗಾರಿಕಾ ರಂಗದಲ್ಲಿ ವಿದೇಶೀಯರ ಪಾಲ್ಗೊಳ್ಳುವಿಕೆ.
- ಸಾಹಿತಿಗಳು ಹಾಗೂ ಮಾರ್ಕಿಸ್ಟ್ ಆಶಯಗಳ ಪ್ರಭಾವ.
- ಮೆನ್ಶೆವಿಕ್ ಮತ್ತು ಬೊಲ್ಶೆವಿಕ್
- ಲೆನಿನ್, ಟ್ರೊಟ್ಸ್ಕಿ, ಕರೆನ್ಸ್ಕಿ ಮೊದಲಾದ ನಾಯಕರ ಪ್ರಭಾವ
- ರಷ್ಯಾ–ಜಪಾನ್ ಯುದ್ಧದಲ್ಲಿ ರಷ್ಯಾಕ್ಕಾದ ಪರಾಜಯ
- ಪ್ರಥಮ ಜಾಗತಿಕ ಯುದ್ಧದ ಆಘಾತ

ಮೊದಲಾದ ಘಟಕಗಳಿಗೆ ಒತ್ತು ನೀಡಿ ಚರ್ಚಿಸಬೇಕು. ಈ ಘಟಕಗಳು ರಷ್ಯಾವನ್ನು ಫೆಬ್ರವರಿ ಕ್ರಾಂತಿಯತ್ತ ಕೊಂಡೊಯ್ದ ಸನ್ನಿವೇಶಗಳನ್ನು ಚರ್ಚಿಸಿ ಟಿಪ್ಪಣಿಯೊಂದಿಗೆ ಸೇರಿಸಬೇಕು.

- ಫೆಬ್ರವರಿ ಕ್ರಾಂತಿಯ ನಂತರ ಪುನಃ ಮತ್ತೊಂದು ಕ್ರಾಂತಿಯು ಕೂಡಾ ರಷ್ಯಾದಲ್ಲಿ ನಡೆಯಲು ಕಾರಣವೇನು?
- ಫೆಬ್ರವರಿ ಕ್ರಾಂತಿಯ ಸಾಧನೆಗಳು ಹಾಗೂ ಕೊರತೆಗಳು ಯಾವುವು?

ಈ ಪ್ರಶ್ನೆಗಳ ನಂತರ ಅಕ್ಟೋಬರ್ ಕ್ರಾಂತಿಗೆ ಕಾರಣವಾದ ಸನ್ನಿವೇಶಗಳನ್ನು ಪಾಠಪುಸ್ತಕದ ವಿಶ್ಲೇಷಣೆಯ ಮೂಲಕ ಕಂಡುಹಿಡಿದು ಮಂಡಿಸಬೇಕು.

- ಝಾರ್ ಚಕ್ರವರ್ತಿಯ ಆಡಳಿತವನ್ನು ಕೊನೆಗೊಳಿಸಿದುದು ಫೆಬ್ರವರಿ ಕ್ರಾಂತಿಯ ಪ್ರಧಾನ ಸಾಧನೆಯಾಗಿದೆ.
- ರಷ್ಯಾವನ್ನು ಫೆಬ್ರವರಿ ಕ್ರಾಂತಿಯತ್ತ ಕೊಂಡೊಯ್ದ ಸನ್ನಿವೇಶಗಳಾವುವೂ ಕ್ರಾಂತಿಯ ನಂತರವೂ ಬದಲಾಗಲಿಲ್ಲ. ಇದು ಜನರನ್ನು ಮತ್ತೊಂದು ಕ್ರಾಂತಿಗೆ ಪ್ರೇರೇಪಿಸಿತು.
- ಲೆನಿನ್‌ನ ನೇತೃತ್ವದಲ್ಲಿರುವ ಬೊಲ್ಶೆವಿಕರ ಪಾತ್ರ.

ತರುವಾಯ ಬೊಲ್ಶೆವಿಕ್ ಕ್ರಾಂತಿಯ ನಂತರ ರಷ್ಯಾದಲ್ಲಾದ ಬದಲಾವಣೆಗಳನ್ನು ಅವಲೋಕಿಸಿ, ಫೆಬ್ರವರಿ ಕ್ರಾಂತಿ ಮತ್ತು ಅಕ್ಟೋಬರ್ ಕ್ರಾಂತಿಗಳನ್ನು ಪರಸ್ಪರ ಹೋಲಿಸಿ ಟಿಪ್ಪಣಿ ತಯಾರಿಸುತ್ತಾರೆ.

| ಫೆಬ್ರವರಿ ಕ್ರಾಂತಿ | ಅಕ್ಟೋಬರ್ ಕ್ರಾಂತಿ |
|---|---|
| • ಮೆನ್ಶೆವಿಕರು ನೇತೃತ್ವ ನೀಡಿದರು | • ಬೊಲ್ಶೆವಿಕರು ನೇತೃತ್ವ ನೀಡಿದರು |
| • ಪ್ರಥಮ ಜಾಗತಿಕ ಯುದ್ಧದಿಂದ ಹಿಂದಕ್ಕೆ ಸರಿಯಲಿಲ್ಲ. | • ಪ್ರಥಮ ಜಾಗತಿಕ ಯುದ್ಧದಿಂದ ಹಿಂದಕ್ಕೆ ಸರಿದರು. |
| • ಝಾರ್ ಚಕ್ರವರ್ತಿಯ ಆಡಳಿತ ಕೊನೆಗೊಂಡಿತು | • ಮೆನ್ಶೆವಿಕರ ಆಡಳಿತ ಕೊನೆಗೊಂಡಿತು. |
| • ಪ್ರಭುಗಳು ಭೂಮಿಯ ಒಡೆಯರಾಗಿ ಮುಂದುವರಿದರು | • ಕೃಷಿಕರಿಗೆ ಭೂಮಿಯನ್ನು ವಿತರಿಸಿದರು. |
| • ಸಾರ್ವಜನಿಕ ಒಡೆತನಕ್ಕೆ ಪ್ರಾಧಾನ್ಯವನ್ನೀಯಲಿಲ್ಲ. | • ಕಾರ್ಖಾನೆಗಳು, ಬೇಂಕುಗಳು, ಸಾರಿಗೆ ಮೊದಲಾದ ವುಗಳು ಸಾರ್ವಜನಿಕ ಒಡೆತನಕ್ಕೊಳಪಟ್ಟಿತು. |

ಹೋಲಿಕಾ ಟಿಪ್ಪಣಿಯನ್ನು ವಿಶ್ಲೇಷಿಸಿ, ರಷ್ಯಾದಲ್ಲೊಂದು ಕಾರ್ಮಿಕ ಆಡಳಿತವನ್ನು ಸ್ಥಾಪಿಸುವಲ್ಲಿ ಅಕ್ಟೋಬರ್ ಕ್ರಾಂತಿಯು ವಹಿಸಿದ ಪಾತ್ರವನ್ನು ಚರ್ಚಿಸಬಹುದು.

## ಚೀನಾದ ಕ್ರಾಂತಿ

ಅಫೀಮು ವ್ಯಾಪಾರ ಹಾಗೂ ತೆರೆದ ಬಾಗಿಲ ಧೋರಣೆಗೆ ಸಂಬಂಧಿಸಿದ ಟಿಪ್ಪಣಿಗಳನ್ನು ವಿಶ್ಲೇಷಿಸುವ ಮೂಲಕ ಪಾಠಭಾಗವನ್ನಾರಂಭಿಸಬಹುದು.

- ಸಾಮ್ರಾಜ್ಯಶಾಹಿ ಶಕ್ತಿಗಳು ಚೀನಾದಲ್ಲಿ ಜ್ಯಾರಿಗೊಳಿಸಿದ ಅಫೀಮು ಯುದ್ಧ ಹಾಗೂ ತೆರೆದ ಬಾಗಿಲ ಧೋರಣೆಯು ಇತರ ದೇಶಗಳಲ್ಲಿ ಸ್ವೀಕರಿಸಿದ ಧೋರಣೆಗಳಿಗಿಂತ ಯಾವ ಯಾವ ರೀತಿಯಲ್ಲಿ ಭಿನ್ನವಾಗಿದೆ ?

ಈ ಪ್ರಶ್ನೆಯ ಉತ್ತರವನ್ನು ಪಾಠಭಾಗವನ್ನು ಪರಿಶೋಧಿಸಿ ಕಂಡುಹಿಡಿಯುತ್ತಾರೆ.




ಅನಂತರ ಚೀನಾದಲ್ಲಿ ವಿದೇಶಾಡಳಿತಕ್ಕೆದುರಾಗಿ ನಡೆದ ಮುಷ್ಠಿ ಯುದ್ಧ ಅಥವಾ ಬೋಕ್ಸರ್ ದಂಗೆ, ಸನ್‌ಯಾತ್ ಸೇನನ ನೇತೃತ್ವದಲ್ಲಿ ನಡೆದ ಕ್ರಾಂತಿ ಇತ್ಯಾದಿಗಳನ್ನು ಪಾಠಪುಸ್ತಕದ ಸಹಾಯದಿಂದ ಗುಂಪಿನಲ್ಲಿ ಚರ್ಚಿಸಿ ಟಿಪ್ಪಣಿ ತಯಾರಿಸುತ್ತಾರೆ. ಸನ್‌ಯಾತ್ ಸೇನನು ಚೀನಾದಲ್ಲಿ ಕೈಗೊಂಡ ಸುಧಾರಣೆಗಳ ವಿಶೇಷತೆಗಳನ್ನು ಪಟ್ಟಿ ಮಾಡುತ್ತಾರೆ.

- ರಾಷ್ಟ್ರೀಯತೆ
- ವಿದೇಶಾಡಳಿತಕ್ಕೆ ವಿರೋಧ
- ರಾಜಾಡಳಿತಕ್ಕೆ ವಿರೋಧ
- ಪ್ರಜಾಪ್ರಭುತ್ವ
- ಸಮಾಜವಾದ
- ಕೃಷಿ ಹಾಗೂ ಕೈಗಾರಿಕೆಯ ಪ್ರಗತಿ
- ಸಮಾಜವಾದದೊಂದಿಗಿನ ಸಹಕಾರ..

ಸಮಾಜವಾದದೊಂದಿಗೆ ಸಹಕರಿಸಿಕೊಂಡು ಸಾಗಿದ ಕುಮಿಂಗ್ ತಾಂಗ್ ಆಡಳಿತಕ್ಕೆದುರಾಗಿ ಕಮ್ಯೂನಿಸ್ಟರು ಕ್ರಾಂತಿ ನಡೆಸಲು ಕಾರಣವೇನು?

ಈ ಪ್ರಶ್ನೆಯ ನಂತರ ಚಿಯಾಂಗ್ ಕೈಶೇಕ್‌ನ ನೇತೃತ್ವದ ಕುಮಿಂಗ್ ತಾಂಗ್ ಆಡಳಿತಕ್ಕೆದುರಾಗಿ ಮಾವೋನ ನೇತೃತ್ವದಲ್ಲಿ ಕಮ್ಯೂನಿಸ್ಟರು ಕ್ರಾಂತಿ ನಡೆಸಲು ಕಾರಣವಾದ ಸನ್ನಿವೇಶಗಳನ್ನು ಗುಂಪಿನಲ್ಲಿ ಚರ್ಚಿಸಿ ಮಂಡಿಸುತ್ತಾರೆ.

- ವಿದೇಶಿ ಶಕ್ತಿಗಳಿಗೆ ಅನುಕೂಲವಾಗುವಂತಹ ತೀರ್ಮಾನ
- ಸಮಾಜವಾದದೊಂದಿಗಿನ ವಿರೋಧ
- ಸೈನಿಕ ಏಕಾಧಿಪತ್ಯ

ಮೊದಲಾದ ಘಟಕಗಳು ಮಾವೋನ ನೇತೃತ್ವದಲ್ಲಿ ನಡೆದ ಕ್ರಾಂತಿಗೆ ಕಾರಣವಾಯಿತು ಎಂಬ ತಿಳುವಳಿಕೆಯು ಚರ್ಚೆಯ ಮೂಲಕ ವಿದ್ಯಾರ್ಥಿಗಳಲ್ಲಿ ರೂಪುಗೊಳ್ಳಬೇಕು.

ವಿದೇಶಾಡಳಿತದಿಂದ ಚೀನಾದ ವಿಮೋಚನೆ ಹಾಗೂ ಚೀನಾ ಗಣರಾಜ್ಯವಾದುದರ ಕುರಿತು ವಿಚಾರಗೋಷ್ಠಿಯೊಂದನ್ನು ನಡೆಸಬಹುದು.

- ವಿದೇಶ ಶಕ್ತಿಗಳು ಚೀನಾದಲ್ಲಿ ಕೈಗೊಂಡ ಧೋರಣೆಗಳ ವಿಶೇಷತೆಗಳು
- ಮುಷ್ಠಿ ಯುದ್ಧ, ಸನ್‌ಯಾತ್ ಸೇನನ ನೇತೃತ್ವದ ಹೋರಾಟ, ಸನ್‌ಯಾತ್‌ಸೇನನು ಜಾರಿಗೊಳಿಸಿದ ಸುಧಾರಣೆಗಳು.
- ಮಾವೋನ ನೇತೃತ್ವದಲ್ಲಿ ನಡೆದ ಕಮ್ಯೂನಿಸ್ಟ್ ಕ್ರಾಂತಿ.

ಈ ಮೂರು ವಲಯುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಮೂರು ಗುಂಪುಗಳು ಸಂಗ್ರಹಿಸಿ ಗುಂಪಿನಲ್ಲಿ ಚರ್ಚಿಸಿ ಮಂಡಿಸುವ ಮೂಲಕ ವಿಚಾರಗೋಷ್ಠಿಯನ್ನೇರ್ಪಡಿಸಬಹುದು.

ಅನಂತರ ಪಾಠಭಾಗದಲ್ಲಿ ಚರ್ಚಿಸಿದ ವಿವಿಧ ಕ್ರಾಂತಿಗಳಿಗೆ ಸಂಬಂಧಿಸಿದ ತೌಲನಿಕ ಟಿಪ್ಪಣಿಯನ್ನು ಗುಂಪುಗಳಲ್ಲಿ ಚರ್ಚಿಸಿ, ಪೂರ್ತಿಗೊಳಿಸಿ ಕೆಳಗೆ ಕೊಟ್ಟಿರುವಂತೆ ಮಂಡಿಸುತ್ತಾರೆ.

| ಕ್ರಾಂತಿಗಳು | ಅಮೇರಿಕದ ಸ್ವಾತಂತ್ರ್ಯ ಹೋರಾಟ | ಫ್ರೆಂಚ್ ಕ್ರಾಂತಿ | ಲೇಟಿನ್ ಅಮೇರಿಕಾದ ಕ್ರಾಂತಿ | ರಷ್ಯಾ ಕ್ರಾಂತಿ | ಚೀನಾ ಕ್ರಾಂತಿ |
|---|---|---|---|---|---|
| ಕಾಲ | 1775-1783 | 1789 | 1800-1825 | 1917 | 1911, 1949 |
| ನೇತಾರರು | ಜೋರ್ಜ್ ವಾಷಿಂಗ್ಟನ್, ಥೋಮಸ್ ಜೆಫರ್‌ಸನ್, ಬೆಂಜಮಿನ್ ಫ್ರಾಂಕ್ಲಿನ್, ಜೋನ್ ಆಡಮ್ಸ್ | | ಫ್ರಾನ್ಸಿಸ್ಕೋ ಮಿರಾಂಡ, ಸೈಮನ್ ಬೊಲಿವರ್, ಜೋಸ್ ಡಿ ಸಾನ್ ಮಾರ್ಟಿನ್ | ಲೆನಿನ್, ಟ್ರೌಟ್‌ಸ್ಕಿ ಕರೆನ್ಸಿಕ | ಸನ್‌ಯಾತ್ ಸೇನ್, ಮಾವೊ ತ್ಸೆತುಂಗ್ |
| ಪ್ರಧಾನ ಉದ್ದೇಶಗಳು | ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಅಮೇರಿಕಾ ವಸಾಹತುಗಳ ವಿಮೋಚನೆ | ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಹಾಗೂ ರಾಜಾಡಳಿತ, ಫ್ಯೂಡಲ್ ವ್ಯವಸ್ಥೆ, ಪುರೋಹಿತ ಮೇಧಾವಿತ್ವಕ್ಕೆ ವಿರೋಧ ಮತ್ತು ಮಧ್ಯಮ ವರ್ಗದ ಬೆಳವಣಿಗೆ | ಲೇಟಿನ್ ಅಮೇರಿಕಾದ ವಿಮೋಚನೆ, ಪ್ರಾದೇಶಿಕ ಸಂಸ್ಕೃತಿಗಳ ರಕ್ಷಣೆ | ರಾಜಾಡಳಿತದ ಅಂತ್ಯ, ಕಾರ್ಮಿಕ ವರ್ಗದ ಸರ್ವಾಧಿಪತ್ಯ | ರಾಜಾಡಳಿತದಿಂದ ವಿಮೋಚನೆ, ವಿದೇಶಾಡಳಿತಕ್ಕೆ ವಿರೋಧ |
| ಪ್ರಭಾವ ಬೀರಿದ ಆಶಯಗಳು, ತತ್ವಗಳು | ಜೋನ್ ಲೋಕ್, ಥೋಮಸ್ ಪೈನ್, ಸ್ವಾತಂತ್ರ್ಯ | ವಾಲ್ಟೇರ್, ರುಸ್ಸೋ, ಮೋಂಟೆಸ್ಕ್ಯೂ, ಮಧ್ಯಮ ವರ್ಗದ ವಿಮೋಚನೆ, ಸ್ವಾತಂತ್ರ್ಯ, ಸಮಾನತೆ, ಸಹೋದರತೆ | ಅಮೇರಿಕಾ ಸ್ವಾತಂತ್ರ್ಯ ಹೋರಾಟ ಹಾಗೂ ಫ್ರೆಂಚ್ ಕ್ರಾಂತಿಯ ಆಶಯಗಳು | ಸಮಾಜವಾದ, ಕಮ್ಯೂನಿಸಂ, ಕಾರ್ಲ್ ಮಾರ್ಕ್ಸ್, ಫ್ರೆಡರಿಕ್ ಏಂಜಲ್ಸ್, ಮ್ಯಾಕ್ಸಿಂ ಗೋರ್ಕಿ, ಟಾಲ್ ಸ್ಟಾಯ್, ತುರ್ಗನೇವ್, ಆಂಟನ್ ಚೆಕೋವ್ | ಸಮಾಜವಾದ, ಕಮ್ಯೂನಿಸಂ |
| ಪ್ರಧಾನ ಪರಿಣಾಮಗಳು | ಅಮೇರಿಕಾದ ವಸಾಹತುಗಳ ವಿಮೋಚನೆ, ಅಮೇರಿಕಾ ಸಂಯುಕ್ತ ಪ್ರಾಂತ್ಯಗಳ ರೂಪೀಕರಣ, ಅಮೇರಿಕಾದ ಸ್ವಾತಂತ್ರ್ಯ ಘೋಷಣೆ | ರಾಜಾಡಳಿತ ಮತ್ತು ಫ್ಯುಡಲಿಸಂನ ಪತನ, ಮಧ್ಯಮ ವರ್ಗದ ಬೆಳವಣಿಗೆ, ಮಾನವ ಹಕ್ಕುಗಳ ಘೋಷಣೆ | ಲ್ಯಾಟಿನ್ ಅಮೇರಿಕಾದ ವಿಮೋಚನೆ | ಕಾರ್ಮಿಕ ವರ್ಗದ ಮುನ್ನಡೆ, ಸಮಾಜವಾದದ ವ್ಯಾಪಿಸುವಿಕೆ, ಸೋವಿಯತ್ ಯೂನಿಯನ್ನಿನ ರೂಪೀಕರಣ | ಸಮಾಜವಾದದ ವ್ಯಾಪಿಸುವಿಕೆ, ಜನಕೀಯ ಚೀನಾ ರಿಪಬ್ಲಿಕ್‌ನ ರೂಪೀಕರಣ, ರಾಜಾಡಳಿತ ಹಾಗೂ ವಿದೇಶಾಡಳಿತದ ಅಧಃಪತನ |

## ? ಮೌಲ್ಯನಿರ್ಣಯಕ್ಕಿರುವ ಪ್ರಶ್ನೆಗಳು

- ಸ್ವಾತಂತ್ರ್ಯಕ್ಕಾಗಿ ಜಗತ್ತಿನ ಜನರು ನಡೆಸಿದ ಹೋರಾಟಗಳಲ್ಲಿ ಅಮೇರಿಕಾದ ಸ್ವಾತಂತ್ರ್ಯ ಹೋರಾಟದ ಪ್ರಾಧಾನ್ಯವನ್ನು ವಿವರಿಸಿರಿ.
- ಫ್ರೆಂಚ್ ಕ್ರಾಂತಿಗಿರುವ ಹಿನ್ನೆಲೆಯನ್ನು ಸ್ಪಷ್ಟಪಡಿಸಿರಿ.
- ಮುಂದಿನ ತಲೆಮಾರಿಗೆ ಫ್ರೆಂಚ್ ಕ್ರಾಂತಿಯು ಯಾವ ಯಾವ ಕೊಡುಗೆಗಳನ್ನು ನೀಡಿತು?
- ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಎ | ಬಿ |
|---|---|
| • ನೆಪೋಲಿಯನ್ | • ಬೊಲ್ಶೆವಿಕ್ |
| • ಸನ್‌ಯಾತ್ ಸೇನ್ | • ಕೋಮನ್ ಸೆನ್ಸ್ |
| • ಲೆನಿನ್ | • ವಾಟರ್ಲೂ |
| • ಥೋಮಸ್ ಪೈನ್ | • ಕುಮಿಂಗ್ ತಾಂಗ್ |

- ಲ್ಯಾಟಿನ್ ಅಮೇರಿಕಾ ಕ್ರಾಂತಿಗಿರುವ ಹಿನ್ನೆಲೆಯ ಕುರಿತು ಟಿಪ್ಪಣಿಯೊಂದನ್ನು ತಯಾರಿಸಿರಿ.
- ರಷ್ಯಾ ಕ್ರಾಂತಿ ಹಾಗೂ ಫ್ರೆಂಚ್ ಕ್ರಾಂತಿಯ ಪ್ರಭಾವಗಳನ್ನು ಪರಸ್ಪರ ತುಲನೆ ಮಾಡಿರಿ.
- ಸಮಾಜವಾದಿ ಆಶಯಗಳು ಚೀನಾ ಜನತೆಯ ವಿಮೋಚನೆಗೆ ಕಾರಣವಾಯಿತೆ ? ವಿವರಿಸಿರಿ.

## ಮುಂದುವರಿದ ಓದಿಗೆ

*Age of Revolution - Eric Hobswam*

*A History of Modern Time from 1789 - C.D. M. Ketelbey*

*The story of civilization - Arjundev*

*Contemporary World History - Arjundev*

*Peoples of the Sun - C. A Burland*

ಆಧುನಿಕ ಯುಗದ ಕ್ರಾಂತಿಗಳು–ಕೇರಳ ಭಾಷಾ ಇನ್‌ಸ್ಟಿಟ್ಯೂಟ್. ಲೋಕ ಚರಿತ್ರಂ (ಎರಡನೇ ಭಾಗ) ಕೇರಳ ಭಾಷಾ ಇನ್‌ಸ್ಟಿಟ್ಯೂಟ್

## ಅಧ್ಯಾಪಕರಿಂದ ಮೌಲ್ಯಮಾಪನ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸ ಬೇಕಾದುದು |
|---|---|---|---|
| 1. ಕ್ರಾಂತಿ ಎಂದರೇನು ಎಂಬುದನ್ನು ಹಾಗೂ ಅದರ ವಿಶೇಷತೆಗಳು ಏನೆಂಬುದನ್ನು ತಿಳಿಯಲು ಸಾಧ್ಯವಾಯಿತು ಎಂಬುದು ಖಾತರಿಯಾಯಿತು. | ☐ | ☐ | ☐ |
| 2. ಜಗತ್ತಿನ ವಿವಿಧ ಕ್ರಾಂತಿಗಳ ಹಿನ್ನೆಲೆ ಹಾಗೂ ಪ್ರಭಾವವನ್ನು ವಿಶ್ಲೇಷಿಸಲು ಸಾಧ್ಯವಾಯಿತು ಎಂಬುದು ಖಾತರಿಯಾಯಿತು. | ☐ | ☐ | ☐ |
| 3. ಜಗತ್ತಿನ ವಿವಿಧ ಕ್ರಾಂತಿಗಳನ್ನು ತುಲನೆ ಮಾಡಲು ಸಾಧ್ಯವಾಯಿತು ಎಂಬುದು ಖಾತರಿಯಾಯಿತು. | ☐ | ☐ | ☐ |
| 4. ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಮೊದಲಾದ ಆಶಯಗಳ ಪ್ರಾಧಾನ್ಯವನ್ನು ತಿಳಿದರು ಎಂಬುದು ಖಾತರಿಯಾಯಿತು. | ☐ | ☐ | ☐ |
| 5. ಚಟುವಟಿಕೆಗಳಲ್ಲಿ ಎಲ್ಲರ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸಲಾಯಿತು. | ☐ | ☐ | ☐ |
| 6. ನೋಟ್ಸ್ ಪುಸ್ತಕ ಹಾಗೂ ಪೋರ್ಟ್ ಫೋಲಿಯೋವನ್ನು ಮೌಲ್ಯಮಾಪನ ಮಾಡಲಾಯಿತು. | ☐ | ☐ | ☐ |



2

# ಇಪ್ಪತ್ತನೇ ಶತಮಾನದ ಜಗತ್ತು

ಇಪ್ಪತ್ತನೇ ಶತಮಾನವು ಜಾಗತಿಕ ಚರಿತ್ರೆಯ ಮೇಲೆ ಗಣನೀಯವಾಗಿ ಪ್ರಭಾವ ಬೀರಿದ ಕಾಲವಾಗಿದೆ. ಮೊದಲಿನ ಕಾಲಕ್ಕೆ ಹೋಲಿಸಿದರೆ ಇಪ್ಪತ್ತನೇ ಶತಮಾನಕ್ಕೆ ಸಂಬಂಧಿಸಿ ಹೆಚ್ಚು ಸ್ಪಷ್ಟವಾಗಿ ವಿಚಾರಗಳನ್ನು ವಿವರಿಸಲು ಹಾಗೂ ಸಮರ್ಥಿಸಲು ಸಾಧ್ಯವಾಗುತ್ತದೆ. ಈ ಕಾಲದ ಮುಖ್ಯ ವಿಶೇಷತೆ ಎಂದರೆ ಯುರೋಪಿನ ಶಕ್ತಿಗಳು ಮತ್ತು ಅವುಗಳ ಪ್ರಭಾವವು ಜಗತ್ತಿನಾದ್ಯಂತ ವ್ಯಾಪಿಸಿದುದು ಹಾಗೂ ಯುರೋಪಿನಲ್ಲಿ ಮತ್ತು ಇತರ ಭೂಖಂಡಗಳಲ್ಲೂ ಅದು ಬೀರಿದ ವಿವಿಧ ರೀತಿಯ ಪ್ರಭಾವಗಳಾಗಿವೆ. ಜಗತ್ತಿನ ರಾಜಕೀಯ ಗತಿಯ ಮೇಲೆ ಪ್ರಭಾವ ಬೀರಿದ ಎರಡು ಜಾಗತಿಕ ಯುದ್ಧಗಳು, ಅಂತಾರಾಷ್ಟ್ರೀಯ ಶಾಂತಿ ಸಂಸ್ಥೆಗಳು, ಸರ್ವಾಧಿಪತ್ಯದ ಪ್ರತಿರೂಪಗಳಾದ ಫಾಸಿಸಂ ಮತ್ತು ನಾಝಿಸಂ ಮೊದಲಾದ ಅನೇಕ ಘಟನೆಗಳಿಗೆ ಈ ಕಾಲವು ಸಾಕ್ಷಿಯಾಗಬೇಕಾಯಿತು. ಇಂತಹ ಸಾಮ್ರಾಜ್ಯಶಾಹಿ ಆತಿಕ್ರಮಣಗಳು ಮತ್ತು ಅದಕ್ಕೆದುರಾಗಿ ನಡೆದ ಹೋರಾಟಗಳು, ಸ್ವಾತಂತ್ರ್ಯ ಚಳುವಳಿಗಳು, ಜಾಗತೀಕರಣ ಹಾಗೂ ಅದರ ದುಷ್ಪರಿಣಾಮಗಳು ಇತ್ಯಾದಿಗಳನ್ನೆಲ್ಲ ಈ ಅಧ್ಯಾಯದಲ್ಲಿ ಪ್ರತಿಪಾದಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ಫಾಸಿಸ್ಟ್, ಸಾಮ್ರಾಜ್ಯಶಾಹಿ, ಏಕಾಧಿಪತ್ಯ ಇತ್ಯಾದಿ ಆಡಳಿತಕ್ಕೆ ವಿರೋಧ ಹಾಗೂ ಪ್ರಜಾಪ್ರಭುತ್ವವನ್ನು ಪ್ರೋತ್ಸಾಹಿಸುವಂತೆಯೂ ಯುದ್ಧವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಮನೋಭಾವ ಬೆಳೆಯುವಂತೆಯೂ ಈ ಅಧ್ಯಾಯವನ್ನು ವಿನಿಮಯ ಮಾಡಬೇಕು.

# ಯೂನಿಟ್ ಫ್ರೇಂ — 2. ಇಪ್ಪತ್ತನೇ ಶತಮಾನದ ಜಗತ್ತು

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಬಂಡವಾಳಶಾಹಿತ್ವದಿಂದ ಸಾಮ್ರಾಜ್ಯಶಾಹಿತ್ವಕ್ಕೆ<br>• ಒಂದನೇ ಜಾಗತಿಕ ಯುದ್ಧ<br>• ಶಾಂತಿ ಪ್ರಯತ್ನಗಳು.<br>• ದುರಿತಗಳ ಕಾಲ<br>• ಫ್ಯಾಸಿಸಂ ಹಾಗೂ ನಾಝಿಸಂ<br>• ಎರಡನೇ ಜಾಗತಿಕ ಯುದ್ಧ<br>• ಶಾಂತಿಯ ರೆಕ್ಕೆಯನ್ನೇರಿ<br>• ವಸಾಹತುಗಳು ಸ್ವತಂತ್ರಗೊಳ್ಳುತ್ತಿವೆ.<br>• ಶೀತಲ ಸಮರ<br>• ಅಲಿಪ್ತತೆ<br>• ಸೋವಿಯತ್ ಯೂನಿಯನ್ನಿನ ಪತನ<br>• ಏಕಧ್ರುವೀಯ ಜಗತ್ತು<br>• ನವೀನ ಸಾಮ್ರಾಜ್ಯ ಶಾಹಿತ್ವ–ಜಾಗತೀಕರಣ | • ಸಾಮ್ರಾಜ್ಯಶಾಹಿತ್ವದ ಬೆಳವಣಿಗೆಗೆ ಸಹಾಯಕವಾದ ಸನ್ನಿವೇಶಗಳು–ಚರ್ಚೆ<br>• ಸಾಮ್ರಾಜ್ಯಶಾಹಿತ್ವದ ವಿವಿಧ ಹಂತಗಳನ್ನು ಪಟ್ಟಿ ಮಾಡುವುದು.<br>• ಏಷ್ಯಾ–ಆಫ್ರಿಕಾ, ಲ್ಯಾಟಿನ್ ಅಮೇರಿಕಾ ಎಂಬೆಡೆಗಳಲ್ಲಿ ಯುರೋಪಿಯನ್ನರ ಆಕ್ರಮಣ–ಚರ್ಚೆ<br>• ಒಂದನೇ ಜಾಗತಿಕ ಯುದ್ಧಕ್ಕಿರುವ ಕಾರಣಗಳು ಹಾಗೂ ಪರಿಣಾಮಗಳು–ಸೆಮಿನಾರ್<br>• ವಿವಿಧ ರಾಷ್ಟ್ರಗಳೊಂದಿಗೆ ಸಹಿ ಹಾಕಲಾದ ಒಪ್ಪಂದಗಳ ಪಟ್ಟಿ ತಯಾರಿ.<br>• ಅಮೇರಿಕಾದ ಆರ್ಥಿಕ ಬೆಳವಣಿಗೆ–ಚರ್ಚೆ<br>• ಆರ್ಥಿಕ ಕುಸಿತ ಹಾಗೂ ಜಗತ್ತು, ಐ.ಸಿ.ಟಿ ಬಳಸಿಕೊಂಡು ಪ್ರದರ್ಶನ–ಟಿಪ್ಪಣಿ<br>• ಫ್ಯಾಸಿಸಂ ಮತ್ತು ನಾಝಿಸಂನ ತೌಲನಿಕ ಅಧ್ಯಯನದ ಚಲನಚಿತ್ರ ಪ್ರದರ್ಶನ<br>• ಇಟೆಲಿ ಮತ್ತು ಮುಸ್ಸೋಲಿನಿ, ಜರ್ಮನಿ ಮತ್ತು ಹಿಟ್ಲರ್ ಗುಂಪು ಚರ್ಚೆ | • ಸಾಮ್ರಾಜ್ಯಶಾಹಿತ್ವದ ಬೆಳವಣಿಗೆಯ ವಿವಿಧ ಹಂತಗಳನ್ನು ತಿಳಿಯುತ್ತಾರೆ.<br>• ಯುರೋಪಿನ ದೇಶಗಳಲ್ಲುಂಟಾದ ಕೈಗಾರಿಕಾ ಬೆಳವಣಿಗೆಯನ್ನು ವಿಮರ್ಶಾತ್ಮಕವಾಗಿ ಅವಲೋಕಿಸುತ್ತಾರೆ.<br>. ಜಗತ್ತನ್ನು ಒಂದನೇ ಜಾಗತಿ ಯುದ್ಧದ ಕಡೆಗೆ ಸಾಗಿಸಿದ ಘಟನೆಗಳನ್ನು ವಿಶ್ಲೇಷಿಸುತ್ತಾರೆ.<br>• ಒಂದನೇ ಜಾಗತಿಕ ಯುದ್ಧದ ಪರಿಣಾಮಗಳನ್ನು ವಿವರಿಸುತ್ತಾರೆ.<br>• ಅಮೇರಿಕಾವು ನೂತನ ರಾಜಕೀಯ–ಆರ್ಥಿಕ ಶಕ್ತಿಯಾದುದು ಹೇಗೆಂಬುದನ್ನು ತಿಳಿಯುತ್ತಾರೆ.<br>• ಫಾಸಿಸಂ ಹಾಗೂ ನಾಝಿಸಂ ಜಗತ್ತಿಗೆ ಹೇಗೆ ಬೆದರಿಕೆಯಾಯಿತೆಂಬುದನ್ನು ವಿವರಿಸುತ್ತಾರೆ. |

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
| --- | --- | --- |
| | • ಎರಡನೇ ಜಾಗತಿಕ ಯುದ್ಧಕ್ಕಿರುವ ಕಾರಣಗಳು ಹಾಗೂ ಪರಿಣಾಮಗಳು ವಿಚಾರಗೋಷ್ಠಿ<br>• ಸಂಯುಕ್ತರಾಷ್ಟ್ರ ಸಂಘದ ಉದ್ದೇಶಗಳು–ಚಾರ್ಟ್ ತಯಾರಿ<br>• ಜಾಗತಿಕ ಭೂಪಟದಲ್ಲಿ 1945ರ ನಂತರ ಸ್ವತಂತ್ರಗೊಂಡ ದೇಶಗಳನ್ನು ಗುರುತಿಸುವುದು.<br>• ವಸಾಹತುಗಳಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ನೇತೃತ್ವ ನೀಡಿದ ನೇತಾರರ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸುವುದು.<br>• ಶೀತಲ ಸಮರಕ್ಕೆ ಕಾರಣವಾದ ಘಟಕಗಳು–ಚಾರ್ಟ್ ತಯಾರಿ<br>• ಎರಡನೇ ಜಾಗತಿಕ ಯುದ್ಧಾನಂತರ ಜಾಗತಿಕ ರಾಜಕೀಯ ರಚನೆ–ಚರ್ಚೆ<br>ಟಿಪ್ಪಣಿ ತಯಾರಿ, ಆಲ್ಬಂ ತಯಾರಿ<br>• ಸೋವಿಯತ್ ಯೂನಿಯನ್ನಿನ ಪತನವು ಜಾಗತಿಕ ಶಾಂತಿಯ ಮೇಲೆ ಬೀರಿದ ಪ್ರಭಾವ–ಸಂವಾದ<br>• ವಿಶ್ಲೇಷಣಾ ಟಿಪ್ಪಣಿಯ ತಯಾರಿ<br>• ಜಾಗತೀಕರಣ ಹಾಗೂ ಭಾರತ–ವಿಚಾರಗೋಷ್ಠಿ | • ಎರಡನೇ ಜಾಗತಿಕ ಯುದ್ಧಕ್ಕಿರುವ ಕಾರಣಗಳನ್ನು ಕಂಡುಹಿಡಿಯುತ್ತಾರೆ.<br>• ಎರಡನೇ ಜಾಗತಿಕ ಯುದ್ಧದ ಪರಿಣಾಮಗಳನ್ನು ವಿಶ್ಲೇಷಿಸುತ್ತಾರೆ.<br>• ನೂತನ ಶಕ್ತಿ ಬಣಗಳ ಉದಯವು ಶೀತಲ ಸಮರಕ್ಕೆ ಹೇಗೆ ಕಾರಣವಾಯಿತೆಂಬುದನ್ನು ಕಂಡುಹಿಡಿದು ವಿವರಿಸುತ್ತಾರೆ.<br>• ಅಲಿಪ್ತ ಚಳುವಳಿಯು ಶಕ್ತಿ ಬಣಗಳಿಗೆದುರಾಗಿ ರೂಪುಗೊಂಡದ್ದಾಗಿದೆ ಎಂಬುದನ್ನು ತಿಳಿಯುತ್ತಾರೆ.<br>• ಸೋವಿಯತ್ ಯೂನಿಯನ್ನಿನ ಪತನವು ಜಾಗತಿಕ ದೇಶಗಳಲ್ಲುಂಟುಮಾಡಿದ ಬದಲಾವಣೆಗಳನ್ನು ವಿಶ್ಲೇಷಿಸುತ್ತಾರೆ.<br>• ಆಧುನಿಕ ಜಗತ್ತಿನಲ್ಲಿ ಅಮೇರಿಕಾದ ಆಧಿಪತ್ಯವನ್ನು ವಿಶ್ಲೇಷಿಸುತ್ತಾರೆ.<br>• ನವೀನ ಸಾಮ್ರಾಜ್ಯಶಾಹಿತ್ವವು ಭಾರತದಂತಹ ದೇಶಗಳನ್ನು ಹೇಗೆ ಬಾಧಿಸುತ್ತದೆ ಎಂಬುದನ್ನು ಕಂಡುಕೊಳ್ಳುತ್ತಾರೆ. |

# ಅಧ್ಯಾಯದೆಡೆಗೆ....

ಸಾಮ್ರಾಜ್ಯಶಾಹೀ ಅತಿಕ್ರಮಣಗಳು ಹಾಗೂ ವಸಾಹತೀಕರಣವನ್ನು ಕಲಿಕಾರ್ಥಿಗೆ ಅರ್ಥೈಸುವುದಕ್ಕಾಗಿ ಪಾಠದ ಆರಂಭದಲ್ಲಿ ನೀಡಿರುವ ಆಫ್ರಿಕಾದ ರಾಜಕೀಯ ಭೂಪಟವನ್ನು ನಿರೀಕ್ಷಿಸಲು ವಿದ್ಯಾರ್ಥಿಗಳಲ್ಲಿ ಹೇಳಬೇಕು. ಅನಂತರ ಆಫ್ರಿಕಾದ ದೇಶಗಳ ಗಡಿಗಳಲ್ಲಿ ಹೆಚ್ಚಿನವುಗಳೂ ನೇರ ರೇಖೆಗಳಾಗಿರಲು ಕಾರಣ ಏನೆಂದು ಕಂಡುಹಿಡಿಯಲು ಹೇಳಬೇಕು.

- ಆಫ್ರಿಕಾಕ್ಕಿರುವ ಅತಿಕ್ರಮಣವು ಎಂದಿನಿಂದ ಆರಂಭವಾಯಿತು?
- ಆಫ್ರಿಕಾವನ್ನು ಯಾವ ಮಾನದಂಡದ ಆಧಾರದಲ್ಲಿ ಹಂಚಿಕೊಂಡರು?
- ಈ ರೀತಿಯಲ್ಲಿ ಬೇರೆ ಯಾವುದಾದರೂ ಭೂಖಂಡವನ್ನು ವಿಭಜಿಸಲಾಗಿದೆಯೇ?

ಎಂಬೀ ಪ್ರಶ್ನೆಗಳನ್ನು ಕೇಳುವ ಮೂಲಕ ಪಾಠವನ್ನು ಆರಂಭಿಸಬಹುದು.

## ಬಂಡವಾಳಶಾಹಿತ್ವದಿಂದ ಸಾಮ್ರಾಜ್ಯಶಾಹಿತ್ವದೆಡೆಗೆ

ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದ ರೂಪುಗೊಂಡ ಬಂಡವಾಳ ಶಾಹಿ ಆರ್ಥಿಕ ವ್ಯವಸ್ಥೆಯು ನಂತರ ಹೇಗೆ ಸಾಮ್ರಾಜ್ಯಶಾಹಿತ್ವದೆಡೆಗೆ ಬೆಳೆಯಿತು ಎಂಬ ಆಶಯವು ಕಲಿಕಾರ್ಥಿಗೆ ಮನದಟ್ಟಾಗುವ ರೀತಿಯಲ್ಲಿ ಈ ಪಾಠದ ವಿನಿಮಯವನ್ನು ನಡೆಸಬೇಕು. ಸಾಮ್ರಾಜ್ಯಶಾಹಿತ್ವದ ಬೆಳವಣಿಗೆಗೆ ಸಹಾಯಕವಾದ ಸನ್ನಿವೇಶಗಳು–ಚರ್ಚೆ.

ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿದ ನಂತರ ಪಾಠಪುಸ್ತಕವನ್ನು ವೈಯಕ್ತಿಕವಾಗಿ ಓದಲು ಹೇಳಬೇಕು. ಗುಂಪಿನಲ್ಲಿ ತಯಾರಿಸಿದ ಚರ್ಚಾ ಟಿಪ್ಪಣಿಯನ್ನು ತರಗತಿಯಲ್ಲಿ ಮಂಡಿಸಿ, ಉತ್ತಮಪಡಿಸಿ ಕೆಳಗೆ ಕೊಟ್ಟಿರುವಂತೆ ಕ್ರೋಡೀಕರಿಸಬೇಕು.

ಕೈಗಾರಿಕಾ ಕ್ರಾಂತಿಯು ಕಾರ್ಖಾನೆ ವ್ಯವಸ್ಥೆಗೂ ಮುಂದೆ ಅದು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಆರಂಭಕ್ಕೂ ಕಾರಣವಾಯಿತು. ಮಾರುಕಟ್ಟೆಗಾಗಿರುವ ಸ್ಪರ್ಧೆಯು ವಸಾಹತೀಕರಣಕ್ಕೆ ಕಾರಣವಾಯಿತು. ಕಾರ್ಮಿಕ ಸಂಘಟನೆಗಳು ಬಲಗೊಂಡದ್ದು ಹಾಗೂ ಲಾಭದಲ್ಲುಂಟಾದ ಕುಸಿತವು ಬಂಡವಾಳದ ರಫ್ತಿಗೆ ಕಾರಣವಾಯಿತು. ಬಂಡವಾಳದ ರಫ್ತಿನ ಈ ಹಂತವು ಸಾಮ್ರಾಜ್ಯಶಾಹಿತ್ವದ ಬೆಳವಣಿಗೆಗೆ ಕಾರಣವಾಯಿತು.

ಅನಂತರ ಸಾಮ್ರಾಜ್ಯಶಾಹಿತ್ವದ ವಿವಿಧ ಹಂತಗಳ ಪಟ್ಟಿ ತಯಾರಿಸುವ ಅಥವಾ ಫ್ಲೋಚಾರ್ಟ್ ತಯಾರಿಸಲಿರುವ ಚಟುವಟಿಕೆಯನ್ನು ನೀಡಬಹುದು.

ಕೈಗಾರಿಕಾ ವ್ಯವಸ್ಥೆ
↓
ಅಧಿಕ ಉತ್ಪಾದನೆ
↓
ಬಂಡವಾಳಶಾಹಿ ವ್ಯವಸ್ಥೆ
↓
ಕಾರ್ಮಿಕ ಸಂಘಟನೆಗಳು
↓
ವೇತನ ವರ್ಧನೆ
↓
ಹೆಚ್ಚಿದ ಉತ್ಪಾದನಾ ವೆಚ್ಚ
↓
ಬಂಡವಾಳದ ರಫ್ತು
↓
ವಸಾಹತು ಶಾಹಿತ್ವ
↓
ಸಾಮ್ರಾಜ್ಯಶಾಹಿತ್ವ

ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡಿದ ನಂತರ ಪಾಠಪುಸ್ತಕದಲ್ಲಿರುವ ಪಾಠಭಾಗವನ್ನು ವೈಯಕ್ತಿಕವಾಗಿ ಓದಲು ಹೇಳಬೇಕು. ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಾ ಎಂಬೀ ಭೂಖಂಡಗಳಿಗೆ ಯುರೋಪಿಯನ್ನರ ಆಗಮನಕ್ಕಿರುವ ಕಾರಣಗಳು ಹಾಗೂ ಪರಿಣಾಮಗಳನ್ನು ಗುಂಪಿನಲ್ಲಿ ಚರ್ಚಿಸಿ ಟಿಪ್ಪಣಿ ತಯಾರಿಸಲು ಹೇಳಬೇಕು. ಗುಂಪುಗಳು ತಯಾರಿಸಿದ ಟಿಪ್ಪಣಿಗಳನ್ನು ತರಗತಿಯಲ್ಲಿ ಮಂಡಿಸಿದ ನಂತರ ಉತ್ತಮಗೊಳಿಸಿ ಕ್ರೋಡೀಕರಿಸಬೇಕು.

## ಒಂದನೇ ಜಾಗತಿಕ ಯುದ್ಧ

ಕೈಗಾರಿಕಾ ಕ್ರಾಂತಿಯು ಉತ್ಪಾದನೆಯ ಹೆಚ್ಚಳ ಮತ್ತು ಮಾರುಕಟ್ಟೆಯ ಸ್ಪರ್ಧೆಗೆ ಕಾರಣವಾಯಿತೆಂಬುದನ್ನು ತಿಳಿದುಕೊಂಡೆವು. ಜಗತ್ತಿನಲ್ಲುಂಟಾದ ಸಂಘರ್ಷ ಸ್ಥಿತಿಯು ಒಂದನೇ ಜಾಗತಿಕ ಯುದ್ಧದತ್ತ ಜಗತ್ತನ್ನು

ಕೊಂಡೊಯ್ದಿತು. ಯಾವುದೇ ಯುದ್ಧವೂ ವಿನಾಶಕಾರಿಯಾಗಿದೆ ಎಂಬ ತಿಳುವಳಿಕೆಯು ಕಲಿಕಾರ್ಥಿಯಲ್ಲಿ ಮೂಡುವಂತೆ ಪಾಠವನ್ನು ವಿನಿಮಯ ಮಾಡಬೇಕು. ಸಮಕಾಲೀನ ಯುದ್ಧಗಳ ಪತ್ರಿಕಾವಾರ್ತೆಗಳು ಹಾಗೂ ಚಿತ್ರಗಳನ್ನು ತೋರಿಸುತ್ತಾ ಪಾಠವನ್ನಾರಂಭಿಸಬಹುದು. ವಿಚಾರಗೋಷ್ಠಿಗಾಗಿ ಮಕ್ಕಳನ್ನು ಎರಡು ಗುಂಪುಗಳನ್ನಾಗಿ ಮಾಡಬಹುದು.

ಗುಂಪು 1 – ಒಂದನೇ ಜಾಗತಿಕ ಯುದ್ಧಕ್ಕಿರುವ ಕಾರಣಗಳು

ಗುಂಪು 2 – ಒಂದನೇ ಜಾಗತಿಕ ಯುದ್ಧದ ಪರಿಣಾಮಗಳು

ಅನಂತರ ಪಾಠಪುಸ್ತಕದಲ್ಲಿ ಕೊಟ್ಟಿರುವ ಪಾಠಭಾಗವನ್ನು ಓದಲಿ. ಹೆಚ್ಚಿನ ಮಾಹಿತಿಗಾಗಿ ಲೋಕಚರಿತ್ರಂ ಭಾಗಂ 2 ಕೇರಳ ಭಾಷಾ ಇನ್ಸ್ಟಿಟ್ಯೂಟ್–ಲೋಕ ಚರಿತ್ರಂ 1914–1968 ಡೇವಿಡ್ ತೋಮ್ಸನ್ ಎಂಬೀ ಪುಸ್ತಕಗಳ ಪ್ರಧಾನ ಭಾಗಗಳನ್ನು ನೀಡಬಹುದು. ಅನಂತರ ಗುಂಪುಗಳಲ್ಲಿ ತಯಾರಿಸಿದ ವಿಚಾರಗೋಷ್ಠಿ ಪ್ರಬಂಧವನ್ನು ಮಂಡಿಸಲಿ. ವಿಚಾರಗೋಷ್ಠಿಯ ನಂತರ ತಯಾರಿಸುವ ವಿಚಾರಗೋಷ್ಠಿ ವರದಿಯನ್ನು ಉತ್ತಮಪಡಿಸಿ ಅಧ್ಯಾಪಕ/ಅಧ್ಯಾಪಿಕೆ ಕ್ರೋಡೀಕರಿಸಬೇಕು.

ಒಂದನೇ ಜಾಗತಿಕ ಯುದ್ಧದ ನಂತರ ಸಹಿ ಮಾಡಿದ ಒಪ್ಪಂದಗಳು

| ಒಪ್ಪಂದ | |
|---|---|
| ವರ್ಸಾಯಿ ಒಪ್ಪಂದ | 1919 ರಲ್ಲಿ ಜರ್ಮನಿಯೊಂದಿಗೆ |
| ಸೈಂಟ್ ಜರ್ಮನ್ ಒಪ್ಪಂದ | 1919 ರಲ್ಲಿ ಆಸ್ಟ್ರಿಯಾ–ಹಂಗೇರಿಯೊಂದಿಗೆ |
| ಸೇವ್ರೆ ಒಪ್ಪಂದ | 1920 ರಲ್ಲಿ ತುರ್ಕಿಯೊಂದಿಗೆ |

## ದುರಿತಗಳ ಕಾಲ

ಯುದ್ಧಗಳು ಆರ್ಥಿಕ ಬಾಧ್ಯತೆಗಳನ್ನುಂಟು ಮಾಡುವುದಾದರೂ ಯುದ್ಧದಿಂದಾಗಿ ಅಮೇರಿಕಾಕ್ಕೆ ಲಾಭವೇ ಆಯಿತು. ಒಂದನೇ ಜಾಗತಿಕ ಯುದ್ಧದ ಕೇಂದ್ರವಾಗಿದ್ದ ಯುರೋಪು ಅತ್ಯಧಿಕ ದುರಿತ ಗಳನ್ನನುಭವಿಸಬೇಕಾಯಿತು. ಒಂದನೇ ಜಾಗತಿಕ ಯುದ್ಧವು ಅಮೇರಿಕಾದ ಆರ್ಥಿಕ ಬೆಳವಣಿಗೆಗೆ ಹೇಗೆ ಕಾರಣವಾಯಿತೆಂಬುದನ್ನು ಚರ್ಚಿಸುವುದಕ್ಕಾಗಿ ಪಾಠಪುಸ್ತಕದ ಪಾಠಭಾಗವನ್ನು ವೈಯಕ್ತಿಕವಾಗಿ ಓದಿ ಟಿಪ್ಪಣಿ ತಯಾರಿಸಲಿ. ಮಂಡಿಸಲು ಕೆಲವರಿಗೆ ಸಂದರ್ಭವನ್ನೊದಗಿಸಬೇಕು. ಅನಂತರ ಕೆಳಗೆ ನೀಡಿರುವಂತೆ ಕ್ರೋಡೀಕರಿಸಬೇಕು. ಒಂದನೇ ಜಾಗತಿಕ ಯುದ್ಧದಲ್ಲಿ ನಾಶವಾದ ಯುರೋಪಿನ ದೇಶಗಳು ಸಾಲಕ್ಕಾಗಿ ಅಮೇರಿಕಾವನ್ನು ಆಶ್ರಯಿಸಿದುದು ಅಮೇರಿಕಾದ ಆರ್ಥಿಕ ಬೆಳವಣಿಗೆಗೆ ಕಾರಣವಾಯಿತು. ಜಾಗತಿಕ ವಿನಿಮಯದ ಮೂಲವು ಬ್ರಿಟನ್ ಪೌಂಡಿನ ಬದಲು ಅಮೇರಿಕಾದ ಡಾಲರಾಯಿತು. ಆರ್ಥಿಕ ಮುನ್ನಡೆಯನ್ನು ಗಳಿಸಲು ಸಾಧ್ಯವಾದರೂ 1929ರ ಜಾಗತಿಕ ಆರ್ಥಿಕ ಕುಸಿತವು ಆರಂಭವಾದುದು ಅಮೇರಿಕಾದಲ್ಲಾಗಿದೆ. ಜಾಗತಿಕ ಆರ್ಥಿಕ ಕುಸಿತದ ತೀವ್ರತೆಯು ಕಲಿಕಾರ್ಥಿಗೆ ಲಭಿಸುವುದಕ್ಕಾಗಿ ಚಾರ್ಲಿ ಚಾಪ್ಲಿನ್‌ನ 'ಸರ್ಕಸ್' ಎಂಬ ಚಲನ ಚಿತ್ರದ ಆಯ್ದ ಭಾಗವನ್ನು ಪ್ರದರ್ಶಿಸಬಹುದು. ಅಲ್ಲದೆ ಐ.ಸಿ.ಟಿ. ಅವಕಾಶಗಳನ್ನು ಬಳಸಿ ಆರ್ಥಿಕ ಕುಸಿತದ ಚಿತ್ರಗಳನ್ನೂ ಪ್ರದರ್ಶಿಸಬಹುದು.

ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿದ ನಂತರ ಪಾಠಪುಸ್ತಕದ ಪಾಠಭಾಗವನ್ನು ವೈಯಕ್ತಿಕವಾಗಿ ಓದಲು ಹೇಳಬೇಕು. ಅನಂತರ ಜಾಗತಿಕ ಆರ್ಥಿಕ ಕುಸಿತಕ್ಕಿರುವ ಕಾರಣಗಳು ಹಾಗೂ ಅದರ ಪರಿಣಾಮಗಳ ಕುರಿತು ಟಿಪ್ಪಣಿ ತಯಾರಿಸಬೇಕು. ಟಿಪ್ಪಣಿಯನ್ನು ತರಗತಿಯಲ್ಲಿ ಮಂಡಿಸಿ ಕೆಳಗೆ ಕೊಟ್ಟಿರುವಂತೆ ಕ್ರೋಡೀಕರಿಸಬಹುದು.

ಜನರ ಕೊಂಡುಕೊಳ್ಳುವ ಸಾಮರ್ಥ್ಯವು ನಾಶವಾಯಿತು. ಉತ್ಪನ್ನಗಳನ್ನು ಕೊಂಡುಕೊಳ್ಳಲು

ಜನರಿಲ್ಲದಾಯಿತು. ಸಾಲ ಮರುಪಾವತಿ ಮಾಡದುದು ಬೇಂಕುಗಳ ಅಧಃಪತನಕ್ಕೆ ಕಾರಣವಾಯಿತು. ನಿರುದ್ಯೋಗ, ಬಡತನ ಹಾಗೂ ಹಣದುಬ್ಬರವು ಹೆಚ್ಚಾಯಿತು.

## ಫ್ಯಾಸಿಸಂ ಮತ್ತು ನಾಝಿಸಂ

ಒಂದನೇ ಜಾಗತಿಕ ಯುದ್ಧಾನಂತರ ಯುರೋಪಿನ ಕೆಲವು ದೇಶಗಳಲ್ಲಿ ಅಧಿಕಾರಕ್ಕೆ ಬಂದ ಸ್ವೇಚ್ಛಾಧಿಪತ್ಯ ಆಡಳಿತ ಕುರಿತಾದ ಚಾರ್ಲಿ ಚಾಪ್ಲಿನನ ನಿರೀಕ್ಷಣೆಯನ್ನು ವಿಶ್ಲೇಷಿಸುತ್ತಾ ಪಾಠವನ್ನಾರಂಭಿಸ ಬಹುದು. ಅನಂತರ ಇಂತಹ ಆಡಳಿತ ಒಕ್ಕೂಟಗಳು ಅಧಿಕಾರಕ್ಕೇರಲಿರುವ ಸನ್ನಿವೇಶವನ್ನು ಪಾಠಪುಸ್ತಕವನ್ನು ಓದಿ ಕಂಡುಹಿಡಿದು ಚರ್ಚಿಸುತ್ತಾರೆ. ಒಂದನೇ ಜಾಗತಿಕ ಯುದ್ಧಾನಂತರ ಉಂಟಾದ ಘಟನೆಗಳು ಇಟೆಲಿಯಲ್ಲಿ ಫ್ಯಾಸಿಸಂ ಮತ್ತು ಜರ್ಮನಿಯಲ್ಲಿ ನಾಝಿಸಂ ಉದಯವಾಗಲು ಕಾರಣವಾಯಿತು. ಆನಂತರ ಫಾಝಿಸಂನ ವಿಶೇಷತೆಗಳನ್ನು ಪಾಠಪುಸ್ತಕದಲ್ಲಿರುವ ಪಟ್ಟಿಯನ್ನು ಪರಿಶೀಲಿಸಿ ಕಂಡುಹಿಡಿಯಬೇಕು.

## ಮುಸ್ಸೋಲಿನಿ ಮತ್ತು ಫಾಝಿಸಂ

ಇಟೆಲಿಯಲ್ಲಿ ಫಾಸಿಸ್ಟ್ ಆಡಳಿತಕ್ಕೆ ನೇತೃತ್ವ ನೀಡಿದ ಮುಸ್ಸೋಲಿನಿಯ ಮಾತುಗಳನ್ನು ಅವಲೋಕಿಸಿ ಪಾಠವನ್ನಾರಂಭಿಸಬಹುದು. ಅನಂತರ ಇಟೆಲಿಯಲ್ಲಿ ಫಾಸಿಸಂ ಅಧಿಕಾರಕ್ಕೇರಲಿರುವ ಸನ್ನಿವೇಶವನ್ನು ಪಾಠಪುಸ್ತಕದ ಸಹಾಯದಿಂದ ಗುಂಪಿನಲ್ಲಿ ಚರ್ಚಿಸಬೇಕು.

ಒಂದನೇ ಜಾಗತಿಕ ಯುದ್ಧದ ನಂತರ ರೂಪುಗೊಂಡ ಸನ್ನಿವೇಶಗಳು ಫಾಸಿಸಂನ ಉದಯಕ್ಕೆ ಕಾರಣವಾಯಿತು ಎಂಬುವುದನ್ನು ಚರ್ಚೆಯ ಮೂಲಕ ಕಂಡುಕೊಳ್ಳುತ್ತಾರೆ. ಅನಂತರ ಇಟೆಲಿಯಲ್ಲಿ ಅಧಿಕಾರಕ್ಕೇರಿದ ಮುಸ್ಸೋಲಿನಿಯು ವಿವಿಧ ರಂಗಗಳಲ್ಲಿ ಕೈಗೊಂಡ ಕ್ರಮಗಳ ಕುರಿತು ಚರ್ಚಿಸುತ್ತಾರೆ. ಮೊದಲೇ ಕಂಡುಕೊಂಡ ಫಾಸಿಸಂನ ವಿಶೇಷತೆಗಳನ್ನು ಇಲ್ಲಿ ಚರ್ಚಾಸೂಚಕಗಳಾಗಿ ನೀಡಬಹುದು. ಫಾಸಿಸಂನ ಯಾವ ಯಾವ ವಿಶೇಷತೆಗಳು ಮುಸ್ಸೋಲಿನಿಯ ಆಡಳಿತದಲ್ಲಿ ಪ್ರತಿಫಲಿಸಲ್ಪಟ್ಟಿತು ಎಂಬುವುದನ್ನು ಕಂಡುಹಿಡಿ ಯುವುದರ ಮೂಲಕ ಚರ್ಚೆಯನ್ನು ಕ್ರೋಡೀಕರಿಸ ಬಹುದು. ಕೆಳಗೆ ಕೊಟ್ಟಿರುವ ಫಾಸಿಸಂನ ವಿಶೇಷತೆಗಳು ಮುಸ್ಸೋಲಿನಿಯ ಆಡಳಿತದಲ್ಲಿ ಪ್ರತಿಫಲಿಸುತ್ತಿತ್ತೆಂಬ ತಿಳುವಳಿಕೆಯನ್ನು ಹೊಂದಿದ್ದಾರೆಂದು ಖಾತರಿ ಪಡಿಸಬೇಕು.

- ಪ್ರಜಾಪ್ರಭುತ್ವ, ಸಮಾಜವಾದ ಎಂಬಿವುಗಳ ಮೇಲಿನ ವಿರೋಧ
- ರಾಷ್ಟ್ರ, ಯುದ್ಧ ಎಂಬಿತ್ಯಾದಿಗಳನ್ನು ವೈಭವೀಕರಿಸುವುದು.
- ತೀವ್ರ ರಾಷ್ಟ್ರೀಯತೆಯ ಪ್ರಚಾರ
- ಭೂತಕಾಲವನ್ನು ಹೊಗಳುವುದು
- ಸೈನಿಕ ಸ್ವೇಚ್ಛಾಧಿಪತ್ಯ
- ರಾಜಕೀಯ ವೈರಿಗಳನ್ನು ನಿರ್ಮೂಲನೆ ಮಾಡುವುದು.

## ಹಿಟ್ಲರ್ ಮತ್ತು ನಾಝಿಸಂ

ಮಾರ್ಟಿನ್ ನಿಮೋಯ್ಲರನ ವಿವರಣೆಗಳನ್ನು ವಿಶ್ಲೇಷಿಸುತ್ತಾ ನಾಝಿಸಂನ ಕುರಿತಾದ ಚರ್ಚೆಯನ್ನು ಆರಂಭಿಸಬಹುದು. ನಾಝಿಸಂ ಅಧಿಕಾರಕ್ಕೇರಲಿರುವ ಸನ್ನಿವೇಶಗಳನ್ನು ಗುಂಪಿನಲ್ಲಿ ಚರ್ಚಿಸಬೇಕು. ಇಟೆಲಿಯಂತೆಯೇ ಒಂದನೇ ಜಾಗತಿಕ ಯುದ್ಧದ ನಂತರದ ಸನ್ನಿವೇಶಗಳು ನಾಝಿಸಂಗೆ ಕಾರಣವಾಯಿತು ಎಂಬ ತಿಳುವಳಿಕೆಯನ್ನು ಗಳಿಸುತ್ತಾರೆ. ಆನಂತರ ಅಧಿಕಾರಕ್ಕೆ ಬಂದ ಹಿಟ್ಲರ್ ಜರ್ಮನಿಯಲ್ಲಿ ಕೈಗೊಂಡ ಕ್ರಮಗಳನ್ನು ವಿಶ್ಲೇಷಿಸುತ್ತಾರೆ. ಆ ಕ್ರಮಗಳನ್ನು ಫಾಸಿಸಂನ ವಿಶೇಷತೆಗಳೊಂದಿಗೆ ಹೋಲಿಸಿ ಹಿಟ್ಲರ್‌ನ ನಾಝಿ ಆಡಳಿತವು ಫಾಸಿಸ್ಟ್ ಆಡಳಿತವಾಗಿತ್ತು ಎಂಬ ತಿಳುವಳಿಕೆಯನ್ನು ಗಳಿಸುತ್ತಾರೆ. ಆನಂತರ ಫಾಸಿಸಂ ಮತ್ತು ನಾಝಿಸಂಗಳನ್ನು ಪರಸ್ಪರ ಹೋಲಿಸುವುದಕ್ಕಾಗಿ ಪಾಠದಲ್ಲಿ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸುತ್ತಾರೆ.

| | ಫ್ಯಾಸಿಸಂ | ನಾಝಿಸಂ |
|---|---|---|
| ವಂಶ ಶ್ರೇಷ್ಠತೆ | ರೋಮ್ ಸಾಮ್ರಾಜ್ಯದ ಪುನರುತ್ಥಾನ | ಆರ್ಯವಂಶ |
| ಶತ್ರುಗಳ ನಿರ್ಮೂಲನೆ | ಸಮಾಜವಾದಿಗಳು ಕಾರ್ಮಿಕ–ಕೃಷಿಕ ನೇತಾರರು ಎಂಬಿವರನ್ನು ಶತ್ರುಗಳೆಂದು ಸಾರಿದರು. ಫ್ಯಾಸಿಸ್ಟ್ ಪಾರ್ಟಿಯನ್ನು ವಿರೋಧಿಸಿದವರನ್ನು ವಧಿಸಿದರು. | ನಾಝಿಸಂನ ಪ್ರಧಾನ ಶತ್ರುಗಳಾದ ಸಮಾಜವಾದಿಗಳು, ಕಮ್ಯೂನಿಸ್ಟರು, ಯಹೂದಿಯರು ಹಾಗೂ ಪ್ರಜಾಪ್ರಭುತ್ವವಾದಿಗಳನ್ನು ಕೊಂದರು. |
| ಸೈನಿಕ ಸ್ವೇಚ್ಛಾಧಿಪತ್ಯ | ಕಪ್ಪಂಗಿಗಳು ಎಂಬ ಸೈನಿಕ ವಿಭಾಗವನ್ನು ಉಪಯೋಗಿಸಿ ವಿರೋಧಿಗಳನ್ನು ಧಮನಿಸಿದರು. | ಕಂದಂಗಿಗಳು ಎಂಬ ಸೈನಿಕ ವಿಭಾಗ ಹಾಗೂ ಗಸ್ಟಾಪೋ ಎಂಬ ರಹಸ್ಯ ಗುಂಪುಗಳನ್ನು ಉಪಯೋಗಿಸಿ ಯಹೂದಿ ವಿಭಾಗಗಳನ್ನು ನಿರ್ಮೂಲ ಮಾಡಿದರು. |
| ಆಕ್ರಮಣಕಾರಿ ವಿದೇಶಿ ನೀತಿ | ಇಥಿಯೋಪಿಯಾ, ಆಲ್ಬೇನಿಯಾ ಮೊದಲಾದ ದೇಶಗಳನ್ನು ಆಕ್ರಮಿಸಿದರು. | ಆಸ್ಟ್ರಿಯಾ, ಜೆಕೋಸ್ಲೋವಾಕಿಯಾ ಎಂಬೀ ದೇಶಗಳನ್ನು ಆಕ್ರಮಿಸಿದರು. ಇಟಲಿ, ಜಪಾನ್ ಮೊದಲಾದ ದೇಶಗಳೊಂದಿಗೆ ಸೇರಿ ಸೈನಿಕ ಒಕ್ಕೂಟಗಳನ್ನು ರೂಪಿಸಿದರು. |

ಇಟಲಿಯ ಫಾಸಿಸಂ ಮತ್ತು ಜರ್ಮನಿಯ ನಾಝಿಸಂ ಜಾಗತಿಕ ಶಾಂತಿಗೆ ಹೇಗೆ ಬೆದರಿಕೆಯಾಯಿತೆಂಬುದನ್ನು ಒಂದು ವಿಚಾರಗೋಷ್ಠಿಯ ಮೂಲಕ ವಿಶ್ಲೇಷಿಸಬಹುದು. ವಿವಿಧ ಗುಂಪುಗಳು, ವಂಶದ ಶ್ರೇಷ್ಠತೆ, ಶತ್ರುಗಳ ನಿರ್ಮೂಲನೆ, ಸೈನಿಕ ಸ್ವೇಚ್ಛಾಧಿಪತ್ಯ, ವಿದೇಶ ನೀತಿ ಎಂಬಿವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ಚರ್ಚಿಸಿ ಮಂಡಿಸಬೇಕು. ಅವುಗಳನ್ನು ಕ್ರೋಡೀಕರಿಸುವಾಗ ಫ್ಯಾಝಿಸಂ ಮತ್ತು ನಾಝಿಸಂ ಜಾಗತಿಕ ಶಾಂತಿಗೆ ಹೇಗೆ ಬೆದರಿಕೆಯಾಯಿತೆಂಬ ತಿಳುವಳಿಕೆಯನ್ನು ಗಳಿಸಲು ಸಾಧ್ಯವಾಗಬೇಕು.

## ಎರಡನೇ ಜಾಗತಿಕ ಯುದ್ಧ

ಒಂದನೇ ಜಾಗತಿಕ ಯುದ್ಧದ ಕುರಿತಾದ ವುಡ್ರೋ ವಿಲ್ಸನ್‌ನ ಮಾತುಗಳನ್ನು ಚರ್ಚಿಸಿ ಎರಡನೇ ಜಾಗತಿಕ ಯುದ್ಧದ ಕುರಿತಾದ ಪಾಠಭಾಗವನ್ನು ಆರಂಭಿಸಬಹುದು.

- ಒಂದನೇ ಜಾಗತಿಕ ಯುದ್ಧವು ಕೊನೆಗೊಂಡು 20 ವರ್ಷ ಕಳೆದ ಮೇಲೆ ಜಗತ್ತು ಮತ್ತೊಂದು ಜಾಗತಿಕ ಯುದ್ಧಕ್ಕೆ ಸಾಕ್ಷಿಯಾಗಲು ಕಾರಣವೇನು ?
- ಒಂದು ಮತ್ತು ಎರಡನೇ ಜಾಗತಿಕ ಯುದ್ಧಗಳ ಕಾರಣಗಳೊಳಗೆ ಯಾವೆಲ್ಲ ಸಮಾನತೆಗಳಿವೆ?

ಈ ಪ್ರಶ್ನೆಗಳನ್ನು ಆಧಾರವಾಗಿರಿಸಿ ಗುಂಪುಗಳು ಪಾಠಪುಸ್ತಕದ ಸಹಾಯದಿಂದ ಎರಡನೇ ಜಾಗತಿಕ ಯುದ್ಧಕ್ಕಿರುವ ಕಾರಣಗಳನ್ನು ವಿಶ್ಲೇಷಿಸುತ್ತವೆ.

- ಒಂದನೇ ಜಾಗತಿಕ ಯುದ್ಧ ಮತ್ತು ಎರಡನೇ ಜಾಗತಿಕ ಯುದ್ಧದ ಕಾರಣಗಳೊಳಗೆ ಅನೇಕ ಸಮಾನತೆಗಳಿದ್ದುವು.
- ಒಂದನೇ ಜಾಗತಿಕ ಯುದ್ಧದ ಕೆಲವು ಪರಿಣಾಮಗಳು ಎರಡನೇ ಜಾಗತಿಕ ಯುದ್ಧಕ್ಕೆ ಕಾರಣವಾದುವು.

ಎಂಬೀ ತಿಳುವಳಿಕೆಗಳ ಮೂಲಕ ಚರ್ಚೆಯನ್ನು ಕ್ರೋಡೀಕರಿಸಬಹುದು.

## ಯುದ್ಧದ ಪರಿಣಾಮಗಳು

ಎರಡನೇ ಜಾಗತಿಕ ಯುದ್ಧದ ಪರಿಣಾಮಗಳನ್ನು ವಿಶ್ಲೇಷಿಸಲು ವಿಚಾರಗೋಷ್ಠಿಯೊಂದನ್ನು ಏರ್ಪಡಿಸಬಹುದು. ಇದಕ್ಕೆ ಕಲಿಕಾರ್ಥಿಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬೇಕು.

ಗುಂಪು 1– ದುಷ್ಪರಿಣಾಮಗಳು, ಶಾಂತಿ ಪ್ರಯತ್ನಗಳು, ಸಂಯುಕ್ತ ರಾಷ್ಟ್ರ ಸಂಘ
ಗುಂಪು 2 – ವಸಾಹತುಗಳ ಸ್ವಾತಂತ್ರ್ಯ
ಗುಂಪು 3 – ಶೀತಲ ಸಮರ
ಗುಂಪು 4 – ಅಲಿಪ್ತ ಚಳುವಳಿ

ನಾಲ್ಕು ಗುಂಪುಗಳೂ ಆಯಾ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ಗುಂಪಿನಲ್ಲಿ ಚರ್ಚಿಸಿ ಮಂಡಿಸಬೇಕು. ಒಂದನೇ ಗುಂಪಿನವರು ಯುದ್ಧವಿರೋಧಿ ಮನೋಭಾವ ರೂಪಿಸಲು ಸೂಕ್ತವಾದ ಚಟುವಟಿಕೆಗಳನ್ನು ಹಾಗೂ ಚರ್ಚೆಯನ್ನು ಏರ್ಪಡಿಸಬೇಕು. ಎರಡನೇ ಗುಂಪಿನವರು ಎರಡನೇ ಜಾಗತಿಕ ಯುದ್ಧದ ನಂತರ ಸ್ವತಂತ್ರ್ಯಗೊಂಡ ದೇಶಗಳ ಪಟ್ಟಿಯನ್ನು ತಯಾರಿಸಬೇಕು. ಮೂರನೇ ಗುಂಪಿನವರು ಶೀತಲ ಸಮರವು ಜಾಗತಿಕ ಶಾಂತಿಗೆ ಬೆದರಿಕೆಯಾಗಿತ್ತೆಂಬುದನ್ನು ವಿವರಿಸಬೇಕು. ನಾಲ್ಕನೇ ಗುಂಪಿನವರು ಜಾಗತಿಕ ಶಾಂತಿಯನ್ನು ಕಾಪಾಡುವಲ್ಲಿ ಅಲಿಪ್ತ ಚಳುವಳಿಯು ವಹಿಸಿದ ಪಾತ್ರವನ್ನು ಚರ್ಚಿಸಬೇಕು.

ಒಂದನೇ ಜಾಗತಿಕ ಯುದ್ಧಕ್ಕಿಂತ ವ್ಯತ್ಯಸ್ತವಾಗಿ ದೂರವ್ಯಾಪಕವಾದ ಪರಿಣಾಮಗಳನ್ನುಂಟುಮಾಡಲು ಎರಡನೇ ಜಾಗತಿಕ ಯುದ್ಧಕ್ಕೆ ಸಾಧ್ಯವಾಯಿತೆಂಬ ಕ್ರೋಡೀಕರಣದ ಮೂಲಕ ವಿಚಾರಗೋಷ್ಠಿಯನ್ನು ಪೂರ್ತಿಗೊಳಿಸಬಹುದು.

## ಪಶ್ಚಿಮ ಏಷ್ಯಾ

ಯಾಸರ್ ಅರಾಫತ್‌ನ ಭಾಷಣದ ಭಾಗವನ್ನು ವಿಶ್ಲೇಷಿಸುತ್ತಾ ಪಶ್ಚಿಮ ಏಷ್ಯಾದ ರಾಜಕೀಯದ ಕುರಿತು ಚರ್ಚೆಯನ್ನು ಆರಂಭಿಸಬಹುದು.

- ಪಶ್ಚಿಮ ಏಷ್ಯಾವು ಇಂದು ಸಂಘರ್ಷಗಳ ನಾಡಾಗಿದೆ. ಇದಕ್ಕೆ ಕಾರಣವೇನೆಂದು ಕಂಡುಹಿಡಿಯಲು ಸಾಧ್ಯವಿದೆಯೇ? ಎಂಬ ಪ್ರಶ್ನೆಯ ಬಳಿಕ ಒಂದನೇ ಜಾಗತಿಕ ಯುದ್ಧದ ನಂತರ ಪಶ್ಚಿಮ ಏಷ್ಯದ ಚರಿತ್ರೆಯನ್ನು ಗುಂಪುಗಳಲ್ಲಿ ಚರ್ಚಿಸಿ ಫ್ಲೋ ಚಾರ್ಟೊಂದನ್ನು ತಯಾರಿಸುತ್ತಾರೆ.

ಪಶ್ಚಿಮ ಏಷ್ಯವು ತುರ್ಕಿ ಸಾಮ್ರಾಜ್ಯದ ಭಾಗವಾಗಿತ್ತು
↓
ಒಂದನೇ ಜಾಗತಿಕ ಯುದ್ಧದಲ್ಲಿ ತುರ್ಕಿಯು ಪರಾಜಯ ಹೊಂದಿರುವುದರಿಂದ ಬ್ರಿಟನಿನ ಅಧೀನಕ್ಕೆ ಬಂತು.
↓
ಬಾಲ್ಫರ್ ಘೋಷಣೆ
↓
ಝಿಯೋನಿಸ್ಟ್ ಚಳುವಳಿಯ ರೂಪುಗೊಳ್ಳುವಿಕೆ
↓
ಇಸ್ರೇಲ್ ರೂಪುಗೊಳ್ಳುವಿಕೆ
↓
ಇಸ್ರೇಲ್ ಮತ್ತು ಅರಬ್ ರಾಷ್ಟ್ರಗಳ ನಡುವಿನ ಯುದ್ಧಗಳು
↓
ಪಾಲೆಸ್ತೀನ್ ವಿಮೋಚನ ಸಂಘಟನೆಯ ಸ್ಥಾಪನೆ

## ಸೋವಿಯತ್ ಯೂನಿಯನಿನ ಪತನ ಹಾಗೂ ಏಕಧ್ರುವೀಯ ಜಗತ್ತು

ಶೀತಲ ಸಮರದ ಕಾಲದಲ್ಲಿ ಜಗತ್ತು ಎರಡು ಶಕ್ತಿ ಬಣಗಳಾಗಿ ವಿಂಗಡಿಸಲ್ಪಟ್ಟಿತ್ತಲ್ಲವೇ. ಆದರೆ 20ನೇ ಶತಮಾನದ ಕೊನೆಯಲ್ಲಿ ಶೀತಲ ಸಮರವು ಕೊನೆಗೊಂಡಿತ್ತಲ್ಲದೆ ಅಮೇರಿಕಾದ ನೇತೃತ್ವದಲ್ಲಿ ಏಕಧ್ರುವೀಯ ಜಗತ್ತೊಂದು ರೂಪುಗೊಂಡಿತು.

ಈ ಪ್ರಸ್ಥಾವನೆಯ ನಂತರ ಸೋವಿಯತ್ ಯೂನಿಯನಿನ ಪತನಕ್ಕಿರುವ ಕಾರಣಗಳು ಹಾಗೂ ಅದು ಏಕಧ್ರುವೀಯ ಜಗತ್ತಿಗೆ ಹೇಗೆ ದಾರಿಮಾಡಿಕೊಟ್ಟಿತೆಂಬುದನ್ನು ಕಂಡುಹಿಡಿದು ಚರ್ಚಿಸುತ್ತಾರೆ. ಸಮಾಜವಾದದ ಮೂಲತತ್ವಗಳಿಂದ ದೂರ ಸರಿದುದು, ಗೋರ್ಬಚೇವ್‌ನ ಆಡಳಿತ

ಸುಧಾರಣೆಗಳು ಸೋವಿಯತ್ ಯೂನಿಯನಿನ ಪತನಕ್ಕೆ ಕಾರಣವಾಯಿತು ಎಂಬ ಕ್ರೋಡೀಕರಣದ ಮೂಲಕ ಚರ್ಚೆಯನ್ನು ಪೂರ್ತಿಗೊಳಿಸಬಹುದು.

## ನವೀನ ಸಾಮ್ರಾಜ್ಯಶಾಹಿತ್ವ

ನವೀನ ಸಾಮ್ರಾಜ್ಯಶಾಹಿತ್ವ ಎಂಬುವುದು ಎರಡನೇ ಜಾಗತಿಕ ಯುದ್ಧದ ನಂತರ ರೂಪುಗೊಂಡ ವ್ಯವಸ್ಥೆಯಾಗಿದೆ.

- ನವೀನ ಸಾಮ್ರಾಜ್ಯಶಾಹಿತ್ವ ಎಂದರೇನು?
- ನವೀನ ಸಾಮ್ರಾಜ್ಯಶಾಹಿತ್ವವು ತೃತೀಯ ಜಗತ್ತಿನ ಆರ್ಥಿಕ ವಲಯವನ್ನು ಹೇಗೆ ಬಾಧಿಸಿತು?
- ನವೀನ ಸಾಮ್ರಾಜ್ಯಶಾಹಿತ್ವದ ಆಶಯಗಳಾದ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಎಂಬಿವುಗಳ ವಿಶೇಷತೆಗಳು ಯಾವುವು?

ಮೊದಲಾದ ಪ್ರಶ್ನೆಗಳನ್ನು ಕೇಳುವ ಮೂಲಕ ನವೀನ ಸಾಮ್ರಾಜ್ಯಶಾಹಿತ್ವದ ಕುರಿತಾದ ಚರ್ಚೆಯನ್ನು ಆರಂಭಿಸಬಹುದು. ಜಾಗತೀಕರಣವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಹಾಗೂ ನಮ್ಮ ದೈನಂದಿನ ಜೀವನದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುವುದನ್ನು ಚರ್ಚಿಸಬೇಕು. ಇದಕ್ಕೆ ಪಾಠಪುಸ್ತಕದ ಹೊರತಾಗಿ ಪತ್ರಿಕೆಗಳು, ನಿಯತಕಾಲಿಕೆಗಳು ಇತ್ಯಾದಿಗಳನ್ನು ಉಪಯೋಗಿಸಿಕೊಳ್ಳಬಹುದು. ಜಾಗತೀಕರಣದ ಗುಣದೋಷಗಳನ್ನು ಅವಲೋಕಿಸಿ ಚರ್ಚೆಯನ್ನು ಕ್ರೋಡೀಕರಿಸಬಹುದು.

## ? ಮೌಲ್ಯನಿರ್ಣಯಕ್ಕಿರುವ ಪ್ರಶ್ನೆಗಳು

- ಆಫ್ರೋ–ಏಷ್ಯನ್ ದೇಶಗಳಲ್ಲಿ ವಸಾಹತುಗಳನ್ನು ಸ್ಥಾಪಿಸುವಂತೆ ಯುರೋಪಿನ ದೇಶಗಳನ್ನು ಪ್ರೇರೇಪಿಸಿದ ಘಟಕಗಳು ಯಾವುವು?
- ಸಾಮ್ರಾಜ್ಯಶಾಹಿತ್ವವು ಬಂಡವಾಳಶಾಹಿತ್ವದ ವಿಕಸಿತ ರೂಪವಾಗಿದೆ. ಈ ಹೇಳಿಕೆಯನ್ನು ಅವಲೋಕಿಸಿರಿ.
- ಯಾವುದೇ ಯುದ್ಧವು ಮಾನವನ ನಾಶಕ್ಕೆ ಮಾತ್ರ ಕಾರಣವಾಗುತ್ತದೆ. ಒಂದೇ ಜಾಗತಿಕ ಯುದ್ಧದ ಪರಿಣಾಮಗಳನ್ನು ಪರಿಶೀಲಿಸಿ ಸ್ಪಷ್ಟಪಡಿಸಿರಿ.
- ವರ್ಸಾಯಿ ಶಾಂತಿ ಒಪ್ಪಂದವು ಇನ್ನೊಂದು ಯುದ್ಧಕ್ಕೆ ಕಾರಣವಾಯಿತು ಎಂದು ನೀವು ಭಾವಿಸುತ್ತೀರಾ? ಯಾಕೆ?
- ಅಮೇರಿಕದಲ್ಲುಂಟಾದ ಆರ್ಥಿಕ ಕುಸಿತವು ಜಾಗತಿಕ ದೇಶಗಳನ್ನು ಹೇಗೆ ಬಾಧಿಸಿತು?
- ಫಾಸಿಸಂ ಹಾಗೂ ನಾಝಿಸಂನ ಸಮಾನತೆಗಳ ಪಟ್ಟಿ ತಯಾರಿಸಿರಿ.
- ಒಂದನೇ ಜಾಗತಿಕ ಯುದ್ಧದ ನಂತರ ಯುರೋಪಿನ ದೇಶಗಳಲ್ಲುಂಟಾದ ಆರ್ಥಿಕ–ರಾಜಕೀಯ ಸಮಸ್ಯೆಗಳು ಎರಡನೇ ಜಾಗತಿಕ ಯುದ್ಧಕ್ಕೆ ಕಾರಣವಾಯಿತೆ ? ಚರ್ಚಿಸಿರಿ.
- ಅಲಿಪ್ತ ಚಳವಳಿಯ ಇಂದಿನ ಪ್ರಾಧಾನ್ಯವನ್ನು ಅವಲೋಕಿಸಿರಿ.
- ಗೋರ್ಬಚೇವ್‌ನ ಸುಧಾರಣೆಗಳು ಸೋವಿಯತ್ ಯೂನಿಯನ್‌ನ ಪತನಕ್ಕೆ ಕಾರಣವಾಯಿತೆ? ಅವಲೋಕಿಸಿರಿ.
- ಜಾಗತೀಕರಣದ ಧೋರಣೆಗಳು ನಮ್ಮ ಕೃಷಿ ಉತ್ಪನ್ನಗಳ ಬೆಲೆ ಕುಸಿತಕ್ಕೆ ಕಾರಣವಾದುವೇ? ಸಮರ್ಥಿಸಿರಿ.

## ಆಕರ ಗ್ರಂಥ


*ಹಿಸ್ಟರಿ ಆಫ್ ದಿ ವರ್ಲ್ಡ್– ಅರ್ಜುನ್ ದೇವ್ – ಇಂದಿರ ಅರ್ಜುನ್ ದೇವ್*

*ಮಾಸ್ಟರಿಂಗ್ ಆಫ್ ಮೋಡರ್ನ್ ವರ್ಲ್ಡ್ ಹಿಸ್ಟರಿ–ನೋರ್ಮನ್ ಲೋವೆ*

*ಲೋಕ ಚರಿತ್ರಂ 1914–1968 – ಡೇವಿಡ್ ತೋಮ್ಸನ್*

*ಲೋಕ ಚರಿತ್ರಂ ರಂಡಾಂ ಭಾಗಂ – ಕೇರಳ ಭಾಷಾ ಇನ್ಸ್ಟಿಟ್ಯೂಟ್*

*ಆಗೋಳೀಕರಣಂ ಅರ್ಥವ್ಯಾಪ್ತಿ – ಎಂ.ಎ. ಉಮ್ಮನ್*

## ಅಧ್ಯಾಪಕರಿಂದ ಮೌಲ್ಯನಿರ್ಣಯ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸ ಬೇಕಾದುದು |
|---|---|---|---|
| 1. ಸಾಮ್ರಾಜ್ಯ ಶಾಹಿತ್ವದ ಬೆಳವಣಿಗೆಯ ವಿವಿಧ ಹಂತಗಳನ್ನು ತಿಳಿಯಲು ವಿದ್ಯಾರ್ಥಿಗಳಿಗೆ ಸಾಧ್ಯವಾಯಿತೆಂಬುದನ್ನು ಖಾತರಿಪಡಿಸಲಾಯಿತು. | ☐ | ☐ | ☐ |
| 2. ಯುರೋಪೀಯ ದೇಶಗಳಲ್ಲುಂಟಾದ ಕೈಗಾರಿಕಾಭಿವೃದ್ಧಿಯನ್ನು ವಿಮರ್ಶಾತ್ಮಕವಾಗಿ ಅವಲೋಕಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಯಿತೆಂಬುದನ್ನು ಖಾತರಿಪಡಿಸಲಾಯಿತು. | ☐ | ☐ | ☐ |
| 3. ಎರಡನೇ ಜಾಗತಿಕ ಯುದ್ಧಕ್ಕೆ ಕಾರಣವಾದ ಘಟಕಗಳನ್ನು ವಿಶ್ಲೇಷಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಯಿತೆಂಬುದನ್ನು ಖಾತರಿಪಡಿಸಲಾಯಿತು. | ☐ | ☐ | ☐ |
| 4. ಒಂದನೇ ಜಾಗತಿಕ ಯುದ್ಧದ ಪರಿಣಾಮಗಳನ್ನು ವಿವರಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಯಿತೆಂಬುದನ್ನು ಖಾತರಿಪಡಿಸಲಾಯಿತು. | ☐ | ☐ | ☐ |
| 5. ಅಮೇರಿಕಾವು ನೂತನ ರಾಜಕೀಯ ಶಕ್ತಿಯಾದುದು ಹೇಗೆಂಬುದನ್ನು ಗುರುತಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಯಿತು. | ☐ | ☐ | ☐ |
| 6. ಫಾಸಿಸಂ ಮತ್ತು ನಾಝಿಸಂ ಜಗತ್ತಿಗೆ ಹೇಗೆ ಬೆದರಿಕೆಯಾಯಿತೆಂಬುದನ್ನು ಸ್ಪಷ್ಟಪಡಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಿದೆ. | ☐ | ☐ | ☐ |
| 7. ಒಂದನೇ ಜಾಗತಿಕ ಯುದ್ಧಕ್ಕಿರುವ ಕಾರಣಗಳು ಹಾಗೂ ಪರಿಣಾಮಗಳನ್ನು ವಿಶದೀಕರಿಸಲು ಸಾಧ್ಯವಿದೆ. | ☐ | ☐ | ☐ |
| 8. ನೂತನ ಶಕ್ತಿ ಬಣಗಳ ಉದಯವು ಶೀತಲ ಸಮರಕ್ಕೆ ಹೇಗೆ ಕಾರಣವಾಯಿತೆಂಬುದನ್ನು ಕಂಡುಹಿಡಿಯಲು ವಿದ್ಯಾರ್ಥಿಗಳಿಗೆ ಸಾಧ್ಯವಿದೆ | ☐ | ☐ | ☐ |
| 9. ಸೋವಿಯತ್ ಯೂನಿಯನ್‌ನ ಪತನವು ಜಾಗತಿಕ ರಾಷ್ಟ್ರಗಳಲ್ಲಿ ಉಂಟುಮಾಡಿದ ಬದಲಾವಣೆಗಳನ್ನು ವಿಶ್ಲೇಷಿಸಲು ಸಾಧ್ಯವಿದೆ. | ☐ | ☐ | ☐ |
| 10. ವರ್ತಮಾನ ಕಾಲದ ಅಮೇರಿಕಾದ ಆಧಿಪತ್ಯವನ್ನು ವಿಶ್ಲೇಷಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಿದೆ. | ☐ | ☐ | ☐ |
| 11. ನವೀನ ಸಾಮ್ರಾಜ್ಯ ಶಾಹಿತ್ವವು ಭಾರತದಂತಹ ದೇಶಗಳನ್ನು ಹೇಗೆ ಬಾಧಿಸುತ್ತದೆ ಎಂಬುದನ್ನು ಕಂಡುಕೊಳ್ಳಲು ವಿದ್ಯಾರ್ಥಿಗಳಿಗೆ ಸಾಧ್ಯವಿದೆ. | ☐ | ☐ | ☐ |
| 12. ಕಲಿಕಾ ಚಟುವಟಿಕೆಯಲ್ಲಿ ಎಲ್ಲರ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸಲಾಯಿತು. | ☐ | ☐ | ☐ |
| 13. ನೋಟ್‌ಪುಸ್ತಕ ಮತ್ತು ಪೋರ್ಟ್‌ಪೋಲಿಯೋವನ್ನು ಮೌಲ್ಯಮಾಪನಕ್ಕೀಡುಮಾಡಲಾಯಿತು. | ☐ | ☐ | ☐ |



# 3

# ಬ್ರಿಟಿಷರ ಶೋಷಣೆ ಹಾಗೂ ಪ್ರತಿಭಟನೆಗಳು

ಬ್ರಿಟಿಷ್ ಆಧಿಪತ್ಯವು ಭಾರತದ ವಿವಿಧ ವಿಭಾಗದ ಜನರ ಜೀವನದಲ್ಲಿ ಸೃಷ್ಟಿಸಿದ ದುಷ್ಪರಿಣಾಮಗಳನ್ನು ಹಾಗೂ ಅವರು ನಡೆಸಿದ ಪ್ರತಿಭಟನೆಗಳ ಕುರಿತು ಈ ಪಾಠದಲ್ಲಿ ಪ್ರಧಾನವಾಗಿ ಚರ್ಚಿಸಲಾಗುತ್ತದೆ. ಬ್ರಿಟಿಷ್ ಆಧಿಪತ್ಯದಿಂದಿರುವ ವಿಮೋಚನೆಯೇ ಇಂತಹ ಪ್ರತಿಭಟನೆಗಳ ಪ್ರಧಾನ ಗುರಿಯಾಗಿದೆ. ಭಾರತದ ಕೃಷಿಕರು, ಆದಿವಾಸಿಗಳು, ಕರಕುಶಲ ಕೆಲಸಗಾರರು, ಕೈಗಾರಿಕೆಯ ಕಾರ್ಮಿಕರು ಹೀಗೆ ವಿವಿಧ ವಿಭಾಗದವರು ಬ್ರಿಟಿಷ್ ಆಡಳಿತದ ದ್ವಿತೀಯಾರ್ಧದಲ್ಲಿ ಸಂಘಟಿತವಾದೊಂದು ರೂಪವನ್ನು ಗಳಿಸಿದರಲ್ಲದೆ ಆಧುನಿಕ ಭಾರತೀಯ ರಾಷ್ಟ್ರೀಯತೆಯು ಬೆಳೆದು ಬರಲು ಕಾರಣವಾದರು. ಹೀಗೆ ಹದಿನೈದನೇ ಶತಮಾನಕ್ಕಾಗುವಾಗ ಬೆಳೆದು ಬಂದ ರಾಷ್ಟ್ರೀಯತೆಯು ಭಾರತೀಯನ ಪ್ರತಿಭಟನೆಯ ಮೂಲಕ ರೂಪುಗೊಂಡದ್ದೆಂದೂ ಅದನ್ನು ಬೆಳೆಸುವಲ್ಲಿ ಆರಂಭಕಾಲದ ರಾಷ್ಟ್ರೀಯ ನೇತಾರರು ಪ್ರಧಾನ ಪಾತ್ರ ವಹಿಸಿದರು ಎಂಬುದನ್ನೂ ಕಲಿಕಾರ್ಥಿಯು ಮನದಟ್ಟು ಮಾಡಿಕೊಳ್ಳುವಂತೆ ಈ ಪಾಠದ ವಿನಿಮಯವನ್ನು ನಡೆಸಬೇಕು. ಭಾರತದ ರಾಷ್ಟ್ರೀಯ ನೇತಾರರ ಕುರಿತು ಇನ್ನೂ ಹೆಚ್ಚಿನ ಮಾಹಿತಿಗಳನ್ನು ತಿಳಿದುಕೊಳ್ಳಬೇಕೆಂಬ ಪ್ರೇರಣೆಯನ್ನು ಕಲಿಕಾರ್ಥಿಯಲ್ಲಿ ಉಂಟುಮಾಡುವುದು, ವಸಾಹತು ಶಾಹಿ ವಿರುದ್ಧವಾದ ಮನೋಭಾವವನ್ನು ಈ ಪಾಠದ ವಿನಿಮಯದ ಮೂಲಕ ಸಾಧ್ಯವಾಗಬೇಕು.

ಯೂನಿಟ್ ಫ್ರೇಂ

# 3. ಬ್ರಿಟಿಷರ ಶೋಷಣೆ ಹಾಗೂ ಪ್ರತಿಭಟನೆಗಳು

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
| --- | --- | --- |
| • ಬ್ರಿಟಿಷ್ ಧೋರಣೆಗಳ ದುಷ್ಪರಿಣಾಮಗಳು<br>• ತೆರಿಗೆ ವ್ಯವಸ್ಥೆಗಳು–ಶಾಶ್ವತ ಭೂಕಂದಾಯ ವ್ಯವಸ್ಥೆ, ರೈತ್‌ವಾರಿ ವ್ಯವಸ್ಥೆ, ಮಹಲ್‌ವಾರಿ ವ್ಯವಸ್ಥೆ<br>• ಕೃಷಿಯ ವಾಣಿಜ್ಯೀಕರಣ<br>• ನೀಲ ಕೃಷಿಕರ ಸಮಸ್ಯೆಗಳು<br>• ನೀಲ ದಂಗೆ<br>• ಮಾಪಿಳ್ಳೆ ದಂಗೆ<br>• ಆದಿವಾಸಿ ದಂಗೆಗಳು<br>• ಸಂತಾಳರು, ಕುರುಚಿಯರ ದಂಗೆಗಳು<br>• ಪರಂಪರಾಗತ ಕೈಗಾರಿಕೆಗಳ ಪತನ–ಕಾರಣಗಳು<br>• ಆಧುನಿಕ ಕೈಗಾರಿಕಾ ಕಾರ್ಮಿಕರ ಸಮಸ್ಯೆಗಳು<br>• 1857ರ ಹೋರಾಟ<br>• ಬ್ರಿಟಿಷರ ಶೋಷಣೆ– ಸೋರಿಕೆಯ ಸಿದ್ಧಾಂತ<br>• ಸ್ವದೇಶೀ ಚಳುವಳಿ | • ಬ್ರಿಟಿಷರ ಧೋರಣೆಗಳು ಕೃಷಿ ವಲಯದ ಮೇಲೆ ಬೀರಿದ ದುಷ್ಪರಿಣಾಮಗಳನ್ನು ವಿವಿಧ ರೀತಿಯ ತೆರಿಗೆ ವ್ಯವಸ್ಥೆಗಳ ವಿಶೇಷತೆಗಳ ಆಧಾರದಲ್ಲಿ ಚರ್ಚಿಸುವುದು<br>• ವಿಭಿನ್ನ ತೆರಿಗೆ ವ್ಯವಸ್ಥೆಗಳ ವಿಶೇಷತೆಗಳ ಪಟ್ಟಿ ತಯಾರಿಸುವುದು.<br>• ಕೃಷಿಯ ವಾಣಿಜ್ಯೀಕರಣ, ಅದಕ್ಕೆ ಕಾರಣವಾದ ಸನ್ನಿವೇಶ ಎಂಬಿವುಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸುವುದು.<br>• ನೀಲ ಕೃಷಿಕರ ಸಮಸ್ಯೆಗಳನ್ನು ಚರ್ಚಿಸಿ ಪಟ್ಟಿ ಮಾಡುವುದು. ನೀಲ ದಂಗೆಗೆ ಕಾರಣವಾದ ಸನ್ನಿವೇಶಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸುವುದು.<br>• ಮಾಪಿಳ್ಳೆ ದಂಗೆಯ ಹಿನ್ನೆಲೆಯನ್ನು ಚರ್ಚಿಸಿ ಟಿಪ್ಪಣಿ ತಯಾರಿಸುವುದು.<br>• ಸಾಂತಾಳ ದಂಗೆಯ ಕಾರಣಗಳನ್ನು ವಿಶ್ಲೇಷಿಸಿ ಪಟ್ಟಿ ಮಾಡುವುದು.<br>• ಕುರಿಚಿಯರ ದಂಗೆಯ ಕಾರಣಗಳನ್ನು ವಿಶ್ಲೇಷಿಸುವುದು.<br>• ಭಾರತದ ಪರಂಪರಾಗತ ಕೈಗಾರಿಕೆಗಳ ಪತನಕ್ಕಿರುವ ಕಾರಣಗಳನ್ನು ಕಂಡುಹಿಡಿದು ಪಟ್ಟಿ ಮಾಡುವುದು.<br>• ಆಧುನಿಕ ಕೈಗಾರಿಕಾ ಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸುವುದು.<br>• 1857 ರ ಪ್ರಥಮ ಸ್ವಾತಂತ್ರ್ಯ ಹೋರಾಟಕ್ಕಿರುವ ಕಾರಣಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸುವುದು.<br>• ಕಾಂಗ್ರೆಸ್‌ನ ರೂಪೀಕರಣ, ಆರ್ಥಿಕ ಸೋರಿಕೆಯ ಸಿದ್ಧಾಂತ ಎಂಬಿವುಗಳನ್ನು ಚರ್ಚಿಸುವುದು.<br>• ಸ್ವದೇಶೀ ಆಂದೋಲನದ ಪ್ರಾಧಾನ್ಯವನ್ನು ಚರ್ಚಿಸುವುದು. | • ಬ್ರಿಟಿಷರ ತೆರಿಗೆ ಧೋರಣೆಗಳು ಕೃಷಿಕರನ್ನು ಹೇಗೆ ಬಡತನದತ್ತ ಸಾಗಿಸಿತೆಂಬುದನ್ನು ವಿಶ್ಲೇಷಿಸುತ್ತಾರೆ.<br>• ಬ್ರಿಟಿಷರ ಭೂ ತೆರಿಗೆ ಧೋರಣೆಗಳು ಕೃಷಿಯ ವಾಣಿಜ್ಯೀಕರಣಕ್ಕೆ ಹೇಗೆ ದಾರಿಮಾಡಿಕೊಟ್ಟಿತೆಂಬುದನ್ನು ತಿಳಿಯುತ್ತಾರೆ.<br>• ಬ್ರಿಟಿಷರ ಧೋರಣೆಗಳು ಆದಿವಾಸಿಗಳ ಜೀವನದ ಮೇಲೆ ಬೀರಿದ ದುಷ್ಪರಿಣಾಮಗಳನ್ನು ಸ್ಪಷ್ಟಪಡಿಸುತ್ತಾರೆ.<br>• ಕರಕುಶಲ ಕೈಗಾರಿಕೆಯ ಪತನಕ್ಕಿರುವ ಕಾರಣಗಳನ್ನು ವಿಶ್ಲೇಷಿಸುತ್ತಾರೆ.<br>• 1857ರ ದಂಗೆಗಿರುವ ಕಾರಣಗಳನ್ನು ತಿಳಿಯುತ್ತಾರೆ.<br>• ಸೋರಿಕೆಯ ಸಿದ್ಧಾಂತವನ್ನು ವಿಶ್ಲೇಷಿಸಿ, ಅದು ಭಾರತೀಯರಲ್ಲಿ ಬ್ರಿಟಿಷ್ ವಿರೋಧಿ ಭಾವನೆಗಳನ್ನು ಹೇಗೆ ಬೆಳೆಸಿತೆಂಬುದನ್ನು ಸ್ಪಷ್ಟಪಡಿಸುತ್ತಾರೆ.<br>• ಸ್ವದೇಶೀ ಚಳುವಳಿಯ ಪ್ರಾಧಾನ್ಯವನ್ನು ತಿಳಿಯುತ್ತಾರೆ.<br>• ಸ್ವದೇಶಿ ಚಳುವಳಿಯ ಕಾಲದ ಹೋರಾಟಗಳನ್ನು ವಿಶ್ಲೇಷಿಸುತ್ತಾರೆ. |

## ಅಧ್ಯಾಯದೆಡೆಗೆ....

ಬ್ರಿಟಿಷ್ ಉತ್ಪನ್ನಗಳ ಬಹಿಷ್ಕಾರ ಹಾಗೂ ಭಾರತೀಯ ಉತ್ಪನ್ನಗಳ ಉಪಯೋಗವನ್ನು ಸೂಚಿಸುವ ಕಥೆಯೊಂದನ್ನು ಪಾಠದ ಆರಂಭದಲ್ಲಿ ನೀಡಲಾಗಿದೆ. ಅದರ ಕುರಿತಾದ ಚರ್ಚೆಯ ಮೂಲಕ ಪಾಠವನ್ನು ಆರಂಭಿಸಬಹುದು. ಬ್ರಿಟಿಷ್ ಉತ್ಪನ್ನಗಳ ಬಹಿಷ್ಕಾರ ಮತ್ತು ಭಾರತೀಯ ಉತ್ಪನ್ನಗಳ ಬಳಕೆ ಎಂಬಿವುಗಳ ಪ್ರಾಧಾನ್ಯವು ಈ ಚರ್ಚೆಯ ಮೂಲಕ ಕಲಿಕಾರ್ಥಿಗಳಿಗೆ ಮನದಟ್ಟಾಗಬೇಕು. ಅನಂತರ ಏಳನೇ ತರಗತಿಯಲ್ಲಿ ಚರ್ಚಿಸಿದ ಯುರೋಪಿನ ದೇಶಗಳು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದದ್ದು, ಅವರು ತಮ್ಮೊಳಗೆ ನಡೆಸಿದ ಸ್ಪರ್ಧೆ, ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಜಯ, ಅವರು ದೇಶೀಯ ರಾಜ್ಯಗಳನ್ನು ವಶಪಡಿಸಿದುದು ಎಂಬಿವುಗಳಿಗೆ ಸಂಬಂಧಪಟ್ಟು ಕಲಿಕಾರ್ಥಿಗಳಲ್ಲಿರುವ ಪೂರ್ವಜ್ಞಾನವನ್ನು ಪರೀಕ್ಷಿಸುವುದಕ್ಕಾಗಿ ಕೆಲವು ಪ್ರಶ್ನೆಗಳನ್ನು ತರಗತಿಯಲ್ಲಿ ಕೇಳಬಹುದು.

- ವ್ಯಾಪಾರದ ಉದ್ದೇಶದಿಂದ ಭಾರತವನ್ನು ತಲುಪಿದ ಯುರೋಪಿನ ವಿವಿಧ ದೇಶಗಳು ಯಾವುವು?
- ಈ ದೇಶಗಳು ವ್ಯಾಪಾರದ ಏಕಸ್ವಾಮ್ಯಕ್ಕಾಗಿ ತಮ್ಮೊಳಗೆ ನಡೆಸಿದ ಸ್ಪರ್ಧೆಯಲ್ಲಿ ಜಯ ಗಳಿಸಿದ್ದು ಯಾರು?
- ಭಾರತದ ದೇಶೀಯ ರಾಜ್ಯಗಳನ್ನು ಬ್ರಿಟಿಷರು ಹೇಗೆ ವಶಪಡಿಸಿಕೊಂಡರು?

### ಬ್ರಿಟಿಷರ ಧೋರಣೆಗಳ ದುಷ್ಪರಿಣಾಮಗಳು

ಪಾಠದಲ್ಲಿ ನೀಡಿರುವ ವಿಲಿಯಂ ಫುಲ್ಲರ್‌ಟನ್‌ನ ನಿರೀಕ್ಷಣೆಯನ್ನು ವಿಶ್ಲೇಷಿಸುತ್ತಾ ಪಾಠಭಾಗವನ್ನು ಆರಂಭಿಸಬಹುದು. ಫುಲ್ಲರ್‌ಟನ್‌ನ ನಿರೀಕ್ಷಣೆಯಿಂದ ಕೆಳಗೆ ಹೇಳಿರುವ ನಿಗಮನಗಳಿಗೆ ತಲುಪಬಹುದು.

### ದೇಶೀಯ ರಾಜ್ಯಗಳ ವಶಪಡಿಸುವಿಕೆ

*ಭಾರತದ ದೇಶೀಯ ರಾಜ್ಯಗಳನ್ನು ವಶಪಡಿಸಿ ಅಧಿಕಾರವನ್ನು ಸ್ಥಾಪಿಸಲು ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪೆನಿಯು ವಿವಿಧ ಮಾರ್ಗಗಳನ್ನು ಸ್ವೀಕರಿಸಿತು. ಸೈನ್ಯ ಸಹಾಯ ಪದ್ಧತಿ ಹಾಗೂ ದತ್ತು ಪುತ್ರನಿಗೆ ಹಕ್ಕು ಇಲ್ಲವೆಂಬ ನಿಯಮವು ಇವುಗಳಲ್ಲಿ ಪ್ರಧಾನವಾದವುಗಳಾಗಿವೆ.*

*ವೆಲ್ಲೆಸ್ಲಿ ಪ್ರಭುವು ಜ್ಯಾರಿಗೊಳಿಸಿದ ಸೈನ್ಯ ಸಹಾಯ ಪದ್ಧತಿಯ ಸದಸ್ಯತ್ವವನ್ನು ಹೊಂದುವ ದೇಶೀಯ ರಾಜ್ಯಗಳನ್ನು ರಕ್ಷಿಸಲಾಗುವುದೆಂದು ಕಂಪೆನಿಯು ದೃಢೀಕರಿಸಿತ್ತು. ಇದಕ್ಕೆ ಬದಲಾಗಿ ಆ ರಾಜ್ಯವು ಪ್ರತಿ ವರ್ಷವೂ ಒಂದು ನಿಶ್ಚಿತ ಮೊತ್ತವನ್ನು ಕಂಪೆನಿಗೆ ನೀಡಬೇಕಿತ್ತು. ಮಾತ್ರವಲ್ಲ ಕಂಪೆನಿಗೆ ಬೇಕಾಗಿ ಒಂದು ಸೈನ್ಯವನ್ನು ರಾಜನು ಇರಿಸಿಕೊಳ್ಳ ಬೇಕಾಗಿತ್ತು. ಅಲ್ಲದೆ ಕಂಪೆನಿಯ ಒಬ್ಬ ಪ್ರತಿನಿಧಿಯು ಯಾವಾಗಲೂ ರಾಜ್ಯದಲ್ಲಿರುತ್ತಾನೆ. ಈ ದೇಶೀಯ ರಾಜ್ಯವು ಇತರ ರಾಜ್ಯಗಳೊಂದಿಗೆ ಒಪ್ಪಂದವನ್ನು ಮಾಡಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ದೇಶೀಯ ರಾಜ್ಯವೊಂದು ಸೈನ್ಯ ಸಹಾಯ ಪದ್ಧತಿಗೆ ಸೇರುವುದರೊಂದಿಗೆ ಆ ರಾಜ್ಯದ ಪರಮಾಧಿಕಾರವು ಕಂಪೆನಿಯ ವಶವಾಯಿತು.*

*ಡಾಲ್‌ಹೌಸಿ ಪ್ರಭುವು ದತ್ತುಪುತ್ರನಿಗೆ ಹಕ್ಕಿಲ್ಲವೆಂಬ ನಿಯಮವನ್ನು ಜಾರಿಗೆ ತಂದವನಾಗಿದ್ದಾನೆ. ಇದರ ಪ್ರಕಾರ ದೇಶೀಯ ರಾಜ್ಯದ ಆಡಳಿತಾಧಿಕಾರಿಗಳಿಗೆ ಉತ್ತರಾಧಿಕಾರಿ ಗಳನ್ನು ದತ್ತು ಪಡೆದುಕೊಳ್ಳುವ ಹಕ್ಕು ಇಲ್ಲದಾಯಿತು. ಗಂಡು ಮಕ್ಕಳಿಲ್ಲದೆ ಒಬ್ಬ ರಾಜನು ಮರಣ ಹೊಂದಿದರೆ ಆ ರಾಜ್ಯವನ್ನು ಕಂಪೆನಿಯು ವಶಪಡಿಸಿಕೊಳ್ಳುತ್ತಿತ್ತು.*

*ಉತ್ತರ ಭಾರತದ ಪ್ರಧಾನ ದೇಶೀಯ ರಾಜ್ಯಗಳಲ್ಲೊಂದಾದ ಅವಧನ್ನು ದುರಾಡಳಿತದ ಆರೋಪ ಹೊರಿಸಿ ವಶಪಡಿಸಿಕೊಂಡರು. ಹೀಗೆ ವಿವಿಧ ತಂತ್ರಗಳ ಮೂಲಕ ಬ್ರಿಟಿಷರು ದೇಶೀಯ ರಾಜ್ಯಗಳನ್ನು ವಶಪಡಿಸಿಕೊಂಡರು.*

- ಬ್ರಿಟಿಷ್ ಆಧಿಪತ್ಯಕ್ಕಿಂತ ಮೊದಲು ಬಂಗಾಳವು ಕೃಷಿ, ವ್ಯಾಪಾರ, ಕೈಗಾರಿಕೆ ಎಂಬೀ ವಲಯಗಳಲ್ಲಿ ಬೃಹತ್ ಪ್ರಗತಿಯನ್ನು ಗಳಿಸಿತ್ತು.
- ಬ್ರಿಟಿಷ್ ಆಡಳಿತವು ಆರಂಭವಾದ ಕೂಡಲೇ ಬಂಗಾಳದ ಕೃಷಿ ಹಾಗೂ ಇತರ ಆರ್ಥಿಕ ಚಟುವಟಿಕೆಗಳು ಪತನವಾಗಿದ್ದವು.
- ಕೃಷಿಕರು ದೊಡ್ಡ ಪ್ರಮಾಣದ ಶೋಷಣೆಗೆ ಗುರಿಯಾಗಿದ್ದರು.

ಅನಂತರ ಬ್ರಿಟಿಷರು ಜಾರಿಗೊಳಿಸಿದ ತೆರಿಗೆ ವ್ಯವಸ್ಥೆಗಳು ಕೃಷಿಕರನ್ನು ಬಡವರನ್ನಾಗಿ ಮಾಡಿದುದು ಹೇಗೆಂಬುದನ್ನು ವಿಶ್ಲೇಷಿಸುತ್ತಾರೆ. ಇದಕ್ಕಾಗಿ ವಿವಿಧ ರೀತಿಯ ಭೂತೆರಿಗೆ ವ್ಯವಸ್ಥೆಗಳು ಹಾಗೂ ಅವುಗಳ ವಿಶೇಷತೆಗಳನ್ನು ಚರ್ಚಿಸುತ್ತಾರೆ. ಚರ್ಚೆಯ ಆಧಾರದಲ್ಲಿ ನೀಡಿರುವ ವಿವಿಧ ಭೂತೆರಿಗೆ ವ್ಯವಸ್ಥೆಗಳ ವಿಶೇಷತೆಗಳನ್ನು ಚಾರ್ಟಿನಲ್ಲಿ ಬರೆದು ತರಗತಿಯಲ್ಲಿ ಮಂಡಿಸಲು ಹೇಳಬಹುದು.

### 1. ಶಾಶ್ವತ ಭೂಕಂದಾಯ ವ್ಯವಸ್ಥೆ

- ಬಂಗಾಳ, ಬಿಹಾರ, ಒರಿಸ್ಸಾಗಳಲ್ಲಿ ಜಾರಿಗೆ ತಂದರು.
- ಜಮೀನ್ದಾರರು ಕೃಷಿಕರಿಂದ ತೆರಿಗೆಯನ್ನು ವಸೂಲು ಮಾಡಿದರು.
- ಜಮೀನ್ದಾರರು ತಾವು ತೆರಿಗೆ ವಸೂಲಿ ಮಾಡುವ ಅಧಿಕಾರವನ್ನು ಹೊಂದಿದ್ದ ಎಲ್ಲ ಭೂಮಿಯ ಯಜಮಾನರಾಗಿದ್ದರು.
- ಇದರಿಂದಾಗಿ ಕೃಷಿಕರು ಒಕ್ಕಲುಗಳಾದರು.
- ಪ್ರತಿಯೊಬ್ಬ ಕೃಷಿಕನೂ ತನ್ನ ಉತ್ಪಾದನೆಯ 60 ಶೇಕಡಾವನ್ನು ತೆರಿಗೆಯಾಗಿ ಕೊಡಬೇಕಾಗಿ ಬಂತು.
- ಕೃಷಿ ನಾಶ ಉಂಟಾದರೂ ತೆರಿಗೆಯನ್ನು ನೀಡಬೇಕಿತ್ತು.
- ತೆರಿಗೆಯನ್ನು ಹಣದ ರೂಪದಲ್ಲಿ ನಿಶ್ಚಿತ ದಿನಾಂಕದಂದು ನೀಡಬೇಕಿತ್ತು.

### 2. ರೈತ್‌ವಾರಿ ಪದ್ಧತಿ

- ದಕ್ಷಿಣ ಭಾರತದಲ್ಲಿ ಜಾರಿಗೊಳಿಸಿದರು.
- ಕೃಷಿಕರಿಂದ ಕಂಪೆನಿಯ ಅಧಿಕಾರಿಗಳು ನೇರವಾಗಿ ತೆರಿಗೆ ವಸೂಲಿ ಮಾಡಿದರು.
- ತೆರಿಗೆಯ ದರವು ಅಮಿತವಾಗಿತ್ತು.
- ತೆರಿಗೆಯ ದರವನ್ನು ಆಗಾಗ ಹೆಚ್ಚಿಸುತ್ತಿದ್ದರು.

### 3. ಮಹಲ್‌ವಾರಿ ವ್ಯವಸ್ಥೆ

- ಗ್ರಾಮದ ಮುಖ್ಯಸ್ಥನು ತೆರಿಗೆಯನ್ನು ಸಂಗ್ರಹಿಸುತ್ತಿದ್ದನು.
- ತೆರಿಗೆಯ ದರವು ಅತ್ಯಂತ ಹೆಚ್ಚಾಗಿತ್ತು.
- ಗ್ರಾಮವನ್ನು ಒಂದು ಯೂನಿಟ್ಟಾಗಿ ಲೆಕ್ಕ ಹಾಕಿ ತೆರಿಗೆ ವಸೂಲಿ ಮಾಡುತ್ತಿದ್ದರು.

ಅಧಿಕ ದರದ ತೆರಿಗೆಯನ್ನು ನಿಶ್ಚಿತ ದಿನಾಂಕದೊಳಗೆ ಹಣದ ರೂಪದಲ್ಲಿ ನೀಡಲು ನಿರ್ಬಂಧಿತರಾದ ಕೃಷಿಕರು ದುಬಾರಿ ಬಡ್ಡಿದಾರರಿಂದ ಬಡ್ಡಿಗೆ ಸಾಲ ಪಡೆಯಬೇಕಾಗಿ ಬಂತು. ಹೀಗೆ ಬ್ರಿಟಿಷ್ ತೆರಿಗೆ ವ್ಯವಸ್ಥೆಗಳು ಕೃಷಿಕರನ್ನು ದುಬಾರಿ ಬಡ್ಡಿದಾರರ ಶೋಷಣೆಗೆ ಈಡುಮಾಡಿತು.

### ಕೃಷಿಯ ವಾಣಿಜ್ಯೀಕರಣ

ಬ್ರಿಟಿಷರ ತೆರಿಗೆ ವ್ಯವಸ್ಥೆಯು ಭಾರತದ ಕೃಷಿ ರಂಗದಲ್ಲಿ ಇತರ ಯಾವೆಲ್ಲ ದುಷ್ಪರಿಣಾಮಗಳನ್ನುಂಟುಮಾಡಿತು? ಎಂಬ ಪ್ರಶ್ನೆಯನ್ನು ಕೇಳುವ ಮೂಲಕ ಈ ಪಾಠಭಾಗವನ್ನು ಆರಂಭಿಸಬಹುದು. ಕೃಷಿಯ ವಾಣಿಜ್ಯೀಕರಣ, ಅದಕ್ಕೆ ಕಾರಣವಾದ ಸನ್ನಿವೇಶಗಳು ಎಂಬಿವುಗಳ ಕುರಿತು ಚರ್ಚಿಸಿ ಟಿಪ್ಪಣಿ ತಯಾರಿಸಲು ಹೇಳಬಹುದು. ಕೆಳಗೆ ಕೊಟ್ಟಿರುವವುಗಳು ಟಿಪ್ಪಣಿಯಲ್ಲಿವೆಯೆಂಬುದನ್ನು ಖಾತರಿಪಡಿಸುವಿರಲ್ಲವೇ.

ಪರಂಪರಾಗತವಾಗಿ ಭಾರತೀಯ ಕೃಷಿಕನು ತನ್ನ ಕುಟುಂಬ ಅಥವಾ ಗ್ರಾಮದ ಆವಶ್ಯಕತೆಗಳನ್ನು ನೆರವೇರಿಸುವುದಕ್ಕಾಗಿ ಕೃಷಿ ಮಾಡುತ್ತಿದ್ದನು. ಆದರೆ ಬ್ರಿಟಿಷರ ಆಡಳಿತ ಕಾಲದಲ್ಲಿ ಅತ್ಯಧಿಕ ತೆರಿಗೆಯನ್ನು ಹಣದ ರೂಪದಲ್ಲಿ ನೀಡಬೇಕಾಗಿ ಬಂದ ಕೃಷಿಕನು

ಮಾರುಕಟ್ಟೆಯನ್ನು ಗುರಿಯಾಗಿಸಿ ಬೃಹತ್ ಪ್ರಮಾಣದಲ್ಲಿ ವಾಣಿಜ್ಯ ಬೆಳೆಗಳನ್ನು ಕೃಷಿ ಮಾಡಿದರು. ಕೃಷಿ ರಂಗದಲ್ಲಾದ ಈ ಬದಲಾವಣೆಯನ್ನು ಕೃಷಿಯ ವಾಣಿಜ್ಯೀಕರಣವೆಂದು ಕರೆಯುತ್ತಾರೆ.

- ಬ್ರಿಟಿಷರು ಹೊರಿಸಿದ ಅಧಿಕ ತೆರಿಗೆ
- ತೆರಿಗೆಯನ್ನು ಹಣದ ರೂಪದಲ್ಲಿ ನಿಶ್ಚಿತ ದಿನಾಂಕದಂದು ನೀಡಬೇಕಾಗಿ ಬಂತು.

ಈ ಸನ್ನಿವೇಶಗಳು ಕೃಷಿಕನು ಮಾರುಕಟ್ಟೆಯಲ್ಲಿ ಹೆಚ್ಚು ಬೆಲೆ ಲಭಿಸುವ ಬೆಳೆಗಳನ್ನು ಕೃಷಿ ಮಾಡಲು ಪ್ರೇರೇಪಿಸಿತು.

ಅನಂತರ ವಾಣಿಜ್ಯ ಬೆಳೆಗಳಲ್ಲೊಂದಾದ ನೀಲವನ್ನು ಕೃಷಿ ಮಾಡಬೇಕಾಗಿ ಬಂದ ಕೃಷಿಕರ ಸಮಸ್ಯೆಗಳು ಹಾಗೂ ಅವರ ಹೋರಾಟಗಳನ್ನು ಚರ್ಚಿಸಿ ತಿಳುವಳಿಕೆಯನ್ನು ಗಳಿಸುತ್ತಾರೆ.

- ಬಟ್ಟೆ ಉದ್ದಿಮೆಯ ಬೆಳವಣಿಗೆಯು ನೀಲದ ಬೇಡಿಕೆಯನ್ನು ಹೆಚ್ಚಿಸಿತು.
- ನೀಲ ಕೃಷಿಯನ್ನು ವ್ಯಾಪಿಸಲು ಬ್ರಿಟಿಷ್ ಕೈಗಾರಿಕೋದ್ಯಮಿಗಳು ಕೃಷಿಕರಿಗೆ ಹಣವನ್ನು ಮುಂಗಡವಾಗಿ ನೀಡಿದರು.
- ಪ್ರತಿಯೊಬ್ಬ ಕೃಷಿಕನೂ ತನ್ನ ಕೃಷಿ ಭೂಮಿಯ ಅತಿ ಹೆಚ್ಚು ಫಲವತ್ತಾದ ಭಾಗದಲ್ಲಿ ನೀಲ ಕೃಷಿ ಮಾಡಲು ನಿರ್ಬಂಧಿತರಾದರು.
- ಆಹಾರ ಧಾನ್ಯಗಳನ್ನು ಕೃಷಿ ಮಾಡುತ್ತಿದ್ದ ಪ್ರದೇಶಗಳನ್ನು ಕೂಡಾ ನೀಲ ಕೃಷಿಗಾಗಿ ಕಾದಿರಿಸಬೇಕಾಯಿತು.
- ಬೆಳೆ ಕೊಯ್ಲಿನ ಕಾಲದಲ್ಲಿ ನೀಲಕ್ಕೆ ಬ್ರಿಟಿಷ್ ದಲ್ಲಾಳಿಗಳು ಕಡಿಮೆ ಬೆಲೆಯನ್ನು ನೀಡುತ್ತಿದ್ದರು.
- ಬಟ್ಟೆಗಳಿಗೆ ಬಣ್ಣ ಹಾಕಲು ಕೃತಕ ಬಣ್ಣವನ್ನು ಉಪಯೋಗಿಸಲು ಆರಂಭಿಸುವುದರೊಂದಿಗೆ ನೀಲದ ಬೇಡಿಕೆಯು ಕುಸಿಯಿತು.

ಈ ಸನ್ನಿವೇಶದಿಂದಾಗಿ 1859ರಲ್ಲಿ ಬಂಗಾಳದಲ್ಲಿ ನೀಲ ಕೃಷಿಕರು ದಂಗೆಯನ್ನಾರಂಭಿಸಿದರು.

## ಕೇರಳದಲ್ಲಿ ಕೃಷಿಕರ ದಂಗೆಗಳು

ಆ ಕಾಲದಲ್ಲಿ ಕೇರಳದ ಕೃಷಿಕರ ಸ್ಥಿತಿ ಹೇಗಿತ್ತು?

ಅವರು ಹೇಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದರು? ಎಂಬೀ ಪ್ರಶ್ನೆಗಳನ್ನು ಕೇಳುತ್ತಾ ಪಾಠವನ್ನು ಆರಂಭಿಸಬಹುದು. ಅನಂತರ ಪಾಠಭಾಗವನ್ನು ಓದಿ ಹತ್ತೊಂಭತ್ತನೇ ಶತಮಾನದಲ್ಲಿ ಮಲಬಾರಿನಲ್ಲಿ ನಡೆದ ಮಾಪಿಳ್ಳೆ ದಂಗೆಗಳ ಕುರಿತು ಟಿಪ್ಪಣಿ ತಯಾರಿಸಲು ಹೇಳಬಹುದು. ಕೆಲವು ವಿದ್ಯಾರ್ಥಿಗಳು ಅವರ ಟಿಪ್ಪಣಿಯನ್ನು ಮಂಡಿಸಿದ ನಂತರ ಅಗತ್ಯವಾದ ಸೂಚನೆಗಳನ್ನು ನೀಡಿ ಅದನ್ನು ಉತ್ತಮಪಡಿಸಬೇಕು.

## ಕಾಡುಗಳು ಗಲಭೆಯ ಭೂಮಿಯಾಗುತ್ತಿವೆ

ರಾಜ್‌ಮಹಲ್ ಬೆಟ್ಟಗಳ ತಪ್ಪಲುಗಳಲ್ಲಿ ಜೀವಿಸುವ ಬುಡಕಟ್ಟು ಜನಾಂಗದವರಾದ ಸಾಂತಾಳರು ಹತ್ತೊಂಭತ್ತನೇ ಶತಮಾನದಲ್ಲಿ ಬ್ರಿಟಿಷರಿಗೆದುರಾಗಿ ನಡೆಸಿದ ದಂಗೆಯ ಒಂದು ಕಿರು ವಿವರಣೆಯನ್ನು ಪಾಠಭಾಗದಲ್ಲಿ ಕೊಡಲಾಗಿದೆ. ಈ ವಿವರಣೆಯನ್ನು ವಿಶ್ಲೇಷಣೆ ಮಾಡುತ್ತಾ ಪಾಠವನ್ನು ಆರಂಭಿಸಬಹುದು. ವಿವರಣೆಯಿಂದ ಕೆಳಗೆ ಕೊಟ್ಟಿರುವವುಗಳನ್ನು ಕಂಡುಕೊಳ್ಳಬಹುದು.

- ಸಾಂತಾಳರು ಕಾಡಿನ ಸಂಪನ್ಮೂಲಗಳನ್ನು ಸಂಗ್ರಹಿಸಿ ಜೀವಿಸುವವರಾಗಿದ್ದರು.
- ಬ್ರಿಟಿಷ್ ಆಧಿಪತ್ಯವು ಅವರ ಪರಂಪರಾಗತ ಜೀವನ ಶೈಲಿಯನ್ನು ಬುಡಮೇಲುಗೊಳಿಸಿತು.
- ಜಮೀನ್ದಾರರೂ ಲೇವಾದೇವಿಗಾರರೂ ಅವರ ಭೂಮಿಯನ್ನು ವಶಪಡಿಸಿಕೊಂಡರು.
- ಬ್ರಿಟಿಷರು ರೈಲು ನಿರ್ಮಾಣಕ್ಕಾಗಿ ಸಾಂತಾಳರನ್ನು ಬಳಸಿಕೊಂಡರಲ್ಲದೆ ಅವರಿಗೆ ವೇತನವನ್ನು ನೀಡಲಿಲ್ಲ.

ಈ ಸನ್ನಿವೇಶದಲ್ಲಿ ಸಾಂತಾಳರು ದಂಗೆ ನಡೆಸಿದರು. ಅನಂತರ ಪಾಠಭಾಗವನ್ನು ಓದಿ ಬ್ರಿಟಿಷ್ ಆಡಳಿತವು ಬುಡಕಟ್ಟು ಜನತೆಯನ್ನು ಯಾವೆಲ್ಲ ವಿಧದಲ್ಲಿ

ಬಾಧಿಸಿತೆಂಬುದರ ಕುರಿತು ಚರ್ಚಿಸಿ ಟಿಪ್ಪಣಿ ತಯಾರಿಸಬೇಕು.

- ಅರಣ್ಯ ನಿಯಮಗಳನ್ನು ಜಾರಿಗೊಳಿಸುವ ಮೂಲಕ ಬುಡಕಟ್ಟು ಜನಾಂಗದವರು ಕಾಡುಗಳನ್ನು ಪ್ರವೇಶಿಸುವುದನ್ನು ತಡೆದರು.
- ಹಡಗು ನಿರ್ಮಾಣ, ರೈಲು ನಿರ್ಮಾಣ, ತೋಟಗಾರಿಕೆ ಮೊದಲಾದ ಉದ್ದೇಶಗಳಿಗಾಗಿ ಬ್ರಿಟಿಷರು ಅರಣ್ಯಗಳನ್ನು ವ್ಯಾಪಕವಾಗಿ ನಾಶಮಾಡಿದರು.
- ಬುಡಕಟ್ಟು ಜನಾಂಗದವರು ಸಂಗ್ರಹಿಸುತ್ತಿದ್ದ ಕಾಡುತ್ಪನ್ನಗಳ ಮೇಲೆ ಅತಿ ಹೆಚ್ಚಿನ ತೆರಿಗೆಯನ್ನು ಹೊರಿಸಿದರು.

ಎಂಬೀ ಘಟಕಗಳಿಗೆ ಒತ್ತನ್ನು ನೀಡಿ ಟಿಪ್ಪಣಿ ತಯಾರಿಸಬೇಕು.

ಕೇರಳದ ಬುಡಕಟ್ಟು ಜನಾಂಗದವರು ಹೇಗೆ ಪ್ರತಿಭಟಿಸಿರಬಹುದು? ಎಂಬ ಪ್ರಶ್ನೆಯನ್ನು ಕೇಳಿ ಪಾಠವನ್ನಾರಂಭಿಸಬಹುದು. ಅನಂತರ ಪಾಠವನ್ನು ಓದಿ ರಾಮನಂಬಿಯ ನೇತೃತ್ವದಲ್ಲಿ ನಡೆದ ವಯನಾಡಿನ ಕುರುಚಿಯರ ದಂಗೆಯ ಬಗ್ಗೆ ಚರ್ಚಿಸಿ ಟಿಪ್ಪಣಿ ತಯಾರಿಸಲು ಹೇಳಬೇಕು.

## ಪರಂಪರಾಗತ ಕೈಗಾರಿಕೆಗಳ ಪತನ

ಬ್ರಿಟಿಷ್ ಗವರ್ನರ್ ಜನರಲ್ ಆಗಿದ್ದ ವಿಲಿಯಂ ಬೆಂಟಿಕ್ ಪ್ರಭುವು ಭಾರತದ ಪರಂಪರಾಗತ ಕೈಗಾರಿಕೆಗಳ ಪತನದ ಕುರಿತು ನಡೆಸಿದ ನಿರೀಕ್ಷಣೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಇದನ್ನು ವಿಶ್ಲೇಷಿಸುತ್ತಾ ಪಾಠಭಾಗವನ್ನು ಆರಂಭಿಸಬಹುದು. .

- ಬ್ರಿಟಿಷ್ ಕಾಲವು ಭಾರತದ ವಾಣಿಜ್ಯ ಚರಿತ್ರೆಯಲ್ಲಿ ಅತ್ಯಂತ ದುರಿತಪೂರ್ಣವಾದ ಕಾಲವಾಗಿತ್ತು.
- ಹತ್ತಿಯ ನೇಯ್ಗೆಗಾರರ ಎಲುಬುಗಳು ಭಾರತದ ಸಮತಲಗಳನ್ನು ಬೆಳ್ಳಗಾಗಿಸುತ್ತವೆ ಎಂದರೆ ಭಾರತದ ನೇಯ್ಗೆಗಾರರು (ಅವರು ಒಂದು ಕಾಲದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಪ್ರಸಿದ್ಧರಾಗಿದ್ದರು.) ಬಡತನದಿಂದಾಗಿ ಒಟ್ಟಾಗಿ ಮರಣಪಟ್ಟರು ಎಂದಾಗಿದೆ. ಅನಂತರ ವಿವಿಧ ಗುಂಪುಗಳಲ್ಲಿ ಪಾಠಭಾಗವನ್ನು ಓದಿ ಭಾರತದ ಬಟ್ಟೆಯ ಕೈಗಾರಿಕೆಯ ಅವನತಿಗಿರುವ ಕಾರಣಗಳನ್ನು ಕಂಡುಹಿಡಿಯುತ್ತಾರೆ.

- ಕಚ್ಚಾವಸ್ತುಗಳ ರಫ್ತು.
- ಯಂತ್ರ ನಿರ್ಮಿತವೂ ಕಡಿಮೆ ಬೆಲೆಯುಳ್ಳದ್ದೂ ಆದ ಬ್ರಿಟಿಷ್ ಉತ್ಪನ್ನಗಳ ಆಮದು.
- ರೈಲಿನ ವಿಸ್ತರಣೆ
- ಬ್ರಿಟನಿಗೆ ರಫ್ತು ಮಾಡಿರುವ ಬಟ್ಟೆಗಳ ಮೇಲೆ ಅಲ್ಲಿನ ಸರಕಾರವು ಹೇರಿದ ಆಮದು ಸುಂಕ.
- ಬ್ರಿಟಿಷ್ ಅಧಿಕಾರಿಗಳ ಶೋಷಣೆ ಹಾಗೂ ಪೀಡನೆ.

ಅನಂತರ ಪಠ್ಯಪುಸ್ತಕದ 79ನೇ ಪುಟವನ್ನು ಓದಿ ಬಟ್ಟೆಯ ಕೈಗಾರಿಕೆಯ ಅವನತಿಯ ದುಷ್ಪರಿಣಾಮಗಳನ್ನು ವಿಶ್ಲೇಷಿಸಿ ಅದಕ್ಕೆ ಸಂಬಂಧಿಸಿದ ಚಾರ್ಟೊಂದನ್ನು ತಯಾರಿಸಲು ಹೇಳಬಹುದು.

ಬ್ರಿಟಿಷರ ಕಾಲದಲ್ಲಿ ಅವನತಿ ಹೊಂದಿದ ಇತರ ಕೈಗಾರಿಕೆಗಳ ಪಟ್ಟಿಯನ್ನು ತಯಾರಿಸಲು ಹೇಳಬಹುದು.

### ಕೈಗಾರಿಕೆಯ ಅವನತಿಯ ದುಷ್ಪರಿಣಾಮಗಳು

- ಕೈಗಾರಿಕಾ ಕೇಂದ್ರಗಳಾಗಿದ್ದ ನಗರಗಳು ಜನವಾಸ ರಹಿತವಾಯಿತು.
- ಕಾರ್ಮಿಕರು ಗ್ರಾಮಗಳಿಗೆ ವಲಸೆ ಹೋಗಿ ಕೃಷಿ ಕೆಲಸಕ್ಕೆ ಹಿಂದಿರುಗಿಸಿದರು.
- ಕೃಷಿ ವಲಯದಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆಯಲ್ಲಿ ಹೆಚ್ಚಳವುಂಟಾಯಿತು.
- ಕೃಷಿ ಭೂಮಿಯ ಸಣ್ಣ ಸಣ್ಣ ತುಂಡುಗಳಾಗಿ ಬದಲಾದುವಲ್ಲದೆ ಉತ್ಪಾದನೆಯೂ ಕಡಿಮೆಯಾಯಿತು.

## ಆಧುನಿಕ ಕೈಗಾರಿಕೆಗಳ ಕಾರ್ಮಿಕರ ಸ್ಥಿತಿ

ಬ್ರಿಟಿಷರು ಭಾರತದಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಆರಂಭಿಸಿದರು. ಅಲ್ಲಿನ ಕಾರ್ಮಿಕರ ಸ್ಥಿತಿ ಹೇಗಿತ್ತು? ಎಂಬೀ ಪ್ರಶ್ನೆಗಳನ್ನು ಕೇಳಿದ ನಂತರ ಕಾರ್ಮಿಕರು ಎದುರಿಸಿದ ಸಮಸ್ಯೆಗಳ ಪಟ್ಟಿಯನ್ನು ತಯಾರಿಸಲು ಹೇಳಬಹುದು.

## 1857ರ ಪ್ರಥಮ ಸ್ವಾತಂತ್ರ್ಯ ಹೋರಾಟ

1857ರ ಹೋರಾಟದ ಆರಂಭಕ್ಕೆ ಸಂಬಂಧಿಸಿ ಪಾಠಭಾಗದಲ್ಲಿ ನೀಡಿರುವ ವಿವರಣೆಯನ್ನು ವಿಶ್ಲೇಷಿಸುತ್ತಾ ಪಠಭಾಗವನ್ನು ಆರಂಭಿಸಬಹುದು. ವಿವರಣೆಯಿಂದ ಕೆಳಗೆ ಕೊಟ್ಟಿರುವ ನಿಗಮನಗಳಿಗೆ ತಲುಪಬಹುದು.

- 1857 ಮೇ 10ರಂದು ಮೀರತ್‌ನ ಸಿಪಾಯಿಗಳು ದಂಗೆಯನ್ನು ಆರಂಭಿಸಿದರು.
- ದಂಗೆಗಾರರು ಮೀರತ್‌ನಿಂದ ದೆಹಲಿಯನ್ನು ತಲುಪಿದರು.
- ಅವರು ಬ್ರಿಟಿಷರನ್ನು ವಧಿಸಿದರಲ್ಲದೆ ಬ್ರಿಟಿಷ್ ಸಂಸ್ಥೆಗಳಿಗೆ ಬೆಂಕಿಯಿಟ್ಟರು.
- ದಂಗೆಯು ನಂತರ ಉತ್ತರ ಭಾರತದ ಇತರ ಭಾಗಗಳಿಗೆ ವ್ಯಾಪಿಸಿತು.

ಅನಂತರ ವಿವಿಧ ಗುಂಪುಗಳಾಗಿ ವಿಂಗಡಿಸಿ ಪಾಠಭಾಗವನ್ನು ವಿಶ್ಲೇಷಿಸಿ 1857ರ ದಂಗೆಗಿರುವ ವಿವಿಧ ಕಾರಣಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸಲು ಹೇಳಬೇಕು.

- ಕೃಷಿಕರ ಸಂಕಷ್ಟಗಳು
- ಅತಿ ಹೆಚ್ಚು ಭೂ ತೆರಿಗೆ, ಜಮೀನ್ದಾರರು ಮತ್ತು ಲೇವಾದೇವಿಗಾರರಿಂದ ಶೋಷಣೆ–ಕೃಷಿ ಭೂಮಿ ನಷ್ಟವಾಯಿತು.
- ಕರಕುಶಲ ಕೆಲಸಗಾರರ ಬಡತನ
- ಪರಂಪರಾಗತ ಕೈಗಾರಿಕೆಗಳ (ಬಟ್ಟೆ, ಮಣ್ಣಿನ ಪಾತ್ರೆ ನಿರ್ಮಾಣ, ಚರ್ಮದ ಕೆಲಸ, ಮರದ ಕೆಲಸ) ಅವನತಿ.
- ಸಿಪಾಯಿಗಳ ಸಂಕಷ್ಟಗಳು
- ಅತಿ ಕಡಿಮೆ ವೇತನ, ಬ್ರಿಟಿಷ್ ಅಧಿಕಾರಿಗಳಿಂದಿರುವ ಅವಹೇಳನ, ಹೊಸ ರೀತಿಯ ಕಾಡತೊಸಿಗೆ ದನ ಹಾಗೂ ಹಂದಿಯ ಕೊಬ್ಬನ್ನು ಸವರಿದ್ದಾರೆಂಬ ಪ್ರಚಾರ.

## ಶೋಷಣೆಯನ್ನು ಮನಗಂಡರು

ಭಾರತೀಯರಲ್ಲಿ ಬೆಳೆದು ಬಂದ ಬ್ರಿಟಿಷ್ ವಿರೋಧಿ ಭಾವನೆಗಳು ಆಧುನಿಕ ಭಾರತೀಯ ರಾಷ್ಟ್ರೀಯತೆಯು ರೂಪುಗೊಳ್ಳಲು ಕಾರಣವಾಯಿತು. 1885ರಲ್ಲಿ ಬೊಂಬಾಯಿಯಲ್ಲಿ ರೂಪುಗೊಂಡ ಇಂಡಿಯನ್ ನೇಶನಲ್ ಕಾಂಗ್ರೆಸ್ ಹೀಗೆ ಬೆಳೆದು ಬಂದ ರಾಷ್ಟ್ರೀಯತೆಯ ಸಂಘಟಿತ ರೂಪವಾಗಿತ್ತು. ಕಾಂಗ್ರೆಸ್ ನೇತಾರರ ಆರಂಭಕಾಲದ ಚಟುವಟಿಕೆಗಳು ಯಾವುವು? ಎಂಬ ಪ್ರಶ್ನೆಯನ್ನು ತರಗತಿಯಲ್ಲಿ ಕೇಳುವ ಮೂಲಕ ಈ ಪಾಠವನ್ನು ಆರಂಭಿಸಬಹುದು. ಅನಂತರ ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳಾಗಿ ವಿಂಗಡಿಸಿ, ಪಾಠಭಾಗವನ್ನು ವಿಶ್ಲೇಷಣೆ ಮಾಡಿ ಕಾಂಗ್ರೆಸ್‌ನ ಆರಂಭಕಾಲದ ನೇತಾರರ ಚಟುವಟಿಕೆಗಳ ಕುರಿತು ವಿವರಣೆಯನ್ನು ನೀಡಬೇಕು.

- ಬ್ರಿಟಿಷರು ನಡೆಸಿದ ಆರ್ಥಿಕ ಶೋಷಣೆಗೆ ಸಂಬಂಧಿಸಿ ದಾದಾಬಾಯಿ ನವರೋಜಿ ಯವರಂತಹ ಆರಂಭ ಕಾಲದ ನೇತಾರರು ಜನರನ್ನು ಪ್ರಜ್ಞಾವಂತರನ್ನಾಗಿಸಿದರು.
- ಬ್ರಿಟಿಷರು ಭಾರತವನ್ನು ಅವರ ಉತ್ಪನ್ನಗಳ ಮಾರಾಟಕ್ಕಿರುವ ಮಾರುಕಟ್ಟೆಯನ್ನಾಗಿಯೂ ಕಚ್ಚಾವಸ್ತುಗಳನ್ನು ಸಂಗ್ರಹಿಸಲಿರುವ ಕೇಂದ್ರವಾಗಿಯೂ ಬದಲಾಯಿಸುತ್ತಿದ್ದಾರೆಂದು ಬೊಟ್ಟು ಮಾಡಿ ತೋರಿಸಿದರು.
- ದಾದಾಬಾಯಿ ನವರೋಜಿಯವರು ಭಾರತವು ಎದುರಿಸುತ್ತಿರುವ ಆರ್ಥಿಕ ಪತನದ ಕುರಿತು ಅಧ್ಯಯನ ನಡೆಸಿದರು.

- ಭಾರತದಿಂದ ಬ್ರಿಟನಿಗಿರುವ ಸಂಪತ್ತಿನ ಸೋರಿಕೆಯು ಭಾರತದಲ್ಲಿ ಹಸಿವಿನಿಂದ ಮರಣಹೊಂದಲು ಕಾರಣವೇಬುದನ್ನು ಅವರು ತಮ್ಮ *Poverty and UnBritish Rule in India* ಎಂಬ ಪುಸ್ತಕದಲ್ಲಿ ವಿವರಿಸಿದ್ದಾರೆ. ಇದನ್ನು ಸೋರಿಕೆಯ ಸಿದ್ಧಾಂತ ಎನ್ನುತ್ತಾರೆ.
- ಆರ್ಥಿಕ ಸೋರಿಕೆಯ ವಿವಿಧ ಮೂಲಗಳನ್ನು ಅವರು ವಿಶದೀಕರಿಸಿದರು.
- ನವರೋಜಿಯವರೊಂದಿಗೆ ರಮೇಶ್ ಚಂದ್ರದತ್, ಗೋಪಾಲಕೃಷ್ಣ ಗೋಖಲೆ ಎಂಬವರೂ ಈ ವಿಷಯದಲ್ಲಿ ಪ್ರಧಾನ ಪಾತ್ರ ವಹಿಸಿದರು.

## ಸ್ವದೇಶಿ ಆಂದೋಲನ

ಆರ್ಥಿಕ ಸೋರಿಕೆಯನ್ನು ತಡೆದು ಭಾರತದ ಆರ್ಥಿಕ ವ್ಯವಸ್ಥೆಯನ್ನು ಬಲಗೊಳಿಸಲು ಹಾಗೂ ಬಡತನವನ್ನು ಹೋಗಲಾಡಿಸುವುದಕ್ಕಾಗಿ ಭಾರತೀಯ ಉತ್ಪನ್ನಗಳನ್ನು ಉಪಯೋಗಿಸುವಂತೆಯೂ ಬ್ರಿಟಿಷ್ ಉತ್ಪನ್ನಗಳನ್ನು ಬಹಿಷ್ಕರಿಸುವಂತೆಯೂ ರಾಷ್ಟ್ರೀಯ ನೇತಾರರು ಆಹ್ವಾನವನ್ನಿತ್ತರು. 1905ರಲ್ಲಿ ಬಂಗಾಳ ವಿಭಜನೆಗೆದುರಾಗಿ ನಡೆದ ಸ್ವದೇಶೀ ಹೋರಾಟ ಅಥವಾ ಸ್ವದೇಶೀ ಆಂದೋಲನವು ಇದರ ಪ್ರತಿಫಲವಾಗಿತ್ತು. ಸ್ವದೇಶೀ ಆಂದೋಲನದ ಪ್ರಧಾನ ವಿಶೇಷತೆಗಳಾವುವು?

ಎಂಬ ಪ್ರಶ್ನೆಯನ್ನು ಕೇಳುತ್ತಾ ಪಾಠಭಾಗವನ್ನು ಆರಂಭಿಸಬಹುದು. ಅನಂತರ ವಿವಿಧ ಗುಂಪುಗಳಾಗಿ ವಿಂಗಡಿಸಿ ಪಾಠಭಾಗವನ್ನು ವಿಶ್ಲೇಷಿಸಿ ಸ್ವದೇಶೀ ಹೋರಾಟದ ವಿಶೇಷತೆಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸುತ್ತಾರೆ. ಟಿಪ್ಪಣಿಯಲ್ಲಿ ಕೆಳಗೆ ಕೊಟ್ಟಿರುವವುಗಳಿಗೆ ಒತ್ತನ್ನು ನೀಡಬೇಕು.

- ಸ್ವದೇಶೀ ಆಂದೋಲನವು ಬಂಗಾಳ ವಿಭಜನೆಗೆದುರಾಗಿ ಆರಂಭಿಸಿದುದಾಗಿದೆ.
- ವಿದೇಶೀ ವಸ್ತುಗಳ ಬಹಿಷ್ಕಾರ, ಅವುಗಳನ್ನು ಸಂಗ್ರಹಿಸಿ ಬೆಂಕಿ ಹಚ್ಚುವುದು.
- ಸ್ವದೇಶೀ ಉದ್ದಿಮೆಗಳ ಆರಂಭ
- ಸ್ತ್ರೀಯರು, ಕಾರ್ಮಿಕರು, ವಿದ್ಯಾರ್ಥಿಗಳು ಮೊದಲಾದವರ ಪಾಲ್ಗೊಳ್ಳುವಿಕೆ.
- ಭಾರತದ ರಾಷ್ಟ್ರೀಯ ಹೋರಾಟವು ಬಲಗೊಂಡಿತು.
- ಬಾಲಗಂಗಾಧರ ತಿಲಕ್, ಲಾಲಾಲಜಪತ್ ರಾಯ್, ಬಿಪಿನ್ ಚಂದ್ರಪಾಲ್ ಎಂಬಿವರು ಸ್ವದೇಶೀ ಆಂದೋಲನವನ್ನು ಬಲಪಡಿಸಿದರು.

### ಬಾಲಗಂಗಾಧರ ತಿಲಕ್

ಬಂಗಾಳದಲ್ಲಿ ಆರಂಭವಾದ ಸ್ವದೇಶೀ ಆಂದೋಲನವನ್ನು ದೇಶದಾದ್ಯಂತ ವ್ಯಾಪಿಸುವಂತೆ ಮಾಡುವಲ್ಲಿ ಬಾಲಗಂಗಾಧರ ತಿಲಕರು ಪ್ರಧಾನ ಪಾತ್ರ ವಹಿಸಿದರು. ಬ್ರಿಟಿಷ್ ಆಡಳಿತದ ಅನ್ಯಾಯಗಳನ್ನು ಜನರಿಗೆ ಮನದಟ್ಟು ಮಾಡಲು ಹಾಗೂ ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವುದಕ್ಕಾಗಿ ತಿಲಕರು 'ಕೇಸರಿ', 'ಮರಾಠ' ಎಂಬೆರೆಡು ಪತ್ರಿಕೆಗಳನ್ನು ಆರಂಭಿಸಿದರು. ಬರಗಾಲ ಪೀಡಿತ ಪ್ರದೇಶದ ಕೃಷಿಕರಲ್ಲಿ ಸರಕಾರಕ್ಕೆ ಭೂತೆರಿಗೆಯನ್ನು ಪಾವತಿಸಬಾರದೆಂದು ಆಗ್ರಹಿಸಿ ತಿಲಕರು ತೆರಿಗೆ ನಿಷೇಧ ಹೋರಾಟವನ್ನೂ ಆರಂಭಿಸಿದ್ದರು. ವಾಲಂಟೈನ್ ಶಿರೋಲ್‌ನು ತಿಲಕರನ್ನು ಭಾರತದ ಅಸ್ವಸ್ಥತೆಯ ಪಿತ ಎಂಬ ವಿಶೇಷಣದಿಂದ ಕರೆದನು.

ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳಾಗಿ ವಿಂಗಡಿಸಿ ಬ್ರಿಟಿಷ್ ಆಡಳಿತದ ಆರ್ಥಿಕ ದುಷ್ಪರಿಣಾಮಗಳು ಎಂಬ ವಿಷಯದಲ್ಲಿ ವಿಚಾರಗೋಷ್ಠಿಯನ್ನು ನಡೆಸಬಹುದು.

## ಮೌಲ್ಯ ನಿರ್ಣಯ ಪ್ರಶ್ನೆಗಳು

- ಶಾಶ್ವತ ಭೂಕಂದಾಯ ವ್ಯವಸ್ಥೆಯ ಪ್ರಧಾನ ವಿಶೇಷತೆಗಳನ್ನು ವಿವರಿಸಿರಿ.
- ಬ್ರಿಟಿಷರ ತೆರಿಗೆ ಧೋರಣೆಗಳು ಭಾರತೀಯ ಕೃಷಿಕರು ಲೇವಾದೇವಿಗಾರರನ್ನು ಆಶ್ರಯಿಸಲು ಹೇಗೆ ದಾರಿಮಾಡಿಕೊಟ್ಟಿತು?
- ಕೃಷಿಯ ವಾಣಿಜ್ಯೀಕರಣವು ಎಂದರೇನು?
- ನೀಲ ದಂಗೆಯ ಹಿನ್ನೆಲೆಯನ್ನು ಸ್ಪಷ್ಟಪಡಿಸಿರಿ.
- ಮಾಪಿಳ್ಳೆ ದಂಗೆಯ ಕಾರಣಗಳನ್ನು ವಿಶದೀಕರಿಸಿರಿ.
- ಭಾರತದ ವಿವಿಧ ಬುಡಕಟ್ಟು ಜನಾಂಗದವರು ಬ್ರಿಟಿಷರಿಗೆದುರಾಗಿ ನಡೆಸಿದ ದಂಗೆಗಳಲ್ಲಿ ಯಾವ ಯಾವ ಸಾಮಾನ್ಯ ಕಾರಣಗಳು ಕಂಡುಬರುತ್ತವೆ ?
- ಕುರುಚಿಯರ ದಂಗೆಗೆ ಸಂಬಂಧಿಸಿ ಟಿಪ್ಪಣಿಯೊಂದನ್ನು ತಯಾರಿಸಿರಿ.
- ಆಧುನಿಕ ಕೈಗಾರಿಕೆಗಳಲ್ಲಿ ದುಡಿಯುವ ಭಾರತೀಯ ಕಾರ್ಮಿಕರ ಸ್ಥಿತಿಯು ಶೋಚನೀಯವಾಗಲು ಕಾರಣವೇನು?
- 1857ರ ಪ್ರಥಮ ಸ್ವಾತಂತ್ರ್ಯ ಹೋರಾಟಕ್ಕಿರುವ ವಿವಿಧ ಕಾರಣಗಳನ್ನು ವಿಶದೀಕರಿಸಿರಿ.
- ದಾದಾಬಾಯಿ ನವರೋಜಿಯವರ ಸೋರಿಕೆಯ ಸಿದ್ಧಾಂತವು ಭಾರತದಲ್ಲಿ ಬ್ರಿಟಿಷ್ ವಿರೋಧಿ ಮನೋಭಾವವನ್ನು ಬಲಗೊಳಿಸಲು ಹೇಗೆ ಕಾರಣವಾಯಿತು?
- ಸ್ವದೇಶಿ ಚಳುವಳಿಯ ವಿಶೇಷತೆಗಳನ್ನು ವಿವರಿಸಿರಿ.

## ಆಕರ ಗ್ರಂಥ


*Modern India - Bipan Chandra*

*India's Struggle for Independence - Bipan Chandra*

*Social Background of Indian Nationalism - A. R. Desai*

*India Today - R. P. Dutt*

*Kerala History - A. Sreedhara Menon*

## ಅಧ್ಯಾಪಕರಿಂದ ಮೌಲ್ಯನಿರ್ಣಯ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸ ಬೇಕಾದುದು |
|---|---|---|---|
| 1. ಬ್ರಿಟಿಷರ ತೆರಿಗೆ ಧೋರಣೆಗಳು ಭಾರತೀಯ ಕೃಷಿಕರನ್ನು ಹೇಗೆ ಬಡವರನ್ನಾಗಿಸಿತು ಎಂಬುದನ್ನು ತಿಳಿದರೆಂಬುದು ಖಾತರಿಯಾಯಿತು. | ☐ | ☐ | ☐ |
| 2. ಬ್ರಿಟಿಷರ ಧೋರಣೆಗಳು ಕೃಷಿಯ ವಾಣಿಜ್ಯೀಕರಣಕ್ಕೆ ಹೇಗೆ ದಾರಿಮಾಡಿಕೊಟ್ಟಿತೆಂಬುದನ್ನು ತಿಳಿಸಿದರು. | ☐ | ☐ | ☐ |
| 3. ಬ್ರಿಟಿಷರ ಧೋರಣೆಗಳು ಕೃಷಿಕರನ್ನು ಮತ್ತು ಬುಡಕಟ್ಟು ಜನಾಂಗದವರನ್ನು ದಂಗೆಗೆ ಪ್ರೇರೇಪಿಸಿತೆಂಬುದು ಕಲಿಕಾರ್ಥಿಗೆ ಮನದಟ್ಟಾಯಿತೆಂಬುದು ಖಾತರಿಯಾಯಿತು. | ☐ | ☐ | ☐ |
| 4. ಭಾರತದ ಪರಂಪರಾಗತ ಕೈಗಾರಿಕೆಗಳ ಪತನಕ್ಕಿರುವ ಕಾರಣಗಳನ್ನು ಕಲಿಕಾರ್ಥಿಗಳು ತಿಳಿದುಕೊಂಡರು. | ☐ | ☐ | ☐ |
| 5. 1857ರ ದಂಗೆಯ ವಿವಿಧ ಕಾರಣಗಳನ್ನು ಕಲಿಕಾರ್ಥಿಯು ತಿಳಿದುಕೊಂಡರೆಂಬುದು ಖಾತರಿಯಾಯಿತು. | ☐ | ☐ | ☐ |
| 6. ಸೋರಿಕೆಯ ಸಿದ್ಧಾಂತದ ಪ್ರಾಧಾನ್ಯಕ್ಕೆ ಸಂಬಂಧಿಸಿದ ತಿಳುವಳಿಕೆಯನ್ನು ಕಲಿಕಾರ್ಥಿಯು ಗಳಿಸಿದರೆಂಬುದು ಖಾತರಿಯಾಯಿತು. | ☐ | ☐ | ☐ |
| 7. ಸ್ವದೇಶೀ ಆಂದೋಲನದ ವಿಶೇಷತೆಗಳಿಗೆ ಸಂಬಂಧಿಸಿದ ತಿಳುವಳಿಕೆಯನ್ನು ಕಲಿಕಾರ್ಥಿಯು ಗಳಿಸಿದರೆಂಬುದು ಖಾತರಿಯಾಯಿತು. | ☐ | ☐ | ☐ |



# 4

# ಸಂಸ್ಕೃತಿ ಹಾಗೂ ರಾಷ್ಟ್ರೀಯತೆ

ಬ್ರಿಟಿಷ್ ಆಡಳಿತದ ಆರ್ಥಿಕ ಶೋಷಣೆಯು ಪ್ರಾದೇಶಿಕವಾದ ಹೋರಾಟ, ರಾಷ್ಟ್ರೀಯ ಚಳುವಳಿಯ ಉದಯ ಹಾಗೂ ಬೆಳವಣಿಗೆಗೆ ಹೇಗೆ ಕಾರಣವಾಯಿತೆಂಬುದನ್ನು ಹಿಂದಿನ ಅಧ್ಯಾಯದಲ್ಲಿ ತಿಳಿದುಕೊಂಡೆವಲ್ಲವೆ? ಸಾಂಸ್ಕೃತಿಕ ವಲಯದ ಬದಲಾವಣೆಗಳು ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆಗೆ ಹೇಗೆ ಕಾರಣವಾಯಿತೆಂಬುದನ್ನು ಈ ಪಾಠಭಾಗವು ವಿಶ್ಲೇಷಣೆ ಮಾಡುತ್ತದೆ.

ಈ ಪಾಠಭಾಗವನ್ನು ವಿನಿಮಯ ಮಾಡುವ ಮೂಲಕ ಭಾರತದ ಸಾಂಸ್ಕೃತಿಕ ವಲಯದಲ್ಲುಂಟಾದ ವಿವಿಧ ಬದಲಾವಣೆಗಳನ್ನು ಗುರುತಿಸಲು, ವಸಾಹತೀಕರಣವನ್ನು ವಿರೋಧಿಸಲು ವಿವಿಧ ಸಾಂಸ್ಕೃತಿಕ ರಂಗಗಳಲ್ಲಿ ನಡೆದ ನವೀಕರಣ ಚಟುವಟಿಕೆಗಳನ್ನು ವಿಶ್ಲೇಷಿಸಲು ಕಲಿಕಾರ್ಥಿಗೆ ಸಾಧ್ಯವಾಗಬೇಕು. ರಾಷ್ಟ್ರೀಯ ಚಳುವಳಿಯ ಅಂಗವಾಗಿ ರೂಪುಗೊಂಡ ಸಾಂಸ್ಕೃತಿಕ ಚಟುವಟಿಕೆಗಳು, ಚಳುವಳಿಗಳು, ಅವುಗಳಿಗೆ ನೇತೃತ್ವ ನೀಡಿದ ವ್ಯಕ್ತಿಗಳು ಇತ್ಯಾದಿಗಳನ್ನು ಸ್ಮರಿಸಲು ಹಾಗೂ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಬೇಕಾದುದು ಪ್ರತಿಯೊಬ್ಬರ ಕರ್ತವ್ಯವಾಗಬೇಕೆಂಬ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ರೂಪಿಸಲು ಈ ಪಾಠಭಾಗವು ಸಹಾಯಕವಾಗಬಹುದು.

ಯೂನಿಟ್ ಫ್ರೇಂ

# 4. ಸಂಸ್ಕೃತಿ ಹಾಗೂ ರಾಷ್ಟ್ರೀಯತೆ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಸಮಾಜ ಸುಧಾರಣಾ ಚಳುವಳಿಗಳು<br>- ಸುಧಾರಕರು<br>– ಅವರು ಮುಂದಿಟ್ಟ ಆಶಯಗಳು<br>– ಅವುಗಳ ಪ್ರಭಾವ<br>• ಪತ್ರಿಕೆಗಳು<br>- ರಾಷ್ಟ್ರೀಯತೆಯ ಬೆಳವಣಿಗೆಗೆ ಸಹಾಯ ಮಾಡಿದ ವಿವಿಧ ಪತ್ರಿಕೆಗಳು<br>– ರಾಷ್ಟ್ರೀಯತೆಗೆ ಅವುಗಳು ನೀಡಿದ ಕೊಡುಗೆ<br>• ಶಿಕ್ಷಣ<br>- ವಿವಿಧ ಶಿಕ್ಷಣ ಸಂಸ್ಥೆಗಳು<br>–ರಾಷ್ಟ್ರೀಯತೆಯ ರೂಪೀಕರಣ ಮತ್ತು ಬೆಳವಣಿಗೆಯಲ್ಲಿ ಅವುಗಳು ವಹಿಸಿದ ಪಾತ್ರ.<br>• ಸಾಹಿತ್ಯ, ಕಲೆ<br>- ವಿವಿಧ ಸಾಹಿತ್ಯ ಕೃತಿಗಳು, ಸಾಹಿತಿಗಳು<br>– ಚಿತ್ರಗಳು, ಚಿತ್ರಕಾರರು<br>– ರಾಷ್ಟ್ರೀಯತೆಯ ಬೆಳವಣಿಗೆಯಲ್ಲಿ ಕಲೆ ಹಾಗೂ ಸಾಹಿತ್ಯದ ಪ್ರಭಾವ | • ಸಮಾಜ ಸುಧಾರಕರು, ಚಳುವಳಿಗಳು ಎಂಬಿವುಗಳನ್ನು ಒಳಪಡಿಸಿ ಪಟ್ಟಿ ತಯಾರಿಸುವುದು.<br>• ಸುಧಾರಣ ಚಳುವಳಿಗಳು ಮುಂದಿಟ್ಟ ಆಶಯಗಳು ಹಾಗೂ ಅವುಗಳ ಪ್ರಭಾವವನ್ನು ಸೂಚಕಗಳ ಆಧಾರದಲ್ಲಿ ಚರ್ಚಿಸಿ ವಿಶ್ಲೇಷಣಾ ಟಿಪ್ಪಣಿ ತಯಾರಿಸುವುದು.<br>• ರಾಷ್ಟ್ರೀಯ ಚಳುವಳಿಯ ಕಾಲದಲ್ಲಿ ಪತ್ರಿಕೆಗಳು ಮಾಡಿದ ಸೇವೆಗಳನ್ನು ಪಠ್ಯಪುಸ್ತಕದಲ್ಲಿ ನೀಡಿರುವುದು ಹಾಗೂ ಇಂದಿನ ಪತ್ರಿಕೆಗಳು ನೀಡುವ ಸೇವೆಗಳನ್ನು ಕಂಡುಹಿಡಿದು, ಪರಸ್ಪರ ಹೋಲಿಸಿ ಭಾರತದ ರಾಷ್ಟ್ರೀಯತೆಯ ಆವಿರ್ಭಾವದಲ್ಲಿ ಪತ್ರಿಕೆಗಳ ಪಾತ್ರವನ್ನು ಸ್ಪಷ್ಟಪಡಿಸುವುದು.<br>• ಭಾರತದ ರಾಷ್ಟ್ರೀಯತೆಯ ಬೆಳವಣಿಗೆಯಲ್ಲಿ ಶಿಕ್ಷಣದ ಪಾತ್ರ ಎಂಬ ವಿಷಯದಲ್ಲಿ ಪ್ರಬಂಧವೊಂದನ್ನು ತಯಾರಿಸುವುದು.<br>• ರಾಷ್ಟ್ರೀಯ ಶಿಕ್ಷಣವು ಮುಂದಿರಿಸಿದ ಆಶಯಗಳನ್ನು ಕಾರ್ಯಗತಗೊಳಿಸಲು ಶ್ರಮಿಸಿದ ಸಂಸ್ಥೆಗಳನ್ನು ಪಾಠಭಾಗವನ್ನು ಕಂಡುಹಿಡಿಯುವುದು.<br>• ಭಾರತದ ರಾಷ್ಟ್ರೀಯತೆಯ ಬೆಳವಣಿಗೆಯಲ್ಲಿ ಚಿತ್ರಕಾರರು ನಿರ್ಣಾಯಕ ಪಾತ್ರ ವಹಿಸಿದರು–ಚರ್ಚೆ<br>• ಭಾರತದ ರಾಷ್ಟ್ರೀಯತೆಯ ಬೆಳವಣಿಗೆಯಲ್ಲಿ ಪ್ರಭಾವ ಬೀರಿದ ಘಟಕಗಳು–ಪ್ರೋಜೆಕ್ಟ್ ತಯಾರಿ. | • ಭಾರತದ ರಾಷ್ಟ್ರೀಯತೆಯ ಆವಿರ್ಭಾವಕ್ಕೆ ದಾರಿಮಾಡಿಕೊಟ್ಟ ವಿವಿಧ ಸಂಘಟನೆಗಳನ್ನು ತಿಳಿಯುತ್ತಾರೆ.<br>• ಬ್ರಿಟಿಷರ ವಸಾಹತುಶಾಹಿ ಆಡಳಿತವು ಭಾರತದ ರಾಷ್ಟ್ರೀಯತೆಗೆ ಹೇಗೆ ಕಾರಣವಾಯಿತೆಂಬುದನ್ನು ಅವಲೋಕಿಸುತ್ತಾರೆ.<br>• ಭಾರತದ ಸಮಾಜ ಸುಧಾರಣ ಚಳುವಳಿಗಳು ಭಾರತದ ರಾಷ್ಟ್ರೀಯತೆಗೆ ಹೇಗೆ ಕಾರಣವಾಯಿತೆಂಬುದನ್ನು ವಿಶ್ಲೇಷಿಸುತ್ತಾರೆ.<br>• ಭಾರತದ ರಾಷ್ಟ್ರೀಯತೆಯ ಆವಿರ್ಭಾವದಲ್ಲಿ ಪತ್ರಿಕೆಗಳ ಪ್ರಭಾವವನ್ನು ಸ್ಪಷ್ಟಪಡಿಸುತ್ತಾರೆ.<br>• ಭಾರತೀಯ ರಾಷ್ಟ್ರೀಯತೆಯನ್ನು ರೂಪಿಸುವಲ್ಲಿ ಶಿಕ್ಷಣ, ಸಾಹಿತ್ಯ, ಕಲೆ ಎಂಬಿವುಗಳಿಗಿರುವ ಪಾತ್ರವನ್ನು ವಿಶ್ಲೇಷಿಸುತ್ತಾರೆ. |

## ಅಧ್ಯಾಯದೆಡೆಗೆ.....

ಭಾರತೀಯ ರಾಷ್ಟ್ರೀಯತೆಯನ್ನು ರೂಪಿಸುವಲ್ಲಿ ಸಹಾಯ ಮಾಡಿದ ವಿವಿಧ ಸಮಾಜ ಸುಧಾರಣ ಚಳುವಳಿಗಳು, ಸುಧಾರಕರು, ಪತ್ರಿಕೆಗಳು, ಶಿಕ್ಷಣ, ಕಲೆ, ಸಾಹಿತ್ಯ ಮೊದಲಾದವುಗಳ ಬಗ್ಗೆ ಸಂಸ್ಕೃತಿ ಹಾಗೂ ರಾಷ್ಟ್ರೀಯತೆ ಎಂಬ ಪಾಠವು ಚರ್ಚಿಸುತ್ತದೆ. ರಾಷ್ಟ್ರೀಯತೆಯು ಭಾರತದ ಸಾಂಸ್ಕೃತಿಕ ವಲಯದಲ್ಲಿ ಯಾವೆಲ್ಲ ಪ್ರತಿಧ್ವನಿಯನ್ನುಂಟುಮಾಡಿತು ಎಂಬುದನ್ನು ಇದರ ಮೂಲಕ ಸ್ಪಷ್ಟಪಡಿಸಲಾಗುತ್ತದೆ.

ಪೀಠಿಕೆಯಾಗಿ ನೀಡಿರುವ ಜವಹರಲಾಲ್ ನೆಹರೂರವರ ಉದ್ಧರಣೆಯ್ನು ಓದಲು ಹೇಳುತ್ತಾ ಪಾಠವನ್ನು ಆರಂಭಿಸಬಹುದು. ಅದರಿಂದ ಭಾರತೀಯ ಸಂಸ್ಕೃತಿಯ ವಿಶೇಷತೆಗಳು ಯಾವುವು ಎಂಬುದನ್ನು ಕಂಡುಹಿಡಿದು, ದಾಖಲಿಸಿ ಮಂಡಿಸುತ್ತಾರೆ. ಅನಂತರ ಕೆಳಗೆ ನೀಡಿರುವ ಆಶಯಗಳನ್ನು ಒಳಪಡಿಸಿ ಕ್ರೋಡೀಕರಿಸಬಹುದು.

- ಭಾರತವು ಅನೇಕ ವೈವಿಧ್ಯಗಳನ್ನೊಳಗೊಂಡಿರುವ ದೇಶವಾಗಿದೆ.
- ಜಾತಿ, ಮತ, ವರ್ಗ, ಭಾಷೆ, ಆಹಾರ ಶೈಲಿ, ವಸ್ತ್ರಧಾರಣೆ ವಿಧಾನ ಎಂಬಿವುಗಳಲ್ಲಿ ವೈವಿಧ್ಯವಿದೆ.
- ಈ ವೈವಿಧ್ಯಗಳನ್ನು ಪರಸ್ಪರ ಪೋಣಿಸುವ ಸಾಂಸ್ಕೃತಿಕವಾದ ಒಂದು ಏಕತೆಯು ಅಸ್ತಿತ್ವದಲ್ಲಿದೆ.
- ಭಾರತಕ್ಕೆ ಸಾಮಾನ್ಯವಾದೊಂದು ಪರಂಪರೆಯಿದೆ.
- 'ವಿವಿಧತೆಯಲ್ಲಿ ಏಕತೆ'ಯು ಭಾರತೀಯ ಸಂಸ್ಕೃತಿಯ ವಿಶೇಷತೆಯಾಗಿದೆ.
- ಭಾರತದ ರಾಷ್ಟ್ರೀಯತೆಯು ವಿವಿಧತೆಯಲ್ಲಿ ಏಕತೆ ಎಂಬ ಆಶಯದಲ್ಲಿ ಹುದುಗಿಕೊಂಡಿದೆ.

ಭಾರತೀಯರ ಈ ಮಾನಸಿಕ ಐಕ್ಯ ಹಾಗೂ ಏಕತೆಯೇ ಭಾರತದ ರಾಷ್ಟ್ರೀಯತೆಯ ಅಡಿಪಾಯವಾಗಿದೆ.

ಇವುಗಳಿಗೆ ಹೊರತಾಗಿ ಭಾರತೀಯ ರಾಷ್ಟ್ರೀಯತೆಯ ಜಾಗೃತಿಗೆ ಮತ್ತು ರೂಪುಗೊಳ್ಳುವಿಕೆಗೆ ವಿವಿಧ ಘಟಕಗಳು ಪ್ರೇರಣೆಯನ್ನಿತ್ತಿವೆ. ಅವುಗಳ ಕುರಿತು ಈ ಅಧ್ಯಾಯವು ಚರ್ಚಿಸುತ್ತದೆ.

ಇಂಗ್ಲಿಷ್ ಶಿಕ್ಷಣವು ಭಾರತದಲ್ಲಿ ಜಾರಿಗೊಳಿಸುವಂತೆ ಬ್ರಿಟಿಷರನ್ನು ಪ್ರೇರೇಪಿಸಿದ ಘಟಕಗಳು ಹಾಗೂ ಅದರ ಉದ್ದೇಶಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸಬೇಕು.

ಪಠ್ಯಪುಸ್ತಕದ 88, 89ನೇ ಪುಟಗಳನ್ನು ಗುಂಪಿನಲ್ಲಿ ಓದಿ, ಚರ್ಚಿಸಿ ಟಿಪ್ಪಣಿ ತಯಾರಿಸಲು ಹೇಳಬೇಕು. ಗುಂಪುಗಳು ತಯಾರಿಸಿದ ಟಿಪ್ಪಣಿಗಳನ್ನು ಮಂಡಿಸಿದ ನಂತರ ಅಗತ್ಯವಿರುವ ಸೇರಿಸುವಿಕೆಗಳ ಮೂಲಕ ವಸಾಹತುಶಾಹಿ ಆಡಳಿತವು ಜಾರಿಗೊಳಿಸಿದ ಶಿಕ್ಷಣವು ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾಯಿತೆಂಬ ತಿಳುವಳಿಕೆಯನ್ನು ಗಳಿಸಿದರೆಂದು ಖಾತರಿಪಡಿಸಿಕೊಂಡು ಕೆಳಗೆ ಕೊಟ್ಟಿರುವ ಸೂಚನೆಗಳ ಆಧಾರದಲ್ಲಿ ಕ್ರೋಡೀಕರಿಸಬಹುದು.

- ಭಾರತೀಯ ಸಂಸ್ಕೃತಿಯನ್ನು ಆಳದಲ್ಲಿ ತಿಳಿದುಕೊಳ್ಳುವುದು ಅತಿ ಅಗತ್ಯವೆಂಬುದನ್ನು ಬ್ರಿಟಿಷರು ತಿಳಿದುಕೊಂಡರು.
- ಭಾರತೀಯ ಸಂಸ್ಕೃತಿಯ ಕುರಿತಾದ ಅಧ್ಯಯನಗಳನ್ನು ಕೆಲವು ಸಂಸ್ಥೆಗಳು ಆರಂಭಿಸಿದವು.
- ಆಡಳಿತ ಸುಧಾರಣೆಗಳನ್ನು ಜಾರಿಗೊಳಿಸಲು ಹಾಗೂ ಆಡಳಿತವನ್ನು ಕಾಪಾಡಿಕೊಂಡು ಬರಲು ಜನ ಬೆಂಬಲವು ಅಗತ್ಯವೆಂಬುದನ್ನು ತಿಳಿದುಕೊಂಡರು.

- ನಮಗೆ ವಿಧೇಯವಾಗಿರುವ ಜನತೆಯನ್ನು ಸೃಷ್ಟಿಸುವುದು ಅನಿವಾರ್ಯವೆಂಬುದನ್ನು ತಿಳಿದುಕೊಂಡರು.
- ಇಂಗ್ಲಿಷ್ ಶಿಕ್ಷಣವನ್ನು ಜಾರಿಗೊಳಿಸುವ ಮೂಲಕ ಈ ಗುರಿಯನ್ನು ಸಾಧಿಸಬಹುದೆಂಬುದು ತಿಳಿದುಕೊಂಡರು.

## ಸಮಾಜ ಸುಧಾರಣಾ ಚಳುವಳಿಗಳು

ಭಾರತದ ರಾಷ್ಟ್ರೀಯತೆಯನ್ನು ಬೆಳೆಸುವಲ್ಲಿ ಸಮಾಜ ಸುಧಾರಣಾ ಚಳುವಳಿಗೆ ನಿರ್ಣಾಯಕವಾದ ಪ್ರಾಧಾನ್ಯವಿದೆ ಎಂಬ ತಿಳುವಳಿಕೆಯು ರೂಪುಗೊಳ್ಳುವಂತೆ ಈ ಪಾಠಭಾಗದ ವಿನಿಮಯವನ್ನು ಮಾಡಬೇಕು.

### ಚಟುವಟಿಕೆ

ಪಟ್ಟಿ ತಯಾರಿ.

ಪಠ್ಯಪುಸ್ತಕದ 90, 91ನೇ ಪುಟಗಳನ್ನು ಪರಿಶೀಲಿಸಿ ರಾಷ್ಟ್ರೀಯತೆಯ ಬೆಳವಣಿಗೆಗೆ ಸಹಾಯ ಮಾಡಿದ ಸಮಾಜ ಸುಧಾರಣ ಚಳುವಳಿಗಳು ಹಾಗೂ ಸುಧಾರಕರ ಪಟ್ಟಿಯನ್ನು ಗುಂಪಿನಲ್ಲಿ ತಯಾರಿಸಿ ತರಗತಿಯಲ್ಲಿ ಮಂಡಿಸಬೇಕು.

ಅಧ್ಯಾಪಕರು ಅಗತ್ಯವಾದ ಸೇರಿಸುವಿಕೆಗಳನ್ನು ಮಾಡಿ ಪಟ್ಟಿಯನ್ನು ಪೂರ್ತಿಗೊಳಿಸಿ ಕ್ರೋಡೀಕರಣ ನಡೆಸಬೇಕು. ಭಾರತದ ವಿವಿಧ ಭಾಗಗಳಲ್ಲಿ ಬೆಳೆದು ಬಂದ ಸಮಾಜ ಸುಧಾರಣ ಚಳುವಳಿಗಳು ಮುಂದಿಟ್ಟ ಆಶಯಗಳು ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಲು ಹೇಗೆ ಕಾರಣವಾಯಿತು? ಚರ್ಚೆ.

ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿದ ನಂತರ ಪಠ್ಯಪುಸ್ತಕದ 92ನೇ ಪುಟದಲ್ಲಿ ಕೊಟ್ಟಿರುವ ಚರ್ಚಾ ಸೂಚಕಗಳನ್ನು ಒಂದೊಂದರಂತೆ ಪ್ರತಿಯೊಂದು ಗುಂಪಿಗೂ ನೀಡಬೇಕು. ಅನಂತರ ಹೆಚ್ಚಿನ ಓದಿಗಾಗಿ

- ಆಧುನಿಕ ಇಂಡಿಯಾ–ಬಿಪನ್ ಚಂದ್ರ
- ಇಂಡಿಯನ್ ನವೋತ್ಥಾನಂ–ಡಾ. ಪಿ.ಎಫ್. ಗೋಪಕುಮಾರ್

ಮೊದಲಾದ ಪುಸ್ತಕಗಳನ್ನು ನೀಡಬೇಕು.

*www.india.video,org/kerala/toppersonalities*

ಪ್ರದರ್ಶಿಸಬಹುದು.

ಗುಂಪಿನಲ್ಲಿ ತಯಾರಿಸಿದ ಟಿಪ್ಪಣಿಗಳನ್ನು ತರಗತಿಯಲ್ಲಿ ಮಂಡಿಸಿ, ಕೆಳಗೆ ಕೊಟ್ಟಿರುವಂತೆ ಕ್ರೋಡೀಕರಿಸಬಹುದು.

- ಭಾರತೀಯ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಅನೇಕ ಅನಾಚಾರಗಳನ್ನು ಕೊನೆಗೊಳಿಸಲು ಸಮಾಜ ಸುಧಾರಣಾ ಚಳುವಳಿಗಳ ಚಟುವಟಿಕೆಗಳು ಪ್ರೇರಣೆಯಾದುವು.
- ಪಾಶ್ಚಾತ್ಯ ಸಂಸ್ಕೃತಿಯ ಆಗಮನವನ್ನು ತಡೆಯುವಲ್ಲಿ ಯಶಸ್ವಿಯಾಯಿತು.
- ಶೈಕ್ಷಣಿಕ ವಲಯದ ಚಟುವಟಿಕೆಯ ಮೂಲಕ ರೂಪಿಸಿದ ಜಾಗೃತಿಯು ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವುದಕ್ಕೆ ಸಹಾಯಕವಾಯಿತು.
- ಭಾರತದ ಜನತೆಯಲ್ಲಿ ಏಕತಾ ಪ್ರಜ್ಞೆಯನ್ನು ಬೆಳೆಸಲು ಹಾಗೂ ರಾಷ್ಟ್ರೀಯ ಚಳುವಳಿಯ ಮುಖ್ಯ ಧಾರೆಗೆ ತಲುಪಿಸಲು ಸಾಧ್ಯವಾಯಿತು.
- ರಾಷ್ಟ್ರೀಯ ಚಳುವಳಿಯನ್ನು ಬಲಗೊಳಿಸಲು ಸಹಾಯ ಮಾಡಿತು.

### ಬಯಲು ಪ್ರವಾಸ

ಸಮಾಜ ಸುಧಾರಣ ಚಳುವಳಿಗೆ ಸಂಬಂಧಿಸಿದ ಸ್ಥಳಗಳು, ಸ್ಮಾರಕಗಳು ಇತ್ಯಾದಿಗಳನ್ನು ಸಂದರ್ಶಿಸಲು ಅವಕಾಶವನ್ನೀಯಬಹುದು. ಸಂದರ್ಶನದ ನಂತರ ಸಂದರ್ಶನ ಡಯರಿಯನ್ನು ತಯಾರಿಸಬೇಕು.

- ಅರುವಿಪ್ಪುರಂ
- ವರ್ಕಲ
- ಶಿವಗಿರಿ
- ಚಾಲಿಯತ್ತೆರುವ್

- ವೈಕ್ಕಂ
- ಗುರುವಾಯೂರು
- ಪುಲ್ಲಾಡ್
- ಇರವಿಪೇರೂರ್
- 
- 
- 

## ಪತ್ರಿಕೆಗಳು ರಾಷ್ಟ್ರವನ್ನು ಏಕೀಕರಿಸುತ್ತವೆ

ಪಠ್ಯ ಪುಸ್ತಕದ 92ನೇ ಪುಟದಲ್ಲಿ ನೀಡಿರುವ 'ಸುಲಭ್ ಸಮಾಚಾರ್' ಎಂಬ ಪತ್ರಿಕೆಯ ವಾರ್ತೆಯ ಕುರಿತು ಚರ್ಚಿಸಲು ಹೇಳಬಹುದು.

ಇದು ರಾಷ್ಟ್ರೀಯ ಭಾವನೆಯನ್ನು ಬೆಳೆಸುವುದರಲ್ಲಿ ವರ್ತಮಾನ ಪತ್ರಿಕೆಗಳ ಪಾತ್ರವನ್ನು ಸ್ಪಷ್ಟಪಡಿಸುವುದಕ್ಕಿರುವ ಅತ್ಯುತ್ತಮ ಉದಾಹರಣೆಯಾಗಿದೆ. ಆ ಕಾಲದ ಎಲ್ಲ ಪತ್ರಿಕೆಗಳೂ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿವೆ. ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವುದು, ತರಬೇತುಗೊಳಿಸುವುದು, ಏಕೀಕರಿಸುವುದು ಎಂಬೀ ಜವಾಬ್ದಾರಿಗಳನ್ನು ಪತ್ರಿಕೆಗಳು ಕೈಗೆತ್ತಿಕೊಂಡವು. ಈ ಕಾಲದಲ್ಲಿ ಆದರಣೀಯರೂ ಧೀರರೂ ಆದ ಪತ್ರಕರ್ತರ ನೇತೃತ್ವದಲ್ಲಿ ಪ್ರಭಾವಶಾಲಿಯಾದ ಪತ್ರಿಕೆಗಳು ಆರಂಭಗೊಂಡವು.

'ವಿರೋಧಿಸುವುದು, ಪುನಃ ವಿರೋಧಿಸುವುದು' ಎಂಬುದು ಭಾರತೀಯ ಪತ್ರಿಕೆಗಳ ಘೋಷಣೆಯಾಗಿತ್ತು. ಬ್ರಿಟಿಷ್ ವಿರೋಧಿ ಮನೋಭಾವವನ್ನು ಜನರಲ್ಲಿ ರೂಪಿಸಲು ಹಾಗೂ ರಾಷ್ಟ್ರೀಯ ಚಳುವಳಿಯನ್ನು ವ್ಯಾಪಿಸುವುದಕ್ಕೂ ಅಂದಿನ ಪತ್ರಿಕೆಗಳಿಗೆ ಸಾಧ್ಯವಾಯಿತು. ಪಾಠಭಾಗದಲ್ಲಿ ಕೊಟ್ಟಿರುವ ರಾಷ್ಟ್ರೀಯ ಹೋರಾಟ ಕಾಲದ ಪ್ರಧಾನ ಪತ್ರಿಕೆಗಳ ಪಟ್ಟಿಯನ್ನು ಪರಿಚಯಿಸಬಹುದು. ಇಂದಿನ ವಾರ್ತಾ ಪತ್ರಿಕೆಗಳು ಯಾವೆಲ್ಲ ಕಾರ್ಯಗಳನ್ನು ಮಾಡುತ್ತಿವೆ?

- ಜಗತ್ತಿನ ವಿವಿಧ ಭಾಗಗಳ ವಾರ್ತೆಗಳನ್ನು ಜನರಿಗೆ ತಲುಪಿಸುತ್ತವೆ.
- ಪ್ರಜಾಪ್ರಭುತ್ವವನ್ನು ಬಲಪಡಿಸುವುದಕ್ಕಿರುವ ಅಭಿಪ್ರಾಯ ರೂಪೀಕರಣವನ್ನು ನಡೆಸುತ್ತವೆ.
- ಸರಕಾರದ ಎಲ್ಲ ಕಾರ್ಯಚಟುವಟಿಕೆಗಳು ಮತ್ತು ಧೋರಣೆಗಳನ್ನು ಬಲವಾಗಿ ವಿಮರ್ಶಿಸುವುದು.
- ಸರಕಾರದ ವಿರೋಧಪಕ್ಷವೆಂಬ ದೃಷ್ಟಿಯಲ್ಲಿ ಕ್ರಿಯಾತ್ಮಕವಾದ ಪಾತ್ರ ವಹಿಸುತ್ತವೆ.
- ವೈಜ್ಞಾನಿಕ ವಲಯದ ನೂತನ ತಿಳುವಳಿಕೆಗಳನ್ನು ಜನರಿಗೆ ತಲುಪಿಸುತ್ತವೆ.
- ಸಾಮಾಜಿಕ ಸಮಸ್ಯೆಗಳ ಕುರಿತು ಜನರನ್ನು ಪ್ರಜ್ಞಾವಂತರನ್ನಾಗಿಸುತ್ತದೆ.

### ಬಂಗಾಳ

ಮೂವತ್ತೆರಡು ರೂಪಾಯಿಗೆ ಕೊಂಡುಕೊಂಡ ಮುದ್ರಣ ಯಂತ್ರದೊಂದಿಗೆ 1868ರಲ್ಲಿ 'ಅಮೃತ ಬಜಾರ್' ಪತ್ರಿಕೆಯನ್ನು ಆರಂಭಿಸಿದರು. 1879ರಲ್ಲಿ ವ್ಯಾಪಾರದ ಮೌಲ್ಯವಾಗಿ (ಗುಡ್‌ವಿಲ್) ಹತ್ತು ರೂಪಾಯಿ ಮತ್ತು ಮುದ್ರಣ ಯಂತ್ರ ಹಾಗೂ ಸಾಮಗ್ರಿಗಳಿಗಾಗಿ 1600 ರೂಪಾಯಿಯನ್ನು ನೀಡಿ ಸುರೇಂದ್ರನಾಥ ಬ್ಯಾನರ್ಜಿಯವರು 'ಬಂಗಾಳಿ'ಯನ್ನು ಆರಂಭಿಸಿದರು.

### ಪತ್ರಿಕೆಗಳ ಪ್ರಭಾವ

ರಾಷ್ಟ್ರೀಯ ಪತ್ರಿಕೆಗಳ ಪಾತ್ರದ ಕುರಿತು ವೈಸರಾಯಿಯಾಗಿದ್ದ ಡಫರಿನ್ ಪ್ರಭು 1886ರ ಮಾರ್ಚಿನಲ್ಲಿ ಹೀಗೆ ಬರೆದನು. ''ನಿತ್ಯವೂ ವಾಕ್ಚಾತುರ್ಯವಿರುವ ನೂರಾರು ಬಾಬುಗಳು ಇವರನ್ನು ದಮನಿಸುತ್ತಿದ್ದಾರೆ. ಇಂಗ್ಲಿಷರಿಗೆದುರಾಗಿರುವ ವಿರೋಧವು ತೀವ್ರವಾಗಿ, ಪರಿಣಾಮಕಾರಿಯಾಗಿ ಪ್ರತಿಫಲಿತವಾಗುತ್ತಿದೆ. ಈ ರೀತಿಯಲ್ಲಿ ಈ ಪತ್ರಗಳನ್ನು ಓದುವವರ ಮನಸ್ಸಿನಲ್ಲಿ ನಾವೆಲ್ಲರೂ ಸಾಮಾನ್ಯವಾಗಿ ಮಾನವ ರಾಶಿಯ ವಿಶೇಷವಾಗಿ ಭಾರತೀಯರ ಶತ್ರುಗಳೆಂಬ ಆತ್ಮಾರ್ಥತೆಯ ವಿಶ್ವಾಸವು ರೂಪುಗೊಳ್ಳುವುದು."

ಎಂಬೀ ಆಶಯ ಸ್ಪಷ್ಟತೆಯು ವಿದ್ಯಾರ್ಥಿಗಳಿಗೆ ಲಭಿಸುವಂತೆ ಪಾಠಭಾಗವನ್ನು ವಿನಿಮಯ ಮಾಡಬೇಕು. ರಾಷ್ಟ್ರೀಯ ಚಳುವಳಿಯ ಸಮಯದಲ್ಲಿ ಮಲಯಾಳದಲ್ಲಿ ಪ್ರಕಟಗೊಂಡ ಪತ್ರಿಕೆಗಳ ಪಟ್ಟಿಯನ್ನು ತಯಾರಿಸಬೇಕು. ರಾಷ್ಟ್ರೀಯ ಹೋರಾಟ ಕಾಲದಲ್ಲಿ ಮಲಯಾಳದಲ್ಲಿ ಪ್ರಕಟವಾದ ಪತ್ರಿಕೆಗಳ ಹೆಸರನ್ನು ವಿದ್ಯಾರ್ಥಿಗಳು ವೈಯಕ್ತಿಕವಾಗಿ ಕಂಡುಹಿಡಿದು ಕೊಂಡು ಬರಲು ಹೇಳಬೇಕು. ಕಂಡುಹಿಡಿದ ಹೆಸರುಗಳನ್ನು ತರಗತಿಯಲ್ಲಿ ಮಂಡಿಸಿ, ಅಧ್ಯಾಪಕರು ಕರಿಹಲಗೆಯಲ್ಲಿ ಪಟ್ಟಿ ಮಾಡಬೇಕು. ಅನಂತರ ಕೆಳಗೆ ಕೊಟ್ಟಿರುವಂತೆ ಇನ್ನೂ ಹೆಚ್ಚು ಪತ್ರಿಕೆಗಳ ಹೆಸರನ್ನು ಒಳಪಡಿಸಿಕೊಂಡು ಪಟ್ಟಿಯನ್ನು ಪೂರ್ತಿಗೊಳಿಸ ಬಹುದು..

- ನಸ್ರಾಣಿ ದೀಪಿಕ
- ಕೇರಳೋದಯಂ
- ಕೇರಳ ಭೂಷಣಂ
- ಸ್ವದೇಶಾಭಿಮಾನಿ
- ಅಲ್ ಅಮೀನ್
- ಮಲಯಾಳ ಮನೋರಮ
- ಮಾತೃಭೂಮಿ
- ಕೇರಳ ಕೌಮುದಿ
- ಕೇಸರಿ
- ಮಲಯಾಳ ರಾಜ್ಯಂ
- 
- 
- 
- 

ಭಾರತದ ಸಮಾಜ ಸುಧಾರಣೆಯನ್ನು ಜಾರಿಗೊಳಿಸುವುದರಲ್ಲಿ ಹಾಗೂ ರಾಷ್ಟ್ರೀಯ ಏಕತೆಯನ್ನು ಕಾಪಾಡುವುದರಲ್ಲಿ ವಾರ್ತಾ ಪತ್ರಿಕೆಗಳು ವಹಿಸಿದ ಪಾತ್ರ ಎಂಬ ವಿಷಯದಲ್ಲಿ ಭಾಷಣವೊಂದನ್ನು ತಯಾರಿಸಿರಿ.

ಭಾಷಣವನ್ನು ತಯಾರಿಸುವುದಕ್ಕಾಗಿ ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿದ ನಂತರ ಪಾಠ ಪುಸ್ತಕದ 93, 94ನೇ ಪುಟಗಳನ್ನು ಪರಿಶೋಧಿಸಿದ ನಂತರ ಹೆಚ್ಚಿನ ಮಾಹಿತಿ ಸಂಗ್ರಹಕ್ಕಿರುವ ಪುಸ್ತಕಗಳನ್ನು ನೀಡಬೇಕು.

ಗುಂಪುಗಳು ತಯಾರಿಸಿದ ಭಾಷಣವು ಕೆಳಗೆ ಕೊಟ್ಟಿರುವ ರೀತಿಯಲ್ಲಿರಬೇಕು. ಅದಕ್ಕೆ ಅಗತ್ಯವಾದ ಸೂಚನೆಗಳನ್ನು ಕೊಡಬೇಕು.

- ಮುನ್ನುಡಿ
- ಪ್ರಧಾನ ವಾರ್ತಾಪತ್ರಿಕೆಗಳು, ಪ್ರಕಾಶಕರು, ವರ್ಷ
- ಸಮಾಜ ಸುಧಾರಣೆಗೆ ನೀಡಿದ ಕೊಡುಗೆ
- ಗಳಿಸಿದ ಸಾಮಾಜಿಕ ಪ್ರಗತಿಗಳು
- ಶಿಕ್ಷಣದ ಪ್ರಗತಿಗೆ ವಹಿಸಿದ ಪಾತ್ರ
- ರಾಷ್ಟ್ರೀಯತೆಯನ್ನು ಬೆಳೆಸಲು ನೀಡಿದ ಕೊಡುಗೆ
- ಉಪಸಂಹಾರ

ಈ ರೀತಿಯಲ್ಲಿ ಗುಂಪುಗಳು ತಯಾರಿಸಿದ ಭಾಷಣವನ್ನು ಗುಂಪಿನಿಂದ ಒಬ್ಬರಂತೆ ಮಂಡಿಸಬೇಕು. ಎಲ್ಲ ಗುಂಪುಗಳ ಮಂಡನೆಯ ನಂತರ ಈ ಕೆಳಗಿನಂತೆ ಕ್ರೋಢೀಕರಿಸಬೇಕು.

ಸಮಾಜ ಸುಧಾರಕರು ಹಾಗೂ ಚಳುವಳಿಗಳು ಮುಂದಿರಿಸಿದ ಆಶಯಗಳನ್ನು ಜನರಿಗೆ ತಲುಪಿಸಲು, ಸಾಮಾಜಿಕ ಅಸಮಾನತೆ ಮತ್ತು ಅನಾಚಾರ ಗಳಿಗೆದುರಾಗಿ ಜಾಗೃತಿಯ ನ್ನುಂಟುಮಾಡಲು, ಸಮಾಜ ಸುಧಾರಣೆಗಳಿಗೆ ದಾರಿ ತೋರಿಸಲು, ಶಿಕ್ಷಣದ ಪ್ರಗತಿಗೆ ಬಲವನ್ನೀಯಲು, ಭಾರತೀಯರಲ್ಲಿ ಏಕತೆಯ ಪ್ರಜ್ಞೆಯನ್ನು ಬೆಳೆಸಲು, ಅವರನ್ನು ರಾಷ್ಟ್ರೀಯ ಹೋರಾಟದ ಮುಖ್ಯವಾಹಿನಿಗೆ ಕೊಂಡೊಯ್ಯಲು ವಾರ್ತಾ ಪತ್ರಿಕೆಗಳಿಗೆ ಸಾಧ್ಯವಾಯಿತು.

## ರಾಷ್ಟ್ರಕ್ಕಾಗಿ ವಿದ್ಯಾಭ್ಯಾಸ

ರಾಷ್ಟ್ರೀಯತೆಯನ್ನು ಬೆಳೆಸುವುದರಲ್ಲಿ ವಿದ್ಯಾಭ್ಯಾಸವು ವಹಿಸಿದ ಪಾತ್ರವನ್ನು ಸ್ಪಷ್ಟಪಡಿಸುವ ಕೆಲವು ನೇತಾರರ ಉದ್ಧರಣೆಗಳನ್ನು ಪಾಠಪುಸ್ತಕದಲ್ಲಿ ಕೊಡಲಾಗಿದೆ. ಶಿಕ್ಷಣವು ಯಾವುದಕ್ಕೆಲ್ಲ ಸಹಕಾರಿ ಎಂಬುದ್ನು ಈ ಉದ್ಧರಣೆಗಳ ಸಹಾಯದಿಂದ ಕಂಡುಹಿಡಿಯಲು ಹೇಳುತ್ತಾ ಪಾಠಭಾಗವನ್ನಾ ರಂಭಿಸಬಹುದು. ಪುಸ್ತಕದಲ್ಲಿ ನೀಡಿರುವ ಪ್ರಭಾವಗಳಿಗೆ ಹೊರತಾಗಿ, ಜಗತ್ತಿನ ಅಂಗೀಕಾರವನ್ನು ಗಳಿಸಲು ಸಾಧ್ಯವಿದೆ ಎಂಬುದನ್ನು ಕೂಡಾ ತಿಳಿಯುತ್ತಾರೆ.

ಹತ್ತೊಂಭತ್ತನೇ ಶತಮಾನದಲ್ಲಿ ಭಾರತೀಯ ರಾಷ್ಟ್ರೀಯ ಚಳುವಳಿಯೊಂದಿಗೆ ಪೌರಾತ್ಯ ವಿದ್ಯಾಭ್ಯಾಸವು ಭಾರತದಲ್ಲಿ ಪ್ರಚಾರವನ್ನು ಗಳಿಸಿತು. ಬ್ರಿಟಿಷ್ ಆಡಳಿತಕ್ಕೆ ವಿಧೇಯತೆಯನ್ನು ಸೃಷ್ಟಿಸುವ ಮೆಕೊಲೆಯ ಮಿನಿಟ್‌ಸಿಂಟ್ ಆಶಯುವನ್ನು ಒಳಗೊಂಡಿರುವ ಪಾಶ್ಚಾತ್ಯ ಶಿಕ್ಷಣ ವಿಧಾನಕ್ಕೆ ಬದಲಾಗಿ ಭಾರತೀಯ ಸಂಸ್ಕೃತಿ, ಪರಂಪರೆ, ರಾಷ್ಟ್ರೀಯತೆ ಇತ್ಯಾದಿಗಳನ್ನು ಸಂರಕ್ಷಿಸಲು ಹಾಗೂ ಬೆಳೆಸುವುದಕ್ಕಿರುವ ಪ್ರಯತ್ನವೇ ಪೌರಾತ್ಯ ಶಿಕ್ಷಣವು ಮುಂದಿರಿಸಿದ ಆಶಯವಾಗಿದೆ.

ರಾಷ್ಟ್ರೀಯ ವಿದ್ಯಾಭ್ಯಾಸವು ಮುಂದಿರಿಸಿದ ಆಶಯಗಳನ್ನು ಕಾರ್ಯರೂಪಕ್ಕಿಳಿಸಲು ಪ್ರಯತ್ನಿಸಿದ ಸಂಸ್ಥೆಗಳನ್ನು ಪಾಠಭಾಗವನ್ನು ಪರಿಶೀಲಿಸಿ ಕಂಡುಹಿಡಿಯಬೇಕು. ಪಠ್ಯಪುಸ್ತಕದ 95, 96, 97ನೇ ಪುಟಗಳನ್ನು ವಿದ್ಯಾರ್ಥಿಗಳು ವೈಯಕ್ತಿಕವಾಗಿ ಓದಿ ಮಾಹಿತಿಗಳನ್ನು ಪಡೆದುಕೊಳ್ಳಲಿ. ತಾವು ಕಂಡುಕೊಂಡ ಮಾಹಿತಿಗಳನ್ನು ತರಗತಿಯಲ್ಲಿ ಮಂಡಿಸಲು ಕೆಲವರಿಗೆ ಸಂದರ್ಭವನ್ನೊದಗಿಸಬೇಕು. ಇವುಗಳನ್ನು ಕರಿಹಲಗೆಯಲ್ಲಿ ದಾಖಲಿಸಿದ ನಂತರ ಕೆಳಗೆ ಕೊಟ್ಟಿರುವಂತೆ ಪಟ್ಟಿಯನ್ನು ಪೂರ್ತಿಗೊಳಿಸಿ, ಭಾರತೀಯ ರಾಷ್ಟ್ರೀಯತೆಯನ್ನು ರೂಪಿಸುವಲ್ಲಿ ಪೌರಾತ್ಯ ಶಿಕ್ಷಣವು ನಿರ್ಣಾಯಕ ಪಾತ್ರ ವಹಿಸಿತು ಎಂಬ ತಿಳುವಳಿಕೆಯನ್ನು ವಿದ್ಯಾರ್ಥಿಗಳು ಗಳಿಸಿದ್ದಾರೆ ಎಂಬುದನ್ನು ಖಾತರಿಪಡಿಸಿಕೊಂಡು ಕ್ರೋಡೀಕರಿಸ ಬಹುದು.

- ಡೆಕ್ಕನ್ ಎಜ್ಯುಕೇಶನಲ್ ಸೊಸೈಟಿ
- 1916ರಲ್ಲಿ ಮಹಾರಾಷ್ಟ್ರದಲ್ಲಿ ಸ್ಥಾಪಿತವಾದ ಮಹಿಳಾ ವಿಶ್ವವಿದ್ಯಾಲಯ
- ವಿಶ್ವಭಾರತಿ ವಿಶ್ವವಿದ್ಯಾಲಯ
- ಜಾಮಿಯ–ಮಿಲ್ಲಿಯ ಇಸ್ಲಾಮಿಯ
- ಕೇರಳ ಕಲಾಮಂಡಲ
- ವಾರ್ಧಾ ವಿದ್ಯಾಭ್ಯಾಸ ಯೋಜನೆ

## ಸಾಹಿತ್ಯ ಮತ್ತು ರಾಷ್ಟ್ರೀಯತೆ

ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವಲ್ಲಿ ಭಾರತೀಯ ಸಾಹಿತ್ಯಕಾರರು ಬೆಲೆಬಾಳುವ ಕೊಡೆಯನ್ನಿತ್ತರು ಎಂಬುದಕ್ಕಿರುವ ಅತ್ಯಂತ ಉತ್ತಮ ಉದಾಹರಣೆಯು 'ಬ್ರಿಜ್ ಮೋಹನ್ ಚಕ್ ಬಸ್ತ್'ನ ಗೆರೆಗಳಲ್ಲಿ ಸ್ಪಷ್ಟವಾಗುತ್ತದೆ. ಬ್ರಿಟಿಷರ ಶೋಷಣೆ, ಅದಕ್ಕೆದುರಾಗಿ ರೂಪುಗೊಂಡ ಪ್ರತಿಭಟನೆ ಇತ್ಯಾದಿಗಳನ್ನು ಕಥಾವಸ್ತುಗಳನ್ನಾಗಿಸಿ ರಚಿತವಾದ ಕಾದಂಬರಿಗಳು. ಕವಿತೆಗಳು, ಜೀವನ ಚರಿತ್ರೆಗಳು ಇತ್ಯಾದಿಗಳು ಜನರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸಿತಲ್ಲದೆ ರಾಷ್ಟ್ರೀಯ ಚಳುವಳಿಯನ್ನು ಬಲಗೊಳಿಸಿತೆಂಬ ತಿಳುವಳಿಕೆಯನ್ನು ಗಳಿಸಿದ್ದಾರೆಂಬುದನ್ನು ಖಾತರಿಪಡಿಸುವಂತೆ ಪಾಠಭಾಗದ ವಿನಿಮಯವನ್ನು ಮಾಡಬೇಕು.

ವಿವಿಧ ಭಾಷೆಗಳಲ್ಲಿ ರಚಿಸಲ್ಪಟ್ಟ ಸಾಹಿತ್ಯ ಕೃತಿಗಳು ಭಾರತೀಯ ರಾಷ್ಟ್ರೀಯತೆಯ ಉಗಮಕ್ಕೆ ಹೇಗೆ ಕಾರಣವಾದುವು?

ಚರ್ಚಿಸಿರಿ.

ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡಿ ಪಠ್ಯಪುಸ್ತಕದ 98, 99, 100, 101 ಪುಟಗಳನ್ನು ಓದಲು ಹೇಳಬೇಕು. ಹೇಳಿರುವ ಪುಸ್ತಕದ ತಿರುಳನ್ನು ಮನದಟ್ಟು ಮಾಡುವುದಕ್ಕಾಗಿ ಶಾಲಾ ಗ್ರಂಥಾಲಯದ ಪ್ರಯೋಜನವನ್ನು ಪಡೆಯಬಹುದು. ಅನಂತರ ಗುಂಪುಗಳಲ್ಲಿ ತಯಾರಿಸಿದ ಚರ್ಚಾ ಟಿಪ್ಪಣಿಯನ್ನು ತರಗತಿಯಲ್ಲಿ ಮಂಡಿಸಲು ಸಂದರ್ಭವ

ನ್ನೊದಗಿಸಬೇಕು. ಅವುಗಳನ್ನು ಉತ್ತಮಪಡಿಸುವ ಮೂಲಕ ವಿವಿಧ ಭಾಷೆಗಳಲ್ಲಿ ರಚಿಸಲ್ಪಟ್ಟ ಸಾಹಿತ್ಯ ಕೃತಿಗಳು ಭಾರತೀಯ ರಾಷ್ಟ್ರೀಯತೆಯ ಉಗಮಕ್ಕೆ ದಾರಿ ಮಾಡಿಕೊಟ್ಟಿತೆಂಬ ಆಶಯವು ಕಲಿಕಾರ್ಥಿಗಳಿಗೆ ಲಭಿಸಿತೆಂಬುದನ್ನು ಖಾತರಿಪಡಿಸಿದ ನಂತರ ಕ್ರೊಡೀಕರಿಸಬಹುದು.

## ಕಲಾಕೃತಿಗಳಲ್ಲಿ ರಾಷ್ಟ್ರೀಯತೆ

ಭಾರತೀಯ ಚಿತ್ರಕಾರರು ಭಾರತೀಯ ಚಿತ್ರಕಲೆಯನ್ನು ಪಾಶ್ಚಾತ್ಯ ಪ್ರಭಾವದಿಂದ ವಿಮೋಚನೆಗೊಳಿಸಲು ಹಾಗೂ ರಾಷ್ಟ್ರೀಯ ಪರಂಪರೆಯಲ್ಲಿ ಹುದುಗಿರುವ ಪೌರಾತ್ಯ ಕಲೆಯನ್ನು ಪ್ರೋತ್ಸಾಹಿಸುವ ಮೂಲಕ ರಾಷ್ಟ್ರೀಯತೆಯನ್ನು ಬೆಳೆಸಿದರೆಂಬ ತಿಳುವಳಿಕೆಯನ್ನು ಗಳಿಸಿದರೆಂಬುದನ್ನು ಖಾತರಿಪಡಿಸುವ ವಿಧದಲ್ಲಿ ಈ ಭಾಗವನ್ನು ವಿನಿಮಯ ಮಾಡಬೇಕು.

"ಭಾರತೀಯ ರಾಷ್ಟ್ರೀಯತೆಯ ಉಗಮದಲ್ಲಿ ಚಿತ್ರಕಾರರು ನಿರ್ಣಾಯಕ ಪಾತ್ರ ವಹಿಸಿದರು" ಈ ಹೇಳಿಕೆಯನ್ನು ಚರ್ಚಿಸಿರಿ.

ಪಠ್ಯಪುಸ್ತಕದ ಪಾಠಭಾಗವನ್ನು ವೈಯಕ್ತಿಕವಾಗಿ ಓದಿ ಟಿಪ್ಪಣಿಯನ್ನು ತಯಾರಿಸಲು ಹೇಳಬೇಕು. ಕೆಲವು ವಿದ್ಯಾರ್ಥಿಗಳು ತಾವು ಕಂಡುಕೊಂಡ ವಿಚಾರಗಳನ್ನು ಮಂಡಿಸುತ್ತಾರೆ. ಅಗತ್ಯವಾದ ಉತ್ತಮಪಡಿಸುವಿಕೆಯೊಂದಿಗೆ ಈ ಕೆಳಗಿನಂತೆ ಕ್ರೋಡೀಕರಿಸಬಹುದು.

- ಚಿತ್ರಕಾರರ ಸಾಮಾಜಿಕ ದೃಷ್ಟಿಕೋನಗಳು ಅವರ ರಚನೆಗಳಲ್ಲಿ ಪ್ರತಿಫಲಿಸುತ್ತವೆ.
- ಜನಮನದಲ್ಲಿ ರಾಷ್ಟ್ರೀಯತೆಯ ಬಿಂಬವನ್ನು ಸೃಷ್ಟಿಸುತ್ತಾರೆ.
- ದುರಾಚಾರಗಳಿಗೆದುರಾಗಿ ಸಾಮಾಜಿಕ ಮನೋಭಾವವನ್ನು ಸೃಷ್ಟಿಸಲು ಸಾಧ್ಯವಾಯಿತು.
- ರಾಷ್ಟ್ರೀಯ ಚಳುವಳಿಗಳಿಗೆ ಮನೋದಾರ್ಢ್ಯವನ್ನು ನೀಡಿದವು.

"ಭಾರತೀಯ ರಾಷ್ಟ್ರೀಯತೆಯನ್ನು ರೂಪಿಸುವಲ್ಲಿ ಪ್ರಭಾವ ಬೀರಿದ ಘಟಕಗಳು" ಎಂಬ ವಿಷಯದ ಆಧಾರದಲ್ಲಿ ಪ್ರೋಜೆಕ್ಟ್ ತಯಾರಿಸಿರಿ.

ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸುವುದು. ಗುಂಪುಗಳಿಗೆ

- ಸಮಾಜ ಸುಧಾರಣ ಚಳುವಳಿಗಳು, ವ್ಯಕ್ತಿಗಳು
- ಪತ್ರಿಕೆಗಳು
- ವಿದ್ಯಾಭ್ಯಾಸ
- ಸಾಹಿತ್ಯ
- ಕಲೆ

ಎಂಬೀ ವಿಷಯಗಳನ್ನು ನೀಡಬೇಕು.

ಪಠ್ಯಪುಸ್ತಕ, ಶಾಲಾ ಗ್ರಂಥಾಲಯ, ಐ.ಸಿ.ಟಿ ಅವಕಾಶಗಳು ಇತ್ಯಾದಿಗಳನ್ನುಪಯೋಗಿಸಿ ಮಾಹಿತಿಗಳನ್ನು ಸಂಗ್ರಹಿಸಬೇಕು. ಗುಂಪುಗಳಿಗೆ ಲಬಿಸಿದ ವಿಷಯಕ್ಕೆ ಸಂಬಂಧಿಸಿ ವ್ಯಕ್ತಿಗಳು, ಸಂಸ್ಥೆಗಳು, ಕಲಾರೂಪಗಳು ಇವುಗಳ ಚಿತ್ರಗಳನ್ನು ಪ್ರೋಜೆಕ್ಟ್‌ನ ಭಾಗವನ್ನಾಗಿ ಮಾಡಬಹುದು. ಗುಂಪುಗಳು ಅವರು ಕಂಡುಕೊಂಡ ವಿಚಾರಗಳನ್ನು ತರಗತಿಯಲ್ಲಿ ಮಂಡಿಸಲಿ. ಮಂಡನೆಯ ನಂತರ ಕ್ರೋಡೀಕರಿಸಿ ವರದಿ ತಯಾರಿಸಬೇಕು.

## ಮೌಲ್ಯ ನಿರ್ಣಯ ಪ್ರಶ್ನೆಗಳು

- ಭಾರತೀಯರ ರಾಷ್ಟ್ರೀಯತೆಯ ಅಡಿಪಾಯ ಯಾವುದು?
- ಇಂಗ್ಲಿಷ್ ವಿದ್ಯಾಭ್ಯಾಸವನ್ನು ಭಾರತದಲ್ಲಿ ಜ್ಯಾರಿಗೊಳಿಸುವಂತೆ ಬ್ರಿಟಿಷರನ್ನು ಪ್ರೇರೇಪಿಸಿದ ಘಟಕಗಳು ಯಾವುವು?
- ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆಯಲ್ಲಿ ಸಮಾಜ ಸುಧಾರಣ ಚಳುವಳಿಗಳು ನಿರ್ಣಾಯ ಪ್ರಭಾವ ಬೀರಿದುವೆಂದು ಹೇಳಲು ಕಾರಣವೇನು?
- ಭಾರತೀಯ ರಾಷ್ಟ್ರೀಯ ಚಳುವಳಿಯ ಬೆಳವಣಿಗೆಯಲ್ಲಿ ವಾರ್ತಾಪತ್ರಿಕೆಗಳು ಎಷ್ಟರ ಮಟ್ಟಿಗೆ ಪ್ರಭಾವ ಬೀರಿದವು? ವಿಶ್ಲೇಷಿಸಿರಿ
- ಪೌರಾತ್ಯ ವಿದ್ಯಾಭ್ಯಾಸವು ಮುಂದಿರಿಸಿದ ಆಶಯ ಯಾವುದು ?

## ಆಕರ ಗ್ರಂಥ


*Social Background of Indian Nationalism - A. R. Desai*

*India's struggle for Independence - Bipan Chandra, Mridula Mukherjee, Aditya Mukherjee, Sucheta Mahajan, K. N. Panikkar*

*Modern India 1885 - 1947 - Sumit Sarkar*

*From Plassey to Partition - Sekhar Bandyopadhyay*

ಇಂಡಿಯನ್ ನವೋತ್ಥಾನಂ – ಕೆ.ಕೆ. ರಾಧ

ಇಂಡ್ಯಯೆ ಕಂಡೆತ್ತಲ್ – ಜವಹರಲಾಲ್ ನೆಹರೂ


## ಅಧ್ಯಾಪಕರಿಂದ ಮೌಲ್ಯನಿರ್ಣಯ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸ ಬೇಕಾದುದು |
|---|---|---|---|
| 1. ಭಾರತೀಯ ರಾಷ್ಟ್ರೀಯತೆಯ ಉಗಮಕ್ಕೆ ಕಾರಣವಾದ ವಿವಿಧ ಘಟಕಗಳನ್ನು ಗುರುತಿಸಲು ಸಾಧ್ಯವಾಯಿತು. | ☐ | ☐ | ☐ |
| 2. ಬ್ರಿಟಿಷರ ವಸಾಹತುಶಾಹಿ ಆಡಳಿತವು ಭಾರತೀಯ ರಾಷ್ಟ್ರೀಯತೆಗೆ ಹೇಗೆ ಕಾರಣವಾಯಿತೆಂಬುದನ್ನು ಅವಲೋಕಿಸಲು ಸಾಧ್ಯವಾಯಿತು. | ☐ | ☐ | ☐ |
| 3. ಭಾರತದ ಸಮಾಜ ಸುಧಾರಣ ಚಳುವಳಿಗಳು ರಾಷ್ಟ್ರೀಯತೆಗೆ ಹೇಗೆ ಕಾರಣವಾಯಿತೆಂಬುದನ್ನು ವಿಶ್ಲೇಷಿಸಲು ಸಾಧ್ಯವಾಯಿತು. | ☐ | ☐ | ☐ |
| 4. ಭಾರತೀಯ ರಾಷ್ಟ್ರೀಯತೆಯ ಉಗಮದಲ್ಲಿ ಪತ್ರಿಕೆಗಳ ಪ್ರಭಾವವನ್ನು ಸ್ಪಷ್ಟಪಡಿಸಲು ಸಾಧ್ಯವಾಯಿತು. | ☐ | ☐ | ☐ |
| 5. ಭಾರತೀಯ ರಾಷ್ಟ್ರೀಯತೆಯನ್ನು ರೂಪಿಸುವಲ್ಲಿ ವಿದ್ಯಾಭ್ಯಾಸ, ಸಾಹಿತ್ಯ, ಕಲೆ ಎಂಬಿವುಗಳ ಪಾತ್ರವನ್ನು ವಿಶ್ಲೇಷಿಸಲು ಸಾಧ್ಯವಾಯಿತು. | ☐ | ☐ | ☐ |



# 5 ಹೋರಾಟ ಮತ್ತು ಸ್ವಾತಂತ್ರ್ಯ

ಇಪ್ಪತ್ತನೇ ಶತಮಾನದ ಆರಂಭದಲ್ಲಿ ವಸಾಹತುಶಾಹಿ ಆಡಳಿತದ ಆರ್ಥಿಕ ಶೋಷಣೆಯು ರಾಷ್ಟ್ರೀಯತೆಯ ಬೆಳವಣಿಗೆಗೆ ಹೇಗೆ ಕಾರಣವಾಯಿತೆಂಬುದನ್ನು ಹಿಂದಿನ ಅಧ್ಯಾಯದಲ್ಲಿ ಕಲಿತೆವು. ಭಾರತದ ರಾಷ್ಟ್ರೀಯ ಚಳುವಳಿಯ ನೇತೃತ್ವವನ್ನು ಆರಂಭದಲ್ಲಿ ಸಮಾಜದ ವಿದ್ಯಾಸಂಪನ್ನರ ವಶದಲ್ಲಿದ್ದರೂ ಕ್ರಮೇಣ ರಾಷ್ಟ್ರೀಯ ಚಳುವಳಿಯು ಕಾಂಗ್ರೆಸ್ ನೇತಾರರು ಮತ್ತು ತೀವ್ರವಾದಿ ನೇತಾರರ ಕೈವಶವಾಯಿತು.

ಭಾರತದ ವಿದ್ಯಾಸಂಪನ್ನರು ಹಾಗೂ ಮೇಲ್ವರ್ಗದವರ ವಶದಲ್ಲಿದ್ದ ರಾಷ್ಟ್ರೀಯ ಚಳುವಳಿಗೆ ಜನಪರ ಸ್ವಭಾವ ಲಭಿಸಿದ್ದು ಹೇಗೆ ಎಂಬುದನ್ನೂ ಭಾರತದ ರಾಷ್ಟ್ರೀಯ ಚಳುವಳಿಯನ್ನೊಂದು ಜನಾಂದೋಲನವಾಗಿ ಮಾಡುವಲ್ಲಿ ಮಹಾತ್ಮಗಾಂಧಿ ವಹಿಸಿದ ಪಾತ್ರ, ಅವರು ಹೇಗೆ ಎಲ್ಲರೂ ಒಪ್ಪುವಂತಹ ನೇತಾರರಾದರು ಇತ್ಯಾದಿಗಳನ್ನು ವಿಶ್ಲೇಷಿಸುವುದೇ ಈ ಪಾಠ ವಿನಿಮಯದ ಪ್ರಧಾನ ಉದ್ದೇಶವಾಗಿದೆ. ಅಹಿಂಸೆಯಲ್ಲಿ ಹುದುಗಿಕೊಂಡಿರುವ ಅಸಹಕಾರ, ನಾಗರಿಕ ನಿಯಮ ಉಲ್ಲಂಘನೆಯಂತಹ ಹೋರಾಟದ ವಿಧಾನಗಳು ಹಾಗೂ ರಾಷ್ಟ್ರೀಯ ಚಳುವಳಿಯ ನೇತೃತ್ವದಲ್ಲಿ ನಡೆದ ಕ್ರಿಯಾತ್ಮಕ ಚಟುವಟಿಕೆ ಇತ್ಯಾದಿಗಳನ್ನು ಚರ್ಚಿಸುತ್ತಾರೆ. ಗಾಂಧಿ ಹೋರಾಟ ವಿಧಾನಗಳಿಗಿಂತ ಭಿನ್ನವಾದ ಹೋರಾಟದ ವಿಧಾನಗಳು ಮತ್ತು ಅದರ ಪ್ರಧಾನ ವಕ್ತಾರರ ಬಗ್ಗೆ ಈ ಪಾಠಭಾಗದಲ್ಲಿ ಪರಾಮರ್ಶಿಸಲಾಗುತ್ತದೆ. ಗಾಂಧೀಜಿಯ ಹೋರಾಟ ವಿಧಾನಗಳಿಗೆ ವಿರೋಧ ವ್ಯಕ್ತಪಡಿಸುತ್ತಿರುವಾಗಲೇ ವಿಭಿನ್ನ ಹಾದಿಗಳ ಮೂಲಕ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿದವರೂ ಗಾಂಧೀಜಿಯ ನೇತೃತ್ವವನ್ನು ಅಂಗೀಕರಿಸಿದ್ದರೆಂಬ ವಾಸ್ತವಿಕೆಯನ್ನೂ ವಿದ್ಯಾರ್ಥಿಗಳು ತಿಳಿಯಬೇಕಾಗಿದೆ.

ಈ ಪಾಠಭಾಗವನ್ನು ವಿನಿಮಯ ಮಾಡಿದಾಗ, ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗಮಯವಾದ ಹೋರಾಟವನ್ನು ನಡೆಸಿದ ರಾಷ್ಟ್ರೀಯ ನೇತಾರರ ಕುರಿತು ಹಾಗೂ ಹುತಾತ್ಮರ ಕುರಿತು ವಿದ್ಯಾರ್ಥಿಗಳಲ್ಲಿ ಆದರ ಮತ್ತು ಗೌರವವನ್ನು ಉಂಟುಮಾಡುವುದಕ್ಕೂ ಅವರ ಜೀವನ ಹಾಗೂ ಕಾರ್ಯಚಟುವಟಿಕೆಗಳನ್ನು ಮಾದರಿಯಾಗಿಸಬೇಕೆಂಬ ಮನೋಭಾವವು ವಿದ್ಯಾರ್ಥಿಗಳಲ್ಲಿ ರೂಪುಗೊಳ್ಳಬೇಕು.

ಯೂನಿಟ್ ಫ್ರೇಂ

## 5. ಹೋರಾಟ ಮತ್ತು ಸ್ವಾತಂತ್ರ್ಯ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| **ಪ್ರಾದೇಶಿಕ ಹೋರಾಟಗಳು**<br>• ಚಂಪಾರನ್ ನೀಲ ಕೃಷಿಕರ ಹೋರಾಟ<br>• ಅಹಮ್ಮದಾಬಾದಿನ ಬಟ್ಟೆ ಗಿರಣಿ ಕಾರ್ಮಿಕರ ಮುಷ್ಕರ<br>• ಖೇಡಾ ಕೃಷಿಕರ ಹೋರಾಟ<br>**ರಾಷ್ಟ್ರೀಯ ಚಳುವಳಿಗಳು**<br>• ಅಸಹಕಾರ ಚಳುವಳಿ<br>• ನಾಗರಿಕ ನಿಯಮ ಉಲ್ಲಂಘನೆ<br>• ಕ್ವಿಟ್ ಇಂಡಿಯಾ ಚಳುವಳಿ<br>• ಸುಭಾಷ್ಚಂದ್ರ ಬೋಸ್ – ಐ.ಎನ್.ಎ<br>• ಕ್ರಾಂತಿಕಾರಿ ಚಳುವಳಿಗಳು<br>• ಕಾರ್ಮಿಕ–ಕೃಷಿಕರ ಚಳುವಳಿಗಳು | • ಗಾಂಧೀಜಿ ಮಧ್ಯಸ್ಥಿಕೆ ವಹಿಸಿದ ಆರಂಭಕಾಲದ ಚಳುವಳಿಗಳ ಕುರಿತು ಮಾಹಿತಿ ಸಂಗ್ರಹವನ್ನು ಮಾಡಿ ಚಳುವಳಿಗಳ ಸ್ವಭಾವ ಮತ್ತು ವಿಶೇಷತೆಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸುವುದು.<br>• ಜಲಿಯನ್ ವಾಲಾಬಾಗ್ ಘಟನೆಯು ಭಾರತದ ರಾಷ್ಟ್ರೀಯ ಚಳುವಳಿಯ ಮೇಲೆ ಹೇಗೆ ಪ್ರಭಾವ ಬೀರಿತೆಂಬುದನ್ನು ಚರ್ಚಿಸುವುದು.<br>• ಅಸಹಕಾರ ಚಳವಳಿಗೆ ಜನಪರ ಬೆಂಬಲವನ್ನು ವ್ಯಕ್ತಪಡಿಸುವ ಘೋಷಣಾ ವಾಕ್ಯಗಳನ್ನು ತಯಾರಿಸುವುದು.<br>• ಭಾರತವು ಸ್ವಾತಂತ್ರ್ಯವನ್ನು ಗಳಿಸುವುದಕ್ಕಾಗಿ ಗಾಂಧೀಜಿ ಮುಂದಿರಿಸಿದ ಬೇಡಿಕೆಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸುವುದು.<br>• ಉಪ್ಪು ಸತ್ಯಾಗ್ರಹದ ಔಚಿತ್ಯವನ್ನು ವಿಶ್ಲೇಷಿಸುವ ಐಸಿಟಿ ಪ್ರಸೆಂಟೇಶನನ್ನು ತಯಾರಿಸುವುದು.<br>• ಕ್ವಿಟ್ ಇಂಡಿಯಾ ಚಳುವಳಿಯ ಕುರಿತು ಹಾಗೂ ಅದರ ಪ್ರಾಧಾನ್ಯದ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ ಚರ್ಚಾ ಟಿಪ್ಪಣಿ ತಯಾರಿಸುವುದು<br>• ಗಾಂಧೀಜಿಯ ಹೋರಾಟ ವಿಧಾನಗಳಿಗಿಂತ ಭಿನ್ನವಾಗಿ ನಡೆದ ಹೋರಾಟಗಳು ಮತ್ತು ಚಳುವಳಿಗಳ ಕುರಿತು ವಿಚಾರಗೋಷ್ಠಿ ಪ್ರಬಂಧವನ್ನು ತಯಾರಿಸುವುದು. | • ಗಾಂಧೀಜಿಯು ಭಾರತಕ್ಕೆ ಹಿಂದಿರುಗಿ ನಂತರ ಪ್ರಾದೇಶಿಕ ಸಮಸ್ಯೆಗಳಲ್ಲಿ ಭಾಗವಹಿಸಿದ ಸನ್ನಿವೇಶವನ್ನು ವಿವರಿಸುತ್ತಾರೆ.<br>• ಗಾಂಧೀಜಿಯು ಭಾರತದ ರಾಷ್ಟ್ರೀಯ ಹೋರಾಟದ ನೇತೃತ್ವವನ್ನು ವಹಿಸಿದ ಹಿನ್ನೆಲೆಯನ್ನು ಸ್ಪಷ್ಟಪಡಿಸುತ್ತಾರೆ.<br>• ಅಸಹಕಾರ ಚಳುವಳಿಯ ವಿಶೇಷತೆಗಳು ಮತ್ತು ಪರಿಣಾಮಗಳನ್ನು ವಿಶ್ಲೇಷಿಸುತ್ತಾರೆ.<br>• ನಾಗರಿಕ ನಿಯಮ ಉಲ್ಲಂಘನೆಯ ಭಾಗವಾದ ಉಪ್ಪು ಸತ್ಯಾಗ್ರಹದ ಔಚಿತ್ಯವನ್ನು ವಿಶ್ಲೇಷಿಸುತ್ತಾರೆ.<br>• ಕ್ವಿಟ್ ಇಂಡಿಯಾ ಚಳುವಳಿಯ ಹಿನ್ನೆಲೆಯನ್ನು ಸ್ಪಷ್ಟಪಡಿಸುತ್ತಾರೆ.<br>• ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಐಎನ್ಎ ಮತ್ತು ಸುಭಾಷ್ಚಂದ್ರ ಭೋಸ್‌ರ ಪಾತ್ರವನ್ನು ಅವಲೋಕಿಸುತ್ತಾರೆ.<br>• ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ರೂಪುಗೊಂಡ ಕ್ರಾಂತಿಕಾರಿ ಸಂಘಟನೆಗಳ ಚಟುವಟಿಕೆಗಳನ್ನು ವಿವರಿಸುತ್ತಾರೆ.<br>• ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕ ಕೃಷಿಕರ ಚಳುವಳಿಗಳ ಪಾತ್ರವನ್ನು ವಿಶ್ಲೇಷಿಸುತ್ತಾರೆ. |

## ಅಧ್ಯಾಯದೆಡೆಗೆ...

ಗಾಂಧೀಜಿಯ ಆತ್ಮಕಥೆಯಾದ 'ನನ್ನ ಸತ್ಯಾನ್ವೇಷಣೆ' ಎಂಬ ಪುಸ್ತಕದ ಒಂದು ಅಧ್ಯಾಯವಾದ ನೀಲದ ಕಲೆ (Stain of Indigo) ಯಿಂದ ಆಯ್ಕೆ ಮಾಡಿದ ಕೆಲವು ಸಾಲುಗಳನ್ನು ಪಾಠಭಾಗದ ಆರಂಭದಲ್ಲಿ ಕೊಡಲಾಗಿದೆ. ಗಾಂಧೀಜಿ ಚಂಪಾರನ್‌ನ ಕೃಷಿಕರ ಸ್ಥಿತಿಯನ್ನು ಮನದಟ್ಟು ಮಾಡಿಕೊಳ್ಳಲು ಕಾರಣವಾದ ಸನ್ನಿವೇಶ ಹಾಗೂ ನೀಲ ಕೃಷಿಕರು ಯಾವ ಯಾವ ವಿಧದಲ್ಲಿ ಬ್ರಿಟಿಷರಿಂದ ಶೋಷಣೆ ಗೀಡಾದರೆಂಬುದರ ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸುವುದಕ್ಕಾಗಿ ಶಾಲಾ ಗ್ರಂಥಾಲಯದ ಪ್ರಯೋಜನವನ್ನು ಪಡೆಯಬಹುದು.

**ಚಟುವಟಿಕೆ**

ಗಾಂಧಿಜಿ ಮಧ್ಯಪ್ರವೇಶಿಸಿದ ಪ್ರಾದೇಶಿಕ ಹೋರಾಟಗಳ ಸಾಮಾನ್ಯ ಸ್ವಭಾವವನ್ನು ಅವಲೋಕಿಸಿರಿ. ವಿದ್ಯಾರ್ಥಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬೇಕು. .

ಗುಂಪು 1 - ಚಂಪಾರನ್

ಗುಂಪು 2 - ಅಹಮ್ಮದಾಬಾದಿನ ಬಟ್ಟೆ ಗಿರಣಿ ಹೋರಾಟ

ಗುಂಪು 3 - ಖೇಡಾ ಕೃಷಿಕರ ಹೋರಾಟ

ಪಠ್ಯಪುಸ್ತಕದ 106, 107ನೇ ಪುಟಗಳನ್ನು ಓದಲು ಹೇಳಬೇಕು.

ಹೆಚ್ಚಿನ ಓದಿಗಾಗಿ ನನ್ನ ಸತ್ಯಾನ್ವೇಷಣೆಯ ಅಧ್ಯಾಯ– ನೀಲದ ಕಲೆ, ಬಿಪನ್ ಚಂದ್ರರ ಇಂಡಿಯನ್ ಸ್ವಾತಂತ್ರ್ಯ ಸಮರಂ 191ನೇ ಪುಟದಿಂದ 196ನೇ ಪುಟದ ವರೆಗಿನ ಭಾಗಗಳನ್ನು ನೀಡಬೇಕು. ಗುಂಪಿನಲ್ಲಿ ಚರ್ಚಿಸಿ ತಯಾರಿಸುವ ಟಿಪ್ಪಣಿಗಳನ್ನು ತರಗತಿಯಲ್ಲಿ ಮಂಡಿಸಲಿ.

ಉತ್ತಮಪಡಿಸಿದ ಟಿಪ್ಪಣಿಗಳನ್ನು ಕೆಳಗೆ ನೀಡಿರುವ ಅಂಶಗಳೂ ಇವೆಯೆಂಬುದನ್ನು ಖಾತರಿಪಡಿಸಿ ಕ್ರೋಡೀಕರಿಸಬಹುದು.

- ಗಾಂಧೀಜಿ ಮಧ್ಯಪ್ರವೇಶಿಸಿದ ಆರಂಭಕಾಲದ ಎಲ್ಲ ಹೋರಾಟಗಳೂ ಪ್ರಾದೇಶಿಕ ಹಾಗೂ ಆರ್ಥಿಕ ಸಮಸ್ಯೆಗಳ ಆಧಾರದಲ್ಲಿರುವುದಾಗಿತ್ತು.
- ಅವರು ನಿಯಮ ಉಲ್ಲಂಘನೆ ಹಾಗೂ ಅಸಹಕಾರ ಚಳುವಳಿಯಂತಹ ಹೋರಾಟ ವಿಧಾನಗಳನ್ನು ಸ್ವೀಕರಿಸಿದ್ದರು.
- ಪ್ರಾದೇಶಿಕ ನೇತಾರರ ಸಹಾಯವನ್ನೂ ಅವರು ಸ್ವೀಕರಿಸಿದ್ದರು
- ಗಾಂಧೀಜಿಯ ಹೋರಾಟದ ವಿಧಾನಗಳು ಅವರನ್ನು ಎಲ್ಲರೂ ಒಪ್ಪುವಂತಹ ನಾಯಕನನ್ನಾಗಿಸಿತು.
- ಜನರ ಸಮಸ್ಯೆಯನ್ನು ಪರಿಹರಿಸಲು ಗಾಂಧಿಜಿಗೆ ಸಾಧ್ಯವಿದೆ ಎಂಬ ವಿಶ್ವಾಸವನ್ನು ಉಂಟು ಮಾಡಲು ಸಾಧ್ಯವಾಯಿತು.

### ಖೇಡಾ ಕೃಷಿಕರ ಹೋರಾಟ

ಖೇಡಾ ಜಿಲ್ಲೆಯ ಕೃಷಿಕರು ಕೃಷಿ ನಾಶದಿಂದಾಗಿ ತೀವ್ರ ಸಂಕಷ್ಟಕ್ಕೀಡಾಗಿದ್ದಾರೆಂದೂ ಅವರ ತೆರಿಗೆಯಲ್ಲಿ ಕಡಿತವನ್ನುಂಟುಮಾಡಬೇಕೆಂಬ ಬೇಡಿಕೆಯನ್ನು ಸರಕಾರವು ಅವಗಣಿಸಿದಾಗ ಗಾಂಧೀಜಿ ಅಧ್ಯಕ್ಷರಾಗಿದ್ದ ಗುಜರಾತ್ ಸಭಾ ಈ ಹೋರಾಟದ ನೇತೃತ್ವವನ್ನು ವಹಿಸಿಕೊಂಡಿತು. ಬ್ರಿಟಿಷರ ದ್ರೋಹ ಕ್ರಮಗಳ ಹಾಗೂ ನಿಷ್ಠುರತೆಗೆದುರಾಗಿ ಮರಣದ ವರೆಗೆ ಹೋರಾಡಲು ಸಿದ್ಧರಾಗಬೇಕು ಹಾಗೂ ಜನರ ಒಪ್ಪಿಗೆಯಿಲ್ಲದೆ ಅವರನ್ನು ಆಳಲು ಸಾಧ್ಯವಿಲ್ಲ ಎಂಬುದನ್ನು ಮನದಟ್ಟು ಮಾಡುವಂತಹ ಹೋರಾಟವನ್ನು ಆರಂಭಿಸಲು ಗಾಂಧೀಜಿ ಸೂಚಿಸಿದರು. ಗ್ರಾಮಾಂತರಗಳಲ್ಲಿ ಹೋರಾಟದ ಪ್ರಚಾರಕ್ಕಾಗಿ ಸಂಚರಿಸಿದ ಗಾಂಧೀಜಿಯೊಂದಿಗೆ ಖೇಡಾ ಜಿಲ್ಲೆಯವರೇ ಆದ ವಲ್ಲಭಾಯಿ ಪಟೇಲ್, ಇಂದು ಲಾಲ್ ಯಾಗ್ನಿಯಂತಹ ಯುವಕರೂ ಒಟ್ಟು ಗೂಡಿದರು.

## ರಾಷ್ಟ್ರೀಯ ಹೋರಾಟದತ್ತ...

ಗಾಂಧೀಜಿ ಭಾರತದ ರಾಷ್ಟ್ರೀಯ ಹೋರಾಟದ ನೇತೃತ್ವವನ್ನು ವಹಿಸಲು ಕಾರಣವಾದ ಸನ್ನಿವೇಶಗಳನ್ನು ಈ ಪಾಠಭಾಗದಲ್ಲಿ ಪ್ರತಿಪಾದಿಸಲಾಗಿದೆ. ರೌಲಟ್ ನಿಯಮ ಹಾಗೂ ಅನಂತರದ ಪ್ರತಿಭಟನೆಗಳು ಜಲಿಯನ್ ವಾಲಬಾಗ್ ಘಟನೆಗೆ ಕಾರಣವಾಯಿತು. ಜಲಿಯನ್ ವಾಲಾಬಾಗ್ ಘಟನೆಯು ರಾಷ್ಟ್ರೀಯ ಹೋರಾಟದ ಮೇಲೆ ಹೇಗೆ ಪ್ರಭಾವ ಬೀರಿತು ಎಂಬುದನ್ನು ಪಾಠಭಾಗವು ವಿಶ್ಲೇಷಿಸುತ್ತದೆ.

ಜಲಿಯನ್ ವಾಲಾಬಾಗ್ ಘಟನೆಯು ಭಾರತದ ರಾಷ್ಟ್ರೀಯ ಹೋರಾಟದ ಮೇಲೆ ಹೇಗೆ ಪ್ರಭಾವ ಬೀರಿತು ಎಂಬುದನ್ನು ಚರ್ಚಿಸಿರಿ.

**ಚಟುವಟಿಕೆ**

ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿದ ನಂತರ ಕೆಳಗೆ ನೀಡಿರುವ ಸೂಚಕಗಳ ಆಧಾರದಲ್ಲಿ ಟಿಪ್ಪಣಿಗಳನ್ನು ತಯಾರಿಸಲು ಹೇಳಬೇಕು.

- ರೌಲಟ್ ನಿಯಮ
- ಸತ್ಯಾಗ್ರಹಗಳು ಹಾಗೂ ಪ್ರತಿಭಟನೆಗಳು
- ಜಲಿಯನ್ ವಾಲಾಬಾಗ್ ದುರಂತ

ಪಠ್ಯಪುಸ್ತಕದ ಪಾಠಭಾಗವನ್ನು ಓದಿದ ನಂತರ ಹೆಚ್ಚಿನ ಮಾಹಿತಿ ಸಂಗ್ರಹಕ್ಕಾಗಿ ಬಿಪನ್ ಚಂದ್ರರ 'ಇಂಡ್ಯನ್ ಸ್ವಾತಂತ್ರ್ಯ ಸಮರಂ' ಪುಸ್ತಕದ ಭಾಗವನ್ನು ಓದಲು ನೀಡಬೇಕು.

ಐಸಿಟಿ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು.
*www.Indiavideo.org*

- *Jalianwalabagh paintings*
- *Martyrs well*
- *Bullet Mark on the walls*
- *Jalianwalabagh Memorial*
- *Jalianwalabagh Amarjyothi*

ಇವುಗಳ ವೀಡಿಯೋವನ್ನು ಪ್ರದರ್ಶಿಸಬಹುದು.

ವೈಯಕ್ತಿಕವಾಗಿ ಟಿಪ್ಪಣಿಯನ್ನು ತಯಾರಿಸಿ ಗುಂಪಿನಲ್ಲಿ ಮಂಡಿಸಲಿ. ಗುಂಪುಗಳು ಕ್ರೋಡೀಕರಿಸಿದ ಟಿಪ್ಪಣಿಗಳ ಮೂಲಕ ಜಲಿಯನ್ ವಾಲಾಬಾಗ್ ದುರಂತವು ಭಾರತದ ಸ್ವಾತಂತ್ರ್ಯ ಹೋರಾಟದ ನಿರ್ಣಾಯಕ ಗತಿ ಬದಲಾವಣೆಯಾಗಿತ್ತು ಎಂಬ ತಿಳುವಳಿಕೆಯನ್ನು ವಿದ್ಯಾರ್ಥಿಗಳು ಗಳಿಸಿದ್ದಾರೆಂಬುದನ್ನು ಖಾತರಿಪಡಿಸಿದ ನಂತರ ಕೆಳಗೆ ಕೊಟ್ಟಿರುವಂತೆ ಕ್ರೋಡೀಕರಿಸಬೇಕು.

- ರೌಲಟ್ ನಿಯಮವು ಬ್ರಿಟಿಷರು ವಸಾಹತುಗಳಲ್ಲಿ ಜಾರಿಗೊಳಿಸಿದ ಕರಿ ನಿಯಮಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ.
- ನಿರಾಯುಧರಾದ ಜನರನ್ನು ದಮನಿಸಲು ಹಾಗೂ ಜನರಲ್ಲಿ ಭಯವನ್ನುಂಟು ಮಾಡಲು ಜನರಲ್ ಡಯರ್ ಪ್ರಯತ್ನಿಸಿದನು.
- ಜಲಿಯನ್ ವಾಲಾಬಾಗ್ ಕಗ್ಗೊಲೆಯಿಂದಾಗಿ ಜನ ಮನಸ್ಸು ಜಾಗೃತವಾಯಿತು. ಹಾಗೂ ಭಯಗೊಳಿಸುವುದರ ಬದಲು ಹೆಚ್ಚಿನ ಆತ್ಮಬಲದಿಂದ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಜನರನ್ನು ಪ್ರಾಪ್ತರನ್ನಾಗಿಸಿತು.

## ಅಸಹಕಾರ ಚಳುವಳಿ ಮತ್ತು ಖಿಲಾಫತ್ ಚಳುವಳಿ

ಜಲಿಯನ್ ವಾಲಾಬಾಗ್ ದುರಂತವು ಬ್ರಿಟಿಷ್ ವಿರೋಧಿ ಮನೋಭಾವವನ್ನು ರಾಷ್ಟ್ರೀಯ ಮಟ್ಟದಲ್ಲಿ ಬೆಳೆಸಲು ನಿರ್ಣಾಯಕ ಪಾತ್ರ ವಹಿಸಿದುದು ಗಾಂಧೀಜಿಯ ನೇತೃತ್ವದಲ್ಲಿ ಅಸಹಕಾರ ಚಳುವಳಿಯನ್ನು ಆರಂಭಿಸುವಂತೆ ಇಂಡಿಯನ್ ನೇಶನಲ್ ಕಾಂಗ್ರೆಸ್‌ನ್ನು ಪ್ರೇರೇಪಿಸಿತು. ಅಸಹಕಾರ ಚಳುವಳಿಯ ಆಶಯಗಳನ್ನೊಳಗೊಂಡ ಘೋಷಣಾ ವಾಕ್ಯಗಳನ್ನು ಗುಂಪುಗಳಲ್ಲಿ ತಯಾರಿಸಲು ಹೇಳಬೇಕು. ತಯಾರಿಸುವ ಘೋಷಣೆಗಳು ದೇಶಪ್ರೇಮವನ್ನು ಪ್ರಕಟಿಸುವಂತಹವುಗಳಾಗಿರಬೇಕು.

## ವಿದೇಶೀ ಬಟ್ಟೆ ಬಹಿಷ್ಕಾರ

ವಿದೇಶೀ ವಸ್ತುಗಳ ಬಹಿಷ್ಕಾರವು ಅಸಹಕಾರ ಚಳುವಳಿಯಲ್ಲಿ ಅತ್ಯಂತ ಯಶಸ್ವಿಯಾದುದಾಗಿತ್ತು. ಸ್ವಯಂ ಸೇವಕರು ಮನೆ ಮನೆಗಳಿಗೆ ಹೋಗಿ ವಿದೇಶಿ ಬಟ್ಟೆಗಳನ್ನು ಸಂಗ್ರಹಿಸಿದರಲ್ಲದೆ ಪ್ರದೇಶದ ಎಲ್ಲ ಜನರೂ ಒಟ್ಟು ಸೇರಿಕೊಂಡು ಆ ಬಟ್ಟೆಗಳಿಗೆ ಬೆಂಕಿ ಹಚ್ಚುತ್ತಿದ್ದರು. ವಿದೇಶೀ ಬಟ್ಟೆಗಳನ್ನು ಮಾರಾಟ ಮಾಡುವ ಅಂಗಡಿಗಳನ್ನು ಪ್ರತಿಭಟಿಸುವುದೂ ಬಹಿಷ್ಕಾರ ಚಳುವಳಿಯ ಭಾಗವಾಗಿತ್ತು. ಭಾರತಕ್ಕೆ ಆಮದು ಮಾಡುವ ವಿದೇಶೀ ಬಟ್ಟೆಯ ಮೌಲ್ಯವು 1920–21ರಲ್ಲಿ 120 ಕೋಟಿಯಿಂದ 1921–22ರಲ್ಲಿ 57 ಕೋಟಿ ರೂಪಾಯಿಯಾಗಿ ಕಡಿಮೆಯಾಯಿತು.

ಪ್ರತಿಯೊಂದು ಗುಂಪಿನವರಿಗೂ ಅವರು ತಯಾರಿಸಿದ ಘೋಷಣಾ ವಾಕ್ಯವನ್ನು ಮಂಡಿಸಲು ಸಂದರ್ಭವನ್ನೊದಗಿಸಿದ ಬಳಿಕ ಅಸಹಕಾರ ಚಳುವಳಿಯು ಬ್ರಿಟಿಷರಿಗೆದುರಾಗಿ ನಡೆದ ಚಳುವಳಿಗಳಲ್ಲಿ ಅತ್ಯಂತ ಪ್ರಬಲವಾದೊಂದು ಚಳುವಳಿಯಾಗಿತ್ತೆಂದೂ ಅಹಿಂಸೆಯು ಅತ್ಯಂತ ಬಲವಾದ ಹೋರಾಟದ ಆಯುಧವೆಂಬ ಮನೋಭಾವವು ರೂಪುಗೊಳ್ಳುವ ರೀತಿಯಲ್ಲಿ ಕೆಳಗೆ ಕೊಟ್ಟಿರುವಂತೆ ಕ್ರೋಢೀಕರಿಸಬೇಕು.

- ತೆರಿಗೆ ನಿಷೇಧ ಹಾಗೂ ವಿದೇಶಿ ಬಟ್ಟೆಯ ಬಹಿಷ್ಕಾರವು ಬ್ರಿಟಿಷ್ ಸರಕಾರದ ಆದಾಯದ ಕುಸಿತಕ್ಕೆ ಕಾರಣವಾಯಿತು.
- ನ್ಯಾಯಾಲಯ, ವಿದ್ಯಾಲಯ, ಮತದಾನ ಮೊದಲಾದವುಗಳ ಬಹಿಷ್ಕಾರವು ಬ್ರಿಟಿಷ್ ವಿರುದ್ಧ ಮನೋಭಾವವು ಬಲಗೊಂಡಿದೆಯೆಂಬ ಸೂಚನೆಯನ್ನಿತ್ತಿತು.

### ಪೂರ್ಣ ಸ್ವರಾಜ್ಯ ಮತ್ತು ನಾಗರಿಕ ನಿಯಮ ಉಲ್ಲಂಘನೆ

1929ರ ಲಾಹೋರ್ ಕಾಂಗ್ರೆಸ್ ಸಮ್ಮೇಳನದ ಪ್ರಾಧಾನ್ಯ ಹಾಗೂ ನಾಗರಿಕ ನಿಯಮ ಉಲ್ಲಂಘನೆಯ ಔಚಿತ್ಯವನ್ನು ಈ ಪಾಠಭಾಗದ ಮೂಲಕ ವಿನಿಮಯ ಮಾಡುವುದಾಗಿದೆ.

## ಪೂರ್ಣ ಸ್ವರಾಜ್ಯ

1929 ಡಿಸೆಂಬರ್ 3ರ ಮಧ್ಯರಾತ್ರಿ ರಾವಿ ನದಿ ತೀರದಲ್ಲಿ ಭಾರತ ಸ್ವಾತಂತ್ರ್ಯದ ತ್ರಿವರ್ಣ ಪತಾಕೆಯನ್ನು ಅನಾವರಣಗೊಳಿಸಿದರು. ಸಂಘಟನೆ ಮತ್ತು ಜನರಿಗೆ ಬೇಕಾಗಿ ಕಾಂಗ್ರೆಸ್ ರೂಪುಗೊಳಿಸಿದ ಮೊದಲ ಕಾರ್ಯವೆಂದರೆ ಜನವರಿ 26ರಂದು ದೇಶದಾದ್ಯಂತ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಿ, ಅದರಲ್ಲಿ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಒಟ್ಟಾಗಿ ಏರುಸ್ವರದಲ್ಲಿ ಓದುವುದಾಗಿತ್ತು. ಗ್ರಾಮ ಹಾಗೂ ಪಟ್ಟಣಗಳಲ್ಲಿ ಸಣ್ಣ ಮತ್ತು ದೊಡ್ಡದಾದ ಸಭೆಗಳಲ್ಲಿ ಜನರು ದೇಶೀಯ ಪತಾಕೆಯನ್ನು ಎತ್ತಿ ಹಿಡಿದು ಪ್ರತಿಜ್ಞೆಗೈದರು.

'ಸ್ವತಂತ್ರರಾಗಲು, ಅವರವರ ಪರಿಶ್ರಮದ ಫಲವನ್ನು ಅನುಭವಿಸಲು, ಜೀವನಕ್ಕೆ ಅಗತ್ಯವಾದವುಗಳನ್ನು ಪಡೆಯಲು, ತನ್ಮೂಲಕ ಅಭಿವೃದ್ಧಿ ಹೊಂದಲಿರುವ ಪೂರ್ಣ ಅವಕಾಶವನ್ನು ಪಡೆಯುವುದು ಇತರ ಜನರಂತೆಯೇ ಭಾರತಿಯರದ್ದೂ ಹಕ್ಕಾಗಿದೆ ಎಂದು ನಾವು ನಂಬಿದ್ದೇವೆ. ಯಾರಾದರೊಬ್ಬರಿಗೆ ಸರಕಾರವು ಈ ಹಕ್ಕುಗಳನ್ನು ನಿಷೇಧಿಸಿ ಅವರನ್ನು ದಮನಿಸಿದರೆ ಜನರಿಗೆ ಅದನ್ನು ಬದಲಾಯಿಸಲು ಅಥವಾ ಪೂರ್ಣವಾಗಿ ನಿರ್ನಾಮಗೊಳಿಸಲಿರುವ ಎಲ್ಲ ಹಕ್ಕೂ ಇದೆಯೆಂದು ನಾವು ನಂಬಿದ್ದೇವೆ. ಆದುದರಿಂದ ಭಾರತವು ಬ್ರಿಟನಿನೊಂದಿಗಿರುವ ಸಂಬಂಧವನ್ನು ಬಿಟ್ಟು ಬಿಡಬೇಕು ಹಾಗೂ ಪೂರ್ಣ ಸ್ವಾತಂತ್ರ್ಯವನ್ನು ಗಳಿಸಬೇಕೆಂದು ನಾವು ನಂಬಿದ್ದೇವೆ. ಪೂರ್ಣ ಸ್ವಾತಂತ್ರ್ಯವನ್ನು ಗಳಿಸುವುದಕ್ಕಾಗಿ ಕಾಂಗ್ರೆಸ್ ಪ್ರತಿಯೊಂದು ಸಮಯದಲ್ಲಿ ಹೊರಡಿಸುವ ಎಲ್ಲ ಸೂಚನೆಗಳನ್ನೂ ಜಾರಿಗೊಳಿಸುವೆವು ಎಂದು ನಾವು ದೃಢ ಪ್ರತಿಜ್ಞೆಗೈಯ್ಯುತ್ತೇವೆ.'

ಭಾರತವು ಸ್ವಾತಂತ್ರ್ಯವನ್ನು ಗಳಿಸುವುದರಲ್ಲಿ ಗಾಂಧಿಜಿ ಮುಂದಿರಿಸಿದ ಬೇಡಿಕೆಗಳು ಎಷ್ಟರ ಮಟ್ಟಿಗೆ ಸೂಕ್ತವಾಗಿವೆ? ಚರ್ಚೆ.

ಪಠ್ಯಪುಸ್ತಕದ 11ನೇ ಪುಟವನ್ನು ವೈಯಕ್ತಿಕವಾಗಿ ಓದಿ ಟಿಪ್ಪಣಿಗಳನ್ನು ತಯಾರಿಸಲು ಹೇಳಬೇಕು.

ಇರ್ಫಾನ್ ಹಬೀಬ್ 'ದೇಶೀಯ ಸಮರತ್ತಿಲೆ ವಯಿತ್ತಾರಗಳ್' ಪುಸ್ತಕದ 52ನೇ ಪುಟದಿಂದ 60ನೇ ಪುಟದ ವರೆಗೆ ಓದಿ ಅಧ್ಯಾಪಕ /ಅಧ್ಯಾಪಿಕೆ, ನಾಗರಿಕ ನಿಯಮ ಉಲ್ಲಂಘನೆಯ ಕುರಿತು ವಿವರಿಸುವುದು ಸ್ಪಷ್ಟವಾದ ಆಶಯ ಗಳಿಸಲು ಸಹಕಾರಿಯಾಗಬಹುದು. ಟಿಪ್ಪಣಿಗಳನ್ನು ಮಂಡಿಸಲು ಕೆಲವರಿಗೆ ಸಂದರ್ಭವನ್ನೊದಗಿಸಿದ ನಂತರ ಅಗತ್ಯವಿರುವ ಉತ್ತಮಪಡಿಸುವಿಕೆಯೊಂದಿಗೆ ಕ್ರೋಡೀಕರಿಸಬೇಕು.

**ಕ್ರೋಡೀಕರಣ**

- 'ಪೂರ್ಣ ಸ್ವರಾಜ್ಯ' ಎಂಬ ಆಶಯವು ರಾಷ್ಟ್ರೀಯ ಹೋರಾಟದ ಗುರಿಯಾಯಿತು.
- ಅತ್ಯಂತ ಜನಪರವಾದ ಆವಶ್ಯಕತೆಗಳನ್ನು ಗಾಂಧಿಜಿ ಮುಂದಿರಿಸಿದರು.

ನಾಗರಿಕ ನಿಯಮ ಉಲ್ಲಂಘನೆಯ ಭಾಗವಾಗಿ ಗಾಂಧೀಜಿ ಉಪ್ಪನ್ನು ಹೋರಾಟದ ಆಯುಧವನ್ನಾಗಿಸಿದ ಔಚಿತ್ಯದ ಕುರಿತು ತಿಳುವಳಿಕೆ ಗಳಿಸುವ ರೀತಿಯಲ್ಲಿ ಉಪ್ಪಿನ ಸತ್ಯಾಗ್ರಹವೆಂಬ ಆಶಯವನ್ನು ವಿನಿಮಯ ಮಾಡಬೇಕು. ಉಪ್ಪನ್ನು ಹೋರಾಟದ ಆಯುಧವನ್ನಾಗಿ ಮಾಡಲು ಗಾಂಧೀಜಿಯನ್ನು ಪ್ರೇರೇಪಿಸಿದ ಘಟಕಗಳನ್ನು ವಿಶ್ಲೇಷಿಸುತ್ತಾ ಒಂದು ICT ಪ್ರಸೆಂಟೇಶನ್ ತಯಾರಿಸಬೇಕು. ಗುಂಪುಗಳಾಗಿ ವಿಂಗಡಿಸಿದ ನಂತರ ಪಠ್ಯಪುಸ್ತಕದ 111, 112ನೇ ಪುಟಗಳನ್ನು ಓದಲು ಹೇಳಬೇಕು.

*www.Indiavideo.org,*
*m.youtube.com footage events salt satyagrah and clippings*

ಇವುಗಳನ್ನು ಬಳಸಿಕೊಂಡು ಐಸಿಟಿ ಪ್ರಸೆಂಟೇಶನ್‌ನ್ನು ತಯಾರಿಸಬಹುದು.

ಪ್ರಸೆಂಟೇಶನನ್ನು ತಯಾರಿಸುವುದಕ್ಕಾಗಿ ಪ್ರತಿಯೊಂದು ಗುಂಪಿನವರೂ ಸ್ಟೋರಿಬೋರ್ಡನ್ನು ತಯಾರಿಸುವಂತೆ ಹೇಳಬೇಕು. ಪ್ರಸೆಂಟೇಶನ್ ಸ್ಲೈಡಿನಲ್ಲಿ ಒಳಪಡಿಸಬೇಕಾದ ಮಾಹಿತಿಗಳನ್ನು ಹಾಗೂ ಚಿತ್ರಗಳನ್ನು ಪ್ರತಿಯೊಂದು ಸ್ಟೋರಿಬೋರ್ಡ್‌ನಲ್ಲಿ ವಿವರಿಸಬೇಕು. ಉಪ್ಪನ್ನು ಹೋರಾಟದ ಆಯುಧವನ್ನಾಗಿ ಮಾಡಲಿರುವ ಕಾರಣವನ್ನು ಮೊದಲ ಸ್ಲೈಡುಗಳಲ್ಲಿ ವಿಶ್ಲೇಷಿಸಿದ ನಂತರ ದಂಡಿಯಾತ್ರೆಯ ವೀಡಿಯೋ, ಚಿತ್ರ ಇತ್ಯಾದಿಗಳನ್ನು ಸೇರಿಸಬೇಕು. ಸಮಾನವಾದ ಉಪ್ಪು ಸತ್ಯಾಗ್ರಹಗಳ ವಿವರಣೆ ಹಾಗೂ ಚಿತ್ರಗಳನ್ನು ಒಳಪಡಿಸಿಕೊಂಡು ಪ್ರಸೆಂಟೇಶನ್‌ನ್ನು ಮಂಡಿಸಲಿ.

ಗುಂಪುಗಳ ಮಂಡನೆಯ ನಂತರ ಪಾಠಭಾಗವನ್ನು ಕ್ರೋಡೀಕರಿಸಬೇಕು.

**ಕ್ರೋಡೀಕರಣ**

- ಉಪ್ಪಿನಂತಹ ಜನಸಾಮಾನ್ಯರ ಉತ್ಪನ್ನಗಳು ಜನಬೆಂಬಲ ಹೆಚ್ಚಿಸಲು ಸೂಕ್ತವಾದ ಹೋರಾಟದ ಆಯುಧ.
- ಜನಸಾಮಾನ್ಯನಿಗೂ ಮನದಟ್ಟಾಗುವಂತೆ ಬ್ರಿಟಿಷರ ಶೋಷಣೆಯು ತೆರೆದಿರಿಸಲ್ಪಟ್ಟಿತು.
- ವಸಾಹತು ಶಾಹಿ ಆಡಳಿತವನ್ನು ಜನಾಂದೋಲನದ ಮೂಲಕ ಕೊನೆಗೊಳಿಸಲು ಸಾಧ್ಯವಿದೆ ಎಂಬುದನ್ನು ಜನರಿಗೆ ಮನದಟ್ಟು ಮಾಡಿದರು.

## ಬ್ರಿಟಿಷರೇ ಭಾರತ ಬಿಟ್ಟು ತೊಲಗಿರಿ

ಕ್ವಿಟ್ ಇಂಡಿಯಾ ಚಳುವಳಿಯು ನಾಗರಿಕ ನಿಯಮ ಉಲ್ಲಂಘನೆಯಂತೆಯೇ ಜನಪರವಾದೊಂದು ಹೋರಾಟವಾಗಿತ್ತು. ಕ್ವಿಟ್ ಇಂಡಿಯಾ ಚಳುವಳಿಯು ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಕೊನೆಯ ಜನಸಾಮಾನ್ಯರ ಹೋರಾಟವಾಗಿತ್ತು. ಇದಕ್ಕೆ ಲಭಿಸಿದ ಜನರ ಬೆಂಬಲ ಹಾಗೂ ಬ್ರಿಟಿಷರು ಭಾರತವನ್ನು ತೊರೆಯಲು ಕಾರಣವಾದ ಸನ್ನಿವೇಶವನ್ನು ಪಾಠಭಾಗದ ವಿನಿಮಯದ ಮೂಲಕ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು.

**ಚರ್ಚೆ**

ಪಠ್ಯಪುಸ್ತಕದ 113ನೇ ಪುಟವನ್ನು ವೈಯಕ್ತಿಕವಾಗಿ ಓದಲು ಹೇಳಬೇಕು. ಅನಂತರ ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ ಹೆಚ್ಚಿನ ಓದಿಗಾಗಿ ಇಂಡ್ಯಯುಡೆ ಸ್ವಾತಂತ್ರ್ಯ ಸಮರಂ–ಬಿಪಿನ್‌ಚಂದ್ರ– 510ನೇ ಪುಟದಿಂದ 514ನೇ ಪುಟದ ವರೆಗೆ ನೀಡಬೇಕು. ಕ್ವಿಟ್ ಇಂಡಿಯಾ ಚಳುವಳಿಯ ಉದ್ದೇಶ ಹಾಗೂ ಅದು ಮುಂದಿರಿಸಿದ ನಿರ್ದೇಶಗಳ ಕುರಿತು ಗುಂಪುಗಳಲ್ಲಿ ತಯಾರಿಸಿದ ಚರ್ಚಾ ಟಿಪ್ಪಣಿಯನ್ನು

ತರಗತಿಯಲ್ಲಿ ಮಂಡಿಸಲಿ. ಎಲ್ಲ ಗುಂಪುಗಳ ಮಂಡನೆಯ ನಂತರ ಕೆಳಗೆ ಕೊಟ್ಟಿರುವಂತೆ ಕ್ರೋಡೀಕರಿಸಬಹುದು.

- ಇಂಡಿಯನ್ ನೇಶನಲ್ ಕಾಂಗ್ರೆಸ್ ರೂಪು ನೀಡಿದುದು ಅಹಿಂಸೆಯಲ್ಲಿ ಹುದುಗಿ ಕೊಂಡಿರುವ ಚಳುವಳಿಗಾಗಿದೆ.
- ಸಂವಿಧಾನ ಸುಧಾರಣೆಗೆ ಬ್ರಿಟಿಷರು ತೋರಿಸಿದ ವಿಮುಖತೆ, ಬೆಲೆಯೇರಿಕೆ, ಎರಡನೇ ಜಾಗತಿಕ ಯುದ್ಧದಲ್ಲಿ ಬ್ರಿಟನ್ ಸೋಲಬಹುದೆಂಬ ಊಹೆ ಇವುಗಳೆಲ್ಲ ಹೋರಾಟಕ್ಕೆ ಕಾರಣವಾದ ಘಟಕಗಳಾಗಿವೆ.
- ಹೋರಾಟಕ್ಕೆ ಸಂಬಂಧಿಸಿದ ಗಾಂಧೀಜಿ ನೀಡಿದ ನಿರ್ದೇಶನಗಳು ಭಾರತದ ಸಂಪೂರ್ಣ ಸ್ವಾತಂತ್ರ್ಯವನ್ನು ಗುರಿಯಾಗಿಸಿದ್ದವು ಗಳಾಗಿವೆ.
- ಬ್ರಿಟಿಷರು ಚಳುವಳಿಯನ್ನು ನಿಷ್ಠುರವಾಗಿ ದಮನಿಸಿದರೂ ಜನಾಂದೋಲನಗಳನ್ನು ತಡೆಯಲು ಸಾಧ್ಯವಾಗಲಿಲ್ಲ.
- ಕೆಲವು ಪ್ರದೇಶಗಳಲ್ಲಿ ಹೋರಾಟವು ಹಿಂಸಾಗ್ರಸ್ತವಾಯಿತು.

## ಪ್ರಶ್ನೋತ್ತರ

ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿದ ನಂತರ ಪತ್ಯ ಪುಸ್ತಕದ 106ನೇ ಪುಟದಿಂದ 113ನೇ ಪುಟದ ವರೆಗೆ ಭಾಗಗಳನ್ನು ಓದಿ ಗಾಂಧಿಜಿಗೆ ಸಂಬಂಧಿಸಿದ ಪ್ರಶ್ನೆಗಳು ಮತ್ತು ಅವುಗಳಿಗಿರುವ ಉತ್ತರಗಳನ್ನು ತಯಾರಿಸಲು ಹೇಳಬೇಕು.

ಪ್ರತಿಯೊಂದು ಗುಂಪಿನವರೂ ಪರಸ್ಪರ ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ಬರೆಯಲಿ. ಅಗತ್ಯವಿರುವ ಸನ್ನಿವೇಶಗಳಲ್ಲಿ ಅಧ್ಯಾಪಕರು ಮಧ್ಯಪ್ರವೇಶಿಸಬೇಕು. ಕೆಲವು ಪ್ರಶ್ನೆ ಮಾದರಿಗಳನ್ನು ಕೆಳಗೆ ಕೊಡಲಾಗಿದೆ.

- ಗಾಂಧೀಜಿ ಮಧ್ಯಪ್ರವೇಶಿಸಿದ ಆರಂಭಕಾಲದ ಚಳುವಳಿಗಳು ಯಾವುವು?
- ಚಂಪಾರನ್‌ನ ನೀಲ ಕೃಷಿಕರ ಹೋರಾಟ, ಅಹಮ್ಮದಾಬಾದ್‌ನ ಬಟ್ಟೆ ಗಿರಣಿ ಕಾರ್ಮಿಕರ ಹೋರಾಟ, ಖೇಡಾ ಕೃಷಿಕರ ಹೋರಾಟ.
- ಗಾಂಧೀಜಿ ಮಧ್ಯಪ್ರವೇಶಿಸಿದ ಆರಂಭಕಾಲದ ಹೋರಾಟಗಳ ವಿಶೇಷತೆಗಳು ಯಾವುವು?
  ಪ್ರಾದೇಶಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ಆಧಾರವಾಗಿರಿಸಿದವುಗಳಾಗಿದ್ದವು.
- ಖೇಡಾ ಕೃಷಿಕರ ಹೋರಾಟದಲ್ಲಿ ಗಾಂಧೀಜಿ ಯಾವ ರೀತಿಯ ಹೋರಾಟ ವಿಧಾನವನ್ನು ಸ್ವೀಕರಿಸಿದರು?
  ಸತ್ಯಾಗ್ರಹ ಮತ್ತು ತೆರಿಗೆ ನಿಷೇಧ.
- ಯಾವ ಪ್ರತಿಭಟನೆಗೆ ಸಂಬಂಧಿಸಿ ಗಾಂಧೀಜಿಯು ರಾಷ್ಟ್ರೀಯ ಹೋರಾಟದಲ್ಲಿ ಪಾಲ್ಗೊಂಡರು ರೌಲಟ್ ನಿಯಮಕ್ಕೆ ವಿರುದ್ಧವಾದ ಪ್ರತಿಭಟನೆಯಲ್ಲಿ
- ರೌಲಟ್ ವಿರುದ್ಧ ಹೋರಾಟಕ್ಕೆ ಸಂಬಂಧಿಸಿ ನಡೆದ ದಾರುಣ ಘಟನೆ ಯಾವುದು?
  ಜಲಿಯನ್ ವಾಲಾಬಾಗ್ ಕಗ್ಗೊಲೆ.
- ಗಾಂಧೀಜಿಯ ನೇತೃತ್ವದಲ್ಲಿ ನಡೆದ ಮೊದಲ ರಾಷ್ಟ್ರೀಯ ಚಳುವಳಿ ಯಾವುದು?
  ಅಸಹಕಾರ ಚಳುವಳಿ
- ಖಿಲಾಫತ್ ಚಳುವಳಿಯನ್ನು ಭಾರತದ ರಾಷ್ಟ್ರೀಯ ಚಳುವಳಿಯೊಂದಿಗೆ ಬೆಸೆದುದರ ಪರಿಣಾಮವೇನು?
  ಹಿಂದೂ–ಮುಸ್ಲಿಂ ಏಕತೆ ಬಲಗೊಂಡಿತು. ಬ್ರಿಟಿಷ್ ವಿರೋಧಿ ಮನೋಭಾವವು ಭಾರತದಾದ್ಯಂತ ವ್ಯಾಪಿಸಿತು.
- ಪೂರ್ಣ ಸ್ವರಾಜ್ಯವೇ ಭಾರತದ ಸ್ವಾತಂತ್ರ್ಯ ಹೋರಾಟದ ಅಂತಿಮ ಗುರಿಯೆಂದು ಘೋಷಿಸಿದ ಕಾಂಗ್ರೆಸ್ ಸಮ್ಮೇಳನ ಯಾನುದು?
  1929ರ ಲಾಹೋರ್ ಸಮ್ಮೇಳನ.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ವಹಿಸಿದ ಪಾತ್ರ ಹಾಗೂ ಭಾರತದ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗಮಯವಾದ ಜೀವನದ ಕುರಿತು ಗೌರವವು ಮೂಡಿ ಬರುವ ರೀತಿಯಲ್ಲಿ ಈ ಎರಡು ಚಟುವಟಿಕೆಗಳನ್ನು ನಡೆಸಬೇತು.

### ವಿಭಿನ್ನ ಹಾದಿಗಳು

ಗಾಂಧೀಜಿಯ ಹೋರಾಟ ವಿಧಾನಗಳಿಗಿಂತ ಭಿನ್ನವಾಗಿ ಭಾರತದ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿದ ಸಂಘಟನೆಗಳು ಮತ್ತು ವ್ಯಕ್ತಿಗಳು ಇದ್ದರೆಂಬ

ತಿಳುವಳಿಕೆಯು ವಿದ್ಯಾರ್ಥಿಗಳಿಗೆ ಲಭಿಸುವ ರೀತಿಯಲ್ಲಿ ಈ ಪಾಠಭಾಗದ ವಿನಿಮಯವನ್ನು ಮಾಡಬೇಕು.

### ಚಂದ್ರಶೇಖರ ಆಜಾದ್ (1906 – 1931)

ಉತ್ತರಪ್ರದೇಶದ ಬದರ್ಕ ಗ್ರಾಮದಲ್ಲಿ ಜನಿಸಿದ ಚಂದ್ರಶೇಖರರು ಸಂಸ್ಕೃತ ಅಧ್ಯಯನಕ್ಕಾಗಿ ಬನಾರಸ್‌ಗೆ ಬಂದರು. ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಕಾರ್.ಪ್ರವೃತ್ತರಾದುದರಿಂದ ಅವರು ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಮೊತ್ತಮೊದಲ ಬಾರಿಗೆ ಶಿಕ್ಷಿಸಲ್ಪಟ್ಟರು. ನ್ಯಾಯಾಲಯದಲ್ಲಿ ಮೆಜಿಸ್ಟ್ರೇಟ್ ಹೆಸರು ಕೇಳಿದಾಗ ಅವರು ತನ್ನ ಹೆಸರು ಆಜಾದ್(ಸ್ವಾತಂತ್ರ್ಯ) ಎಂದರು. ಹದಿನೈದು ಚಾಟಿ ಏಟುಗಳ ಶಿಕ್ಷೆ ವಿಧಿಸಿದಾಗ ಪ್ರತಿಯೊಂದು ಏಟು ಬಿದ್ದಾಗಲೂ 'ಭಾರತ್ ಮಾತಾಕಿ ಜೈ' ಎಂದು ಏರುಸ್ವರದಲ್ಲಿ ಹೇಳುತ್ತಾ ಶಿಕ್ಷೆಯನ್ನನುಭವಿಸಿದರು. ಅಂದಿನಿಂದ ಚಂದ್ರಶೇಖರ ಆಜಾದ್ ಎಂಬ ಹೆಸರನ್ನಿಟ್ಟುಕೊಂಡ ಅವರು ಬ್ರಿಟಿಷರಿಗೆ ಸೆರೆ ಹಿಡಿಯಲು ಸಿಗುವುದಿಲ್ಲವೆಂದೂ ಸ್ವಾತಂತ್ರ್ಯಕ್ಕಾಗಿ ಮರಣವನ್ನಪ್ಪಲೂ ಸಿದ್ಧ ಎಂಬ ಪ್ರತಿಜ್ಞೆಯನ್ನು ಗೈದರು. 1931 ಫೆಬ್ರವರಿ 27ರಂದು ಅಹಾಬಾದಿನಲ್ಲಿ ಪ್ರಯತ್ನಿಸಿದಾಗ ಇಬ್ಬರು ಪೋಲೀಸರನ್ನು ಗುಂಡು ಹಾರಿಸಿ ಕೊಂದು ತಾನು ಸ್ವಯಂ ಗುಂಡು ಹಾರಿಸಿ ಮರಣ ಹೊಂದಿದರು.

### ಭಗತ್ ಸಿಂಗ್(1907 – 1931)

1907 ಸೆಪ್ಟಂಬರ್ 27ರಲ್ಲಿ ಲಯನ್‌ಪುರ್ ಜಿಲ್ಲೆಯ ಬಂಕ್(ಈಗ ಪಾಕಿಸ್ತಾನದಲ್ಲಿ) ಜನಿಸಿದರು. ಬಾಲ್ಯದಿಂದಲೇ ಕುಟುಂಬದ ಹಿರಿಯ ದೇಶಭಕ್ತಿಯನ್ನು ನೋಡುತ್ತಾ ಬೆಳೆದರು. ಭಾರತದ ರಾಷ್ಟ್ರೀಯ ಕ್ರಾಂತಿಕಾರಿ ಸಂಘಟನೆಗಳಲ್ಲಿ ಅತ್ಯಧಿಕ ಪ್ರಭಾವ ಶಾಲಿ ವ್ಯಕ್ತಿಯಾಗಿ ಪರಿಗಣಿಸಲ್ಪಟ್ಟರು. ವಿದ್ಯಾರ್ಥಿಯಾಗಿರುವಾಗಲೇ ಗಾಂಧೀಜಿಯವರ ಅಸಹಕಾರ ಚಳುವಳಿಯಲ್ಲಿ ಸಕ್ರಿಯರಾಗಿದ್ದರು. ಸೆರೆಮನೆಯ ಬೇಧಭಾವಕ್ಕೆದುರಾಗಿ ಅವರು ಸೆರೆಮನೆಯಲ್ಲಿ ನಿರಾಹಾರ ಸತ್ಯಾಗರಹವನ್ನು ನಡೆಸಿದರು.

**ವಿಚಾರಗೋಷ್ಠಿ**

ವಿಚಾರಗೋಷ್ಠಿ ಪ್ರಬಂಧವನ್ನು ತಯಾರಿಸುವುದಕ್ಕಾಗಿ ವಿದ್ಯಾರ್ಥಿಗಳನ್ನು 3 ಗುಂಪುಗಳಾಗಿ ವಿಂಗಡಿಸಬೇಕು.

### ಶಿವ್‌ರಾಂ ರಾಜಗುರು (1908 – 1931)

1908 ಆಗಸ್ಟ್ 24ರಂದು ಮಹಾರಾಷ್ಟ್ರದಲ್ಲಿ ಜನನ. ಚಿಕ್ಕಂದಿನಿಂದಲೇ ಬ್ರಿಟಿಷರ ಕ್ರೂರತೆಯನ್ನು ನೋಡುತ್ತಾ ಬೆಳೆದ ಅವರು ಹಿಂದೂಸ್ತಾನ್ ಸೋಶಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಶನ್‌ನ್ನು ಬ್ರಿಟಿಷರಿಗೆದುರಾಗಿ ಹೋರಾಡಿದರು. ಲಾಹೋರ್ ಗೂಢಾಲೋಚನೆ, ದೆಹಲಿ ಅಸೆಂಬ್ಲಿ ಹಾಲ್ ಬಾಂಬು ವ್ಯಾಜ್ಯ ಮೊದಲಾದ ಆರೋಪಗಳನ್ನು ಹೊರಿಸಿ ನೇಣಿಗೇರಿಸಿದರು.

### ಸುಖ್ ದೇವ್ ತಾಪರ್(1907 – 31)

ಲುಧಿಯಾನಾದಲ್ಲಿ ಜನಿಸಿದ ಸುಖ್ ದೇವ್ ಭಗತ್ ಸಿಂಗ್ ಹಾಗೂ ರಾಜಗುರುವಿನೊಂದಿಗೆ ಕ್ರಾಂತಿಕಾರಿ ಹೋರಾಟಗಳಲ್ಲಿ ಭಾಗವಹಿಸಿದರಲ್ಲದೆ ಅವರೊಂದಿಗೆ ನೇಣಿಗೇರಿಸಲ್ಪಟ್ಟರು.

ಪ್ರತಿಯೊಂದು ಗುಂಪಿನವರೂ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಪ್ರಬಂಧವನ್ನು ತಯಾರಿಸಲು ಹೇಳಬೇಕು.

- ಗುಂಪು 1 - ಸ್ವರಾಜ್ಯ ಚಳುವಳಿ
- ಗುಂಪು 2 - ಕ್ರಾಂತಿಕಾರಿ ಚಳುವಳಿಗಳು
- ಗುಂಪು 3 - ಸಮಾಜವಾದಿ ಚಳುವಳಿಗಳು

ಪಠ್ಯಪುಸ್ತಕದ 114ರಿಂದ 116ರ ವರೆಗಿನ ಪುಟಗಳನ್ನು ಓದಿದ ನಂತರ ಮಾಹಿತಿ ಸಂಗ್ರಹಕ್ಕಾಗಿ ಭಾರತ ಸ್ವಾತಂತ್ರ್ಯ ಹೋರಾಟ ಬಿಪನ್ ಚಂದ್ರ 254ನೇ ಪುಟದಿಂದ 325ರ ವರೆಗಿನ ಭಾಗ, ಇರ್ಫಾನ್ ಹಬೀಬಿನ ದೇಶೀಯ ಸಮರತ್ತಿಲೆ ವಯತ್ತಾರ್‌ಗಳ್ ಎಂಬಿವುಗಳನ್ನು ನೀಡಬಹುದು.

ವಿಚಾರಗೋಷ್ಠಿಯಲ್ಲಿ ಪ್ರತಿಯೊಂದು ಗುಂಪಿನವರೂ ತಯಾರಿಸಿದ ಪ್ರಬಂಗಳನ್ನು ಮಂಡಿಸಲು ಸಂದರ್ಭವನ್ನೊದಗಿಸಬೇಕು. ವಿಚಾರಗೋಷ್ಠಿಯ ಆಧಾರದಲ್ಲಿ ತಯಾರಿಸುವ ವಿಚಾರಗೋಷ್ಠಿ ವರದಿಯನ್ನು ತರಗತಿಯಲ್ಲಿ ಮಂಡಿಸಿ ಕೆಳಗೆ ಕೊಟ್ಟಿರುವಂತೆ ಕ್ರೋಡೀಕರಿಸಬಹುದು.

ಗಾಂಧೀಜಿಯ ಹೋರಾಟ ವಿಧಾನಗಳಿಗಿಂತ ವಿಭಿನ್ನವಾಗಿ ಕಾರ್ಯವೆಸಗುತ್ತಿದ್ದ ಅನೇಕ ದೇಶಪ್ರೇಮಿಗಳು ಹಾಗೂ ರಾಷ್ಟ್ರೀಯ ಚಳುವಳಿಗಳು ಭಾರತದಲ್ಲಿದ್ದುವು. ವಿಭಿನ್ನ ಹಾದಿಗಳಲ್ಲಿ ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಡುವುದೇ ಇವರ ಗುರಿಯಾಗಿತ್ತು.

## ಮೌಲ್ಯನಿರ್ಣಯ ಪ್ರಶ್ನೆಗಳು

- ಗಾಂಧೀಜಿ ಭಾರತದಲ್ಲಿ ಮಧ್ಯಪ್ರವೇಶಿಸಿದ ಆರಂಭಕಾಲದ ಹೋರಾಟಗಳು ಯಾವುವು? ಅದರ ವಿಶೇಷತೆಗಳು ಯಾವುವು?
- ಗಾಂಧೀಜಿಯ ಆರಂಭ ಕಾಲದ ಹೋರಾಟಗಳ ಪರಿಣಾಮಗಳೇನಾಗಿದ್ದುವು?
- ಅಸಹಕಾರ ಚಳುವಳಿಯ ಭಾಗವಾಗಿ ಗಾಂಧೀಜಿ ನೀಡಿದ ಆಹ್ವಾನಕ್ಕೆ ಜನರು ಹೇಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದರು?
- ನಾಗರಿಕ ನಿಯಮ ಉಲ್ಲಂಘನೆಯ ಭಾಗವಾಗಿ ಗಾಂಧೀಜಿ ಯಾವೆಲ್ಲ ಆಶಯಗಳನ್ನು ಮುಂದಿಟ್ಟರು?
- ಕ್ವಿಟ್ ಇಂಡಿಯಾ ಚಳುವಳಿಗೆ ಕಾರಣವಾದ ಘಟಕಗಳು ಯಾವುವು?

## ಆಕರ ಗ್ರಂಥ

*ಇಂಡ್ಯಯುಡೆ ಸ್ವಾತಂತ್ರ್ಯ ಸಮರಂ –ಬಿಪನ್ ಚಂದ್ರ*
*ಆಧುನಿಕ ಇಂಡಿಯಾ –ಬಿಪನ್ ಚಂದ್ರ*
*ನನ್ನ ಸತ್ಯಾನ್ವೇಷಣೆ –ಮಹಾತ್ಮಾ ಗಾಂಧಿ*
*ದೇಶೀಯ ಸಮರತ್ತಿಲೆ ವಯತ್ತಾರಗಳ್–ಇರ್ಫಾನ್ ಹಬೀಬ್*

## ಅಧ್ಯಾಪಕರಿಂದ ಮೌಲ್ಯನಿರ್ಣಯ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸ ಬೇಕಾದುದು |
|---|---|---|---|
| 1. ಗಾಂಧೀಜಿ ಎಲ್ಲರೂ ಒಪ್ಪುವಂತಹ ನಾಯಕರಾದುದು ಹೇಗೆಂಬುದನ್ನು ಸ್ಪಷ್ಟಪಡಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಯಿತು. | ☐ | ☐ | ☐ |
| 2. ಜಲಿಯನ್ ವಾಲಾಬಾಗ್ ದುರಂತವನ್ನು ವಿಶ್ಲೇಷಿಸಿ ಬ್ರಿಟಿಷರ ಆಡಳಿತ ವಿಧಾನವನ್ನು ಸ್ಪಷ್ಟಪಡಿಸಲು ಸಾಧ್ಯವಾಯಿತು. | ☐ | ☐ | ☐ |
| 3. ಅಸಹಕಾರ ಚಳುವಳಿಯ ವಿಶೇಷತೆಗಳನ್ನು ಮತ್ತು ಪರಿಣಾಮಗಳನ್ನು ವಿಶ್ಲೇಷಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಯಿತು. | ☐ | ☐ | ☐ |
| 4. ಉಪ್ಪಿನ ಸತ್ಯಾಗ್ರಹದ ಔಚಿತ್ಯವನ್ನು ವಿಶ್ಲೇಷಿಸಲು ಎಲ್ಲಾ ವಿದ್ಯಾರ್ಥಿಗಳಿಗೂ ಸಾಧ್ಯವಾಯಿತು. | ☐ | ☐ | ☐ |
| 5. ಕ್ವಿಟ್ ಇಂಡಿಯಾ ಚಳುವಳಿಯ ಹಿನ್ನೆಲೆಯನ್ನು ಸ್ಪಷ್ಟಪಡಿಸಲು ಎಲ್ಲಾ ವಿದ್ಯಾರ್ಥಿಗಳಿಗೂ ಸಾಧ್ಯವಾಯಿತು. | ☐ | ☐ | ☐ |
| 6. ಭಾರತದ ಸ್ವಾತಂತ್ರ್ಯ ಹೋರಾಟದ ವಿಭಿನ್ನ ಹಾದಿಗಳನ್ನು ವಿಶ್ಲೇಷಿಸಲು ಎಲ್ಲಾ ವಿದ್ಯಾರ್ಥಿಗಳಿಗೂ ಸಾಧ್ಯವಾಯಿತು. | ☐ | ☐ | ☐ |
| 7. ಭಾರತದ ಸ್ವಾತಂತ್ರ್ಯ ಹೋರಾಟದ ಕಾರ್ಮಿಕ–ಕೃಷಿಕರ ಹೋರಾಟದ ಪಾತ್ರವನ್ನು ವಿಶ್ಲೇಷಿಸಲು ಸಾಧ್ಯವಾಯಿತು. | ☐ | ☐ | ☐ |



# 6

# ಸ್ವಾತಂತ್ರ್ಯಾನಂತರ ಭಾರತ

ಶತಮಾನಗಳ ಕಾಲದ ವಿದೇಶಿ ಆಡಳಿತ ಹಾಗೂ ಶೋಷಣೆಯ ನಂತರ ಸ್ವತಂತ್ರಗೊಂಡ ಭಾರತವು ಯಾವೆಲ್ಲಾ ಸವಾಲುಗಳನ್ನೆದುರಿಸಿತು ಮತ್ತು ಅವು ಹೇಗೆ ಪರಿಹರಿಸಲ್ಪಟ್ಟು ಆಧುನಿಕ ಭಾರತದ ಸೃಷ್ಟಿಯಾಯಿತೆಂಬುದನ್ನು ಈ ಪಾಠವು ಚರ್ಚಿಸುತ್ತದೆ. ವಿಭಜನೆ ಹಾಗೂ ನಿರಾಶ್ರಿತರ ಪ್ರವಾಹವೂ ಸೇರಿದಂತೆ ಸ್ವತಂತ್ರ ಭಾರತವು ಎದುರಿಸಿದ ಸಮಸ್ಯೆಗಳು ದೇಶೀಯ ರಾಜ್ಯಗಳ ಸಂಯೋಜನೆ, ಭಾಷಾವಾರು ಪ್ರಾಂತ್ಯಗಳ ರೂಪೀಕರಣ, ಆರ್ಥಿಕ ವಲಯದ ಸಾಧನೆಗಳು, ವಿಜ್ಞಾನ–ತಂತ್ರಜ್ಞಾನ ರಂಗದ ಸಾಧನೆಗಳು, ಶೈಕ್ಷಣಿಕ ಪ್ರಗತಿ, ಸಾಂಸ್ಕೃತಿಕ ರಂಗದ ಸಾಧನೆಗಳು/ ಪ್ರಗತಿ, ವಿದೇಶಿ ಧೋರಣೆ ಇತ್ಯಾದಿಗಳನ್ನು ವಿವರವಾದ ವಿಶ್ಲೇಷಣೆಯ ಮೂಲಕ ವಿದ್ಯಾರ್ಥಿಗಳನ್ನು ಆಧುನಿಕ ಆಡಳಿತ ನಿರ್ಮಾಣದಲ್ಲಿ ಪಾಲುಗಾರರಾಗುವಂತೆ ಮಾಡುವುದು ಹಾಗೂ ಪ್ರೇರಣೆಯನ್ನು ನೀಡುವುದೇ ಈ ಪಾಠ ವಿನಿಮಯದ ಉದ್ದೇಶವಾಗಿದೆ. ವಿಜ್ಞಾನ–ತಾಂತ್ರಿಕ ರಂಗದಲ್ಲಿ ಗಳಿಸಿದ ಸಾಧನೆಗಳು ಹಾಗೂ ಅವುಗಳು ಹೇಗೆ ಸಮಾಜದ ಪ್ರಗತಿಗೆ ಸಹಾಯಕವಾಗುತ್ತವೆ ಎಂಬ ತಿಳುವಳಿಕೆಯೂ ಪಾಠದ ವಿನಿಮಯದ ಮೂಲಕ ವಿದ್ಯಾರ್ಥಿಗಳಿಗೆ ಲಭಿಸಲು ಈ ಅಧ್ಯಾಯವು ಸಹಾಯ ಮಾಡುತ್ತದೆ. ಅಲ್ಲದೆ ರಾಷ್ಟ್ರಶಿಲ್ಪಿಗಳಾದ ಮಹಾತ್ಮರೊಡನೆ ಗೌರವ ಮೂಡಲು, ರಾಷ್ಟ್ರವು ಗಳಿಸಿದ ಸಾಧನೆಗಳಲ್ಲಿ ಅಭಿಮಾನಪಡಲು, ಕುಂದುಗಳಿಲ್ಲದೆ ಕಾಪಾಡಿಕೊಂಡು ಬಂದಿರುವ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಸಂರಕ್ಷಣೆಗಾಗಿ ಸ್ವತಃ ಬದಲಾಗಲು, ಭವಿಷ್ಯದ ಭಾರತವನ್ನು ಮುನ್ನಡೆಸಲಿರುವ ಚಾಲಕ ಶಕ್ತಿಯಾಗಿ ವಿದ್ಯಾರ್ಥಿಗಳನ್ನು ಬದಲಾಯಿಸಲಿರುವ ಶಕ್ತಿಯನ್ನೀಯಲು ಈ ಪಾಠವು ಸಹಾಯಮಾಡುತ್ತದೆ.

## ಯೂನಿಟ್ ಫ್ರೇಂ

# 6. ಸ್ವಾತಂತ್ರ್ಯನಂತರ ಭಾರತ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ವಿಭಜನೆ–ಭಾರತ ಮತ್ತು ಪಾಕಿಸ್ತಾನದ ನಡುವಿನ ನಿರಾಶ್ರಿತರ ಪ್ರವಾಹ<br>• ಭಾರತ ಒಕ್ಕೂಟಕ್ಕೆ ದೇಶೀಯ ರಾಜ್ಯಗಳ ಸೇರ್ಪಡೆ<br>• ಭಾಷೆಯ ಆಧಾರದಲ್ಲಿ ಪ್ರಾಂತ್ಯಗಳ ಪುನರ್ವಿಂಗಡನೆ<br>• ಕೇಂದ್ರೀಕೃತ ಆರ್ಥಿಕ ಯೋಜನೆ<br>• ಭಾರತದ ಕೃಷಿ, ಕೈಗಾರಿಕಾ ಪ್ರಗತಿಯಲ್ಲಿ ವೈಜ್ಞಾನಿಕ ತಾಂತ್ರಿಕ ಸಾಧನೆಗಳ ಪಾತ್ರ<br>• ಶಿಕ್ಷಣ ರಂಗದ ಸಾಧನೆಗಳು<br>• ಭಾರತದ ವಿದೇಶ ಧೋರಣೆ –ಪಂಚಶೀಲ ತತ್ವಗಳು | • ಸಿನಿಮಾ ಕ್ಲಿಪ್ಪಿಂಗ್‌ಗಳನ್ನು ನೋಡುತ್ತಾರೆ. ಹಸ್ತಪ್ರತಿಯನ್ನು ಓದುತ್ತಾರೆ. ಕೋಮು ಗಲಭೆ ನಡೆದ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸುವುದು.<br>• ವಿಭಜನೆ, ನಿರಾಶ್ರಿತರ ಪ್ರವಾಹ ಹಾಗೂ ಸ್ವತಂತ್ರ ಭಾರತ ಎದುರಿಸಿದ ಸವಾಲುಗಳ ಕುರಿತು ಓದಿನ ಟಿಪ್ಪಣಿಯನ್ನು ತಯಾರಿಸುವುದು<br>• ದೇಶೀಯ ರಾಜ್ಯಗಳ ಸಂಯೋಜನೆಗೆ ಕೈಗೊಂಡ ಕ್ರಮಗಳು, ಪ್ರಧಾನ ಘಟನೆಗಳು–ಓದಿನ ಟಿಪ್ಪಣಿಯನ್ನು ತಯಾರಿಸುವುದು.<br>• ಭಾರತದ ಪ್ರಜಾಪ್ರಭುತ್ವದ ಸಂರಕ್ಷಣೆಯಲ್ಲಿ ಸಂವಿಧಾನ ಹಾಗೂ ಸಾರ್ವಜನಿಕ ಚುನಾವಣೆ ವಹಿಸುವ ಪಾತ್ರ–ಚರ್ಚೆ<br>• ಭಾರತದ ಬೃಹತ್ ಯೋಜನೆಗಳ ಪಟ್ಟಿಯನ್ನು ಪೂರ್ತಿಗೊಳಿಸುವುದು.<br>• ಆರ್ಥಿಕ ಯೋಜನೆಯ ಮೂಲಕ ಅಭಿವೃದ್ಧಿ–ಚರ್ಚೆ<br>• ವಿಜ್ಞಾನಿಗಳನ್ನು ರೋಲ್ ಪ್ಲೇಯ ಮೂಲಕ ಪರಿಚಯಿಸುವುದು, ಅವರ ಕೊಡುಗೆಗಳು–ಪ್ಯಾನೆಲ್ ಚರ್ಚೆ<br>• ಸ್ವತಂತ್ರ ಭಾರತದ ವೈಜ್ಞಾನಿಕ–ತಾಂತ್ರಿಕ ಸಾಧನೆಗಳು–ಚಿತ್ರ ಪ್ರದರ್ಶನ<br>• ಬಾಹ್ಯಾಕಾಶ ಸಂಶೋಧನೆಯ ಕುರಿತು ನೇರವಾಗಿ ತಿಳಿಯಲು ತುಂಬಾವನ್ನು ಸಂದರ್ಶಿಸುವುದು<br>• ಶಿಕ್ಷಣ ಆಯೋಗಗಳು ಡಯಗ್ರಾಂ ಪೂರ್ತಿಗೊಳಿಸುವುದು<br>• ವಿದೇಶೀ ಧೋರಣೆ–ಪಂಚಶೀಲ ತತ್ವಗಳ ಔಚಿತ್ಯ–ಪ್ಯಾನೆಲ್ ಚರ್ಚೆ | • ಸ್ವತಂತ್ರ ಭಾರತವು ಎದುರಿಸಿದ ಸಮಸ್ಯೆಗಳನ್ನು ಕಂಡುಹಿಡಿಯುತ್ತಾರೆ.<br>• ಭಾರತದ ದೇಶೀಯ ರಾಜ್ಯಗಳ ವಿಲೀನೀಕರಣವನ್ನು ಸ್ಪಷ್ಟಪಡಿಸುತ್ತಾರೆ.<br>• ಭಾಷೆಯ ಆಧಾರದಲ್ಲಿ ಪ್ರಾಂತ್ಯ ರೂಪೀಕರಣಕ್ಕೆ ಕಾರಣವಾದ ಸನ್ನಿವೇಶಗಳನ್ನು ವಿಶ್ಲೇಷಿಸುತ್ತಾರೆ.<br>• ಸ್ವತಂತ್ರ ಭಾರತವು ಆರ್ಥಿಕ ರಂಗದಲ್ಲಿ ಗಳಿಸಿದ ಪ್ರಗತಿಯನ್ನು ಸ್ಪಷ್ಟಪಡಿಸುತ್ತಾರೆ.<br>• ವೈಜ್ಞಾನಿಕ ರಂಗದಲ್ಲಿ ಭಾರತವು ಗಳಿಸಿದ ಸಾಧನೆಗಳ ಪಟ್ಟಿ ತಯಾರಿಸುತ್ತಾರೆ.<br>• ಸ್ವತಂತ್ರ ಭಾರತದ ಶಿಕ್ಷಣ ಧೋರಣೆ ಹಾಗೂ ಸಾಂಸ್ಕೃತಿಕ ಸಂಸ್ಥೆಗಳನ್ನು ಅವಲೋಕಿಸುತ್ತಾರೆ.<br>• ಸ್ವತಂತ್ರ ಭಾರತದ ವಿದೇಶಿ ಧೋರಣೆಯನ್ನು ವಿಶ್ಲೇಷಿಸುತ್ತಾರೆ. |

## ಅಧ್ಯಾಯದೆಡೆಗೆ.......

ವಿದೇಶ ಆಡಳಿತವು ಕೊನೆಗೊಳ್ಳುವಾಗ ಇದ್ದ ಭಾರತದ ಚಿತ್ರಣವನ್ನು ಪ್ರವೇಶಕ್ಕಾಗಿ ನೀಡಿರುವ ರವೀಂದ್ರನಾಥ ಠಾಗೋರರ ಗೆರೆಗಳು ಸೂಚಿಸುತ್ತವೆ. ವಿಭಜನೆಯಿಂದಾಗಿ ರೂಪುಗೊಂಡ ನಿರಾಶ್ರಿತರ ಪ್ರವಾಹವು ಇಂದಿನ ಭಾರತವು ಆರಂಭದಲ್ಲಿ ಎದುರಿಸಿದ ಸಮಸ್ಯೆಯಾಗಿದೆ. ಇದರ ತೀವ್ರತೆಯನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಲು ವಿಭಜನೆಯ ಸಮಯದ ಘಟನೆಗಳ ಆಧಾರದಲ್ಲಿ ನಿರ್ಮಿಸಿರುವ ಯಾವುದಾದರೂ ಚಲನಚಿತ್ರದ ಕ್ಲಿಪ್ಪಿಂಗ್‌ನ್ನು ತರಗತಿಯಲ್ಲಿ ತೋರಿಸುತ್ತಾ ವಿದ್ಯಾರ್ಥಿಗಳನ್ನು ಪಾಠದತ್ತ ಕೊಂಡೊಯ್ಯಬಹುದು.

- ಟ್ರಯಲ್ ಟು ಪಾಕಿಸ್ತಾನ್–ಪಮೇಲರೂಕ್ಸ್
- ತಮಸ್ಸ್–ಗೋವಿಂದ್ ನಿಹಲಾನಿ
- ಗರಂಹವಾ–ಎಂ. ಎಸ್. ಸತ್ಯು

ಇವುಗಳಲ್ಲಿ ಯಾವುದಾದರೊಂದು ಅಥವಾ ಫಿಲಮ್ಸ್ ಡಿವಿಷನ್ ಆಫ್ ಇಂಡಿಯಾ ನಿರ್ಮಿಸಿರುವ ಡೋಕ್ಯುಮೆಂಟರಿಗಳನ್ನು ಇದಕ್ಕಾಗಿ ಉಪಯೋಗಿಸ ಬಹುದು.

*www.filmsdivision.org.in*

ಭಾರತ ವಿಭಜನೆಯನ್ನು ಆಧಾರವಾಗಿರಿಸಿ ರಚಿಸಿದ ಕೆಲವು ಪುಸ್ತಕಗಳನ್ನು ಕೆಳಗೆ ನೀಡಲಾಗಿದೆ. ಇವುಗಳಲ್ಲಿ ಯಾವುದಾದರೂ ಪುಸ್ತಕದ ವಿಭಜನೆಯ ಕುರಿತಾದ ಭಾಗದ ನಕಲನ್ನು ತೆಗೆದು ಉಪಯೋಗಿಸಬಹುದು.

- *Tyranny of partition - Hindus in Bangladesh and muslims in India - kerkhoff Kathinka Sinha*
- *Freedom at Midnight - Dominique Lapierre and Larry Collins*
- *India Wins Freedom - Abul Kalam Azad*
- *Imperial Strategy and partition of India - Dr. Rajkumar*

ನಕಲು ಪ್ರತಿಯನ್ನು ಗುಂಪುಗಳ ಓದಿಗಾಗಿ ನೀಡಬಹುದು. ಕೋಮುಗಲಭೆಗಳು ಸರ್ವೇಸಾಮಾನ್ಯ ವಾಗಿದ್ದವು ಹಾಗೂ ಅವುಗಳಿಗೆ ಕಾರಣಗಳು ಏನೆಂಬುದನ್ನು ವಿದ್ಯಾರ್ಥಿಗಳಿಗೆ ಸ್ಪಷ್ಟಪಡಿಸಬಹುದು.

ಕೋಮುಗಲಭೆಗಳು ನಡೆದ ಸ್ಥಳಗಳನ್ನು ವಿದ್ಯಾರ್ಥಿಗಳು ಭಾರತದ ರಾಜಕೀಯ ಭೂಪಟದಲ್ಲಿ ಗುರುತಿಸುತ್ತಾರೆ.

- ಕಲ್ಕತ್ತ, ದೆಹಲಿ, ನವಕಾಲಿ

ಕೋಮುಗಲಭೆಯ ನಂತರದ ಪರಿಣಾಮದಿಂದ ಗಾಂಧೀಜಿಯು ಹುತಾತ್ಮರಾದರು ಎಂದು ವಿಶದೀಕರಿಸಬೇಕು.

ಕೋಮುಗಲಭೆಗಳು ನಿರಾಶ್ರಿತರ ಪ್ರವಾಹಕ್ಕೂ ಗಾಂಧೀಜಿಯು ಹುತಾತ್ಮರಾಗಲೂ ಕಾರಣ ವಾಯಿತೆಂಬ ತಿಳುವಳಿಕೆಯೊಂದಿಗೆ ಚರ್ಚೆಗಳನ್ನು ಕ್ರೋಢೀಕರಿಸ ಬಹುದು. ಅನಂತರ ಪಾಠವನ್ನು ಓದಿ ಭಾರತ–ಪಾಕಿಸ್ತಾನ ವಿಭಜನೆಯು ಹೇಗೆ ನಿರಾಶ್ರಿತರ ಪ್ರವಾಹ ಹಾಗೂ ಕೋಮು ಗಲಭೆಗೆ ಕಾರಣವಾಯಿತೆಂಬುದನ್ನು ಸ್ಪಷ್ಟಪಡಿಸುವ ಓದಿನ ಟಿಪ್ಪಣಿಯನ್ನು ತಯಾರಿಸಲು ವಿದ್ಯಾರ್ಥಿಗಳಲ್ಲಿ ಹೇಳಬೇಕು.

### ದೇಶೀಯ ರಾಜ್ಯಗಳ ವಿಲೀನ

ಪಾಠಭಾಗಕ್ಕೆ ಪ್ರವೇಶಿಸುವುದಕ್ಕಾಗಿ ಕೇರಳ ರಾಜ್ಯ ರೂಪುಗೊಳ್ಳುವುದಕ್ಕಿಂತ ಮೊದಲಿನ ಭೂಪಟವನ್ನು ತರಗತಿಯಲ್ಲಿ ಪ್ರದರ್ಶಿಸಬೇಕು. ನಮ್ಮ ಪ್ರದೇಶವು ಯಾವ ಪ್ರದೇಶವು ಯಾವ ದೇಶೀಯ ರಾಜ್ಯದಲ್ಲಿ ಒಳಪಟ್ಟಿತ್ತು ಎಂಬುದನ್ನು ಕಂಡುಕೊಂಡು ಮಾಹಿತಿಗಳನ್ನು ಕರಿಹಲಗೆಯಲ್ಲಿ ದಾಖಲಿಸಬೇಕು.




- ತಿರುವಿದಾಂಕೂರು
- ಕೊಚ್ಚಿ

ಇಂತಹ ನೂರಾರು ದೇಶೀಯ ರಾಜ್ಯಗಳಿಗೆ ಭಾರತದ ಒಕ್ಕೂಟಕ್ಕೆ ಸೇರಲೋ ಪಾಕಿಸ್ತಾನಕ್ಕೆ ಸೇರಲೋ ಅಥವಾ ಸ್ವತಂತ್ರ ರಾಜ್ಯವಾಗಿ ಉಳಿಯಲಿರುವ ಅಧಿಕಾರವಿತ್ತು. ಆದುದರಿಂದ ದೇಶೀಯ ರಾಜ್ಯಗಳನ್ನು ವಿಲೀನಗೊಳಿಸುವುದು ಅಷ್ಟೊಂದು ಸುಲಭದ ಕೆಲಸವಾಗಿರಲಿಲ್ಲ ಎಂಬುದನ್ನು ವಿದ್ಯಾರ್ಥಿಗಳಿಗೆ ವಿವರಿಸಿ ಹೇಳಬೇಕು. ಈ ಕಾರ್ಯವನ್ನು ಕೈಗೆತ್ತಿಕೊಂಡು ನಡೆಸಿದ್ದರಿಂದ ಸರ್ದಾರ್ ವಲ್ಲಭಭಾಯಿ ಪಟೇಲರನ್ನು 'ಉಕ್ಕಿನ ಮನುಷ್ಯ'ರೆಂಬ ಬಿರುದಿಗೆ ಪಾತ್ರರಾದರು ಎಂಬ ವಿಚಾರವನ್ನೂ ವಿದ್ಯಾರ್ಥಿಗಳ ಗಮನಕ್ಕೆ ತರಬೇಕು. ಸರ್ದಾರ್ ವಲ್ಲಭಭಾಯಿ ಪಟೇಲ್, ಸ್ಟೇಟ್ ಡಿಪಾರ್ಟ್‌ಮೆಂಟಿನ ಕಾರ್ಯದರ್ಶಿಯಾಗಿದ್ದ ವಿ.ಪಿ. ಮೆನೋನ್ ಮೊದಲಾದವರ ಭಾವಚಿತ್ರಗಳನ್ನು ತರಗತಿಯಲ್ಲಿ ಪ್ರದರ್ಶಿಸಬಹುದು.

ದೇಶೀಯ ರಾಜ್ಯಗಳ ವಿಲೀನದ ನಂತರವೂ ಕೆಲವು ಪ್ರದೇಶಗಳು ವಿದೇಶೀ ಆಧಿಪತ್ಯದಲ್ಲಿದ್ದುವು. ಭಾರತದ ರಾಜಕೀಯ ಭೂಪಟವನ್ನು ವೀಕ್ಷಿಸಿ ಈ ಸ್ಥಳಗಳನ್ನು ಕಂಡುಹಿಡಿಯಲು ವಿದ್ಯಾರ್ಥಿಗಳಲ್ಲಿ ಹೇಳಬಹುದು.

- ಗೋವಾ
- ದಾಮನ್
- ಡಿಯು
- ಮಾಹಿ
- ಪೋಂಡಿಚೇರಿ
- ಯಾನಂ
- ಕಾರೈಕಲ್

ಇದಕ್ಕೆ ಭಾರತದ ಬಾಹ್ಯರೇಖಾಚಿತ್ರವನ್ನು ಗುಂಪುಗಳಿಗೆ ನೀಡಿ ಕೆಲಸವನ್ನು ಪೂರ್ತಿಗೊಳಿಸಬಹುದು.

ಮನವೊಲಿಸುವಿಕೆಯ ಮೂಲಕ ಹಾಗೂ ಸೈನಿಕ ಕಾರ್ಯಾಚರಣೆಯ ಮೂಲಕ 1961ರಲ್ಲಿ ಭಾರತದಲ್ಲಿ ದೇಶೀಯ ರಾಜ್ಯಗಳ ಸಂಯೋಜನೆಯು ಪೂರ್ತಿಗೊಂಡಿತು ಎಂದು ಚರ್ಚೆಯನ್ನು ಕ್ರೋಡೀಕರಿಸಬಹುದು.

## ಸಂವಿಧಾನ ರಚನೆ ಮತ್ತು ಪ್ರಥಮ ಸಾರ್ವತ್ರಿಕ ಚುನಾವಣೆ



ಚಿತ್ರಗಳನ್ನು ಪ್ರದರ್ಶಿಸುತ್ತಾ ಸ್ವತಂತ್ರ ಭಾರತದಲ್ಲಿ ಇವರ ಪ್ರಾಧಾನ್ಯವೇನೆಂದು ಗುರುತಿಸಲು ವಿದ್ಯಾರ್ಥಿಗಳಲ್ಲಿ ಹೇಳಬೇಕು. ವಿದ್ಯಾರ್ಥಿಗಳನ್ನು 4 ಗುಂಪುಗಳಾಗಿ ವಿಂಗಡಿಸಬೇಕು.

ಗುಂಪು 1 – ಡಾ. ರಾಜೇಂದ್ರ ಪ್ರಸಾದ್
ಗುಂಪು 2 – ಡಾ. ರಾಧಾಕೃಷ್ಣನ್
ಗುಂಪು 3 – ಪಂಡಿತ್ ಜವಹರಲಾಲ್ ನೆಹರೂ
ಗುಂಪು 4 – ಡಾ. ಬಿ. ಆರ್. ಅಂಬೇಡ್ಕರ್

ಗುಂಪುಗಳಲ್ಲಿ ಕಂಡುಹಿಡಿದ ವಿಚಾರಗಳನ್ನು ತರಗತಿಯಲ್ಲಿ ಮಂಡಿಸಲಿ. ಸ್ವತಂತ್ರ ಭಾರತದ ಸಂವಿಧಾನದ ಸಾಮಾನ್ಯ ವಿಶೇಷತೆಗಳು, ಪ್ರಜಾಪ್ರಭುತ್ವ ಮೌಲ್ಯಗಳ ಸಂರಕ್ಷಿಸುವುದರಲ್ಲಿ ಸಂವಿಧಾನದ ಪಾತ್ರ,

ಸ್ವತಂತ್ರ ಮತ್ತು ನೀತಿಪೂರ್ವಕವಾದ ಚುನಾವಣೆ ಇತ್ಯಾದಿಗಳ ಮೂಲಕ ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಯಾವ ರೀತಿಯಲ್ಲಿ ಕಾರ್ಯವೆಸಗುವುದೆಂದು, ಚರ್ಚೆ ನಡೆಸುವುದು ಮತ್ತು ಈ ಕೆಳಗಿನ ಅಂಶಗಳು ಬರುವಂತೆ ಕ್ರೋಡೀಕರಿಸಬೇಕು.

ಸ್ವತಂತ್ರ ಭಾರತದ ಸಂವಿಧಾನದ ವಿಶೇಷತೆಗಳು:

- ಧರ್ಮನಿರಪೇಕ್ಷತೆ
- ಸಮಾಜವಾದ
- ಪ್ರಜಾಪ್ರಭುತ್ವ
- ಸ್ವತಂತ್ರ ನ್ಯಾಯವ್ಯವಸ್ಥೆ
- ಸ್ವತಂತ್ರ ಚುನಾವಣಾ ಆಯೋಗ
- ನೀತಿ ನಿಯಮ (ಹಕ್ಕುಗಳ ಆಡಳಿತ)
- ಮೂಲಭೂತ ಹಕ್ಕುಗಳು

### ಸ್ವತಂತ್ರ ಭಾರತದ ಮೊದಲ ಚುನಾವಣೆ

1951 ಅಕ್ಟೋಬರ್ 25ರಿಂದ 1952 ಫೆಬ್ರವರಿ 21ರ ವರೆಗಿನ ಕಾಲಾವಧಿಯಲ್ಲಿ ಸ್ವತಂತ್ರ ಭಾರತದ ಮೊದಲ ಚುನಾವಣೆ ನಡೆಯಿತು. 489 ಲೋಕಸಭಾ ಸೀಟುಗಳಿಗೆ ಚುನಾವಣೆ ನಡೆಯಿತು. 1952 ಎಪ್ರಿಲ್ 17ರಿಂದ 1957 ಎಪ್ರಿಲ್ ನಾಲ್ಕರ ವರೆಗೆ ಪ್ರಥಮ ಲೋಕಸಭೆಯು ಅಧಿಕಾರದಲ್ಲಿತ್ತು.

**ಭಾಷಾವಾರು ಪ್ರಾಂತ್ಯಗಳ ರೂಪೀಕರಣ**

ಪಾಠಪುಸ್ತಕದಲ್ಲಿರುವ ಪುಟಸಂಖ್ಯೆ 111ನ್ನು ಮಕ್ಕಳು ಓದಲೇಬೇಕು.

- 1956 ನವಂಬರ್ 1ರ ವಿಶೇಷತೆಯೇನು ?
- ಯಾವೆಲ್ಲ ಪ್ರದೇಶಗಳನ್ನು ಸಂಯೋಜಿಸಿ, ಕೇರಳ ಪ್ರಾಂತ್ಯವನ್ನು ರೂಪಿಸಲಾಗಿದೆ.

ಈ ಪ್ರಶ್ನೆಗಳು ಲಭಿಸುವ ಉತ್ತರದೊಂದಿಗೆ, ಪ್ರಾಂತ್ಯ ರೂಪೀಕರಣದೊಂದಿಗೆ, ತಿರುವಾಂಕೂರಿನಲ್ಲಿ ಕೆಲವೊಂದು ಪ್ರದೇಶಗಳನ್ನು ತ್ಯಜಿಸಬೇಕಾದ (ಅಗಸ್ತೇಶ್ವರ, ವಿಳವಂಗೋಡ್, ಕಲ್‌ಕುಲಂ, ಕೋವಳಂ) ಮತ್ತು ಕರ್ನಾಟಕದ ಕೆಲವು ಪ್ರದೇಶಗಳನ್ನು ಮಲಬಾರಿಗೆ ಸೇರ್ಪಡೆ ಮಾಡಲು ಕಾರಣವಾದ ಸನ್ನಿವೇಶಗಳನ್ನು ಚರ್ಚಿಸಬೇಕು. ಒಂದೇ ಭಾಷೆಯನ್ನು ಮಾತನಾಡುವವರಿಗಾಗಿ ಒಂದು ಪ್ರಾಂತ್ಯವನ್ನು ರೂಪಿಸುವುದರಿಂದ, ಆಡಳಿತ ಸುಧಾರಣೆ ಮತ್ತು ಜನರ ಭಾಗವಹಿಸುವಿಕೆಯನ್ನು ಖಾತರಿಪಡಿಸುವುದು ಸಾಧ್ಯ ಎಂಬ ತಿಳುವಳಿಕೆಯು ಮಕ್ಕಳಿಗೆ ಲಭಿಸುವುದು. ಅಭಿವೃದ್ಧಿಯ ಪ್ರಾದೇಶಿಕ ಅಸಮಾನತೆಗಳು, ಭಾಷೆಗಳಿಗೆ ಅತೀತವಾಗಿ ಬೆಳೆದು ಬಂದುದರ ಪರಿಣಾಮವಾಗಿ ರೂಪುಗೊಂಡ ಪ್ರಾದೇಶಿಕ ಅಸಂತೃಪ್ತಿಯು, ಎರಡು ಸಾವಿರ ಇಸವಿಯ ನಂತರ ಹೊಸ ಪ್ರಾಂತ್ಯಗಳ ರೂಪೀಕರಣಕ್ಕೆ ಕಾರಣವಾಯಿತು ಎಂದು ಚರ್ಚೆಯ ಮೂಲಕ ಕ್ರೋಢೀಕರಿಸಬೇಕಾಗಿದೆ. ಈ ರೀತಿಯಲ್ಲಿ ರೂಪುಗೊಂಡ ಪ್ರಾಂತ್ಯಗಳನ್ನು ಮಕ್ಕಳಿಗೆ ಪರಿಚಯಿಸಬೇಕು.

- ಚತ್ತೀಸ್‌ಘಡ್ – 1 ನವೆಂಬರ್ 2000
- ಉತ್ತರಾಂಚಲ್ – 9 ನವೆಂಬರ್ 2000 (2007ರಲ್ಲಿ ಉತ್ತರಾಖಂಡ್ ಎಂದು ಹೆಸರು ಬದಲಿಸಲಾಯಿತು)
- ಜಾರ್‌ಖಂಡ್ – 15 ನವೆಂಬರ್ 2000
- ತೆಲಂಗಾಣ – 2 ಜೂನ್ 2014

### ಕಾವಾಲಂ ಮಾಧವ ಪಣಿಕ್ಕರ್ (1894 – 1963)

ಕೆ.ಎಂ. ಪಣಿಕ್ಕರ್ – ಭಾಷಾವಾರು ಪ್ರಾಂತ್ಯ ರೂಪೀಕರಣ ಆಯೋಗದ ಮಲಯಾಳಿ ಸದಸ್ಯ ತಿರುವಾಂಕೂರಿನಲ್ಲಿ ಜನನ. ಸಾಹಿತಿ, ಚರಿತ್ರೆಗಾರ, ಅಧ್ಯಾಪಕ, ರಾಜತಾಂತ್ರಿಕ, ಕೇರಳ ಸಾಹಿತ್ಯ ಅಕಾಡೆಮಿಯ ಪ್ರಥಮ ಅಧ್ಯಕ್ಷ ಎನ್ನುವ ನೆಲೆಯಲ್ಲಿಯೂ ಪ್ರಸಿದ್ಧನಾದ ವ್ಯಕ್ತಿ.

## ಆರ್ಥಿಕ ವಲಯದ ಸಾಧನೆಗಳು:

***ಅಣೆಕಟ್ಟುಗಳು ಭಾರತದ ಅಭಿವೃದ್ಧಿಯ ಮಹಾಕ್ಷೇತ್ರಗಳಾಗಿವೆ***

- ಈ ಮಾತನ್ನು ನೆಹರೂರವರು ಯಾವ ಸಂದರ್ಭದಲ್ಲಿ ನುಡಿದರು?
- ನೆಹರೂರವರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಲು ಕಾರಣವೇನು?

ಎಂಬೀ ಸರಳ ಪ್ರಶ್ನೆಗಳನ್ನು ಕೇಳುವುದರ ಮೂಲಕ ಪಾಠಭಾಗವನ್ನು ಪ್ರವೇಶಿಸಬಹುದು.

ಕಾಲನಿ ಕಾಲಘಟ್ಟದ ಶೋಷಣೆಯ ಕುರಿತೂ, ಭಾರತದ ಯೋಜನೆಯ ಕುರಿತೂ ಹಿಂದಿನ ತರಗತಿಗಳಲ್ಲಿ ಪರಿಚಯವಿರುವುದರಿಂದ, ಪಾಠಪುಸ್ತಕದ, ಪಾಠಭಾಗವನ್ನು ಓದಲು ತಿಳಿಸಬಹುದು. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಆರ್ಥಿಕ ಅಭಿವೃದ್ಧಿಯನ್ನು ಉದ್ದೇಶವಾಗಿಸಿಕೊಂಡು ರೂಪಿಸಿದ ಯೋಜನೆಗಳನ್ನು ಮಕ್ಕಳಿಗೆ ಪರಿಚಯಿಸಬೇಕು.

### ನೀತಿ ಆಯೋಗ

1950ರಲ್ಲಿ ರೂಪೀಕೃತವಾದ ಯೋಜನಾ ಆಯೋಗವು ಭಾರತದ ಆರ್ಥಿಕ ಯೋಜನೆಯನ್ನು ರೂಪಿಸುವಲ್ಲಿ ನೇತೃತ್ವವನ್ನು ವಹಿಸುವುದು. 2015 ಜನವರಿ 1ರಂದು ಯೋಜನಾ ಆಯೋಗವು ನೀತಿ ಆಯೋಗ (NITI AYOG) ಎಂದು ಪುನರ್ ನಾಮಕರಣಗೊಂಡಿತು.

- 1938 ರೂಪೀಕರಿಸಿದ ರಾಷ್ಟ್ರೀಯ ಯೋಜನಾ ಸಮಿತಿ.
- 1944ರಲ್ಲಿ ಕೈಗಾರಿಕಾ ಮಾಲಿಕರು ಸಿದ್ಧಪಡಿಸಿದ, ಬೊಂಬೆಯೋಜನೆ.
- ಎಂ.ಎನ್. ರಾಯ್ ರೂಪಿಸಿದ ಜನಪರ ಯೋಜನೆ
- 1948ರ ಕೈಗಾರಿಕಾ ನೀತಿ.

ಸ್ವಾತಂತ್ರ್ಯಾನಂತರ ಭಾರತವು ಸಾರ್ವಜನಿಕ ವಲಯಕ್ಕೆ ಪ್ರಾಧಾನ್ಯ ನೀಡುವ ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಸ್ವೀಕರಿಸಿಕೊಂಡದ್ದೂ ಸೋವಿಯತ್ ಮಾದರಿಯ ಕೇಂದ್ರೀಕೃತ ಆರ್ಥಿಕ ಯೋಜನೆಯನ್ನು ಜ್ಯಾರಿಗೊಳಿಸುವುದಕ್ಕಾಗಿ ಯೋಜನಾ ಆಯೋಗವನ್ನು ರೂಪೀಕರಿಸಿದ್ದನ್ನೂ ತರಗತಿಯಲ್ಲಿ ಚರ್ಚೆ ನಡೆಸಬೇಕು. ದೇಶದ ಆರ್ಥಿಕ ಬೆಳವಣಿಗೆಯನ್ನು ಉದ್ದೇಶವಾಗಿಟ್ಟುಕೊಂಡು, ಜ್ಯಾರಿಗೊಳಿಸಿದ ಪಂಚವಾರ್ಷಿಕ ಯೋಜನೆಗಳು ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಗಮನಾರ್ಹವಾದ ಬದಲಾವಣೆಯನ್ನುಂಟುಮಾಡಿತೆಂದು ಅಧ್ಯಾಪಕರು ಕ್ರೋಡೀಕರಿಸಬೇಕು.

- ಭಾರತವನ್ನು ಆರ್ಥಿಕ ಶಕ್ತಿಯಾಗಿ ಬದಲಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದ ಬೃಹತ್ ಯೋಜನೆಗಳಿಗೆ ಸಂಬಂಧಿಸಿದ ಚಿತ್ರಗಳ ಆಲ್ಬಂ ತಯಾರಿಸಿ ಸಮಾಜ ವಿಜ್ಞಾನ ಲ್ಯಾಬ್‌ನಲ್ಲಿ ಸಂಗ್ರಹಿಸಿರಿ. ಪಾಠಪುಸ್ತಕದ ಪುಟಸಂಖ್ಯೆ 113ರ ಪಟ್ಟಿಯನ್ನು ವಿಸ್ತರಿಸಲು ವರ್ಕ್‌ಶೀಟ್ ಒಂದನ್ನು ತಯಾರಿಸಬೇಕು.

**ವರ್ಕ್‌ಶೀಟ್**

| | | | |
|---|---|---|---|
| • ಬಿಲಾಯಿ<br>• ಚಿಕಾಗೊ<br>•<br>• | •<br><br>•<br>• | •<br><br>•<br>• | • ಸೋವಿಯತ್ ಯೂನಿಯನ್<br>• ಸೋವಿಯತ್ ಯೂನಿಯನ್<br>•<br>• |



## ವೈಜ್ಞಾನಿಕ ತಾಂತ್ರಿಕ ಸಾಧನೆಗಳು

- ಚಿತ್ರದಲ್ಲಿ ಕಾಣುವ ವಿಜ್ಞಾನಿ ಯಾರು?
- ಸಿ.ವಿ. ರಾಮನ್

ಸಿ.ವಿ. ರಾಮನ್ ಮತ್ತು ರಾಷ್ಟ್ರೀಯ ವಿಜ್ಞಾನ ದಿನಕ್ಕಿರುವ ಸಂಬಂಧವನ್ನು ಅಧ್ಯಾಪಕರು ತರಗತಿಯಲ್ಲಿ ಚರ್ಚಿಸಬೇಕು. ಜಾಗತಿಕವಾಗಿ ಹೆಸರು ಪಡೆದ ಭಾರತದ ವಿಜ್ಞಾನಿಗಳ ಹೆಸರನ್ನು ಬರೆಯಲು ಮಕ್ಕಳಿಗೆ ತಿಳಿಸಬಹುದು.

- ವಿಕ್ರಂ ಸಾರಾಭಾಯಿ
- ಹೋಮಿ ಜಹಾಂಗೀರ್ ಬಾಬ
- ಎಸ್.ಎಲ್. ಭಟ್ನಾಗರ್
- ಸತೀಶ್‌ಧವನ್
- ಎ.ಪಿ.ಜೆ. ಅಬ್ದುಲ್ ಕಲಾಂ
- ಡಾ. ರಾಜಾರಾಮಣ್ಣ

ಮಕ್ಕಳನ್ನು ಆರು ಗುಂಪುಗಳಾಗಿ ವಿಂಗಡಿಸಿ, ಪ್ರತಿಯೊಂದು ಗುಂಪೂ ತಮಗೆ ಸಿಕ್ಕಿದ, ವಿಜ್ಞಾನಿಗಳ ಕುರಿತಾದ ಮತ್ತಷ್ಟು ವಿವರಗಳನ್ನು ಸಂಗ್ರಹಿಸಿ (ಇಂಟರ್‌ನೆಟ್ ಪ್ರಯೋಜನವನ್ನು ಪಡೆದು ಕೊಳ್ಳಬಹುದು) ರೋಲ್‌ಪ್ಲೇ ಮಾಡಿ ತೋರಿಸಬೇಕು. ಪ್ರತಿಯೊಂದು ಗುಂಪು ಮಂಡಿಸಿದ ವಿಷಯಗಳನ್ನು ಇನ್ನೊಂದು ಗುಂಪು ದಾಖಲಿಸುವಂತೆ ಅಧ್ಯಾಪಕರು ತಿಳಿಸಬೇಕು.

ಸ್ವತಂತ್ರ ಭಾರತದಲ್ಲಿ – ವೈಜ್ಞಾನಿಕ ತಾಂತ್ರಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ, ಸ್ಪರ್ಧಿಸುವಲ್ಲಿ ನಮ್ಮ ವಿಜ್ಞಾನಿಗಳು ಈ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ವಿವರಿಸುವ ಮೂಲಕ ಅಧ್ಯಾಪಕರು ಚರ್ಚೆಯನ್ನು ಕ್ರೋಡೀಕರಿಸಬೇಕು.

ತಾರಾಪುರದಲ್ಲಿ ಭಾರತದ ಮೊದಲ ಅಣುವಿದ್ಯುತ್ ಘಟಕವನ್ನು ಸ್ಥಾಪಿಸಿದ್ದು, ರಾಜಸ್ಥಾನದ ಪೋಖ್ರಾನಿನಲ್ಲಿ 1974ರಲ್ಲಿ ಅಣುಬಾಂಬ್ ಪರೀಕ್ಷೆಯನ್ನು ನಡೆಸುವ ಮೂಲಕ, ಅಭಿವೃದ್ಧಿ ಹೊಂದಿರುವ ದೇಶಗಳು ಮಾತ್ರ ಹೊಂದಿರುವ ಅವಕಾಶವನ್ನು ನಮಗೂ ಪಡೆಯಲು ಸಾಧ್ಯವಾಯಿತು ಎಂದು ವಿವರಿಸುವ ಮೂಲಕ ಚರ್ಚೆಯನ್ನು ಕ್ರೋಡೀಕರಿಸಬೇಕು.

**National Science Day**

**February 28**

***is commemorated in the honour of (Chandrashekha Venkata Raman.)***

**Sir C.V. Raman for his legancey, who discovered the Raman effect on 28th february 1928.**

***"Science for Nations Building"***

**The theme for National Science Day 2015.**

***C.R. Raman honoured with the Nobel Prize in Physics in the year 1930.***

ಪಾಠಭಾಗದ ವಿಷದವಾದ ಚರ್ಚೆಯ ನಂತರ 'ಭಾರತದ ವೈಜ್ಞಾನಿಕ ಸಾಧನೆಗಳು' ಎಂಬ ವಿಷಯದ ಕುರಿತಾದ ಚಿತ್ರ ಪ್ರದರ್ಶನವೊಂದನ್ನು ಸಿದ್ಧಪಡಿಸಿ, ಸಮಾಜ ವಿಜ್ಞಾನ ಮೇಳದಲ್ಲಿ ಪ್ರದರ್ಶಿಸುವ ಮೂಲಕ ಜನರೂ ಪ್ರದರ್ಶನವನ್ನು ನೋಡಲು ಸಾಧ್ಯವಾಗುವಂತೆ ಮಾಡಬೇಕು. ಚಿತ್ರ ಸಂಗ್ರಹಕ್ಕಾಗಿ ಮಕ್ಕಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬೇಕು.

ಗುಂಪು 1 – ವಿಜ್ಞಾನ ಕ್ಷೇತ್ರ

ಗುಂಪು 2 – ತಂತ್ರಜ್ಞಾನ ಕ್ಷೇತ್ರ

ಗುಂಪು 3 – ಸಾರಿಗೆ ಕ್ಷೇತ್ರ

ಗುಂಪು 4 – ವಾರ್ತಾವಿನಿಮಯ ಕ್ಷೇತ್ರ

ಈ ರೀತಿಯಲ್ಲಿ ಪ್ರತಿಯೊಂದು ಗುಂಪು ಸಂಗ್ರಹಿಸುವ ಚಿತ್ರಗಳನ್ನು ಚಾರ್ಟ್ ಪೇಪರ್‌ನಲ್ಲಿ ಅಂಟಿಸಿ ಪ್ರದರ್ಶನಕ್ಕೆ ತಯಾರುಗೊಳಿಸುವಂತೆ ಮಕ್ಕಳಿಗೆ ತಿಳಿಸಬೇಕು.

## ಭಾರತ ಮತ್ತು ಬಾಹ್ಯಾಕಾಶ ಸಂಶೋಧನೆ



*Rakesh Sharma*

*Born : 1949 January 13*

*First Indian who travel in space*

*Soyz T 11 launched April 3, 1984*

"ಸಾರೇ ಜಹಾಂಸೆ ಅಚ್ಚಾ"

*(The best in the world)*

ಸೋಯುಸ್ ಟಿ 11 ಸ್ಪೇಸ್ ಮೊಡ್ಯೂಲ್‌ನಲ್ಲಿ ಬಾಹ್ಯಾಕಾಶ ಸಂಚಾರ ನಡೆಸಿದ ಮೊದಲ ಭಾರತೀಯನಾದ ರಾಕೇಶ್ ಶರ್ಮಾ, ಶೂನ್ಯಾಕಾಶದಿಂದ ಭಾರತ ಹೇಗೆ ಕಾಣುತ್ತಿದೆ ಎಂಬ ಪ್ರಧಾನಿ ಇಂದಿರಾಗಾಂಧಿಯವರ ಪ್ರಶ್ನೆಗೆ ನೀಡಿದ ಉತ್ತರವನ್ನು ಮೇಲೆ ನೀಡಲಾಗಿದೆ.

**ಎಜ್ಯುಸ್ಯಾಟ್ ಯಶಸ್ವಿಯಾಗಿ ಭ್ರಮಣ ಪಥವನ್ನು ತಲುಪಿತು**

**ಚಂದ್ರಯಾನ ಯಶಸ್ವಿಯಾಯಿತು**

**ಮಂಗಳಯಾನ ಮಂಗಳನ ಭ್ರಮಣ ಪಥಕ್ಕೆ**

**1963 ನವೆಂಬರ್ 21ರಂದು ತುಂಬೆಯಿಂದ ಮೊದಲ ರಾಕೆಟ್ (Nike - Apache) ವಿಕ್ಷೇಪಣೆ.**

ಈ ಮೇಲಿನ ವಾರ್ತಾತುಣುಕುಗಳನ್ನು ನೀಡಿ ಭಾರತದ ಬಾಹ್ಯಾಕಾಶ ಸಂಶೋಧನೆಯ ಕುರಿತು ಚರ್ಚೆಯನ್ನು ಆರಂಭಿಸಬೇಕು. ಚರ್ಚೆಯಲ್ಲಿ ಭಾಗವಹಿಸುವ ಮುನ್ನ ಪಾಠಭಾಗವನ್ನು ಓದಲು ಮಕ್ಕಳಲ್ಲಿ ತಿಳಿಸಬೇಕು. ಚರ್ಚೆಯ ಮಧ್ಯೆ ಮಹಮ್ಮದ್ ಇಕ್ಬಾಲ್ ರಚಿಸಿದ ಗೀತೆಯ ಮೊದಲ ಸಾಲನ್ನು ಉಚ್ಚರಿಸಿ, ಭಾರತದ ಬಾಹ್ಯಾಕಾಶ ಸಂಶೋಧನೆಯಲ್ಲಿ ಈ ಹಾಡಿನ ಮಹತ್ವವನ್ನು ತಿಳಿಸಬೇಕು. ರಾಕೇಶ್ ಶರ್ಮಾರ ಚಿತ್ರವನ್ನು ಮಕ್ಕಳಿಗೆ ತೋರಿಸಬೇಕು. ಭಾರತದ ಇತರ ಪ್ರಮುಖ ವಿಜ್ಞಾನಿಗಳನ್ನು ಪರಿಚಯಿಸಬೇಕು. .

- ಜಿ. ಮಾಧವನ್ ನಾಯರ್
- ಡೆಸಿ ವರ್ಗೀಸ್
- ಚಂದ್ರನಾಥ್
- ಡಾ । ರಾಧಾಕೃಷ್ಣನ್



ಕಲ್ಪನಾ ಚಾವ್ಲ ಸುನೀತಾ ವಿಲಿಯಂಸ್

ಇವರು ಭಾರತೀಯರು

ಇವರು ಅಮೇರಿಕಾದ ಬಾಹ್ಯಾಕಾಶ ಯಾನದಲ್ಲಿ ಭಾಗವಹಿಸಿದ ಭಾರತೀಯ ಮೂಲದವರು. ಚರ್ಚೆಯ ಕ್ರೋಢೀಕರಣಕ್ಕಿಂತ ಮೊದಲು ಭಾರತವು ವಿಕ್ಷೇಪಿಸಿದ ಪ್ರಧಾನ ಉಪಗ್ರಹಗಳ ಪಟ್ಟಿಯನ್ನು ತಯಾರಿಸಲು ತಿಳಿಸಬೇಕು. ಇದಕ್ಕಾಗಿ ಐ.ಸಿ.ಟಿ. ಪ್ರಯೋಜನವನ್ನು ಪಡೆಯಲು ತಿಳಿಸಬೇಕು.

- ಆರ್ಯಭಟ
- ರೋಹಿಣಿ
- ಆಪ್ಪಲ್
- ಎಜ್ಯುಸಾಟ್
- ಚಂದ್ರಯಾನ
- ಮಂಗಳಯಾನ

ಅಧಿಕ ಮಾಹಿತಿ ಸಂಗ್ರಹದ ಭಾಗವಾಗಿ ಭಾರತವು ಸ್ವತಂತ್ರವಾಗಿ ವಿಕಾಸಗೊಳಿಸಿದ ಉಪಗ್ರಹಗಳ ಮಾಹಿತಿಯನ್ನು ಸಂಗ್ರಹಿಸಿ, ಸಮಾಜ ವಿಜ್ಞಾನ ಲ್ಯಾಬಿನಲ್ಲಿ ಪ್ರದರ್ಶಿಸಲು ತಿಳಿಸಬೇಕು.

- ಭಾರತದ ಬಾಹ್ಯಾಕಾಶ ಇಲಾಖೆಯ ಕೈ ಕೆಳಗಿರುವತುಂಬಾ ರಾಕೆಟ್ ವಿಕ್ಷೇಪಣಾ ಕೇಂದ್ರಕ್ಕೆ, ಅಲ್ಲಿರುವ ಸ್ಪೇಸ್ ಮ್ಯೂಸಿಯಂಗೆ ಕಲಿಕಾಪ್ರವಾಸವೊಂದನ್ನು ಕೈಗೊಳ್ಳಬಹುದು.

ಭಾರತದ ಬಾಹ್ಯಾಕಾಶ ಯೋಜನೆಯನ್ನು ಹತ್ತಿರದಿಂದ ತಿಳಿದುಕೊಳ್ಳಲೂ, ಮಕ್ಕಳಲ್ಲಿ ಬಾಹ್ಯಾಕಾಶ ಸಂಶೋಧನೆಯ ಆಸಕ್ತಿಯನ್ನು ಬೆಳೆಸಲೂ ಈ ಯಾತ್ರೆಯು ಸಹಾಯ ಮಾಡಬಹುದು.

### ಎಜ್ಯುಸಾಟ್

ಸೆಪ್ಟೆಂಬರ್ 20, 2004 – ಜಗತ್ತಿನಲ್ಲಿ ಪ್ರಥಮ ಬಾರಿಗೆ ಶಿಕ್ಷಣದ ಅವಶ್ಯಕತೆಗಾಗಿ ಮಾತ್ರ ಇಸ್ರೋ ಉಪಗ್ರಹವನ್ನು ವಿಕ್ಷೇಪಿಸಿತು.

### ಮಂಗಳಯಾನ


ಮೊದಲ ಪ್ರಯತ್ನದಲ್ಲೇ ಮಂಗಳ ದೌತ್ಯವನ್ನು ಯಶಸ್ವಿಯಾಗಿ ನಡೆಸಿದ ಜಗತ್ತಿನ ಮೊದಲ ದೇಶ ಭಾರತವಾಗಿದೆ. 2013 ನವೆಂಬರ್ 5ರಂದು ಆಂಧ್ರಪ್ರದೇಶದ ಸತೀಶ್‌ಧವನ್ ವಿಕ್ಷೇಪಣಾ ಕೇಂದ್ರದಿಂದ ಈ ಉಪಗ್ರಹವನ್ನು ವಿಕ್ಷೇಪಿಸಲಾಯಿತು.

### ಚಂದ್ರಯಾನ

ಭಾರತದ ಮೊದಲ ಚಂದ್ರದೌತ್ಯ. 2008 ಅಕ್ಟೋಬರ್ 22ರಂದು ಆಂಧ್ರಪ್ರದೇಶದ ಸತೀಶ್‌ಧವನ್ ಸ್ಪೇಸ್ ಸೆಂಟರ್‌ನಿಂದ ವಿಕ್ಷೇಪಣೆ.

## ಶಿಕ್ಷಣ

“ನವೆಂಬರ್ 11 ರಾಷ್ಟ್ರೀಯ ಶಿಕ್ಷಣದಿನ”




ಮೌಲಾನಾ ಅಬ್ದುಲ್ ಕಲಾಂ ಆಜಾದ್‌ನ ಚಿತ್ರವನ್ನು ಮಕ್ಕಳಿಗೆ ಪರಿಚಯಿಸುವುದು.

ನಂತರ ಅವರ ಜನ್ಮದಿನವನ್ನು ರಾಷ್ಟ್ರೀಯ ಶಿಕ್ಷಣ ದಿನವನ್ನಾಗಿ ಆಚರಿಸುವುದು ಯಾಕೆ ಎಂಬ ಪ್ರಶ್ನೆಯ ಮೂಲಕ ಪಾಠಭಾಗವನ್ನು ಪ್ರವೇಶಿಸಬೇಕು.

- ಸ್ವತಂತ್ರ ಭಾರತದ ಪ್ರಥಮ ಶಿಕ್ಷಣ ಮಂತ್ರಿ ಮೌಲಾನಾ ಅಬ್ದುಲ್ ಕಲಾಂ ಆಜಾದ್.
- ಸ್ವತಂತ್ರ ಭಾರತದ ಶೈಕ್ಷಣಿಕ ಧೋರಣೆಯನ್ನು ರೂಪಿಸುವಲ್ಲಿ ಇವರು ಪ್ರಧಾನ ಪಾತ್ರ ವಹಿಸಿದರು.

ದೇಶದ ಅಭಿವೃದ್ಧಿಯಲ್ಲಿ ಶಿಕ್ಷಣಕ್ಕಿರುವ ಪ್ರಾಧಾನ್ಯವನ್ನು ತಿಳಿದುಕೊಂಡು ದೇಶೀಯ ನೇತಾರರು, ಸ್ವತಂತ್ರ, ದೇಶೀಯ ಶೈಕ್ಷಣಿಕ ನೀತಿಯನ್ನು ರೂಪಿಸುವುದಕ್ಕಾಗಿ ರಚಿಸಿದ ವಿವಿಧ ಆಯೋಗಗಳು – ಆಯೋಗಗಳ ಮೂಲಕ ರೂಪುಗೊಂಡ ಶಿಕ್ಷಣ ಧೋರಣೆಗಳು, ಯೋಜನೆಗಳು ಜಾರಿಗೊಂಡವೆಂದು ವಿವರಿಸಬೇಕು.

ಇದರೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ಉಂಟಾದ ಅಭಿವೃದ್ಧಿಯನ್ನು ತಿಳಿದುಕೊಳ್ಳಲು ಪಾಠಭಾಗದ 117 ಮತ್ತು 118ನೇ ಪುಟಗಳನ್ನು ಓದಲು ತಿಳಿಸಬೇಕು. ಆನಂತರ ನೀಡಿರುವ ವರ್ಕ್‌ಶೀಟ್ ಭರ್ತಿ ಮಾಡಬೇಕು.




ಸಂವಿಧಾನದ ಪ್ರಕಾರ ಕನ್‌ಕರೆಂಟ್ ಲಿಸ್ಟ್‌ನಲ್ಲಿ ಸೇರಿರುವ ಶಿಕ್ಷಣ ವಲಯದ ಅಭಿವೃದ್ಧಿಗಾಗಿ 1968

ಮತ್ತು 1986ರಲ್ಲಿ ಶಿಕ್ಷಣ ನೀತಿಯುನ್ನು ರೂಪಿಸಿದರೂ, ಶಿಕ್ಷಣವು ಮಕ್ಕಳ ಮೂಲಭೂತ ಹಕ್ಕಾಗಿ ಎಪ್ರಿಲ್ 1ರಂದು ಜಾರಿಗೊಂಡಿತು. ಎಂಬ ಕ್ರೋಡೀಕರಣವನ್ನು ನಡೆಸಬೇಕು. ಅಲ್ಲದೆ ಸ್ವತಂತ್ರ ಭಾರತದ ಶೈಕ್ಷಣಿಕ ಸಾಧನೆಗಳ ಕುರಿತಾದ ಲಘು ಟಿಪ್ಪಣಿಯನ್ನು ರಚಿಸಬೇಕು.

**ಕನ್‌ಕರೆಂಟ್ (ಸಂಯುಕ್ತ) ಲಿಸ್ಟ್**

ಸಂವಿಧಾನದ ಪ್ರಕಾರ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ನಿಯಮ, ನೀತಿ ಸಂಹಿತೆಗಳನ್ನು ಸಮಾನವಾಗಿ ರೂಪಿಸಲು ಅಧಿಕಾರವಿರುವ ವಿಷಯಗಳನ್ನು ಸಂವಿಧಾನದ ಕನ್‌ಕರೆಂಟ್ ಲಿಸ್ಟ್‌ನಲ್ಲಿ ಸೇರಿಸಲಾಗಿದೆ.

### ಸಾಂಸ್ಕೃತಿಕ ಸಾಧನೆಗಳು

ಭಾರತದ ದೇಸೀ ವೇಷಭೂಷಣಗಳ, ಕಲಾ ರೂಪಗಳ ಡಿಜಿಟಲ್ ಆಲ್ಬಂ ಒಂದನ್ನು ತರಗತಿಯಲ್ಲಿ ಪ್ರದರ್ಶಿಸಿಕೊಂಡು ಪಾಠಭಾಗವನ್ನು ಆರಂಭಿಸಬಹುದು. ಈ ವೇಷಭೂಷಣಗಳನ್ನು ಕಲಾರೂಪಗಳನ್ನು ಗುರುತಿಸಿ, ವಿಪುಲೀಕರಿಸಲು ಮಕ್ಕಳಿಗೆ ತಿಳಿಸಬೇಕು.

- ಕೇರಳೀಯ ವೇಷವಿಧಾನ
- ಕಥಕ್ಕಳಿ
- ಪಂಜಾಬಿ ವೇಷ
- ಮಣಿಪುರ ನೃತ್ಯ
- 
- 
- 
- 

ಸ್ವಂತಿಕೆಯಿಂದ ಕೂಡಿದ ಸಾಂಸ್ಕೃತಿಕ ಪರಂಪರೆಯು ಭಾರತಕ್ಕಿದೆ ಎಂದೂ ಅವುಗಳ ಪೋಷಣೆಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ವಿವಿಧ ಸಂಘ ಸಂಸ್ಥೆಗಳನ್ನು ಆರಂಭಿಸಿವೆಯೆಂದು ವಿವರಿಸಿ, ಮಕ್ಕಳಿಗೆ ಪರಿಚಯಿಸುವುದಕ್ಕಾಗಿ ಪುಟ ಸಂಖ್ಯೆ 119ನ್ನು ವಿಶ್ಲೇಷಿಸಲು ಮಕ್ಕಳಿಗೆ ತಿಳಿಸಬೇಕು.

ವಳ್ಳತ್ತೋಳ್ ನಾರಾಯಣ ಮೆನೊನ್ ಸ್ಥಾಪಿಸಿದ ಕೇರಳ ಕಲಾಮಂಡಲದ ಕುರಿತಾದ ವಿವರಗಳನ್ನು ಮಕ್ಕಳಿಗೆ ನೀಡಿ ಸಾಂಸ್ಕೃತಿಕ ಕಲಾ ರೂಪಗಳನ್ನು, ಭಾಷಾ ವೈವಿಧ್ಯಗಳನ್ನು ಸಂರಕ್ಷಿಸಬೇಕಾದ ಅಗತ್ಯವೇನು? ಎಂಬ ಪ್ರಶ್ನೆಯೊಂದಿಗೆ ಲಘು ಚರ್ಚೆಯೊಂದನ್ನು ನಡೆಸಬೇಕು.

- ದೇಸೀ ಕಲಾರೂಪಗಳು ಮರೆಯಾಗುತ್ತಿವೆ.
- ಪಾಶ್ಚಾತ್ಯೀಕರಣವು ವೃದ್ಧಿಸುತ್ತಿದೆ.
- ಪಾಶ್ಚಾತ್ಯ ಕ್ರೀಡೆಗಳಲ್ಲಿನ ಆಸಕ್ತಿಯು ಹೆಚ್ಚುತ್ತಾ ಇದೆ.

ಸ್ವಾತಂತ್ರ್ಯಾನಂತರ ಸರಕಾರದ ಸಾಂಸ್ಕೃತಿಕ ಸಂರಕ್ಷಣೆಯ ಪ್ರಯತ್ನದ ಫಲವೇ ಈ ರೀತಿಯ ಸಂಸ್ಥೆಗಳ ರೂಪುಗೊಳ್ಳುವಿಕೆಗೆ ಕಾರಣವಾಗಿದೆ ಎಂದು ವಿವರಿಸಿ, ಚರ್ಚೆಯನ್ನು ಕ್ರೋಢೀಕರಿಸಬೇಕು.

### ವಿದೇಶೀ ಧೋರಣೆ ಮತ್ತು ಪಂಚಶೀಲ ತತ್ವಗಳು

1947ರಲ್ಲಿ ಜವಾಹರಲಾಲ್ ನೆಹರುರವರು ನಡೆಸಿದ ಭಾಷಣದ ಭಾಗವೊಂದನ್ನು ಪಾಠಪುಸ್ತಕದಲ್ಲಿ ನೀಡಿದ್ದು, ಅದನ್ನು ಓದಲು ತಿಳಿಸಬೇಕು. ಜಗತ್ತು ಎರಡು ವಿರುದ್ಧ ಧ್ರುವಗಳಾಗಿ ವಿಭಜಿಸಲ್ಪಟ್ಟಾಗ ವಿದೇಶಗಳೊಂದಿಗೆ ಭಾರತಕ್ಕಿರುವ ಸಮೀಪನವನ್ನು ನೆಹರೂರವರ ಮಾತುಗಳು ತಿಳಿಸುವುದು.

ದೀರ್ಘಕಾಲದ ಕಾಲನಿ ಆಡಳಿತ, ಸಾಮ್ರಾಜ್ಯಶಾಹಿತ್ವ, ವರ್ಣಬೇಧ ಇತ್ಯಾದಿಗಳನ್ನು ಎದುರಿಸಲು ಶಾಂತಿಯುತ ಸಹಬಾಳ್ವೆಗೆ, ವಿಶ್ವಸಂಸ್ಥೆಯ ಮೇಲಿನ ವಿಶ್ವಾಸ, ಅಲಿಪ್ತತೆ ಎಂಬೀ ತತ್ವಗಳ ಅವಶ್ಯಕತೆಯು ತಿಳುವಳಿಕೆಯು ಬರುವಂತೆ ತರಗತಿಯಲ್ಲಿ ಚರ್ಚೆ ನಡೆಸಬೇಕು. 1954ರಲ್ಲಿ ಚೈನಾ ಮತ್ತು ಭಾರತದ ನಡುವೆ ಉಂಟಾದ ವಿವಾದದ ಸಂದರ್ಭದಲ್ಲಿ ಭಾರತದ ಪ್ರಧಾನಿಯಾದ ಜವಾಹರಲಾಲ್ ಮತ್ತು ಚೈನಾದ ಪ್ರಧಾನಿ ಚೌ ಎನ್

ಲಾಯ್ ಸಹಿ ಹಾಕಿದ ಒಪ್ಪಂದವು ಪಂಚಶೀಲ ತತ್ವ ಎಂದು ಕರೆಯಲ್ಪಡುವುದು. ಆದರೂ ನಂತರದಲ್ಲಿ ಚೈನಾವು ಭಾರತದ ಪ್ರದೇಶವನ್ನು ಅತಿಕ್ರಮಿಸಿದ್ದನ್ನು ಚರ್ಚೆಯಲ್ಲಿ ಸೇರಿಸಿಕೊಂಡು ವಿಷಯವನ್ನು ವಿವರಿಸಬೇಕು.

ಪಂಚಶೀಲ ತತ್ವವನ್ನು ಅಲಿಪ್ತ ಚಳುವಳಿಯೊಂದಿಗೆ ಸಂಬಂಧವೇನೆಂದು ವಿವರಿಸಿ, ರಾಷ್ಟ್ರೀಯ ಮೌಲ್ಯವು ಈ ವಿಷಯಕ್ಕೆ ಸಂಬಂಧಿಸಿ ಹೇಗೆ ಪ್ರತಿಫಲಿಸಿದೆ ಎಂದು ವಿವರಿಸುತ್ತಾ ಚರ್ಚೆಯನ್ನು ಕ್ರೋಢೀಕರಿಸಬೇಕು.

## ? ಮೌಲ್ಯನಿರ್ಣಯಕ್ಕಿರುವ ಪ್ರಶ್ನೆಗಳು

- ದೇಶೀಯ ರಾಜ್ಯಗಳನ್ನು ವಿಲೀನಗೊಳಿಸುವಲ್ಲಿ ಎದುರಿಸಬೇಕಾಗಿ ಬಂದ ಸವಾಲುಗಳ ಕುರಿತು ಟಿಪ್ಪಣಿ ತಯಾರಿಸಿರಿ.
- ಸ್ವತಂತ್ರ ಭಾರತದಲ್ಲಿ ಪ್ರಾಂತ್ಯ ಪುನರ್ ಸಂಘಟನೆಯಲ್ಲಿ ಭಾಷೆಯನ್ನು ಪ್ರಧಾನ ಆಧಾರವಾಗಿಟ್ಟುಕೊಂಡ ಪ್ರಸಕ್ತಿಯನ್ನು ವಿವರಿಸಿರಿ.
- ಸ್ವತಂತ್ರ ಭಾರತದಲ್ಲಿ ಆರ್ಥಿಕ ವಲಯದ ಅಭಿವೃದ್ಧಿಗಾಗಿ ಸ್ವೀಕರಿಸಿದ ಕ್ರಮಗಳ ಕುರಿತು ಬರೆಯಿರಿ.
- ವೈಜ್ಞಾನಿಕ ಮತ್ತು ತಾಂತ್ರಿಕ ವಲಯದಲ್ಲಿ, ಬಾಹ್ಯಾಕಾಶ ಸಂಶೋಧನೆಯಲ್ಲಿ ಭಾರತವು ಮಾಡಿದ ಸಾಧನೆಗಳ ಪಟ್ಟಿಯೊಂದನ್ನು ತಯಾರಿಸಿರಿ.
- ಭಾರತದ ಶೈಕ್ಷಣಿಕ ಅಭಿವೃದ್ಧಿಯಲ್ಲಿ ವಿವಿಧ ಶೈಕ್ಷಣಿಕ ಆಯೋಗಗಳ ಪಾತ್ರವೇನು ?
- "ಸ್ವತಂತ್ರ ಭಾರತದ ವಿದೇಶೀ ಧೋರಣೆಯು ಪಂಚಶೀಲ ತತ್ವಗಳಲ್ಲಿ ಹುದುಗಿದೆ" ಈ ಹೇಳಿಕೆಯನ್ನು ಸಮರ್ಥಿಸಿರಿ.

## ಆಕರ ಗ್ರಂಥಗಳು


*Freedom at Midnight - Dominque Lapierre and Larry Collins*

*The Discovery of India - Jawaharlal Nehru*

*The Transfer of Power in India - V. P. Menon*

*India After Independence (1947-2000)- Bipan Chandra*

*Wings of Fire - Dr. A. P. J. Abdul Kalam*

*Beyond the lines - Kuldip Nayar*

## ಅಧ್ಯಾಪಕರ ಮೌಲ್ಯ ಮಾಪನ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸ ಬೇಕಾದುದು |
|---|---|---|---|
| 1. ಸ್ವತಂತ್ರ ಭಾರತವು ಎದುರಿಸಿದ ಮೊದಲ ಸವಾಲು ವಿಭಜನೆ ಮತ್ತು ನಿರಾಶ್ರಿತರ ಸಮಸ್ಯೆಯಾಗಿದೆ ಎಂದು ತಿಳಿದುಕೊಂಡು ವಿವರಿಸಲು ಎಲ್ಲಾ ಮಕ್ಕಳಿಗೆ ಸಾಧ್ಯವಾಗಿದೆ. | ☐ | ☐ | ☐ |
| 2. ದೇಶೀಯ ರಾಜ್ಯಗಳನ್ನು ಹೇಗೆ ಭಾರತದೊಳಗೆ ವಿಲಿನೀಕರಿಸಲಾಯಿತು ಎಂದು ವಿವರಿಸಲು ಮಕ್ಕಳಿಗೆ ಸಾಧ್ಯವಾಯಿತು. | ☐ | ☐ | ☐ |
| 3. ಭಾರತದಲ್ಲಿ ಪ್ರಜಾಪ್ರಭುತ್ವ ಆಶಯಗಳು ಪ್ರಭಲವಾಗಲು ಕಾರಣವಾದ ಘಟಕಗಳನ್ನು ವಿವರಿಸಲು ಮಕ್ಕಳಿಗೆ ಸಾಧ್ಯವಾಯಿತು. | ☐ | ☐ | ☐ |
| 4. ಹೊಸ ರಾಜ್ಯಗಳ ರೂಪೀಕರಣಕ್ಕೆ ಕಾರಣವಾದ ಸನ್ನಿವೇಶಗಳನ್ನು ವಿಶ್ಲೇಷಿಸಲು ಮಕ್ಕಳಿಗೆ ಸಾಧ್ಯವಾಯಿತು. | ☐ | ☐ | ☐ |
| 5. ಸ್ವತಂತ್ರ ಭಾರತ ಆರ್ಥಿಕ ಕ್ಷೇತ್ರದಲ್ಲಿ ಸಾಧಿಸಿದ ಅಭಿವೃದ್ಧಿಯನ್ನು ಮಂಡಿಸಲು ಮಕ್ಕಳಿಗೆ ಸಾಧ್ಯವಾಗಿದೆ. | ☐ | ☐ | ☐ |
| 6. ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರದಲ್ಲಿ ಭಾರತ ಸಾಧಿಸಿದ ಪುರೋಗತಿಗೆ ಸಂಬಂಧಿಸಿದ ಮಾಹಿತಿಗಳನ್ನು ಕ್ರಿಯಾತ್ಮಕವಾಗಿ ಮಂಡಿಸಲು ಮಕ್ಕಳಿಗೆ ಸಾಧ್ಯವಾಗುವುದು. | ☐ | ☐ | ☐ |
| 7. ಸ್ವತಂತ್ರ ಭಾರತದಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ತಿಳಿದುಕೊಂಡು, ಟಿಪ್ಪಣಿಯನ್ನು ತಯಾರಿಸುವುದಕ್ಕೆ ಮಕ್ಕಳಿಗೆ ಸಾಧ್ಯವಾಗಿದೆ. | ☐ | ☐ | ☐ |
| 8. ಕಲಿಕಾ ಪ್ರವಾಸಗಳನ್ನು, ವಿಜ್ಞಾನ ಮೇಳಗಳಲ್ಲಿ ಪ್ರದರ್ಶನಗಳನ್ನು ಏರ್ಪಡಿಸುವಂತೆ ಮಕ್ಕಳನ್ನು ಪ್ರೇರೇಪಿಸಲು ಸಾಧ್ಯವಾಯಿತು. | ☐ | ☐ | ☐ |
| 9. ಪಾಠಭಾಗದ ಪ್ರಧಾನ ಆಶಯಗಳನ್ನು ಐ.ಸಿ.ಟಿ.ಯ ಮೂಲಕ ವಿನಿಮಯ ಮಾಡಲು ಸಾಧ್ಯವಾಯಿತು. | ☐ | ☐ | ☐ |



# 7

# ಕೇರಳವು ಆಧುನಿಕತೆಯ ಕಡೆಗೆ

ಕೇರಳವನ್ನು ಆಧುನಿಕತೆಯೆಡೆಗೆ ಮುನ್ನಡೆಸಿದ ಘಟಕಗಳ ಕುರಿತು ಈ ಅಧ್ಯಾಯದಲ್ಲಿ ಪರಾಮರ್ಶಿಸಲಾಗಿದೆ. ಕೇರಳಕ್ಕೆ ಯುರೋಪಿಯನ್ ಶಕ್ತಿಗಳ ಆಗಮನದೊಂದಿಗೆ ಪಾಠಭಾಗವು ಆರಂಭಗೊಳ್ಳುವುದು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯು ಕೇರಳದಲ್ಲಿ ಅಧಿಪತ್ಯವನ್ನು ಸ್ಥಾಪಿಸಲು ನಡೆಸಿದ ಪ್ರಯತ್ನಗಳು ಮತ್ತು ಅದನ್ನು ತಡೆಯಲು ಕೇರಳದ ವಿವಿಧ ಪ್ರದೇಶಗಳಲ್ಲಿ ನಡೆದ ಪ್ರತಿಭಟನೆಗಳು ಈ ಪಾಠಭಾಗದ ಭಾಗವಾಗಿದೆ. ಬ್ರಿಟಿಷ್ ಕಲೋನಿಸಂ, ಕೇರಳದ ಭೂ ಸಂಬಂಧಗಳಲ್ಲಿ, ಕೃಷಿ ಕ್ಷೇತ್ರಗಳಲ್ಲಿ ಬದಲಾವಣೆಗಳನ್ನು ತರುವುದರೊಂದಿಗೆ, ವಿದೇಶೀ ವ್ಯಾಪಾರದ ಮೂಲಕ ಕೇರಳವನ್ನು ಜಾಗತಿಕ ವ್ಯಾಪಾರದ ಭಾಗವಾಗಿಸಿರುವುದನ್ನು ಇಲ್ಲಿ ವಿವರಿಸಲಾಗಿದೆ. ಪರಂಪರಾಗತ ಮತ್ತು ಆಧುನಿಕ ಕೈಗಾರಿಕೆಗಳ ಬೆಳವಣಿಗೆ ಸಾರಿಗೆ ವ್ಯವಸ್ಥೆಯಲ್ಲುಂಟಾದ ಬದಲಾವಣೆ ಇತ್ಯಾದಿಗಳು ಕಾಲನೀಕರಣದ ಭಾಗವಾಗಿತ್ತು. ಆಡಳಿತವನ್ನು ಗಟ್ಟಿಗೊಳಿಸಲು ಶೋಷಣೆಯ ಭಾಗವಾಗಿಯೂ ಈ ಕ್ರಮಗಳನ್ನು ಬ್ರಿಟೀಷರು ಜ್ಯಾರಿಗೊಳಿಸಿದರೂ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಬ್ರಿಟೀಷರ ಹಸ್ತಕ್ಷೇಪವು ಕೇರಳವನ್ನು ಆಧುನಿಕಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿತು.

ಹತ್ತೊಂಭತ್ತು ಮತ್ತು ಇಪ್ಪತ್ತನೇ ಶತಮಾನದಲ್ಲಿ ಬೆಳೆದು ಬಂದ ಸಮಾಜ ಸುಧಾರಣಾ ಚಳುವಳಿಗಳು ಕೇರಳವನ್ನು ಆಧುನಿಕತೆಯ ಕಡೆಗೆ ಕೊಂಡೊಯ್ಯುವಲ್ಲಿ ಗಮನಾರ್ಹ ಪಾತ್ರವನ್ನು ವಹಿಸಿತು. ಅವರು ಉತ್ತು ಬೆಳೆಸಿದ ಮಣ್ಣಿನಲ್ಲಿ ರಾಷ್ಟ್ರೀಯ ಚಳುವಳಿಯು ಶಕ್ತವಾದದ್ದು. ಒಂದೇ ರೀತಿಯಲ್ಲಿ ಅಲ್ಲದಿದ್ದರೂ ಮಲಬಾರ್ ಕೊಚ್ಚಿ ತಿರುವಿದಾಂಕೂರಿನಲ್ಲಿ ವಿವಿಧ ಪ್ರದೇಶಗಳಲ್ಲಿ ಬೆಳೆದು ಬಂದ ಪ್ರತಿಭಟನೆಗಳು ರಾಷ್ಟ್ರೀಯ ಚಳುವಳಿಯ ಬೆನ್ನೆಲುಬಾಗಿತ್ತು. ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯ ಪಾತ್ರವನ್ನು ವಿಶೇಷವಾಗಿ ಈ ಪಾಠಭಾಗದಲ್ಲಿ ವಿವರಿಸಲಾಗಿದೆ. ಐಕ್ಯ ಕೇರಳದ ರೂಪೀಕರಣಕ್ಕೆ ಕಾರಣವಾದ ಸನ್ನಿವೇಶಗಳನ್ನು ಚರ್ಚಿಸಿ 1956 ನವೆಂಬರ್ 1ರ ತನಕದ ಕೇರಳ ರೂಪೀಕರಣದ ವರೆಗಿನ ವಿವಿಧ ಘಟಕಗಳನ್ನು ಈ ಅಧ್ಯಾಯದಲ್ಲಿ ಪರಾಮರ್ಶಿಸಲಾಗಿದೆ.

ಕೇರಳ ಪ್ರಾಂತ್ಯ ರೂಪೀಕರಣದ ನಂತರ ವಿವಿಧ ಕ್ಷೇತ್ರಗಳಲ್ಲಿ ಕೇರಳವು ಸಾಧಿಸಿದ ಸಾಧನೆಗಳನ್ನು ವಿಶ್ಲೇಷಿಸುವ ಸಾಧ್ಯತೆಗಳನ್ನು, ಪ್ರಸ್ತುತ ಕೇರಳವು ಎದುರಿಸುವ ಸಮಸ್ಯೆಗಳನ್ನು ವಿಮರ್ಶಿಸುವ ಸಾಧ್ಯತೆಗಳನ್ನು ಈ ಪಾಠಭಾಗವು ತೆರೆದಿಡುವುದು.

ಯೂನಿಟ್ ಫ್ರೇಂ

## 7. ಕೇರಳವು ಆಧುನಿಕತೆಯ ಕಡೆಗೆ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಕೇರಳಕ್ಕೆ ಯುರೋಪಿಯನರ ಆಗಮನ– ಬ್ರಿಟೀಷ್ ಮೇಧಾವಿತ್ವ.<br>• ಬ್ರಿಟೀಷರಿಗೆದುರಾದ ಆರಂಭ ಕಾಲದ ಪ್ರತಿಭಟನೆಗಳು – ಅಟ್ಟಿಂಗಲ್ ದಂಗೆ– ಪಳಶ್ಶಿರಾಜ, ವೇಲುತಂಬಿ, ಪಾಲಿಯತಚ್ಚನ್<br>• ಬ್ರಿಟಿಷ್ ಆಡಳಿತ ಕಾಲದಲ್ಲಿ ಕೇರಳವು ಜಾಗತಿಕ ವ್ಯಾಪಾರದ ಭಾಗವಾಗುತ್ತಿದೆ.<br>• ಭೂ ಸಂಬಂಧಗಳಲ್ಲಿ ಉಂಟಾದ ಬದಲಾವಣೆಗಳು–ಕೃಷಿಯ ವಾಣಿಜ್ಯೀಕರಣ<br>• ಕೈಗಾರಿಕಾ ಕ್ಷೇತ್ರದಲ್ಲುಂಟಾದ ಅಭಿವೃದ್ಧಿ.<br>• ಸಾಂಸ್ಕೃತಿಕ ಕ್ಷೇತ್ರದಲ್ಲಿ ಬ್ರಿಟೀಷರ ಪ್ರಭಾವ–ಮುದ್ರಣ, ಶಿಕ್ಷಣ, ಆರೋಗ್ಯ, ನೀತಿ ನ್ಯಾಯ–ನಿಯಮ.<br>• ಸಮಾಜ ಸುಧಾರಕರು ಮತ್ತು ಸಾಮಾಜಿಕ ಕಾರ್ಯ ಸುಧಾರಣೆಗಳು<br>• ಕೇರಳದಲ್ಲಿ ರಾಷ್ಟ್ರೀಯ ಚಳುವಳಿ– ಮಲಬಾರ್, ಕೊಚ್ಚಿ, ತಿರುವಾಂಕೂರು– ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯರು.<br>• ಐಕ್ಯ ಕೇರಳ ಚಳುವಳಿ–ಪ್ರಾಂತ್ಯ ರೂಪೀಕರಣ. | • ಕೇರಳಕ್ಕೆ ತಲುಪಿದ ಯುರೋಪಿಯನರು ಅವರ ನಡುವೆ ನಡೆದ ಪರಸ್ಪರ ಸ್ಪರ್ಧೆಗಳು ಅವರ ಉದ್ದೇಶಗಳನ್ನು ಪಟ್ಟಿ ಮಡುವರು.<br>• ಬ್ರಿಟಿಷರ ವಿರುದ್ಧ ನಡೆದ ಆರಂಭ ಕಾಲದ ಪ್ರತಿಭಟನೆಯ ಕುರಿತು ಟಿಪ್ಪಣಿ ತಯಾರಿಸುವರು.<br>• ಕೇರಳದ ವಿದೇಶೀ ವ್ಯಾಪಾರದ ವಿಶೇಷತೆಗಳನ್ನು ಪಟ್ಟಿ ಮಾಡುವರು.<br>• ಬ್ರಿಟಿಷರ ಆಡಳಿತವು ಕೇರಳದಲ್ಲಿ ಭೂ ಸಂಬಂಧಗಳಲ್ಲಿ, ಕೃಷಿ ವಲಯದಲ್ಲಿ ಉಂಟುಮಾಡಿದ ಬದಲಾವಣೆಯನ್ನು ಚರ್ಚೆ ಮಾಡುವರು.<br>• ತೋಟ ಕೈಗಾರಿಕೆ ಪರಂಪರಾಗತ ಮತ್ತು ಆಧುನಿಕ ಕೈಗಾರಿಕೆ ಮುಂದಾದ ಕ್ಷೇತ್ರಗಳಲ್ಲುಂಟಾದ ಪುರೋಗತಿಯನ್ನು ತೋರಿಸುವ ಫ್ಲೋಚಾರ್ಟ್ ತಯಾರಿಸುವರು.<br>• ಸಾಂಸ್ಕೃತಿಕ ವಲಯದಲ್ಲಿ ಬ್ರಿಟೀಷ್ ಆಡಳಿತ ಉಂಟುಮಾಡಿದ ಬದಲಾವಣೆಗಳು' ಎಂಬ ವಿಷಯದಲ್ಲಿ ಸೆಮಿನಾರ್ ಪೇಪರ್ ತಯಾರಿಸುವರು.<br>• ಸಮಾಜ ಸುಧಾರಕರು ಮತ್ತು ಸಮಾಜ ಸುಧಾರಣಾ ಚಳುವಳಿಗಳನ್ನು ಪಟ್ಟಿ ಮಾಡುವರು. ಸಾಮಾಜಿಕ ಸುಧಾರಕರ ದೃಷ್ಟಿಕೋನವನ್ನು ಕೇರಳದ ಜನತೆ ಎಷ್ಟರ ಮಟ್ಟಿಗೆ ಸ್ವೀಕರಿಸಿದೆ ಎಂಬ ವಿಷಯದಲ್ಲಿ ಸಂವಾದ ನಡೆಸುವರು.<br>• ಕೇರಳದಲ್ಲಿ ರಾಷ್ಟ್ರೀಯ ಚಳುವಳಿಯ ವಿಶೇಷತೆಗಳನ್ನು ಚರ್ಚೆ ನಡೆಸುವರು.<br>• ಐಕ್ಯ ಕೇರಳದ ರೂಪೀಕರಣಕ್ಕೆ ಕಾರಣವಾದ ಸನ್ನಿವೇಶಗಳನ್ನು ಪಟ್ಟಿ ಮಾಡುವರು. | • ಕೇರಳದಲ್ಲಿ ಬ್ರಿಟಿಷ್ ಅಧಿಪತ್ಯವು ಹೇಗೆ ಸ್ಥಾಪಿಸಲ್ಪಟ್ಟಿತು ಎಂದು ಅವಲೋಕಿಸುವರು.<br>• ಬ್ರಿಟಿಷ್ ಶೋಷಣೆಗೆದುರಾಗಿ ಕೇರಳದ ವಿವಿಧ ಭಾಗಗಳಲ್ಲಿ ನಡೆದ ಪ್ರತಿಭಟನೆಗಳ ವಿಶೇಷತೆಗಳನ್ನು ಪಟ್ಟಿ ಮಾಡುವರು.<br>• ಕೇರಳವು ಜಾಗತಿಕ ಮಾರುಕಟ್ಟೆಯ ಭಾಗವಾಗಿ ಬದಲಾಗಲು ಕಾರಣವಾದ ಸನ್ನಿವೇಶಗಳನ್ನು ಚರ್ಚಿಸುವುದು.<br>• ಕೃಷಿಯ ವಾಣಿಜ್ಯೀಕರಣ– ಸಂಬಂಧಗಳು ಉಂಟುಮಾಡಿದ ಬದಲಾವಣೆಗಳನ್ನು ತಿಳಿದುಕೊಳ್ಳುವುದು.<br>• ಕೈಗಾರಿಕಾ ಕ್ಷೇತ್ರದಲ್ಲಿ ಬ್ರಿಟೀಷರು ಕೈಗೊಂಡ ಅಭಿವೃದ್ಧಿ ಯೋಜನೆಗಳನ್ನು ಪಟ್ಟಿ ಮಾಡುವರು.<br>• ಸಾಂಸ್ಕೃತಿಕ ವಲಯದಲ್ಲಿ ಬ್ರಿಟಿಷ್ ಆಡಳಿತವು ಬೀರಿದ ಪ್ರಭಾವವನ್ನು ತಿಳಿದುಕೊಳ್ಳುವರು.<br>• ಕೇರಳದ ಸಾಮಾಜಿಕ ಬದಲಾವಣೆಯಲ್ಲಿ ಸಾಮಾಜಿಕ ಸುಧಾರಣಾ ಚಳುವಳಿಗಳ ಪಾತ್ರವನ್ನು ತಿಳಿದುಕೊಳ್ಳುವುದು.<br>• ಕೇರಳದ ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯರು ವಹಿಸಿದ ಪಾತ್ರವನ್ನು ವಿಶ್ಲೇಷಿಸುವುದು.<br>• ಐಕ್ಯ ಕೇರಳ ರೂಪುಗೊಳ್ಳಲು ಕಾರಣವಾದ ಸನ್ನಿವೇಶಗಳನ್ನು ವಿಶ್ಲೇಷಿಸುವುದು. |

## ಅಧ್ಯಾಯದ ಕಡೆಗೆ......

### ಯುರೋಪಿಯನರ ಆಗಮನ:

ಕೇರಳಕ್ಕೆ ಆಗಮಿಸಿದ ವಿವಿಧ ಯುರೋಪಿಯನ್ ಶಕ್ತಿಗಳು ಮತ್ತು ಅವರ ಉದ್ದೇಶಗಳನ್ನು ಈ ಪಾಠಭಾಗದಲ್ಲಿ ಪರಾಮರ್ಶಿಸಲಾಗಿದೆ. ಅದರ ಭಾಗವಾಗಿ ಪೋರ್ಚುಗೀಸ್ ನಾವಿಕನಾದ ವಾಸ್ಕೋಡಗಾಮ, ಅವನೊಂದಿಗೆ ಕೇರಳಕ್ಕೆ ತಲುಪಿದ ಅಲ್‌ವಾರೋ ವೆನ್‌ಗೋವಿನ ಡಯರಿಯ ಪುಟವೊಂದನ್ನು ಪಾಠಭಾಗದ ಆರಂಭದಲ್ಲಿ ನೀಡಲಾಗಿದೆ.

ಕೇರಳಕ್ಕೆ ಆಗಮಿಸಿದ ಯುರೋಪಿಯನ್ ಶಕ್ತಿಗಳನ್ನು ಪಟ್ಟಿ ಮಾಡಬೇಕು.

- ಪೋರ್ಚುಗೀಸರು
- ಡಚ್ಚರು
- ಇಂಗ್ಲಿಷರು
- ಫ್ರೆಂಚರು

ನಂತರದಲ್ಲಿ ಪಾಠಪುಸ್ತಕದ ಪುಟ ಸಂಖ್ಯೆ 123, 124 ಎಂಬಿವುಗಳನ್ನು ಓದಿ ಯುರೋಪಿಯನ್ ಶಕ್ತಿಗಳ ಪರಸ್ಪರ ಸ್ಪರ್ಧೆಯು ಯಾವ ರೀತಿಯಲ್ಲಿ ಬ್ರಿಟಿಷ್ ಅಧಿಪತ್ಯಕ್ಕೆ ನೆರವಾಯಿತೆಂಬುದನ್ನು ಚರ್ಚೆ ಮಾಡಬೇಕು. ಯುರೋಪಿಯನ್ ಶಕ್ತಿಗಳ ಉದ್ದೇಶಗಳನ್ನು ಪಟ್ಟಿ ಮಾಡಬೇಕು.

ಕ್ರೋಢೀಕರಣದಲ್ಲಿ ಈ ಕೆಳಗಿನವುಗಳನ್ನು ಸೇರಿಸಬೇಕು. :

- ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಬ್ರಿಟೀಷರು ಕೇರಳವನ್ನು ತಲುಪಿದ ಯುರೋಪಿಯನ್ ಶಕ್ತಿಗಳು.
- ಕೇರಳಕ್ಕೆ ಮೊದಲು ಬಂದ ಪೋರ್ಚುಗೀಸರನ್ನು 1663ರಲ್ಲಿ ಡಚ್ಚರು ಸೋಲಿಸಿದರು.
- 1741ರಲ್ಲಿ ನಡೆದ ಕೊಳಚ್ಚಲ್ ಯುದ್ಧವು ಡಚ್ಚರ ಪರಾಜಯಕ್ಕೆ ಕಾರಣವಾಯಿತು.
- ಫ್ರೆಂಚರು ಮತ್ತು ಬ್ರಿಟೀಷರ ನಡುವೆ ನಡೆದ ಕರ್‌ನಾಟಿಕ್ ಯುದ್ಧದ ಗೆಲುವಿನೊಂದಿಗೆ ದಕ್ಷಿಣ ಭಾರತವು ಬ್ರಿಟೀಷರ ನಿಯಂತ್ರಣಕ್ಕೆ ಬಂತು.
- ಅರಬರ ಮತ್ತು ಚೈನಾದವರ ವ್ಯಾಪಾರ, ವಾಣಿಜ್ಯವನ್ನು ತಡೆಯುವುದು, ಕರಿಮೆಣಸು ವ್ಯಾಪಾರ ಮಾರುಕಟ್ಟೆಯನ್ನು ತಮ್ಮದಾಗಿಸುವುದು ಯುರೋಪಿಯನ್ ಶಕ್ತಿಗಳ ಕೇರಳ ಕಡೆಗಿನ ಆಗಮನದ ಪ್ರಧಾನ ಉದ್ದೇಶವಾಗಿತ್ತು.

### ಕೇರಳದಲ್ಲಿ ಈಸ್ಟ್ ಇಂಡಿಯಾ ಕಂಪೆನಿ

ಕೇರಳ ಯಾವ ರೀತಿಯಲ್ಲಿ ಬ್ರಿಟೀಷರ ನಿಯಂತ್ರಣಕ್ಕೊಳಗಾಯಿತು ಎಂದು ಪಾಠಭಾಗದ ಆರಂಭದಲ್ಲಿ ವಿವರಿಸಲಾಗಿದೆ. ಇದನ್ನು ತಿಳಿಯಲು ಕೇರಳದಲ್ಲಿ ಬ್ರಿಟೀಷರ ವಿರುದ್ಧ ನಡೆದ ಮೊದಲ ಸಂಘಟಿತ ಹೋರಾಟವಾದ ಅಟ್ಟಿಂಗಲ್ ದಂಗೆಯ ಕುರಿತು ಮಕ್ಕಳು ತಿಳಿದುಕೊಳ್ಳಬೇಕು. ಅಟ್ಟಿಂಗಲ್ ದಂಗೆಯ ಕಾರಣ ಮತ್ತು ಪ್ರಾಧಾನ್ಯದ ಕುರಿತು ತರಗತಿಯಲ್ಲಿ ಲಘು ಚರ್ಚೆಯೊಂದನ್ನು ನಡೆಸಿರಿ. ನಂತರದಲ್ಲಿ ಮಲಬಾರ್ ಕೊಚ್ಚಿ ತಿರುವಾಂಕೂರು ಯಾವ ರೀತಿಯಲ್ಲಿ ಬ್ರಿಟೀಷರ ನಿಯಂತ್ರಣಕ್ಕೊಳಗಾಯಿತು ಎಂಬ ಟಿಪ್ಪಣಿ ತಯಾರಿಸಬೇಕು.

**ಟಿಪ್ಪಣಿಯಲ್ಲಿ ಈ ಕೆಳಗಿನ ಅಂಶಗಳು ಇರಬೇಕು :**

- ಈಸ್ಟ್ ಇಂಡಿಯಾ ಕಂಪೆನಿಯು ವಿಳಿಂಜ, ತಲಶ್ಶೇರಿ, ಅಂಜುತೆಂಜ್‌ಗಳಲ್ಲಿ ಬ್ರಿಟೀಷರು ವ್ಯಾಪಾರಿ ಮಳಿಗೆಯನ್ನು ಆರಂಭಿಸಿದರು.
- ಅಂಜುತೆಂಜ್‌ನ್ನು ಸೈನಿಕ ಕೇಂದ್ರವನ್ನಾಗಿಸುವ ಬ್ರಿಟೀಷರ ಹುನ್ನಾರದ ವಿರುದ್ಧವಾದ ಪ್ರತಿಭಟನೆಯು ಅಟ್ಟಿಂಗಲ್ ದಂಗೆಯಾಗಿತ್ತು.
- ಬ್ರಿಟಿಷರಿಗೆದುರಾಗಿ ಕೇರಳದಲ್ಲಿ ನಡೆದ ಮೊದಲ ಸಂಘಟಿತ ಹೋರಾಟವು ಅಟ್ಟಿಂಗಲ್ ದಂಗೆಯಾಗಿತ್ತು.

- ಮೂರನೇ ಮೈಸೂರು ಯುದ್ಧದೊಂದಿಗೆ ನಡೆದ ಶ್ರೀರಂಗ ಪಟ್ಟಣ ಒಪ್ಪಂದ ಫಲವಾಗಿ, ಮಲಬಾರ್ ಬ್ರಿಟೀಷರ ವಶವಾಯಿತು.
- 1792ರಲ್ಲಿ ಕೊಚ್ಚಿಯ ರಾಜ ಮತ್ತು 1795ರಲ್ಲಿ ತಿರುವಾಂಕೂರು ಬ್ರಿಟೀಷರ ಅಧಿಪತ್ಯವನ್ನು ಅಂಗೀಕರಿಸಿದವು.
- ಮಲಬಾರ್ ನೇರವಾಗಿ ಮತ್ತು ಕೊಚ್ಚಿ, ತಿರುವಾಂಕೂರು ಸಾಮಂತರಾಜರ ಮೂಲಕ ಬ್ರಿಟೀಷರ ವಶವಾಯಿತು.

**ಬ್ರಿಟೀಷರ ವಿರುದ್ಧ ನಡೆದ ಆರಂಭಕಾಲದ ಪ್ರತಿಭಟನೆಗಳು:**

ಕೇರಳದ ವಿವಿಧ ಭಾಗಗಳಲ್ಲಿ ಬೆಳೆದು ಬಂದ ಪ್ರತಿಭಟನೆಗಳೂ ಅವುಗಳ ಕಾರಣಗಳೂ ಈ ಭಾಗದಲ್ಲಿ ವಿವರಿಸಲ್ಪಟ್ಟಿದೆ. ಈ ಎಲ್ಲ ಪ್ರತಿಭಟನೆಗಳಿಗೆ ಬ್ರಿಟೀಷರ ಶೋಷಣೆಯು ಹೇತುವಾಗಿದೆ.

ವೇಲುತಂಬಿ ದಳವನ ಕುಂಡರ ಘೋಷೆಯ ಒಂದು ಭಾಗವನ್ನು ಪಾಠಭಾಗದ ಪ್ರವೇಶಿಕೆಯಾಗಿ ನೀಡಲಾಗಿದೆ. ಇದನ್ನು ಓದಿ ಬ್ರಿಟೀಷ್ ಆಡಳಿತದ ಸ್ವಭಾವವನ್ನು ಪಟ್ಟಿ ಮಾಡಬೇಕು.

- ಬ್ರಿಟೀಷ್ ಆಡಳಿತದ ವಂಚನೆ ಮತ್ತು ಶೋಷಣೆ
- ಸೈನ್ಯ, ರಾಜಧಾನಿ, ಅರಮನೆಗಳನ್ನು ವಶಪಡಿಸಿ, ನಿಯಂತ್ರಣದಲ್ಲಿರಿಸಿದರು.
- ದೇಶೀಯ ರಾಜರ ಅಂತಸ್ತು, ಆಚಾರ ಅನುಷ್ಠಾನಗಳಿಗೆ ಎದುರಾದ ಸವಾಲುಗಳು.
- ವ್ಯಾಪಾರ, ಮಾರುಕಟ್ಟೆಗಳ ಸ್ಥಾಪನೆ
- ಕಠಿಣ ಶಿಕ್ಷೆಗಳು
- ಭೂಮಿಯ ಮೇಲಿನ ನಿಯಂತ್ರಣ

ದೇಶೀಯ ರಾಜರ ಅಧಿಕಾರದ ಮೇಲಿನ ಅತಿಯಾದ ಹಸ್ತಕ್ಷೇಪ ಮತ್ತು ನಿಯಂತ್ರಣ ಇತ್ಯಾದಿಗಳಿಗೆದುರಾದ ಪ್ರತಿಭಟನೆಗಳ ಪರಿಣಾಮವಾಗಿ ಪಳಶ್ಶೀ ದಂಗೆ, ವೇಲುತಂಬಿ ಮತ್ತು ಪಾಲಿಯತಚ್ಚನ್‌ರ ಪ್ರತಿಭಟನೆಗಳು. ಮಲಬಾರ್ ದಂಗೆ, ಕುರುಚಿಯರ ದಂಗೆ ನಡೆಯಿತೆಂದು ಮಕ್ಕಳು ತಿಳಿದುಕೊಳ್ಳಬೇಕು. ಪಾಠಭಾಗವನ್ನು ಚರ್ಚಿಸಿ, ಆರಂಭಕಾಲದ ಪ್ರತಿಭಟನೆಗಳು, ಅವುಗಳು ನಡೆದ ಪ್ರದೇಶಗಳು, ಕಾರಣಗಳು ಇತ್ಯಾದಿ ವಿವರಗಳನ್ನು ಸೇರಿಸಿ ಪಟ್ಟಿಯನ್ನು ತಯಾರಿಸಬೇಕು.

| ಪ್ರತಿಭಟನೆಗಳು | ಪ್ರದೇಶ | ಕಾರಣಗಳು |
|---|---|---|
| ಪಳಶೀ ದಂಗೆ | ಮಲಬಾರ್ | ತಪ್ಪಾದ ತೆರಿಗೆ ಧೋರಣೆ |
| ಪಾಲಿಯತಚ್ಚನ್ | ಕೊಚ್ಚಿ | ಆಂತರಿಕ ವಿಷಯಗಳಲ್ಲಿ ಬ್ರಿಟೀಷರ ಹಸ್ತಕ್ಷೇಪ |
| ವೇಲುತಂಬಿ | ತಿರುವಾಂಕೂರು | ಆಂತರಿಕ ವಿಷಯಗಳಲ್ಲಿ ಬ್ರಿಟೀಷರ ಹಸ್ತಕ್ಷೇಪ |
| ಕುರುಚಿಯರ ದಂಗೆ | ವಯನಾಡ್ | ತಪ್ಪಾದ ತೆರಿಗೆ ಧೋರಣೆ |
| ಮಾಪಿಳ್ಳೆ ದಂಗೆ | ಮಲಬಾರ್ | ಕೃಷಿಕರ ಅಸಂತೃಪ್ತಿ |

ಕುಂಡರ ಘೋಷಣೆಯ ರಾಷ್ಟ್ರೀಯ ಪ್ರಾಧಾನ್ಯವನ್ನು ಪಾಠಭಾಗದ ಆಧಾರದಲ್ಲಿ ಚರ್ಚಿಸಬೇಕು. ಬ್ರಿಟೀಷರ ಶೋಷಣೆಗೆದುರಾಗಿ ಜನರೊಂದಿಗೆ, ಆಯುಧ ಸಹಿತವಾಗಿ ಹೋರಾಡಲು 1809 ಜನವರಿ 11ರಂದು ವೇಲುತಂಬಿ ದಳವ ನೀಡಿದ ಕರೆಯು ಕುಂಡರ ಘೋಷಣೆಯಾಗಿತ್ತು. ಆರಂಭ ಕಾಲದ

ಬ್ರಿಟೀಷರಿಗೆದುರಾದ ಪ್ರತಿಭಟನೆಗಳ ನಾಟಕಾವಿಷ್ಕಾರವನ್ನು ಮಕ್ಕಳು ಪ್ರದರ್ಶಿಸಲಿ.

### ಕೇರಳವು ಜಾಗತಿಕ ವ್ಯಾಪಾರದ ಭಾಗವಾಗುತ್ತಿದೆ

ಬ್ರಿಟಿಷ್ ಆಡಳಿತದ ಕೈ ಕೆಳಗೆ, ಕೇರಳದಲ್ಲಿದ್ದ ಪರಂಪರಾಗತ ಗ್ರಾಮೀಣ ಆರ್ಥಿಕ ವ್ಯವಸ್ಥೆ ಕಾಲನಿಯನ್ ಆರ್ಥಿಕ ವ್ಯವಸ್ಥೆಯಾಗಿ ಬದಲಾಗಲು ಕಾರಣವಾದ ಸನ್ನಿವೇಶಗಳನ್ನು ಪಾಠಭಾಗದ ಸಹಾಯದಿಂದ ಚರ್ಚಿಸಬೇಕು. ಕೇರಳದಿಂದ ರಫ್ತಾಗುತ್ತಿದ್ದ ಮತ್ತು ಕೇರಳಕ್ಕೆ ಆಮದಾಗುತ್ತಿದ್ದ ವಸ್ತುಗಳ ಪಟ್ಟಿಯೊಂದನ್ನು ನೀಡಲಾಗಿದೆ. ಅದನ್ನು ಪರಿಶೀಲಿಸಿ, ವಿದೇಶೀ ವ್ಯಾಪಾರದ ಲಕ್ಷಣವನ್ನು ಬರೆಯಬೇಕು.

- ಕೃಷಿ ಉತ್ಪನ್ನಗಳು, ಕಚ್ಚಾವಸ್ತುಗಳು ರಫ್ತಾಗುತ್ತಿದ್ದವು.
- ಯಂತ್ರ ನಿರ್ಮಿತ ವಸ್ತುಗಳು ಆಮದಾಗುತ್ತಿದ್ದುವು.
- ರಫ್ತು ಮಾಡುತ್ತಿದ್ದ ಬಹುತೇಕ ವಸ್ತುಗಳು ಸುಗಂಧ ದ್ರವ್ಯ ಗಳಾಗಿದ್ದುವು.
- ಲೋಹ ನಿರ್ಮಾಣಕ್ಕೆ ಅಗತ್ಯವಾದ ಕಬ್ಬಿಣದ ಅದಿರು ಕೇರಳದಿಂದಲೇ ರಫ್ತಾಗುತ್ತಿದ್ದವು.

ವಿದೇಶೀ ವ್ಯಾಪಾರವನ್ನು ಉತ್ತಮಪಡಿಸಲು ಬ್ರಿಟೀಷರು ಸ್ವೀಕರಿಸಿದ ತಂತ್ರಗಳು, ಧೋರಣೆಗಳ ಕುರಿತು ಟಿಪ್ಪಣಿ ತಯಾರಿಸಬೇಕು.

ವ್ಯಾಪಾರಿ ನಿಯುಮಗಳನ್ನು ಬ್ರಿಟೀಷರಿಗೆ ಅನುಕೂಲಕರವಾಗುವಂತೆ ತಿದ್ದುಪಡಿ ಮಾಡಲಾಯಿತು. (ಆಮದು ಸುಂಕದ ಕಡಿತ ರಫ್ತಿನ ಮೇಲಿನ ನಿಯಂತ್ರಣವನ್ನು ತೆಗೆದು ಹಾಕಿದ್ದು )

- ಏಕೀಕೃತ ನಾಣ್ಯ ವ್ಯವಸ್ಥೆ
- ಏಕೀಕೃತ ತೂಕ ಮತ್ತು ಅಳತೆ
- ಸಾರಿಗೆ ಸೌಕರ್ಯವನ್ನು ಉತ್ತಮಪಡಿಸಲು, ರಸ್ತೆಗಳನ್ನು, ಸೇತುವೆಗಳನ್ನು, ರೈಲ್ವೇ ಹಳಿಗಳನ್ನು ನಿರ್ಮಿಸಿದರು.
- ಬಂದರುಗಳ ಅಭಿವೃದ್ಧಿ

### ಭೂ ಸಂಬಂಧಗಳಲ್ಲಿ ಉಂಟಾದ ಬದಲಾವಣೆ

ಬ್ರಿಟೀಷ್ ಆಡಳಿತ ಕಾಲದಲ್ಲಿ ಭೂ ಸಂಬಂಧಗಳಲ್ಲಿ ಬದಲಾವಣೆಯನ್ನುಂಟು ಮಾಡಿತು. ಭೂಮಿಗೆ ಸಂಬಂಧಿಸಿದಂತೆ ಯಾವೆಲ್ಲ ಬದಲಾವಣೆಗಳು ಬ್ರಿಟೀಷರ ಕಾಲದಲ್ಲಿ ನಡೆಯಿತು ?

ಪಾಠಭಾಗವನ್ನು ಆಧರಿಸಿ ಚರ್ಚೆ ನಡೆಸಿರಿ. ಕ್ರೋಢೀಕರಣದಲ್ಲಿ ಕೆಳಗಿನ ವಿಷಯಗಳು ಒಳಗೊಳ್ಳಬೇಕು.

- ಬ್ರಿಟಿಷ್ ಕಾಲದಲ್ಲಿ ಕೃಷಿ ಭೂಮಿಯಲ್ಲಿ ಕೃಷಿ ಕೆಲಸ ಮಾಡುವವನಿಗೆ ಭೂಮಿಯ ಹಕ್ಕು ಇರಲಿಲ್ಲ.
- ಜಮೀನ್ದಾರರು ಮತ್ತು ಬ್ರಿಟಿಷ್ ವ್ಯಕ್ತಿಗಳು ಹೇರುವ ಅಮಿತವಾದ ತೆರಿಗೆ ಭಾರದಿಂದ ಕೃಷಿಕರು ತತ್ತರಿಸಿದ್ದರು.
- ಇದಕ್ಕೆದುರಾಗಿ ಜಮೀನ್ದಾರರು ಮತ್ತು ಬ್ರಿಟೀಷರ ವಿರುದ್ಧ ಕೃಷಿಕರಿಂದ ಪ್ರತಿಭಟನೆಗಳು ನಡೆಯಿತು. (ಮಲಬಾರ್ ದಂಗೆ)
- ದಂಗೆಯ ನಂತರದಲ್ಲಿ ಕೃಷಿಕರು ನಾಮಮಾತ್ರವಾದ ಭೂಮಿಯ ಒಡೆತನದ ಒಕ್ಕಲು ಹಕ್ಕನ್ನು ಪಡೆದರು.
- ಕೊಚ್ಚಿಯಲ್ಲಿ ಒಕ್ಕಲು ನಿಯಮವು 1914ರಲ್ಲಿ ಜಾರಿಗೆ ಬಂತು.

### ಕೃಷಿ ಕ್ಷೇತ್ರದ ವಾಣಿಜ್ಯೀಕರಣ:

ಕೃಷಿಯ ವಾಣಿಜ್ಯೀಕರಣ ಮತ್ತು ಬ್ರಿಟೀಷರ ಶೋಷಣೆಯ ಕುರಿತು ಮಕ್ಕಳು ಮೂರನೇ ಪಾಠದಲ್ಲಿ ಕಲಿತುಕೊಂಡಿರುತ್ತಾರೆ. ಕೃಷಿಯ ವಾಣಿಜ್ಯೀಕರಣ ಎಂದರೇನೆಂದು ಮಕ್ಕಳಲ್ಲಿ ಕೇಳುವ ಮೂಲಕ ಪಾಠಭಾಗವನ್ನು ಪ್ರವೇಶಿಸಬಹುದು. ನಂತರ ಪಾಠಭಾಗದ ವಿಶ್ಲೇಷಣೆಯೊಂದಿಗೆ ಕೃಷಿಯು ವಾಣಿಜ್ಯೀಕರಣವು ಕೇರಳದ ಕೃಷಿ ಕ್ಷೇತ್ರದಲ್ಲಿ

ಉಂಟುಮಾಡಿದ ಬದಲಾವಣೆಯು ಕುರಿತು ಚರ್ಚೆಯನ್ನು ನಡೆಸಬೇಕು.ಕ್ರೋಡೀಕರಣದಲ್ಲಿ ಈ ಕೆಳಗಿನ ಅಂಶಗಳನ್ನು ಸೇರಿಸಬೇಕು. ಮಾರುಕಟ್ಟೆಯನ್ನು ಉದ್ದೇಶವಾಗಿರಿಸಿಕೊಂಡ ಕೃಷಿ ವಿಧಾನವನ್ನು ಕೃಷಿಯ ವಾಣಿಜ್ಯೀಕರಣ ಎನ್ನುವರು.

- ಭತ್ತಕ್ಕೆ ಬದಲಾಗಿ ತೆಂಗು, ಕಾಫಿ, ಚಾ, ಏಲಕ್ಕಿ, ರಬ್ಬರ್, ಸಾಗುವಾನಿ ಕೃಷಿಯುನ್ನು ಆರಂಭಿಸಲಾಯಿತು.
- ಯುರೋಪಿಯನ್ ಮಾರುಕಟ್ಟೆಗಳಲ್ಲಿ ಅಧಿಕ ಬೇಡಿಕೆಯುಳ್ಳ ಕೃಷಿ ಉತ್ಪನ್ನಗಳನ್ನು ಇಲ್ಲಿ ಕೃಷಿ ಮಾಡುವಂತೆ ನಿರ್ಬಂಧಿಸಲಾಯಿತು.
- ಬಹುತೇಕ ತೋಟಗಳು ಬ್ರಿಟೀಷರ ನಿಯಂತ್ರಣದಲ್ಲಿತ್ತು.
- ಇದರೊಂದಿಗೆ ಕೇರಳದ ಪರಂಪರಾಗತ ಕೃಷಿಯು ಅವನತಿ ಹೊಂದುವುದರೊಂದಿಗೆ, ಕೃಷಿಯ ಮೂಲಕ ಲಭಿಸುತ್ತಿದ್ದ ಸಂಪತ್ತನ್ನು ಬ್ರಿಟೀಷರು ಕೊಳ್ಳೆ ಹೊಡೆದರು.
- ಕೊಚ್ಚಿ ಮತ್ತು ತಿರುವಾಂಕೂರಿನ ಆಡಳಿತವನ್ನು ನಡೆಸುವವರು ಬ್ರಿಟೀಷರಿಗೆ ಎಲ್ಲಾ ರೀತಿಯ ಪ್ರೋತ್ಸಾಹವನ್ನು ನೀಡಿದರು.

**ವಾಣಿಜ್ಯ ಉದ್ದಿಮೆಗಳ ಬೆಳವಣಿಗೆ:**

ಬ್ರಿಟೀಷ್ ಆಡಳಿತ ಕಾಲದಲ್ಲಿ ಕೇರಳದಲ್ಲಿ ವಾಣಿಜ್ಯ ಉದ್ದಿಮೆಗಳ ಬೆಳವಣಿಗೆಯನ್ನು ಪಾಠಭಾಗದಲ್ಲಿ ವಿವರಿಸಲಾಗಿದೆ.

ಈ ಕಾಲಾವಧಿಯಲ್ಲಿ ಕೇರಳದ ವಿವಿಧ ಭಾಗಗಳಲ್ಲಿ ತೋಟ ಸಂಬಂಧಿತ ಉದ್ದಿಮೆಗಳು, ಪರಂಪರಾಗತ ಉದ್ದಿಮೆಗಳು, ಆಧುನಿಕ ಉದ್ದಿಮೆಗಳು ಬೆಳೆದು ಬಂದವು. ತೋಟ ಉದ್ದಿಮೆಗಳು, ಪರಂಪರಾಗತ ಉದ್ದಿಮೆಗಳು, ಆಧುನಿಕ ಉದ್ದಿಮೆಗಳು ಇತ್ಯಾದಿ ಮಾಹಿತಿಗಳನ್ನು ಪಾಠಭಾಗದ ಸಹಾಯದಿಂದ ವಿಶ್ಲೇಷಿಸಿ, ಪ್ರತಿಯೊಂದು ವಿಭಾಗದಲ್ಲಿ ಉಂಟಾದ ಬದಲಾವಣೆಯುನ್ನು ಕಂಡುಕೊಂಡು ಪಟ್ಟಿ ತಯಾರಿಸುವುದು.

| ತೋಟದ ಉದ್ದಿಮೆ | ಪರಂಪರಾಗತ ಉದ್ದಿಮೆ | ಆಧುನಿಕ ಉದ್ದಿಮೆ |
|---|---|---|
| • ತೋಟ ಬೆಳೆ ಉತ್ಪನ್ನಗಳನ್ನು ಸಂಸ್ಕರಿಸುವುದಕ್ಕೂ ರಫ್ತು ಮಾಡುವುದಕ್ಕೂ ಇರುವ ಉದ್ದಿಮೆಗಳು | • ಪರಂಪರಾಗತ ರೀತಿಯಲ್ಲಿ, ಕೈಯ ಬಲವನ್ನು (ದೈಹಿಕ ಶ್ರಮ) ಆಶ್ರಯಿಸಿ ಮುನ್ನಡೆಸುವ ಉದ್ದಿಮೆಗಳು. | • ದೊಡ್ಡ ಕಾರ್ಖಾನೆಗಳಲ್ಲಿ ಯಂತ್ರಗಳನ್ನು ಉಪಯೋಗಿಸಿ ನಡೆಸುವ ಉದ್ದಿಮೆಗಳು |
| • ಚಾ ಫ್ಯಾಕ್ಟರಿಗಳು, ಕಾಫೀ ಬೀಜ ಸಂಸ್ಕರಿಸುವ ಕಂಪೆನಿಗಳು, ರಬ್ಬರ್ ಕಂಪೆನಿಗಳು | • ತೆಂಗಿನಕಾಯಿ, ಹುರಿಹಗ್ಗ, ಕೈಮಗ್ಗ, ಬೀಡಿ ಮುಂತಾದವುಗಳಿಗೆ ಸಂಬಂಧಿಸಿ, ಗಾಣ ಮಿಲ್ಲುಗಳು, ಹುರಿಹಗ್ಗ ಕಂಪೆನಿ, ಗೋಡಂಬಿ, ಕೈಮಗ್ಗ ಫ್ಯಾಕ್ಟರಿಗಳು. | • ಪುನಲೂರ್ ಪೇಪರ್ ಮಿಲ್, ಕಳಮಶ್ಶೇರಿ ಫ್ಯಾಕ್ಟ್, ಕುಂಡರ ಸಿರಾಮಿಕ್ಸ್, ತಿರುವನಂತಪುರದ ರಬ್ಬರ್ ವರ್ಕ್, ಕೊಚ್ಚಿಯ ಟಾಟಾ ಆಯಿಲ್ ಮಿಲ್ ಮತ್ತು ಅಳಗಪ್ಪ ಬಟ್ಟೆ ಮಿಲ್ |

ಕೈಗಾರಿಕಾ ಉದ್ದಿಮೆಯ ಪುರೋಗತಿಗಾಗಿ ಹಣವನ್ನು ಸಂಚಯನ ಮಾಡುವುದಕ್ಕಾಗಿ ಕೇರಳದಲ್ಲಿ ಬ್ಯಾಂಕುಗಳು ಬೆಳೆದು ಬಂದವು ಎಂಬ ತಿಳುವಳಿಕೆಯುನ್ನು ಮಕ್ಕಳು ಹೊಂದಬೇಕು. ನೆಡುಂಗಾಡಿ ಬ್ಯಾಂಕ್, ಇಂಡಿಯನ್ ನ್ಯಾಶನಲ್ ಬೇಂಕ್, ಚಾರ್ಟೆಡ್ ಬ್ಯಾಂಕ್ ಇತ್ಯಾದಿಗಳು ಆ ಕಾಲದಲ್ಲಿ ಕೇರಳದಲ್ಲಿದ್ದ ಪ್ರಮುಖ ಬೇಂಕುಗಳು.

ಕೇರಳದಲ್ಲಿ ಪುರೋಗತಿ ಹೊಂದಿದ ವಿವಿಧ ಉದ್ದಿಮೆ ವಲಯಗಳು, ಮತ್ತು ಪ್ರದೇಶಗಳು ಒಳಗೊಳ್ಳುವಂತೆ ಫ್ಲೋ ಚಾರ್ಟ್ ತಯಾರಿಸಿರಿ.

## ಸಾಂಸ್ಕೃತಿಕ ಕ್ಷೇತ್ರದಲ್ಲಿ ಬ್ರಿಟೀಷರ ಪ್ರಭಾವ:

ಕೇರಳದಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಬ್ರಿಟೀಷರ ಪ್ರಭಾವವನ್ನು ಅವಲೋಕಿಸುವ ಭಾಗ ಇದಾಗಿದೆ. ಮುದ್ರಣ, ಶಿಕ್ಷಣ, ನೀತಿ ನ್ಯಾಯ, ನಿಯಮ ಆರೋಗ್ಯ ಮುಂತಾದ ವಲಯಗಳಲ್ಲಿ ಬ್ರಿಟೀಷರ ಪ್ರಭಾವವನ್ನು ಕಾಣಬಹುದು.

'ಸಾಂಸ್ಕೃತಿಕ ಕ್ಷೇತ್ರದಲ್ಲಿ ಬ್ರಿಟೀಷರ ಪ್ರಭಾವ' ಎಂಬ ವಿಷಯದಲ್ಲಿ ಸೆಮಿನಾರ್ ಪೇಪರ್ ತಯಾರಿಸಬಹುದು. ಸೆಮಿನಾರ್‌ನಲ್ಲಿ ಈ ಕೆಳಗಿನ ಅಂಶಗಳು ಒಳಗೊಳ್ಳಬೇಕು.

- ಮುದ್ರಣದ ಆರಂಭವೂ ವೈಜ್ಞಾನಿಕ ಗ್ರಂಥಗಳ ಪ್ರಕಾಶನವೂ
- ಮಿಶನರಿಗಳು ಶೈಕ್ಷಣಿಕ ಕಾರ್ಯ ಚಟುವಟಿಕೆಗಳು
- ನೀತಿನ್ಯಾಯ ವ್ಯವಸ್ಥೆಯಲ್ಲುಂಟಾದ ಬದಲಾವಣೆಗಳು
- ಆರೋಗ್ಯ ವಲಯ ಸೆಮಿನಾರ್ ವರದಿಯನ್ನು ತರಗತಿಯಲ್ಲಿ ಮಂಡಿಸುವಾಗ ಈ ಕೆಳಗಿನ ವಿಷಯಗಳು ಕ್ರೋಢೀಕರಣಗೊಳ್ಳಬೇಕು.
- ಯುರೋಪಿಯನರ ಆಗಮನದೊಂದಿಗೆ ಕೇರಳದಲ್ಲಿ ಮುದ್ರಣವು ಆರಂಭಗೊಂಡಿತು.
- ಮಲಯಾಳದಲ್ಲಿ ವ್ಯಾಕರಣ ಗ್ರಂಥಗಳೂ, ನಿಘಂಟುಗಳೂ, ಪತ್ರಿಕೆಗಳೂ ಮುದ್ರಣಗೊಂಡದ್ದು ಬ್ರಿಟೀಷರ ಕಾಲದಲ್ಲಾಗಿತ್ತು.
- ಈಶೋ ಸಭೆಯ ಸದಸ್ಯರಾಗಿದ್ದ, ಜೆಸ್ಯೂಟ್ ಮಿಶನರಿ ಈ ಕಾರ್ಯದ ನೇತೃತ್ವವನ್ನು ವಹಿಸಿತ್ತು.
- ಮಿಶನರಿಗಳು ತಮ್ಮ ಶಿಕ್ಷಣ ಕೇಂದ್ರಗಳ ಮೂಲಕ ಜಾತಿ ಮತ ಭೇದವಿಲ್ಲದೆ ಎಲ್ಲ ವರ್ಗಗಳ ಜನರಿಗೂ ಶಿಕ್ಷಣವನ್ನು ನೀಡಿದರು.
- ಕೇರಳದಲ್ಲಿ ನೆಲೆ ನಿಂತಿದ್ದ ಮಾನವೀಯತೆ ರಹಿತವಾದ ಶಿಕ್ಷೆಯನ್ನು ಬ್ರಿಟೀಷರು ಪರಿಷ್ಕರಿಸಿ, ನಿಯಮದ ಮುಂದೆ ಎಲ್ಲರೂ ಸಮಾನರು ಎಂದು ಘೋಷಿಸಿದರು.
- ಅಲೋಪತಿ ಚಿಕಿತ್ಸಾ ವಿಧಾನವನ್ನು ಬ್ರಿಟೀಷರು ಕೇರಳದಲ್ಲಿ ಜಾರಿಗೆ ತಂದರು.
- ಸಾಂಸ್ಕೃತಿಕ ಕ್ಷೇತ್ರದಲ್ಲಿ ಬ್ರಿಟೀಷರ ಪರಿಷ್ಕರಣೆಯ ಉದ್ದೇಶದ ಹಿಂದೆ, ತಮ್ಮ ಆಡಳಿತವನ್ನು ಸುಗಮಗೊಳಿಸುವುದು ಮತ್ತು ನಮ್ಮ ಸಂಪನ್ಮೂಲಗಳನ್ನು ಶೋಷಣೆ ಮಾಡುವ ಉದ್ದೇಶವನ್ನು ಹೊಂದಿತ್ತು.

## ಸುಧಾರಣಾ ಚಳುವಳಿಗಳು ಮತ್ತು ಸಾಮಾಜಿಕ ಬದಲಾವಣೆಗಳು

ಕೇರಳದ ಸಾಮಾಜಿಕ ಸ್ಥಿತಿಗತಿಗಳನ್ನು ಪರಾಮರ್ಶಿಸುವ ಸ್ವಾಮಿ ವಿವೇಕಾನಂದರ ಮಾತುಗಳ ವಿವರಣೆಯೊಂದಿಗೆ ಪಾಠಭಾಗವನ್ನು ಆರಂಭಿಸಬಹುದು.

ಕೇರಳದಲ್ಲಿ ಯಾವೆಲ್ಲಾ ಮೂಢನಂಬಿಕೆಗಳು, ಅನಾಚಾರಗಳು ನೆಲೆ ನಿಂತಿದ್ದವು ಎಂದು ಚರ್ಚೆಯನ್ನು ನಡೆಸಬೇಕು. ಸಮಾಜದಲ್ಲಿ ನೆಲೆ ನಿಂತಿದ್ದ ಈ ಮೂಢನಂಬಿಕೆಗಳನ್ನು ಅನಾಚಾರಗಳನ್ನು ಕೊನೆಗೊಳಿಸಲು ಸಾಮಾಜಿಕ ಸುಧಾರಕರೂ, ಅವರ ಚಳುವಳಿಗಳೂ ಪ್ರಧಾನ ಪಾತ್ರ ವಹಿಸಿತೆಂದು ಚರ್ಚೆಯನ್ನು ಕ್ರೋಢೀಕರಿಸಬೇಕು.

ಸಾಮಾಜಿಕ ಸುಧಾರಣಾ ಚಳುವಳಿಗಳು, ಸುಧಾರಕರನ್ನು ತಿಳಿಸುವ ವರ್ಕ್‌ಶೀಟನ್ನು ಭರ್ತಿ ಮಾಡಲು ತಿಳಿಸಬಹುದು. ಇದರೊಂದಿಗೆ ಕೇರಳದ ಸಾಮಾಜಿಕ ಸುಧಾರಕರು ಮತ್ತು ಅವರ ಸಿದ್ಧಾಂತಗಳನ್ನು ತಿಳಿದುಕೊಳ್ಳಲು ಮಕ್ಕಳಿಗೆ ಸಾಧ್ಯವಾಗುತ್ತದೆ.

ನಂತರ ಸಮಾಜ ಸುಧಾರಕರು ಮುಂದಿಟ್ಟ ಆಶಯಗಳನ್ನು ಕೇರಳದ ಸಮಾಜವು ಯಾವ ರೀತಿಯಲ್ಲಿ ಸ್ವೀಕರಿಸಿತೆಂಬ ಕುರಿತು ಸಂವಾದವೊಂದನ್ನು ನಡೆಸಬೇಕು. ಕೇರಳದಲ್ಲಿ ನೆಲೆ ನಿಂತಿದ್ದ ಸಾಮಾಜಿಕ ಅಸಮತ್ವ ಮತ್ತು ಅನಾಚಾರಗಳನ್ನು ಕೊನೆಗೊಳಿಸಲು ಸಮಾಜ ಸುಧಾರಕರು ವಹಿಸಿದ ಪಾತ್ರವನ್ನು ತಿಳಿದುಕೊಳ್ಳುವುದರೊಂದಿಗೆ ಇನ್ನೂ

ಪರಿಹಾರ ಕಾಣದ ಸಾಮಾಜಿಕ ಸಮಸ್ಯೆಗಳು ಕೇರಳದಲ್ಲಿವೆಯೆಂದೂ ಅದಕ್ಕೆ ಪರಿಹಾರ ಹೇಗೆ ಕಾಣಬಹುದೆಂಬ ಸಲಹೆಗಳನ್ನೂ ಸಂವಾದದ ಕ್ರೋಢೀಕರಣದಲ್ಲಿ ಮಕ್ಕಳು ತಿಳಿಸಬೇಕು.

ಇದರ ಮುಂದುವರಿದ ಭಾಗವಾಗಿ ಸಮಾಜ ಸುಧಾರಕರ ಚಿತ್ರಗಳು, ಜೀವನ ಚರಿತ್ರೆಗಳ ಕುರಿತಾದ ಟಿಪ್ಪಣಿಗಳು, ಸ್ಮಾರಕಗಳನ್ನು ಸೇರಿಸಿಕೊಂಡು, ಡಿಜಿಟಲ್ ಆಲ್ಬಂ ತಯಾರಿಸುವ ಗುಂಪು ಕೆಲಸವನ್ನು ಮಕ್ಕಳಿಗೆ ನೀಡಬೇಕು. ಐಸಿಟಿ, ಗ್ರಂಥಾಲಯ, ಹಿರಿಯರೊಂದಿಗಿನ ಸಂದರ್ಶನ ಸರ್ವೆ ಇತ್ಯಾದಿಗಳನ್ನು ಉಪಯೋಗಿಸಬೇಕು.

ಪಾಠಭಾಗವನ್ನು ಪರಿಶೋಧಿಸಿ, ಕೇರಳದಲ್ಲಿ ಸಾಮಾಜಿಕ ಸುಧಾರಣೆಯ ಭಾಗವಾಗಿ ನಡೆದ ಚಳುವಳಿಗಳ ಪಟ್ಟಿಯನ್ನು ತಯಾರಿಸಿರಿ.

- ಚನ್ನಾರ್ ಚಳುವಳಿ
- ಅರುವಿಪ್ಪುರ ಪ್ರತಿಷ್ಠಾಪನೆ
- ವೈಕಂ ಸತ್ಯಾಗ್ರಹ
- ಕ್ಷೇತ್ರ ಪ್ರವೇಶ ಘೋಷಣೆ

ಸಮಾಜ ಸುಧಾರಣೆಯ ಭಾಗವಾಗಿ ನಡೆದ ಚಳುವಳಿಗಳ ಟಿಪ್ಪಣಿಯೊಂದನ್ನು ರಚಿಸಿ ತರಗತಿಯಲ್ಲಿ ಮಂಡಿಸಲಿ..

## ಕೇರಳದಲ್ಲಿ ರಾಷ್ಟ್ರೀಯ ಚಳುವಳಿ

ಕೇರಳದಲ್ಲಿ ನಡೆದ ರಾಷ್ಟ್ರೀಯ ಚಳುವಳಿಯ ವಿಶೇಷತೆಗಳನ್ನು ಚರ್ಚಿಸಲು, ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಕೇರಳದ ಪಾತ್ರವನ್ನು ತಿಳಿದುಕೊಳ್ಳಲು ನೆರವಾಗುವ ಪಾಠಭಾಗ ಇದಾಗಿದೆ. ಕೇರಳದ ಮಲಬಾರ್ ಕೊಚ್ಚಿ ಮತ್ತು ತಿರುವಾಂಕೂರಿನಲ್ಲಿ ನಡೆದ ರಾಷ್ಟ್ರೀಯ ಚಳುವಳಿಯನ್ನು ಸೇರಿಸಿಕೊಂಡು "ಕೇರಳದಲ್ಲಿ ರಾಷ್ಟ್ರೀಯ ಚಳುವಳಿ" ಎಂಬ ಸೆಮಿನಾರ್ ತಯಾರಿಸಬೇಕು. ಕೇರಳದಲ್ಲಿ ನಡೆದ ರಾಷ್ಟ್ರೀಯ ಚಳುವಳಿಯಲ್ಲಿ ಏಕತೆ ಅಥವಾ ಸಮಾನತೆಯನ್ನು ಕಾಣಲು ಸಾಧ್ಯವಿಲ್ಲ. ಆಡಳಿತಾತ್ಮಕವಾಗಿ ಕೇರಳವು ಏಕೀಕರಿಸದಿರುವುದು ಇದಕ್ಕೆ ಕಾರಣವಾಗಿದೆ ಎಂದು ಕ್ರೋಢೀಕರಣದಲ್ಲಿ ತಿಳಿಸಬೇಕು.

ಸೆಮಿನಾರ್ ವರದಿ ಮಂಡನೆಯ ನಂತರ ಮಲಬಾರ್ ಕೊಚ್ಚಿ ತಿರುವಾಂಕೂರು ಎಂಬೀ ಪ್ರದೇಶಗಳಲ್ಲಿ ನಡೆದ ರಾಷ್ಟ್ರೀಯ ಚಳುವಳಿಗೆ ಸಂಬಂಧಿಸಿದ ಘಟನಾವಳಿಗಳನ್ನು ಆಧರಿಸಿ ಫ್ಲೋಚಾರ್ಟ್ ಒಂದನ್ನು ಗುಂಪಿನಲ್ಲಿ ತಯಾರಿಸಿ ಪ್ರದರ್ಶಿಸಬೇಕು.

## ರಾಷ್ಟ್ರೀಯ ಚಳುವಳಿ ಮತ್ತು ಮಹಿಳೆಯರು

ಕೇರಳದ ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯರು ವಹಿಸಿದ ಪಾತ್ರವನ್ನು ಮಕ್ಕಳಿಗೆ ಪರಿಚಯಿಸುವುದು ಈ ಪಾಠಭಾಗದ ಉದ್ದೇಶವಾಗಿದೆ. ಪಾಠಭಾಗವನ್ನು ಓದಿ, ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯರ ಪಾತ್ರ ಎಂಬ ವಿಷಯದಲ್ಲಿ ಭಾಷಣವೊಂದನ್ನು ಸಂಘಟಿಸಬೇಕು. ಅಲ್ಲದೆ ಅಕ್ಕಮ ಚೆರಿಯಾನ್, ಎ.ವಿ. ಕುಟ್ಟಿಮೋಳ್, ಅಮ್ಮು, ಆನಿ ಮಸ್ಕ್ರೀನ್ ಕೌಮುದಿ ಟೀಚರ್ ಮುಂತಾದವರ ಫೋಟೋ ಆಲ್ಬಂ ತಯಾರಿಸುವ ಯೋಜನೆಯನ್ನು ತರಗತಿಯಲ್ಲಿ ನಡೆಸಬೇಕು.

## ಐಕ್ಯಕೇರಳದ ಕಡೆಗೆ

ಐಕ್ಯಕೇರಳದೆಡೆಗೂ, ಕೇರಳ ಪ್ರಾಂತ್ಯ ರೂಪೀಕರಣಕ್ಕೂ ಕಾರಣವಾದ ಸನ್ನಿವೇಶಗಳನ್ನು ವಿಶ್ಲೇಷಿಸುವ ಪಾಠಭಾಗ ಇದಾಗಿದೆ. ಐಕ್ಯ ಕೇರಳದ ರೂಪೀಕರಣಕ್ಕೆ ಕಾರಣವಾದ ಘಟನೆಗಳನ್ನು ಪಾಠಭಾಗದ ಸಹಾಯದಿಂದ ಕಂಡುಕೊಂಡು ಫ್ಲೋಚಾರ್ಟ್ ಒಂದನ್ನು ತಯಾರಿಸಲಿ. ಕಾಲರೇಖೆಯನ್ನು ರಚಿಸುವ ಸಾಧ್ಯತೆಯನ್ನು ಚರ್ಚಿಸಬಹುದು.

**ಪಿ.ಆರ್. ಕೃಷ್ಣನೆಳುತ್ತಚ್ಚನ್**

ಪಿ.ಆರ್. ಕೃಷ್ಣನೆಳುತ್ತಚ್ಚನ್‌ನ ಅಧ್ಯಕ್ಷತೆಯಲ್ಲಿ 1914ರಲ್ಲಿ ಕೊಚ್ಚಿ ರಾಜ್ಯ ಪ್ರಜಾಮಂಡಲವು ರೂಪೀಕರಣಗೊಂಡಿತು. ಸ್ವಾತಂತ್ರ್ಯ ಹೋರಾಟಗಾರ, ಪತ್ರಕರ್ತ, ಕಾರ್ಮಿಕ ಮುಂದಾಳು ಎಂಬೀ ನೆಲೆಗಳಲ್ಲಿ ಪ್ರಶಸ್ತನಾದ ಇವರು 'ದೀನಬಂಧು' ಪತ್ರಿಕೆಯ ಸ್ಥಾಪಕರಾಗಿದ್ದರು. ತಿರುಕೊಚ್ಚಿ ಸಭೆಯಲ್ಲಿಯೂ ಇವರು ಸದಸ್ಯಕರಾಗಿದ್ದರು.

ಕೆ.ಪಿ.ಸಿ.ಸಿ. ರೂಪೀಕರಣ

⇩

ಪಯ್ಯನ್ನೂರ್ ಸಮ್ಮೇಳನ

⇩

ಐಕ್ಯಕೇರಳ ಕನ್‌ವೆನ್‌ಶನ್

⇩

ಐಕ್ಯ ಕೇರಳ ಸಮ್ಮೇಳನ

⇩

ತಿರುಕೊಚ್ಚಿ ಸಂಯೋಜನೆ

⇩

ಒಂದೂ ಕಾಲು ಕೋಟಿ ಮಲಯಾಳಿಗಳು

⇩

ಪ್ರಾಂತ್ಯ ಪುನರ್‌ರೂಪೀಕರಣ ಆಯೋಗ

⇩

ಕೇರಳ ಪ್ರಾಂತ್ಯ ರೂಪೀಕರಣ

ಫ್ಲೋಚಾರ್ಟ್‌ನ ಆಧಾರದಲ್ಲಿ ಐಕ್ಯ ಕೇರಳ ರೂಪೀಕರಣಕ್ಕೆ ಕೊಂಡೊಯ್ದ ಸನ್ನಿವೇಶಗಳನ್ನು ಸೇರಿಸಿಕೊಂಡು ಲಘು ವಿವರಣೆಯೊಂದನ್ನು ತಯಾರಿಸಿ ತರಗತಿಯಲ್ಲಿ ಮಂಡಿಸಬೇಕು.

ಕೇರಳ ಪ್ರಾಂತ್ಯ ರೂಪೀಕರಣದ ನಂತರ ಕೇರಳವು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧನೆಗಳನ್ನು ಚರ್ಚಿಸಬೇಕು. ಚರ್ಚೆಯಲ್ಲಿ ಈ ಕೆಳಗಿನವುಗಳಿಗೆ ಪ್ರಾಧಾನ್ಯವನ್ನು ನೀಡಬೇಕು.

- ಭೂ ನಿಯಮದ ಪರಿಷ್ಕಾರ
- ಸಾರ್ವಜನಿಕ ಆರೋಗ್ಯ
- ಕೇಂದ್ರೀಕೃತ ಯೋಜನೆ
- ಮಾಹಿತಿ ತಂತ್ರಜ್ಞಾನ

ಗ್ರಂಥಾಲಯ, ಐಸಿಟಿ, ಹಿರಿಯರೊಂದಿಗಿನ ಸಂದರ್ಶನ ಇತ್ಯಾದಿ ವಿಧಾನಗಳ ಮೂಲಕ ಸಂಚಿಕೆಯೊಂದನ್ನು ತಯಾರಿಸಬೇಕು. ಸಂಚಿಕೆಯು ಗುಂಪಿನಲ್ಲಿ ತಯಾರಿಸಲ್ಪಟ್ಟರೆ ಉತ್ತಮ. ಇದರಿಂದ ಕೇರಳವು ಎದುರಿಸುತ್ತಿರುವ ಪ್ರಸ್ತುತ ಸಮಸ್ಯೆಗಳನ್ನು ಮಕ್ಕಳು ತಿಳಿದುಕೊಳ್ಳುವಂತೆ ಸಂಚಿಕೆಯ ಕ್ರೋಢೀಕರಣವು ನಡೆಯಬೇಕು.

## ? ಮೌಲ್ಯಮಾಪನ ಪ್ರಶ್ನೆಗಳು:

- ಕೇರಳದ ಚರಿತ್ರೆಯಲ್ಲಿ ಕೊಳಚ್ಚಲ್ ಯುದ್ಧದ ಪ್ರಾಧಾನ್ಯವೇನು ?
- ಬ್ರಿಟೀಷರ ವಿರುದ್ಧದ ಆರಂಭ ಕಾಲದ ಪ್ರತಿಭಟನೆಗಳಿಂದ ಆಟ್ಟಿಂಗಲ್ ದಂಗೆಯು ಪ್ರತ್ಯೇಕತೆಯನ್ನು ಹೊಂದಿರುವುದು ಹೇಗೆ?
- ಕೇರಳದ ಭೂ ಒಡೆತನ ಸಂಬಂಧದಲ್ಲಿ ಬ್ರಿಟೀಷ್ ಆಡಳಿತವು ಯಾವ ಬದಲಾವಣೆಯನ್ನು ತಂದಿತು?
- ಬ್ರಿಟೀಷರ ಕಾಲದಲ್ಲಿ ಕೇರಳದಲ್ಲಿ ಸ್ಥಾಪಿಸಿದ, ಆಧುನಿಕ ಕೈಗಾರಿಕೆಗಳ ಪಟ್ಟಿಯನ್ನು ತಯಾರಿಸಿರಿ.
- ಮಲಬಾರ್ ಕೊಚ್ಚಿ ಮತ್ತು ತಿರುವಾಂಕೂರಿನಲ್ಲಿ ಬ್ರಿಟೀಷರಿಗೆದುರಾಗಿ ನಡೆದ ಪ್ರತಿಭಟನೆಗಳ ಸಾಮ್ಯ ಮತ್ತು ವ್ಯತ್ಯಾಸಗಳನ್ನು ಬರೆಯಿರಿ.
- ಕೇರಳ ಪ್ರಾಂತ್ಯ ರೂಪೀಕರಣಕ್ಕೆ ಕಾರಣವಾದ ಸನ್ನಿವೇಶಗಳ ಕುರಿತು ಬರೆಯಿರಿ.
- ಕೇರಳದ ಸಾಂಸ್ಕೃತಿಕ ಕ್ಷೇತ್ರದಲ್ಲಿ, ಬ್ರಿಟೀಷ್ ಆಡಳಿತವು ಉಂಟುಮಾಡಿದ ಬದಲಾವಣೆಗಳಾವುವು?
- ಕೇರಳದ ಸಮಾಜ ಸುಧಾರಕರು ಮುಂದಿರಿಸಿದ ಆಶಯಗಳನ್ನು ಕೇರಳದ ಸಮಾಜವು ಪೂರ್ಣ ಪ್ರಮಾಣದಲ್ಲಿ ಸ್ವೀಕರಿಸಿತ್ತೇ ? ವಿವರಿಸಿರಿ.

## ರೆಫರೆನ್ಸ್

ಸರ್ವೆ ಆಫ್ ಕೇರಳ ಹಿಸ್ಟರಿ – ಎ. ಶ್ರೀಧರ ಮೆನೋನ್
ಕೇರಳತ್ತಿಂಡೆ ಇನ್ನಲೆಗಳ್ – ಡಾ. ಕೆ.ಎನ್. ಗಣೇಶ್
ಕೇರಳವುಂ ಸ್ವಾತಂತ್ರ್ಯ ಸಮರವುಂ – ಎ. ಶ್ರೀಧರ ಮೆನೋನ್
ಕೇರಳ ಮಲಯಾಳಿಗಳುಡೆ ಮಾತೃಭೂಮಿ –ಇ.ಎಂ.ಎಸ್. ನಂಬೂದಿರಿಪಾಡ್
ಹಿಸ್ಟರಿ ಆಫ್ ಕೇರಳ – ಸರ್‌ದಾರ್ ಕೆ.ಎಂ. ಪಣಿಕ್ಕರ್
ಕೇರಳಂ – ಕೃಷ್ಣ ಚೈತನ್ಯಂ
ಮಲಬಾರ್ ಮಾನ್ವಲ್ – ವಿಲಿಯಂ ಲೋಗನ್

## ಅಧ್ಯಾಪಕರಿಂದ ಮೌಲ್ಯ ಮಾಪನ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸ ಬೇಕಾದುದು |
|---|---|---|---|
| 1. ಯುರೋಪಿಯನರ ಆಗಮನದ ಹಿಂದಿನ ಉದ್ದೇಶವನ್ನು ತಿಳಿದುಕೊಳ್ಳಲು ಮಕ್ಕಳಿಗೆ ಸಾಧ್ಯವಾಗಿದೆ. | ☐ | ☐ | ☐ |
| 2. ಕೇರಳದಲ್ಲಿ ನಡೆದ ಆರಂಭ ಕಾಲದ ಪ್ರತಿಭಟನೆಗಳನ್ನು ವಿಶ್ಲೇಷಿಸಲು ಸಾಧ್ಯವಾಗಿದೆ. | ☐ | ☐ | ☐ |
| 3. ಬ್ರಿಟೀಷರ ಆಡಳಿತ ಕಾಲದಲ್ಲಿ ವ್ಯಾಪಾರ, ಕೈಗಾರಿಕೆ, ಕೃಷಿ, ಭೂ ಸಂಬಂಧ ಇತ್ಯಾದಿಗಳಲ್ಲಿ ಉಂಟಾದ ಬದಲಾವಣೆಯನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. | ☐ | ☐ | ☐ |
| 4. ಸಾಂಸ್ಕೃತಿಕ ಕ್ಷೇತ್ರದಲ್ಲಿ ಬ್ರಿಟೀಷರ ಹಸ್ತಕ್ಷೇಪವು ಕೇರಳವನ್ನು ಆಧುನಿಕತೆಯ ಕಡೆಗೆ ಮುನ್ನಡೆಸಿದರೂ ಅವರ ನಿಜವಾದ ಉದ್ದೇಶ ಆಡಳಿತವನ್ನು ಸುಗಮಗೊಳಿಸುವುದಾಗಿತ್ತು ಎಂದು ತಿಳಿದುಕೊಂಡರು. | ☐ | ☐ | ☐ |
| 5. ಕೇರಳದಲ್ಲಿ ರಾಷ್ಟ್ರೀಯ ಚಳುವಳಿಯ ಆರಂಭ ಮತ್ತು ಬೆಳವಣಿಗೆಯನ್ನು ವಿಶ್ಲೇಷಿಸಲು ಮಕ್ಕಳಿಗೆ ಸಾಧ್ಯವಾಗಿದೆ. | ☐ | ☐ | ☐ |
| 6. ಕೇರಳದ ಸಮಾಜ ಸುಧಾರಣಾ ಚಳುವಳಿಗಳು ಸಮಾಜದಲ್ಲಿ ಉಂಟುಮಾಡಿದ ಬದಲಾವಣೆಯನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. | ☐ | ☐ | ☐ |
| 7. ಐಕ್ಯಕೇರಳದ ಕಡೆಗೆ ಮುನ್ನಡೆಸಿದ ಸನ್ನಿವೇಶಗಳನ್ನು ಮಕ್ಕಳು ತಿಳಿದುಕೊಳ್ಳುವರು. | ☐ | ☐ | ☐ |



# 8 ಸಾರ್ವಜನಿಕ ಆಡಳಿತ

ರಾಷ್ಟ್ರದ ಪೌರನೆಂಬ ನೆಲೆಯಲ್ಲಿ ತಾನೂ ಒಳಗೊಂಡ ಸಮಾಜದ ವಿವಿಧ ಸಮಸ್ಯೆಗಳಿಗೆ ಪರಿಹಾರವನ್ನು ಕಾಣುವ ಸಾರ್ವಜನಿಕ ಆಡಳಿತ ವ್ಯವಸ್ಥೆಯನ್ನು ಪರಿಚಯಿಸಿಕೊಳ್ಳಲು ಮತ್ತು ಈ ಆಡಳಿತದಲ್ಲಿ ಪಾಲ್ಗೊಳ್ಳಲು ಮಕ್ಕಳನ್ನು ಸಮರ್ಥರನ್ನಾಗಿಸುವ ಉದ್ದೇಶದೊಂದಿಗೆ ಈ ಪಾಠಭಾಗವನ್ನು ನೀಡಲಾಗಿದೆ. ಸಾರ್ವಜನಿಕ ಆಡಳಿತ ಎಂದರೇನು ? ಇದು ತಮ್ಮ ನಿತ್ಯ ಜೀವನದೊಂದಿಗೆ ಹೇಗೆ ಸಂಬಂಧವನ್ನು ಹೊಂದಿದೆಯೆಂಬುದನ್ನು ಅರಿಯಲು, ತನ್ನ ಸುತ್ತುಮುತ್ತಲಿನ ಸರಕಾರಿ ಸಂಸ್ಥೆಗಳ ಕಾರ್ಯ ವಿಧಾನವನ್ನು ನಿರೀಕ್ಷಣೆ ಮಾಡಿ ತಿಳಿದುಕೊಳ್ಳಲು ಈ ಅಧ್ಯಾಯದ ಮೂಲಕ ಸಾಧ್ಯವಾಗಬಹುದು. ಆಧುನಿಕ ಆಡಳಿತ ವ್ಯವಸ್ಥೆಯಲ್ಲಿ ಸಾರ್ವಜನಿಕ ಆಡಳಿತದ ಪ್ರಾಧಾನ್ಯ ನೌಕರ ವೃಂದದ ಕಾರ್ಯಚಟುವಟಿಕೆಗಳನ್ನೂ ಮಕ್ಕಳು ತಿಳಿದುಕೊಳ್ಳಬೇಕಾಗಿದೆ. ನೌಕರ ವೃಂದದವರ ಆಯ್ಕೆ, ರಚನೆ, ವಿಶೇಷತೆ, ಜನರೊಂದಿಗಿರುವ ಸಂಬಂಧ ಇತ್ಯಾದಿಗಳನ್ನು ಈ ಪಾಠದಲ್ಲಿ ವಿವರಿಸಲಾಗಿದೆ. ಅಲ್ಲದೆ ನೌಕರ ವೃಂದದ ಕೊರತೆಗಳೇನೆಂದು ಕಂಡುಕೊಳ್ಳಲು ಮತ್ತು ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳಲು, ಚರ್ಚಿಸಲು ಈ ಪಾಠಭಾಗದ ಮೂಲಕ ಸಂದರ್ಭವೊದಗಿಸಲಾಗಿದೆ.

ಸಾರ್ವಜನಿಕ ಆಡಳಿತ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ವೃದ್ಧಿಸಲು ಕೈಗೊಂಡ ಯೋಜನೆಗಳಾದ ಇ–ಗವರ್ನೆನ್ಸ್, ಮಾಹಿತಿ ಹಕ್ಕು ನಿಯಮ, ಸೇವೆಯನ್ನು ಪಡೆಯುವ ಹಕ್ಕು ನಿಯಮ ಎಂಬಿತ್ಯಾದಿಗಳ ಕುರಿತೂ, ಅವುಗಳು ಸಾರ್ವಜನಿಕರಿಗೆ ಹೇಗೆ ಪ್ರಯೋಜನಕರವಾಗಿದೆಯೆಂದೂ ಉದಾಹರಣೆ ಸಹಿತವಾಗಿ ಈ ಪಾಠಭಾಗದಲ್ಲಿ ವಿವರಿಸಲಾಗಿದೆ.

ಸಮಾಜದ ಎಲ್ಲಾ ಹಂತಗಳಲ್ಲಿಯೂ ಬೇರು ಬಿಟ್ಟಿರುವ ಭ್ರಷ್ಟಾಚಾರ ಮತ್ತು ಅದನ್ನು ನಿಯಂತ್ರಿಸಲಿರುವ ಸರಕಾರದ ವ್ಯವಸ್ಥೆಯನ್ನು ಮಕ್ಕಳು ಇಲ್ಲಿ ಪರಿಚಯಿಸುವರು.

ಸಾರ್ವಜನಿಕ ಆಡಳಿತವನ್ನು ವಿಮರ್ಶಾತ್ಮಕವಾಗಿ ಅವಲೋಕಿಸಲು, ಅವುಗಳ ವಿವಿಧ ಕಾರ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು, ಅವುಗಳ ಕುರಿತಾದ ತಿಳುವಳಿಕೆಯನ್ನು ಪಡೆಯಲೂ ಅಗತ್ಯವಾದ ಉದಾಹರಣೆಗಳನ್ನು, ಅನುಭವಗಳನ್ನು ಮಕ್ಕಳಿಗೆ ತಿಳಿಸುವ ಧಾರಾಳ ಸಂದರ್ಭಗಳನ್ನು ಈ ಪಾಠಭಾಗವು ಕಲ್ಪಿಸುವುದು.

ಯೂನಿಟ್ ಫ್ರೇಂ

## 2. ಸಾರ್ವಜನಿಕ ಆಡಳಿತ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಸಾರ್ವಜನಿಕ ಆಡಳಿತ ಎಂದರೇನು? ಯಾಕೆ?<br>• ಸಾರ್ವಜನಿಕ ಆಡಳಿತದ ನಿರ್ವಚನ ಮತ್ತು ಹಿನ್ನಲೆ<br>• ಸಾರ್ವಜನಿಕ ಆಡಳಿತದ ಪ್ರಾಧಾನ್ಯ<br>• ನೌಕರವೃಂದದ ವಿಶೇಷತೆಗಳು<br>• ಭಾರತದಲ್ಲಿ ನೌಕರ ವೃಂದ<br>• ಭಾರತದ ಸಿವಿಲ್ ಸರ್ವೀಸ್<br>• ಆಡಳಿತ ನವೀಕರಣ ಕ್ರಮಗಳು<br>• ಇ– ಗವರ್ನೆನ್ಸ್<br>• ಮಾಹಿತಿಯನ್ನು ಪಡೆಯುವ ಅವಕಾಶ, ಮಾಹಿತಿ ಹಕ್ಕು ನಿಯಮ<br>• ಮಾಹಿತಿ ಹಕ್ಕು ಆಯೋಗ<br>• ಸೇವೆಯನ್ನು ಪಡೆಯುವ ಅವಕಾಶ.<br>• ಲೋಕಪಾಲ್ ಮತ್ತು ಲೋಕಾಯುಕ್ತ<br>• ಸೆಂಟ್ರಲ್ ವಿಜಿಲೆನ್ಸ್ ಕಮೀಶನ್<br>• ಒಂಬುಡ್ಸ್‌ಮೆನ್ | • ತಮ್ಮ ಪ್ರದೇಶದ ಸಾರ್ವಜನಿಕ ಸಂಸ್ಥೆಗಳು ಮತ್ತು ಅವುಗಳ ಜವಾಬ್ದಾರಿಯನ್ನು ಕಂಡುಕೊಂಡು ಪಟ್ಟಿ ತಯಾರಿಸುವುದು.<br>• ಸಾರ್ವಜನಿಕ ಆಡಳಿತ ವ್ಯವಸ್ಥೆಯ ಉದ್ದೇಶಗಳು, ಬದಲಾವಣೆಗಳನ್ನೂ ಪಟ್ಟಿ ಮಾಡುವುದು.<br>• ಸಾರ್ವಜನಿಕ ಆಡಳಿತದಿಂದ ಲಭಿಸುವ ಸೇವೆಗಳು, – ಚರ್ಚೆ. ಚರ್ಚಾ ಟಿಪ್ಪಣಿಯನ್ನು ತಯಾರಿಸುವುದು.<br>• ಸಮೀಪದ ಸಾರ್ವಜನಿಕ ಸಂಸ್ಥೆಯನ್ನು ಭೇಟಿ ಮಾಡಿ ಉದ್ಯೋಗಸ್ಥರೊಂದಿಗೆ ಸಂದರ್ಶನ.<br>• ಅದರ ಆಧಾರದಲ್ಲಿ ವಿಶೇಷತೆಗಳ ಕುರಿತು ಟಿಪ್ಪಣಿ ತಯಾರಿ<br>• ಚಾರ್ಟ್ ವಿಶ್ಲೇಷಣೆ<br>• ನೌಕರ ವೃಂದದ ಮಿತಿಗಳ ಚರ್ಚೆ<br>• ಪಟ್ಟಿಯನ್ನು ವಿಪುಲೀಕರಿಸುವುದು.<br>• ಆಡಳಿತ ರಂಗದಲ್ಲಿ ಬರಬೇಕಾದ ಬದಲಾವಣೆಗಳ ಚರ್ಚೆ –ಟಿಪ್ಪಣಿ ತಯಾರಿ.<br>• ಐ.ಸಿ.ಟಿ. ಸಾಧ್ಯತೆಗಳು ಮತ್ತು ಇ–ಗವರ್ನೆನ್ಸ್ ವ್ಯವಸ್ಥೆಯನ್ನು ಪರಿಚಯಿಸುವುದು – ಸಾಧ್ಯತೆಗಳನ್ನು ಕಂಡುಕೊಳ್ಳುವುದು.<br>• ಮಾಹಿತಿ ಹಕ್ಕು ನಿಯಮದ ಅರ್ಜಿಯೂ ಅದಕ್ಕೆ ಉತ್ತರವೂ ಅದಕ್ಕೆ ಸಂಬಂಧಿಸಿದ ನಿಯಮವನ್ನು ಪರಿಚಯಿಸುವುದು, ಮಾದರಿ ಅರ್ಜಿಯನ್ನು ತಯಾರಿಸುವುದು.<br>• ಮಾಹಿತಿ ಹಕ್ಕು ನಿಯಮವು ಸಮಾಜಕ್ಕೆ ಹೇಗೆ ಪ್ರಯೋಜನಕಾರಿಯಾಗಿದೆ ಎಂದು ಟಿಪ್ಪಣಿ ತಯಾರಿಸುವುದು.<br>• ನಿಯಮವನ್ನು ವಿಶ್ಲೇಷಿಸುವುದು– ವಿಶ್ಲೇಷಣಾ ಟಿಪ್ಪಣಿ.<br>• ಅವುಗಳು ರೂಪುಗೊಳ್ಳುವ ಸನ್ನಿವೇಶ, ಜವಾಬ್ದಾರಿಗಳು, ಚಟುವಟಿಕೆಗಳನ್ನು ಚರ್ಚೆ ಮಾಡುವುದು.<br>• ಭ್ರಷ್ಟಾಚಾರವನ್ನು ಅವು ಹೇಗೆ ತಡೆಯುವುದೆಂದು ಪರಿಶೋಧಿಸಿ ಟಿಪ್ಪಣಿ ತಯಾರಿಸುವುದು.<br>• ಸಾರ್ವಜನಿಕರೊಂದಿಗೆ ಸೇರಿ ಈ ಆಯೋಗಗಳು ಹೇಗೆ ಕಾರ್ಯವೆಸಗುವುದೆಂದು ಕಂಡುಹಿಡಿದು ಟಿಪ್ಪಣಿ ತಯಾರಿಸಬೇಕು. ಸಾರ್ವಜನಿಕ ವ್ಯವಸ್ಥೆಗಳಿಗೆ ಸಂಬಂಧಿಸಿ ಪವರ್ ಪಾಯಿಂಟ್ ಪ್ರಸೆಂಟೇಶನ್ ಮಂಡನೆ. | • ಸಾರ್ವಜನಿಕ ಆಡಳಿತವನ್ನು ನಿರ್ವಚಿಸುವುದು.<br>• ಸಾರ್ವಜನಿಕ ಆಡಳಿತದ ಪ್ರಾಧಾನ್ಯವನ್ನು ತಿಳಿಸುವರು.<br>• ನೌಕರ ವೃಂದದ ವಿಶೇಷತೆಗಳನ್ನು ವಿಶ್ಲೇಷಿಸುವುದು.<br>• ನೌಕರ ವೃಂದದ ವಿಶೇಷತೆಗಳನ್ನು ವಿಶದೀಕರಿಸುವರು.<br>• ಭಾರತದಲ್ಲಿ ನೌಕರ ವೃಂದದ ರಚನೆಯನ್ನು ಹಾಗೂ ವಿಶೇಷತೆಗಳನ್ನು ವಿವರಿಸುವುದು.<br>• ಸಾರ್ವಜನಿಕ ಆಡಳಿತ ವಲಯದ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಕ್ರಮಗಳನ್ನು ವಿಶ್ಲೇಷಿಸುವರು. ಸರಕಾರಿ ಸೇವೆಗಳನ್ನು ಲಭ್ಯವಾಗಿಸುವಲ್ಲಿ ಇ ಗವರ್ನೆನ್ಸ್‌ನ ಪಾತ್ರವನ್ನು ವಿಶ್ಲೇಷಿಸುವುದು.<br>• ಮಾಹಿತಿಯನ್ನು ಪಡೆಯುವ ಸಾಧ್ಯತೆಗಳನ್ನು ವಿಶ್ಲೇಷಿಸುವರು.<br>• ಸೇವೆಯನ್ನು ಪಡೆಯುವ ಸಾಧ್ಯತೆಗಳನ್ನು ಉಪಯೋಗಿಸುವರು.<br>• ವಿವಿಧ ವಲಯಗಳಲ್ಲಿರುವ ಭ್ರಷ್ಟಾಚಾರವನ್ನು ತಡೆಯಲು ದೇಶಾದ್ಯಂತವಿರುವ ವಿವಿಧ ವ್ಯವಸ್ಥೆಗಳನ್ನು ವಿಶ್ಲೇಷಿಸುವರು. |

## ಅಧ್ಯಾಯದ ಕಡೆಗೆ....

ಸಾರ್ವಜನಿಕ ಆಡಳಿತಕ್ಕೆ ಸಂಬಂಧಿಸಿದ ಸಂಸ್ಥೆಗಳನ್ನು ಪರಿಚಯಿಸುವ ಸಲುವಾಗಿ ಪಟ್ಟಿಯೊಂದನ್ನು ಕೊಡಲಾಗಿದೆ. ಮಕ್ಕಳು ನಿತ್ಯವೂ ಕಾಣುವ, ಅವರ ಮನೆಯವರು ಸಾಮಾನ್ಯವಾಗಿ ಸಂದರ್ಶಿಸುವ ಸಂಸ್ಥೆಗಳನ್ನು ಪಟ್ಟಿ ಮಾಡಲು ತಿಳಿಸುವುದು.

| ಸಂಸ್ಥೆಗಳು | ಸೇವೆಗಳು |
|---|---|
| • ವಿಲೇಜ್ ಆಫೀಸು | • ರೆವೆನ್ಯೂ ಸಂಬಂಧಿಸಿದ ದಾಖಲೆಗಳು, ಪ್ರಮಾಣ ಪತ್ರಗಳನ್ನು ನೀಡುವುದು |
| • ಕೃಷಿ ಭವನ | • ಕೃಷಿಗೆ ಸಂಬಂಧಿತ ಮಾಹಿತಿಗಳು, ಕೃಷಿ ಬೀಜಗಳು ಇತ್ಯಾದಿಗಳನ್ನು ನೀಡುವುದು. |

ಪಟ್ಟಿಯನ್ನು ಭರ್ತಿ ಮಾಡಿದ ಮೇಲೆ ಕೆಳಗೆ ನೀಡಿದ ಆಶಯಗಳನ್ನು ಮಕ್ಕಳಿಗೆ ತಿಳಿಸಬೇಕು..

- ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿ ಕಾರ್ಯ ವೆಸಗುವ ಸರಕಾರಿ ಸಂಸ್ಥೆಗಳು ಸಾರ್ವಜನಿಕ ಆಡಳಿತದ ಭಾಗವಾಗಿವೆ.
- ಸರಕಾರದ ವಿವಿಧ ಜವಾಬ್ದಾರಿಗಳನ್ನು ಈ ಸಂಸ್ಥೆಗಳು ನಿರ್ವಹಿಸುತ್ತವೆ.
- ಆದ್ದರಿಂದ ಇವುಗಳು ಸಾರ್ವಜನಿಕ ಸಂಸ್ಥೆಗ ಳೆಂದು ಕರೆಯಲ್ಪಡುತ್ತವೆ.

### ಸಾರ್ವಜನಿಕ ಆಡಳಿತ

ಪಾಠಭಾಗದಲ್ಲಿ ನೀಡಿರುವ ನಿರ್ವಚನವನ್ನು ವ್ಯಕ್ತಿಗತವಾಗಿ ಓದಬೇಕು. ಸಮಾನವಾದ ಇತರ ನಿರ್ವಚನಗಳನ್ನು, ಐಸಿಟಿ ಸಾಧ್ಯತೆಯನ್ನು ಉಪಯೋಗಿಸಿ ಕಂಡುಕೊಳ್ಳಬೇಕು. ನಂತರ ಸಾರ್ವಜನಿಕ ಆಡಳಿತದ ಉದ್ದೇಶಗಳೆಂಬ ಆಶಯದ ಆಧಾರದಲ್ಲಿ ತರಗತಿಯಲ್ಲಿ ಚರ್ಚೆಯೊಂದನ್ನು ನಡೆಸಬೇಕು. ಚರ್ಚೆಯ ಕೊನೆಯಲ್ಲಿ ವಿನಿಮಯ ಮಾಡಬೇಕಾದ ಆಶಯಗಳು :

- ಎಲ್ಲ ಆಡಳಿತ ವ್ಯವಸ್ಥೆಗಳಲ್ಲಿಯೂ ಸಾರ್ವಜನಿಕ ಆಡಳಿತದ ರೀತಿಯು ನೆಲೆ ನಿಂತಿದೆ.
- ಅವುಗಳ ಉದ್ದೇಶ ಮತ್ತು ಕಾರ್ಯವಿಧಾನವು ವಿಭಿನ್ನವಾಗಿವೆ.

**ಗ್ಲಾಡನ್**

ಸಾರ್ವಜನಿಕ ಆಡಳಿತವನ್ನು ನಿರ್ವಚಿಸಿದ ಪಾಶ್ಚಾತ್ಯ ಚಿಂತಕ. ಸಾರ್ವಜನಿಕ ಆಡಳಿತದ ಕುರಿತಾದ ಆಧುನಿಕ ಸಿದ್ಧಾಂತಗಳಲ್ಲಿ ಸ್ವೀಕರಿಸಬಹುದಾದ ನಿರ್ವಚನ.

ರಾಜಾಡಳಿತದಲ್ಲೂ ಪ್ರಜಾಪ್ರಭುತ್ವ ದೇಶಗಳಲ್ಲೂ ಇರುವ ವಿಭಿನ್ನ ಸಾರ್ವಜನಿಕ ಆಡಳಿತ ವ್ಯವಸ್ಥೆಯ ಕುರಿತು ಅಧ್ಯಾಪಕರು ಮಕ್ಕಳಲ್ಲಿ ಚರ್ಚಿಸುವರು. ಅದರ ನಂತರ ಅವುಗಳ ಉದ್ದೇಶ ಮತ್ತು ವಿಧಾನಗಳನ್ನು ಮಕ್ಕಳು ಪಟ್ಟಿ ಮಾಡುವರು.

ಉದಾ:

| ರಾಜಾಡಳಿತ | ಪ್ರಜಾಪ್ರಭುತ್ವ |
|---|---|
| • ರಾಜನ ಆಸಕ್ತಿಗೆ ಪ್ರಾಧಾನ್ಯ | • ಜನರ ಆಸಕ್ತಿಗೆ ಪ್ರಾಧಾನ್ಯ |
| • ರಾಜನ ತೀರ್ಮಾನಗಳು ಜಾರಿಗೊಳ್ಳುವುದು | • ಜನರ ತೀರ್ಮಾನಗಳಿಗೆ ಪರಿಗಣನೆ |

ಪಟ್ಟಿಯನ್ನು ಪೂರ್ತಿಗೊಳಿಸಿದ ನಂತರ ಚಟುವಟಿಕೆಯನ್ನು ಕ್ರೋಡೀಕರಿಸಬೇಕು.

### ಸಾರ್ವಜನಿಕ ಆಡಳಿತದ ಪ್ರಾಧಾನ್ಯ :

ಪಾಠಭಾಗದಲ್ಲಿ ನೀಡಿರುವ ವಾರ್ತೆಗಳನ್ನು ಮಕ್ಕಳು ವ್ಯಕ್ತಿಗತವಾಗಿ ಓದಿ, ಅಭಿಪ್ರಾಯಗಳನ್ನು

ದಾಖಲಿಸಬೇಕು. ನಂತರ ಇಂತಹ ಸಂಸ್ಥೆಗಳ ಸೇವೆಗಳು ಜನರಿಗೆ ತಲುಪಬೇಕಾದ ಪ್ರಾಧಾನ್ಯವನ್ನು ತರಗತಿಯಲ್ಲಿ ಚರ್ಚಿಸಬೇಕು. ಮಕ್ಕಳು ತಮ್ಮ ಪ್ರದೇಶದ ಅನುಭವಗಳನ್ನು ಹೇಳಿಕೊಂಡು ಸಾರ್ವಜನಿಕ ಆಡಳಿತದ ಪ್ರಾಧಾನ್ಯವನ್ನು ವಿವರಿಸಬೇಕು. ಸ್ವತಃ ಶಾಲೆಯ ಸ್ನೇಹಿತರೊಂದಿಗೋ, ಊರಿನವರೊಂದಿಗೋ ತಮ್ಮ ಅಗತ್ಯಗಳನ್ನು ಪರಿಗಣಿಸಿಕೊಂಡು ಚರ್ಚೆಯಲ್ಲಿ ಎಲ್ಲರಿಗೂ ಅವಕಾಶವನ್ನು ನೀಡಬೇಕು. ಸಾರ್ವಜನಿಕ ಆಡಳಿತದ ಸಾಮಾನ್ಯ ಉದ್ದೇಶಗಳು ಒಳಗೊಳ್ಳುವಂತೆ ಚರ್ಚೆಯನ್ನು ಕ್ರೋಡೀಕರಿಸಬೇಕು. ಈ ಕೆಳಗಿನ ಆಶಯಗಳನ್ನು ಸೇರಿಸಿಕೊಳ್ಳಬೇಕು.

- ಸಾರ್ವಜನಿಕ ಆಡಳಿತದ ಅಂತಿಮ ಉದ್ದೇಶವು ಜನಕ್ಷೇಮವಾಗಿದೆ. (ಸೂಕ್ಷ್ಮವಾದ ಉದಾಹರಣೆ ಮತ್ತು ಅನುಭವಗಳನ್ನು ತಿಳಿಸಬೇಕು)
- ಸಾರ್ವಜನಿಕ ಆಡಳಿತವು ಸೇವೆಗಳನ್ನು ಲಭ್ಯವಾಗಿಸುವುದು.
- ಸರಕಾರದ ಧೋರಣೆಗಳನ್ನು ಜಾರಿಗೊಳಿಸುವುದು.
- ಜನರ ಸಮಸ್ಯೆಗಳಿಗೆ ಪರಿಹಾರ ಕಾಣುವುದು.
- ಹೆಚ್ಚು ಸಂರಕ್ಷಣೆ ಅಗತ್ಯವಿರುವವರಿಗೆ ವಿಶೇಷ ಪರಿಗಣನೆ ನೀಡಬೇಕು.

### ಗಾಂಧೀಜಿ ಮತ್ತು ಸಾರ್ವಜನಿಕ ಆಡಳಿತ

ಗಾಂಧೀಜಿಯವರು ಪರಿಚಯಿಸಿದ ಆಡಳಿತ ವಿಧಾನವು ಗ್ರಾಮ ಸ್ವರಾಜ್ಯವಾಗಿದೆ. ಅಧಿಕಾರ ವಿಕೇಂದ್ರೀಕರಣ, ಜನರ ಅಗತ್ಯಗಳಿಗನುಸಾರವಾಗಿ ಯೋಜನೆಗಳನ್ನು ಆವಿಷ್ಕರಿಸಬೇಕೆನ್ನುವುದು ಇದರ ತಿರುಳಾಗಿದೆ. ಯಾರಿಗೆ ಎಲ್ಲಿ ಏನನ್ನು ನೀಡಬೇಕೆಂದು ಕೆಳಗಿನ ಹಂತದಲ್ಲಿಯೇ ಯೋಜನೆಯನ್ನು ರೂಪಿಸಬೇಕೆಂದು ಅವರು ವಿಶ್ವಾಸವಿರಿಸಿದ್ದರು.

## ನೌಕರವೃಂದ

ಪಾಠಭಾಗದಲ್ಲಿ ನೀಡಿರುವ ವಾರ್ತಾ ಶೀರ್ಷಿಕೆಗಳನ್ನು, ತರಗತಿಯಲ್ಲಿ ಓದಿದ ನಂತರ ಇವುಗಳು ಜನರಿಗೆ ಲಭ್ಯವಾಗುವ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳಬೇಕು. ಮಕ್ಕಳ ಪ್ರತಿಕ್ರಿಯೆಯನ್ನು ಬೋರ್ಡಿನಲ್ಲಿ ದಾಖಲಿಸಬೇಕು. ನೌಕರ ವೃಂದಕ್ಕೆ ಸಂಬಂಧಿಸಿ ಆಶಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ತರಗತಿಯಲ್ಲಿ ಸಂದರ್ಶನವನ್ನು ಸಂಘಟಿಸುವುದು.

ನೌಕರ ವೃಂದ ಮತ್ತು ವಿಶೇಷತೆಗಳನ್ನು ಚರ್ಚಿಸುವ ಚಟುವಟಿಕೆ ಇದಾಗಿದೆ. ಹತ್ತಿರದ ಯಾವುದಾದರೂ ಸರಕಾರಿ ಸಂಸ್ಥೆಗಳನ್ನು ಭೇಟಿಯಾಗಿ, ಅಲ್ಲಿನ ನೌಕರ ವೃಂದದೊಂದಿಗೆ ಸಂದರ್ಶನ ನಡೆಸಿ ಆ ನೌಕರ ವೃಂದದ ವಿಶೇಷತೆಗಳನ್ನು ಬರೆಯಿರಿ.

ಅದಕ್ಕಾಗಿ ಮಾದರಿ ಪ್ರಶ್ನಾವಳಿಯೊಂದನ್ನು ತಯಾರಿಸಿರಿ. ಪ್ರಶ್ನೆಗಳು ನೌಕರ ವೃಂದದ ವಿಶೇಷತೆಗಳನ್ನು ತಿಳಿಸುವ ರೀತಿಯದ್ದಾಗಿರಬೇಕು.

- ಆಫೀಸಿನಲ್ಲಿ ಉದ್ಯೋಗಿಯ ಶ್ರೇಣಿ
- ಅವರ ಕಾರ್ಯಚಟುವಟಿಕೆಗಳು/ಜವಾಬ್ದಾರಿಗಳು
- ಆಫೀಸು ನೀಡುವ ಸೇವೆಗಳು.

ಎಂಬೀ ವಿಷಯಗಳು ಆಧಾರವಾಗುವಂತೆ ಪ್ರಶ್ನಾವಳಿಯನ್ನು ತಯಾರಿಸಬೇಕು. ಚಟುವಟಿಕೆ ಗಳನ್ನು ಕ್ರೋಡೀಕರಿಸಿ ವ್ಯಕ್ತಿಗತ ವರದಿಯನ್ನು ತಯಾರಿಸಬೇಕು. ವರದಿಯಲ್ಲಿ ಕೆಳಗಿನ ಅಂಶಗಳು ಬರುವಂತೆ ನೋಡಿಕೊಳ್ಳಬೇಕು.

- ಸರಕಾರದ ಜವಾಬ್ದಾರಿಗಳನ್ನು ನಿರ್ವಹಿಸುವುದು ನೌಕರವೃಂದವಾಗಿದೆ.
- ಸರಕಾರದ ಎಲ್ಲ ಸೇವೆಗಳು ನೌಕರವೃಂದದ ಮೂಲಕ ಜನರನ್ನು ತಲುಪುತ್ತವೆ.
- ಶ್ರೇಣಿ ಪರವಾದ ಸಂಘಟನೆ, ಸ್ಥಿರತೆ, ಯೋಗ್ಯತೆಯ ಆಧಾರದಲ್ಲಿ ಆಯ್ಕೆ, ರಾಜಕೀಯೇತರ,

ನಿಷ್ಪಕ್ಷ ಪಾತ, ಪರಿಣತಿ ಇತ್ಯಾದಿಗಳು ನೌಕರ ವೃಂದದ ವಿಶೇಷತೆಗ ಳಾಗಿವೆ.

- ಈ ವಿಶೇಷತೆಗಳು ಆಡಳಿತವನ್ನು ಸುಗಮ ಗೊಳಿಸುವುದಕ್ಕೂ, ಕಾರ್ಯ ಕ್ಷಮವಾಗು ವಂತೆಯೂ ಮಾಡಿಕೊಳ್ಳುವುದಕ್ಕೂ ಸಹಾಯಕವಾಗುವುದು.

## ಭಾರತದಲ್ಲಿ ನೌಕರವೃಂದ

ಪಾಠಪುಸ್ತಕದಲ್ಲಿ ನೀಡಿರುವುದು ಅಥವಾ ಪಿ.ಎಸ್.ಸಿ., ಯು.ಪಿ.ಎಸ್.ಸಿ. ವಿಜ್ಞಾಪನೆಯ ಪತ್ರಿಕಾವರದಿಗಳನ್ನು ಸಂಗ್ರಹಿಸಿ ತರಗತಿಯಲ್ಲಿ ವಿಶ್ಲೇಷಿಸುವುದು ಉತ್ತಮವಾಗಿದೆ. ಸರಕಾರದ ಸೇವೆಗಿರುವ ಆಯ್ಕೆಯ ವಿವಿಧ ಹಂತಗಳನ್ನು ನೋಟ್‌ಬುಕ್‌ನಲ್ಲಿ ದಾಖಲಿಸಲಿ. ಈ ಮೂಲಕ ಭಾರತದಲ್ಲಿ ಸಿವಿಲ್ ಸರ್ವೀಸ್‌ನ ರೀತಿಯನ್ನು ತಿಳಿಸಬಹುದು. ನಂತರ ಭಾರತದಲ್ಲಿ ಸಿವಿಲ್ ಸರ್ವೀಸ್‌ಗೆ ಸಂಬಂಧಿಸಿ ಚಾರ್ಟ್ ಅಥವಾ ಪವರ್‌ಪಾಯಿಂಟ್ ಪ್ರಸೆಂಟೇಶನ್‌ಗೆ ಗುಂಪುಗಳಿಗೆ ನಿರ್ದೇಶಿಸಬಹುದು. ಅಖಿಲ ಭಾರತ ಸಿವಿಲ್ ಸರ್ವೀಸ್‌ನ ಪ್ರಾಧಾನ್ಯವನ್ನು ತಿಳಿದುಕೊಳ್ಳುವುದಕ್ಕೂ, ಆಸಕ್ತಿಯನ್ನು ಬೆಳೆಸುವುದಕ್ಕೂ, 'ನಿಮಗೂ ಜಿಲ್ಲಾಧಿಕಾರಿ ಆಗಬಹುದು' ಎನ್ನುವ ಬಾಕ್ಸನ್ನು ಗಟ್ಟಿಯಾಗಿ ಓದಲು ತಿಳಿಸಬಹುದು.

ಚಾರ್ಟನ್ನು ಮಂಡಿಸಿ ಕ್ರೋಢೀಕರಿಸುವಾಗ ಕೆಳಗೆ ನೀಡಿರುವ ಅಂಶಗಳು ಒಳಗೊಂಡಿರಬೇಕು.

- ಕೇಂದ್ರ–ಪ್ರಾಂತ್ಯ ಸರಕಾರದ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರುವ ನೌಕರ ವೃಂದವೂ ಭಾರತದ ಸಿವಿಲ್ ಸರ್ವೀಸ್ ಭಾಗವಾಗಿದೆ.
- ಪುರಾತನ ಕಾಲದಿಂದಲೇ ಭಾರತದಲ್ಲಿ ಸಾರ್ವಜನಿಕ ಆಡಳಿತ ವ್ಯವಸ್ಥೆ ಜಾರಿಯಲ್ಲಿತ್ತು.
- ಆಧುನಿಕ ವಿಧಾನದ ಸಾರ್ವಜನಿಕ ಆಡಳಿತ ವಿಧಾನವು ಬ್ರಿಟೀಷರ ಕಾಲದಲ್ಲಿ ಜಾರಿ ಗೊಂಡಿತು.
- ಸ್ವಾತಂತ್ರ್ಯಾನಂತರದಲ್ಲಿ ಭಾರತದಲ್ಲಿ ಸಿವಿಲ್ ಸರ್ವೀಸ್ ಜಾರಿಗೊಂಡಿತು.
- ಅಖಿಲ ಭಾರತ ಸರ್ವೀಸ್, ಕೇಂದ್ರ ಸರ್ವೀಸ್, ಪ್ರಾಂತ್ಯ ಸರ್ವೀಸ್ ಎಂಬಿವುಗಳು ಭಾರತದಲ್ಲಿ ಸಿವಿಲ್ ಸರ್ವೀಸ್‌ನಲ್ಲಿ ಸೇರಿದೆ. (ಉದಾಹರಣೆ ನೀಡುವುದು)
- ಉದ್ಯೋಗಸ್ಥರನ್ನು ನೇಮಿಸುವುದು ಯು.ಪಿ. ಎಸ್.ಸಿ. ಅಥವಾ ಪಿ.ಎಸ್.ಸಿ. ಆಗಿರುವುದು.
- ಇವುಗಳು ಸಾಂವಿಧಾನಿಕ ಸಂಸ್ಥೆಗಳಾಗಿವೆ.

ನಂತರ ಸಾರ್ವಜನಿಕ ಆಡಳಿತದಲ್ಲಿ ಕಂಡುಬರುವ ಸಮಸ್ಯೆಗಳನ್ನು ತರಗತಿಯಲ್ಲಿ ತಿಳಿಸಬೇಕು. ಕೆಳಗೆ ನೀಡಿರುವ ಸೂಚನೆಗಳ ಆಧಾರದಲ್ಲಿ ಪಟ್ಟಿಯನ್ನು ಭರ್ತಿ ಮಾಡಿರಿ.

- ಲಂಚ
- ಉದ್ಯೋಗಸ್ಥರ ಕರ್ತವ್ಯ ಲೋಪ
- ಕಾರ್ಯದಕ್ಷತೆಯಿಲ್ಲದಿರುವುದು.
- ಅನಪೇಕ್ಷಿತ ಹಸ್ತಕ್ಷೇಪ

## ಆಡಳಿತ ರೂಪೀಕರಣ

ಆಡಳಿತ ನಿರ್ವಹಣೆಯ ಕಾರ್ಯಕ್ಷಮತೆಯನ್ನು ಉತ್ತಮಪಡಿಸಲು, ಸಮಯಬಂಧಿತವಾಗಿ ಸೇವೆಗಳು ಜನರಿಗೆ ತಲುಪುವಂತಾಗಲು ಉದ್ದೇಶಿಸಿರುವ ಸರಕಾರದ ವ್ಯವಸ್ಥೆಯೇ ಆಡಳಿತ ನವೀಕರಣವಾಗಿದೆ.

ಆಡಳಿತ ನವೀಕರಣದ ಭಾಗವಾಗಿ ನಡೆಯುವ ಚಟುವಟಿಕೆಗಳ ಕುರಿತು ಚರ್ಚೆ ನಡೆಸಬೇಕು.

ಮಕ್ಕಳು ಗುಂಪುಗಳಾಗಿ ಚರ್ಚೆಯನ್ನು ನಡೆಸಬೇಕು.

ಚರ್ಚಾ ಸೂಚಕಗಳ ಭಾಗವಾಗಿ ಈ ಮೊದಲು ನಡೆಸಿದ ಚಟುವಟಿಕೆಯಲ್ಲಿ ಕಂಡುಕೊಂಡದ್ದನ್ನು ಬಳಸಿಕೊಳ್ಳಬಹುದು. (ಸಾರ್ವಜನಿಕ ಆಡಳಿತದಲ್ಲಿ ಕಂಡುಬರುವ ಸಮಸ್ಯೆಗಳು) ಇದಕ್ಕಿರುವ ಪರಿಹಾರ ಗಳು ಯಾವುವು? ಎಂದು ಚರ್ಚೆ ನಡೆಸಬೇಕು. ನಂತರ ಆಡಳಿತ ನವೀಕರಣ ಯೋಜನೆಗಳಾದ ಇ–ಗವರ್ನೆನ್ಸ್, ಸೇವೆಯನ್ನು ಪಡೆಯುವ ಹಕ್ಕು, ಮಾಹಿತಿಯನ್ನು ಪಡೆಯುವ ಹಕ್ಕು, ಸೆಂಟ್ರಲ್ ವಿಜಿಲೆನ್ಸ್ ಕಮಿಶನ್, ಲೋಕಪಾಲ್, ಲೋಕಾಯುಕ್ತ ಇತ್ಯಾದಿಗಳನ್ನು ಪಟ್ಟಿಯಲ್ಲಿ ಸೇರಿಸಿ, ಚಟುವಟಿಕೆ ಯನ್ನು ಕೊನೆಗೊಳಿಸಬೇಕು.

**ಇ-ಗವರ್ನೆನ್ಸ್**

ಪಾಠಭಾಗದಲ್ಲಿ ನೀಡಿರುವ ಎ.ಪಿ.ಜೆ. ಅಬ್ದುಲ್ ಕಲಾಂರ ಮಾತುಗಳನ್ನು ತರಗತಿಯಲ್ಲಿ ವಿವರಿಸಿ ಅವುಗಳ ಆಶಯವನ್ನು ಬೋರ್ಡಿನಲ್ಲಿ ಬರೆಯಬೇಕು. ಇ-ಗವರ್ನೆನ್ಸ್‌ನ ವಿವಿಧ ಸಾಧ್ಯತೆಗಳು, ಶಾಲೆಯಲ್ಲಿ ಇ-ಗವರ್ನೆನ್ಸ್‌ನ ಸಾಧ್ಯತೆಗಳನ್ನು ಹೇಗೆ ಉಪಯೋಗಿಸಬಹುದು ಎಂದೂ, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಲೋತ್ಸವ, ಸ್ಪೋರ್ಟ್ಸ್, ಪರೀಕ್ಷೆ ಮುಂತಾದ ಮಾಹಿತಿಗಳನ್ನು ಇ-ಗವರ್ನೆನ್ಸ್‌ನ ಮೂಲಕ ಹೇಗೆ ನಡೆಸಬಹುದೆಂದು ಐ.ಸಿ.ಟಿ. ಸಾಧ್ಯತೆಯನ್ನು ಬಳಸಿ ಮಕ್ಕಳಿಗೆ ತಿಳಿಸಬೇಕು. ಅಕ್ಷಯ ಕೇಂದ್ರಗಳಿಗೆ ಸಂಬಂಧಿಸಿ ಮಾಹಿತಿಗಳನ್ನು ಸಂಗ್ರಹಿಸಿ ಮಂಡಿಸಬೇಕು. ಆಶಯಗಳನ್ನು ಈ ಕೆಳಗಿನಂತೆ ಕ್ರೋಢೀಕರಿಸಬೇಕು.

- ಆಡಳಿತ ರಂಗದಲ್ಲಿ ಇಲೆಕ್ಟ್ರೋನಿಕ್, ಮಾಹಿತಿ ತಂತ್ರಜ್ಞಾನವನ್ನು ಬಳಸುವುದನ್ನು ಇ-ಗವರ್ನೆನ್ಸ್ ಎನ್ನುವರು.
- ಸೇವೆಯು ಸುಲಭದಲ್ಲಿ ಮತ್ತು ವೇಗವಾಗಿ ಸಿಗುವಂತೆ ಮಾಡಲು ಇ-ಗವರ್ನೆನ್ಸ್ ಸಹಾಯ ಮಾಡುವುದು.
- ಸರಕಾರದ ಸೇವೆಗಾಗಿ ಆಫೀಸುಗಳಲ್ಲಿ ಕಾಯುವುದು ಇಲ್ಲದಾಗುವುದು.
- ಕಡಿಮೆ ಖರ್ಚಿನಲ್ಲಿ ಸೇವೆಗಳು ಲಭ್ಯವಾಗುವುವು.
- ಸೇವೆಯ ಗುಣಮಟ್ಟವೂ ಕಾರ್ಯಕ್ಷಮತೆಯೂ ವರ್ಧಿಸುವುದು.
- ಮನೆಯಲ್ಲೇ ಇದ್ದುಕೊಂಡು ಸೇವೆಯನ್ನು ಪಡೆಯುವುದು.

**ಮಾಹಿತಿಯನ್ನು ಪಡೆಯುವ ಹಕ್ಕು :**

ಅಧ್ಯಾಯದ ಆರಂಭದಲ್ಲಿ ನೀಡಿದ ಮಾಹಿತಿ ಹಕ್ಕಿನ ಅರ್ಜಿಯನ್ನೂ, ಅದಕ್ಕಿರುವ ಉತ್ತರವನ್ನೂ ಮಕ್ಕಳು ಓದಿಕೊಳ್ಳಲಿ. ಅರ್ಜಿಯಲ್ಲಿರುವ ಪ್ರಶ್ನೆಗಳಿಗೆ ಯಾವ ರೀತಿಯ ಸ್ಪಷ್ಟವಾದ ಉತ್ತರ ಸಿಕ್ಕಿದೆ ಎಂದು ವೈಯಕ್ತಿಕವಾಗಿ ಮಕ್ಕಳು ದಾಖಲಿಸಲಿ.

ಈ ರೀತಿಯಲ್ಲಿ ಸರಕಾರಿ ಸಂಸ್ಥೆಗಳಿಂದ ಮಾಹಿತಿಯನ್ನು ಪಡೆಯುವ ಹಕ್ಕು ಲಭಿಸಿದ್ದು ಹೇಗೆ ?

ಇದಕ್ಕೆ ಸಂಬಂಧಿಸಿ ಪಾಠಭಾಗದಲ್ಲಿರುವ ಸ್ಪಷ್ಟೀಕರಣವನ್ನು, ಅದಕ್ಕೆಡೆಯಾದ ಸನ್ನಿವೇಶಗಳನ್ನು ಮಕ್ಕಳು ವಿಶ್ಲೇಷಿಸಬೇಕು.

ಇದರೊಂದಿಗೆ ಮಾಹಿತಿ ಹಕ್ಕು ನಿಯಮದ ಸಾಧ್ಯತೆಗಳನ್ನು ಧನಾತ್ಮಕವಾಗಿ ಯಾವ ರೀತಿಯಲ್ಲಿ ಉಪಯೋಗಿಸಬಹುದೆಂದು ವಿವರಿಸಬೇಕು. ಮಾಹಿತಿ ಹಕ್ಕಿನ ಪ್ರಯೋಜನವನ್ನು ಚರ್ಚೆಯಲ್ಲಿ ಸೇರಿಸಬೇಕು.

- ಭ್ರಷ್ಟಾಚಾರವನ್ನು ತಡೆಯಲು
- ಕಾಲವಿಳಂಬವನ್ನು ತಡೆಯಲು
- ಸ್ವಜನ ಪಕ್ಷಪಾತವನ್ನು ತಡೆಯಲು
- ಉದ್ಯೋಗಿಗಳ ನಡುವೆ ಕರ್ತವ್ಯ ಪ್ರಜ್ಞೆಯನ್ನುಂಟು ಮಾಡಲು
- ಸರಕಾರದ ಕಾರ್ಯಚಟುವಟಿಕೆಗಳನ್ನು ಪಾರದರ್ಶಕಗೊಳಿಸಲು
- ಅನರ್ಹರಿಗೆ ಅನುಕೂಲ ನೀಡುವುದನ್ನು ತಡೆಯಲು
- ಸರದಿಗೆ ಅನುಗುಣವಾಗಿ ಕ್ರಮಬದ್ಧವಾದ ಪರಿಗಣನೆ ಖಾತರಿಪಡಿಸುವುದು. ಕೇಂದ್ರ ಮತ್ತು ಪ್ರಾಂತ್ಯ ಮಟ್ಟದಲ್ಲಿರುವ ಮಾಹಿತಿ ಹಕ್ಕು ಆಯೋಗಗಳನ್ನು ಪರಿಚಯಿಸಬಹುದಾಗಿದೆ.

ಪಾಠ ಪುಸ್ತಕದಲ್ಲಿರುವ ಎರಡು ಚಟುವಟಿಕೆಗಳನ್ನು ಸಂಯೋಜಿಸಿಕೊಂಡು, ಚಟುವಟಿಕೆಯನ್ನು ಪೂರ್ತಿಗೊಳಿಸಬಹುದು.

ವಿದ್ಯಾಲಯ ಅಥವಾ ಹತ್ತಿರದ ಸಂಸ್ಥೆಗಳನ್ನು ಉದ್ದೇಶವಾಗಿಟ್ಟುಕೊಂಡು ಮಾಹಿತಿ ಹಕ್ಕಿನ ಪ್ರಕಾರ ಅರ್ಜಿಯೊಂದರ ಮಾದರಿಯನ್ನು ಮಕ್ಕಳು ಬರೆದು ತಯಾರಿಸಲಿ. ವಿಭಿನ್ನ ಅರ್ಜಿಗಳನ್ನು ವಿಶ್ಲೇಷಿಸಿಕೊಂಡು ಚಟುವಟಿಕೆಯನ್ನು ಕ್ರೋಡೀಕರಿಸಬೇಕು.

**ಕ್ರೋಡೀಕರಣದಲ್ಲಿ ಒಳಗೊಂಡಿರಬೇಕಾದ ಅಂಶಗಳು:**

- ಸರಕಾರಿ ಸಂಸ್ಥೆಗಳ ಕಾರ್ಯಗಳಿಗೆ ಸಂಬಂಧಿಸಿ ಮಾಹಿತಿಗಳನ್ನು ಪಡೆಯಲು 2005ರ ಮಾಹಿತಿಹಕ್ಕು ನಿಯಮವು ಸಂದರ್ಭವನ್ನು ಕಲ್ಪಿಸುವುದು.
- ರಾಜಸ್ಥಾನದ ಮಸ್ದೂರ್ ಕಿಸಾನ್ ಶಕ್ತಿ ಸಂಗತಾನ್ ಸಂಸ್ಥೆಯು ನಡೆಸಿದ ಪ್ರಯತ್ನದ ಫಲವಾಗಿ ಮಾಹಿತಿ ಹಕ್ಕು ನಿಯಮ ಜಾರಿಗೆ ಬಂತು.

- ಸರಕಾರದ ಕೆಲಸಗಳು ಈ ಮೂಲಕ ಪಾರ ದರ್ಶಕವಾದುವು.
- ರಾಷ್ಟ್ರೀಯ ಮತ್ತು ಪ್ರಾಂತ್ಯ ಮಟ್ಟದಲ್ಲಿ ಮಾಹಿತಿ ಹಕ್ಕು ಆಯೋಗವು ಸ್ಥಾಪಿತವಾಗಲು ಇದು ಕಾರಣವಾಯಿತು.
- ಅಗತ್ಯವಿರುವ ಮಾಹಿತಿಯು ನಿಗದಿತ ಸಮಯದೊಳಗೆ ಸಿಗದೇ ಹೋದರೆ ಮಾಹಿತಿ ಹಕ್ಕು ಆಯೋಗವನ್ನು ನಾವು ಸಮೀಪಿಸಬಹುದು.

ಮಾಹಿತಿ ಹಕ್ಕು ಆಯೋಗದ ಕಾರ್ಯಚಟುವಟಿಕೆಗಳ ಕುರಿತಾದ ಹೆಚ್ಚಿನ ಮಾಹಿತಿಯನ್ನು ಹೆಚ್ಚಿನ ಓದಿಗಾಗಿ ಬಳಸಿಕೊಳ್ಳಬಹುದು.

## ಮಾಹಿತಿ ಹಕ್ಕು ನಿಯಮದ ಕಡೆಯ ಹಾದಿಗಳು

ಸಾವಿರದ ಒಂಬೈನೂರರಲ್ಲಿ ರಾಜಸ್ಥಾನದ ಕಾರ್ಮಿಕರ ಗುಂಪೊಂದು ಸರಕಾರದ ಮುಂದೆ ನಿವೇದನೆಯೊಂದನ್ನು ಸಲ್ಲಿಸಿತು. ಅವರ ಕೆಲಸದ ಸಂಬಳವನ್ನು ದಾಖಲಿಸುವ ಮಾಸ್ಟರ್‌ರೋಲ್‌ನ್ನು ನೋಡಬೇಕು ಎನ್ನುವುದು ಅವರ ವಿನಂತಿಯಾಗಿತ್ತು. ಸರಕಾರವು ಕಾರ್ಮಿಕರಿಗೆ ನೀಡುವ ಕೂಲಿಯಿಂದ ಒಂದು ಭಾಗವನ್ನು ಕೆಲಸ ಮಾಡಿಸುವ ಉದ್ಯೋಗಸ್ಥ ತೆಗೆದುಕೊಳ್ಳುತ್ತಾನೆಂಬುದು ಅವರ ಸಂಶಯ. ಆದರೆ ಮಾಸ್ಟರ್ ರೋಲ್ ತೋರಿಸಲು ಸಾಧ್ಯವಿಲ್ಲ. ಅದು ಸರಕಾರದ ದಾಖಲೆಯಾಗಿದೆ ಎನ್ನುವುದು ಉದ್ಯೋಗಸ್ಥರ ವಾದವಾಗಿತ್ತು. ಕಾರ್ಮಿಕರು ಇದಕ್ಕಾಗಿ ಪ್ರತಿಭಟನೆಯನ್ನು ನಡೆಸಿದರು. ಮಸ್ದೂರ್ ಕಿಸಾನ್‌ಶಕ್ತಿ ಸಂಘತಾನ್ ಎಂಬ ಸಂಘಟನೆ ಈ ಪ್ರತಿಭಟನೆಯನ್ನು ಆರಂಭಿಸಿದ್ದು ಐ.ಎ.ಎಸ್. ಉದ್ಯೋಗಕ್ಕೆ ರಾಜೀನಾಮೆಯನ್ನು ನೀಡಿದ ಸಾಮಾಜಿಕ ಕಾರ್ಯಕರ್ತೆ ಶ್ರೀಮತಿ ಅರುಣಾ ರಾಯ್ ಈ ಚಳುವಳಿಗೆ ನೇತೃತ್ವ ನೀಡಿದರು. ಚಳುವಳಿಗಳು ಸಾಲುಗಟ್ಟಿ ನಡೆದವು. ಸಂಘ ಸಂಸ್ಥೆಗಳು ಈ ಚಳುವಳಿಯನ್ನು ಬೆಂಬಲಿಸಿದವು. ಕೊನೆಯಲ್ಲಿ ಸರಕಾರವು ಮಾಸ್ಟರ್ ರೋಲ್‌ನ ಪ್ರತಿಯನ್ನು ಜನರಿಗೆ ನೀಡಬೇಕಾಯಿತು. ಇದರಲ್ಲಿರುವ ವಾಸ್ತವಿಕತೆಯನ್ನು ನೋಡಿ ಜನರು ಸ್ತಂಭೀಭೂತರಾದರು. ಅವರಿಗೆ ಲಭಿಸುತ್ತಿರುವ ಕೂಲಿಯ ಬಹುಭಾಗವನ್ನೂ ಕಬಳಿಸಲಾಗುತ್ತಿತ್ತು. ಕೆಲಸವನ್ನು ಮಾಡುತ್ತಿದ್ದವರಲ್ಲದ ಆ ಊರಿನಲ್ಲಿ ಇಲ್ಲದವರ, ಈಗಾಗಲೇ ತೀರಿಕೊಂಡವರ ಹೆಸರನ್ನೂ ಮಾಸ್ಟರ್ ರೋಲ್‌ನಲ್ಲಿ ಸೇರಿಸಿ ಸಂಬಳವನ್ನು ಪಡೆಯಲಾಗುತ್ತಿತ್ತು.

ಇದಕ್ಕೆ ಸಮಾನವಾದ ಅನೇಕ ಘಟನೆಗಳು ದೇಶದ ನಾನಾ ಭಾಗಗಳಲ್ಲಿ ನಡೆದಿದ್ದುವು. ಸರಕಾರದ ದಾಖಲೆಗಳನ್ನು ರಹಸ್ಯವಾಗಿಡುವುದರಿಂದ ಭ್ರಷ್ಟಾಚಾರವು ಹೆಚ್ಚಾಗುತ್ತದೆ ಎಂಬ ನಿಗಮನವನ್ನು ದೇಶಾದ್ಯಂತ ಸಂಘಟನೆಗಳು ಅಭಿಪ್ರಾಯ ಪಟ್ಟವು. ಇವರ ಪ್ರತಿಭಟನೆಯ ಫಲವಾಗಿ ವಿವಿಧ ಪ್ರಾಂತ್ಯ ಸರಕಾರಗಳು ಇದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸಿದವು. ರಾಜಸ್ಥಾನ್, ದೆಹಲಿ, ತಮಿಳುನಾಡು, ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ, ಮುಂತಾದ ಪ್ರಾಂತ್ಯಗಳು ಈ ರೀತಿಯ ನಿಯಮಗಳನ್ನು ರೂಪಿಸಿದವು. ಇದರ ಮುಂದಿನ ಹಂತವಾಗಿ 2005ರಲ್ಲಿ ಕೇಂದ್ರ ಸರಕಾರವು ಮಾಹಿತಿ ಹಕ್ಕು ನಿಯಮವನ್ನು ಜಾರಿಗೆ ತಂದಿತು. ಈ ಮೂಲಕ ಎಲ್ಲ ಪ್ರಜೆಗಳಿಗೆ ಮಾಹಿತಿಯನ್ನು ಪಡೆಯುವ ಹಕ್ಕನ್ನು ಖಾತರಿಪಡಿಸಲಾಯಿತು.

## ಮಾಹಿತಿ ಹಕ್ಕು ನಿಯಮ – ಅರ್ಜಿ ಫಾರಂ – ಫೀಸ್

ಮಾಹಿತಿ ಹಕ್ಕು ನಿಯಮ ಅರ್ಜಿಗೆ ಪ್ರತ್ಯೇಕ ಫಾರ್ಮ್ ಎಂದಿಲ್ಲ. ಅರ್ಜಿಯಲ್ಲಿ ಅರ್ಜಿದಾರನ ಪೂರ್ಣ ವಿಳಾಸವೂ, ಲಭಿಸಬೇಕಾದ ಮಾಹಿತಿಗಳ ಕುರಿತಾದ ಸ್ಪಷ್ಟ ವಿವರಣೆಯೂ ಒಳಗೊಂಡಿರಬೇಕು. ಅಲ್ಲದೆ 10 ರೂಪಾಯಿಗಳ ಕೋರ್ಟು ಫೀ ಸ್ಟಾಂಪ್, ಹಣ ಪಾವತಿಸಿದ ರಶೀದಿಯೋ, ಡಿಡಿಯೋ, ಪೋಸ್ಟಲ್ ಆರ್ಡರ್ ಅಥವಾ ಚೆಕ್, ಅರ್ಜಿ ಶುಲ್ಕವಾಗಿ ಲಗತ್ತಿಸಿರಬೇಕು. ಪಡೆಯುವ ವಿವರಗಳ ವ್ಯಾಪ್ತಿಯನ್ನು ಅನುಸರಿಸಿಕೊಂಡು ಹೆಚ್ಚಿನ ಶುಲ್ಕವನ್ನು ನೀಡಬೇಕಾಗಿದೆ. (ಉದಾ– ಒಂದು ಪುಟಕ್ಕೆ ರೂಪಾಯಿ 2ರಂತೆ)

### ಸೇವೆಯನ್ನು ಪಡೆಯುವ ಹಕ್ಕು

ಪಾಠಭಾಗದಲ್ಲಿ ನೀಡಿರುವ ಮಾಹಿತಿಗಳ ಆಧಾರದಲ್ಲಿ ಅಥವಾ ಸಮೀಪದ ಆಫೀಸ್‌ನಲ್ಲಿ ಪ್ರದರ್ಶಿಸಿರುವ ಬೋರ್ಡಿನ ಆಧಾರದಲ್ಲಿ ಮಕ್ಕಳು ತರಗತಿಯಲ್ಲಿ

ಚರ್ಚೆಯೊಂದನ್ನು ನಡೆಸಬೇಕು. ಚರ್ಚೆಗೆ ಸಹಾಯಕವಾಗುವಂತೆ, ಸೇವೆಯನ್ನು ಪಡೆಯುವ ಹಕ್ಕಿನ ವಿವಿಧ ಸಾಧ್ಯತೆಗಳನ್ನು ಕಂಡುಕೊಳ್ಳಬೇಕು. ಪ್ರಾಂತ್ಯ ಸರಕಾರ ಜ್ಯಾರಿಗೊಳಿಸಿದ ಸೇವೆಯನ್ನು ಪಡೆಯುವ ಹಕ್ಕಿನ ನಿಯಮದ ಪ್ರತಿಯನ್ನು ಹೆಚ್ಚಿನ ಓದಿಗಾಗಿ ನೀಡಬಹುದು.

ಸರಕಾರಿ ಸಂಸ್ಥೆಗಳಿಂದ ಸರಿಯಾದ ಸೇವೆಗಳು ಲಭಿಸುವಲ್ಲಿ ಇರುವ ಅಡಚಣೆಗಳನ್ನು ಕೇಳಿ ಲಿಸ್ಟ್ ಮಾಡಬೇಕು.

- ಫೈಲನ್ನು ಹೆಚ್ಚು ಸಮಯ ಆಫೀಸಿನಲ್ಲಿ ತೆಗೆದಿಡುವುದು.
- ಉದ್ಯೋಗಿಗಳ ಹಂತದ ಹಸ್ತಕ್ಷೇಪ
- 

ಚರ್ಚೆಯಲ್ಲಿ ಮೂಡಿಬಂದ ಆಶಯಗಳ ಆಧಾರದಲ್ಲಿ ಟಿಪ್ಪಣಿ ತಯಾರಿಸುವುದು. ಸೇವೆಯು ಸರಿಯಾಗಿ ಲಭಿಸುವಲ್ಲಿ ಸೇವೆಯನ್ನು ಪಡೆಯುವ ಹಕ್ಕು ಸಹಾಯಕವಾಗಿದೆ ಎಂದು ಕ್ರೋಡೀಕರಿಸಬೇಕು. ಅದಕ್ಕಿರುವ ವ್ಯವಸ್ಥೆಗಳನ್ನು ಕೆಳಗೆ ನೀಡಲಾಗಿದೆ..

- ಸರಕಾರದ ಸೇವೆಯನ್ನು ಖಾತರಿಪಡಿಸುವ ನಿಯಮವು ಸೇವೆಯನ್ನು ಪಡೆಯುವ ಹಕ್ಕು ನಿಯಮವಾಗಿದೆ.
- ಸೇವೆಯು ಎಷ್ಟು ಸಮಯದೊಳಗೆ ಸಿಗಬೇಕೆಂದು ಈ ನಿಯಮದ ಪ್ರಕಾರ ನಿಶ್ಚಯಿಸಲಾಗುವುದು.
- ನಿಶ್ಚಿತ ಸಮಯದೊಳಗೆ ಸೇವೆಯು ಸಿಗದಿದ್ದರೆ, ಸಂಬಂಧಿಸಿದ ಅಧಿಕಾರಿಯ ಮೇಲೆ ದಂಡವನ್ನು ಹಾಕಬಹುದು.
- ಸೇವೆಯನ್ನು ಪಡೆಯುವ ಹಕ್ಕು ಸಾರ್ವಜನಿಕ ಆಡಳಿತದ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು.

**ಸೇವೆಯನ್ನು ಪಡೆಯುವ ಹಕ್ಕು**

ವಿವಿಧ ಸರಕಾರಿ ಇಲಾಖೆಗಳಲ್ಲಿ ಸೇವೆಗಳನ್ನು ಸರಿಯಾಗಿ, ಖಾತರಿಯಾಗಿ, ಸಮಯಬಂಧಿತವಾಗಿ ಜನರಿಗೆ ಸಿಗುವಂತೆ ಮಾಡುವ ಈ ನಿಯಮವು 2012 ನವೆಂಬರ್ 1ರಿಂದ ಕೇರಳದಲ್ಲಿ ಜಾರಿಗೊಂಡಿತು.

### ಸೆಂಟ್ರಲ್ ವಿಜಿಲೆನ್ಸ್ ಕಮಿಶನ್

ಪಾಠಭಾಗದಲ್ಲಿ ನೀಡಿರುವ ನೋಟೀಸನ್ನು ತರಗತಿಯಲ್ಲಿ ಓದಿ, ಭ್ರಷ್ಟಾಚಾರವು ಕಂಡುಬಂದರೆ ನಾವು ಯಾರಿಗೆ ತಿಳಿಸಬೇಕೆಂದೂ, ಹೇಗೆ ತಿಳಿಸಬೇಕೆಂಬ ಪ್ರಶ್ನೆಯನ್ನು ಕೇಳಿ ಮಕ್ಕಳು ಉತ್ತರವನ್ನು ವೈಯಕ್ತಿಕವಾಗಿ ಬರೆದು ಕೆಲವರ ಪ್ರತಿಕ್ರಿಯೆಯನ್ನು ಪಡೆದು ಪಾಠಭಾಗವನ್ನು ಪ್ರವೇಶಿಸಬಹುದು.

ನಂತರ ವಿಷಯವನ್ನು ಗುಂಪಿನಲ್ಲಿ ಚರ್ಚಿಸಿ ಟಿಪ್ಪಣಿ ತಯಾರಿಸಲು ಹೇಳಬೇಕು. ಚಟುವಟಿಕೆಯನ್ನು ಕ್ರೋಡೀಕರಿಸುವಾಗ ಈ ಕೆಳಗಿನ ಆಶಯಗಳು ಒಳಗೊಂಡಿರಬೇಕು.

- ಭ್ರಷ್ಟಾಚಾರವನ್ನು ತಡೆಯಲು ರಾಷ್ಟ್ರೀಯ ಮಟ್ಟದಲ್ಲಿ ರೂಪುಗೊಂಡ ಸಂಸ್ಥೆಯು ಸೆಂಟ್ರಲ್ ವಿಜಿಲೆನ್ಸ್ ಕಮಿಶನ್ ಆಗಿದೆ.
- 1964ರಲ್ಲಿ ಇದು ಸ್ಥಾಪನೆಗೊಂಡಿತು.
- ಕೇಂದ್ರ ಸರಕಾರಕ್ಕೆ ಸಂಬಂಧಿಸಿದ ಭ್ರಷ್ಟಾಚಾರವನ್ನು ತಡೆಯುವುದು ಆಯೋಗದ ಜವಾಬ್ದಾರಿ.
- ಈ ಆಯೋಗದಲ್ಲಿ ಮೇಲಿನ ಹಂತದಲ್ಲಿ ಮುಖ್ಯ ವಿಜಿಲೆನ್ಸ್ ಕಮಿಷನರ್ ಮತ್ತು ನಂತರದ ಹಂತದಲ್ಲಿ ಪ್ರತಿಯೊಂದು ಇಲಾಖೆಗೆ ಸಂಬಂಧಿಸಿಯು ಓರ್ವ ಮುಖ್ಯ ವಿಜಿಲೆನ್ಸ್ ಆಫೀಸರ್ ಇರುವರು.
- ಎಲ್ಲಾ ಪ್ರಾಂತ್ಯಗಳಲ್ಲಿಯೂ ಪ್ರಾಂತ್ಯ ಮಟ್ಟದ ವಿಜಿಲೆನ್ಸ್ ಕಮೀಶನರ್ ಇರುವರು.
- ವಿಜಿಲೆನ್ಸ್ ಕೇಸುಗಳ ತೀರ್ಪನ್ನು ನೀಡಲು ವಿಶೇಷ ವಿಜಿಲೆನ್ಸ್ ಕೋರ್ಟುಗಳಿವೆ.

### ಲೋಕಪಾಲ್ ಮತ್ತು ಲೋಕಾಯುಕ್ತ

ಪಾಠಭಾಗದಲ್ಲಿ ನೀಡಿರುವ ವಾರ್ತೆಗಳನ್ನು ತರಗತಿಯಲ್ಲಿ ಓದಬೇಕು. ಅಣ್ಣಾ ಹಜಾರೆಯವರ ನೇತೃತ್ವದಲ್ಲಿ ದೆಹಲಿಯಲ್ಲಿ ನಡೆದ ಪ್ರತಿಭಟನೆಗೆ ಸಂಬಂಧಿಸಿ, ವಾರ್ತೆಗಳನ್ನು ಸಂಗ್ರಹಿಸಿ ಗುಂಪುಗಳಲ್ಲಿ ಚರ್ಚಿಸಬೇಕು. ಲೋಕಪಾಲ್ ರಾಷ್ಟ್ರೀಯ ಮಟ್ಟದಲ್ಲಿ ರೂಪುಗೊಂಡದ್ದೂ, ಮತ್ತು ಲೋಕಪಾಲ್‌ನ ಪ್ರಾಧಾನ್ಯವನ್ನು ಚರ್ಚಿಸಬೇಕು. ಕೇರಳದಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ಲೋಕಾಯುಕ್ತ ಹಸ್ತಕ್ಷೇಪ ನಡೆಸಿದ ಉದಾಹರಣೆಗಳನ್ನು ತರಗತಿಯಲ್ಲಿ ಚರ್ಚಿಸಬೇಕು.

ಈ ಕೆಳಗಿನಂತೆ ಚರ್ಚೆಯನ್ನು ಕ್ರೋಡೀಕರಿಸಬೇಕು.

- ರಾಷ್ಟ್ರೀಯ ಹಂತದಲ್ಲಿ ಭ್ರಷ್ಟಾಚಾರ ನಿಯಂತ್ರಣವನ್ನು ಲೋಕಪಾಲ್ ನೋಡಿಕೊಳ್ಳುವುದು.
- ಎಲ್ಲಾ ಪಾರ್ಲಿಮೆಂಟ್ ಸದಸ್ಯರೂ, ಉದ್ಯೋಗಸ್ಥರೂ ಇದರ ಪರಿಧಿಯಲ್ಲಿ ಬರುವರು.
- 2014 ಜನವರಿ 16ರಂದು ಈ ನಿಯಮವು ಭಾರತದಲ್ಲಿ ಜಾರಿಗೆ ಬಂತು.
- ಪ್ರಾಂತ್ಯಗಳಲ್ಲಿ ಇದರ ಜವಾಬ್ದಾರಿಯು ಲೋಕಾಯುಕ್ತರದಾಗಿದೆ.
- ಸಾಮಾಜಿಕ ಕಾರ್ಯಕರ್ತರು, ರಾಜಕೀಯ ಮುಂದಾಳುಗಳು, ಪ್ರಾಂತ್ಯ ಮಟ್ಟದ ಉದ್ಯೋಗಿಗಳು ಲೋಕಾಯುಕ್ತದ ಪರಿಧಿಯಲ್ಲಿ ಬರುವರು.

### ಓಂಬುಡ್ಸ್‌ಮೆನ್

ಸಾರ್ವಜನಿಕ ಆಡಳಿತದಲ್ಲಿ ಓಂಬುಡ್ಸ್‌ಮೆನ್ ಯಾವ ರೀತಿಯಲ್ಲಿ ಕಾರ್ಯವೆಸಗುವುದೆಂದು ಪಾಠಭಾಗದಿಂದ ಕಂಡುಕೊಳ್ಳಬೇಕು. ಓಂಬುಡ್ಸ್‌ಮೆನ್‌ನ ಕಾರ್ಯ ಚಟುವಟಿಕೆಗಳು ಜನರಿಗೆ ಹೇಗೆ ಪ್ರಯೋಜನಕರವಾಗಿದೆ ಎಂದು ಚರ್ಚಿಸಬೇಕು. ಆಡಳಿತ ವರ್ಗದ ಕೊರತೆಗಳಿಗೆದುರು ದೂರನ್ನು ನೀಡಲೂ ಸಾಧ್ಯತೆಯನ್ನು ಕಲ್ಪಿಸುವ ಓಂಬುಡ್ಸ್‌ಮೆನ್ ಮೊದಲು ಆರಂಭಗೊಂಡದ್ದು ಸ್ವೀಡನ್‌ನಲ್ಲಿ. ಸಾರ್ವಜನಿಕ ಆಡಳಿತದಲ್ಲಿ, ಆಡಳಿತ ನವೀಕರಣ ವೆಲ್ಲಾ ಅಂತಿಮವಾಗಿ ಜನರಿಗೆ ಪ್ರಯೋಜನಪ್ರದವಾಗಬೇಕೆಂಬ ಉದ್ದೇಶದಿಂದಲೇ ರೂಪಿಸಲ್ಪಟ್ಟಿದೆ ಎಂಬ ಆಶಯ ಬರುವ ಹಾಗೆ ಟಿಪ್ಪಣಿಯನ್ನು ಮಕ್ಕಳು ತಯಾರಿಸಬೇಕು. ಟಿಪ್ಪಣಿಯಲ್ಲಿ ಈ ಕೆಳಗಿನ ಆಶಯಗಳು ವ್ಯಕ್ತವಾಗಬೇಕು.

- ಜನಪ್ರತಿನಿಧಿಗಳು, ಉದ್ಯೋಗಿಗಳು ತಮ್ಮ ಕರ್ತವ್ಯವನ್ನು ನಿಭಾಯಿಸದಿದ್ದರೆ, ಭ್ರಷ್ಟಾಚಾರ ನಡೆಸಿದರೆ, ಹಣವನ್ನು ದುರುಪಯೋಗಪಡಿಸಿದರೆ ಸ್ವಜನಪಕ್ಷಪಾತ ನಡೆಸಿದರೆ ದೂರನ್ನು ನೀಡಬಹುದು.
- ನಿವೃತ್ತ ಹೈಕೋರ್ಟು ಜಡ್ಜ್ ಓಂಬುಡ್ಸ್‌ಮೆನ್ ಆಗಿರುವರು.
- ದೂರಿನ ಸಂದರ್ಭದಲ್ಲಿ ಆರೋಪಿತ ವ್ಯಕ್ತಿಯನ್ನು ಕರೆದು ವಿಚಾರಿಸಲೂ, ಶಿಕ್ಷೆಯನ್ನು ಪ್ರಕಟಿಸಲೂ ಸಾಧ್ಯವಾಗುವುದು.
- ಬ್ಯಾಂಕ್ ಕ್ಷೇತ್ರದಲ್ಲಿ ಬಳಕೆದಾರರ ದೂರುಗಳನ್ನು ಪರಿಹರಿಸಲು ಮೊದಲು ಓಂಬುಡ್ಸ್‌ಮೆನ್‌ಗೆ ರೂಪುಕಲ್ಪನೆಯನ್ನು ನೀಡಲಾಗಿತ್ತು.
- ಇದರೊಂದಿಗೆ ಭ್ರಷ್ಟಾಚಾರವನ್ನು ಪ್ರಶ್ನಿಸಲೂ, ತಡೆಯಲೂ ಸಾರ್ವಜನಿಕರಿಗೆ ಅವಕಾಶ ಸಿಗುವುದು.

## ? ಮೌಲ್ಯಮಾಪನ ಪ್ರಶ್ನೆಗಳು

- ಜನಕ್ಷೇಮವನ್ನು ಖಾತರಿಪಡಿಸುವಲ್ಲಿ ಸಾರ್ವಜನಿಕ ಆಡಳಿತದ ಪ್ರಾಧಾನ್ಯವೇನು?
- ನೌಕರ ವೃಂದ ಎಂದರೇನು? ಇದರ ವಿಶೇಷತೆಗಳೇನು?
- ಅಖಿಲ ಭಾರತ ಸರ್ವೀಸ್‌ಗೆ ಉದ್ಯೋಗಸ್ಥರನ್ನು ಆಯ್ಕೆ ಮಾಡುವ ಜವಾಬ್ದಾರಿಯನ್ನು ಸಂವಿಧಾನವು ಯಾರಿಗೆ ನೀಡಿದೆ ?
- ಇ–ಗವರ್ನೆನ್ಸ್ ಎಂದರೇನು? ಇದರ ಪ್ರಯೋಜನಗಳೇನು?
- ಮಾಹಿತಿ ಹಕ್ಕು ನಿಯಮದ ಆಡಳಿತ ಕ್ಷೇತ್ರದ ಪಾರದರ್ಶಕತೆಯನ್ನು ಹೇಗೆ ಖಾತರಿಪಡಿಸುವುದು ? ವಿವರಿಸಿರಿ.
- ಸೇವೆಯನ್ನು ಪಡೆಯುವ ಹಕ್ಕು ಜನರಿಗೆ ಪ್ರಯೋಜನಕಾರಿಯಾಗಿದೆಯೇ ? ಹೇಗೆ?
- ಲೋಕಪಾಲ್ ಹಾಗೂ ಲೋಕಾಯುಕ್ತವು ಭ್ರಷ್ಟಾಚಾರವನ್ನು ತಡೆಯುವಲ್ಲಿ ವಹಿಸುವ ಪಾತ್ರವನ್ನು ವಿವರಿಸಿರಿ.

## ರೆಫರೆನ್ಸ್

*New Horizons of Public Administration - Mohit Bhattacharya*
*Administrative Reforms - S. R. Maheswari*
*Indian Administration - S. R. Maheswari*
*Public Administration - Avasti and Maheswari*
*Public Administration - Sadam and Shara*
*Right to Information Act*
*Right to Service Act*
*Public Administration Theory and concepts - Rumki Basu*

## ಅಧ್ಯಾಪಕರ ಮೌಲ್ಯಮಾಪನ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸ ಬೇಕಾದುದು |
|---|---|---|---|
| 1. ಸಾರ್ವಜನಿಕ ಆಡಳಿತ ಎಂದರೇನೆಂದು ವಿವರಿಸಲು ಎಲ್ಲ ಮಕ್ಕಳಿಗೆ ಸಾಧ್ಯವಾಗಿದೆ. | ☐ | ☐ | ☐ |
| 2. ನೌಕರ ವೃಂದ ಎಂದರೇನೆಂದೂ ಅದರ ವಿಶೇಷತೆಗಳೇನೆಂದು ವಿವರಿಸಲು ಮಕ್ಕಳಿಗೆ ಸಾಧ್ಯ ವಾಗಿದೆ. | ☐ | ☐ | ☐ |
| 3. ಭಾರತದಲ್ಲಿ ನೌಕರ ವೃಂದದ ವಿಶೇಷತೆಗಳನ್ನು ಸ್ಪಷ್ಟಪಡಿಸಲು ಸಾಧ್ಯವಾಗಿದೆ. | ☐ | ☐ | ☐ |
| 4. ಆಡಳಿತ ಸುಧಾರಣಾ ಯೋಜನೆಗಳನ್ನು ವಿವರಿಸಲು ಸಾಧ್ಯವಾಗಿದೆ.. | ☐ | ☐ | ☐ |
| 5. ಪಾಠಭಾಗದ ವಿನಿಮಯದೊಂದಿಗೆ ಸಾರ್ವಜನಿಕ ಆಡಳಿತದ ಕುರಿತಾದ ಸಕಾರಾತ್ಮಕ ಮನೋಭಾವ ರೂಪುಗೊಂಡಿತು. | ☐ | ☐ | ☐ |



# 9

# ರಾಷ್ಟ್ರ ಹಾಗೂ ರಾಜ್ಯಶಾಸ್ತ್ರ

ಪ್ರಾಚೀನವೂ, ಪ್ರಧಾನವೂ, ಚಲನಾತ್ಮಕವೂ ಆದ ಕಲಿಕಾ ವಿಷಯವು ರಾಷ್ಟ್ರ ಹಾಗೂ ರಾಜ್ಯಶಾಸ್ತ್ರವಾಗಿದೆ. ರಾಷ್ಟ್ರ ತಂತ್ರದ ಕಲಿಕಾ ವಿಷಯ ಅತೀ ವಿಪುಲವಾಗಿದೆ. ಮಾನವನ ಸಮಸ್ತ ಜೀವನ ಹಂತಗಳಲ್ಲಿಯೂ ರಾಜಕೀಯ ಸಾನ್ನಿಧ್ಯವನ್ನು ಕಾಣಬಹುದು. ಆದ್ದರಿಂದಲೇ ರಾಜ್ಯಶಾಸ್ತ್ರಕ್ಕೆ ಅತೀ ಪ್ರಾಧಾನ್ಯವಿದೆ. ನಾವು ಜೀವಿಸುವ ಸಾಮಾಜಿಕ ವ್ಯವಸ್ಥೆಯಲ್ಲಿ ಅತೀ ಪ್ರಧಾನ ಸಂಸ್ಥೆ ಎಂಬ ನೆಲೆಯಲ್ಲಿ ರಾಷ್ಟ್ರವನ್ನು ವಿಶ್ಲೇಷಿಸಲು ರಾಷ್ಟ್ರದ ಜವಾಬ್ದಾರಿ, ರಾಷ್ಟ್ರ ಮತ್ತು ಪೌರನಿಗಿರುವ ಪರಸ್ಪರ ಸಂಬಂಧವನ್ನು ತಿಳಿದುಕೊಳ್ಳುವುದು ಈ ಅಧ್ಯಾಯದ ಪ್ರಧಾನ ಉದ್ದೇಶವಾಗಿದೆ. ಅಲ್ಲದೆ ರಾಜ್ಯಶಾಸ್ತ್ರದ ಆವಿರ್ಭಾವ, ಬೆಳವಣಿಗೆ, ರಾಜ್ಯಶಾಸ್ತ್ರದ ಭಾಗವಾಗಿ ಬರುವ ವಿವಿಧ ಕಲಿಕಾ ಶಾಖೆಗಳು, ರಾಜಕೀಯ ಶಾಸ್ತ್ರದ ಪ್ರಾಧಾನ್ಯ ಮೊದಲಾದವನ್ನು ಈ ಪಾಠಭಾಗದೊಂದಿಗೆ ವಿನಿಮಯ ಮಾಡಬೇಕಾಗಿದೆ. ಈ ಪಾಠಭಾಗವನ್ನು ವಿನಿಮಯ ಮಾಡುವುದರೊಂದಿಗೆ ರಾಷ್ಟ್ರವನ್ನು ಗೌರವಿಸಲೂ ಸಮಾಜದ ಉನ್ನತಿಗೆ ಬಹುದೊಡ್ಡ ಕೊಡುಗೆಯನ್ನು ನೀಡಿದ ಪ್ರಮುಖ ಚಿಂತಕರ ಕೊಡುಗೆಗಳನ್ನು ಸ್ವೀಕರಿಸುವ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸುವುದು. ಉತ್ತಮ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕೆ, ಸಾಮಾಜಿಕ ಸಮಸ್ಯೆಯ ಸಂದರ್ಭಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸುವುದು ಈ ಪಾಠಭಾಗದ ಉದ್ದೇಶವಾಗಿದೆ. .

| ಯೂನಿಟ್ ಫ್ರೇಂ | 3. ರಾಷ್ಟ್ರ ಹಾಗೂ ರಾಜ್ಯಶಾಸ್ತ್ರ | |
|---|---|---|
| **ಆಶಯಗಳು/ತಿಳುವಳಿಕೆಗಳು** | **ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು** | **ಕಲಿಕಾ ಸಾಧನೆಗಳು** |
| • ರಾಷ್ಟ್ರ–ನಿರ್ವಚನ<br>• ರಾಷ್ಟ್ರದ ಘಟಕಗಳು<br>ಜನರು<br>ಭೂ ಪ್ರದೇಶ<br>ಸರಕಾರ<br>ಪರಮಾಧಿಕಾರ<br>• ರಾಷ್ಟ್ರದ ಜವಾಬ್ದಾರಿಗಳು<br>ನಿರ್ಬಂಧಿತ<br>ವಿವೇಚನಾತ್ಮಕ<br>• ರಾಷ್ಟ್ರದ ಆವಿರ್ಭಾವ<br>• ರಾಷ್ಟ್ರವೂ ಪೌರನೂ<br>• ರಾಷ್ಟ್ರ ತಂತ್ರಶಾಸ್ತ್ರ<br>• ರಾಜಕೀಯ ಶಾಸ್ತ್ರದ ಕಲಿಕೆಯ ಪ್ರಾಧಾನ್ಯ | • ವಾರ್ತಾ ಸಂಗ್ರಹ ವಿಶ್ಲೇಷಣೆ<br>• ಗುಂಪು ಚರ್ಚೆ<br>• ಭೂಪಟ ವಾಚನ<br>• ಚಾರ್ಟ್ ತಯಾರಿಸುವುದು.<br>• ವಾರ್ತಾ ವಿಶ್ಲೇಷಣೆ, ಸಂವಾದ<br>• ಚಾರ್ಟ್ ವಿಶ್ಲೇಷಣೆ, ಭಿತ್ತಿಚಿತ್ರ ತಯಾರಿ<br>• ಚಾರ್ಟ್ ವಿಶ್ಲೇಷಣೆ<br>• ಪರದೇಸೀ ಚಿತ್ರದ ಪ್ರಸಕ್ತ ಭಾಗದ ಪ್ರದರ್ಶನ<br>• ಚರ್ಚೆ<br>• ಚಿತ್ರ ವಿಶ್ಲೇಷಣೆ<br>• ಪವರ್ ಪಾಯಿಂಟ್ ತಯಾರಿಸಿ ಮಂಡಿಸುವಿಕೆ<br>• ಪಟ್ಟಿ ತಯಾರಿಸುವುದು. | • ರಾಷ್ಟ್ರ ಎನ್ನುವುದನ್ನು ನಿರ್ವಚಿಸುವುದು.<br>• ರಾಷ್ಟ್ರದ ಘಟಕಗಳನ್ನು ವಿಶ್ಲೇಷಿಸುವುದು.<br>• ರಾಷ್ಟ್ರದ ಜವಾಬ್ದಾರಿಗಳನ್ನು ಪಟ್ಟಿ ಮಾಡುವುದು.<br>• ರಾಷ್ಟ್ರ ರೂಪೀಕರಣದ ಕುರಿತಾದ ಸಿದ್ಧಾಂತಗಳನ್ನು ವಿಶ್ಲೇಷಿಸುವುದು.<br>• ಪೌರತ್ವ ಎಂದರೇನೆಂದು ನಿರ್ವಚಿಸುವುದು.<br>• ರಾಷ್ಟ್ರ ಮತ್ತು ಪೌರನ ನಡುವಿನ ಪರಸ್ಪರ ಸಂಬಂಧವನ್ನು ತಿಳಿಸುವುದು.<br>• ಆರ್ಜಿತ ಪೌರತ್ವ ಮತ್ತು ಸ್ವಾಭಾವಿಕ ಪೌರತ್ವದ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳುವುದು.<br>• ರಾಜಕೀಯ ಶಾಸ್ತ್ರವನ್ನು ನಿರ್ವಚಿಸುವುದು.<br>• ರಾಜ್ಯಶಾಸ್ತ್ರ ತಂತ್ರದ ಪ್ರಾಧಾನ್ಯವನ್ನು ತಿಳಿಸುವುದು. |

# ಅಧ್ಯಾಯದ ಕಡೆಗೆ........

ಪಾಠಭಾಗದ ಆರಂಭದಲ್ಲಿ ನೀಡಿರುವ ಓದಿನ ಟಿಪ್ಪಣಿಯನ್ನು ಮಂಡಿಸಿ ಪಾಠಭಾಗವನ್ನು ಆರಂಭಿಸಬಹುದು. ಸಮಾನವಾದ ಇತರ ಘಟನೆಗಳು ವಾರ್ತೆಗಳು ಇತ್ಯಾದಿಗಳನ್ನು ಉದಾಹರಣೆ ಸಹಿತವಾಗಿ ತರಗತಿಯಲ್ಲಿ ಮಂಡಿಸಬಹುದು. ಇದರಿಂದ ನಿತ್ಯಜೀವನದಲ್ಲಿ ರಾಷ್ಟ್ರಕ್ಕಿರುವ ಪ್ರಾಧಾನ್ಯವನ್ನು ತಿಳಿದುಕೊಳ್ಳಲು ಮಕ್ಕಳಿಗೆ ಸಾಧ್ಯವಾಗಬಹುದು. ಇತರ ಎಲ್ಲ ಸಂಘಟನೆಗಳಿಗೆ ರಾಷ್ಟ್ರದಂತೆ ಕಾರ್ಯಾಚರಿಸುವುದಕ್ಕೆ ಸಾಧ್ಯವಿಲ್ಲ ಎಂದು ಚರ್ಚೆಯೊಂದಿಗೆ ಕ್ರೋಢೀಕರಿಸಬೇಕು.

ನಂತರ ಪಾಠಭಾಗದಲ್ಲಿ ನೀಡಿರುವ ರಾಷ್ಟ್ರದ ಕುರಿತಾದ ನಿರ್ವಚನವನ್ನು ವ್ಯಕ್ತಿಗತವಾಗಿ ಓದಿ ರಾಷ್ಟ್ರದ ಘಟಕಗಳನ್ನು ಕಂಡುಹಿಡಿದು ಬರೆಯಲು ತಿಳಿಸಬೇಕು.

ಘಟಕಗಳು

- ಜನರು
- ಭೂ ಪ್ರದೇಶ
- ಸರಕಾರ
- ಪರಮಾಧಿಕಾರ

ರಾಷ್ಟ್ರವು ಸಾರ್ವತ್ರಿಕ ಮತ್ತು ಶಕ್ತವಾದ ಸಂಸ್ಥೆಯಾಗಿದೆಯೆಂದು ಮಕ್ಕಳು ಅರ್ಥೈಸಿಕೊಳ್ಳಬೇಕು. ವಿವಿಧ ಕಾಲಘಟ್ಟದಲ್ಲಿ ನೆಲೆ ನಿಂತಿರುವುದೂ ಈಗಲೂ ನೆಲೆ ನಿಂತಿರುವ ರಾಷ್ಟ್ರಗಳ ಪಟ್ಟಿಯೊಂದನ್ನು ತಯಾರಿಸಿ ಮೇಲೆ ಸೂಚಿಸಿರುವ ಘಟಕಗಳು ಇವುಗಳಲ್ಲಿ ಒಳಪಡುವುದೇ ಎಂದು ಪರಿಶೋಧಿಸಬೇಕು. ಭಾರವನ್ನು ಇದಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಚರ್ಚೆಯನ್ನು ಕ್ರೋಢೀಕರಿಸುವಾಗ ಕೆಳಗೆ ನೀಡಿರುವ ಆಶಯವು ಒಳಗೊಂಡಿದೆಯೇ ಎಂದು ಖಾತರಿಪಡಿಸಬೇಕು.

- ನಿಶ್ಚಿತ ಭೂಪ್ರದೇಶದಲ್ಲಿ ಸ್ಥಿರವಾಗಿ ವಾಸವಾಗಿರುವ, ಪರಮಾಧಿಕಾರದ ಸರಕಾರವಿರುವ ಜನತೆಯೇ ರಾಷ್ಟ್ರ.
- ರಾಷ್ಟ್ರಕ್ಕೆ ನಾಲ್ಕು ಘಟಕಗಳಿವೆ.
- ಜನತೆ, ಭೂ ಪ್ರದೇಶ, ಸರಕಾರ ಮತ್ತು ಪರಮಾಧಿಕಾರ ಎಂಬಿವುಗಳು ರಾಷ್ಟ್ರದ ನಾಲ್ಕು ಘಟಕಗಳಾಗಿವೆ.
- ಸಾರ್ವತ್ರಿಕ, ಬೇರ್ಪಡಿಸಲು ಸಾಧ್ಯವಾಗದ ಸಂಸ್ಥೆಯು ರಾಷ್ಟ್ರವಾಗಿದೆ.
- ನಿಕೋಲೋ ಮ್ಯಾಕ್‌ವೆಲ್ಲಿ ಮೊದಲಿಗೆ ರಾಷ್ಟ್ರ ಎಂಬ ಪದವನ್ನು ಉಪಯೋಗಿಸಿದನು.

**ನಿಕೋಲೋ ಮ್ಯಾಕ್‌ವೆಲ್ಲಿ**

1469 ಮೇ 3ರಂದು ಇಟಲಿಯ ಪ್ಲೋರೆನ್ಸಿನಲ್ಲಿ ಜನಿಸಿದರು. 'ದಿ–ಪ್ರಿನ್ಸ್' ಎನ್ನುವುದು ಅವರನ್ನು ಪ್ರಸಿದ್ಧರಾಗಿಸಿದ ಕೃತಿ. ಆಧುನಿಕ ಜಗತ್ತನ್ನೇ ಬದಲಿಸಿದ ಮ್ಯಾಕ್‌ವೆಲ್ಲಿಯ ಚಿಂತನೆಗಳು ಅತೀ ಪ್ರಸಿದ್ಧವಾಗಿದೆ. ಅಧಿಕಾರವನ್ನು ನೆಲೆನಿಲ್ಲಿಸಲು ಯಾವ ಮಾರ್ಗವನ್ನಾದರೂ ಅನುಸರಿಸಬಹುದು ಎನ್ನುವುದು ಮ್ಯಾಕ್‌ವೆಲ್ಲಿಯ ಪ್ರಧಾನ ಆಶಯವಾಗಿದೆ. ಇವರ ರಾಜಕೀಯ ಚಿಂತನೆಗಳು ಭಾರತದ ಕೌಟಿಲ್ಯನ ದೃಷ್ಟಿಕೋನದೊಂದಿಗೆ ಸಮಾನತೆಯನ್ನು ಹೊಂದಿದೆ. 1527 ಜೂನ್ 20ರಂದು ಅವರು ನಿಧನರಾದರು.

ತರಗತಿಯಲ್ಲಿ ಉತ್ತಮ ಅಂಕಗಳನ್ನು ಪಡೆಯುವ ಮಕ್ಕಳಿಗೆ ಬಾಕ್ಸಿನಲ್ಲಿ ನೀಡಿರುವ ಸಪ್ತಾಂಗ ಸಿದ್ಧಾಂತದ ಆಧಾರದಲ್ಲಿ ಆಧುನಿಕ ರಾಷ್ಟ್ರದ ಘಟಕಗಳನ್ನು ಹೋಲಿಸಲು ಹೇಳಬಹುದು. ರಾಷ್ಟ್ರದ ಪ್ರತಿಯೊಂದು ಘಟಕವೂ ಅದರ ಪ್ರಾಧಾನ್ಯವೂ ಅರ್ಥವಾಗುವಂತೆ, ಬೇರೆ ಬೇರೆ ಚಟುವಟಿಕೆಗಳನ್ನು ತರಗತಿಯಲ್ಲಿ ನೀಡಬೇಕು. ತರಗತಿಯನ್ನು ನಾಲ್ಕು ಗುಂಪುಗಳನ್ನಾಗಿಸಿ ಪ್ರತಿಯೊಂದು ಗುಂಪಿಗೆ ಒಂದರಂತೆ ಘಟಕವನ್ನು ನೀಡಿ ವಿಶ್ಲೇಷಿಸಲು ತಿಳಿಸಬೇಕು.

### ಜನತೆ

ಜನತೆ ಎನ್ನುವ ಘಟಕದ ಕುರಿತು ತಿಳಿದುಕೊಳ್ಳಲು ಪಾಠಭಾಗದಲ್ಲಿ ನೀಡಿರುವ ವಾರ್ತಾ ಶೀರ್ಷಿಕೆಗಳನ್ನು ನೀಡಿ ಅದರಲ್ಲಿರುವ ವಿಶೇಷತೆಗಳನ್ನು ವಿಶ್ಲೇಷಿಸುತ್ತಾ

ಪಾಠಭಾಗವನ್ನು ಆರಂಭಿಸಬೇಕು. ಸ್ಥಿರವಾಗಿ ವಾಸವಿಲ್ಲದೆ, ಅಲೆದಾಡುವ ಜನತೆಯಿಂದ ರಾಷ್ಟ್ರ ರೂಪೀಕರಣಕ್ಕೆ ಸಹಾಯ ಮಾಡಲು ಸಾಧ್ಯವೇ? ಗುಂಪಿನಲ್ಲಿ ಚರ್ಚೆ ಮಾಡಿ ನಿಗಮನಗಳನ್ನು ಮಂಡಿಸಲಿ. ಕ್ರೋಢೀಕರಣದಲ್ಲಿ ಕೆಳಗಿರುವ ಅಂಶಗಳನ್ನು ಸೇರಿಸಲು ಮರೆಯಬಾರದು.

- ರಾಷ್ಟ್ರರೂಪೀಕರಣದಲ್ಲಿ ಅತೀ ಅಗತ್ಯವಾದ ಘಟಕ ಜನತೆಯಾಗಿದೆ.
- ಸ್ಥಿರವಾಸವಿಲ್ಲದ ಅಲೆದು ತಿರುಗಾಡುವ ಜನತೆಗೆ ರಾಷ್ಟ್ರ ರೂಪೀಕರಣದಲ್ಲಿ ಪಾತ್ರವಿಲ್ಲ.
- ಪರಸ್ಪರ ಹೊಂದಾಣಿಕೆ, ಪರಸ್ಪರ ಅವಲಂಬನೆ ಸಾರ್ವಜನಿಕ ಹಿತಾಸಕ್ತಿ ಎಂಬಿವುಗಳ ಆಧಾರದಲ್ಲಿ ಒಂದುಗೂಡಿ ಕಾರ್ಯನಿರ್ವಹಿಸುವ ಮೂಲಕ ರಾಷ್ಟ್ರವು ರೂಪುಗೊಳ್ಳುವುದು.
- ರಾಷ್ಟ್ರ ರೂಪೀಕರಣಕ್ಕೆ ಅಗತ್ಯವಾದ ಜನಸಂಖ್ಯೆ ಎಷ್ಟೆಂದು ನಿರ್ಧರಿಸಿಲ್ಲ.
- ಅತಿ ಕಡಿಮೆ ಜನಸಂಖ್ಯೆ ಮತ್ತು ಅತಿ ಹೆಚ್ಚು ಜನಸಂಖ್ಯೆ ರಾಷ್ಟ್ರದ ಅಭಿವೃದ್ಧಿಯನ್ನು ಪ್ರತಿಕೂಲವಾಗಿ ಬಾಧಿಸುವುದು.
- ಒಂದು ರಾಷ್ಟ್ರದ ಜನರು ಒಂದು ಧರ್ಮದವರೋ, ಒಂದೇ ಭಾಷೆ ಅಥವಾ ಸಂಸ್ಕೃತಿಯವರೋ ಆಗಿರಬೇಕೆಂದಿಲ್ಲ.
  ಇದನ್ನು ತಿಳಿಸುವುದಕ್ಕಾಗಿ ಪಾಠಭಾಗದಲ್ಲಿ ನೀಡಿರುವ ಭಾರತದ ಜನತೆಯ ವಿಶೇಷತೆಗಳನ್ನು ವ್ಯಕ್ತಿಗತವಾಗಿ ಓದಿ ಭರ್ತಿ ಮಾಡಬೇಕು.
- ಭಾರತದ ಜನರು ವ್ಯತ್ಯಸ್ತ ಜಾತಿಗೆ ಸೇರಿದವರಾಗಿರಬೇಕು.

ಜಾತಿ, ಮತ, ಭಾಷೆ ಎಂಬಿವುಗಳಿಗೆ ಅತೀತವಾಗಿ ರಾಷ್ಟ್ರೀಯತೆ ಜನರನ್ನು ಒಂದುಗೂಡಿಸುವುದು.

### ಭೂ ಪ್ರದೇಶ

ಭಾರತದ ಭೂಪಟವನ್ನು ಮತ್ತು ಜಾಗತಿಕ ಭೂಪಟವನ್ನು ವಿಶ್ಲೇಷಿಸಿ ಭೂಪ್ರದೇಶ ಎಂಬ ಘಟಕವನ್ನು ವಿಶ್ಲೇಷಿಸಬಹುದಾಗಿದೆ. ಭಾರತದ ಭೂಪಟವನ್ನು ನೀಡಿ, ಮೇರೆಗಳನ್ನು ಗುರುತಿಸಿ ತರಗತಿಯಲ್ಲಿ ಪ್ರದರ್ಶಿಸಬಹುದು.

ಜಾಗತಿಕ ಭೂಪಟವನ್ನು ವಿಶ್ಲೇಷಿಸುತ್ತಾ ಭಾರತಕ್ಕೆ ಮೇರೆಗಳಿರುವಂತೆಯೇ ಜಗತ್ತಿನ ಇತರ ದೇಶಗಳಿಗೂ ಮೇರೆಗಳಿವೆಯೆಂದೂ ಮೇರೆಗಳಿಂದ ಕೂಡಿದ ಭೂ ಪ್ರದೇಶ ರಾಷ್ಟ್ರ ರೂಪೀಕರಣಕ್ಕೆ ಅಗತ್ಯವಾಗಿದೆಯೆಂದೂ ತಿಳಿದುಕೊಳ್ಳಬೇಕು. ದೊಡ್ಡ ಮತ್ತು ಸಣ್ಣ ದೇಶಗಳು ಜಗತ್ತಿನಲ್ಲಿವೆ.

ಕ್ರೋಡೀಕರಣದಲ್ಲಿ ಈ ಕೆಳಗಿನ ಅಂಶಗಳು ಒಳಗೊಂಡಿರಬೇಕು.

**ರಾಡ್‌ಕ್ಲಿಫ್ ರೇಖೆ**

ಭಾರತ ಮತ್ತು ಪಾಕಿಸ್ತಾನವನ್ನು ಬೇರ್ಪಡಿಸುವ ರೇಖೆಯನ್ನು 1947 ಆಗಸ್ಟ್ 17ರಂದು ಘೋಷಿಸಲಾಯಿತು. ಸಿರಿಲ್ ರಾಡ್‌ಕ್ಲಿಫ್ ಅಧ್ಯಕ್ಷರಾಗಿದ್ದ ಗಡಿಯನ್ನು ಗುರುತಿಸುವ ಆಯೋಗವು ಈ ರೇಖೆಯನ್ನು ನಿರ್ಧರಿಸಿತು. ಪಶ್ಚಿಮದಲ್ಲಿ ಪಾಕಿಸ್ತಾನವೂ ಪೂರ್ವದಲ್ಲಿ ಬಾಂಗ್ಲಾ ದೇಶವನ್ನು ಈ ರೇಖೆಯು ಪ್ರತ್ಯೇಕಿಸುವುದು.

**ಮೆಕ್‌ಮೋಹನ್ ಲೈನ್**

ಈಶಾನ್ಯ ವಲಯದಲ್ಲಿ ಚೈನಾ ಮತ್ತು ಭಾರತವನ್ನು ಬೇರ್ಪಡಿಸುವ ರೇಖೆಯನ್ನು ಬ್ರಿಟಿಷರ ಕಾಲದಲ್ಲಿ ಸರ್. ಹೆನ್ರಿ ಮೆಕ್‌ಮೋಹನ್ ಅಧ್ಯಕ್ಷರಾದ ಆಯೋಗವು ನಿರ್ಧರಿಸಿತು. ಈ ರೇಖೆಯನ್ನು ಚೈನಾವು ಅಂಗೀಕರಿಸುವುದಿಲ್ಲ.

- ರಾಷ್ಟ್ರರೂಪೀಕರಣದಲ್ಲಿ ಮೇರೆಗಳಿಂದ ಕೂಡಿದ ಭೂ ಪ್ರದೇಶ ಅನಿವಾರ್ಯವಾಗಿದೆ.
- ಈ ಮೇರೆಯೊಳಗಿನ ಭೂ ಪ್ರದೇಶದಲ್ಲಿ ಆ ದೇಶಕ್ಕೆ ಪೂರ್ಣವಾದ ನಿಯಂತ್ರಣ ವಿರಬೇಕು.
- ಭೂ ಪ್ರದೇಶದಲ್ಲಿ ನೆಲ, ಜಲ ಮತ್ತು ವಾಯುಭಾಗವು ಒಳಗೊಂಡಿದೆ.
- ಭೂ ಪ್ರದೇಶದ ವ್ಯಾಪ್ತಿಯು ರಾಷ್ಟ್ರ ರೂಪೀಕರಣದಲ್ಲಿ ಪ್ರಧಾನವಲ್ಲ.

- ಮೇರೆಗಳಿಂದ ಕೂಡಿದ ಭೂಪ್ರದೇಶವೊಂದರಲ್ಲಿ ಜನರು ಸ್ಥಿರವಾಸವನ್ನು ಆರಂಭಿಸಿದಾಗ ರಾಷ್ಟವು ರೂಪುಗೊಳ್ಳುವುದು.

**ಏಯರ್‌ಸ್ಪೇಸ್**

ದೇಶವೊಂದರ ನೆಲಭಾಗ ಮತ್ತು ಜಲಭಾಗದ ಮೇಲ್ಭಾಗದಲ್ಲಿರುವ ವಾತಾವರಣದ ಭಾಗ ಏಯರ್‌ಸ್ಪೇಸ್ ಆಗಿರುವುದು.

## ಸರಕಾರ

ಸರಕಾರಕ್ಕೆ ಸಂಬಂಧಿಸಿ ಮಕ್ಕಳಲ್ಲಿ ಈಗಾಗಲೇ ಇರುವ ಪೂರ್ವ ಜ್ಞಾನವನ್ನು ತಿಳಿಯುವುದಕ್ಕೂ ಕೆಲವು ಸರಳವಾದ ಪ್ರಶ್ನೆಗಳನ್ನು ಕೇಳುವ ಮೂಲಕ ಸರಕಾರ ಎಂಬ ಘಟಕವನ್ನು ಮಂಡಿಸಬೇಕು. ಸರಕಾರದ ಘಟಕಗಳು, ಪ್ರತಿಯೊಂದು ಘಟಕವೂ ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ಮಕ್ಕಳು ಈಗಾಗಲೇ ತಿಳಿದುಕೊಂಡಿರುವರು.

ಪಾಠಪುಸ್ತಕದ 178ನೇ ಪುಟದಲ್ಲಿ ನೀಡಿರುವ ಪಟ್ಟಿಯನ್ನು ವ್ಯಕ್ತಿಗತವಾಗಿ ಓದಿ ಭರ್ತಿ ಮಾಡಲಿ. ಪಟ್ಟಿಯನ್ನು ಪೂರ್ತಿಗೊಳಿಸಲು ಕೆಳಗೆ ನೀಡಿರುವ ಮಾಹಿತಿಗಳನ್ನು ಬಳಸಿಕೊಳ್ಳಬಹುದು.

- ವಿವಾದಗಳಿಗೆ ಸೂಕ್ತವಾದ ತೀರ್ಪನ್ನು ನೀಡಿ ನೀತಿ ನ್ಯಾಯವನ್ನು ವ್ಯವಸ್ಥೆಗೊಳಿಸುವುದು.
- ರಾಷ್ಟ್ರಕ್ಕೆ ಅಗತ್ಯವಾದ ನಿಯಮಗಳನ್ನು ರೂಪಿಸುವುದು.

ವಿವಿಧ ದೇಶಗಳಲ್ಲಿ ವ್ಯತ್ಯಸ್ಥ ಸರಕಾರಗಳು ನೆಲೆನಿಂತಿವೆ. ಎಂದು ತಿಳಿಸಲು ಇದಕ್ಕೆ ಸಂಬಂಧಿಸಿದ ಚಾರ್ಟ್‌ನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಬೇಕು. ಇದಕ್ಕಾಗಿ ವ್ಯತ್ಯಸ್ಥ ಆಡಳಿತ ರೀತಿಗಳು ಜಾರಿಯಲ್ಲಿರುವ ದೇಶಗಳ ಹೆಸರುಗಳನ್ನು ನೀಡಬೇಕು. ಉದಾಹರಣೆಗೆ,

| ದೇಶ | ಆಡಳಿತ ಕ್ರಮ |
|---|---|
| • ಭಾರತ | • ಪ್ರಜಾಪ್ರಭುತ್ವ ಸರಕಾರ |
| • ಸೌದಿ ಅರೇಬಿಯಾ | • ರಾಜಾಡಳಿತ |

ರಾಷ್ಟ್ರದ ಒಂದು ಅನಿವಾರ್ಯ ಘಟಕ ಎಂಬ ನೆಲೆಯಲ್ಲಿ ಸರಕಾರಕ್ಕಿರುವ ಪ್ರಾಧಾನ್ಯವನ್ನು ಚಾರ್ಟಿನಲ್ಲಿ ಸೇರಿಸಬೇಕು. ಕೆಳಗೆ ನೀಡಿರುವ ಅಂಶಗಳನ್ನು ಚಾರ್ಟಿನಲ್ಲಿ ಸೇರಿಸಬೇಕು.

- ರಾಷ್ಟ್ರ ರೂಪೀಕರಣಕ್ಕೆ ಅನಿವಾರ್ಯವಾದ ಘಟಕ ಸರಕಾರವಾಗಿದೆ.
- ರಾಷ್ಟ್ರಕ್ಕೆ ಬೇಕಾದ ಎಲ್ಲ ಜವಾಬ್ದಾರಿಗಳನ್ನು ಆ ರಾಷ್ಟ್ರದಲ್ಲಿರುವ ಸರಕಾರವು ನಿರ್ವಹಿಸುವುದು.
- ವಿವಿಧ ರಾಷ್ಟ್ರಗಳಲ್ಲಿ ವ್ಯತ್ಯಸ್ಥ ರೀತಿಯ ಸರಕಾರಗಳಿವೆ.
- ಸರಕಾರವು ಯಾವುದೇ ರೀತಿಯಾದರೂ ಅದು ರಾಷ್ಟ್ರರೂಪೀಕರಣದಲ್ಲಿ ಪ್ರಮುಖ ಪಾತ್ರ ವಹಿಸುವುದಿಲ್ಲ.
- ಸರಕಾರವು ಬದಲಾದರೂ ರಾಷ್ಟ್ರವು ಶಾಶ್ವತವಾಗಿರುವುದು.

## ಪರಮಾಧಿಕಾರ

ಪಾಠ ಪುಸ್ತಕದ 179ನೇ ಪುಟದಲ್ಲಿ ನೀಡಿರುವ ವಾರ್ತಾ ಶೀರ್ಷಿಕೆಗಳನ್ನು ವ್ಯಕ್ತಿಗತವಾಗಿ ಓದಿ, ವಿಶ್ಲೇಷಿಸಲು ತಿಳಿಸಬೇಕು. ಸಮಾನವಾದ ಇತರ ವಾರ್ತೆಗಳನ್ನು ಸಂಗ್ರಹಿಸಿ, ಮಂಡಿಸಬಹುದು.

ವಾರ್ತೆಗಳನ್ನು ಕೆಳಗಿನಂತೆ ಪಟ್ಟಿಯಲ್ಲಿ ಕ್ರಮೀಕರಿಸಿ ಬರೆಯಲು ತಿಳಿಸಬೇಕು.

| ಆಂತರಿಕ | ಅಂತರ್‌ದೇಶೀಯ? |
|---|---|
| • ಸಾರ್ವಜನಿಕ ವಲಯದ ಸಂಸ್ಥೆಗಳ ಶೇರು ಮಾರಾಟ | • ಭಾರತ ಬಾಂಗ್ಲಾದೇಶ ಗಡಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. |
| • ಬೆಲೆಯೇರಿಕೆಯನ್ನು ನಿಯಂತ್ರಿಸಲು ರಾಷ್ಟ್ರ ಮಟ್ಟದಲ್ಲಿ ಕಾರ್ಯಕ್ರಮ | • ಕೃಷಿಯನ್ನು ಜಾಗತಿಕ ವ್ಯಾಪಾರ ಒಪ್ಪಂದದಿಂದ ಕೈಬಿಡಲು ಭಾರತ ಆಗ್ರಹ |

ರಾಷ್ಟ್ರಗಳು ತಮ್ಮ ಮೇರೆಗಳ ಒಳಗಿರುವ ಮತ್ತು ಹೊರಗಿರುವ ವಿಷಯಗಳಲ್ಲಿ ತೀರ್ಮಾನಿಸುವುದು. ಈ ತೀರ್ಮಾನಗಳು ಬಾಹ್ಯ ಒತ್ತಡದಿಂದ ನಡೆಯ

ಬಾರದು. ಇದು ಒಂದು ರಾಷ್ಟ್ರಕ್ಕೆ ಮಾತ್ರವಿರುವ ಅಧಿಕಾರವಾಗಿದೆ.

### ಅಂತಾರಾಷ್ಟ್ರ ನಿಯಮ ಮತ್ತು ಅಂತಾರಾಷ್ಟ್ರೀಯ ಒಪ್ಪಂದಗಳು

ಅಂತಾರಾಷ್ಟ್ರೀಯ ನಿಯಮಗಳನ್ನು ರಾಷ್ಟ್ರಗಳು ಅನುಸರಿಸುವುದು. ಅಲ್ಲದೆ ಅಂತಾರಾಷ್ಟ್ರೀಯ ಒಪ್ಪಂದಗಳನ್ನು ರಾಷ್ಟ್ರಗಳು ಒಪ್ಪಿಕೊಳ್ಳುವುದೂ ಪಾಲಿಸುವುದೂ ನಡೆಯುತ್ತದೆ. ಆದರೆ ಈ ಯಾವ ಒಪ್ಪಂದಗಳನ್ನೂ ದೇಶವೊಂದರ ಮೇಲೆ ನಿರ್ಬಂಧವಾಗಿ ಹೇರುವಂತಿಲ್ಲ.

ಪರಮಾಧಿಕಾರ ಸಂಪೂರ್ಣವೋ ಅಲ್ಲವೋ ಎನ್ನುವುದರ ಕುರಿತು ತರಗತಿಯಲ್ಲಿ ಸಂವಾದ ವೊಂದನ್ನು ಏರ್ಪಡಿಸಿರಿ. ಕ್ರೋಡೀಕರಣದಲ್ಲಿ ಈ ಕೆಳಗಿನ ಅಂಶಗಳು ಒಳಗೊಂಡಿರಬೇಕು.

- ರಾಷ್ಟ್ರ ರೂಪೀಕರಣದಲ್ಲಿ ಪರಮ ಪ್ರಧಾನವಾದ ಘಟಕವು ಪರಮಾಧಿಕಾರವಾಗಿದೆ.
- ಇತರ ಎಲ್ಲ ಸಂಸ್ಥೆಗಳಿಂದಲೂ ರಾಷ್ಟ್ರವನ್ನು ಪ್ರತ್ಯೇಕಿಸುವುದು ಪರಮಾಧಿಕಾರವಾಗಿದೆ.
- ಆಂತರಿಕ ಮತ್ತು ಬಾಹ್ಯ ವಿಷಯಗಳಲ್ಲಿ ಸ್ವತಂತ್ರವಾಗಿ ತೀರ್ಮಾನಿಸುವ ಅಧಿಕಾರವೇ ಪರಮಾಧಿಕಾರ.
- ಪರಮಾಧಿಕಾರಕ್ಕೆ ಆಂತರಿಕ ಮತ್ತು ಬಾಹ್ಯ ಎನ್ನುವ ಎರಡು ಹಂತಗಳಿವೆ.
- ಪರಮಾಧಿಕಾರವನ್ನು ವಿಭಜಿಸಲು ಸಾಧ್ಯವಿಲ್ಲ. ವಿಭಜನೆಯು ಹೊಸ ರಾಷ್ಟ್ರವೊಂದರ ರೂಪೀಕರಣಕ್ಕೆ ಕಾರಣವಾಗಬಹುದು.

## ರಾಷ್ಟ್ರದ ಜವಾಬ್ದಾರಿಗಳು

ಪಾಠಭಾಗದಲ್ಲಿ ನೀಡಿರುವ ಜರ್ಮಿಬೆಂತಾಂನ ಮಾತುಗಳನ್ನು ವ್ಯಕ್ತಿಗತವಾಗಿ ಓದಿ, ಜನರ ಒಳಿತನ್ನು ಉದ್ದೇಶವಾಗಿಟ್ಟುಕೊಂಡು ರಾಷ್ಟ್ರವೊಂದು ನಿರ್ವಹಿಸುವ ಜವಾಬ್ದಾರಿಗಳನ್ನು ಪಟ್ಟಿ ಮಾಡಲು ತಿಳಿಸಬೇಕು. ನಂತರ ಚಾರ್ಟಿನಲ್ಲಿ ರಾಷ್ಟ್ರದ ಜವಾಬ್ದಾರಿಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬೇಕು.

| ನಿರ್ಬಂಧಿತ ಜವಾಬ್ದಾರಿಗಳು | ವಿವೇಚನಾತ್ಮಕ ಜವಾಬ್ದಾರಿಗಳು |
|---|---|
| • ಗಡಿ ಸಂರಕ್ಷಣೆ | • ಆರೋಗ್ಯ ಸಂರಕ್ಷಣೆ |

### ಜೆರ್‌ಮಿ ಬೆಂತಾಮ್

1748 ಫೆಬ್ರವರಿ 15ರಂದು ಇಂಗ್ಲೆಂಡಿನಲ್ಲಿ ಜನನ. ಆಧುನಿಕ ಯುಟಿಲಿಟೇರಿಯನ್ ಸಿದ್ಧಾಂತಕ್ಕೆ ರೂಪಕಲ್ಪನೆಯನ್ನು ನೀಡಿದರು. ಕ್ಷೇಮರಾಷ್ಟ್ರ ಪರಿಕಲ್ಪನೆಯ ಮೇಲೆ ಇವರ ಸಿದ್ಧಾಂತವು ಬಹುಮಟ್ಟಿನ ಪ್ರಭಾವವನ್ನು ಬೀರಿದೆ. 1832 ಜೂನ್ 6ರಂದು ವಿಧಿವಶರಾದರು. ವ್ಯಕ್ತಿ ಸ್ವಾತಂತ್ರ್ಯ ಧರ್ಮವನ್ನು ರಾಷ್ಟ್ರದಿಂದ ಬೇರ್ಪಡಿಸಬೇಕೆಂದು ಅವರು ಬಲವಾಗಿ ವಾದಿಸಿದರು.

ರಾಷ್ಟ್ರದ ಜವಾಬ್ದಾರಿಗಳನ್ನು ವರ್ಗೀಕರಿಸಿ, ಭಿತ್ತಿಪತ್ರಿಕೆಯಲ್ಲಿ ಬರೆಯಬೇಕು. ಈ ಎರಡು ಜವಾಬ್ದಾರಿಗಳ ನಡುವಿನ ವ್ಯತ್ಯಾಸಗಳನ್ನು ಇಲ್ಲಿ ವಿಶ್ಲೇಷಿಸಬೇಕು. ವಿಶ್ಲೇಷಣೆಯನ್ನು ಮಾಡುವಾಗ ಕೆಳಗೆ ನೀಡಿರುವ ಸತ್ಯಾಂಶಗಳನ್ನು ಅದರಲ್ಲಿ ಒಳಗೊಳ್ಳಿಸಬೇಕು.

- ರಾಷ್ಟ್ರಗಳಿಗೆ ವಿಪುಲವಾದ ಜವಾಬ್ದಾರಿಗಳಿವೆ.
- ರಾಷ್ಟ್ರದ ಜವಾಬ್ದಾರಿಗಳನ್ನು ನಿರ್ಬಂಧಿತ ಜವಾಬ್ದಾರಿಗಳು ಮತ್ತು ವಿವೇಚನಾತ್ಮಕ ಜವಾಬ್ದಾರಿಗಳೆಂದು ವಿಂಗಡಿಸಲಾಗಿದೆ.
- ರಾಷ್ಟ್ರವು ಎಲ್ಲಾ ಸಂದರ್ಭಗಳಲ್ಲಿಯೂ ನಿರ್ವಹಿಸಲೇಬೇಕಾದ ಜವಾಬ್ದಾರಿಗಳು ನಿರ್ಬಂಧಿತ ಜವಾಬ್ದಾರಿಗಳಾಗಿವೆ.
- ಆರ್ಥಿಕ ಸ್ಥಿತಿಯನ್ನು ಅನುಸರಿಸಿಕೊಂಡು ನಿರ್ವಹಿಸುವ ಜವಾಬ್ದಾರಿಗಳು ವಿವೇಚನಾತ್ಮಕ ಜವಾಬ್ದಾರಿಗಳಾಗಿವೆ.
- ಜನಕ್ಷೇಮವನ್ನು ಖಾತರಿಪಡಿಸಲು ವಿವೇಚನಾತ್ಮಕ ಜವಾಬ್ದಾರಿಗಳು ಸಹಾಯಕವಾಗುವುದು.

### ರಾಷ್ಟ್ರದ ಅವಿರ್ಭಾವ

ರಾಷ್ಟ್ರದ ಅವಿರ್ಭಾವಕ್ಕೆ ಸಂಬಂಧಿಸಿದ ಕೆಲವು ಸಿದ್ಧಾಂತಗಳನ್ನು ಈ ಪಾಠಭಾಗದಲ್ಲಿ ಚರ್ಚಿಸಲಾಗಿದೆ. ಪ್ರಾಚೀನ ಕಾಲದಿಂದಲೇ ರಾಷ್ಟ್ರವು ನೆಲೆನಿಂತಿದೆ. ಆದರೆ ರಾಷ್ಟ್ರವು ಯಾವಾಗ ಎಲ್ಲಿ ಹೇಗೆ ರೂಪುಗೊಂಡಿತು ಎನ್ನುವುದಕ್ಕೆ ಯಾವುದೇ ಸ್ಪಷ್ಟವಾದ ಪುರಾವೆ ಲಭ್ಯವಿಲ್ಲ.

### ದೈವದತ್ತ ಸಿದ್ಧಾಂತ

ಒಂದನೇ ಜೆಯಿಂಸ್ The law of free monarchies ಎಂಬ ಕೃತಿಯಲ್ಲಿ ಈ ಸಿದ್ಧಾಂತಕ್ಕೆ ರೂಪು ಕಲ್ಪನೆಯನ್ನು ನೀಡಿದನು. ರಾಜನು ದೇವರ ಪ್ರತಿನಿಧಿಯಾಗಿರುವನು. ಇವರ ಹಕ್ಕನ್ನು ಪ್ರಶ್ನಿಸಲು ಸಾಧ್ಯವಿಲ್ಲ. ರಾಜನಿಗೆ ದೇವರ ಮೇಲೆ ಮಾತ್ರ ಋಣವಿರುವುದು. ರಾಜನನ್ನು ವಿರೋಧಿಸುವುದು ಪಾಪವಾಗಿದೆ. ರಾಜನು ಎಷ್ಟೇ ಕೆಟ್ಟವನಾದರೂ ಅವನನ್ನು ಅಧಿಕಾರದಿಂದ ಕೆಳಗಿಳಿಸಲು ಜನರಿಗೆ ಹಕ್ಕಿಲ್ಲ. ಈಗ ಈ ಸಿದ್ಧಾಂತವು ತನ್ನ ಔಚಿತ್ಯವನ್ನು ಕಳೆದುಕೊಂಡಿದೆ.

### ಸಾಮಾಜಿಕ ಒಪ್ಪಂದ ಸಿದ್ಧಾಂತ

ರಾಷ್ಟ್ರ ಮತ್ತು ಜನರ ನಡುವಿನ ಪರಸ್ಪರ ಒಪ್ಪಂದದ ಆಧಾರದಲ್ಲಿ ರಾಷ್ಟ್ರವು ರೂಪುಗೊಂಡಿದೆ. ರಾಷ್ಟ್ರವು ರೂಪುಗೊಳ್ಳುವ ಮೊದಲಿನ ಕಾಲದ(State of nature) ಸಾಮಾಜಿಕ ಸನ್ನಿವೇಶಗಳು ಈ ಒಪ್ಪಂದಕ್ಕೆ ಕಾರಣವಾಗಿದೆ. ಈ ಕರಾರಿನ ಪರಿಣಾಮವಾಗಿ ಮನುಷ್ಯರಿಗೆ ನೈಸರ್ಗಿಕ ಹಕ್ಕುಗಳು ನಷ್ಟವಾಗುವುದೂ, ರಾಷ್ಟ್ರದ ಸಂರಕ್ಷಣೆ ಮತ್ತು ಸುರಕ್ಷಿತತೆಯು ಲಭ್ಯವಾಗುವುದೂ ನಡೆಯಿತು. ಜಾನ್‌ಲಾಕ್, ಥೋಮಸ್ ಹಾಬ್ಸ್, ಜೀನ್ ಜಾಕ್ಸಸ್ ರುಸ್ಸೋ ಎಂಬಿವರು ಈ ಒಪ್ಪಂದದ ಪ್ರಧಾನ ವಕ್ತಾರರು.

ರಾಷ್ಟ್ರ ರೂಪೀಕರಣಕ್ಕೆ ಸಂಬಂಧಿಸಿ ನೀಡಿರುವ ಸಿದ್ಧಾಂತಗಳನ್ನು ಮಕ್ಕಳು ವ್ಯಕ್ತಿಗತವಾಗಿ ಓದಿ ತರಗತಿಯಲ್ಲಿ ಗುಂಪು ಚರ್ಚೆಯನ್ನು ನಡೆಸಬಹುದು. ಚರ್ಚೆಯಲ್ಲಿ ಸಮಯೋಚಿತವಾದ ಅಧ್ಯಾಪಕರ ಹಸ್ತಕ್ಷೇಪವು ಆಶಯ ರೂಪೀಕರಣಕ್ಕೆ ಅವಕಾಶವನ್ನು ನೀಡುವುದು.

### ಶಕ್ತಿ ಸಿದ್ಧಾಂತ

ಅಧಿಕ ದೈಹಿಕ ಶಕ್ತಿಯನ್ನು ಹೊಂದಿರುವ ಜೀವಿಗಳು ಇತರ ಜೀವಿಗಳ ಮೇಲೆ ನಿಯಂತ್ರಣ ಸಾಧಿಸುವುದು. ಸಾಮರ್ಥ್ಯದ ಆಧಾರದಲ್ಲಿ ದೇಶವು ರೂಪುಗೊಂಡಿದೆ. ರಾಷ್ಟ್ರದ ಏಕತೆ ಹಾಗೂ ಪರರಾಷ್ಟ್ರದ ಆಕ್ರಮಣವನ್ನು ತಡೆಯಲು ಸೈನಿಕ ಶಕ್ತಿಯು ಅಗತ್ಯವಾಗಿದೆ. ಯುದ್ಧವೇ ರಾಷ್ಟ್ರರೂಪೀಕರಣಕ್ಕೆ ಆಧಾರ ಎನ್ನುವ ಆಶಯವನ್ನು ಶಕ್ತಿ ಸಿದ್ಧಾಂತವು ಹೊಂದಿದೆ.

### ರಾಷ್ಟ್ರ ಹಾಗೂ ಪೌರ :

ಪಾಸ್‌ಪೋರ್ಟಿನ ಚಿತ್ರವನ್ನು ಪಾಠಭಾಗದಲ್ಲಿ ನೀಡಲಾಗಿದೆ. ಭಾರತದಿಂದ ಹೊರದೇಶಗಳಿಗೆ ಸಂಚರಿಸುವ ಭಾರತೀಯನ ಪ್ರಧಾನ ದಾಖಲೆಯು ಪಾಸ್‌ಪೋರ್ಟ್ ಆಗಿದೆ. ಪೌರತ್ವವಿಲ್ಲದಿದ್ದರೆ ಉಂಟಾಗುವ ಸಮಸ್ಯೆಗಳನ್ನು ಅರ್ಥೈಸಲು, ಪರ್‌ದೇಸಿ ಸಿನಿಮಾದ ತುಣುಕುಗಳನ್ನು ತರಗತಿಯಲ್ಲಿ ಪ್ರದರ್ಶಿಸಬೇಕು.

ನಂತರ ಪೌರ ಮತ್ತು ರಾಷ್ಟ್ರದ ಪರಸ್ಪರ ಸಂಬಂಧವನ್ನು ಮನನ ಮಾಡಲು ಪಾಠಭಾಗದಲ್ಲಿ ನೀಡಿರುವ ಅರಿಸ್ಟಾಟಲ್‌ನ ಮಾತುಗಳನ್ನು ವ್ಯಕ್ತಿಗತವಾಗಿ ಓದಿದ ನಂತರ ಗುಂಪು ಚರ್ಚೆ ನಡೆಸಬೇಕು. ಪೌರನಿಗೆ ರಾಷ್ಟ್ರದೊಂದಿಗೆ ಕರ್ತವ್ಯಗಳಿವೆಯೆಂದೂ ರಾಷ್ಟ್ರವು ನೀಡುವ ಹಕ್ಕುಗಳನ್ನು ಅನುಭವಿಸುವ ಹಕ್ಕುಗಳು ಪೌರನಿಗೆ ಸಿಗುವುದೆಂಬ ಆಶಯವನ್ನು ಚರ್ಚೆಯಲ್ಲಿ ಮುಂದಿರಿಸಬೇಕು.

ರಾಜಕೀಯ ಅವಕಾಶಗಳು ಪೌರನಿಗೆ ಮಾತ್ರ ಲಭಿಸುವುದೆಂದು ತಿಳಿದುಕೊಳ್ಳಲು ಪಾಠಭಾಗದಲ್ಲಿ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸಲು ತಿಳಿಸಬೇಕು. ಇದಕ್ಕಾಗಿ ಕೆಳಗೆ ನೀಡಿರುವ ಸೂಚಕಗಳನ್ನು ಉಪಯೋಗಿಸಬಹುದು.

- ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು
- ಮತದಾನವನ್ನು ಮಾಡುವ ಹಕ್ಕು
- ಸಂಘ ಸಂಸ್ಥೆಗಳನ್ನು ರೂಪಿಸುವ ಹಕ್ಕು

ಪೌರತ್ವವು ಎಲ್ಲರಿಗೂ ಒಂದೇ ರೀತಿಯಲ್ಲಿ ಲಭಿಸಿಲ್ಲವೆಂದೂ ಪೌರತ್ವವನ್ನು ಎರಡು ವಿಧಗಳಾಗಿ

ವಿಂಗಡಿಸಲಾಗಿದೆಯೆಂದೂ ತಿಳಿದುಕೊಳ್ಳುವುದಕ್ಕೆ ಪಾಠಭಾಗದಲ್ಲಿ ನೀಡಿರುವ ಚಾರ್ಟನ್ನು ವಿಶ್ಲೇಷಣೆ ಮಾಡಬೇಕು.

ಭಾರತದ ಪೌರತ್ವವನ್ನು ಪಡೆದ ಲಾರಿ ಬೇಕರ್, ಸೋನಿಯಾ ಗಾಂಧಿ ಮೊದಲಾದವರ ಕುರಿತಾದ ಲಘು ಟಿಪ್ಪಣಿಗಳನ್ನು ಬರೆಯುವುದರಿಂದ ಆರ್ಜಿತ ಪೌರತ್ವ ಎಂದರೇನೆಂದು ತಿಳಿದುಕೊಳ್ಳಲು ಸಹಾಯಕವಾಗುವುದು. ಕೆಳಗೆ ನೀಡಿರುವ ಆಶಯಗಳು ಖಚಿತಗೊಳ್ಳುವ ರೀತಿಯಲ್ಲಿ ಚರ್ಚೆಯನ್ನು ಕ್ರೋಡೀಕರಿಸಬೇಕು.

- ದೇಶವೊಂದರ ಪೂರ್ಣ ಮತ್ತು ಸಮಾನತೆಯಿಂದ ಕೂಡಿದ ಸದಸ್ಯತನವು ಪೌರತ್ವವಾಗಿದೆ.
- ಪೌರತ್ವವು ಓರ್ವ ವ್ಯಕ್ತಿಗೆ ಪೌರತ್ವದ ಹಕ್ಕನ್ನೂ ರಾಜಕೀಯ ಹಕ್ಕುಗಳನ್ನೂ ಖಾತರಿಪಡಿಸುವುದು.
- ಪೌರನಿಗೆ ರಾಷ್ಟ್ರದೊಂದಿಗೆ ನಿರ್ವಹಿಸಬೇಕಾದ ಜವಾಬ್ದಾರಿಗಳಿವೆ.
- ರಾಜಕೀಯ ಹಕ್ಕುಗಳು ಪೌರನಿಗೆ ಮಾತ್ರ ಲಭಿಸುವುದು.
- ಪೌರತ್ವವನ್ನು ಸ್ವಾಭಾವಿಕ ಪೌರತ್ವ ಮತ್ತು ಆರ್ಜಿತ ಪೌರತ್ವ ಎಂದು ವಿಂಗಡಿಸಲಾಗಿದೆ.

## ರಾಜ್ಯಶಾಸ್ತ್ರ

ಪಾಠಭಾಗದ ಆರಂಭದಲ್ಲಿ ನೀಡಿರುವ ಚಿತ್ರಗಳನ್ನು ವ್ಯಕ್ತಿಗತವಾಗಿ ನಿರೀಕ್ಷಿಸಲು ಮಕ್ಕಳಿಗೆ ಹೇಳಬೇಕು. ಚಿತ್ರದಲ್ಲಿ ನೀಡಿರುವ ವ್ಯಕ್ತಿಗಳ ಕೊಡುಗೆಗಳು ಯಾವ ವಲಯಕ್ಕೆ ಸಂಬಂಧಿಸಿವೆ ಎಂದು ಟಿಪ್ಪಣಿ ತಯಾರಿಸಿರಿ.

### ಪ್ಲೇಟೋ

ಬಿ.ಸಿ. 427ರಲ್ಲಿ ಗ್ರೀಸಿನಲ್ಲಿ ಜನಿಸಿದರು. ಪಾಶ್ಚಾತ್ಯ ಚಿಂತನೆಗೆ ಬಹುದೊಡ್ಡ ಕೊಡುಗೆಯನ್ನು ನೀಡಿದರು. ರಿಪಬ್ಲಿಕ್ ಇವರ ಪ್ರಧಾನ ಕೃತಿ. ಆದರ್ಶ ಗಣರಾಜ್ಯ ಎಂಬ ಆಶಯವನ್ನು ಮುಂದಿರಿಸಿದರು. ಅತೀ ಶ್ರೇಷ್ಠ ವ್ಯಕ್ತಿಗಳ ಆಡಳಿತವು ಆದರ್ಶ ಗಣರಾಜ್ಯದಲ್ಲಿ ನಡೆಯುವುದು ಎಂದು ಇವರ ಅಭಿಪ್ರಾಯವಾಗಿದೆ. ಪ್ಲೇಟೋ ಸೋಕ್ರೆಟೀಸ್‌ನ ಶಿಷ್ಯರಾಗಿದ್ದರು.

### ಸೋಕ್ರೆಟೀಸ್:

ಬಿ.ಸಿ. 469ರಲ್ಲಿ ಜನನ. ಗ್ರೀಸ್ ದೇಶದ ಪ್ರಮುಖ ತತ್ವಚಿಂತಕ ಪ್ರಶ್ನೋತ್ತರಗಳ ಮೂಲಕ ಸಂವಾದಗಳ ಮೂಲಕ ತಮ್ಮ ಆಶಯಗಳನ್ನು ಜನರಿಗೆ ತಲುಪಿಸಿದರು. ನೀತಿ, ಜ್ಞಾನ, ರಾಜಕೀಯ, ಸಮಾಜ ಮೊದಲಾದವುಗಳನ್ನು ವಿಶ್ಲೇಷಿಸಲು ಮತ್ತು ನಿರ್ವಚಿಸುವ ಸಾಮರ್ಥ್ಯವನ್ನು ಹೊಂದಿದ್ದರು. ಆಡಳಿತ ವ್ಯವಸ್ಥೆಯನ್ನು ವಿಮರ್ಶಿಸಿದ್ದು ಮತ್ತು ನೀತಿ ಮತ್ತು ಸ್ವಭಾವದ ಕುರಿತಾಗಿ ವಿಶ್ಲೇಷಿಸಿದರೆಂಬ ಕಾರಣದಿಂದ ಆಡಳಿತ ಕೂಟವು ಬಿ.ಸಿ. 399ರಲ್ಲಿ ವಧೆ ಶಿಕ್ಷೆಯನ್ನು ನೀಡಿತು.

### ಕಾರ್ಲ್ ಮಾರ್ಕ್ಸ್

ಮಾನವ ಚರಿತ್ರೆಯ ಮೇಲೆ ಅತೀ ಹೆಚ್ಚು ಪ್ರಭಾವ ಬೀರಿದ ಚಿಂತಕನು ಕಾರ್ಲ್ ಮಾರ್ಕ್ಸ್ ಆಗಿರುವನು. 1818ರಲ್ಲಿ ಜರ್ಮನಿಯಲ್ಲಿ ಜನಿಸಿದರು. ಶ್ರೀಮಂತರ ಮತ್ತು ಬಡವರ ನಡುವಿನ ಅಂತರವನ್ನು ತಿಳಿಸಿದ ಅವರ ಸಿದ್ಧಾಂತವು ಮಹಾಕ್ರಾಂತಿಗಳಿಗೆ ಕಾರಣವಾಯಿತು. ವರ್ಗ ಸಮರದ ವಿರುದ್ಧ ಭೌತಿಕವಾದ ಮುಂತಾದ ಆಶಯಗಳೊಂದಿಗೆ ಕಾರ್ಲ್ ಮಾರ್ಕ್ಸ್ ಕಮ್ಯೂನಿಸಂ ಎನ್ನುವ ಸಿದ್ಧಾಂತಕ್ಕೆ ರೂಪು ನೀಡಿದರು. ಇವರ ಕಮ್ಯೂನಿಸ್ಟ್ ಮೆನಿಫೆಸ್ಟೋ ಕ್ಯಾಪಿಟಲ್ ಎಂಬೀ ಕೃತಿಗಳು ಅತ್ಯಂತ ಪ್ರಸಿದ್ಧವಾಗಿವೆ. 1883ರಲ್ಲಿ ಅವರು ಮರಣವನ್ನಪ್ಪಿದರು.

ರಾಷ್ಟ್ರ ಸಿದ್ಧಾಂತಗಳಿಗೆ ಅತೀ ದೊಡ್ಡ ಕೊಡುಗೆಯನ್ನು ನೀಡಿದ ಇವರ ಕುರಿತಾದ ಚರ್ಚೆ ರಾಜ್ಯಶಾಸ್ತ್ರದ ಕುರಿತಾದ ಹೆಚ್ಚಿನ ಮಾಹಿತಿಯನ್ನು ಪಡೆಯಲು ಸಹಾಯಕವಾಗುವುದು. ಇವರಲ್ಲಿ ಗ್ರೀಕ್ ಚಿಂತಕನಾದ ಅರಿಸ್ಟೋಟಲ್ ರಾಜ್ಯಶಾಸ್ತ್ರದ ಕುರಿತಾಗಿ ನೀಡಿದ ನಿರ್ವಚನವನ್ನು ವ್ಯಕ್ತಿಗತವಾಗಿ ಓದಲು ತಿಳಿಸಬೇಕು. ನಂತರ ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿ ಪವರ್ ಪಾಯಿಂಟ್ ಪ್ರಸೆಂಟೇಶನ್ ತಯಾರಿಸಲು ಗುಂಪುಗಳಿಗೆ ಹೇಳಬೇಕು.

ಮಕ್ಕಳು ಗುಂಪಿನಲ್ಲಿ ತಾವು ತಯಾರಿಸಿದ ಪವರ್ ಪಾಯಿಂಟ್ ಪ್ರೆಸೆಂಟೇಶನ್‌ನಲ್ಲಿ ಈ ಕೆಳಗಿನ ಆಶಯಗಳು ಒಳಗೊಂಡಿವೆ ಎಂದು ಖಚಿತ ಪಡಿಸಬೇಕು.

- ರಾಷ್ಟ್ರ ಮತ್ತು ಸರಕಾರದ ಕುರಿತಾದ ಅಧ್ಯಯನವು ರಾಜ್ಯಶಾಸ್ತ್ರವಾಗಿದೆ ಎಂದು ಅರಿಸ್ಟಾಟಲ್ ತನ್ನ ನಿರ್ವಚನದಲ್ಲಿ ತಿಳಿಸಿರುವನು.
- ಅರಿಸ್ಟಾಟಲ್ ರಾಜ್ಯಶಾಸ್ತ್ರದ ಪಿತಾಮಹ ಎಂದು ಕರೆಯಲ್ಪಡುವನು.
- ಗ್ರೀಕ್ ಪದವಾದ 'ಪೋಲೀಸ್' ಎಂಬ ಪದದಿಂದ ರಾಜ್ಯಶಾಸ್ತ್ರ ಎಂಬ ಅರ್ಥವಿರುವ 'ಪೊಲಿಟಿಕ್ಸ್' ಎಂಬ ಪದವು ಉಗಮಗೊಂಡಿದೆ.
- ಆರಂಭಕಾಲದಲ್ಲಿ ರಾಷ್ಟ್ರ, ಸರಕಾರ ಎಂಬೀ ಸಂಸ್ಥೆಗಳ ಕುರಿತಾದ ಅಧ್ಯಯನಕ್ಕೆ ರಾಜ್ಯಶಾಸ್ತ್ರವು ಪ್ರಾಧಾನ್ಯವನ್ನು ನೀಡುತ್ತಿತ್ತು.
- ನಂತರದಲ್ಲಿ ರಾಜಕೀಯ ಪ್ರಕ್ರಿಯೆಯ ಕುರಿತು ಪ್ರಾಧಾನ್ಯವನ್ನು ನೀಡಲಾಯಿತು.
- ರಾಜಕೀಯ ಸಿದ್ಧಾಂತ, ಅಂತಾರಾಷ್ಟ್ರೀಯ ರಾಜಕೀಯ, ತುಲನಾತ್ಮಕ ರಾಜಕೀಯ ಸಿದ್ಧಾಂತಗಳು, ಸಾರ್ವಜನಿಕ ಆಡಳಿತ ಮುಂತಾದವುಗಳು ಈಗ ರಾಜ್ಯಶಾಸ್ತ್ರದ ಕಲಿಕಾಶಾಖೆಗಳಾಗಿವೆ.
- ರಾಜ್ಯಶಾಸ್ತ್ರವು ಇಂದು ನಿರಂತರವಾಗಿ ವಿಕಾಸವನ್ನು ಹೊಂದುತ್ತಿರುವ ಕಲಿಕಾಶಾಖೆಯಾಗಿ ಬದಲಾಗುತ್ತಿದೆ.

### ರಾಷ್ಟ್ರ ಸಿದ್ಧಾಂತ :

ರಾಷ್ಟ್ರ, ರಾಜಕೀಯ ವ್ಯವಸ್ಥೆ ಎಂಬಿವುಗಳಿಗೆ ಸಂಬಂಧಿಸಿದ ಆಶಯಗಳು, ಸಿದ್ಧಾಂತಗಳು ಮುಖ್ಯ ಪ್ರತಿಪಾದನಾ ವಿಷಯಗಳಾಗಿವೆ. ರಾಜಕೀಯ ಚಿಂತಕರ ದೃಷ್ಟಿಕೋನ, ಕೊಡುಗೆಗಳನ್ನು ಇಲ್ಲಿ ಚರ್ಚಿಸಲಾಗುವುದು. ಸ್ವಾತಂತ್ರ್ಯ, ಸಮಾನತೆ, ನೀತಿ ನ್ಯಾಯ ಹಕ್ಕುಗಳು, ಮುಂತಾದ ಸಾಮಾಜಿಕ, ರಾಜಕೀಯ ಜೀವನಕ್ಕೆ ಸಂಬಂಧಿಸಿದ ವಿಷಯಗಳು ರಾಷ್ಟ್ರ ಸಿದ್ಧಾಂತದ ಭಾಗವಾಗಿದೆ.

### ತುಲನಾತ್ಮಕ ರಾಜಕೀಯ ಶಾಸ್ತ್ರ

ರಾಷ್ಟ್ರ ವ್ಯವಸ್ಥೆಗಳು, ರಾಜಕೀಯ ವ್ಯವಸ್ಥೆಗಳು, ಸಂವಿಧಾನ ರಾಷ್ಟ್ರೀಯ ಸಂಸ್ಥೆಗಳು, ರಾಜಕೀಯ ಪ್ರಕ್ರಿಯೆ ಇತ್ಯಾದಿಗಳನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸುವ ಕಲಿಕಾ ಶಾಖೆಯು ತುಲನಾತ್ಮಕ ರಾಜಕೀಯ ಶಾಸ್ತ್ರವಾಗಿದೆ. ಉತ್ತಮ ಗುಣಮಟ್ಟದ ರಾಜಕೀಯ ವ್ಯವಸ್ಥೆಗಳನ್ನು ಸ್ವೀಕರಿಸುವುದಕ್ಕೂ, ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವುದು, ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆಯನ್ನು ಖಾತರಿಪಡಿಸುವುದಕ್ಕೂ ಇದು ಸಹಾಯಕವಾಗುವುದು. ವಿಷಯಾಂತರ ಸಮೀಪನದೊಂದಿಗೆ ರಾಜಕೀಯ ಶಾಸ್ತ್ರವನ್ನು ಮತ್ತಷ್ಟು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ತುಲನಾತ್ಮಕ ರಾಜಕೀಯ ಶಾಸ್ತ್ರವು ಸಹಾಯಕವಾಗುವುದು.

### ಅಂತಾರಾಷ್ಟ್ರೀಯ ರಾಜಕೀಯ ಶಾಸ್ತ್ರ

ರಾಷ್ಟ್ರಗಳು ತಮ್ಮೊಳಗಿನ ಪರಸ್ಪರ ಸಂಬಂಧವನ್ನು ವಿಶ್ಲೇಷಿಸುವ ಕಲಿಕಾ ಶಾಖೆಯು ಅಂತಾರಾಷ್ಟ್ರೀಯ ರಾಜಕೀಯ ಶಾಸ್ತ್ರವಾಗಿದೆ. ರಾಷ್ಟ್ರಗಳ ವಿದೇಶೀ ಧೋರಣೆ, ಮೇಧಾವಿತ್ವಕ್ಕೆ ಬೇಕಾಗಿ ನಡೆಯುವ ಪ್ರಯತ್ನಗಳು, ಅಂತಾರಾಷ್ಟ್ರೀಯ ಒಪ್ಪಂದಗಳು, ಅಂತಾರಾಷ್ಟ್ರೀಯ ಸಂಘಟನೆಗಳು, ಅಂತಾರಾಷ್ಟ್ರೀಯ ನಿಯಮಗಳು ಇತ್ಯಾದಿಗಳನ್ನು ವಿವರವಾಗಿ ಚರ್ಚೆ ನಡೆಸುವ ಶಾಖೆ ಇದಾಗಿದೆ.

### ರಾಜ್ಯಶಾಸ್ತ್ರ ಕಲಿಕೆಯ ಪ್ರಯೋಜನಗಳು:

- ಜನರಲ್ಲಿ ಪೌರಪ್ರಜ್ಞೆಯನ್ನು ಬೆಳೆಸುವುದು.
- ಸಾಮಾಜಿಕ, ರಾಜಕೀಯ, ಆರ್ಥಿಕ ಸಮಸ್ಯೆಗಳ ಸಂದರ್ಭಗಳಲ್ಲಿ ಯುಕ್ತಿ ಪೂರ್ವಕವಾದ ಹಸ್ತಕ್ಷೇಪವನ್ನು ನಡೆಸುವುದು.
- ಉತ್ತಮ ರಾಜಕೀಯ ವ್ಯವಸ್ಥೆಗಳಿಗೆ ರೂಪು ನೀಡಲು ಸಹಾಯ ಮಾಡುವುದು.
- ಹಕ್ಕು ಪ್ರತಿಪಾದನೆಗಾಗಿ ಕಾರ್ಯವೆಸಗಲು ಪ್ರೇರೇಪಿಸುವುದು.
- ರಾಷ್ಟ್ರದೊಂದಿಗಿನ ಕರ್ತವ್ಯವನ್ನು ನೆರವೇರಿಸಲು ಸಹಾಯಕ.

### ರಾಜ್ಯಶಾಸ್ತ್ರ ಕಲಿಕೆ ಯಾಕಾಗಿ?

ರಾಜಕೀಯ ಶಾಸ್ತ್ರ ಕಲಿಕೆಯ ಪ್ರಾಧಾನ್ಯವನ್ನು ಮಕ್ಕಳಿಗೆ ತಲುಪಿಸಲು ಈ ಭಾಗದ ಆರಂಭದಲ್ಲಿ ಪ್ಲೇಟೋವಿನ ನಿರ್ವಚನವನ್ನು ನೀಡಲಾಗಿದೆ. ಇದನ್ನು ಮಕ್ಕಳು ಓದಿ ವಿಶ್ಲೇಷಿಸಲಿ. ರಾಜಕೀಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾದ ಅಗತ್ಯ ಈ ನಿರ್ವಚನದಿಂದ ಸಿಗುವುದು. ರಾಜಕೀಯ ಶಾಸ್ತ್ರದ ಕಲಿಕೆಯ ಪ್ರಯೋಜನಗಳನ್ನು ಸೇರಿಸಿಕೊಂಡು ಪಟ್ಟಿಯನ್ನು ತಯಾರಿಸಬೇಕು. ಇದಕ್ಕಾಗಿ ಈ ಭಾಗದಲ್ಲಿ ನೀಡಿರುವ ಸೂಚಕಗಳನ್ನು ಬಳಸಿ ಕೊಳ್ಳಬಹುದು.

### ? ಮೌಲ್ಯಮಾಪನ ಪ್ರಶ್ನೆಗಳು:

- ರಾಷ್ಟ್ರ ಎಂದರೇನು? ರಾಷ್ಟ್ರ ರೂಪೀಕರಣಕ್ಕೆ ಅಗತ್ಯವಾದ ಘಟಕಗಳನ್ನು ವಿವರಿಸಿರಿ.
- ಪರಮಾಧಿಕಾರದ ಬಾಹ್ಯ ಮತ್ತು ಆಂತರಿಕ ಹಂತಗಳನ್ನು ವಿವರಿಸಿರಿ.
- ರಾಷ್ಟ್ರದ ನಿರ್ಬಂಧಿತ ಮತ್ತು ವಿವೇಚನಾತ್ಮಕ ಜವಾಬ್ದಾರಿಗಳ ನಡುವಿನ ವ್ಯತ್ಯಾಸವೇನು ? ಇವೆರಡಕ್ಕೂ ಎರಡರಂತೆ ಉದಾಹರಣೆಯನ್ನು ನೀಡಿರಿ.
- " ದೇಶವೊಂದರ ಪೂರ್ಣವಾದ ಮತ್ತು ಸಮಾನವಾದ ಸದಸ್ಯತನವು ಪೌರತ್ವವಾಗಿದೆ" ಈ ಹೇಳಿಕೆಯನ್ನು ವಿಶ್ಲೇಷಿಸಿರಿ.
- ರಾಜಕೀಯ ಶಾಸ್ತ್ರದ ವಿವಿಧ ಕಲಿಕಾ ಶಾಖೆಗಳು ಯಾವುವೆಂದು ಬರೆಯಿರಿ.

### ಆಕರ ಗ್ರಂಥ

*Political theory - Eddy Asirvatham*
*An introudction to political theory - O P Gauba*
*Political theory - Shusheela Ramaswami & Subratho Mukherjee*
*Modern politcal theory - S. P. Varma*

### ಅಧ್ಯಾಪಕರಿಂದ ಮೌಲ್ಯಮಾಪನ

| | ಪೂರ್ಣವಾಗಿ | ಅಂಶಿಕವಾಗಿ | ಉತ್ತಮಪಡಿಸ ಬೇಕಾದದ್ದು |
|---|---|---|---|
| 1. ರಾಷ್ಟ್ರ ಎಂದರೇನೆಂದು, ರಾಷ್ಟ್ರ ರೂಪೀಕರಣಕ್ಕೆ ಅಗತ್ಯವಾದ ಘಟಕಗಳು ಯಾವುವೆಂದು ವಿಶ್ಲೇಷಿಸಲು ಮಕ್ಕಳಿಗೆ ಸಾಧ್ಯವಾಗಿದೆ. | ☐ | ☐ | ☐ |
| 2. ರಾಷ್ಟ್ರದ ವ್ಯತ್ಯಸ್ತ ಜವಾಬ್ದಾರಿಗಳನ್ನು ಸ್ಪಷ್ಟಪಡಿಸಲು ಮಕ್ಕಳಿಗೆ ಸಾಧ್ಯವಾಗಿದೆ. | ☐ | ☐ | ☐ |
| 3. ರಾಷ್ಟ್ರದ ಉಗಮದ ಕುರಿತಾಗಿ ಮಕ್ಕಳಿಗೆ ವಿಶ್ಲೇಷಿಸಲು ಸಾಧ್ಯವಾಗಿದೆ. | ☐ | ☐ | ☐ |
| 4. ಪೌರತ್ವ ಎಂದರೇನೆಂದು, ಪೌರತ್ವ ಮತ್ತು ರಾಷ್ಟ್ರಕ್ಕಿರುವ ಪರಸ್ಪರ ಸಂಬಂಧವೇನೆಂದು ವಿಶ್ಲೇಷಿಸಲು ಸಾಧ್ಯವಾಗಿದೆ. | ☐ | ☐ | ☐ |
| 5. ರಾಜಕೀಯ ಶಾಸ್ತ್ರದ ವಿವಿಧ ಕಲಿಕಾ ಶಾಖೆಗಳು ಮತ್ತು ಅವುಗಳ ವಿಶೇಷತೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ. | ☐ | ☐ | ☐ |



10

# ಪೌರ ಪ್ರಜ್ಞೆ

ಪ್ರಜಾಪ್ರಭುತ್ವ ರಾಷ್ಟ್ರವೊಂದರಲ್ಲಿ ರಾಷ್ಟ್ರ ಮತ್ತು ಪೌರನಿಗಿರುವ ಸಂಬಂಧವು ಸಾಂಕೇತಿಕವಲ್ಲ. ನಿಯಮದ ಮೂಲಕ, ಶಿಕ್ಷೆಯ ಮೂಲಕ, ಅಧಿಕಾರ ಕೇಂದ್ರಗಳ ಮೂಲಕವೋ ಮಾತ್ರ ಪೌರರನ್ನು ಕರ್ತವ್ಯ ಪ್ರಜ್ಞೆಯಿರುವ, ಶಿಸ್ತಿನಿಂದ ಕೂಡಿದ ವ್ಯಕ್ತಿಗಳನ್ನಾಗಿ ಬದಲಿಸಲು ಸಾಧ್ಯವಿಲ್ಲ. ಆಧುನಿಕ ಪ್ರಜಾಪ್ರಭುತ್ವ ಸಮಾಜವು ವ್ಯಕ್ತಿ ಕೇಂದ್ರೀಕೃತವಾಗಿದೆ. ಅಂದರೆ ಪ್ರಜಾಪ್ರಭುತ್ವವು ಎಲ್ಲಾ ವಿಭಾಗದ ಜನರ, ಹಕ್ಕುಗಳಿಗೂ ಸ್ವಾತಂತ್ರ್ಯಕ್ಕೂ ಆಸಕ್ತಿಗಳಿಗೂ ವಿಕಾಸಕ್ಕೂ ಪ್ರಾಧಾನ್ಯವನ್ನು ನೀಡುವುದು. ಪೌರರ ಪ್ರಜ್ಞಾಪೂರ್ವಕ ಎಚ್ಚೆತ್ತುಕೊಳ್ಳುವಿಕೆಯನ್ನು ಪ್ರಜಾಪ್ರಭುತ್ವವು ಆಗ್ರಹಿಸುವುದು, ಪೌರರ ಸಾಮಾಜಿಕ ಪ್ರಜ್ಞೆಯ ವಿಕಾಸವೇ ಪೌರಪ್ರಜ್ಞೆಯಾಗಿದೆ. ಪೌರಪ್ರಜ್ಞೆಯಿಂದ ಮಾತ್ರವೇ ಪ್ರಜಾಪ್ರಭುತ್ವ ರಾಷ್ಟ್ರವೊಂದರ ನಿರ್ಮಾಣ ಸಾಧ್ಯ. ಈ ಹಿನ್ನೆಲೆಯಿಂದ ಈ ಪಾಠಭಾಗವನ್ನು ನೋಡಬೇಕಾಗಿದೆ. ಪೌರ ಪ್ರಜ್ಞೆಯು ಪೌರರನ್ನು ಶಿಸ್ತಿನಿಂದ ಕೂಡಿದ, ಕರ್ತವ್ಯ ಪ್ರಜ್ಞೆಯುಳ್ಳ ಅರ್ಪಣಾ ಮನೋಭಾವವಿರುವ ಜವಾಬ್ದಾರಿಗಳ ಕುರಿತು ಪ್ರಜ್ಞೆಯುಳ್ಳ ಸೇವಾ ಸನ್ನದ್ಧರಾದ ಪ್ರಜೆಗಳನ್ನಾಗಿಸುತ್ತದೆ. ಈ ಪಾಠ ಭಾಗವನ್ನು ವಿನಿಮಯ ಮಾಡುವ ಮೂಲಕ ವಿದ್ಯಾರ್ಥಿಗಳಲ್ಲಿಯೂ ಈ ಗುಣವನ್ನು ವಿಕಾಸಗೊಳಿಸಬಹುದು.

| ಯೂನಿಟ್ ಫ್ರೇಂ | 10. ಪೌರ ಪ್ರಜ್ಞೆ | |
|---|---|---|
| **ಆಶಯಗಳು/ತಿಳುವಳಿಕೆಗಳು** | **ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು** | **ಕಲಿಕಾ ಸಾಧನೆಗಳು** |
| • ಪೌರಪ್ರಜ್ಞೆ<br>• ಪೌರಪ್ರಜ್ಞೆಯ ಪ್ರಾಧಾನ್ಯ<br>• ಪೌರಪ್ರಜ್ಞೆಯನ್ನು ನಿರ್ಣಯಿಸುವ ಘಟಕಗಳು<br>• ಪೌರ ಪ್ರಜ್ಞೆಯನ್ನು ಹೇಗೆ ಬೆಳೆಸಬಹುದು.<br>• ಪೌರ ಪ್ರಜ್ಞೆಯು ಎದುರಿಸುವ ಸವಾಲುಗಳು<br>• ಸಮಾಜ ವಿಜ್ಞಾನ ಅಧ್ಯಯನ ಹಾಗೂ ಪೌರ ಪ್ರಜ್ಞೆ | • ಪೌರ ಪ್ರಜ್ಞೆಯ ಉತ್ತಮ ಮಾದರಿಗಳ ಚಿತ್ರ/ಪತ್ರಿಕಾ ವರದಿ/ಡಾಕ್ಯುಮೆಂಟರಿ/ವೀಡಿಯೋ ಕ್ಲಿಪಿಂಗ್/ಆಶಯವನ್ನು ತಿಳಿಸುವ ರೋಲ್ ಪ್ಲೇ.<br>• ರೋಲ್ ಪ್ಲೆ /ಚರ್ಚೆ/ಮಂಡನೆ/ಕ್ರೋಡೀಕರಣ<br>• ಪ್ರಶ್ನೆ/ಪ್ರತಿಕ್ರಿಯೆ/ಚರ್ಚೆ/ಮೌಲ್ಯಮಾಪನ ಕ್ರೋಡೀಕರಣ<br>• ಪ್ರಶ್ನೆ, ಪ್ರತಿಕ್ರಿಯೆ, ವಿಶ್ಲೇಷಣೆ, ಚರ್ಚೆ/ವಾರ್ಷಿಕ ಕ್ಯಾಲೆಂಡರ್ ತಯಾರಿ/ಪಟ್ಟಿಯನ್ನು ತಯಾರಿಸುವುದು/ಅವುಗಳನ್ನು ಪತ್ರಿಕಾ ವಾರ್ತೆಯಾಗಿ ಓದುವುದು/ವಿಶ್ಲೇಷಣೆ/ಗುಂಪು ಚರ್ಚೆ.<br>• ಪೌರಪ್ರಜ್ಞೆಯ ಉತ್ತಮ ಮಾದರಿಯ ಕುರಿತಾದ ಲಘುಟಿಪ್ಪಣಿಯನ್ನು ಓದಲು ತಿಳಿಸುವುದು.<br>• ಪಟ್ಟಿಯನ್ನು ತಯಾರಿಸುವುದು.<br>• ಪಟ್ಟಿಯನ್ನು ತಯಾರಿಸುವುದು/ವರ್ಗೀಕರಿಸುವುದು/ತೌಲನಿಕ ವಿಶ್ಲೇಷಣೆ, ಕ್ರೋಡೀಕರಣ<br>• ಮೊದಲೇ ತಯಾರಿಸಿದ ಚಾರ್ಟನ್ನು ತರಗತಿಯಲ್ಲಿ ಪ್ರದರ್ಶಿಸುವುದು–ಓದುವಿಕೆ, ಚರ್ಚೆ, ಕ್ರೋಡೀಕರಣ<br>• ಪ್ರಶ್ನೆ, ಪ್ರತಿಕ್ರಿಯೆ, ಕ್ರೋಡೀಕರಣ | • ಪೌರ ಪ್ರಜ್ಞೆ ಎನ್ನುವ ಆಶಯುವನ್ನು ನಿರ್ವಚಿಸುವುದು.<br>• ಪೌರ ಪ್ರಜ್ಞೆಯ ಪ್ರಾಧಾನ್ಯವನ್ನು ವಿಶ್ಲೇಷಿಸುವುದು.<br>• ಪೌರಪ್ರಜ್ಞೆಯು ರೂಪುಗೊಳ್ಳಲು ಸಹಾಯಕವಾಗುವ ಘಟಕಗಳನ್ನು ಪಟ್ಟಿ ಮಾಡುವರು.<br>• ಪೌರ ಪ್ರಜ್ಞೆಯನ್ನು ಬೆಳೆಸಲು ಸಹಾಯಕವಾಗುವ ವಿವಿಧ ವಿಧಾನಗಳನ್ನು ವಿವರಿಸುವರು.<br>• ಪೌರಪ್ರಜ್ಞೆ ಮತ್ತು ನೈತಿಕತೆಯ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದು.<br>• ಪೌರ ಪ್ರಜ್ಞೆ ಎದುರಿಸುವ ಸವಾಲುಗಳನ್ನು ವಿಶ್ಲೇಷಿಸುವುದು.<br>• ಸಮಾಜ ವಿಜ್ಞಾನ ಕಲಿಕೆಯಲ್ಲಿ ಪೌರ ಪ್ರಜ್ಞೆ ವಹಿಸುವ ಪಾತ್ರವನ್ನು ವಿವರಿಸುವುದು. |

## ಅಧ್ಯಾಯದೆಡೆಗೆ...

ಈ ಪಾಠಭಾಗವನ್ನು ವಿನಿಮಯ ಮಾಡುವುದಕ್ಕಿರುವ ಸೂಕ್ತವಾದ ವಿಧಾನಗಳನ್ನು ಅಧ್ಯಾಪಕರು ಆಯ್ಕೆ ಮಾಡಬೇಕು. ಕೆಲವು ಸೂಚನೆಗಳನ್ನು ಇಲ್ಲಿ ನೀಡಲಾಗಿದೆ. ಪೌರ ಪ್ರಜ್ಞೆಯ ಮಾದರಿಗಳ ಚಿತ್ರ/ಪತ್ರಿಕಾ ವರದಿ/ಡಾಕ್ಯುಮೆಂಟರಿ/ವೀಡಿಯೋ ಕ್ಲಿಪ್ಪಿಂಗ್/ ರೋಲ್ ಪ್ಲೆ ಇತ್ಯಾದಿಗಳಲ್ಲಿ ಅತೀ ಸೂಕ್ತವಾದುದನ್ನು ಪ್ರದರ್ಶಿಸಿ ಪಾಠಭಾಗವನ್ನು ಆರಂಭಿಸಬೇಕು.

ಮಂಡಿಸುವಿಕೆಯ ನಂತರ ಚರ್ಚೆಯೂ ಮೌಲ್ಯ ಮಾಪನವೂ, ಕ್ರೋಡೀಕರಣವೂ ಇರಬೇಕು. ಪೌರ ಪ್ರಜ್ಞೆಯಿಂದ ಕೂಡಿದ ವ್ಯಕ್ತಿತ್ವಗಳ ವಿಶೇಷತೆಗಳನ್ನೂ, ಆ ಮೂಲಕ ಪೌರ ಪ್ರಜ್ಞೆ ಎಂಬ ಆಶಯದ ಕಡೆಗೂ ಮುನ್ನಡೆಸುವ ರೀತಿಯ ಚರ್ಚೆಯನ್ನು ನಡೆಸಬೇಕು. ಚರ್ಚೆಯ ಕೊನೆಯಲ್ಲಿ ಈ ಕೆಳಗಿನಂತೆ ಕ್ರೋಡೀಕರಣವಿರಬೇಕು.

- ಇಲ್ಲಿ ಉಲ್ಲೇಖಿಸಿದ ಮಹಾನ್ ವ್ಯಕ್ತಿತ್ವಗಳು, ತಮ್ಮ ವೃತ್ತಿ ಜೀವನದಲ್ಲಿ ಅರ್ಪಣಾ ಮನೋಭಾವ ಮತ್ತು ನಿಸ್ವಾರ್ಥತೆಯಿಂದ ದುಡಿದವರಾಗಿರುವರು.
- ವ್ಯಕ್ತಿಗಳ ಮತ್ತು ಸಮಾಜದ ಒಳಿತು ಅವರ ಉದ್ದೇಶವಾಗಿತ್ತು.
- ಯಾರದೇ ಅಥವಾ ಯಾವುದೇ ಒತ್ತಾಯದಿಂದ ಅವರು ಸೇವೆಯನ್ನು ಮಾಡಿದವರಲ್ಲ. ಅವರಿಗೆ ಸರಿ ಎಂದು ತೋರಿದ ಕಾರ್ಯದಲ್ಲಿ ಅವರು ಸ್ವ ಮನಸ್ಸಿನಿಂದ ನಿಸ್ವಾರ್ಥವಾಗಿ ದುಡಿದರು.
- ಸ್ಪಷ್ಟವಾದ ದೃಷ್ಟಿಕೋನ ಮತ್ತು ಉದ್ದೇಶಗಳನ್ನಿಟ್ಟುಕೊಂಡು ಅದಕ್ಕಾಗಿ ಕಾರ್ಯ ವೆಸಗಿದರು ಹಾಗೂ ಅದನ್ನು ಪಡೆಯುವುದಕ್ಕಾಗಿ ನಿರಂತರವಾಗಿ ಪ್ರಯತ್ನಿಸಿದರು.
- ಅವರ ಕಾರ್ಯ ಚಟುವಟಿಕೆಗಳು ಹಣ ಅಥವಾ ಪ್ರಶಸ್ತಿಗಾಗಿರಲಿಲ್ಲ. ಅವರ ದೃಢ ಸಂಕಲ್ಪ, ಉದ್ದೇಶ ಪ್ರಜ್ಞೆ ಹಾಗೂ ಚಟುವಟಿಕಾ ವಿಧಾನಗಳನ್ನು ಕ್ರಮೇಣ ಸಮಾಜವು ಗುರುತಿಸಿಕೊಳ್ಳುವುದರೊಂದಿಗೆ ಅವರು ಪ್ರಸಿದ್ಧಿಯನ್ನು ಪಡೆದರು.
- ಹೀಗೆ ನಿಶ್ಯಬ್ದವಾಗಿ ಸಮಾಜ ಸೇವೆಯನ್ನು ನಡೆಸುವ ಧಾರಾಳ ವ್ಯಕ್ತಿಗಳು ನಮ್ಮ ಸಮಾಜದಲ್ಲಿರುವರು. ವಾಸ್ತವಿಕವಾಗಿ ಅಂಥವರ ಕಾರ್ಯಚಟುವಟಿಕೆಗಳು ನಮ್ಮ ಸಮಾಜದಲ್ಲಿ ಸಮತೋಲನವನ್ನು ಉಂಟುಮಾಡುತ್ತದೆ. ಈ ರೀತಿಯ ನಿಶ್ಯಬ್ಧ ಕಾರ್ಯಕರ್ತರನ್ನು ನಾವಿಂದು ಗೌರವಿಸಬೇಕಾಗಿದೆ. ಇವರ ಹಂತಕ್ಕೆ ನಾವು ಪ್ರತಿಯೋರ್ವರೂ ತಲುಪಬೇಕು.
- ಕಾರ್ಯಾಚರಿಸಲು ಸಾಧ್ಯವಿಲ್ಲದ ಕಾರಣಗಳನ್ನು ಇವರು ಹುಡುಕಲಿಲ್ಲ. ಬದಲಿಗೆ ಕಾರ್ಯವೆಸಗಲು ಸಿಗುವ ಅವಕಾಶಗಳನ್ನು ಕಂಡುಕೊಳ್ಳಲು ಅವರು ಪ್ರಯತ್ನಿಸಿದರು. ಇವರಲ್ಲಿ ಹಲವರಿಗೆ ಪೌರ ಪ್ರಜ್ಞೆಯೆಂಬ ಆಶಯಗಳೇ ಗೊತ್ತಿರಲಿಕ್ಕಿಲ್ಲ. ಆದರೆ ಇವರ ನಡತೆಯ ಕಾರ್ಯಶೈಲಿಯೇ ನಿಜವಾದ ಪೌರಪ್ರಜ್ಞೆ ಎಂದು ನಾವು ಈ ಪಾಠಭಾಗದ ಮೂಲಕ ತಿಳಿದುಕೊಳ್ಳಬೇಕು.

**ಪಟ್ಟಿಯನ್ನು ವಿಸ್ತರಿಸುವುದು:**

ಪಾಠಭಾಗದಲ್ಲಿ ನೀಡಿರುವ ಪಟ್ಟಿಯನ್ನು ವಿಸ್ತರಿಸುವ ಪೌರಪ್ರಜ್ಞೆಯಿರುವ ವ್ಯಕ್ತಿಗಳ ಕಾರ್ಯಚಟುವಟಿಕೆ ಗಳಲ್ಲಿ ಕಾಣುವ ವಿಶೇಷತೆಗಳೇನು?

- ನಿಸ್ವಾರ್ಥತೆ
- ಅರ್ಪಣಾ ಮನೋಭಾವ
- ಸ್ಪಷ್ಟವಾದ ದೃಷ್ಟಿಕೋನವೂ ಉದ್ದೇಶಗಳೂ
- ಸಾಮಾನ್ಯ ಸಮಸ್ಯೆಯ ಮೇಲಿರುವ ಆತ್ಮಾರ್ಥತೆ

## ಪೌರ ಪ್ರಜ್ಞೆಯ ಪ್ರಾಧಾನ್ಯ:

ಪೌರಪ್ರಜ್ಞೆಯಿಲ್ಲದ ವ್ಯಕ್ತಿಗಳೇ ತುಂಬಿರುವ ಕಾಲ್ಪನಿಕ ಸಮಾಜದ ಕುರಿತಾಗಿ ಯೋಚಿಸಲು ಮಕ್ಕಳಿಗೆ ತಿಳಿಸಬೇಕು. (ಆ ರೀತಿಯ ಸಮಾಜವನ್ನು ಪ್ರತಿಪಾದಿಸುವ ರೋಲ್ ಪ್ಲೇ ಒಂದನ್ನು ಪ್ರದರ್ಶಿಸುವಂತೆಯೂ ತಿಳಿಸಬಹುದು) ಆ ರೀತಿಯ ಸಮಾಜದ ಅವಸ್ಥೆ ಹೇಗಿರಬಹುದೆಂದು ಯೋಚಿಸಲು ಹಾಗೂ ಚರ್ಚಿಸಲು ಮಕ್ಕಳಿಗೆ ಸಂದರ್ಭವನ್ನು ಒದಗಿಸಬೇಕು.

ಮಕ್ಕಳು ಕಂಡುಕೊಂಡದ್ದನ್ನು ತರಗತಿಯಲ್ಲಿ ಮಂಡಿಸಲಿ.
ಮಕ್ಕಳು ಮಂಡಿಸುವ ಸಮಸ್ಯೆಗಳಿಂದ ಈ ಕೆಳಗಿನ ನಿಗಮನಗಳಿಗೆ ತಲುಪಲು ಸಾಧ್ಯವಾಗಬೇಕು.

- ನಿಸ್ವಾರ್ಥತೆಯು ಹೆಚ್ಚುತ್ತಿದೆ ಹಾಗೂ ಸಮಾಜವು ವ್ಯಕ್ತಿಕೇಂದ್ರೀಕೃತವಾಗುತ್ತಿದೆ.
- ಅಸಹಿಷ್ಣುತೆ ಹೆಚ್ಚಾಗಬಹುದು.
- ಸಾಮಾನ್ಯ ನಿಯಮಗಳನ್ನು ಪಾಲಿಸದಿರುವ ಪ್ರವಣತೆಯು ಹೆಚ್ಚಾಗಬಹುದು.
- ಸಾರ್ವಜನಿಕ ಸ್ಥಳಗಳಲ್ಲಿ ವ್ಯಕ್ತಿಗಳ ವರ್ತನೆಯು ಹದಗೆಡಬಹುದು.
- ಸ್ವಾರ್ಥ ಆಸಕ್ತಿಗಾಗಿ, ಸಂಪನ್ಮೂಲಗಳನ್ನು ಶೋಷಣೆಗೊಳಪಡಿಸುವುದಕ್ಕೂ ಆರ್ಥಿಕ ಅಸಮಾನತೆಯು ಅನಿಯಂತ್ರಿತವಾಗಿ ಹೆಚ್ಚುವುದೂ ನಡೆಯಬಹುದು.
- ಸಮಾಜದಲ್ಲಿ ಅಸ್ವಸ್ಥತೆಯೂ ಸಂಘರ್ಷದ ವಾತಾವರಣವೂ ತಲೆದೋರಬಹುದು.
- ವ್ಯಕ್ತಿ ಸ್ವಾತಂತ್ರ್ಯವು ಪರಸ್ಪರ ಅಂಗೀಕರಿಸದ ಸ್ಥಿತಿ ಉಂಟಾಗಬಹುದು.

ಪೌರಪ್ರಜ್ಞೆ ಇಲ್ಲದಿರುವ ಸಂದರ್ಭದಲ್ಲಿ ವ್ಯಕ್ತಿಯ ಸಾಮಾಜಿಕ ಜೀವನವು ಕಷ್ಟಕರವಾಗುವುದೆಂಬ ಸ್ಪಷ್ಟ ಸೂಚನೆಯು ವಿದ್ಯಾರ್ಥಿಗಳಿಗೆ ಈ ಚಟುವಟಿಕೆಯಿಂದ ಮನದಟ್ಟಾಗಬೇಕು.

ಪೌರಪ್ರಜ್ಞೆಯ ಅನಿವಾರ್ಯತೆ ಹಾಗೂ ಪ್ರಾಧಾನ್ಯವನ್ನು ಕೆಳಗೆ ನೀಡಿರುವ ರೀತಿಯಲ್ಲಿ ಕ್ರೋಡೀಕರಿಸಬೇಕು.

- ಜನರ ನಡುವೆ ಪರಸ್ಪರ ಸೌಹಾರ್ದತೆ, ಶಾಂತಿಯನ್ನು ನೆಲೆ ನಿಲ್ಲಿಸಲು.
- ಜನರ ಕ್ಷೇಮವನ್ನೂ ಸುಖಜೀವನವನ್ನೂ ಖಾತರಿಪಡಿಸುವುದಕ್ಕೆ
- ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುವುದಕ್ಕೆ ಅನಿವಾರ್ಯವಾಗಿದೆ.
- ವ್ಯಕ್ತಿ ಸ್ವಾತಂತ್ರ್ಯವನ್ನೂ ಪ್ರಜಾಪ್ರಭುತ್ವವನ್ನೂ ಸಂರಕ್ಷಿಸುವುದಕ್ಕೆ
- ಮಾನವ ಹಕ್ಕುಗಳನ್ನು ಸಂರಕ್ಷಿಸಲು
- ಭಯೋತ್ಪಾದನೆ ಮತ್ತು ಉಗ್ರಗಾಮಿ ಚಟುವಟಿಕೆಗಳನ್ನು ತಡೆಯುವುದಕ್ಕೆ ತಡೆಯುವುದಕ್ಕೆ

ಒಟ್ಟಾಗಿ ಹೇಳುವುದಾದರೆ ಸಮಾಜವು ಸ್ವಯಂ ನಿಯಂತ್ರಿಸಲ್ಪಡಲೂ ಸಾಮಾಜಿಕ ಜೀವನವನ್ನು ಸುರಕ್ಷಿತವಾಗಿರಿಸಲೂ ಪೌರಪ್ರಜ್ಞೆಯು ಅಗತ್ಯವಾಗಿದೆ.

**ಪಟ್ಟಿಯನ್ನು ವಿಸ್ತರಿಸುವುದು**

ಪೌರಪ್ರಜ್ಞೆಯಿರುವ ಜನತೆಗೆ ಅನೇಕ ಸಮಸ್ಯೆಯನ್ನು ಪರಿಹರಿಸುವುದಕ್ಕೂ, ಅವುಗಳನ್ನು ಎದುರಿಸುವುದಕ್ಕೂ ಅವರು ಪ್ರಾಪ್ತರಾಗಿರುತ್ತಾರೆ.

| ಸಮಸ್ಯೆಗಳು | ನಮಗೇನು ಮಾಡಬಹುದು |
|---|---|
| • ಜಲಕ್ಷಾಮ | • ಗಿಡಮರಗಳನ್ನು ನೆಟ್ಟು ಬೆಳೆಸುವುದು<br>• ಜಲಮೂಲಗಳನ್ನು ಮಲಿನವಾಗದಂತೆ ಸಂರಕ್ಷಿಸುವುದು. |
| • ಪರಿಸರ ಮಲಿನೀಕರಣ | • ಅಜೈವಿಕ ಉತ್ಪನ್ನಗಳ ಉಪಯೋಗವನ್ನು ಕಡಿಮೆ ಮಾಡಿ ಜೈವಿಕ ಉತ್ಪನ್ನಗಳನ್ನು ಉಪಯೋಗಿಸುವುದು.<br>• ಸಾರ್ವಜನಿಕ ಸ್ಥಳಗಳಲ್ಲಿ ಉಗಿಯದು.<br>ಮಲಮೂತ್ರ ವಿಸರ್ಜನೆಯನ್ನು ಮಾಡದಿರುವುದು |
| • ಭ್ರಷ್ಟಾಚಾರ | • ಭ್ರಷ್ಟಾಚಾರದಲ್ಲಿ ಯಾವುದೇ ಕಾರಣಕ್ಕೆ ಪಾಲ್ಗೊಳ್ಳದಿರುವುದು.<br>• ಪ್ರತಿಯೋರ್ವರೂ ತಮ್ಮ ಸಾಮಾಜಿಕ ಜೀವನವನ್ನು ಪಾರದರ್ಶಕವನ್ನಾಗಿಸುವುದು. |

## ಪೌರ ಪ್ರಜ್ಞೆಯನ್ನು ನಿರ್ಣಯಿಸುವ ಘಟಕಗಳು

ಕೆಳಗಿನ ಪ್ರಶ್ನೆಗಳನ್ನು ಕೇಳುವ ಮೂಲಕ ಈ ಪಾಠಭಾಗವನ್ನು ಆರಂಭಿಸಬಹುದು.

- ಎಲ್ಲ ವ್ಯಕ್ತಿಗಳಲ್ಲಿಯೂ ಪೌರಪ್ರಜ್ಞೆಯು ಒಂದೇ ರೀತಿಯಾಗಿದೆಯೇ?
- ಯಾವ ಕಾರಣದಿಂದ ಪೌರಪ್ರಜ್ಞೆಯಲ್ಲಿ ವ್ಯತ್ಯಾಸಗಳುಂಟಾಗುವುದು.
  ಅದರ ಕಾರಣಗಳನ್ನು ಕಂಡುಹಿಡಿಯಬಹುದೇ?

ಮಕ್ಕಳ ಪ್ರತಿಕ್ರಿಯೆಗಳನ್ನು ಗಮನಿಸಿ, ಅವರ ಅಭಿಪ್ರಾಯಗಳ ಆಧಾರದಲ್ಲಿ ವಿವಿಧ ಘಟಕಗಳು ಯಾವೆಲ್ಲಾ ರೀತಿಯಲ್ಲಿ ಪೌರಪ್ರಜ್ಞೆಯ ಮೇಲೆ ಗುಣಾತ್ಮಕವಾಗಿ ಅಥವಾ ದೋಷಕರವಾಗಿ ಪ್ರಭಾವ ಬೀರುವುದು ಎಂದು ಚರ್ಚಿಸಿರಿ. ಮಕ್ಕಳ ಜೀವನ ಸನ್ನಿವೇಶಗಳೂ ಶಾಲಾ ವಾತಾವರಣವೂ ಯಾವೆಲ್ಲಾ ರೀತಿಯಲ್ಲಿ ಪೌರಪ್ರಜ್ಞೆಯ ಮೇಲೆ ಪ್ರಭಾವ ಬೀರುವುದೆಂದು ಚರ್ಚಿಸಿರಿ.

### ಕಲಿಕಾ ಚಟುವಟಿಕೆ

ಅನುಕೂಲಕರ ಮತ್ತು ಪ್ರತಿಕೂಲವಾದ ಸನ್ನಿವೇಶಗಳು ಪೌರಪ್ರಜ್ಞೆಯ ಮೇಲೆ ಹೇಗೆ ಪ್ರಭಾವ ಬೀರುವುದೆಂದು ಚರ್ಚಿಸಿ ಆ ರೀತಿಯ ವ್ಯಕ್ತಿಗಳನ್ನು ಕಂಡುಕೊಂಡು ಪಟ್ಟಿಯನ್ನು ತಯಾರಿಸಬೇಕು.

ಇಲ್ಲಿ ಕೆಳಗೆ ಹೇಳಿದ ರೀತಿಯಲ್ಲಿ ಮೂರು ಪಟ್ಟಿಯನ್ನು ತಯಾರಿಸಬಹುದು.

1. ಅನುಕೂಲಕರವಾದ ಸನ್ನಿವೇಶಗಳಿಂದಾಗಿ ಪೌರಪ್ರಜ್ಞೆಯನ್ನು ರೂಪಿಸಿಕೊಂಡವರು.
2. ಪ್ರತಿಕೂಲಕರವಾದ ಸನ್ನಿವೇಶಗಳಿಂದಾಗಿ ಪೌರಪ್ರಜ್ಞೆಯನ್ನು ರೂಪಿಸಿಕೊಂಡವರು.
3. ಅನುಕೂಲಕರವೂ ಪ್ರತಿಕೂಲಕರವೂ ಆದ ಸನ್ನಿವೇಶಗಳಿಂದಾಗಿ ಪೌರಪ್ರಜ್ಞೆಯನ್ನು ರೂಪಿಸಿಕೊಂಡವರು.

ಪೌರಪ್ರಜ್ಞೆಯನ್ನು ನಿರ್ಣಯಿಸುವ ಘಟಕಗಳೆಲ್ಲವೂ ಉಂಟಾಗುವುದು ಹಾಗೂ ಅವು ನಿರೀಕ್ಷಿತ ಉದ್ದೇಶದೊಂದಿಗೆ ಕಾರ್ಯನಿರ್ವಹಿಸುವುದಾದರೆ ಅವು ಪೌರಪ್ರಜ್ಞೆಯ ಅನುಕೂಲಕರ ಘಟಕಗಳೆಂದು ಕರೆಯಲ್ಪಡುವುದು. ದೇಶವೊಂದರ ಬಹುಸಂಖ್ಯಾತ ಜನರ ಪೌರಪ್ರಜ್ಞೆಯನ್ನು ನಿರ್ಣಯಿಸುವುದು ಅನುಕೂಲಕರ ಘಟಕಗಳಾಗಿವೆ. ಆದ್ದರಿಂದಲೇ ಪೌರಪ್ರಜ್ಞೆಯ ತೀವ್ರವಾದ ಮಾದರಿಯನ್ನು ನಾವು ಈ ವಿಭಾಗದಿಂದ ಕಾಣಲು ಸಾಧ್ಯವಿಲ್ಲ.

ಪೌರಪ್ರಜ್ಞೆಯನ್ನು ನಿರ್ಣಯಿಸುವ ಘಟಕಗಳ ಅಭಾವ, ಅಥವಾ ಉದ್ದೇಶವಿಲ್ಲದ ಕಾರ್ಯ ಚಟುವಟಿಕೆಗಳು ಪ್ರತಿಕೂಲ ಘಟಕಗಳಾಗಿವೆ. ಪ್ರತಿಕೂಲವಾದ ಸನ್ನಿವೇಶಗಳು ಪೌರಪ್ರಜ್ಞೆಯು ರೂಪುಗೊಳ್ಳಲು ಅನುಕೂಲವಲ್ಲದಿದ್ದರೂ ಈ ರೀತಿಯ ಸನ್ನಿವೇಶಗಳಿಂದ ಅಪ್ರತಿಮ ಪೌರಪ್ರಜ್ಞೆಯ ವ್ಯಕ್ತಿತ್ವಗಳು ರೂಪುಗೊಂಡದ್ದನ್ನು ನಾವು ಕಾಣಬಹುದು. ಇದಕ್ಕೆ ಪೂರಕವಾದ ಪೌರಪ್ರಜ್ಞೆಯ ಮಾದರಿ ವ್ಯಕ್ತಿತ್ವಗಳನ್ನು ಪಾಠಭಾಗದಿಂದ ಕಂಡುಕೊಳ್ಳಲು ತಿಳಿಸಬೇಕು.

ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಅನುಕೂಲಕರ ಮತ್ತು ಪ್ರತಿಕೂಲಕರ ಸನ್ನಿವೇಶಗಳಿಂದಾಗಿ ಪೌರ ಪ್ರಜ್ಞೆ ರೂಪುಗೊಂಡಿರುವುದನ್ನು ಕಾಣಬಹುದು. ನಮ್ಮ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ ಸ್ವಾತಂತ್ರ್ಯ ಹೋರಾಟಗಾರರು, ನವೋತ್ಥಾನದ ನಾಯಕರು, ಜನಪರ ಚಳುವಳಿಯ ನೇತಾರರು ಮುಂತಾದವರು ದೇಶಕ್ಕಾಗಿ ನಿಸ್ವಾರ್ಥ ಸೇವೆಯನ್ನು ಮಾಡಿರುವವರ ಮಾದರಿಗಳನ್ನು ಮಕ್ಕಳಿಗೆ ಈ ಪಾಠಭಾಗದಲ್ಲಿ ಪರಿಚಯಿಸಬಹುದು.

**ಕ್ರೋಢೀಕರಣ:**

ಪೌರಪ್ರಜ್ಞೆ ಈ ಎಲ್ಲ ಘಟಕಗಳ ನೇರವಾದ ಫಲವಾಗಿರುವುದಿಲ್ಲ. ಪೌರಪ್ರಜ್ಞೆಯು ಒಂದು ಉತ್ಪನ್ನವಾಗಿದೆ. ವಿವಿಧ ಘಟಕಗಳು ಬೀರಿದ ಪ್ರಭಾವದ ಫಲವಾಗಿಯೂ, ವ್ಯಕ್ತಿಗಳ ಅನುಭವದ, ಚಿಂತನೆಗಳ ಅನಂತರ ಫಲವಾಗಿಯೂ ಪೌರನೋರ್ವನ ಪ್ರಜ್ಞೆಯಲ್ಲಿ ಉಂಟಾಗಿರುವ ಕ್ರಿಯಾತ್ಮಕವಾದ ಬದಲಾವಣೆಯು ಪೌರಪ್ರಜ್ಞೆಯಾಗಿದೆ.

## ಪೌರ ಪ್ರಜ್ಞೆಯನ್ನು ಹೇಗೆ ಬೆಳೆಸಬಹುದು?

ಕೆಳಗೆ ನೀಡಿದ ಪ್ರಶ್ನೆಗಳನ್ನು ಕೇಳಿಕೊಂಡು ಪಾಠಭಾಗವನ್ನು ಆರಂಭಿಸಬೇಕು.

ವ್ಯಕ್ತಿಯೋರ್ವನಿಗೆ ಹುಟ್ಟಿನಿಂದಲೇ ಪೌರಪ್ರಜ್ಞೆಯು ಲಭಿಸುವುದೇ? ಓರ್ವ ವ್ಯಕ್ತಿಯಲ್ಲಿ ಅದನ್ನು ಬೆಳೆಸಲು ಸಾಧ್ಯವೇ? ಈ ಪ್ರಶ್ನೆಗಳ ಪ್ರತಿಕ್ರಿಯೆಯನ್ನು ಮಕ್ಕಳಿಂದ ಪಡೆದ ಮೇಲೆ ಈ ಕೆಳಗಿನಂತೆ ಕ್ರೋಡೀಕರಿಸಬೇಕು.

- ಪೌರ ಪ್ರಜ್ಞೆಯು ಹುಟ್ಟಿನೊಂದಿಗೇ ಲಭಿಸುವುದಿಲ್ಲ. ಆದರೆ ಅದನ್ನು ವ್ಯಕ್ತಿಯೋರ್ವನಲ್ಲಿ ಬೆಳೆಸಲು ಸಾಧ್ಯವಿದೆ.

ಸಮಾಜವೊಂದರ ಸುಗಮವಾದ ಚಟವಟಿಕೆಗಳಿಗೆ ಅಭಿವೃದ್ಧಿಗೆ, ವಿಕಾಸಕ್ಕೆ ಪೌರಪ್ರಜ್ಞೆಯನ್ನು ಬೆಳೆಸುವುದು ಅನಿವಾರ್ಯವಾಗಿದೆ.
ಪೌರ ಪ್ರಜ್ಞೆಯನ್ನು ನಿರ್ಣಯಿಸುವ ಘಟಕಗಳಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಂಡು ಪೌರಪ್ರಜ್ಞೆಯನ್ನು ಬೆಳೆಸಬಹುದಾಗಿದೆ.

## ಕುಟುಂಬ

ಕುಟುಂಬ ಜೀವನದಿಂದ ಮಕ್ಕಳು ಏನೆಲ್ಲಾ ಕಲಿಯಬಹುದೆಂದು ಕುಟುಂಬ ಅವರ ಜೀವನದ ಮೇಲೆ ಯಾವ ರೀತಿಯಲ್ಲಿ ಪ್ರಭಾವ ಬೀರುವುದೆಂದು ಒಂದು ಲಘು ಚರ್ಚೆಯನ್ನು ನಡೆಸಿರಿ.

ಸಹಜೀವನ, ಸಹನೆ, ಪರಸ್ಪರ ಪಾಲ್ಗೊಳ್ಳುವಿಕೆ, ಹಂಚುವಿಕೆ, ಕರ್ತವ್ಯ ಪ್ರಜ್ಞೆ, ಸೇವಾ ಮನೋಭಾವ, ಕರುಣೆ ಇತ್ಯಾದಿ ಗುಣಗಳನ್ನು ಮಕ್ಕಳು ಕುಟುಂಬದಿಂದ ಕಲಿತುಕೊಳ್ಳುತ್ತಾರೆ ಮನೆಯಿಂದ ಕಲಿಯುವ ಈ ಎಲ್ಲಾ ಉತ್ತಮ ಗುಣಗಳು ಪೌರ ಪ್ರಜ್ಞೆಯನ್ನು ಬೆಳೆಸುವಲ್ಲಿ ಅಗತ್ಯವಿರುವ ಮೂಲಭೂತ ಘಟಕವಾಗಿದೆ.

## ವಿದ್ಯಾಭ್ಯಾಸ

ಶಾಲಾ ಶಿಕ್ಷಕರಿಂದ ಮಕ್ಕಳಿಗೆ ಏನೆಲ್ಲಾ ಲಭಿಸುವುದು ಎಂದೂ ಅವು ಯಾವ ರೀತಿ ಪೌರಪ್ರಜ್ಞೆಯನ್ನು ಮೂಡಿಸುವಲ್ಲಿ ಸಹಾಯಕವಾಗುವುದೆಂದೂ ತರಗತಿಯಲ್ಲಿ ಲಘು ಚರ್ಚೆಯೊಂದನ್ನು ನಡೆಸಬೇಕು. ಚರ್ಚೆಯಲ್ಲಿ ಮೂಡಿಬರುವ ಅಭಿಪ್ರಾಯಗಳನ್ನು ಈ ಕೆಳಗೆ ನೀಡಿರುವ ವಿಷಯಗಳಿಗೆ ಸಂಬಂಧಿಸಿಕೊಂಡು ಕ್ರೋಡೀಕರಿಸಬೇಕು.

- ಕಲಿಕೆದಾರ ಮನೆಯಿಂದ ಕಲಿಯುವ ವಾಸ್ತವಿಕತೆಗಳ ಮುಂದುವರಿಕೆಯು ಶಾಲೆಯಲ್ಲಿ ನಡೆಯುವುದು.
- ಮನೆಯಿಂದ, ಸಮಾಜದಿಂದ ಲಭಿಸಿದ ಅರಿವನ್ನು ಸಂಪುಷ್ಟಗೊಳಿಸಲೂ, ವೈಜ್ಞಾನಿಕವಾಗಿ ಲಭಿಸುವಂತೆ ಮಾಡಲೂ ಇರುವ ಔಪಚಾರಿಕ ವಿಧಾನವು ಶಿಕ್ಷಣವಾಗಿದೆ.
- ಸಮಾಜದ ಹಾಗೂ ವ್ಯಕ್ತಿಗಳ ಸರ್ವತೋಮುಖ ವಿಕಾಸಕ್ಕೆ ಅಗತ್ಯವಿರುವುದನ್ನೆಲ್ಲಾ ನೀಡುವುದು ಶಿಕ್ಷಣದ ಉದ್ದೇಶವಾಗಿದೆ.
- ಇದಕ್ಕೆ ಸೂಕ್ತವಾದ ವಿದ್ಯಾಭ್ಯಾಸ ಧೋರಣೆಗಳನ್ನು ಎಲ್ಲಾ ಪ್ರಜಾಪ್ರಭುತ್ವ ದೇಶಗಳು ರೂಪಿಸುವುದು.

ಸಮಾಜದ ಸಾರ್ವಜನಿಕ ಹಿತಾಸಕ್ತಿಯನ್ನು ಸಂರಕ್ಷಿಸಲು ವ್ಯಕ್ತಿಯನ್ನು ವಿದ್ಯಾಭ್ಯಾಸ ಧೋರಣೆಯು ಪ್ರಾಪ್ತರನ್ನಾಗಿಸುತ್ತದೆ.

**ಚಟುವಟಿಕೆ: ವಾರ್ಷಿಕ ಕ್ಯಾಲೆಂಡರ್ ನಿರ್ಮಾಣ**
ಪೌರ ಪ್ರಜ್ಞೆಯನ್ನು ರೂಪುಗೊಳಿಸಲು ಶಾಲಾ ಹಂತದಲ್ಲಿ ನಿರ್ವಹಿಸಬಹುದಾದ ಚಟುವಟಿಕೆಗಳನ್ನು ಕೆಳಗೆ ನೀಡಲಾಗಿದೆ.

- ಸಹವಾಸ ಶಿಬಿರ
- ಗೃಹ ಸಂದರ್ಶನ
- ಆದರ್ಶ ವ್ಯಕ್ತಿಗಳನ್ನು ಶಾಲೆಗೆ ಕರೆತಂದು ಗೌರವಿಸುವುದು.
- ಇತರ ಮಾರ್ಗಗಳನ್ನು ಅನ್ವೇಶಿಸುವುದು.
- ವಿವಿಧ ದುರಂತ ನಿವಾರಣಾ ಚಟುವಟಿಕೆಗಳಲ್ಲಿ ಭಾಗವಹಿಸುವುದು.
- ಮ್ಯೂಸಿಯಂ ಮತ್ತು ಪ್ರಯೋಗ ಶಾಲೆಗಳನ್ನು ನಿರ್ಮಿಸುವುದು.
- ಉತ್ಪನ್ನಗಳ ಮಾರಾಟ ಮೇಳಗಳನ್ನು ಸಂಘಟಿಸುವುದು.

- ಮೆಡಿಕಲ್ ಕ್ಯಾಂಪ್
- ಶಾಲಾ ಪಾರ್ಲಿಮೆಂಟ್ ಚುನಾವಣೆ
- ವಿವಿಧ ಸಾಮಾಜಿಕ ಸಮಸ್ಯೆಗಳನ್ನು ಚರ್ಚೆ ಮಾಡುವುದು.
- ಸ್ಥಳೀಯ ಆಡಳಿತ ಸಂಸ್ಥೆಯೊಂದಿಗೆ ಸಹಕರಿಸಿಕೊಂಡು ಶಾಲೆಯ ಹತ್ತಿರದಲ್ಲಿರುವ ಎಲ್ಲಾ ಸಮಸ್ಯೆಗಳ ಪರಿಹಾರ ಕಾರ್ಯದಲ್ಲಿ ನೇರವಾಗಿ ಪಾಲ್ಗೊಳ್ಳುವುದು.

## ಸಂಘಟನೆಗಳು

ಮಕ್ಕಳ ಗಮನಕ್ಕೆ ಬರಬಹುದಾದ ವಿವಿಧ ಸಂಘಟನೆಗಳ ಹೆಸರುಗಳನ್ನು ಚಾರ್ಟ್ ಪೇಪರ್‌ನಲ್ಲಿ ಬರೆದು ತರಗತಿಯಲ್ಲಿ ಮಂಡಿಸಬೇಕು. ಪ್ರತಿಯೊಂದು ಸಂಘಟನೆಗಳೂ ಯಾಕಾಗಿ ನೆಲೆನಿಂತಿವೆಯೆಂದೂ ಅವುಗಳ ಉದ್ದೇಶಗಳೇನೆಂದೂ ಕಂಡುಕೊಳ್ಳಲು ಮಕ್ಕಳಲ್ಲಿ ತಿಳಿಸಬೇಕು.

ಮಕ್ಕಳ ಪ್ರತಿಕ್ರಿಯೆಗಳನ್ನು ವಿಶ್ಲೇಷಿಸಿದ ಮೇಲೆ ಈ ಕೆಳಗಿನಂತೆ ಕ್ರೋಡೀಕರಿಸಬೇಕು.

- ಎಲ್ಲಾ ಸಂಘಟನೆಗಳು ವ್ಯಕ್ತಿಗಳ ಒಕ್ಕೂಟಗಳಾಗಿವೆ.
- ಎಲ್ಲಾ ಸಂಘಟನೆಗಳು ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡಲು ರೂಪುಗೊಳ್ಳುತ್ತವೆ.
- ಸಂಘಟನಾ ಚಟುವಟಿಕೆಗಳ ಮೂಲಕ ಸಂಘಪ್ರಜ್ಞೆ ಹಾಗೂ ಕರ್ತವ್ಯಪ್ರಜ್ಞೆಯು ರೂಪುಗೊಳ್ಳುತ್ತವೆ.
- ಪ್ರಜಾಪ್ರಭುತ್ವ ಪರವಾಗಿ ಕಾರ್ಯನಿರ್ವಹಿಸುವ ಎಲ್ಲಾ ಸಂಘಟನೆಗಳು ಪೌರಪ್ರಜ್ಞೆಯನ್ನು ರೂಪುಗೊಳಿಸಲು ಸಹಾಯಕವಾಗುವುದು.

## ಮಾಧ್ಯಮಗಳು

ಪೌರ ಪ್ರಜ್ಞೆಯನ್ನೊಳಗೊಂಡ ವಾರ್ತೆಗಳು, ಪೌರಪ್ರಜ್ಞೆಯ ಉತ್ತಮ ಉದಾಹರಣೆಗಳು, ಚಿತ್ರಗಳು, ವಾರ್ತಾ ತುಣುಕುಗಳನ್ನು ಮಕ್ಕಳಲ್ಲಿ ಓದಲು ತಿಳಿಸಬೇಕು. ಮಕ್ಕಳ ಅಭಿಪ್ರಾಯವನ್ನು ಗಮನವಿಟ್ಟು ವಿಶ್ಲೇಷಿಸಿದ ನಂತರ ಕೆಳಗೆ ನೀಡಿದ ಪ್ರಕಾರ ಕ್ರೋಡೀಕರಿಸಬೇಕು.

- ನಿರಕ್ಷರರಾದ ಪೌರರ ಮೇಲೆ ಪ್ರಭಾವ ಬೀರಲು ಇಲೆಕ್ಟ್ರೋನಿಕ್ ಮಾಧ್ಯಮಗಳಿಗೆ ಸಾಧ್ಯವಾಗುವುದು.
- ಮಾಧ್ಯಮಗಳನ್ನು ಕುರುಡಾಗಿ ನಂಬಬಾರದು.
- ಮಾಧ್ಯಮಗಳ ಸ್ವಾರ್ಥ ಆಸಕ್ತಿಯನ್ನು ಪೌರ ಸಮಾಜದ ಮೇಲೆ ಹೇರುವ ಪ್ರಯತ್ನವನ್ನು ತಡೆಯಲು ಪೌರಪ್ರಜ್ಞೆಯುಳ್ಳವರಿಗೆ ಸಾಧ್ಯವಾಗಬೇಕು.
- ಪೌರ ಪ್ರಜ್ಞೆಯನ್ನು ರೂಪಿಸಲು ಮಾಧ್ಯಮಗಳನ್ನು ಫಲಪ್ರದವಾಗಿ ಉಪಯೋಗಿಸಲು ಸಾಧ್ಯವಾಗಬೇಕು.

## ಪ್ರಜಾಪ್ರಭುತ್ವ

ಪ್ರಜಾಪ್ರಭುತ್ವದ ಕುರಿತು ಮಕ್ಕಳಿಗೆ ತಿಳಿದಿರುವ ಪೂರ್ವ ಮಾಹಿತಿಯನ್ನು ಪರಿಶೋಧಿಸಬೇಕು. ಮಕ್ಕಳ ಪೂರ್ವಜ್ಞಾನವನ್ನು ಪರಿಶೀಲಿಸಿದ ಬಳಿಕ ಪ್ರಜಾಪ್ರಭುತ್ವವು ಪೌರಪ್ರಜ್ಞೆಯನ್ನು ರೂಪಿಸಲು ಹೇಗೆ ಸಹಾಯಕವಾಗುವುದೆಂದು ಚರ್ಚೆಯನ್ನು ಮಾಡಬೇಕು. ಚರ್ಚೆಯ ನಂತರ ಮಕ್ಕಳ ಅಭಿಪ್ರಾಯದ ಆಧಾರದಲ್ಲಿ ಪೌರಪ್ರಜ್ಞೆಯನ್ನು ವಿಕಾಸಗೊಳಿಸುವಲ್ಲಿ ಪ್ರಜಾಪ್ರಭುತ್ವದ ಸಾಧ್ಯತೆಗಳನ್ನು ಈ ಕೆಳಗಿನಂತೆ ಕ್ರೋಡೀಕರಿಸಬೇಕು.

- ಪ್ರಜಾಪ್ರಭುತ್ವವು ಕೇವಲ ಆಡಳಿತ ವ್ಯವಸ್ಥೆಯಲ್ಲ
- ಪ್ರಜಾಪ್ರಭುತ್ವವು ಜನಕೇಂದ್ರೀಕೃತವಾಗಿದೆ.
- ಜನರ ಸ್ವಾತಂತ್ರ್ಯಕ್ಕೂ ಹಕ್ಕುಗಳಿಗೂ ಪ್ರಜಾಪ್ರಭುತ್ವವು ಪ್ರಾಧಾನ್ಯವನ್ನು ನೀಡುವುದು.
- ಅದರ ಉದ್ದೇಶವು ಸಾರ್ವಜನಿಕ ಕ್ಷೇಮವಾಗಿದೆ.
- ವೈವಿಧ್ಯಗಳನ್ನು ಅಂಗೀಕರಿಸಲು ಹಾಗೂ ಪ್ರೋತ್ಸಾಹಿಸಲು ಪ್ರಜಾಪ್ರಭುತ್ವದಲ್ಲಿ ಸಾಧ್ಯವಿದೆ.
- ಸರಕಾರದ ಧೋರಣೆಗಳನ್ನು ಎದುರಿಸಲು ಮತ್ತು ಅಸಮ್ಮತಿಯನ್ನು ವ್ಯಕ್ತಪಡಿಸಲು ಪ್ರಜಾಪ್ರಭುತ್ವದಲ್ಲಿ ಅವಕಾಶವಿದೆ.

- ಪ್ರಜಾಪ್ರಭುತ್ವದ ಸಬಲೀಕರಣವು ಸ್ವಾಭಾವಿಕವಾಗಿ ಪೌರಪ್ರಜ್ಞೆಯನ್ನು ಬೆಳೆಸುವುದು.

## ಉತ್ತಮ ಮಾದರಿಗಳನ್ನು ಪರಿಚಯಿಸುವ

ಪಾಠಭಾಗದಲ್ಲಿ ನೀಡಿರುವ ಅಥವಾ ಅಧ್ಯಾಪಕರು ಪರಿಚಯಿಸಿದ ಉತ್ತಮ ಮಾದರಿಯ ಕುರಿತಾಗಿ ಲಘು ಟಿಪ್ಪಣಿಯೊಂದನ್ನು ತಯಾರಿಸಿ ಮಕ್ಕಳಿಗೆ ಓದಲು ನೀಡಬೇಕು.

ಓದಿದ ನಂತರ, ಮಕ್ಕಳಿಗೆ ಅವರ ಅಭಿಪ್ರಾಯವನ್ನು ಹೇಳುವ ಅವಕಾಶವನ್ನು ನೀಡಬೇಕು. ಈ ರೀತಿಯ ಇನ್ನಷ್ಟು ಮಾದರಿಗಳನ್ನು ಕಂಡುಕೊಳ್ಳಲು ಮಕ್ಕಳನ್ನು ಪ್ರೋತ್ಸಾಹಿಸಬೇಕು.

ಈ ಚಟುವಟಿಕೆಯನ್ನು ಕೆಳಗಿನಂತೆ ಕ್ರೋಡೀಕರಿಸಬೇಕು.

- ಈ ಮಾದರಿಗಳು ವ್ಯಕ್ತಿಗಳು ಯಾವ ರೀತಿಯಲ್ಲಿ ಆತ್ಮಾರ್ಥತೆಯಿಂದ, ನಿಸ್ವಾರ್ಥತೆಯಿಂದ ಕಾರ್ಯನಿರ್ವಹಿಸಿರುವರು ಎಂದು ತಿಳಿದುಕೊಳ್ಳಬೇಕು.
- ಜಯ ಮತ್ತು ಪರಾಜಯಗಳ ಕುರಿತು ಚಿಂತಿಸದೆ ಇವರು ಕಾರ್ಯಪ್ರವೃತ್ತರಾದರು.
- ಅರ್ಪಣಾ ಮನೋಭಾವದಿಂದ ಇವರು ತಮ್ಮ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು.
- ಇವರ ಚಿಂತನೆಗಳೂ, ಮಾತುಗಳೂ, ಪ್ರವೃತ್ತಿಯೂ ಎಲ್ಲವೂ ಮಾನವ ಕ್ಷೇಮಕ್ಕೆ ಆಗಿತ್ತು. ಈ ಗುಣವೇ ಅವರನ್ನು ಉಳಿದವರಿಂದ ಭಿನ್ನವಾಗಿಸಿತ್ತು.

ಪೌರ ಪ್ರಜ್ಞೆಯನ್ನು ರೂಪಿಸಲು ಯಾವೆಲ್ಲಾ ಚಟುವಟಿಕೆಗಳು ಶಾಲೆಯಲ್ಲಿ ನಡೆಯುತ್ತವೆ ಎಂದು ಮಕ್ಕಳು ಪಟ್ಟಿ ತಯಾರಿಸಲಿ.

ಪ್ರತಿಯೊಂದು ಶಾಲೆಯಲ್ಲಿ ನಡೆಸಲು ಉದ್ದೇಶಿಸಿದ ಕಾರ್ಯಚಟುವಟಿಕೆಗಳನ್ನೂ ಪಟ್ಟಿಯಲ್ಲಿ ಸೇರಿಸಬೇಕು. ಕಳೆದ ಒಂದು ವರ್ಷದಲ್ಲಿ ಶಾಲೆಯಲ್ಲಿ ನಡೆಸಿದ ಕಾರ್ಯಗಳನ್ನೂ ಪಟ್ಟಿಯಲ್ಲಿ ಬರೆಯಬೇಕು. ಪಟ್ಟಿಯಲ್ಲಿರುವ ಪ್ರತಿಯೊಂದು ಚಟುವಟಿಕೆಗಳೂ ಮಗುವಿನಲ್ಲಿ ಪೌರಪ್ರಜ್ಞೆಯನ್ನು ಹೇಗೆ ಬೆಳೆಸಿತೆಂದು ವಿಶ್ಲೇಷಿಸಬೇಕು. ಹೆಚ್ಚಿನ ಕಾರ್ಯ ಚಟುವಟಿಕೆಗಳನ್ನು ನಡೆಸಲು ಪ್ರಯತ್ನಿಸಬೇಕು.

## ಪೌರಪ್ರಜ್ಞೆಯೂ ನೈತಿಕತೆಯೂ:

ನಮ್ಮ ಸಮಾಜವು ಸಾಮಾನ್ಯವಾಗಿ ಸರಿ ಎಂದೂ ತಪ್ಪು ಎಂದೂ ವ್ಯಾಖ್ಯಾನಿಸುವ ಕೆಲವೊಂದು ವಿಷಯಗಳನ್ನು, ಚಿಂತನೆಗಳನ್ನು ವರ್ಗೀಕರಿಸಿ ಬರೆಯಲು ತಿಳಿಸಬೇಕು. ನಮ್ಮ ಸಮಾಜವು ಸರಿ ಎಂದು ಅಂಗೀಕರಿಸಿದವುಗಳನ್ನು 'ಸರಿ' ಎಂಬ ಕಾಲಂನಲ್ಲಿಯೂ, ತಪ್ಪೆಂದು ತಿಳಿದವುಗಳನ್ನು 'ತಪ್ಪು' ಎಂಬ ಕಾಲಂನಲ್ಲಿಯೂ ಸೇರಿಸಬೇಕು. ಅಭಿಪ್ರಾಯ ವ್ಯತ್ಯಾಸವಿರುವುದನ್ನು ಮೂರನೆಯ ಕಾಲಂನಲ್ಲಿ ಸೇರಿಸಬೇಕು.

ಚಟುವಟಿಕೆಯ ಕೊನೆಯಲ್ಲಿ ಮೂರು ಕಾಲಂನಲ್ಲಿರುವವುಗಳನ್ನು ಪರಸ್ಪರ ಹೋಲಿಸಿ, ಈ ಕೆಳಗಿನಂತೆ ಕ್ರೋಡೀಕರಿಸಬೇಕು.

- ನಮ್ಮ ಸಮಾಜವು ಅಂಗೀಕರಿಸುವುದನ್ನು ಸರಿ (ನೈತಿಕ) ಎಂದೂ, ಅಂಗೀಕರಿಸದಿರುವುದನ್ನು (ನೈತಿಕವಲ್ಲದ) ತಪ್ಪು ಎಂದೂ ಹೇಳಬಹುದು.
- ಒಂದು ವಿಷಯವನ್ನು ಕುರಿತು ನೈತಿಕ ಮತ್ತು ನೈತಿಕವಲ್ಲ ಎಂಬ ಅಭಿಪ್ರಾಯ ವ್ಯತ್ಯಾಸ ವುಂಟಾದರೆ ಅದನ್ನು ಮೂರನೇ ಕಾಲಂನಲ್ಲಿ ಸೇರಿಸಬೇಕು.
- ಹೇಗಿದ್ದರೂ ಆಯಾ ಕಾಲಘಟ್ಟಗಳಲ್ಲಿ ವಿವಿಧ ಸಮಾಜದಲ್ಲಿ ನೆಲೆನಿಂತಿರುವ ನೈತಿಕ ಪ್ರಜ್ಞೆಯ ಆಧಾರದಲ್ಲಿಯೇ ಪ್ರತಿಯೊಂದು ಸಮಾಜವೂ ಕಾರ್ಯಪ್ರವೃತ್ತವಾಗುವುದು.
- ಸಮಾಜದ ಎಲ್ಲಾ ಸಂಬಂಧಗಳ ಹಾಗೂ ಕಾರ್ಯಚಟುವಟಿಕೆಗಳ ಮೇಲೆ ಆಯಾ ಸಮಾಜದಲ್ಲಿ ನೆಲೆನಿಂತಿರುವ ನೈತಿಕತೆಯು ಪ್ರಭಾವ ಬೀರುತ್ತದೆ.
- ಸ್ವಾಭಾವಿಕವಾಗಿ ರಾಷ್ಟ್ರ ಮತ್ತು ವ್ಯಕ್ತಿಯ ನಡುವಿನ ಸಂಬಂಧದ ಮೇಲೆಯೂ ನೈತಿಕತೆಯು ಪ್ರಭಾವ ಬೀರುವುದು.
- ಸಮಾಜದಲ್ಲಿ ನೆಲೆ ನಿಂತಿರುವ ನೈತಿಕತೆಯು ರಾಷ್ಟ್ರದ ಕ್ಷೇಮವನ್ನು ಉದ್ದೇಶಿಸಿರುವುದು.
- ಪೌರಪ್ರಜ್ಞೆಯ ಉದ್ದೇಶವೂ ದೇಶವೊಂದರ ಕ್ಷೇಮವಾಗಿದೆ.

| ನೈತಿಕ ಚಟುವಟಿಕೆಗಳು | ನೈತಿಕವಲ್ಲದ ಚಟುವಟಿಕೆಗಳು |
|---|---|
| • ಜನರಲ್ಲಿ ಮತ ಯಾಚಿಸಿ ಚುನಾವಣೆಯಲ್ಲಿ ಜಯ ಗಳಿಸುವುದು | • ಚುನಾವಣೆಯಲ್ಲಿ ಮೋಸದ ವಿಧಾನದ ಮೂಲಕ ಜಯ ಗಳಿಸುವುದು. |
| • ಭ್ರಷ್ಟಾಚಾರ ನಡೆಸದಿರುವುದು ಅದನ್ನು ಬೆಂಬಲಿಸುವುದಿಲ್ಲ. | • ಭ್ರಷ್ಟಾಚಾರದಲ್ಲಿ ತೊಡಗುವುದೂ ಅದನ್ನು ಬೆಂಬಲಿಸುವುದು. |

## ಪೌರ ಪ್ರಜ್ಞೆ ಹಾಗೂ ಸವಾಲುಗಳು

ಸವಾಲು ಎನ್ನುವುದರಿಂದ ಉದ್ದೇಶಿಸುವುದೇನೆಂದು ಉದಾಹರಣೆ ಸಹಿತ ಮಕ್ಕಳು ಸ್ಪಷ್ಟಪಡಿಸಬೇಕು.

ಉದ್ದೇಶವೊಂದನ್ನಿಟ್ಟುಕೊಂಡು ಮುನ್ನಡೆಯುವಾಗ ಅದಕ್ಕೊದಗುವ ತಡೆಗಳು ಸವಾಲುಗಳಾಗಿವೆ. ಪೌರಪ್ರಜ್ಞೆಯನ್ನು ಬೆಳೆಸುವಾಗ ಆಂತರಿಕ ಮತ್ತು ಬಾಹ್ಯ ಸವಾಲುಗಳನ್ನು ಎದುರಿಸಬೇಕಾಗುವುದು. ವ್ಯಕ್ತಿಯೋರ್ವನ ಮನಸ್ಸಿನಲ್ಲಾಗುವ ಅಡೆತಡೆಗಳು ಆಂತರಿಕ ಸವಾಲುಗಳಾಗಿವೆ. ಪೌರಪ್ರಜ್ಞೆಯನ್ನು ನಿರ್ಣಯಿಸುವ ಘಟಕಗಳಲ್ಲಿ ಹೆಚ್ಚಿನವು ಪ್ರತಿಕೂಲವಾಗಿರುವುದರಿಂದ ಅವುಗಳನ್ನು ಬಾಹ್ಯ ಸವಾಲುಗಳೆಂದು ಕರೆಯಬಹುದು. ಬಾಹ್ಯ ಸವಾಲುಗಳ ಕುರಿತಾಗಿ ಪಾಠಭಾಗದಲ್ಲಿ ಪರಾಮರ್ಶಿಸುವುದಿಲ್ಲ.

ಅನುಕೂಲಕರ ಮತ್ತು ಪ್ರತಿಕೂಲಕರ ಸನ್ನಿವೇಶಗಳನ್ನು ಹೊಂದಿರುವ ಭಾರತದಂತಹ ದೇಶಗಳಲ್ಲಿ ಈ ಸವಾಲುಗಳು ಯಾವ ರೀತಿ ವ್ಯಕ್ತಿಯೋರ್ವ ಸ್ವತಃ ಎದುರಿಸಬಹುದೆಂಬ ಅನ್ವೇಷಣೆಯು ಪಾಠಭಾಗದಲ್ಲಿದೆ.

ಕೆಳಗೆ ನೀಡಿರುವಂತಹ ಚಾರ್ಟ್ ಒಂದನ್ನು ತಯಾರಿಸಿ, ತರಗತಿಯಲ್ಲಿ ಪ್ರದರ್ಶಿಸಿ ಈ ಪಾಠಭಾಗವನ್ನು ಮಂಡಿಸಬೇಕು.

| ಸಾರ್ವಜನಿಕ ಹಿತಾಸಕ್ತಿ | ಸ್ವ ಹಿತಾಸಕ್ತಿ | ಸ್ವಾರ್ಥ ಹಿತಾಸಕ್ತಿ |
|---|---|---|
| • ಎಲ್ಲರಿಗೂ ಕೆಲಸ ಸಿಗಬೇಕು | • ನನಗೆ ಕೆಲಸ ಸಿಗಬೇಕು | • ಯಾರಿಗೂ ಕೆಲಸ ಸಿಗದಿದ್ದರೂ ನನಗೆ ಕೆಲಸ ಸಿಗಬೇಕು. . ಅದಕ್ಕಾಗಿ ಯಾವುದಕ್ಕೂ ನಾನು ತಯಾರಿ |
| • ಬಯಲುಗಳನ್ನು ಕೃಷಿಯೇತರ ಉಪಯೋಗಗಳಿಗೆ ಬಳಸಬಾರದು | • ನಾನು ಬಯಲುಗಳನ್ನು ಕೃಷಿಯೇತರ ಉಪಯೋಗಳಿಗೆ ಬಳಸಬಾರದು. | • ಲಾಭಕರವಾದ ಯಾವುದೇ ಚಟುವಟಿಕೆಗಳಿಗೂ ನಾನು ಬಯಲುಗಳನ್ನು ಉಪಯೋಗಿಸುವೆನು. |
| • ಎಲ್ಲರೂ ಸರಿಯಾದ ವಿಧಾನದ ಮೂಲಕ ಪರೀಕ್ಷೆ ಬರೆದು ಪಾಸಾಗಬೇಕು | • ನಾನು ಸರಿಯಾದ ವಿಧಾನದ ಮೂಲಕ ಪರೀಕ್ಷೆ ಬರೆದು ಪಾಸಾಗಬೇಕು. | • ಪಾಸಾಗಲು ಯಾವುದೇ ವಿಧಾನವನ್ನಾದರೂ ನಾನು ಅನುಸರಿಸುವೆ |
| • ಲಂಚವನ್ನು ಕೊಡುವುದು ಪಡೆಯುವುದು ಸರಿಯಲ್ಲ | • ನಾನು ಲಂಚವನ್ನು ಕೊಡುವುದು ಅಥವಾ ಪಡೆಯುವುದು ಮಾಡುವುದಿಲ್ಲ. | • ನಾನು ಲಂಚವನ್ನು ಕೊಡುವೆನು ಮತ್ತು ಪಡೆಯುವೆನು. |

ಈ ಪಟ್ಟಿಯನ್ನು ಮತ್ತಷ್ಟು ವಿಸ್ತರಿಸಬಹುದು. ಚಾರ್ಟಿನಲ್ಲಿ ಬರೆದಿರುವುದನ್ನು ಮಕ್ಕಳು ಓದಬೇಕು. ಅವರು ತಮ್ಮಲ್ಲಿಯೇ ಈ ಕುರಿತಾಗಿ ಚರ್ಚಿಸಬೇಕು. ಆನಂತರ ಕೆಳಗಿನ ಅಂಶಗಳನ್ನು ಚಾರ್ಟಿನಲ್ಲಿ ಬರೆದು ಕ್ರೋಢೀಕರಣ ಮಾಡಬೇಕು.

- ಸಾರ್ವಜನಿಕ ಹಿತಾಸಕ್ತಿಯು ಸಂರಕ್ಷಿಸಲ್ಪಡುವಾಗ ಸ್ವಾಭಾವಿಕವಾಗಿ ಸ್ವ ಹಿತಾಸಕ್ತಿಯು ಸಂರಕ್ಷಿಸಲ್ಪಡುವುದು. ಅಲ್ಲಿ ಸ್ವಾರ್ಥ ಹಿತಾಸಕ್ತಿಗೆ ಅವಕಾಶವಿರುವುದಿಲ್ಲ.

- ಸಾರ್ವಜನಿಕ ಹಿತಾಸಕ್ತಿಯು ಸಂರಕ್ಷಿಸಲ್ಪಡದಿದ್ದರೆ, ಸ್ವಹಿತಾಸಕ್ತಿ ಈಡೇರುವುದಿಲ್ಲ ಮತ್ತು ಅದನ್ನು ಈಡೇರಿಸಲು ಯಾವುಸಿದ್ಧರಾಗುತ್ತಾರೆ. ಇಲ್ಲಿ ಸ್ವಾರ್ಥತೆಯು ಅತ್ಯಂತ ಪ್ರಬಲವಾಗಿರುವುದು.
- ಸ್ವಾರ್ಥ ಹಿತಾಸಕ್ತಿ ಬಲಗೊಳ್ಳುವಾಗ ಸಾರ್ವಜನಿಕ ಹಿತಾಸಕ್ತಿ ಮತ್ತು ಸ್ವಹಿತಾಸಕ್ತಿಗಳು ವ್ಯತಿರಿಕ್ತವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಇವೆರಡೂ ಪರಸ್ಪರ ಘರ್ಷಣೆಗೊಳಗಾಗುತ್ತದೆ.
- ಸ್ವ ಹಿತಾಸಕ್ತಿ ಮತ್ತು ಸಾರ್ವಜನಿಕ ಹಿತಾಸಕ್ತಿಯ ನಡುವಿನ ಘರ್ಷಣೆಯು ಪೌರಪ್ರಜ್ಞೆಯ ಮೇಲಿನ ಅತೀ ದೊಡ್ಡ ಸವಾಲಾಗಿವೆ.
- ಸಾರ್ವಜನಿಕ ಹಿತಾಸಕ್ತಿಯು ಸಂರಕ್ಷಿಸಲ್ಪಡದ ಸಂದರ್ಭದಲ್ಲಿಯೂ ಜನರಿಗೆ ಹೇಗೆ ಪೌರಪ್ರಜ್ಞೆಯುನ್ನು ಪಾಲಿಸಿಕೊಂಡು ಸಾರ್ವಜನಿಕ ಹಿತಾಸಕ್ತಿಗಾಗಿ ಕಾರ್ಯನಿರತರಾಗಲಿರುವ ಮಾರ್ಗಗಳನ್ನು ಪಾಠಭಾಗದಲ್ಲಿ ನೀಡಲಾಗಿದೆ.

## ಸಮಾಜಶಾಸ್ತ್ರ ವಿಜ್ಞಾನದ ಕಲಿಕೆ ಹಾಗೂ ಪೌರಪ್ರಜ್ಞೆ

ಕೆಳಗೆ ನೀಡಿರುವ ಪ್ರಶ್ನೆಗಳನ್ನು ಕೇಳುವ ಮೂಲಕ ಪಾಠಭಾಗವನ್ನು ಆರಂಭಿಸಬಹುದು.


- ಸಮಾಜ ವಿಜ್ಞಾನ ಕಲಿಕೆ ಎಂದರೇನು?
- ಸಮಾಜ ವಿಜ್ಞಾನದಲ್ಲಿ ನಾವು ಯಾವುದನ್ನೆಲ್ಲ ಕಲಿಯುತ್ತೇವೆ?
- ಸಮಾಜ ವಿಜ್ಞಾನ ಕಲಿಕೆಯು ಪೌರಪ್ರಜ್ಞೆಯ ರೂಪೀಕರಣಕ್ಕೆ ಸಹಾಯಕವೇ?

ಮಕ್ಕಳ ಪ್ರತಿಕ್ರಿಯೆಗಳ ಆಧಾರದಲ್ಲಿ ಕೆಳಗಿನ ರೀತಿಯಲ್ಲಿ ಕ್ರೋಢೀಕರಿಸಬೇಕು.

ಸಾಮಾಜಿಕ ಜೀವನದ ವಿವಿಧ ವಲಯಗಳ ಕುರಿತಾದ ವೈಜ್ಞಾನಿಕವಾದ ಕಲಿಕೆಯ ಮೂಲಕ ಹಾಗೂ ಮೌಲ್ಯಮಾಪನದ ಮೂಲಕ ಸಾಮಾಜಿಕ ಜೀವನವನ್ನು ಉತ್ತಮಪಡಿಸುವ ವಿಧಾನಗಳನ್ನು ಸಮಾಜ ವಿಜ್ಞಾನವು ಅನ್ವೇಷಿಸುವುದು. ಅಂದರೆ ಸಮಾಜದ ಕ್ಷೇಮ–ಪೌರಪ್ರಜ್ಞೆಯು ಉದ್ದೇಶವೂ ಇದುವೇ ಆಗಿದೆಯಲ್ಲವೇ?


### ಎ.ಪಿ.ಜೆ. ಅಬ್ದುಲ್ ಕಲಾಂ

ತಮಿಳ್ನಾಡಿನ ರಾಮೇಶ್ವರದಲ್ಲಿ ಜನನ. ಆರ್ಥಿಕವಾಗಿ ಅತ್ಯಂತ ಹಿಂದುಳಿದಿದ್ದರೂ ಕಠಿಣ ಪ್ರಯತ್ನದಿಂದ ಕಲಿಕೆಯುನ್ನು ಪೂರ್ತಿಗೊಳಿಸಿದರು. ತನ್ನ ಜೀವನವನ್ನು ಪೂರ್ತಿಯಾಗಿ ದೇಶಸೇವೆಗಾಗಿ ಮುಡಿಪಾಗಿಟ್ಟರು. ಭಾರತದ ಮಿಸೈಲ್ ಮ್ಯಾನ್ ಎಂದು ಕರೆಯಲ್ಪಟ್ಟರು. ಭಾರತದ ರಾಷ್ಟ್ರಪತಿ ಪದವಿಯನ್ನು ಅಲಂಕರಿಸಿದ ಅವರನ್ನು ಭಾರತರತ್ನ ನೀಡಿ ಆದರಿಸಲಾಯಿತು.



### ಮದರ್ ತೆರೆಸಾ

ಕುಷ್ಠ ರೋಗಿಗಳಿಗಾಗಿ ಜೀವನವನ್ನು ಮುಡಿಪಾಗಿಟ್ಟರು. ಮಿಶನರೀಸ್ ಆಫ್ ಚಾರಿಟಿ ಎಂಬ ಸಂಸ್ಥೆಯ ಮೂಲಕ ಅವರು ಈ ಸೇವೆಯನ್ನು ನಿರ್ವಹಿಸಿದರು. ವಿದೇಶದಿಂದ ಬಂದು ಭಾರತದ ಪೌರತ್ವವನ್ನು ಪಡೆದು ಇಲ್ಲಿ ಸೇವೆಯನ್ನು ಮಾಡಿದ ಈ ಮಹಾನ್ ಮಹಿಳೆಯನ್ನು ರಾಷ್ಟ್ರವು ಭಾರತರತ್ನ ಬಿರುದನ್ನಿತ್ತು ಗೌರವಿಸಿತು.




### ಮಾಯಿಲಮ್ಮ



ಪಾಲಕ್ಕಾಡ್ ಜಿಲ್ಲೆಯಲ್ಲಿ ಪ್ಲಾಚೀಮಡದಲ್ಲಿ ಜನನ. ಸಾಮಾನ್ಯ ಗೃಹಿಣಿಯಾಗಿರುವ ಇವರು ಕೊಕೋಕೋಲ ಕಂಪೆನಿಯು ನಡೆಸುವ ಜಲಶೋಷಣೆಯ ವಿರುದ್ಧ ಆ ಪ್ರದೇಶದ ಜನರನ್ನು ಸಂಘಟಿಸಿ ಪ್ರಭಲವಾದ ಚಳುವಳಿಯನ್ನು ನಡೆಸಿದರು. ಚಳುವಳಿಯು ಯಶಸ್ವಿಯಾಗಿ ಕಂಪೆನಿಯು ಮುಚ್ಚಿತು.

### ದಶರಥ ಮಾಂಜಿ



ಬಿಹಾರದ ಸಾಮಾನ್ಯ ಗ್ರಾಮೀಣ ವ್ಯಕ್ತಿ. ಅನೇಕ ವರ್ಷಗಳ ನಿರಂತರವಾದ ಅವಿರತ ಪ್ರಯತ್ನಗಳ ನಂತರ ಗುಡ್ಡವೊಂದನ್ನು ಕಡಿದು ತನ್ನ ಊರಿಗೆ ರಸ್ತೆಯೊಂದನ್ನು ನಿರ್ಮಿಸಿದನು.

## ? ಮೌಲ್ಯನಿರ್ಣಯಕ್ಕಿರುವ ಪ್ರಶ್ನೆಗಳು

- ಪೌರಪ್ರಜ್ಞೆ ಎಂಬ ಆಶಯವನ್ನು ನಿರ್ವಚಿಸಿರಿ.
- ಸಮಾಜ ವಿಜ್ಞಾನ ಕಲಿಕೆಯು ಪೌರಪ್ರಜ್ಞೆಯ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ?
- ಪೌರ ಪ್ರಜ್ಞೆಯು ಎದುರಿಸುವ ಸವಾಲುಗಳು ಯಾವುವು? ಪೌರ ಪ್ರಜ್ಞೆಯನ್ನು ಗಳಿಸುವಲ್ಲಿ ಎದುರಾಗುವ ಸಮಸ್ಯೆಗಳಾವುವು?
- ಅನುಕೂಲ ಸನ್ನಿವೇಶಗಳಿಗಿಂತಲೂ ಹೆಚ್ಚಾಗಿ ಪ್ರತಿಕೂಲ ಸನ್ನಿವೇಶಗಳಲ್ಲಿ ಪೌರಪ್ರಜ್ಞೆಯು ಹೆಚ್ಚು ಪ್ರಬಲವಾಗಿರುವುದು. ಸಮರ್ಥಿಸಿರಿ.
- ಪೌರ ಪ್ರಜ್ಞೆಯನ್ನು ರೂಪಿಸುವಲ್ಲಿ ಸಹಾಯಕವಾಗುವ ಮಾಧ್ಯಮಗಳನ್ನು ಅತ್ಯಂತ ಜಾಗರೂಕತೆಯಿಂದಲೂ, ವಿಮರ್ಶಾತ್ಮಕವಾಗಿಯೂ ಉಪಯೋಗಿಸಬೇಕೆಂದು ಹೇಳುವುದು?

## ಆಕರ ಗ್ರಂಥಗಳು


*The Wings of Fire - Dr. A. P. J. Abdul Kalam*

*Simple path - Mother Teresa*

*Something Beautiful for God - Malcolm Muggeridge*

*Here Kala Hajjabba - A Social Worker of Rare Genre*

*Civic Sense - Prakash Pillappa, Ismath Pajeer*

ಮಾಯಿಲಮ್ಮ ಒರು ಜೀವಿತಂ

ಕಂಡಲ್‌ಕಾಡುಗಳ್‌ಕೆಡೆಯಿಲ್ ಎಂಡೆ ಜೀವಿತಂ

ಎಂಡೆ ಜೀವಿತಂ

## ಅಧ್ಯಾಪಕರಿಂದ ಮೌಲ್ಯನಿರ್ಣಯ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸಬೇಕು |
|---|---|---|---|
| 1. ಪೌರ ಪ್ರಜ್ಞೆ ಎಂಬ ಆಶಯವನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. | ☐ | ☐ | ☐ |
| 2. ಪೌರ ಪ್ರಜ್ಞೆಯ ಪ್ರಾಧಾನ್ಯವು ಮಕ್ಕಳಿಗೆ ತಿಳಿಯಿತು. | ☐ | ☐ | ☐ |
| 3. ವಿವಿಧ ಘಟಕಗಳ ಪ್ರಭಾವದಿಂದ ಪೌರಪ್ರಜ್ಞೆಯು ರೂಪುಗೊಂಡಿದೆ ಎಂದು ಮಕ್ಕಳಿಗೆ ತಿಳಿಯಿತು. | ☐ | ☐ | ☐ |
| 4. ಪೌರಪ್ರಜ್ಞೆಯ ಮೇಲೆ ಪ್ರಭಾವ ಬೀರುವ ಘಟಕಗಳಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವ ಮೂಲಕ, ಪೌರ ಪ್ರಜ್ಞೆಯನ್ನು ಬೆಳೆಸಬಹುದೆಂದು ಮಕ್ಕಳಿಗೆ ತಿಳಿಯಿತು. | ☐ | ☐ | ☐ |
| 5. ಪೌರ ಪ್ರಜ್ಞೆಯ ಮೇಲೆ ಪ್ರಭಾವ ಬೀರುವ ಘಟಕಗಳನ್ನು ಪಟ್ಟಿ ಮಾಡಲೂ, ಪ್ರತಿಯೊಂದು ಘಟಕಗಳು ಪೌರ ಪ್ರಜ್ಞೆಯ ಮೇಲೆ ಹೇಗೆ ಪ್ರಭಾವ ಬೀರುವುದೆಂದೂ ವಿವರಿಸಲು ಸಾಧ್ಯವಾಯಿತು. | ☐ | ☐ | ☐ |
| 6. ಪೌರಪ್ರಜ್ಞೆ ಮತ್ತು ನೈತಿಕತೆಯ ನಡುವೆ ಸಂಬಂಧವನ್ನು ಕಲ್ಪಿಸಲು ಸಾಧ್ಯವೆಂದು ಮಕ್ಕಳಿಗೆ ತಿಳಿಯಿತು. | ☐ | ☐ | ☐ |
| 7. ಪೌರ ಪ್ರಜ್ಞೆಯು ರೂಪುಗೊಳ್ಳುವಲ್ಲಿ ವ್ಯಕ್ತಿಯೋರ್ವನು ಎದುರಿಸುವ ಸವಾಲುಗಳೇನೆಂದು ಮಕ್ಕಳು ತಿಳಿದುಕೊಂಡರೆಂದು ಖಾತರಿಪಡಿಸಲಾಯಿತು. | ☐ | ☐ | ☐ |



# 11

# ಸಮಾಜಶಾಸ್ತ್ರ ಕಲಿಕೆಗೊಂದು ಮುನ್ನುಡಿ

ಮಾನವನು ಓರ್ವ ಸಮಾಜ ಜೀವಿಯಾಗಿದ್ದಾನೆ. ಸಂಘ ಜೀವನವಲ್ಲದೆ ಮಾನವ ಜೀವನವು ಅಸಾಧ್ಯವಾಗಿದೆ. ವಿವಿಧ ಕಾಲಗಳಲ್ಲಿ ನಡೆದ ಬದಲಾವಣೆಯಿಂದ ಸಮಾಜ ಜೀವನವು ವಿಕಾಸಗೊಂಡಿದೆ. ಪ್ರದೇಶ ಮತ್ತು ಕಾಲಕ್ಕನುಸಾರವಾಗಿ ಸಾಮಾಜಿಕ ಜೀವನ ರೀತಿಯಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ. ಸಮಾಜದ ಕುರಿತಾದ ವೈವಿಧ್ಯಪೂರ್ಣವಾದ ಅಧ್ಯಯನವು ಸಮಾಜ ಶಾಸ್ತ್ರವಾಗಿದೆ. ಕಾರ್ಯಗಳ ಕುರಿತು ವಸ್ತುನಿಷ್ಠತೆಯಿಂದ ಚರಿತ್ರೆಯು ಪ್ರತಿಪಾದಿಸುವಾಗ ಭಾವನಾತ್ಮಕ ತಳಹದಿಯೊಳಗಿನ ಪರಸ್ಪರ ಮಾನವೀಯ ಸಂಬಂಧಗಳ ಸಮಗ್ರ ವಿಶ್ಲೇಷಣಾತ್ಮಕ ಅಧ್ಯಯನವನ್ನು ಸಮಾಜ ಶಾಸ್ತ್ರವು ವಿವರಿಸುತ್ತದೆ. ಸಂಕೀರ್ಣ ಮತ್ತು ವೈವಿಧ್ಯದಿಂದ ಕೂಡಿದ ಜೀವನದ ಮೇಲೆ ಸೃಜನಾತ್ಮಕ ರಚನೆಯ ಪ್ರಭಾವವಿದೆ. ಕ್ರಾಂತಿಗಳ ಕಾಲದಲ್ಲಿಯೇ ಆರಂಭವಾದ ಈ ಅಧ್ಯಯನ ಶಾಖೆಯು ಬದಲಾವಣೆಯಿಂದ ಹೊರತಾಗಿಲ್ಲ. ಆರಂಭ ಕಾಲದ ಸಮಾಜ ವಿಜ್ಞಾನ ಚಿಂತಕರು ಸಮಾಜ ವಿಜ್ಞಾನ ಅಧ್ಯಯನಕ್ಕೆ ಅವಲಂಬಿಸಿದ ವಿಧಾನಗಳನ್ನು ಈ ಪಾಠಭಾಗದಲ್ಲಿ ವಿಮರ್ಶಿಸಲಾಗಿದೆ. ಆ ಮೂಲಕ ಸಮಾಜ ವಿಜ್ಞಾನವನ್ನು ವಿವಿಧ ವಿಧಾನಗಳ ಮೂಲಕ ಹಂತಗಳಲ್ಲಾಗಿ ವೀಕ್ಷಿಸಲು ಮತ್ತು ಕಲಿಕಾ ತಂತ್ರಗಳನ್ನು ಆವಿಷ್ಕರಿಸಲು ಬದಲಾವಣೆಗಳನ್ನು ಸೂಚಿಸಲು, ನಿಗಮನಗಳನ್ನು ರೂಪಿಸಲು, ಮಾರ್ಗನಿರ್ದೇಶನಗಳನ್ನು ನೀಡಲು ಸಾಧ್ಯವಾಗುವುದು. ಈ ರೀತಿಯಲ್ಲಿ ತಾನು ಸಮಾಜದ ಭಾಗವೆಂದೂ ಸಮಾಜದ ಮೌಲ್ಯವನ್ನು ಸಂರಕ್ಷಿಸುವುದು ನನ್ನ ಜವಾಬ್ದಾರಿಯಾಗಿದೆಯೆಂಬ ಮನೋಭಾವ ರೂಪುಗೊಳ್ಳುವುದರೊಂದಿಗೆ ಉತ್ತಮ ವ್ಯಕ್ತಿತ್ವವನ್ನು ಮಕ್ಕಳಲ್ಲಿ ರೂಪಿಸುವ ಉದ್ದೇಶವು ಈ ಪಾಠಭಾಗದ ವಿನಿಮಯದ ಮೂಲಕ ಸಾಧ್ಯವಾಗಬೇಕು.

ಯೂನಿಟ್ ಫ್ರೇಂ

# 11. ಸಮಾಜ ಶಾಸ್ತ್ರ ಕಲಿಕೆಗೊಂದು ಮುನ್ನುಡಿ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಸಂಕೀರ್ಣವಾದ ಸಾಮಾಜಿಕ ಜೀವನದ ವಿವಿಧ ಆಯಾಮಗಳ ಅಧ್ಯಯನಕ್ಕಾಗಿ ವಿವಿಧ ವಿಜ್ಞಾನ ಶಾಖೆಗಳು ರೂಪುಗೊಂಡಿವೆ. ಸಮಾಜ ಶಾಸ್ತ್ರವು ಅವುಗಳಲ್ಲೊಂದಾಗಿದೆ.<br>• ಚರಿತ್ರೆ, ಸಮಾಜ ವಿಜ್ಞಾನವು ಇದರೊಂದಿಗೆ ಸೇರಿಕೊಂಡಿರುವುದರಿಂದ ಸೃಜನಾತ್ಮಕ ರಚನೆಯ ಪ್ರಭಾವವು ಸಮಾಜ ಶಾಸ್ತ್ರದ ಮೇಲಿದೆ.<br>• ಇಂತಹ ಸಮಾಜ ವಿಜ್ಞಾನ ಶಾಖೆಗಳಂತೆ ಸಮಾಜ ಶಾಸ್ತ್ರವು ಕ್ರಾಂತಿ ಯುಗದ ಸೃಷ್ಟಿಯಾಗಿದೆ. ಆದ್ದರಿಂದ ಅದು ವಿಕಾಸಗೊಳ್ಳುತ್ತಲೇ ಇದೆ.<br>• ಸಮಾಜ ಶಾಸ್ತ್ರವೆಂದರೆ ಮಾನವ ಜೀವನದ, ಸಮಾಜದ ಕುರಿತಾದ ವೈಜ್ಞಾನಿಕ ಅಧ್ಯಯನವಾಗಿದೆ. ಇದಕ್ಕೆ ವಿಭಿನ್ನ ಹಂತಗಳಿವೆ.<br>• ಶೈಕ್ಷಣಿಕ ಮತ್ತು ಪ್ರಾಯೋಗಿಕವಾದ ಅಗತ್ಯಗಳನ್ನು ಮುಂದಿರಿಸಿ ಸಮಾಜವನ್ನು ವೈಜ್ಞಾನಿಕ ಕಲಿಕೆಗೆ ವಿಧೇಯವಾಗಿಸುವುದು.<br>• ಸಮಾಜದ ಸಂಕೀರ್ಣತೆಯು ಹೆಚ್ಚುತ್ತಾ ಇದೆ. ಸಮಾಜ ವಿಜ್ಞಾನದಲ್ಲಿಯೂ ಆಡಳಿತ ಕ್ಷೇತ್ರದಲ್ಲಿಯೂ ಶೈಕ್ಷಣಿಕ ಕ್ಷೇತ್ರದಲ್ಲಿಯೂ ಸಮಾಜ ಶಾಸ್ತ್ರದ ಪ್ರಾಯೋಗಿಕ ಸಾಧ್ಯತೆಗಳು ಹೆಚ್ಚುತ್ತಿವೆ. | • ಸಮಾಜ ಶಾಸ್ತ್ರ ಶಾಖೆಗಳ ಹೆಸರುಗಳಿಗೆ ಸಂಬಂಧಿಸಿದ ವಿಜ್ಞಾನ ಶಾಖೆಗಳ ಮಾಹಿತಿ ಸಂಗ್ರಹಿಸಿ ಪಟ್ಟಿ ಮಾಡುವರು.<br>• ಸಮಾಜ ಶಾಸ್ತ್ರದಲ್ಲಿ ಸಾಮಾಜಿಕ ಅಧ್ಯಯನದ ಪ್ರಾಧಾನ್ಯದ ಕುರಿತು ಚರ್ಚೆ ನಡೆಸುವರು.<br>• ಪಾಠಭಾಗದ ಆರಂಭದಲ್ಲಿ ನೀಡಿರುವ ಸೃಜನಾತ್ಮಕ ರಚನೆಯೂ ಸಮಾಜ ವಿಜ್ಞಾನದ ವೈಜ್ಞಾನಿಕ ವಿಶ್ಲೇಷಣಾ ರೀತಿಗಳನ್ನು ಪರಸ್ಪರ ಹೋಲಿಸಿ ಟಿಪ್ಪಣಿ ತಯಾರಿಸುವರು.<br>• ಸಮಾಜ ಶಾಸ್ತ್ರದ ಉದಯ, ಆರಂಭ ಕಾಲದ ಸಮಾಜ ಶಾಸ್ತ್ರ ಚಿಂತಕರು ಎಂಬಿವುಗಳನ್ನು ತಿಳಿದುಕೊಂಡು ಟಿಪ್ಪಣಿ ತಯಾರಿಸುವರು.<br>• ವ್ಯಕ್ತಿಯೋರ್ವ ಸಮಾಜದ ಮೇಲೆ ಹೇಗೆ ಪ್ರಭಾವವನ್ನು ಬೀರುವನೆಂದೂ ವಿವಿಧ ಸಾಮಾಜಿಕ ಸಮಸ್ಯೆಗಳ ಕುರಿತೂ ಸಾಮಾಜಿಕ ವೈವಿಧ್ಯಗಳ ಕುರಿತೂ ವಿಶ್ಲೇಷಣಾ ಟಿಪ್ಪಣಿ ತಯಾರಿಸುವುದು.<br>• ಸಮಾಜ ಶಾಸ್ತ್ರ ಕಲಿಕಾ ರೀತಿಗಳನ್ನು ತಖ್ತೆ ಮಾಡುವುದು ಮತ್ತು ಪಟ್ಟಿ ತಯಾರಿಸುವುದು. ಪ್ರತಿಯೊಂದರ ಕುರಿತು ಲಘು ಟಿಪ್ಪಣಿಯನ್ನು ತಯಾರಿಸುವುದು.<br>• ಸಮಾಜ ಶಾಸ್ತ್ರದ ವಿಭಿನ್ನ ಕಲಿಕಾ ರೀತಿಗಳ ಮೂಲಕ ಸಂಗ್ರಹಿಸಿದ ಮಾಹಿತಿಗಳನ್ನು ಬಳಸಿಕೊಳ್ಳುವ ವಲಯಗಳ ಕುರಿತು ಚರ್ಚೆ ನಡೆಸುವುದು. | • ಸೃಜನಾತ್ಮಕ ಮತ್ತು ಸಮಾಜ ವಿಜ್ಞಾನದ ನಡುವಿನ ವ್ಯತ್ಯಾಸವನ್ನು ಕಂಡುಕೊಳ್ಳುವರು.<br>• ಸಮಾಜ ವಿಜ್ಞಾನ ಅಧ್ಯಯನದ ಪ್ರಾಧಾನ್ಯವನ್ನು ತಿಳಿದುಕೊಳ್ಳುವುದು.<br>• ಆರಂಭ ಕಾಲದ ಸಾಮಾಜಿಕ ಶಾಸ್ತ್ರ ಚಿಂತಕರ ಕೊಡುಗೆಯನ್ನು ತಿಳಿದುಕೊಳ್ಳುವರು.<br>• ಸಮಾಜ ಶಾಸ್ತ್ರದ ವಿಶೇಷತೆಗಳನ್ನು ತಿಳಿದುಕೊಳ್ಳಲು ಮತ್ತು ನಿರ್ವಚಿಸಲು ಪ್ರಾಪ್ತರಾಗುವರು.<br>• ಸಮಾಜ ವಿಜ್ಞಾನದ ಕಲಿಕಾ ರೀತಿಗಳಾದ ಸಾಮಾಜಿಕ ಸಮೀಕ್ಷೆ, ಸಂದರ್ಶನ, ನಿರೀಕ್ಷಣೆ ಮತ್ತು ಕೇಸ್ ಸ್ಟಡಿಗಳನ್ನು ಯಾವ ಸಂದರ್ಭಗಳಲ್ಲಿ ಬಳಸಿಕೊಳ್ಳಬೇಕೆಂದು ತಿಳಿದುಕೊಂಡರು.<br>• ಸಮಾಜ ಶಾಸ್ತ್ರದ ಪ್ರಯೋಜನಗಳನ್ನು ಮತ್ತು ಸಾಧ್ಯತೆಗಳನ್ನು ತಿಳಿದುಕೊಳ್ಳುವರು. |

## ಅಧ್ಯಾಯದ ಕಡೆಗೆ...

ಪಾಠಭಾಗದ ಆರಂಭದಲ್ಲಿ ನೀಡಿರುವ ಎಂ.ಟಿ. ವಾಸುದೇವನ್ ನಾಯರ್ ಮತ್ತು ರೋಬಿನ್ ಜೆಫ್ರಿಯ ಗ್ರಂಥಭಾಗದ ವಿಶೇಷತೆಗಳನ್ನು ಓದಲು ಮಕ್ಕಳಲ್ಲಿ ತಿಳಿಸಬೇಕು. ಓದಿದ ನಂತರ ಎರಡರಲ್ಲಿರುವ ಪ್ರಧಾನ ವ್ಯತ್ಯಾಸಗಳನ್ನು ಕಂಡುಹಿಡಿದು ಓದಿನ ಟಿಪ್ಪಣಿಯನ್ನು ರಚಿಸಲು ತಿಳಿಸಬೇಕು. ಟಿಪ್ಪಣಿಯನ್ನು ತಯಾರಿಸುವ ಮೊದಲು ಈ ಎರಡು ಕೃತಿಗಳ ಕುರಿತಾದ ಪ್ರಧಾನ ವ್ಯತ್ಯಾಸದ ಕುರಿತಾಗಿ ಲಘು ಚರ್ಚೆಯನ್ನು ನಡೆಸಿ ಈ ಕೆಳಗಿನಂತೆ ಕ್ರೋಡೀಕರಿಸಬೇಕು.

- ಸಮಾಜದ ಕುರಿತಾದ ಚಿತ್ರಣಕ್ಕೆ ಎಂ.ಟಿ. ವಾಸುದೇವನ್ ನಾಯರ್ ಕಾದಂಬರಿಯನ್ನು ಬಳಸಿದ್ದಾರೆ.
- ಭಾವನೆ ಮತ್ತು ಸೃಜನಾತ್ಮಕತೆಯನ್ನು ಕಾದಂಬರಿಯಲ್ಲಿ ಕಾಣಬಹುದು.
- ಭಾವನಾತ್ಮಕ ಪ್ರತಿಕ್ರಿಯೆಗಳು ಓದುವಿಕೆಯನ್ನು ಉತ್ತೇಜಿಸುತ್ತದೆ.
- ಆಸ್ವಾದನೆಯೇ ಇದರ ಉದ್ದೇಶವಾಗಿದೆ.

ಆದರೆ ರೋಬಿನ್ ಜೆಫ್ರಿ ಸಮಾಜದ ಕುರಿತಾದ ಸಂಶೋಧನಾತ್ಮಕ ಅಧ್ಯಯನವನ್ನು ನಡೆಸಿದ್ದಾರೆ. ಆದ್ದರಿಂದ ಈ ವಿಧಾನದಲ್ಲಿ ವಸ್ತುನಿಷ್ಠವಾದ, ಯುಕ್ತಿಪರವಾದ ವಿಶ್ಲೇಷಣೆಯು ಸಾಧ್ಯವಾಗಿದೆ. ಭಾವನೆ, ಸೃಜನಾತ್ಮಕತೆ, ಭಾವನಾತ್ಮಕತೆಗೆ ಇಲ್ಲಿ ಪ್ರಾಧಾನ್ಯವಿಲ್ಲ. ಸಮಾಜವನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುವುದೇ ಇಲ್ಲಿ ಉದ್ದೇಶವಾದ್ದರಿಂದ ಆಸ್ವಾದನೆಗೆ ಇಲ್ಲಿ ಆಸ್ಪದವಿಲ್ಲ.

### ಸಮಾಜ ವಿಜ್ಞಾನಗಳ ಲೋಕ

ಮಾನವನ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಹಲವು ವಲಯಗಳು ಸಮಾಜ ವಿಜ್ಞಾನದಲ್ಲಿದೆ.

ಇವುಗಳ ಪರಸ್ಪರ ಸಂಬಂಧ, ಪ್ರಭಾವ ಎಂಬಿವುಗಳ ಅನ್ವೇಷಣೆಗಾಗಿ ರೂಪುಗೊಂಡಿರುವ ವಿವಿಧ ವಿಜ್ಞಾನ ಶಾಖೆಗಳ ಕುರಿತಾಗಿ ಮಕ್ಕಳಿಗೆ ಮಾಹಿತಿಯನ್ನು ನೀಡುವುದಕ್ಕಾಗಿ ಕೆಲವು ಸರಳ ಪ್ರಶ್ನೆಗಳನ್ನು ಮಕ್ಕಳಲ್ಲಿ ಕೇಳಬಹುದು.

- ಆರ್ಥಿಕ ಕಾರ್ಯಚಟುವಟಿಕೆಗಳ ಕುರಿತಾದ ಅಧ್ಯಯನ ಶಾಖೆ ಯಾವುದು?
- ಭೂಮಿಯ ಕುರಿತಾದ ಅಧ್ಯಯನ ಶಾಖೆ ಯಾವುದು?

ಹಿಂದಿನ ತರಗತಿಗಳಿಂದ ಪಡೆದ ಪೂರ್ವಜ್ಞಾನದ ಆಧಾರದಲ್ಲಿ ಇದೇ ರೀತಿಯ ಮಾನವನ ಜೀವನಕ್ಕೆ ಸಂಬಧಿಸಿದ ವಿಜ್ಞಾನ ಶಾಖೆಯ ಕುರಿತಾಗಿ ಅನ್ವೇಷಣೆ ನಡೆಸಬೇಕೆಂಬ ಸೂಚನೆಯೊಂದಿಗೆ 183ನೇ ಪುಟದಲ್ಲಿರುವ ಪಟ್ಟಿಯನ್ನು ಭರ್ತಿ ಮಾಡಲು ತಿಳಿಸಬೇಕು.

| | |
|---|---|
| ಆರ್ಥಿಕ ವ್ಯವಹಾರಗಳ ಕುರಿತಾದ ಕಲಿಕೆ | ಅರ್ಥಶಾಸ್ತ್ರ |
| ಭೂತಕಾಲದ ಮತ್ತು ನಾಗರಿಕತೆಯ ಕುರಿತಾದ ಅನ್ವೇಷಣೆ | ಚರಿತ್ರೆ |
| ರಾಷ್ಟ್ರ ಮತ್ತು ಹಕ್ಕುಗಳ ಕುರಿತಾದ ಕಲಿಕೆ | ರಾಜ್ಯಶಾಸ್ತ್ರ |

| | |
|---|---|
| **ಮಾನವನ ಉಗಮ ಮತ್ತು ಮಾನವ ವಂಶದ ವಿಕಾಸದ ಕುರಿತಾದ ಕಲಿಕೆ** | **ಮಾನವ ಶಾಸ್ತ್ರ** |
| **ಮನುಷ್ಯರ ಮನಸ್ಸು ಮತ್ತು ಮಾನಸಿಕ ಸ್ಥಿತಿಯ ಕುರಿತಾದ ಕಲಿಕೆ** | **ಮನಃಶ್ಯಾಸ್ತ್ರ** |

ಉತ್ತರಗಳನ್ನು ಬೋರ್ಡಿನಲ್ಲಿ ಬರೆದು ಪಟ್ಟಿಯನ್ನು ಪೂರ್ತಿಗೊಳಿಸಲು ಮಕ್ಕಳಿಗೆ ಸಹಾಯ ಮಾಡಬೇಕು.

ಆದರೆ ಬದಲಾದ ಸನ್ನಿವೇಶಗಳಲ್ಲಿ ಬದುಕನ್ನು ನಡೆಸುವ ಮಾನವನು ಅವರ ಸಾಮಾಜಿಕ ಪರಿಸರವನ್ನು ಆಧುನಿಕ ಕಾಲದಲ್ಲಿ ಅಧ್ಯಯನಕ್ಕೆ ಒಳಪಡಿಸುವುದು ಸಮಾಜಶಾಸ್ತ್ರದ ಮೂಲಕ ಎಂದು ಹೇಳುವ ಮೂಲಕ ಲಘು ಚರ್ಚೆಯನ್ನು ಅಧ್ಯಾಪಕರು ಕ್ರೋಡೀಕರಿಸಬೇಕು.

## ಆರಂಭಕಾಲದ ಸಮಾಜಶಾಸ್ತ್ರ ಚಿಂತಕರು

ಫ್ರೆಂಚ್ ಕ್ರಾಂತಿಯು ಜಗತ್ತಿಗೆ ನೀಡಿದ ಆಶಯಗಳು ಮಕ್ಕಳಿಗೆ ನೆನಪಿದೆ. ಇದರ ಕುರಿತು ಕೇಳಿಕೊಂಡು ಪಾಠಭಾಗವನ್ನು ಪ್ರವೇಶಿಸಬೇಕು. ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಎಂಬ ಘೋಷಣೆಗಳನ್ನು ಜನರು ಹೇಳಲು ಕಾರಣವಾದ ಸನ್ನಿವೇಶಗಳನ್ನು ಮಕ್ಕಳು ಕಲಿತುಕೊಂಡಿದ್ದಾರೆ. ಫ್ರಾನ್ಸಿನಲ್ಲಿ ಅಸ್ತಿತ್ವದಲ್ಲಿದ್ದ ಈ ರೀತಿಯ ಸಾಮಾಜಿಕ ಸಮಸ್ಯೆಗಳು ಸಮಾಜ ಶಾಸ್ತ್ರದ ಉಗಮಕ್ಕೆ ಕಾರಣವಾಯಿತು ಎಂಬುದನ್ನು ಲಘು ಚರ್ಚೆಯ ಮೂಲಕ ಮಕ್ಕಳಿಗೆ ತಿಳಿಸಬೇಕು. ಚರ್ಚೆಗಾಗಿ ಫ್ರೆಂಚ್ ಕ್ರಾಂತಿಯ ಕಾರಣಗಳಿರುವ ಓದಿನ ಟಿಪ್ಪಣಿಯನ್ನು ಮಕ್ಕಳಿಗೆ ಓದಲು ತಿಳಿಸಬೇಕು. ಫ್ರಾನ್ಸಿನ ಅಗಸ್ಟೆಕಾಮ್ಟ್‌ಯನ್ನು ಸಮಾಜ ಶಾಸ್ತ್ರದ ಪಿತಾಮಹ ಎಂದು ಕರೆಯಲು ಕಾರಣವಾದದ್ದು ಹೇಗೆಂಬುದನ್ನು, ಅವನ ಚಿತ್ರವನ್ನು ಮಕ್ಕಳಿಗೆ ತೋರಿಸಿ ವಿವರಿಸಬಹುದು.

ಸಮಾಜವು ನಿರಂತರವಾಗಿ ಬದಲಾವಣೆಯಾಗುತ್ತಿದೆಯೆಂದೂ ವಿಭಿನ್ನ ಹಂತಗಳಲ್ಲಿ ವಿಕಾಸ ಹೊಂದಿ ಸಮಾಜವು ಇಂದಿನ ಹಂತಕ್ಕೆ ತಲುಪಿದೆಯೆಂದೂ ಜೀವಶಾಸ್ತ್ರೀಯ ವಿಕಾಸದ ರೀತಿಯಲ್ಲಿಯೇ ಇದೂ ವಿಕಾಸ ಹೊಂದಿದೆಯೆಂದೂ ಸಮಾಜಶಾಸ್ತ್ರಜ್ಞನಾದ ಹರ್ಬರ್ಟ್ ಸ್ಪೆನ್ಸರ್ ಅಭಿಪ್ರಾಯಪಡುತ್ತಾನೆ. ಇದರೊಂದಿಗೆ ಕಾರ್ಲ್‌ಮಾರ್ಕ್ಸ್, ಎಮೈಲ್ ದುರ್ಖಿಂ, ಮಾರ್ಕ್ಸ್ ವೆಬರ್ ಮುಂತಾದವರನ್ನು ಪರಿಚಯಿಸಿಕೊಂಡು ಈ ಚರ್ಚೆಯನ್ನು ಕ್ರೋಡೀಕರಿಸಬೇಕು. ಪಾಶ್ಚಾತ್ಯ ಸಮಾಜಶಾಸ್ತ್ರ ಚಿಂತಕರನ್ನು ಪರಿಚಯಿಸುವುದಕ್ಕಾಗಿ ಐಸಿಟಿ ಸಾಧ್ಯತೆಯನ್ನು ಗರಿಷ್ಠ ಪ್ರಮಾಣದಲ್ಲಿ ಬೆಳೆಸಿಕೊಳ್ಳಬೇಕು. ಅಲ್ಲದೆ ಈ ಕೆಳಗಿನ ವರ್ಕ್‌ಶೀಟ್ ಭರ್ತಿ ಮಾಡಲು ಐಸಿಟಿ ಸಾಧ್ಯತೆಯನ್ನು ಬಳಸಿಕೊಳ್ಳಬೇಕು.

| ಚಿಂತಕರು | ಪ್ರಧಾನ ಆಶಯ |
|---|---|
| ಅಗಸ್ಟಸ್ ಕಾಮ್ಟೆ | |
| ಹರ್ಬರ್ಟ್ ಸ್ಪೆನ್ಸರ್ | |
| ಕಾರ್ಲ್ ಮಾರ್ಕ್ಸ್ | |
| ಎಮೈಲ್ ದುರ್ಖಿಂ | |
| ಮಾರ್ಕ್ಸ್ ವೆಬರ್ | |

## ಭಾರತದಲ್ಲಿ ಸಮಾಜ ಶಾಸ್ತ್ರ:

ಪಶ್ಚಿಮ ಯುರೋಪಿನಲ್ಲಿ ಉದ್ಭವವಾದ ಸಮಾಜ ವಿಜ್ಞಾನವು ಬಹಳ ವೇಗದಲ್ಲಿ ಭಾರತವನ್ನು ತಲುಪಿತು. ಸಮಾಜವಿಜ್ಞಾನದ ಮೊದಲ ಅಧ್ಯಯನ ವಿಭಾಗವು

ಬಾಂಬೆ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಗೊಂಡಿತು. ಇಂದು ಭಾರತದ ಬಹುತೇಕ ಎಲ್ಲ ವಿಶ್ವವಿದ್ಯಾಲಯಗಳಲ್ಲಿಯೂ ಸಮಾಜಶಾಸ್ತ್ರ ಅಧ್ಯಯನ ವಿಷಯಗಳಿವೆಯೆಂದೂ ಆರಂಭಕಾಲದಲ್ಲಿ ಸಮಾಜ ಶಾಸ್ತ್ರ ವಿಷಯದಲ್ಲಿ ಕೊಡುಗೆಯನ್ನು ನೀಡಿದ ಭಾರತೀಯ ಸಮಾಜ ಶಾಸ್ತ್ರಜ್ಞರನ್ನು ಪರಿಚಯಿಸಿಕೊಂಡು ಈ ಪಾಠಭಾಗವನ್ನು ಕ್ರೋಡೀಕರಿಸಬೇಕು.

ಅಲ್ಲದೆ ಆರಂಭಕಾಲದ ಸಮಾಜ ಶಾಸ್ತ್ರಜ್ಞರ ಕುರಿತಾಗಿ ಭಿತ್ತಿಪತ್ರಿಕೆಯೊಂದನ್ನು ತಯಾರಿಸಲು ಮಕ್ಕಳಿಗೆ ತಿಳಿಸಿ, ಅದನ್ನು ಸಮಾಜ ವಿಜ್ಞಾನ ಪ್ರಯೋಗಾಲಯದಲ್ಲಿ ಪ್ರದರ್ಶಿಸುವಂತೆ ನಿರ್ದೇಶಿಸಬೇಕು.

## ಸಮಾಜಶಾಸ್ತ್ರ ಎಂದರೇನು ?

ಸಮಾಜ ಶಾಸ್ತ್ರವೆಂದರೆ ಸಮಾಜ ಜೀವಿಯಾದ ಮಾನವನ ಸಮಾಜದೊಂದಿಗಿನ ಪಾಲ್ಗೊಳ್ಳುವಿಕೆಯ ಕುರಿತಾದ ವೈಜ್ಞಾನಿಕ ಕಲಿಕೆಯಾಗಿದೆ. ಆದ್ದರಿಂದ

- ಸಮಾಜ ವಿಜ್ಞಾನವು ಮಾನವ ಜೀವನದ ಕುರಿತು ತಿಳಿಸುತ್ತದೆ.
- ಮಾನವ ಮತ್ತು ಸಮಾಜದ ನಡುವಿನ ಸಂಬಂಧವನ್ನು ಸಮಾಜ ವಿಜ್ಞಾನವು ತಿಳಿಸುತ್ತದೆ.
- ಮಾನವನ ಮಾನಸಿಕ ವ್ಯವಹಾರಗಳ ಕುರಿತಾದ ಅಧ್ಯಯನವಾಗಿದೆ.

ತನ್ನ ಸುತ್ತು ಮುತ್ತಲಿನ ಮಾನಸಿಕ ಪ್ರತಿಕ್ರಿಯೆ, ವೀಕ್ಷಣೆ, ಮನೋಭಾವ ಇತ್ಯಾದಿಗಳನ್ನು ವೈಜ್ಞಾನಿಕವಾಗಿ ಅಧ್ಯಯನಕ್ಕೊಳಪಡಿಸುವುದು ಸಮಾಜಶಾಸ್ತ್ರದ ಉದ್ದೇಶವೆಂದು ಹೇಳುತ್ತಾ ಚರ್ಚೆಯನ್ನು ಕ್ರೋಡೀಕರಿಸಬೇಕು.

## ಸಮಾಜಶಾಸ್ತ್ರದ ಕಲಿಕೆ ಯಾಕೆ?

ಸಮಾಜವು ನಿರಂತರವಾಗಿ ವಿಕಾಸ ಹೊಂದುತ್ತಲೇ ಇದೆ. ತಾನೂ ಒಳಗೊಂಡಂತೆ ಸಮಾಜದ ಕುರಿತಾದ ಸರಿಯಾದ ತಿಳುವಳಿಕೆ ರೂಪುಗೊಳ್ಳಲು ಯಾವೆಲ್ಲ ಮಾರ್ಗವನ್ನು ಅನುಸರಿಸಬೇಕೆಂಬ ಸರಳವಾದ ಪ್ರಶ್ನೆಯೊಂದಿಗೆ ಲಘು ಚರ್ಚೆಯೊಂದನ್ನು ತರಗತಿಯಲ್ಲಿ ನಡೆಸಬೇಕು. ಸಮಾಜ ಶಾಸ್ತ್ರ ಕಲಿಕೆ ಯಾಕೆ ಎಂಬ ಪ್ರಶ್ನೆಗೆ ಪಾಠಪುಸ್ತಕದ ಪುಟಸಂಖ್ಯೆ 201ನ್ನು ಓದಿ ಚರ್ಚಾ ಟಿಪ್ಪಣಿ ತಯಾರಿಸಲು ತಿಳಿಸಬೇಕು.

## ಸಮಾಜಶಾಸ್ತ್ರದ ಕಲಿಕಾ ವಲಯಗಳು:

ನಮ್ಮ ಸಮಾಜದಲ್ಲಿ ಹಲವು ಸಮಸ್ಯೆಗಳು ನೆಲೆನಿಂತಿವೆ. ಇವುಗಳು ಯಾವುವೆಂದು ಹೇಳಬಹುದೆ? ಎಂಬ ಸರಳವಾದ ಪ್ರಶ್ನೆಗಳೊಂದಿಗೆ ಪಾಠಭಾಗವನ್ನು ಪ್ರವೇಶಿಸಬಹುದಾಗಿದೆ. ಮಕ್ಕಳು ನೀಡುವ ಉತ್ತರಗಳನ್ನು ಕರಿಹಲಗೆಯಲ್ಲಿ ಬರೆಯಬೇಕು.

- ನಿರುದ್ಯೋಗ
- ಬಡತನ
- ಜಾತಿ ಸಂಘರ್ಷ (ಕೋಮುಗಲಭೆ)

ಈ ರೀತಿಯ ಸಮಸ್ಯೆಗಳನ್ನು ಸಮಾಜಶಾಸ್ತ್ರದ ವಿಶ್ಲೇಷಣೆಗೆ ಒಳಪಡಿಸಬೇಕಾಗಿದೆ. ಅಲ್ಲದೆ ಪ್ರತಿಯೊಂದು ಸಮಾಜದಲ್ಲಿಯೂ

- ಸಾಮಾಜಿಕ ಸಂಸ್ಥೆಗಳು
- ಸಾಮಾಜಿಕ ಗುಂಪುಗಳು
- ಸಾಮಾಜಿಕ ಸಂಬಂಧಗಳು
- ಸಾಮಾಜೀಕರಣ
- ಸಾಮಾಜಿಕ ನಿಯಂತ್ರಣ
- ಸಮುದಾಯಗಳು
- ಸಾಮಾಜಿಕ ಬದಲಾವಣೆ
- ಸಾಮಾಜಿಕ ಸಮಸ್ಯೆಗಳು

ಎಂಬೀ ಕಾರ್ಯಗಳನ್ನು ವಿಶ್ಲೇಷಿಸಬೇಕೆಂದು ಹೇಳುತ್ತಾ ಈ ಭಾಗವನ್ನು ಕ್ರೋಡೀಕರಿಸಬೇಕು.

## ಸಮಾಜ ಶಾಸ್ತ್ರದ ಕಲಿಕಾ ರೀತಿಗಳು

ಸಂಕೀರ್ಣವಾದ ಸಾಮಾಜಿಕ ಸಮಸ್ಯೆಗಳನ್ನು ಅಧ್ಯಯನ ಮಾಡಲು, ಪರಿಹಾರ ಮಾರ್ಗವನ್ನು ನಿರ್ದೇಶಿಸಲು ಜಗತ್ತಿನಾದ್ಯಂತ ಸಮಾಜಶಾಸ್ತ್ರದ

ಅಧ್ಯಯನವು ನಡೆಯುತ್ತಿದೆ. ಅವುಗಳಲ್ಲಿ ಪ್ರಧಾನವಾದ ಕೆಲವು ರೀತಿಗಳನ್ನು ಮಕ್ಕಳಿಗೆ ಇಲ್ಲಿ ಪರಿಚಯಿಸಬೇಕು.ಪ್ರಧಾನವಾದ ಕಲಿಕಾ ರೀತಿಗಳನ್ನು ಕರಿಹಲಗೆಯಲ್ಲಿ ಬರೆಯಬೇಕು.

- ಸಾಮಾಜಿಕ ಸಮೀಕ್ಷೆ
- ಸಂದರ್ಶನ
- ನಿರೀಕ್ಷಣೆ
- ಕೇಸ್ ಸ್ಟಡಿ

ಆನಂತರ ಮಕ್ಕಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಿ, ಪ್ರತಿಯೊಂದು ಗುಂಪಿಗೂ ಒಂದೊಂದು ರೀತಿಯ ಕಲಿಕಾ ರೀತಿಯ ಕುರಿತಾದ ಮಾಹಿತಿಯನ್ನು ಸಂಗ್ರಹಿಸಲು ತಿಳಿಸಬೇಕು.

ಪಾಠಪುಸ್ತಕದಲ್ಲಿ ತಿಳಿಸಿರುವಂತೆ ಮಕ್ಕಳ ಓದುವ ಹವ್ಯಾಸದ ಕುರಿತು ಸರ್ವೆ ನಡೆಸಬೇಕು.

ಅದಕ್ಕಾಗಿ ಒಂದನೆ ಗುಂಪು ಸಮೀಕ್ಷೆಗೆ ಅಗತ್ಯವಿರುವ ಪ್ರಶ್ನಾವಳಿಯನ್ನು ತಯಾರಿಸುವಂತೆ ತಿಳಿಸಬೇಕು. ಇದಕ್ಕೆ ಸರಳ ಮಾದರಿ ಪ್ರಶ್ನಾವಳಿಯನ್ನು ಮಕ್ಕಳಿಗೆ ನೀಡಬೇಕು.

- ಎಷ್ಟು ದೈನಿಕಗಳನ್ನು ಓದುವಿರಿ?
- ಓದಿಗಾಗಿ ಎಷ್ಟು ಸಮಯವನ್ನು ಮೀಸಲಿಡುವಿರಿ?
- ಯಾವ ರೀತಿಯ ಗ್ರಂಥಗಳನ್ನು ಓದುವಿರಿ?

ಈ ರೀತಿಯ ಪ್ರಶ್ನೆಗಳನ್ನು ತಯಾರಿಸಿ, ಪ್ರಶ್ನಾವಳಿಯನ್ನು ವಿಪುಲಗೊಳಿಸಿ, ಮಾಹಿತಿಯನ್ನು ಸಂಗ್ರಹಿಸಿ, ಗುಂಪಿನ ಕಂಡುಕೊಳ್ಳುವಿಕೆಯನ್ನು ಮಂಡಿಸಲಿ. ಕಲಿಕೆಯಲ್ಲಿ ಹಿಂದುಳಿದವರಿಗೂ ವಿಶೇಷ ಪರಿಗಣನೆ ಅಗತ್ಯವಿರುವವರಿಗೂ ಜವಾಬ್ದಾರಿಗಳನ್ನು ಹಂಚುವ ಮೂಲಕ ಸಮೀಕ್ಷೆಯು ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಲು ಅಧ್ಯಾಪಕರು ಸಹಕಾರವನ್ನು ನೀಡಬೇಕು.

## ಸಂದರ್ಶನ

ಮಾಹಿತಿಯನ್ನು ಸಮಗ್ರವಾಗಿ ಕಂಡುಕೊಳ್ಳಲು ಗುಂಪು ಸಂದರ್ಶನವನ್ನು ಕೈಗೊಳ್ಳಬೇಕು. ಇದಕ್ಕಾಗಿ ಹತ್ತಿರದ ಉತ್ತಮ ಕೃಷಿಕನೋರ್ವನನ್ನು ಕಂಡುಹಿಡಿದು ಶಾಲೆಯಲ್ಲಿ ಮಾದರಿ ತರಕಾರಿ ತೋಟವೊಂದನ್ನು ಆರಂಭಿಸಲು ಅಗತ್ಯವಿರುವ ಮಾಹಿತಿಯನ್ನು ಸಂಗ್ರಹಿಸಬೇಕು. ಗುಂಪಿನ ಸದಸ್ಯರು ಪ್ರಶ್ನಾವಳಿಯನ್ನು ತಯಾರಿಸಲಿ. ಪ್ರಶ್ನಾವಳಿಯನ್ನು ಸೂಕ್ಷ್ಮ ಪರಿಶೋಧನೆಯ ನಂತರ ಅಗತ್ಯದ ತಿದ್ದುಪಡಿಯನ್ನು ಅಧ್ಯಾಪಕರು ಮಾಡಬಹುದಾಗಿದೆ. ಸಂದರ್ಶನದ ಮೂಲಕ ಸಂಗ್ರಹಿಸಿದ ಮಾಹಿತಿಗಳನ್ನು ಉಪಯೋಗಿಸಿಕೊಂಡು ಮಾದರಿ ತರಕಾರಿ ತೋಟವೊಂದನ್ನು ಆರಂಭಿಸಲು ಮಕ್ಕಳನ್ನು ಪ್ರೇರೇಪಿಸಬಹುದಾಗಿದೆ.

## ನಿರೀಕ್ಷಣೆ

ನಿರೀಕ್ಷಣೆ ಎಂಬ ಕಲಿಕಾ ರೀತಿ ಸಿಕ್ಕಿದ ಮಕ್ಕಳ ಗುಂಪು ಶಾಲೆಯ ಸಮೀಪದಲ್ಲಿರುವ ಯಾವುದಾದರೊಂದು ಕುಟುಂಬಶ್ರೀ ಯೂನಿಟ್ ಅಥವಾ ಮಾರುಕಟ್ಟೆಯನ್ನು ಸಂದರ್ಶಿಸಿ ಅಲ್ಲಿ ನಡೆಯುವ ಆರ್ಥಿಕ ವ್ಯವಹಾರವನ್ನು ವೀಕ್ಷಿಸಿ ತಿಳಿದುಕೊಂಡು ಗುಂಪಿನ ಸದಸ್ಯರ ಸಹಾಯದಿಂದ ವರದಿಯೊಂದನ್ನು ತಯಾರಿಸಲು ಅಗತ್ಯವಾದ ಸಹಾಯವನ್ನು ಅಧ್ಯಾಪಕರು ನೀಡಬೇಕು.

## ಕೇಸ್ ಸ್ಟಡಿ

ಅಪೂರ್ವವೂ ವಿಭಿನ್ನವೂ ಆದ ಸಾಮಾಜಿಕ ವಿದ್ಯಮಾನಗಳು ಮತ್ತು ಸಮಸ್ಯೆಗಳ ಕುರಿತು ಆಳವಾಗಿ ಕಲಿಯಲು ಕೇಸ್ ಸ್ಟಡಿಯನ್ನು ಉಪಯೋಗಿಸಲಾಗುತ್ತದೆ ಎಂಬ ವಿವರಣೆಯೊಂದಿಗೆ ಅಧ್ಯಾಪಕರು ನಾಲ್ಕನೇ ಗುಂಪಿಗೆ ಈ ರೀತಿಯ ಸಮಸ್ಯೆಯಿರುವ ಮಗುವೊಂದನ್ನು ಕಂಡುಕೊಳ್ಳಲು ತಿಳಿಸಬೇಕು. ಕಲಿಕೆಯಲ್ಲಿ ಬಹಳ ದುರ್ಬಲವಾದ, ನಿರಂತರ ಸಮಸ್ಯೆಗಳನ್ನು ಸೃಷ್ಟಿಸುವ ಮಗುವೊಂದನ್ನು ಇದಕ್ಕಾಗಿ ಆಯ್ಕೆ ಮಾಡಬೇಕು. ಗುಂಪು ಈ ಮಗುವಿನ ಮನೆಯನ್ನು ಸಂದರ್ಶಿಸಿ ಮಗುವಿಗೆ ಸಂಬಂಧಿಸಿದ ಸಮಗ್ರವಾದ ಮಾಹಿತಿಯನ್ನು ಸಂಗ್ರಹಿಸಲು ಈ ಗುಂಪಿಗೆ ಅಧ್ಯಾಪಕರು ಸಹಾಯ ಮಾಡಬೇಕು. യഥാർത്ഥത്തിൽ കുട്ടി നേരിട്ട പ്രശ്നങ്ങൾ

ಯಥಾರ್ಥವಾಗಿ ಹೇಳುವುದಾದರೆ ಮಗುವು ಎದುರಿಸಿದ ಸಮಸ್ಯೆಗಳನ್ನು ಮಾಹಿತಿ ಸಂಗ್ರಹದ ಮೂಲಕ ಕಂಡುಹಿಡಿದು ಅದಕ್ಕಿರುವ ಪರಿಹಾರವನ್ನು ಗುಂಪಿನಲ್ಲಿ ಕಂಡುಹಿಡಿಯಲಿ. ಶಾಲೆಯಲ್ಲಿರುವ ಕೌನ್ಸಿಲರ ಸೇವೆಯನ್ನು ಕೂಡಾ ಈ ಸಂದರ್ಭದಲ್ಲಿ ಗುಂಪಿನ ಸದಸ್ಯರು ಪಡೆದುಕೊಳ್ಳಬಹುದು.

ಈ ರೀತಿಯಲ್ಲಿ ಸವಾಜ ಬಗ್ಗೆ ಅಧ್ಯಯನ ವಾಡಲಿರುವ ವಿಭಿನ್ನ ವಾರ್ಗಗಳು, ಕಲಿಕಾ ವಿಧಾನಗಳು ಇತ್ಯಾದಿಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿ ಚರ್ಚೆಗಳನ್ನು ಅಧ್ಯಾಪಕರು ಕ್ರೋಡೀಕರಿಸಬಹುದು.

## ಸಮಾಜಶಾಸ್ತ್ರದ ಪ್ರಾಯೋಗಿಕ ದಕ್ಷತೆ

ಜನಕ್ಷೇಮಕರವಾದ ಪ್ರಜಾಪ್ರಭುತ್ವ ಸರಕಾರಗಳು ಆಡಳಿತ, ಯೋಜನೆ ಮೊದಲಾದ ವಲಯಗಳಲ್ಲಿ ತರಬೇತಿಯನ್ನು ಹೊಂದಿದ ಸಮಾಜಶಾಸ್ತ್ರಜ್ಞರ ಸೇವೆಯನ್ನು ಬಳಸಿಕೊಳ್ಳುತ್ತವೆ ಎಂಬ ಪೀಠಿಕೆಯ ಮೂಲಕ ಸಮಾಜಶಾಸ್ತ್ರದ ಪ್ರಾಯೋಗಿಕ ದಕ್ಷತೆಯ ಕುರಿತು ತರಗತಿಯಲ್ಲೊಂದು ಲಘು ಚರ್ಚೆಯನ್ನು ಅಧ್ಯಾಪಕರು ಪ್ರಾರಂಭಿಸಬೇಕು. ವಿದ್ಯಾರ್ಥಿಗಳ ಅಭಿಪ್ರಾಯವನ್ನು ಕೇಳಬೇಕು. ಹೆಚ್ಚುತ್ತಿರುವ ನಗರೀಕರಣ, ವಾಣಿಜ್ಯೀಕರಣ, ಸಮಾಜಕ್ಷೇಮ ಚಟುವಟಿಕೆಗಳು, ಶೈಕ್ಷಣಿಕ ಚಟುವಟಿಕೆಗಳು ಎಂಬೀ ಕ್ಷೇತ್ರಗಳಲ್ಲೆಲ್ಲ ಸಮಾಜಶಾಸ್ತ್ರಕ್ಕೆ ಅನಂತವಾದ ಪ್ರಯೋಗ ಅವಕಾಶಗಳು ಇವೆಯೆಂಬುದನ್ನು ವಿವರಿಸುತ್ತಾ ಅಧ್ಯಾಪಕರು ಚರ್ಚೆಯನ್ನು ಕ್ರೋಡೀಕರಿಸಬಹುದು. ತನ್ಮೂಲಕ ಸಮಾಜಶಾಸ್ತ್ರವು ಸಮಾಜಕ್ಕೂ ಸಹಜೀವಿಗಳಿಗೂ ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿದೆ ಎಂಬ ದೃಷ್ಟಿಕೋನವನ್ನು ರೂಪಿಸಲು ಪಾಠದ ವಿನಿಮಯದ ಮೂಲಕ ಸಾಧ್ಯವಾಗಬೇಕು.

## ? ಮೌಲ್ಯನಿರ್ಣಯಕ್ಕಿರುವ ಪ್ರಶ್ನೆಗಳು

- ಸೃಜನಾತ್ಮಕ ರಚನೆಗಳನ್ನು ಸಮಾಜಶಾಸ್ತ್ರ ಅಧ್ಯಯನಕ್ಕೆ ಬಳಸುವಾಗ ಉಂಟಾಗುವ ಕೊರತೆಗಳನ್ನು ಸ್ಪಷ್ಟಪಡಿಸಿರಿ.
- ಪಶ್ಚಿಮ ಯುರೋಪಿನಲ್ಲಿ ಸಮಾಜಶಾಸ್ತ್ರದ ಉಗಮಕ್ಕೆ ಕಾರಣವಾದ ಸನ್ನಿವೇಶಗಳು ಯಾವುವು?
- ಸಮಾಜಶಾಸ್ತ್ರದ ಕಲಿಕಾರೀತಿಗಳು ಹೇಗೆ ಭಿನ್ನವಾಗಿವೆ ಎಂಬುದನ್ನು ವಿವರಿಸಿರಿ.

## ಆಕರ ಗ್ರಂಥಗಳು


ಇಂದುಲೇಖ – ಬಿ. ಚಂದುಮೆನೋನ್

*A programme of Scientifc work required for the reorganisation of society - Auguste Comte*

*Introductory sociology - Jayaram. N*

ನಾಲುಕೆಟ್ಟ್ – ಎಂ.ಟಿ. ವಾಸುದೇವನ್ ನಾಯರ್

ನಾಯರ್ ಮೇಧಾವಿತ್ವತ್ತಿಂಡೆ ಪತನಂ – ರೋಬಿನ್ ಜೆಫ್ರಿ

## ಅಧ್ಯಾಪಕರಿಂದ ಮೌಲ್ಯಮಾಪನ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸಬೇಕಾದುದು |
|---|---|---|---|
| 1. ಚರಿತ್ರೆ ರಚನೆ ಹಾಗೂ ಸೃಜನಾತ್ಮಕ ರಚನೆಗಳೊಳಗಿನ ವ್ಯತ್ಯಾಸವನ್ನು ವಿವರಿಸಲು ಸಾಧ್ಯವಿದೆ. | ☐ | ☐ | ☐ |
| 2. ಸಮಾಜಶಾಸ್ತ್ರವೆಂಬುದು ಸಂಕೀರ್ಣವಾದ ಸಮಾಜ ಜೀವನದ ವಿವಿಧ ಹಂತಗಳ ಅಧ್ಯಯನಕ್ಕಾಗಿ ರೂಪುಗೊಂಡ ವಿಜ್ಞಾನ ಶಾಖೆಯಾಗಿದೆ ಎಂದು ವಿಶ್ಲೇಷಿಸಲು ಸಾಧ್ಯವಿದೆ. | ☐ | ☐ | ☐ |
| 3. ಸಮಾಜದ ಕುರಿತು ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕಾದುದರ ಅಗತ್ಯವನ್ನು ಸ್ಪಷ್ಟಪಡಿಸಲು ಸಾಧ್ಯವಿದೆ. | ☐ | ☐ | ☐ |
| 4. ಸಮಾಜದ ಅಧ್ಯಯನಕ್ಕೆ ಬಳಸುವ ವಿವಿಧ ರೀತಿಗಳು ಹಾಗೂ ಅವುಗಳ ಉಪಯೋಗ ಸಾಧ್ಯತೆಗಳನ್ನು ವರ್ಗೀಕರಿಸಿ ಸ್ಪಷ್ಟಪಡಿಸಲು ಸಾಧ್ಯವಿದೆ. | ☐ | ☐ | ☐ |
| 5. ಕಲಿಕಾ ಚಟುವಟಿಕೆಯನ್ನು ರೂಪಿಸುವಾಗ ಎಲ್ಲ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸಲು ಸಾಧ್ಯವಾಯಿತು. | ☐ | ☐ | ☐ |
| 6. ಕಲಿಕಾ ಚಟುವಟಿಕೆಗಳನ್ನು ವಿದ್ಯಾರ್ಥಿಗಳ ಸಮಾಜ ಜೀವನದೊಂದಿಗೆ ಹೊಂದಿಸಲು ಸಾಧ್ಯವಾಯಿತು. | ☐ | ☐ | ☐ |
| 7. ಸಮಾಜಶಾಸ್ತ್ರದ ಅಧ್ಯಯನವು ಇತರ ವಿಜ್ಞಾನ ಶಾಖೆಗಳಂತೆಯೇ ಶ್ರೇಷ್ಟವಾದದ್ದೆಂಬ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಸಾಧ್ಯವಾಯಿತು. | ☐ | ☐ | ☐ |
| 8. ವ್ಯಕ್ತಿಯು ಸಮಾಜದ ಮೇಲೆ ಬೀರುವ ಪ್ರಭಾವವನ್ನು ಮನದಟ್ಟು ಮಾಡಿಕೊಂಡು ಸಾಮಾಜಿಕ ಭಾಗವಹಿಸುವಿಕೆಗೆ ವಿದ್ಯಾರ್ಥಿಗಳಲ್ಲಿ ಪ್ರೇರಣೆಯನ್ನುಂಟು ಮಾಡಲು ಪಾಠದಿಂದ ಸಾಧ್ಯವಾಯಿತು. | ☐ | ☐ | ☐ |

# ಸಮಾಜವಿಜ್ಞಾನ II

# 1

# ಋತುಭೇದಗಳು ಮತ್ತು ಸಮಯ

ನಮ್ಮ ಪ್ರಕೃತಿ ಯಾವತ್ತು ನಮ್ಮನ್ನು ವಿಸ್ಮಯಗೊಳಿಸುವ ಒಂದು ಅದ್ಭುತ ವಿದ್ಯಮಾನವಾಗಿದೆ. ಪ್ರಕೃತಿಯ ವಿಶೇಷತೆಗಳು ಯಾವಾಗಲೂ ನಮ್ಮಲ್ಲಿ ಕೌತುಕವನ್ನು ಹುಟ್ಟಿಸುವವುಗಳಾಗಿವೆ. ಪೌರಾಣಿಕ ಕಾಲದಿಂದಲೇ ನಮ್ಮ ಪೂರ್ವಿಕರು ಅನ್ವೇಷಿಸಿ ಕಂಡುಕೊಂಡ ಕಾಲಗಳ ವಿದ್ಯಮಾನ ಹಾಗೂ ಅವುಗಳ ವಿಶೇಷತೆಗಳನ್ನು ದಂತಕತೆಗಳಾಗಿಯೂ ಗಾದೆಗಳಾಗಿಯೂ ಪ್ರಚಾರಗೊಂಡಿದ್ದುವು. ಆದರೆ ವಿಜ್ಞಾನದ ವಿಕಾಸದೊಂದಿಗೆ ಈ ದಂತಕತೆಗಳಿಗೂ ಗಾದೆಗಳಿಗೂ ವೈಜ್ಞಾನಿಕ ಸ್ಥಾನವು ಲಭಿಸಿತು. ಭೂಮಿ ಸೂರ್ಯ ಎಂಬೀ ಎರಡು ಆಕಾಶಕಾಯಗಳ ಚಲನೆಗಳೊಳಗಿರುವ ಪರಸ್ಪರ ಸಂಬಂಧವು ಅದಕ್ಕನುಗುಣವಾಗಿ ಉಂಟಾಗುವ ಕಾಲದ ಬದಲಾವಣೆಯು ಚಕ್ರೀಯ ಸ್ವಭಾವವಿರುವುದಾಗಿದೆ. ಈ ಪಾಠಭಾಗವು ಋತುಭೇದಗಳ ಕುರಿತಾದ ಹಾಗೂ ಸಮಯದಲ್ಲುಂಟಾಗುವ ಬದಲಾವಣೆಗಳ ಕುರಿತಾದ ಒಂದು ಅನ್ವೇಷಣೆಯಾಗಿದೆ.

ಯೂನಿಟ್ ಫ್ರೇಂ

# 1. ಋತುಭೇದಗಳು ಮತ್ತು ಸಮಯ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆ/ಕಲಿಕಾ ತಂತ್ರಗಳು | ಕಲಿಕಾ ಸಾಧನೆ |
|---|---|---|
| • ಋತು ಭೇದಗಳಿಗಿರುವ ಕಾರಣಗಳು ಅಕ್ಷದ ಸಮಾನಾಂತರತೆ ಅಯನ<br>• ಬೇಸಗೆಕಾಲ ಹಾಗೂ ಚಳಿಗಾಲ<br>• ಸಂಕ್ರಾಂತಿ<br>• ಅಯನಗಳ ದಿನಗಳು<br>• ವಸಂತವೂ ಹೇಮಂತವೂ<br>• ಭ್ರಮಣ ಮತ್ತು ಸಮಯ ನಿರ್ಣಯ<br>- ಸ್ಥಳೀಯ ಸಮಯ<br>- ಗ್ರೀನಿಚ್ ಸಮಯ<br>- ಪ್ರಮಾಣ ಸಮಯ<br>- ಭಾರತೀಯ ಕಾಲಮಾನ<br>- ಅಂತಾರಾಷ್ಟ್ರೀಯ ದಿನಾಂಕ ರೇಖೆ<br>- ಸಮಯ ನಿರ್ಣಯ | • ಗ್ಲೋಬ್ ನಿರೀಕ್ಷಣೆ<br>• ಚರ್ಚೆ<br>• ಲಘು ಚಿತ್ರ ವಿಶ್ಲೇಷಣೆ<br>• ಪಟ್ಟಿ ವಿಶ್ಲೇಷಣೆ<br>• ಸ್ಥಳೀಯ ಸಮಯ–ಗ್ರೀನಿಚ್ ಸಮಯ ಪ್ರಮಾಣ ಸಮಯ ಎಂಬಿವುಗಳ ಕುರಿತು ಚರ್ಚೆ<br>• ಅಕ್ಷಾಂಶ ಮತ್ತು ಸಮಯಗಳೊಳಗಿನ ಸಂಬಂಧ ವನ್ನು ಕಂಡುಕೊಳ್ಳುವುದು<br>• ಪಟ್ಟಿ ಪೂರ್ತಿಗೊಳಿಸುವುದು<br>• ದಿನಾಂಕ ರೇಖೆಯ ನಿರೀಕ್ಷಣೆ<br>• ವಿವಿಧ ರೇಖಾಂಶಗಳ ಸಮಯ ನಿರ್ಣಯ ಮಾಡುವುದು | • ಋತುಬೇಧಗಳಿಗೆ ಕಾರಣವಾಗುವ ಘಟಕಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸುವ ಸಾಮರ್ಥ್ಯ ಗಳಿಸುವರು.<br>• ವಿವಿಧ ಋತುಗಳು ಯಾವುವು ಎಂದೂ ಪ್ರತಿಯೊಂದು ಋತುವಿನಲ್ಲಿ ವಾತಾವರಣ ಹಾಗೂ ಪರಿಸರದಲ್ಲಿ ಉಂಟಾಗುವ ಬದಲಾವಣೆಗಳು ಯಾವುವು? ಎಂದು ನಿರೀಕ್ಷಿಸಿ ವಿಶದೀಕರಿಸುವರು.<br>• ಸಮರಾತ್ರಿ ದಿನಗಳು, ಸಂಕ್ರಾಂತಿಗಳು ಎಂದರೆ ಮತ್ತು ಈ ದಿನಗಳಲ್ಲಿ ರಾತ್ರಿ ಮತ್ತು ಹಗಲಿನ ದೈರ್ಘ್ಯದಲ್ಲಿ ಉಂಟಾಗುವ ವ್ಯತ್ಯಾಸವನ್ನು ವಿಶದೀಕರಿಸುವರು.<br>• ಭೂಮಿಯ ಭ್ರಮಣ ಹಾಗೂ ಅದರ ಪರಿಣಾಮಗಳನ್ನು ವಿಶದೀಕರಿಸುವರು.<br>• ಸಮಯ ನಿರ್ಣಯದಲ್ಲಿ ಗ್ರೀನಿಚ್ ರೇಖೆ ಹಾಗೂ ಅಂತಾರಾಷ್ಟ್ರೀಯ ದಿನಾಂಕ ರೇಖೆಗಳ ಪ್ರಾಧಾನ್ಯವನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸುವರು.<br>• ಗ್ರೀನಿಚ್ ರೇಖೆಯ ಆಧಾರದಲ್ಲಿ ಭಾರತ ಹಾಗೂ ಇತರ ದೇಶಗಳ ಸಮಯವನ್ನು ನಿರೀಕ್ಷಿಸುವರು. |

## ಅಧ್ಯಾಯದೆಡೆಗೆ....

ಮುಂಜಾನೆ ಸೂರ್ಯನು ಪೂರ್ವದಲ್ಲಿ ಉದಯಿಸುವುದು, ಮಧ್ಯಾಹ್ನ ತಲೆಯ ನೇರ ಮೇಲೆ ಬರುವುದು, ಬಳಿಕ ಕೆಳಗಿಳಿದು ಪಶ್ಚಿಮ ದಿಗಂತದಲ್ಲಿ ಅಸ್ತಮಿಸುವುದು ದೈನಂದಿನ ದೃಶ್ಯವಾಗಿದೆ. ಸೂರ್ಯನನ್ನು ಸುತ್ತುತ್ತಿರುವ ಭೂಮಿಯ ಭ್ರಮಣದಿಂದಾಗಿ ಇದು ಸಂಭವಿಸುತ್ತಿದೆ ಎಂದು ನಮಗೆ ತಿಳಿದಿರುವುದಾಗಿದೆ. ಭೂಮಿಯ ಪರಿಕ್ರಮಣಕ್ಕನುಸಾರವಾಗಿ ಹವಾಮಾನದಲ್ಲಿ ಉಂಟಾಗುವ ಬದಲಾವಣೆಯನ್ನು ಋತು ಅಥವಾ ಕಾಲ ಎಂದು ಕರೆಯುತ್ತಾರೆ. ಒಂದು ಋತುವಿನಿಂದ ಇನ್ನೊಂದಕ್ಕೆ ಬದಲಾಗುವುದೇ ಋತುಭೇದಗಳು ಎಂಬ ತಿಳುವಳಿಕೆಯು ಮಗುವಿಗೆ ಪಾಠ ಭಾಗದಿಂದ ಲಭಿಸಬೇಕು. ಪಾಠಭಾಗವನ್ನು ಮುಖ್ಯವಾಗಿ ಎರಡಾಗಿ ವಿಭಾಗಿಸಬಹುದು. ಋತುಭೇದಗಳೆಂಬ ಪ್ರಥಮಾರ್ಧದಲ್ಲಿ ವಿವಿಧ ಋತುಗಳು, ಋತುಭೇದಗಳು ಅವುಗಳ ವಿಶೇಷತೆಗಳು, ಋತು ಭೇದಗಳಿಗಿರುವ ಕಾರಣಗಳು ಎಂಬೀ ಆಶಯಗಳೂ ಎರಡನೇ ಭಾಗದಲ್ಲಿ ಭ್ರಮಣ ಹಾಗೂ ಸಮಯ ನಿರ್ಣಯ, ಸ್ಥಳೀಯ ಸಮಯ, ಗ್ರೀನಿಚ್ ಸಮಯ. ಭಾರತೀಯ ಕಾಲಮಾನ, ಅಂತಾರಾಷ್ಟ್ರೀಯ ದಿನಾಂಕ ರೇಖೆ, ಸಮಯ ನಿರ್ಣಯ ಎಂಬೀ ಆಶಯಗಳನ್ನು ಸ್ಪಷ್ಟಗೊಳಿಸುತ್ತದೆ. ಪ್ರಕೃತಿಯಲ್ಲಿ ಉಂಟಾಗುವ ಬದಲಾವಣೆಗಳು, ಅವುಗಳಿಗಿರುವ ಕಾರಣ ಮೊದಲಾದವುಗಳನ್ನು ಮಕ್ಕಳು ತಿಳಿದುಕೊಂಡು ನೇರವಾದ ನಿರೀಕ್ಷಣೆಯ ಮೂಲಕ ಗುರುತಿಸುವುದೆಂಬ ಕಲಿಕಾ ಉದ್ದೇಶವು ಈ ಪಾಠಭಾಗದ ಮೂಲಕ ಲಭಿಸಬೇಕಾಗಿದೆ. ಋತುಗಳಿಗೆ ಹೊಂದಿಕೊಂಡು ಪ್ರಕೃತಿಯಲ್ಲಿ ಉಂಟಾಗುವ ಕೆಲವು ಬದಲಾವಣೆಗಳನ್ನು ಮಕ್ಕಳು ಪ್ರತ್ಯಕ್ಷವಾಗಿ ತಿಳಿದವರಾಗಿದ್ದಾರೆ. ಇದಕ್ಕಾಗಿ ಮಕ್ಕಳನ್ನು ತಲುಪಿಸಲು ಅಗತ್ಯವಾದ ಕೆಲವು ಪ್ರಶ್ನೆಗಳನ್ನು ಅಧ್ಯಾಪಕರು ಕೇಳಬಹುದಾಗಿದೆ.

- ಎಲ್ಲಾ ಹಣ್ಣು ಹಂಪಲುಗಳು ಎಲ್ಲಾ ಸಮಯ ಗಳಲ್ಲಿ ಲಭಿಸುವುದೇ?
- ಸೆಕೆ ಹಾಗೂ ಚಳಿ ಎಲ್ಲಾ ಕಾಲಗಳಲ್ಲೂ ಅನುಭವಕ್ಕೆ ಬರುವುದೇ?

ಮೊದಲಾದ ಪ್ರಶ್ನೆಗಳನ್ನು ಇದಕ್ಕಾಗಿ ಸೇರಿಸಬಹುದು. ಮಕ್ಕಳು ನೀಡುವ ಉತ್ತರಗಳಿಗೆ ಅಗತ್ಯವಾದ ವಿವರಣೆಗಳನ್ನು ಪಾಠಭಾಗದೊಂದಿಗೆ ಜೋಡಿಸಿ ಕೊಂಡು ನೀಡಬೇಕು. ಮುನ್ನುಡಿಯಾಗಿ ನೀಡಿರುವ ಟಿಪ್ಪಣಿಯನ್ನು ಇನ್ನಷ್ಟು ವಿವರಿಸುವುದರ ಮೂಲಕ ಮಕ್ಕಳನ್ನು ಪಾಠಭಾಗಕ್ಕೆ ತಲುಪಿಸಬಹುದು.

ಋತುಭೇದಗಳು ಒಂದು ಚಕ್ರೀಯ ವಿದ್ಯಮಾನವಾಗಿದೆ ಎಂಬ ತಿಳುವಳಿಕೆಯನ್ನು ವಿದ್ಯಾರ್ಥಿಗಳು ಪಾಠಭಾಗದಿಂದ ಗುರುತಿಸಬೇಕಾಗಿದೆ. ರೇಖಾಂಶ ರೇಖೆಗಳಿಗನುಸಾರವಾಗಿ ಸ್ಥಳೀಯ ಸಮಯದಲ್ಲಿ ಉಂಟಾಗುವ ಬದಲಾವಣೆಯನ್ನು ಮಗುವಿಗೆ ವಿಶ್ಲೇಷಣೆ ಮಾಡಲು ಸಾಧ್ಯವಾಗುವ ರೀತಿಯಲ್ಲಿ ಪಾಠಭಾಗವನ್ನು ಕ್ರಮೀಕರಿಸಲಾಗಿದೆ.

### ಋತುಭೇದಗಳು ಯಾಕೆ?

ಭೂಮಿಯ ಭ್ರಮಣ ಹಾಗೂ ಪರಿಕ್ರಮಣದಿಂದ ಉಂಟಾಗುವ ಋತುಭೇದಗಳನ್ನು ಯೂನಿಟ್‌ನ ಈ ಭಾಗವು ವಿಶದೀಕರಿಸುತ್ತದೆ.

ಭೂಮಿಯ ಎರಡು ಅರ್ಧಗೋಳದಲ್ಲಿರುವ ಪ್ರದೇಶಗಳಲ್ಲಿ ಸೌರ ಚೈತನ್ಯದ ಲಭ್ಯತೆಯಲ್ಲಿ ಕಾಲಕ್ಕನುಸಾರವಾಗಿ ಬದಲಾವಣೆಯು ಅನುಭವಕ್ಕೆ ಬರುವುದು ಯಾಕಾಗಿ? ಎಂಬ ಪ್ರಶ್ನೆಯನ್ನು ಪಾಠಭಾಗದಲ್ಲಿ ಕೇಳುವುದು. ಭೂಮಿಯ ಅಕ್ಷದ ವಾಲುವಿಕೆ ಹಾಗೂ ಪರಿಕ್ರಮಣವನ್ನು ಇದರ ಉತ್ತರವಾಗಿ ಮಗು ಕಂಡುಕೊಳ್ಳಬೇಕು.

ಹಿಂದಿನ ತರಗತಿಗಳಲ್ಲಿ ಲಭಿಸಿದ ತಿಳುವಳಿಕೆಗಳು ಈ ಉತ್ತರಕ್ಕೆ ತಲುಪಿಸಲು ಮಗುವಿಗೆ ಸಹಾಯಕವಾಗ ಬಹುದು. ಒಂದು ಗ್ಲೋಬಿನ ಸಹಾಯದೊಂದಿಗೆ ಚಿತ್ರ 1.1 ವಿಶದೀಕರಿಸುವ ಮೂಲಕ ಮಕ್ಕಳಲ್ಲಿ

ತಲುಪಬೇಕಾದ ಪ್ರಧಾನ ಆಶಯ ಅಕ್ಷದ ಸಮಾನಂತರತೆಯಾಗಿದೆ. ಇದು ಋತುಗಳು ಉಂಟಾಗುವುದಕ್ಕೆ ಕಾರಣವಾಗುವ ಪ್ರಧಾನ ಘಟಕವಾಗಿದೆ. ಪರಿಕ್ರಮಣ ತಲದಿಂದ 66½° ವಾಲುವಿಕೆಯು ಲಂಬದಿಂದ ಲೆಕ್ಕ ಹಾಕಿದರೆ ಈ ವಾಲುವಿಕೆಯು 23½° ಯಾಗಿದೆ. ಈ ವಾಲುವಿಕೆಯು ಪರಿಕ್ರಮಣದುದ್ದಕ್ಕೂ ಸ್ಥಿರವಾಗಿರುವುದುದರಿಂದ ಸೂರ್ಯ ರಶ್ಮಿಗಳು ವ್ಯತ್ಯಸ್ತ ಪ್ರಮಾಣದಲ್ಲಿ ಬೀಳುವುದು. ಮತ್ತು ಭೂಮಿಯ ಎರಡೂ ಅರ್ಧಗೋಲಗಳಲ್ಲಿ ರಾತ್ರಿ ಹಗಲಿನ ದೈರ್ಘ್ಯ ವ್ಯತ್ಯಾಸಗಳ ಅನುಭವ ಉಂಟಾಗುವುದು.

ಅನಂತರ ಪಾಠಭಾಗದಲ್ಲಿ ನೀಡಿರುವ ಭೂಮಿಯ ಪ್ರರಿಕ್ರಮಣದ ಕಾಲಾವಧಿ, ಅಧಿಕ ವರ್ಷ ಎಂಬಿವುಗಳಿಗೆ ಸಂಬಂಧಿಸಿದ ಎರಡು ಪ್ರಶ್ನೆಗಳಿಗೆ ಮಗು ಕಂಡುಕೊಳ್ಳುವ ಉತ್ತರವು ಈ ರೀತಿಯಾಗಿರಲಿ. ಭೂಮಿ ಸೂರ್ಯನ ಸುತ್ತ ಒಂದು ಪರಿಕ್ರಮಣ ಪೂರ್ತಿಗೊಳಿಸಲು 365 ದಿನಗಳು 5 ಗಂಟೆಗೆ 48 ನಿಮಿಷ 45 ಸೆಕೆಂಡುಗಳು ಬೇಕಾಗಿದೆ. ಇದನ್ನು $365\frac{1}{4}$ ದಿನಗಳಾಗಿ ಲೆಕ್ಕಹಾಕಲಾಗುತ್ತದೆ. ಇದರಲ್ಲಿ 365 ದಿನಗಳನ್ನು ಸೇರಿಸಿ ಒಂದು ವರ್ಷವಾಗಿ ಲೆಕ್ಕ ಹಾಕಲಾಗುವುದು. ಎಂದರೆ ಭೂಮಿಯ ಒಂದು ಪರಿಕ್ರಮಣ ಕಾಲಾವಧಿ ಎಂದು ಲೆಕ್ಕ ಮಾಡಲಾಗುವುದು. ಪರಿಕ್ರಮಣಕಾಲಾವಧಿಯ ಬಾಕಿಯಿರುವ 6 ಗಂಟೆಯನ್ನು (¼ ದಿವಸ) ನಿರಂತರವಾದ ನಾಲ್ಕನೇ ವರ್ಷದಲ್ಲಿ ಸೇರಿಸಿ 366 ದಿವಸಗಳಿರುವ ವರ್ಷವಾಗಿ ಲೆಕ್ಕಹಾಕಲಾಗುವುದು. ಈ ರೀತಿ 44 ವರ್ಷಗಳಿಗೊಮ್ಮೆ ಫೆಬ್ರವರಿ ತಿಂಗಳಲ್ಲಿ 29 ದಿನಗಳಿರುವುದು. ಇದನ್ನು ಅಧಿಕ ವರ್ಷ (Leap year) ಎಂದು ಕರೆಯುತ್ತಾರೆ.

2016 ಅಧಿಕ ವರ್ಷವಾಗಿತ್ತು. ಇನ್ನು ಬರುವ ಅಧಿಕ ವರ್ಷ ಹಾಗೂ ಹಿಂದೆ ಕಳೆದುಹೋದ ಅಧಿಕ ವರ್ಷಗಳನ್ನು ಪಟ್ಟಿಮಾಡಲು ಅಧ್ಯಾಪಕರು ಹೇಳಬಹುದು.

ಅನಂತರ ಹೆಚ್ಚಿನ ಓದಿಗಾಗಿ ಪಾಠಭಾಗದಲ್ಲಿ ನೀಡಿರುವ ಆಶಯಗಳಿಂದ ಸೂರ್ಯ ಮತ್ತು ಭೂಮಿ ಈ ರೀತಿಯಾಗಿ ದೂರ ಹಾಗೂ ಹತ್ತಿರಗಳಲ್ಲಿರುವುದಕ್ಕೆ ಅನುಸಾರವಾಗಿ ಭೂಮಿಯಲ್ಲಿ ಲಭ್ಯವಾಗುವ ಸೂರ್ಯ ಪ್ರಕಾಶದ ಅಳತೆಯಲ್ಲಿ ಹೆಚ್ಚು ಕಡಿಮೆಗಳು ಉಂಟಾಗುತ್ತವೆ ಎಂಬ ಸಾಮಾನ್ಯ ತಿಳುವಳಿಕೆಯು ಮಗುವಿಗೆ ಲಭಿಸಬೇಕು.

ಸೂರ್ಯನ ಅಯನಗಳು ಹಾಗೂ ಋತುಗಳನ್ನು ಚಿತ್ರ 1.2ನ್ನು ವಿಶದೀಕರಿಸುವುದರ ಮೂಲಕ ಮಕ್ಕಳಿಗೆ ತಲುಪಿಸಬೇಕು. ಈ ಅಯನಗಳು ಹಾಗೂ ಋತುಗಳನ್ನು ಚಿತ್ರಿಸಿರುವ ವಿವಿಧ ಚಾರ್ಟುಗಳನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿ. ಈ ಚಿತ್ರದ ಆಧಾರದಲ್ಲಿ ಆಶಯಗಳನ್ನು ರೂಪೀಕರಿಸುವುದಕ್ಕಾಗಿ ಕೆಲವು ಪ್ರಶ್ನೆಗಳನ್ನು ಕೇಳಬಹುದು.

- ಯಾವೆಲ್ಲಾ ದಿನಗಳಲ್ಲಿ ಸೂರ್ಯ ರಶ್ಮಿಗಳು ಭೂಮಧ್ಯ ರೇಖೆಯಲ್ಲಿ ಲಂಬವಾಗಿ ಬೀಳುತ್ತದೆ?
- ಈ ದಿನಗಳಲ್ಲಿ ಉತ್ತರ–ದಕ್ಷಿಣ ಅರ್ಧಗೋಲಗಳಲ್ಲಿ ರಾತ್ರಿ ಹಗಲಿನ ದೈರ್ಘ್ಯ ಯಾವ ರೀತಿಯಲ್ಲಾಗಿರುವುದು?
- ಉತ್ತರಾಯಣ ರೇಖೆ ಮತ್ತು ದಕ್ಷಿಣಾಯನ ರೇಖೆಗಳ ಮೇಲೆ ಸೂರ್ಯ ಕಿರಣಗಳು ಲಂಬವಾಗಿ ಬೀಳುವ ದಿನಗಳು ಯಾವುವು?
- ಈ ದಿನಗಳಲ್ಲಿ ಎರಡೂ ಅರ್ಧಗೋಲಗಳಲ್ಲಿ ರಾತ್ರಿ–ಹಗಲಿನ ದೈರ್ಘ್ಯ ಯಾವ ರೀತಿಯಲ್ಲಾಗಿರುವುದು?

ಉತ್ತರಾಯನ ರೇಖೆ ಹಾಗೂ ದಕ್ಷಿಣಾಯನ ರೇಖೆಗಳ ಮಧ್ಯೆ ಇರುವ ಸೂರ್ಯನ ಸ್ಥಾನ ಬದಲಾವಣೆಯನ್ನು ಈ ರೀತಿಯಾಗಿ ಮಗುವಿಗೆ ಅರ್ಥೈಸಿಕೊಡಬಹುದು. ಈ ಸ್ಥಾನ ಬದಲಾವಣೆಯನ್ನು ಅಯನ ಎಂದು ಕರೆಯುತ್ತಾರೆ. ಅಕ್ಷದ ವಾಲುವಿಕೆಯ ಮೇಲಿರುವ ಸೂರ್ಯನ ಅಯನವು ಭೂಮಿಯಲ್ಲಿ ಋತುಭೇದಗಳಿಗೆ ಕಾರಣವಾಗುತ್ತದೆ.

ಚಿತ್ರ 1.3ನ್ನು ವಿವರಿಸುವುದರ ಮೂಲಕ ವಿಷುವತ್ಸಂಕ್ರಾಂತಿ ಎಂಬ ಆಶಯವನ್ನು ಮಕ್ಕಳಿಗೆ ಸ್ಪಷ್ಟಪಡಿಸಿ ಕೊಡಬೇಕು. ಮಾರ್ಚ್ 21 ಮತ್ತು ಸೆಪ್ಟಂಬರ್ 23ರಂದು ಸೂರ್ಯ ಕಿರಣಗಳು ಭೂಮಧ್ಯ ರೇಖೆಯ ಮೇಲೆ ಲಂಬವಾಗಿ ಬೀಳುವುದರಿಂದ ವಿಷುವತ್ಸಂಕ್ರಾಂತಿಯ ಮೇಲೆ ಲಂಬವಾಗಿ ಬೀಳುವುದರಿಂದ ವಿಷ ವತ್ಸಂಕ್ರಾಂತಿಗಳು ಉಂಟಾಗುತ್ತವೆ ಎಂಬ ತಿಳುವಳಿಕೆ ಮಕ್ಕಳಿಗೆ ಲಭಿಸಬೇಕು.

ರಾತ್ರಿ ಹಗಲಿನ ದೈರ್ಘ್ಯವು ಸಮಾನವಾಗಿ ಅನುಭವಕ್ಕೆ ಬರುವ ವಿಷುವತ್ಸಂಕ್ರಾಂತಿ ದಿನಗಳಲ್ಲಿ ಮಾರ್ಚ್ 21ನ್ನು

ವಸಂತ ವಿಷುವತ್ಸಂಕ್ರಾಂತಿ (Spring Equinox) ಎಂದೂ ಸೆಪ್ಟೆಂಬರ್ 23ರನ್ನು ಶರತ್ ವಿಷುವತ್ಸಂಕ್ರಾಂತಿ (Autumn Equinox) ಎಂದೂ ಕರೆಯುತ್ತಾರೆ.

## ಬೇಸಗೆ ಕಾಲ ಹಾಗೂ ಚಳಿಗಾಲ

ಚಳಿಗಾಲ ಹಾಗೂ ಬೇಸಗೆ ಕಾಲ ಸೂರ್ಯನ ಆಯನದಿಂದಾಗಿ ಅನುಭವಕ್ಕೆ ಬರುವ ಎರಡು ಪ್ರಕಟವಾದ ಋತು ಭೇದಗಳಾಗಿವೆ . ಮಾರ್ಚ್ ತಿಂಗಳಿನಿಂದ ಸೆಪ್ಟಂಬರ್ ತಿಂಗಳ ವರೆಗೆ ಸೂರ್ಯನ ಸ್ಥಾನವು ಉತ್ತರಾರ್ಧ ಗೋಲದಲ್ಲಾಗಿದೆ ಎಂದೂ ಈ ಕಾಲದಲ್ಲಿ ಉತ್ತರಾರ್ಧ ಗೋಲದಲ್ಲಿ ಬೇಸಗೆ ಕಾಲ ಮತ್ತು ದಕ್ಷಿಣಾರ್ಧಗೋಲದಲ್ಲಿ ಚಳಿಗಾಲವಾಗಿರುವುದು ಎಂಬ ತಿಳುವಳಿಕೆಯು ರೂಪೀಕರಿಸಬೇಕಾಗಿದೆ.

ಆದರೆ ಸೆಪ್ಟೆಂಬರ್‌ನಿಂದ ಮಾರ್ಚ್‌ವರೆಗೆ ಸೂರ್ಯನ ಸ್ಥಾನವು ದಕ್ಷಿಣಾರ್ಧ ಗೋಲದಲ್ಲಿರುವುದೆಂದು ಈ ಕಾಲಾವಧಿಯಲ್ಲಿ ದಕ್ಷಿಣಾರ್ಧ ಗೋಲದಲ್ಲಿ ಬೇಸಗೆ ಕಾಲವು ಉತ್ತರಾರ್ಧ ಗೋಲದಲ್ಲಿ ಚಳಿಗಾಲವಾ ಗಿರುವುದೆಂಬ ಆಶಯುವನ್ನು ಮಕ್ಕಳಿಗೆ ತಿಳಿಯಪಡಿಸಬೇಕು. ಈ ರೀತಿಯಾಗಿ ವರ್ಷದ ಅರ್ಧ ಚಳಿಗಾಲವೂ ಬೇಸಗೆ ಕಾಲವೂ ಒಂದರ ನಂತರ ಒಂದಾಗಿ ಅನುಭವಕ್ಕೆ ಬರುವುದೆಂಬುದನ್ನು ಮಗು ತಿಳಿಯಬೇಕಾಗಿದೆ.

ಈ ಕಾಲಾವಧಿಯ ಮಧ್ಯೆ ಇರುವ ಶೈತ್ಯಾಯನ ದಿನದಲ್ಲಿ (ಡಿಸೆಂಬರ್ 21) ಸೂರ್ಯನ ಸ್ಥಾನವು ದಕ್ಷಿಣಾಯನ ರೇಖೆಯ ಮೇಲೆಯಾಗಿರುವುದರಿಂದ ಸೂರ್ಯ ಕಿರಣಗಳು ಲಂಬವಾಗಿ ಬೀಳುತ್ತವೆ. ಆದುದರಿಂದ ಈ ದಿನ ಉತ್ತರಾರ್ಧಗೋಲದಲ್ಲಿ ರಾತ್ರಿಯ ದೈರ್ಘ್ಯ ಹೆಚ್ಚು ಮತ್ತು ಹಗಲಿನ ದೈರ್ಘ್ಯ ಕಡಿಮೆ ಆಗಿರುತ್ತದೆ . ಆದರೆ ದಕ್ಷಿಣಾರ್ಧ ಗೋಲದಲ್ಲಿ ಹಗಲಿನ ದೈರ್ಘ್ಯ ಹೆಚ್ಚು ಮತ್ತು ರಾತ್ರಿಯ ದೈರ್ಘ್ಯ ಕಡಿಮೆಯೂ ಆಗಿರುತ್ತದೆ ಎಂಬುದನ್ನು ಪಾಠಭಾಗದ ಪ್ರಶ್ನೆಗಳಿಗೆ ಉತ್ತರವಾಗಿ ಮಗು ಕಂಡುಕೊಳ್ಳಬೇಕು.

## ವಸಂತವೂ ಹೇಮಂತವೂ

ಅನಂತ ಪಾಠಭಾಗದಲ್ಲಿ ವಸಂತ ಕಾಲ ಮತ್ತು ಹೇಮಂತ ಕಾಲಗಳ ಕುರಿತಾಗಿ ವಿವರಿಸುತ್ತದೆ. ಇವೆರಡು ಪ್ರಧಾನ ಋತುಗಳಾದ ಚಳಿಗಾಲ ಮತ್ತು ಬೇಸಗೆ ಕಾಲಗಳ ಮಧ್ಯೆ ಇರುವ ಎರಡು ಬದಲಾವಣೆಯ ಕಾಲಗಳಾಗಿವೆ ಎಂಬ ಆಶಯವು ಮಗುವಿಗೆ ಲಭಿಸಬೇಕು. ನಾಲ್ಕು ಋತುಗಳ ಚಕ್ರೀಯ ವಿಶೇಷತೆಗಳನ್ನು ವಿಶದೀಕರಿಸುವ ಪಟ್ಟಿಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಈ ಪಟ್ಟಿಯನ್ನು ಮತ್ತು ಚಿತ್ರ(1.2)ನ್ನು ಉಪಯೋಗಿಸುವುದರ ಮೂಲಕ ವಿವಿಧ ಋತುಗಳ ಕುರಿತಾಗಿ ಹೆಚ್ಚಿನ ಸ್ಪಷ್ಟತೆ ಮಗುವಿಗೆ ಲಭಿಸುತ್ತದೆ. ಚಿತ್ರ 1.2ರ ಮಾದರಿ ತಯಾರಿಸಿ ಅದರಲ್ಲಿ ಋತುಗಳ ಹೆಸರು ಹಾಗೂ ವಿಶೇಷತೆಗಳನ್ನು ಗುರುತಿಸಿ ತರಗತಿಯಲ್ಲಿ ಪ್ರದರ್ಶಿಲು ನಿರ್ದೇಶಿಸಬಹುದಾಗಿದೆ. ಋತು ಭೇದಗಳು ಹಾಗೂ ಅವುಗಳ ಸಾಮಾನ್ಯ ಸ್ವಭಾವವನ್ನು ಮುಂದಿನ ಪಾಠಭಾಗದಲ್ಲಿ ನೀಡಲಾಗಿದೆ. ಸೂರ್ಯ ಉತ್ತರಾಯನ ಕಾಲದಲ್ಲಿ ಆರ್ಟಿಕ್ ಹಾಗೂ ಅಂಟಾರ್ಟಿಕ್ ವೃತ್ತಗಳಲ್ಲಿನ ಹಗಲು ರಾತ್ರಿಗಳು ವಿಶೇಷತೆಗಳನ್ನು ಪಾಠಭಾಗದಲ್ಲಿ ವಿವರಿಸಿದ್ದಾರೆ. ಸೂರ್ಯನ ದಕ್ಷಿಣಾಯನ ಕಾಲದಲ್ಲಿ ಅಂಟಾರ್ಟಿಕ್ ವೃತ್ತದೊಳಗಿನ ಪ್ರದೇಶಗಳಲ್ಲಿನ ರಾತ್ರಿ ಹಗಲುಗಳ ಕುರಿತಾಗಿ ನೀಡಿರುವ ಪ್ರಶ್ನೆಗೆ ಉತ್ತರವು ಈ ರೀತಿಯಾಗಿರಲಿ.

ಸೂರ್ಯನು ದಕ್ಷಿಣಾಯನ ರೇಖೆಯಲ್ಲಿರುವಾಗ (ದಕ್ಷಿಣಾಯನಕಾಲ) ಅಂಟಾರ್ಟಿಕ್ ವೃತ್ತದೊಳಗಿನ (66½°S) ಪ್ರದೇಶದುದ್ದಕ್ಕೂ ಆರು ತಿಂಗಳ ಕಾಲ ನಿರಂತರವಾದ ಹಗಲು ಅನುಭವಕ್ಕೆ ಬರುತ್ತದೆ. ನಂತರ ಆರು ತಿಂಗಳು ನಿರಂತರವಾಗಿ ರಾತ್ರಿ ಆಗಿರುತ್ತವೆ.

ಯೂನಿಟ್‌ನ ಮೊದಲಾರ್ಧವಾದ ಋತುಭೇದಗಳು ಕೊನೆಗೊಳ್ಳುವುದರೊಂದಿಗೆ ವಿವಿಧ ಋತುಗಳ ಕುರಿತಾದ ಸ್ಪಷ್ಟತೆಯು ಲಭಿಸುತ್ತದೆ. ಲಭಿಸಿದ ತಿಳುವಳಿಕೆ ಹಾಗೂ ನಿರೀಕ್ಷಣೆಗಳ ಆಧಾರದಲ್ಲಿ ಕಲಿಕಾ ಚಟುವಟಿಕೆಯಾಗಿ ಪರಿಸರ ನಿರೀಕ್ಷಣಾ ಕ್ಯಾಲೆಂಡರ್ ತಯಾರಿಸಲು ಮಕ್ಕಳು ಹೇಳಬಹುದಾಗಿದೆ.

ಚಾರ್ಟು, ಪೋಸ್ಟರ್ ಎಂಬಿವುಗಳನ್ನು ತಯಾರಿಸಿ

ಕಲಿಕಾ ಚಟುವಟಿಕೆಗಳನ್ನು ಇನ್ನೂ ಸರಳಗೊಳಿಸಬಹುದು.

ಪ್ರಕೃತಿ ನಿರೀಕ್ಷಣಾ ಕ್ಯಾಲೆಂಡರ್ ತಯಾರಿಸುವುದರ ಮೂಲಕ ಪ್ರತಿಯೊಂದು ಕಾಲದಲ್ಲೂ (ಋತುಭೇದಗಳಲ್ಲಿ) ಉಷ್ಣತೆ ಹಾಗೂ ಮಳೆಯಲ್ಲುಂಟಾಗುವ ವ್ಯತ್ಯಾಸವನ್ನು ಮಕ್ಕಳಿಗೆ ನೇರವಾಗಿ ತಿಳಿಯಪಡಿಸಬಹುದಾಗಿದೆ. ಹವಾಮಾನ ಬದಲಾವಣೆಯಲ್ಲು ಪರಿಸರದಲ್ಲಿ ಉಂಟು ಮಾಡುವ ಬದಲಾವಣೆಗಳನ್ನು ದಾಖಲಿಸುವ ಈ ಕ್ಯಾಲೆಂಡರ್ ತಯಾರಿಸುವಾಗ ಕೆಳಗೆ ನೀಡಿರುವ ನಿರ್ದೇಶಗಳನ್ನು ಪರಿಗಣಿಸುವಿರಲ್ಲವೇ?

- ಈ ಯೂನಿಟ್‌ನಲ್ಲಿ ಸೇರಿಸಿರುವುದು ಜೂನ್ ತಿಂಗಳಲ್ಲಿ ಕಲಿಸಬೇಕಾದ ಪಾಠಭಾಗವಾಗಿದೆ. . ಆದುದರಿಂದ ಜೂನ್ ತಿಂಗಳಿಂದ ಶೈಕ್ಷಣಿಕ ವರ್ಷದ ಅಂತ್ಯದ ವರೆಗೆ ಈ ಚಟುವಟಿಕೆಯನ್ನು ನಡೆಸಬಹುದು.
- ಇದಕ್ಕಾಗಿ ಮಗು ಒಂದು ನೋಟ್ಸ್ ಪುಸ್ತಕ ನಿರೀಕ್ಷಣಾ ಡೈರಿಯಾಗಿಟ್ಟುಕೊಳ್ಳಬೇಕು.
- ಶಾಲೆಯ ಸಮಾಜವಿಜ್ಞಾನ ಪ್ರಯೋಗಾಲಯದ ಉಪಕರಣಗಳನ್ನುಪಯೋಗಿಸಿ(ಥರ್ಮೋಮೀಟರ್, ಹೈಗ್ರೋ ಮೀಟರ್, ಮಳೆಮಾಪಕ ಇತ್ಯಾದಿ ) ವಾತಾವರಣ ಉಷ್ಣತೆ, ಆರ್ದ್ರತೆ, ಮಳೆ ಎಂಬಿವುಗಳನ್ನು ಅಳೆದು ಡೈರಿಯಲ್ಲಿ ದಾಖಲಿಸಬೇಕು.
- ಸರಿಯಾದ ಅಂತರದಲ್ಲಿ (ಎರಡೋ ಮೂರೋ ದಿನಗಳಿಗೊಮ್ಮೆ) ಈ ರೀತಿ ಮಾಡಬಹುದಾಗಿದೆ.
- ಮಳೆ ಲಭಿಸುವ ಎಲ್ಲಾ ದಿನಗಳಲ್ಲೂ ಮಳೆಯ ಅಳತೆಯನ್ನು ಸಂಗ್ರಹಿಸಿ ಈ ಅವಧಿಗಳಲ್ಲಿನ ಮಳೆಯ ಸರಾಸರಿಯನ್ನು ಡೈರಿಯಲ್ಲಿ ದಾಖಲಿಸಬಹುದು.

  ಈ ರೀತಿಯಾಗಿ ನೋಟ್ಸ್ ಪುಸ್ತಕದಲ್ಲಿ ದಾಖಲಿಸುವ ಮಾಹಿತಿಗಳನ್ನು ತಿಂಗಳು, ದಿನಾಂಕ ಎಂಬೀ ಕ್ರಮದಲ್ಲಿ ಕ್ರೋಡೀಕರಿಸಿ ನಿರೀಕ್ಷಣ ಕ್ಯಾಲೆಂಡರ್ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಬಹುದು.
- ಶೈಕ್ಷಣಿಕ ವರ್ಷದ ಕೊನೆಗೆ ಸಮಾಜವಿಜ್ಞಾನ ಕ್ಲಬ್‌ನ ನೇತೃತ್ವದಲ್ಲಿ ಈ ಮಾಹಿತಿ ಸಂಗ್ರಹವನ್ನು ವಿಶ್ಲೇಷಣೆ ಮಾಡಿ ಪ್ರಾದೇಶಿಕ ಹವಾಮಾನ ಕಲಿಕಾ ವರದಿಯನ್ನು ತಯಾರಿಸಬಹುದು.
- ಪ್ರತಿಯೊಂದು ಹವಾಮಾನದಲ್ಲೂ(ಶಿಶಿರ, ಹೇಮಂತ, ವಸಂತ) ಪ್ರಕೃತಿಯಲ್ಲುಂಟಾಗುವ ಬದಲಾವಣೆಯನ್ನು ಇದರೊಂದಿಗೆ ದಾಖಲಿಸಿದರೆ ಋತುಭೇದಗಳು ಉಂಟು ಮಾಡುವ ಬದಲಾವಣೆಗಳನ್ನು ಸ್ಪಷ್ಟಗೊಳಿಸಬಹುದು.
  - ಎಲೆಗಳು ಚಿಗುರುವುದು
  - ಎಲೆಗಳು ಉದುರುವುದು
  - ವೃಕ್ಷಗಳು ಹೂ ಬಿಡುತ್ತವೆ
  - ವೃಕ್ಷಗಳಲ್ಲಿ ಹಣ್ಣು ಹಂಪಲುಗಳು ಉಂಟಾಗುತ್ತವೆ.
  - ಕಾಯಿಗಳು ಫಲಿತು ಹಣ್ಣಾಗುತ್ತವೆ

    ಈ ರೀತಿಯಾಗಿರುವವುಗಳನ್ನು ಸಹ ಇದರ ಭಾಗವಾಗಿ ತಯಾರಿಸಬಹುದು.

ಈ ರೀತಿಯ ಚಟುವಟಿಕೆಯನ್ನು ಆಯೋಜಿಸುವುದರ ಮೂಲಕ ಕಲಿಕೆಯು ಹೆಚ್ಚು ಪರಿಸರ ಸ್ನೇಹಿಯಾಗುವುದರೊಂದಿಗೆ ಮಕ್ಕಳಲ್ಲಿ ಪರಿಸರ ನಿರೀಕ್ಷಣಾ ಪ್ರಜ್ಞೆ ಹೆಚ್ಚಾಗುತ್ತದೆ. ಭೂಗೋಲ ವಿಜ್ಞಾನ ಕಲಿಕೆಯು ಮಾನವ ಹಾಗೂ ಪ್ರಕೃತಿಗಳೊಳಗಿನ ಸಂಬಂಧವಾಗಿದೆ ಎಂಬ ಆಶಯವನ್ನು ಮಕ್ಕಳಲ್ಲಿ ರೂಪಿಸಲು ಇದರಿಂದ ಸಾಧ್ಯವಾಗುತ್ತದೆ. ಇದರ ಯಶಸ್ವಿಯಾಗಿ ಅಧ್ಯಾಪಕರು ನಿರಂತರವಾಗಿ ಮಧ್ಯಪ್ರವೇಶಿಸಿದರೊಂದಿಗೆ ಕ್ರಿಯಾತ್ಮಕವಾದ ನಿರ್ದೇಶಗಳನ್ನು ದೃಢಪಡಿಸಬೇಕು.

## ಭ್ರಮಣ ಮತ್ತು ಸಮಯ ನಿರ್ಣಯ

ಯೂನಿಟ್‌ನ ದ್ವಿತೀಯಾರ್ಧಲ್ಲಿ ಭ್ರಮಣ ಮತ್ತು ಸಮಯ ನಿರ್ಣಯ ಎಂಬ ಆಶಯುವನ್ನು ಪ್ರಧಾನವಾಗಿ ಸೇರಿಸಿರುವುದು ಪ್ರಸಿದ್ಧ ಸಂಚಾರಿ ಸಾಹಿತಿಯಾದ ಎಸ್. ಕೆ. ಪೊಟ್ಟಕ್ಕಾಡ್ ಅವರ 'ಪಾದಿರಾ ಸೂರ್ಯಂಡೆ ನಾಟಿಲ್' ಎಂಬ ಪ್ರವಾಸ ಕಥನದ ಒಂದು ಭಾಗವನ್ನು ಪಾಠಭಾಗದಲ್ಲಿ ನೀಡಲಾಗಿದೆ. ಇದನ್ನು ತರಗತಿಯಲ್ಲಿ ಮಂಡಿಸುವುದರ ಮೂಲಕ ಪ್ರಾದೇಶಿಕ ಬದಲಾವಣೆಗೆ ಅನುಸಾರವಾಗಿ

ಸಮಯದಲ್ಲಿ ವ್ಯತ್ಯಾಸ ಉಂಟಾಗುವುದೆಂದು ವಿಶದೀಕರಿಸಬೇಕು.

ಅನಂತರ ಸ್ಥಳೀಯ ಸಮಯ ನಿರ್ಣಯದ ಭಾಗದಲ್ಲಿ ಭಾರತದಲ್ಲಿ ಎಲ್ಲಾ ರಾಜ್ಯಗಳಲ್ಲೂ ಸ್ಥಳೀಯ ಸಮಯ ಒಂದೇ ಆಗಿರಬಹುದೇ? ಎಂಬ ಪ್ರಶ್ನೆಗೆ ಅಲ್ಲ ಎಂಬ ಉತ್ತರಕ್ಕೆ ಮಗು ತಲುಪಬೇಕು. ಸೂರ್ಯನ ಉಚ್ಛಸ್ಥಾನವು ವಿವಿಧ ಪ್ರದೇಶಗಳಲ್ಲಿ ವ್ಯತ್ಯಸ್ತವಾಗಿದೆ. ಆದುದರಿಂದ ಸೂರ್ಯನ ಉಚ್ಛಸ್ಥಾನವನ್ನು ಆಧಾರವಾಗಿರಿಸಿ ಸ್ಥಳೀಯ ಸಮಯವನ್ನು ಲೆಕ್ಕ ಹಾಕಿದರೆ ವಿವಿಧ ಸ್ಥಳಗಳಲ್ಲಿ ಅದು ವ್ಯತ್ಯಾಸವಾಗಿರುತ್ತದೆ.

ಒಂದು ದೇಶದಲ್ಲಿ ಅನೇಕ ಸ್ಥಳೀಯ ಸಮಯಗಳು ಇದ್ದರೆ ಅದರಿಂದ ಉಂಟಾಗುವ ತೊಂದರೆಗಳ ಪಟ್ಟಿಯನ್ನು ಮುಂದೆ ಪಾಠಭಾಗದಲ್ಲಿ ನೀಡಲಾಗಿದೆ. ಅದರೊಂದಿಗೆ ಕೆಳಗೆ ಹೇಳಿರುವವುಗಳನ್ನು ಸೇರಿಸಬಹುದಾಗಿದೆ.

- ರಾಷ್ಟ್ರ ಮಟ್ಟದಲ್ಲಿರುವ ಸಾರ್ವಜನಿಕ ಪರೀಕ್ಷೆಗಳ ಸಮಯ ಕ್ರಮವನ್ನು ಏಕೀಕರಿಸಲು ಸಾಧ್ಯವಿಲ್ಲ.
- ದೇಶದೆಲ್ಲಡೆಗಳಿಗೂ ಭಾಧಕವಾಗುವ ರೀತಿಯಲ್ಲಿ ವಿಮಾನಗಳ ಸಮಯ ಕ್ರಮವನ್ನು ತಯಾರಿಸಲು ಸಾಧ್ಯವಲ್ಲ.

ಭೂಮಿಯು ತನ್ನ ಅಕ್ಷದಲ್ಲಿ ಭ್ರಮಣ ಮಾಡುವುದರ ವಿಶೇಷತೆಗಳನ್ನು ಪಾಠಭಾಗದಲ್ಲಿ ಪಟ್ಟಿ ಮಾಡುವರು. ಇದನ್ನು ತರಗತಿಯಲ್ಲಿ ವಿವರವಾಗಿ ಚರ್ಚಿಸಬೇಕು. ಸಮಯ ನಿರ್ಣಯಕ್ಕೆ ಸಂಬಂಧಿಸಿ ಮುಂದಿನ ಚಟುವಟಿಕೆಗಳಿಗೆ ಈ ಚರ್ಚೆಯು ಮಾರ್ಗ ದರ್ಶಿಯಾಗುತ್ತದೆ.

ಭ್ರಮಣವು ಪಶ್ಚಿಮದಿಂದ ಪೂರ್ವಕ್ಕೆ ಆಗಿರುವುದರಿಂದ ಸೂರ್ಯೋದಯವನ್ನು ಮೊದಲು ಕಾಣಲು ಸಾಧ್ಯವಾಗುವುದು. ಆ ಪ್ರದೇಶದ ಪೂರ್ವ ಭಾಗದಲ್ಲಿ ಆಗಿರುತ್ತದೆ. ಭಾರತದಲ್ಲಿ ಉದಯ ಸೂರ್ಯವನ್ನು ಮೊದಲು ಕಾಣಲು ಸಾಧ್ಯವಾಗುವುದು ಪೂರ್ವದಂಚಿನ ಪ್ರಾಂತ್ಯವಾದ ಅರುಣಾಚಲ ಪ್ರದೇಶದಲ್ಲಿರುವವರಿಗಾಗಿದೆ. ಗೋಲ ಮತ್ತು ಭಾರತದ ರಾಜಕೀಯ ಭೂಪಟವನ್ನು ಬಳಸಿಕೊಳ್ಳುವ ಮೂಲಕ ಈ ಆಶಯಗಳಲ್ಲಿ ಸ್ಪಷ್ಟತೆ ಲಭಿಸಲು ಮಕ್ಕಳಿಗೆ ಸಹಾಯಕವಾಗುವುದು.

ಅನಂತರ 24 ಗಂಟೆಗಳಲ್ಲಿನ ಭೂಮಿಯ ಭ್ರಮಣ ಹಾಗೂ ಸಮಯ ನಿರ್ಣಯ ರೀತಿಗಳನ್ನು ವಿಶದೀಕರಿಸುವುದು.

## ಗ್ರೀನಿಚ್ ಸಮಯ ಹಾಗೂ ಸಮಯ ವಲಯಗಳು

ಗ್ರೀನಿಚ್ ರೇಖೆಯನ್ನು ಆಧಾರವಾಗಿಟ್ಟುಕೊಂಡು ಒಂದು ಗಂಟೆಯಂತೆ ವ್ಯತ್ಯಾಸವಿರುವ 24 ಸಮಯ ವಲಯಗಳಾಗಿ ಜಗತ್ತನ್ನು ವಿಭಜಿಸಲಾಗಿದೆ ಎಂದೂ ಇವು ಪ್ರತಿಯೊಂದೂ $15^0$ ರೇಖಾಂಶ ವ್ಯಾಪ್ತಿಯಲ್ಲಿರು ವುದೆಂದೂ ಪಾಠಭಾಗದಲ್ಲಿರುವ ಪ್ರಶ್ನೆಗೆ ಉತ್ತರವಾಗಿ ಮಗು ಕಂಡುಕೊಳ್ಳಬೇಕು.

## ಪ್ರಮಾಣ ಸಮಯ ಮತ್ತು ಭಾರತೀಯ ಕಾಲಮಾನ

ಪೂರ್ವ–ಪಶ್ಚಿಮಕ್ಕೆ ವಿಸ್ತಾರ(ರೇಖಾಂಶ ರೇಖೆ ವ್ಯಾಪ್ತಿ) ಹೆಚ್ಚಾಗಿರುವ ಪ್ರದೇಶಗಳಲ್ಲಿ ಒಂದೇ ಪ್ರಮಾಣ ಸಮಯಕ್ಕನುಸರಿಸಿ ಸಮಯವನ್ನು ನಿರ್ಣಯಿಸು ವುದರಿಂದ ವಿವಿಧ ರೀತಿಯ ಪ್ರಾಯೋಗಿಕ ತೊಂದರೆಗಳನ್ನು ಅನುಭವಿಸುವುದಿದೆ.

**ಪ್ರಮಾಣ ಸಮಯ (Standard Time)**

ಪ್ರಮಾಣ ರೇಖಾಂಶ, ಪ್ರಮಾಣ ವೇಳೆ ಎಂಬೀ ಆಶಯಗಳನ್ನು ಈ ಭಾಗದಲ್ಲಿ ನೀಡಲಾಗಿದೆ. ವಿವಿಧ ರೇಖಾಂಶಗಳಿರುವ ದೇಶಗಳಲ್ಲಿ ಉಂಟಾಗುವ ಸಮಯ ವ್ಯತ್ಯಾಸವನ್ನು ಪರಿಹರಿಸಲು ಆದೇಶದ ಮಧ್ಯಭಾ ಗದಲ್ಲಾಗಿ ಹಾದುಹೋಗುವ ರೇಖಾಂಶದ ಸಮಯವನ್ನು ಪ್ರಮಾಣ ವೇಳೆಯಾಗಿ ನಿರ್ಧರಿಸು ವರೆಂಬ ಸತ್ಯಾಂಶವನ್ನು ಮಗುವಿಗೆ ಈ ಪಾಠಭಾಗದ ಮೂಲಕ ಲಭಿಸಬೇಕು. ಪ್ರಮಾಣ ರೇಖಾಂಶದ ಸಮಯವೇ ಪ್ರಮಾಣ ವೇಳೆಯಾಗಿದೆ ಎಂದು ಮಗು

ಗುರುತಿಸಲಿ.

ರೇಖಾಂಶ ವ್ಯಾಪ್ತಿ ಹೆಚ್ಚು ಇರುವ ದೇಶಗಳಲ್ಲಿ ಒಂದಕ್ಕಿಂತ ಹೆಚ್ಚು ಪ್ರಮಾಣ ರೇಖಾಂಶಗಳ ಆಧಾರದಲ್ಲಿ ಸಮಯ ನಿರ್ಣಯ ಮಾಡಬೇಕಾಗುವುದರ ಕಾರಣವನ್ನು ಮಗು ಈ ರೀತಿಯಲ್ಲಿ ಕಂಡುಕೊಳ್ಳಲಿ. ಸಾರ್ವಜನಿಕ ಪರೀಕ್ಷೆ, ವಿಮಾನ, ರೈಲುಗಳಲ್ಲಿನ ಪ್ರಯಾಣದ ಸಮಯ ಮೊದಲಾದವುಗಳ ಸಮಯವನ್ನು ಏಕೀಕರಿಸಲು ಸಾಧ್ಯವಲ್ಲದ ಕಾರಣ ಈ ದೇಶಗಳನ್ನು ವಿವಿಧ ಸಮಯ ವಲಯಗಳಾಗಿಸಿ ವಿಭಜಿಸಿ ಪ್ರತಿಯೊಂದು ವಲಯಕ್ಕೊಂದು ಪ್ರಮಾಣ ವೇಳೆಯನ್ನು ನಿರ್ಧರಿಸಲಾಗಿದೆ. ಯು.ಎಸ್.ಎ, ಕೆನಡ, ರಷ್ಯಾ ಎಂಬೀ ದೇಶಗಳಲ್ಲಿ ಒಂದಕ್ಕಿಂತ ಹೆಚ್ಚು ಸಮಯ ವಲಯಗಳಿವೆ. ಪಶ್ಚಿಮ ಯುರೋಪಿನ ದೇಶಗಳು ಗ್ರೀನಿಚ್ ಸಮಯವನ್ನು ಅನುಸರಿಸುವಾಗ ಪೂರ್ವ ಯುರೋಪಿನ ದೇಶಗಳು 15°E ರೇಖಾಂಶದ ಸಮಯವನ್ನು ಪ್ರಮಾಣ ವೇಳೆಯಾಗಿ ಸ್ವೀಕರಿಸುತ್ತಾರೆ.

**ಭಾರತೀಯ ಕಾಲಮಾನ**

15° ರೇಖಾಂಶಕ್ಕೆ ಒಂದು ಗಂಟೆ ಸಮಯ ವ್ಯತ್ಯಾಸ ಎಂಬ ಕ್ರಮದಲ್ಲಿ ಸುಮಾರು 30 ಡಿಗ್ರಿ ರೇಖಾಂಶ ವ್ಯಾಪ್ತಿಯಲ್ಲಿ(ಗುಜರಾತ್‌ನಿಂದ ಅರುಣಾಚಲ ಪ್ರದೇಶದ ವರೆಗೆ) ಇರುವ ಭಾರತದಲ್ಲಿ ಪೂರ್ವ–ಪಶ್ಚಿಮಗಳ ಸಮಯ ವ್ಯತ್ಯಾಸ 2 ಗಂಟೆಗಳಾಗಿ ಲೆಕ್ಕಹಾಕಬಹುದಾಗಿದೆ. ವಿಭಿನ್ನ ಸಮಯಗಳು ದೇಶದ ವಿವಿಧ ಭಾಗಗಳಲ್ಲಿ ಅನುಭವಕ್ಕೆ ಬರುವುದರಿಂದ ಉಂಟಾಗುವ ತೊಂದರೆಗಳನ್ನು ಮೊದಲೇ ವಿಶದೀಕರಿಸಿದ್ದನ್ನು ಇಲ್ಲಿ ಪುನಃ ಮಕ್ಕಳಿಗೆ ನೆನಪಿಸಬಹುದಾಗಿದೆ. ಈ ರೀತಿಯಾದ ತೊಂದರೆಗಳನ್ನು ಪರಿಹರಿಸಲು 82°½° ಪೂರ್ವ ರೇಖಾಂಶ ರೇಖೆಯನ್ನು ಭಾರತದ ಪ್ರಮಾಣ ರೇಖಾಂಶವಾಗಿ ಪರಿಗಣಿಸಿ ಆ ರೇಖೆಯ ಸಮಯವನ್ನು ಭಾರತದ ಪ್ರಮಾಣ ರೇಖಾಂಶವಾಗಿ ಕ್ರಮೀಕರಿಸಲಾಗಿದೆ.

68° ಯಿಂದ 97° ವರೆಗಿನ ಪೂರ್ವ ರೇಖಾಂಶ ವ್ಯಾಪ್ತಿಯಲ್ಲಿರುವ ಭಾರತದ ಸಾಮಾನ್ಯ ಮಧ್ಯ ಭಾಗದಲ್ಲಾಗಿ ಹಾದು ಹೋಗುವ ರೇಖೆಯಾದುದರಿಂದ 82½° ಪೂರ್ವ ರೇಖಾಂಶ ರೇಖೆಯನ್ನು ಭಾರತದ ಪ್ರಮಾಣ ರೇಖಾಂಶವಾಗಿ ಪರಿಗಣಿಸುವುದು ಎಂದು ಪಾಠಭಾಗದಲ್ಲಿರುವ ಪ್ರಶ್ನೆಗೆ ಉತ್ತರವಾಗಿ ಮಗು ಕಂಡುಕೊಳ್ಳಬೇಕು.

ಭಾರತದ ರಾಜಕೀಯ ಭೂಪಟದ ಸಹಾಯದಿಂದ ಪ್ರಮಾಣ ರೇಖಾಂಶವು ಹಾದುಹೋಗುವ ಪ್ರಾಂತ್ಯ ಮತ್ತು ನಗರಗಳ ಪಟ್ಟಿ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಲು ಮಕ್ಕಳಲ್ಲಿ ಹೇಳಬೇಕು.

ಭಾರತೀಯ ಕಾಲಮಾನವು ಗ್ರೀನಿಚ್‌ನಿಂದ ಎಷ್ಟು ಡಿಗ್ರಿ ವ್ಯತ್ಯಾಸದಲ್ಲಿದೆ ಎಂಬುದನ್ನು ಪಾಠಭಾಗದ ಮೂಲಕ ಕಂಡುಕೊಳ್ಳಲು ಹೇಳಲಾಗಿದೆ. ಇದಕ್ಕೆ 5 ಗಂಟೆ 30 ನಿಮಿಷವೆಂಬ ಉತ್ತರಕ್ಕೆ ಮಗು ತಲುಪಬೇಕು. 0° ಡಿಗ್ರಿಯಲ್ಲಿರುವ ಗ್ರೀನಿಚ್ ಸಮಯದಿಂದ 82½° ಪೂರ್ವ ರೇಖಾಂಶದಲ್ಲಿರುವ ಭಾರತ ಸಮಯ ಗ್ರೀನಿಚ್ ಸಮಯಕ್ಕಿಂತ 5 ಗಂಟೆ 30 ಮಿನಿಟು ಮುಂದೆ ಎಂದು ಮಗು ಗುರುತಿಸಿಕೊಳ್ಳಬೇಕು. ಎಂದರೆ ಗ್ರೀನಿಚ್‌ನಲ್ಲಿ ಮಧ್ಯಾಹ್ನ 12 ಗಂಟೆ ಸಮಯವಾಗುವಾಗ ಭಾರತೀಯ ಕಾಲಮಾನ ಸಂಜೆ 5½ ಗಂಟೆ ಯಾಗಿರುತ್ತದೆ.

**ಅಂತಾರಾಷ್ಟ್ರೀಯ ದಿನಾಂಕ ರೇಖೆ**

ಅಂತಾರಾಷ್ಟ್ರೀಯ ದಿನಾಂಕ ರೇಖೆಯ ವಿಶೇಷತೆಗಳನ್ನು ಪಾಠದ ಈ ಭಾಗವು ವಿಶದೀಕರಿಸುತ್ತದೆ. ಈ ಭಾಗದ ವಿನಿಮಯಕ್ಕೆ ಗೋಲ, ಪ್ರಪಂಚದ ಭೂಪಟ ಎಂಬಿವುಗಳನ್ನು ಉಪಯೋಗಿಸುವುದರ ಮೂಲಕ ಹೆಚ್ಚಿನ ಆಶಯಕ್ಕೆ ಸಹಾಯಕವಾಗಬಹುದು.

ಪೂರ್ವಕ್ಕೆ ಹೋದಂತೆ ಸ್ಥಳೀಯ ಸಮಯ ಹೆಚ್ಚಾಗುತ್ತದೆ ಹಾಗೂ ಪಶ್ಚಿಮಕ್ಕೆ ಹೋದಂತೆ ಇದು ಕಡಿಮೆಯಾಗುತ್ತದೆ ಎಂಬುದನ್ನು ಈಗಾಗಲೇ ಮಗು ತಿಳಿದಿದೆ. ಈ ಭಾಗದ ಆರಂಭದಲ್ಲಿ ನೀಡಿರುವ ಚಾರ್ಟನ್ನು ಕೆಳಗೆ ನೀಡಿರುವಂತೆ ಪೂರ್ತಿಗೊಳಿಸಿರಿ.

| ಗ್ರೀನಿಚ್ ರೇಖೆಯ ಸಮಯ – ಸೋಮವಾರ ಪೂರ್ವಾಹ್ನ 10 ಗಂಟೆ | | | | | |
|---|---|---|---|---|---|
| ಗ್ರೀನಿಚ್‌ನಿಂದ ಪಶ್ಚಿಮಕ್ಕೆ | | | ಗ್ರೀನಿಚ್‌ನಿಂದ ಪೂರ್ವಕ್ಕೆ | | |
| **ರೇಖಾಂಶ** | **ದಿವಸ** | **ಸಮಯ** | **ರೇಖಾಂಶ** | **ದಿವಸ** | **ಸಮಯ** |
| $15^0$ | ಸೋಮವಾರ | ಪೂರ್ವಾಹ್ನ 9 ಗಂಟೆ | $15^0$ | ಸೋಮವಾರ | ಪೂರ್ವಾಹ್ನ 11 ಗಂಟೆ |
| $30^0$ | ಸೋಮವಾರ | ಪೂರ್ವಾಹ್ನ 8 ಗಂಟೆ | $30^0$ | ಸೋಮವಾರ | ಮಧ್ಯಾಹ್ನ 12 ಗಂಟೆ |
| $45^0$ | ಸೋಮವಾರ | ಪೂರ್ವಾಹ್ನ 7 ಗಂಟೆ | $45^0$ | ಸೋಮವಾರ | ಮಧ್ಯಾಹ್ನ 1 ಗಂಟೆ |
| $60^0$ | ಸೋಮವಾರ | ಪೂರ್ವಾಹ್ನ 6 ಗಂಟೆ | $60^0$ | ಸೋಮವಾರ | ಮಧ್ಯಾಹ್ನ 2 ಗಂಟೆ |
| $75^0$ | ಸೋಮವಾರ | ಪೂರ್ವಾಹ್ನ 5ಗಂಟೆ | $75^0$ | ಸೋಮವಾರ | ಮಧ್ಯಾಹ್ನ 3 ಗಂಟೆ |
| $90^0$ | ಸೋಮವಾರ | ಪೂರ್ವಾಹ್ನ 4ಗಂಟೆ | $90^0$ | ಸೋಮವಾರ | ಸಂಜೆ 4 ಗಂಟೆ |
| $105^0$ | ಸೋಮವಾರ | ಪೂರ್ವಾಹ್ನ 3ಗಂಟೆ | $105^0$ | ಸೋಮವಾರ | ಸಂಜೆ 5 ಗಂಟೆ |
| $120^0$ | ಸೋಮವಾರ | ಪೂರ್ವಾಹ್ನ 2ಗಂಟೆ | $120^0$ | ಸೋಮವಾರ | ಸಂಜೆ 6 ಗಂಟೆ |
| $135^0$ | ಸೋಮವಾರ | ಪೂರ್ವಾಹ್ನ 1ಗಂಟೆ | $135^0$ | ಸೋಮವಾರ | ರಾತ್ರಿ 7 ಗಂಟೆ |
| $150^0$ | ಆದಿತ್ಯವಾರ | ರಾತ್ರಿ 12 ಗಂಟೆ | $150^0$ | ಸೋಮವಾರ | ರಾತ್ರಿ 8 ಗಂಟೆ |
| $165^0$ | ಆದಿತ್ಯವಾರ | ರಾತ್ರಿ 11 ಗಂಟೆ | $165^0$ | ಸೋಮವಾರ | ರಾತ್ರಿ 9 ಗಂಟೆ |
| $180^0$ | ಆದಿತ್ಯವಾರ | ರಾತ್ರಿ 10 ಗಂಟೆ | $180^0$ | ಸೋಮವಾರ | ರಾತ್ರಿ 10 ಗಂಟೆ |

ಈ ಪಟ್ಟಿ ಪೂರ್ತಿಗೊಳಿಸುವುದರೊಂದಿಗೆ ಒಂದೇ ಸ್ಥಳದಲ್ಲಿ ಒಂದು ದಿವಸದ (24 ಗಂಟೆ) ವ್ಯತ್ಯಾಸ ಉಂಟಾಗುವುದೆಂದು ಮಗು ತಿಳಿಯುತ್ತದೆ. 180 ರೇಖಾಂಶ ರೇಖೆ ಹಾದು ಹೋಗುವ ಪ್ರದೇಶಗಳಲ್ಲಿ ಈ ವ್ಯತ್ಯಾಸವು ಅನುಭವಕ್ಕೆ ಬರುತ್ತದೆ. ಚಿತ್ರ 1.15ನ್ನು ವಿಶದೀಕರಿಸುವ ಮೂಲಕ ಹಾಗೂ ನೀಡಿರುವ ಪಾಠಭಾಗದ ವಿವರಣೆಯಿಂದ ಅಂತಾರಾಷ್ಟ್ರೀಯ ದಿನಾಂಕ ರೇಖೆ ಎಂಬ ಆಶಯವನ್ನು ಮಕ್ಕಳಿಗೆ ಸ್ಪಷ್ಟಪಡಿಸಿ ಕೊಡಬೇಕು.

ಚಿತ್ರ 1.15ನ್ನು ನಿರೀಕ್ಷಣೆ ಮಾಡಿ ಅಂತಾರಾಷ್ಟ್ರೀಯ ದಿನಾಂಕ ರೇಖೆಯ ಪೂರ್ವ ಹಾಗೂ ಪಶ್ಚಿಮದಲ್ಲಿರುವ ಭೂಖಂಡಗಳನ್ನು ಕಂಡುಕೊಳ್ಳಲು ಮಕ್ಕಳಲ್ಲಿ ಹೇಳಲಾಗಿದೆ. ಅವು ಏಷ್ಯಾ, ಉತ್ತರ ಅಮೇರಿಕಾ ಎಂಬಿವುಗಳಾಗಿವೆ ಎಂದೂ ಇದರಲ್ಲಿ ಉತ್ತರ ಅಮೇರಿಕಾಕ್ಕೆ ಹೋಗುವವರಿಗೆ ಒಂದು ದಿವಸ ಲಾಭ ಉಂಟಾಗುವುದೆಂಬುದನ್ನು ಕಂಡುಕೊಳ್ಳಬೇಕು. ಇವುಗಳಲ್ಲದೆ ಆಸ್ಟ್ರೇಲಿಯ, ದಕ್ಷಿಣ ಅಮೇರಿಕಾ ಎಂಬೀ ಭೂಖಂಡಗಳು ಅಂತಾರಾಷ್ಟ್ರೀಯ ದಿನಾಂಕ ರೇಖೆಯ ಪೂರ್ವ ಪಶ್ಚಿ ಎಂದು ಅಧ್ಯಾಪಕರು ಮಕ್ಕಳಿಗೆ ತಿಳಿಯಪಡಿಸಬೇಕು.

ಜಾಗತಿಕ ಭೂಪಟ ಹಾಗೂ ಗೋಲದ ಸಹಾಯ ದೊಂದಿಗೆ ಅಂತಾರಾಷ್ಟ್ರೀಯ ದಿನಾಂಕ ರೇಖೆ ಎಂಬ ಆಶಯವನ್ನೂ ಇತರ ಮಾಹಿತಿಗಳನ್ನೂ ಸ್ಪಷ್ಟವಾಗಿ ವಿಶದೀಕರಿಸಲು ಗಮನಿಸುವಿರಲ್ಲವೇ.

1884ರಲ್ಲಿ ಜರಗಿದ ಅಂತಾರಾಷ್ಟ್ರೀಯ ಮೆರೀಡಿಯನ್ ಕೋನ್ಫರೆನ್ಸ್‌ನಲ್ಲಾಗಿದೆ. 180. ರೇಖಾಂಶ ರೇಖೆಯನ್ನು ದಾಟಿ ಪೂರ್ವಕ್ಕೆ ಹೋಗುವ ಹಡಗುಗಳು ಕ್ಯಾಲೆಂಡರ್ ಒಂದು ದಿನ ಹಿಂದಕ್ಕೂ ಪಶ್ಚಿಮಕ್ಕೆ ಹೋಗುವವುಗಳು ಒಂದು ದಿನ ಮುಂದಕ್ಕೂ ಆಗಿ ಕ್ರಮೀಕರಿಸಲು ತೀರ್ಮಾನಿಸಿದ್ದು.

## ? ಮೌಲ್ಯಮಾಪನ ಪ್ರಶ್ನೆಗಳು

- ಕೆಳಗೆ ನೀಡಿರುವವುಗಳಲ್ಲಿ ಕರ್ಕಾಟಕ ಸಂಕ್ರಾಂತಿ ದಿನ ಯಾವುದು?
  a. ಮಾರ್ಚ್ 21
  b. ಸೆಪ್ಟೆಂಬರ್ 23
  c. ಜೂನ್ 21
  d. ಡಿಸೆಂಬರ್ 22

ವಿಭಾಗಕ್ಕೆ B ವಿಭಾಗದಲ್ಲಿರುವ ಮಾಹಿತಿಗಳನ್ನು ಕ್ರಮೀಕರಿಸಿ ಬರೆಯಿರಿ.

| A | B |
|---|---|
| ಗ್ರೀನಿಚ್ ರೇಖೆ | ಸ್ಥಳೀಯ ಸಮಯ |
| ಭಾರತೀಯ ಕಾಲಮಾನ | ಪ್ರಧಾನ ರೇಖಾಂಶ |
| ಅಂತಾರಾಷ್ಟ್ರೀಯ ದಿನಾಂಕ ರೇಖೆ | 180° |
| ಸೂರ್ಯನ ಉಚ್ಚಸ್ಥಾನ | 82½° ಪೂರ್ವ |

- ಕಾರಣ ಬರೆಯಿರಿ.
  a. ಒಂದು ನಿಶ್ಚಿತ ರೇಖಾಂಶ ರೇಖೆಯನ್ನು ಆಧಾರವಾಗಿದ್ದುಕೊಂಡು ಪೂರ್ವಕ್ಕೆ ಸಮಯ ಹೆಚ್ಚು ಪಶ್ಚಿಮ ಕಡಿಮೆ ಸಮಯವಾಗಿಯೂ ದಾಖಲಿಸುವುದು.
  b. ಮಾರ್ಚ್ 21ರಿಂದ ಜೂನ್ 21ರ ವರೆಗೆ ಉತ್ತರಾರ್ಧ ಗೋಲದಲ್ಲಿ ಹಗಲಿನ ದೈರ್ಘ್ಯವು ಹೆಚ್ಚಾಗುತ್ತಾ ಬರುವುದು.
  c. ಅಂತಾರಾಷ್ಟ್ರೀಯ ದಿನಾಂಕ ರೇಖೆಯ ಎರಡು ಬದಿಗಳಲ್ಲಿನ ಸಮಯ ವ್ಯತ್ಯಾಸವು 24 ಗಂಟೆಗಳಾಗಿ ದಾಖಲಿಸಲಾಗುತ್ತದೆ.

## ಆಕರ ಗ್ರಂಥಗಳು

*Climatology : D.S. Lal*
*Climatology : Critch field*
*Fundamental of Physical Geography : Das Gupta and Kapoor*



2

# ಮಾರುತಗಳ ಮೂಲಗಳನ್ನು ಹುಡುಕಿ

ಸಮಾಜವಿಜ್ಞಾನವು ಸಮಾಜ ಜೀವಿಯಾದ ಮಾನವನ ಸಾಮಾಜಿಕ ಸಂಬಂಧಗಳ ಕುರಿತಾದ ಅಧ್ಯಯನವಾಗಿದೆ . ಸಮಾಜದ ವಿಕಾಸ ಪರಿಣಾಮಗಳ ಮೇಲೆ ಪ್ರಕೃತಿಯ ಸಮೂಹದ ಚರಿತ್ರೆಯ ದಿಶೆಯನ್ನೇ ಬದಲಾಯಿಸಿದ ಗಾಳಿಗಳ ಕುರಿತಾಗಿಯೂ, ಅವುಗಳ ಸಹಾಯದೊಂದಿಗೆ ಹಾಯಿ ಹಡಗಿನಲ್ಲಿ ಕೇರಳ ತೀರವನ್ನು ತಲುಪಿದ ವಾಸ್ಕೋಡ ಗಾಮನೆಂಬ ನಾವಿಕನ ಕುರಿತಾದ ವಿವರಣೆಯಿಂದ ಅಧ್ಯಾಯವು ಆರಂಭಗೊಳ್ಳುವುದು. ವಾತಾವರಣವು ಚಲನಾತ್ಮಕವಾಗಿರುವುದು. ವಾತಾವರಣದ ವಾಯು ನಿರಂತರ ಚಲನೆಯಲ್ಲಿರುವುದು. ಗಾಳಿಯು ವಾಯುವಿನ ಸಮಾನಂತರ ಚಲನೆಯಾಗಿದೆ. ವಿವಿಧ ಗಾಳಿಗಳು, ಅವುಗಳಿಗಿರುವ ಕಾರಣಗಳು, ಅವುಗಳುಂಟು ಮಾಡುವ ಪರಿಣಾಮಗಳೇ ಮುಂತಾದ ವಾಸ್ತವಿಕತೆಗಳ ಕುರಿತಾದ ಒಂದು ಅನ್ವೇಷಣೆಯಾಗಿದೆ ಈ ಅಧ್ಯಾಯ. ಗಾಳಿಯ ಮೂಲವನ್ನು ಅನ್ವೇಷಣೆ ಮಾಡುವ ಈ ಸಮಯದಲ್ಲಿ ವಾತಾವರಣದ ಒತ್ತಡ ವ್ಯತ್ಯಾಸಗಳು, ಅವುಗಳಿಗಿರುವ ಜಾಗತಿಕ ಒತ್ತಡ ವಲಯಗಳು ಮತ್ತು ಕೋರಿಯೋಲಿಸ್ ಶಕ್ತಿ ಎಂಬಿವುಗಳನ್ನು ಪ್ರಾಥಮಿಕವಾಗಿ ಮಕ್ಕಳು ತಿಳಿದಿರಬೇಕು. ವಿವಿಧ ರೀತಿಯ ಗಾಳಿಗಳ ಕುರಿತಾದ ಜ್ಞಾನವನ್ನು ಮಗು ಆರ್ಜಿಸುವಾಗ ಭೂಮಿಯ ಮೇಲ್ಮೈಯನ್ನು ಯಾವಾಗಲೂ ಸಜೀವವಾಗಿಸುವ ವಾತಾವರಣದ ವಿದ್ಯಮಾನಗಳ ಕುರಿತಾದ ವಿಚಾರಗಳು ಮಗುವಿನ ಮುಂದಿನ ಕಲಿಕೆಗೆ ನಾವು ಸಿದ್ಧಪಡಿಸಿದ ಪಾಠಯೋಜನೆ ಪ್ರೇರಣೆ ನೀಡುವಂತಿರಲಿ.

## ಯೂನಿಟ್ ಫ್ರೇಂ — 2. ಮಾರುತಗಳ ಮೂಲವನ್ನು ಹುಡುಕಿ


| ಆಶಯ/ ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ವಾತಾವರಣ<br>ಒತ್ತಡ ವಿತರಣೆ ಲಂಬವಾಗಿ<br>ಉಷ್ಣತೆ ಮತ್ತು ವಾತಾವರಣದ ಒತ್ತಡ<br>ಆರ್ದ್ರತೆ ಮತ್ತು ವಾತಾವರಣದ ಒತ್ತಡ<br>ಸಮಾನ ಒತ್ತಡ ರೇಖೆಗಳು<br>ಜಾಗತಿಕ ಒತ್ತಡ ವಲಯಗಳು<br>ವಾತಾವರಣದ ಒತ್ತಡ ಮತ್ತು ಮಾರುತಗಳು<br>ಮಾರುತಗಳ ವೇಗ ಮತ್ತು ದಿಕ್ಕು<br>- ನಿರ್ಣಯಿಸುವ ಘಟಕಗಳು<br>- ಕೋರಿಯೋಲಿಸ್ ಶಕ್ತಿ<br>- ಘರ್ಷಣೆ | • ಚರ್ಚೆ<br>• ಚಿತ್ರ ವಿಶ್ಲೇಷಣೆ<br>ವರ್ಕ್‌ಶೀಟ್ ಪೂರ್ತಿಗೊಳಿಸುವುದು<br>• ಚಿತ್ರ ವಿಶ್ಲೇಷಣೆ<br>• ಚಿತ್ರದ ಆಧಾರದಲ್ಲಿ ಚರ್ಚೆ<br>• ಪಟ್ಟಿ ತಯಾರಿ<br>• ಚರ್ಚೆ | • ಎಲ್ಲಾ ಕಡೆಗಳಲ್ಲೂ ವಾಯುವಿನ ಒತ್ತಡ ಒಂದೇ ರೀತಿಯಲ್ಲಿಲ್ಲವೆಂದು ವಿಶದೀಕರಿಸುವುದು<br>• ಉಷ್ಣತೆ ಮತ್ತು ವಾತಾವರಣದ ಒತ್ತಡಗಳೊಳಗಿನ ಸಂಬಂಧವನ್ನು ವಿಶದೀಕರಿಸಲು ಸಾಧ್ಯವಾಗುವುದು<br>• ಆರ್ದ್ರತೆ ಮತ್ತು ವಾತಾವರಣದ ಒತ್ತಡಗಳೊಳಗಿನ ಸಂಬಂಧವನ್ನು ವಿಶದೀಕರಿಸಲು ಸಾಧ್ಯವಾಗುವುದು<br>• ಜಾಗತಿಕ ಒತ್ತಡ ವಲಯಗಳನ್ನು ಚಿತ್ರಿಸಲು ಸಾಧ್ಯವಾಗುವುದು<br>• ವಾಯುಭಾರ ಪ್ರವಣತೆ, ಕೋರಿಯೋಲಿಸ್ ಶಕ್ತಿ, ಘರ್ಷಣೆ ಎಂಬಿವುಗಳು ಮಾರುತಗಳ ವೇಗ ದಿಕ್ಕು ಎಂಬಿವುಗಳ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂದು ವ್ಯಕ್ತಪಡಿಸಲು ಸಾಧ್ಯವಾಗುವುದು<br>• ವಿವಿಧ ತರದ ಮಾರುತಗಳನ್ನು ವರ್ಗೀಕರಿಸುವುದು |

## ಅಧ್ಯಾಯದೆಡೆಗೆ.......

ಮಾರುತದ ಬೆನ್ನೇರಿ ಸಮುದ್ರವನ್ನು ದಾಟಿ ಭಾರತಕ್ಕೆ ತಲುಪಿದ ವಾಸ್ಕೋಡಗಾಮನೆಂಬ ನಾವಿಕನ ಪಯಣದ ಕುರಿತಾದ ಕಿರುವಿವರಣೆಯ ಮೂಲಕ ಮಕ್ಕಳ ಗಮನವನ್ನು ಯೂನಿಟ್‌ನ ಕಡೆಗೆ ಸೆಳೆಯಬಹುದು. ವಾಯುವಿನ ಸಮಾನಂತರ ಚಲನೆಯಾಗಿದೆ, ಮಾರತಗಳೆಂದೂ, ಮಾರತಗಳ ಮೂಲವು ಒತ್ತಡವಾಗಿರುವುದೆಂಬ ಮಕ್ಕಳ ಪೂರ್ವಜ್ಞಾನವನ್ನು ಪರೀಕ್ಷಿಸಿಕೊಂಡು ಪಾಠಭಾಗಕ್ಕೆ ಪ್ರವೇಶಿಸಬೇಕು. ವಿವಿಧ ವಿಧದ ಮಾರತಗಳನ್ನು ಪರಿಚಯಿಸುವ ಮೊದಲು ವಾತಾವರಣ ಒತ್ತಡ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಮಗು ತಿಳಿದುಕೊಳ್ಳಬೇಕಾಗಿದೆ.

### ವಾತಾವರಣದ ಒತ್ತಡ ವ್ಯತ್ಯಾಸಗಳು

ವಾತಾವರಣದ ವಾಯುವು ಭೂಮಿ ಮೇಲೆ ಹಾಕುವ ಭಾರವಾಗಿದೆ ಒತ್ತಡವೆಂದು ಮಗು ಈ ಮೊದಲಿನ ತರಗತಿಯಲ್ಲಿ ಕಲಿತಿರುವನು. ಒತ್ತಡವನ್ನು ಅಳೆಯಲು ಉಪಯೋಗಿಸುವ ಉಪಕರಣವಾಗಿದೆ ಪಾದರಸದ ಬೇರೋ ಮೀಟರ್ ಎಂದೂ ಮಿಲ್ಲಿ ಬಾರ್ ಹೆಕ್ಟೋ ಪಾಸ್ಕಲ್ ಎಂಬೀ ಮಾನಗಳಲ್ಲಿ ದಾಖಲಿಸಲಾಗುತ್ತದೆ ಎಂದು ಮಗು ತಿಳಿದಿರಬೇಕು. ಪಾದರಸದ ಬೋರೇಮೀಟರ್‌ನ ಚಿತ್ರ, ಸಾಧ್ಯವಾದಲ್ಲಿ ಉಪಕರಣವನ್ನೇ ತಂದು ತರಗತಿಯಲ್ಲಿ ಮಕ್ಕಳಿಗೆ ಪರಿಚಯಿಸಬಹುದು. ಅನಂತರ ಸ್ಪಷ್ಟವಾಗಿ ಚಿತ್ರ(2.1)ನ್ನು ನಿರೀಕ್ಷಿಸಲು ಮಕ್ಕಳಲ್ಲಿ ಹೇಳುವುದು. ವಾತಾವರಣದ ರಚನೆಯು ಪದರಗಳಿಂದೊಡಗೂಡಿದೆ ಎಂಬ ಸತ್ಯಾಂಶವನ್ನು ಮಕ್ಕಳಿಗೆ ನೆನಪಿಸಬೇಕು. ಕೆಳಗಿನ ಪದರಗಳ ಮೇಲೆ ಮೇಲಿನ ಪದರಗಳು ಹಾಕುವ ಭಾರದಿಂದಾಗಿ ಒತ್ತಡವು ಹೆಚ್ಚಾಗುವುದು ಮತ್ತು ಮೇಲಕ್ಕೆ ಹೋದಂತೆ ಭಾರವು ಕಡಿಮೆಯಾಗುವುದರ ಮೂಲಕ ಒತ್ತಡವು ಕಡಿಮೆಯಾಗುತ್ತದೆ ಎಂದು ಮಕ್ಕಳಿಗೆ ತಿಳಿಯಪಡಿಸಬೇಕು. ಇನ್ನು ಚಿತ್ರದಲ್ಲಿ ಗುರುತಿಸಿರುವ A, B ಎಂಬೀ ಪ್ರದೇಶಗಳಲ್ಲಿ ಒತ್ತಡ ಹೆಚ್ಚಿರುವ ಪ್ರದೇಶ ಯಾವುದೆಂದು ಕೇಳಬಹುದು.




ಇದರಲ್ಲಿ ಒತ್ತಡ ಹೆಚ್ಚಾಗಿರುವುದು ಎತ್ತರ ಕಡಿಮೆಯಿರುವ B ಎಂಬ ಪ್ರದೇಶದಲ್ಲಾಗಿದೆ ಎಂದು ಕಂಡುಕೊಳ್ಳುವುದರೊಂದಿಗೆ ಎತ್ತರಕ್ಕೆ ಹೋದಂತೆ ವಾಯುವು ಹಾಕುವ ಭಾರ ಕಡಿಮೆಯಾಗುವುದಾಗಿದೆ ಇದು ಒತ್ತಡ ವ್ಯತ್ಯಾಸಕ್ಕೆ ಕಾರಣವಾಗುವುದೆಂದು ಮಗು ಕಂಡುಕೊಳ್ಳುವನು. ಪಾಠಭಾಗದಲ್ಲಿರುವ ಪರ್ವತಾರೋಹಿಯ ಚಿತ್ರವನ್ನು ಮಕ್ಕಳ ಗಮನಕ್ಕೆ ತನ್ನಿರಿ. ಯಾಕಾಗಿ ಪರ್ವತಾರೋಹಿಗಳು ತಮ್ಮೊಂದಿಗೆ ಒಕ್ಸಿಜನ್ ಸಿಲಿಂಡರ್‌ನ್ನು ಕೊಂಡೊಯ್ಯುವುದೆಂದು ಮಕ್ಕಳಲ್ಲಿ ಕೇಳಬೇಕು. ಎತ್ತರವು ಹೆಚ್ಚಾದಂತೆ


ಶ್ವಾಸವಾಯುವಿನ ಅಳತೆಯಲ್ಲಿ ಉಂಟಾಗುವ ಕೊರತೆಯನ್ನು ಪರಿಹರಿಸುವುದಕ್ಕೆ ಓಕ್ಸಿಜನ್‌ನ ಸಿಲಿಂಡರ್‌ನ್ನು ಪರ್ವತಾ ರೋಹಿಗಳು ತಮ್ಮೊಂದಿಗೆ ಕೊಂಡೊಯ್ಯುವುದೆಂಬ ವಿಷಯವನ್ನು ಮಗು ಸ್ವಂತ ಕಂಡುಕೊಳ್ಳುವ ರೀತಿಯಲ್ಲಾಗಿರಬೇಕು. ಪಾಠಭಾಗದ ಮಂಡನೆ ಕೆಲವು ಮಕ್ಕಳಲ್ಲಿ ಉನ್ನತ ಪ್ರದೇಶಗಳಿಗೆ ಪ್ರಯಾಣ ಮಾಡುವಾಗ ಉಂಟಾಗುವ ಅನುಭವವನ್ನು ಹೇಳಲು ಹೇಳುವುದರಿಂದ ಕಲಿಕೆಯು ರಸವತ್ತಾಗುವುದು. ಇನ್ನು ಅವುಗಳನ್ನು ಪಾಠಭಾಗದೊಂದಿಗೆ ಹೊಂದಿಸಿಕೊಂಡು ಕಿವಿ ಮುಚ್ಚಿದ ಹಾಗೆ ಆದ ಅನುಭವದ ಕುರಿತಾಗಿ ಪರಾವರ್ಶಿಸಿರಿ.


ಉನ್ನತಿ ಹೆಚ್ಚಾಗಿರುವ ಪ್ರದೇಶದ ವಾಯುವಿನ ಒತ್ತಡ ಮತ್ತು ಕಿವಿಯೊಳಿರುವ ವಾಯುಗಳೊಳಗಿನ ಒತ್ತಡ ವ್ಯತ್ಯಾಸವಾಗಿದೆ ಇದಕ್ಕೆ ಕಾರಣವೆಂದು ಮಕ್ಕಳಿಗೆ ತಿಳಿಯಪಡಿಸಬಹುದು. ಕಿವಿಯೊಳಗಿನ ಒತ್ತಡವು ಹೊರಗಿನ ಒತ್ತಡವು ಹೆಚ್ಚು ಕಡಿಮೆ ಸಮಾನವಾಗುವಾಗ ಕಿವಿ ಪುನಃ ತೆರೆಯುವುದೆಂದು ಮಕ್ಕಳಿಗೆ ತಿಳಿಯಬೇಕು. ಎತ್ತರ ಹಾಗೂ ಒತ್ತಡವು ವಿಲೋಮಾನುಪಾತ ದಲ್ಲಿರುವುದು ಎಂಬ ಆಶಯವನ್ನು ಮಕ್ಕಳಲ್ಲಿ ರೂಪಿಸಿದ ನಂತರ ಮುಂದಿನ ಭಾಗಕ್ಕೆ ಪ್ರವೇಶಿಸಬಹುದು.

## ಉಷ್ಣತೆ ಮತ್ತು ವಾತಾವರಣದ ಒತ್ತಡ

ಉಷ್ಣತೆಯು ಹೆಚ್ಚಾಗುವಾಗ ಒತ್ತಡವು ಕಡಿಮೆಯಾಗುವುದು ಎಂಬ ಆಶಯವನ್ನು ಮಕ್ಕಳಲ್ಲಿ ದೃಢಗೊಳಿಸಬೇಕು. ವಾಯುವು ಬಿಸಿಯಾಗುವಾಗ ವಿಕಾಸಗೊಂಡು ಮೇಲಕ್ಕೇರಿ ಹೋಗುತ್ತದೆ ಇದರಿಂದಾಗಿ ವಾಯುವಿನ ಅಳತೆಯಲ್ಲಿ ಉಂಟಾಗುವ ಕಡಿತವಾಗಿದೆ ಒತ್ತಡ ವ್ಯತ್ಯಾಸಕ್ಕೆ ಕಾರಣವೆಂದು ಮಗು ತಿಳಿಯಬೇಕು. ಸೌರ ಚೈತನ್ಯವಾಗಿದೆ ಇಲ್ಲಿನ ಉಷ್ಣತೆಗೆ ಆಧಾರವೆಂಬ ವಾಸ್ತವವನ್ನು ಹೇಳಲು ಮರೆಯಬಾರದು. ಬೆಂಕಿಯುರಿಯುವಾಗ ಹೊಗೆ ಮೇಲಕ್ಕೇರಿ ಹೋಗುವುದನ್ನು ಇದಕ್ಕೆ ಉದಾಹರ ಣೆಯಾಗಿ ಮಕ್ಕಳ ಗಮನಕ್ಕೆ ತರಬಹುದಾಗಿದೆ.

ಇನ್ನು ಪಾಠಭಾಗದಲ್ಲಿ ನೀಡಿರುವ ಚಿತ್ರಗಳನ್ನು(2.2) ಹೋಲಿಸಲು ಮಕ್ಕಳಲ್ಲಿ ಹೇಳುವುದು. ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಉಷ್ಣತೆಯು ಹೆಚ್ಚಾಗಿರುವುದರಿಂದ ವಾಯುವು ಬಿಸಿಯಾಗಿ ವಿಕಾಸಗೊಳ್ಳುವುದರಿಂದಾಗಿ ಒತ್ತಡವು ಕಡಿಮೆಯಾಗುವುದು ಹಾಗೂ ರಾತ್ರಿ ಕಾಲದಲ್ಲಿ ಉಷ್ಣತೆಯು ಕಡಿಮೆಯಾಗಿರುವುದರಿಂದ ವಾಯುವು ತಣಿದು ಕೆಳಗಿಳಿಯುವುದರಿಂದ ವಾಯುವಿನ ಒತ್ತಡವು ಹೆಚ್ಚಾಗುವುದಕ್ಕೆ ಕಾರಣವಾಗುವುದು ಎಂದು ಚಿತ್ರವನ್ನು ವಿಶ್ಲೇಷಿಸಿ ಮಕ್ಕಳು ತಿಳಿದುಕೊಳ್ಳಬೇಕು. ಆ ಬಳಿಕ ಕೆಳಗೆ ನೀಡಿರುವಂತೆ H, Lಎಚ್‌ಎಲ್ ಎಂಬೀ ಗುರುಗಳನ್ನು ದಾಖಲಿಸಬೇಕು.




NB H - ಒತ್ತಡ ಹೆಚ್ಚು


L - ಒತ್ತಡ ಕಡಿಮೆ

ಶೈತ್ಯ ಹೆಚ್ಚಾಗಿರುವ ಪ್ರದೇಶಗಳಿಗೆ ಹೋಲಿಸಿದರೆ ಉಷ್ಣತೆಯ ಪ್ರದೇಶಗಳಲ್ಲಿ ವಾತಾವರಣದ ಒತ್ತಡವು ಕಡಿಮೆಯಾಗಿರುವುದು ಯಾಕೆ? ಎಂಬ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಕೇಳಬಹುದಾಗಿದೆ. ಇದಕ್ಕೆ ಕಾರಣ ಉಷ್ಣತೆಯಲ್ಲಿನ ವ್ಯತ್ಯಾಸವಾಗಿದೆ ಎಂದು ಮಕ್ಕಳು ಸ್ವತಃ ಕಂಡುಕೊಳ್ಳುವಾಗ ಈ ಪಾಠಭಾಗದ ಮಂಡನೆಯು ಖಂಡಿತವಾಗಿಯು ಅದರ ಉದ್ದೇಶವನ್ನು ಈಡೇರಿಸಿದೆ ಎಂದು ಹೇಳಲು ಸಾಧ್ಯ.

ಎತ್ತರ, ಉಷ್ಣತೆ ಎಂಬಿವುಗಳು ವಾತಾವರಣದ ಒತ್ತಡದ ಮೇಲೆ ಹೇಗೆ ಪ್ರಭಾವ ಬೀರುವುದೆಂದು ಮಕ್ಕಳು ತಿಳಿದರೆ ಆರ್ದ್ರತೆಯ ಕಡೆಗೆ ಪ್ರವೇಶಿಸಬಹುದಾಗಿದೆ.

### ಆರ್ದ್ರತೆ ಮತ್ತು ವಾತಾವರಣದ ಒತ್ತಡ

ಈ ಪಾಠಭಾಗವನ್ನು ಮಕ್ಕಳಿಗೆ ಪರಿಚಯಿಸುವಾಗ ಅವರು ತಿಳಿಯಬೇಕಾದುದು ಎರಡು ವಾಸ್ತವಾಂಶಗಳನ್ನಾಗಿದೆ. ಒಂದು ವಾತಾವರಣದ ವಾಯುವಿನಲ್ಲಿರುವ ಜಲಾಂಶವಾಗಿದೆ ಆರ್ದ್ರತೆ. ಎರಡು, ಆರ್ದ್ರತೆ ಮತ್ತು ವಾತಾವರಣದ ಒತ್ತಡವು ವಿಲೋಮಾನುಪಾತದಲ್ಲಾಗಿರುವುದು. ಪಾಠಭಾಗದ ವಿವರಣೆಯ ಸಹಾಯದೊಂದಿಗೆ ಮಕ್ಕಳಲ್ಲಿ ಆಶಯ ಸ್ಪಷ್ಟತೆಯುನ್ನುಂಟು ಮಾಡಿರಿ. ಅನಂತರ ಚಿತ್ರ(2.3)ವನ್ನು ನಿರೀಕ್ಷಿಸಲು ಹೇಳುವುದು. ಸಮುದ್ರ ಸಾಮೀಪ್ಯವಿರುವ ಪ್ರದೇಶಗಳಲ್ಲಿ ನೀರಾವಿಯ ಅಳತೆಯು ಸ್ವಾಭಾವಿಕವಾಗಿ ಹೆಚ್ಚಾಗಿರುವುದು ಎಂಬ ಸತ್ಯಾಂಶವನ್ನು ಮಕ್ಕಳಿಗೆ ತಿಳಿಯಪಡಿಸಬೇಕು.





ನೀರಾವಿಯು ವಾಯುವಿಗಿಂತಲು ಕಡಿಮೆ ಭಾರವಿರುವದಲ್ಲವೇ? ಆಗ ಒತ್ತಡವು ಕಡಿಮೆಯಾಗಿರುವುದು ಎಂಬ ಆಶಯಕ್ಕೆ ಮಕ್ಕಳು ತಲುಪಿದರೆ ಮಾತ್ರವೇ ಚಿತ್ರದೊಂದಿಗೆ ನೀಡಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಮಕ್ಕಳು ಕಂಡುಕೊಳ್ಳುವರು.

ಚಿತ್ರವನ್ನು ವಿಶ್ಲೇಷಿಸಿ ಈ ಕೆಳಗೆ ನೀಡಿರುವಂತೆ ದಾಖಲಿಸಲಿ.


ಉನ್ನತಿ, ಉಷ್ಣತೆ ಹಾಗೂ ಆರ್ದ್ರತೆ ಎಂಬಿವುಗಳು ವಾತಾವರಣದ ಒತ್ತಡ ವ್ಯತ್ಯಾಸಕ್ಕೆ ಕಾರಣವಾಗುವುದು ಎಂಬ ವಿಷಯವನ್ನು ಮಕ್ಕಳು ತಿಳಿದುಕೊಂಡರು ಎಂದು ದೃಢಪಡಿಸಿದ ಬಳಿಕ ಹೆಚ್ಚು ಒತ್ತಡ, ಕಡಿಮೆ ಒತ್ತಡಗಳೆಂಬ ಆಶಯಗಳೆಡೆಗೆ ಮುಗುವನ್ನು ಸಾಗಿಸಬೇಕು.

ಮಕ್ಕಳಿಗೆ ಗೊತ್ತಿರುವ ಸಮತಾಪ ರೇಖೆಗಳನ್ನು ಪರಾವರ್ಶಿಸಿಕೊಂಡು ಸಮಾನೋತ್ತಡ ರೇಖೆಗಳು ಎಂಬ ಆಶಯವನ್ನು ಮಂಡಿಸಬೇಕು. ಚಿತ್ರ(2.4)ರ ಸಹಾಯವನ್ನು ಈ ಸಂದರ್ಭದಲ್ಲಿ ಬಳಸಬಹುದು.

ಚಿತ್ರ 2.4ರಲ್ಲಿರುವ ಸಮಾನೋತ್ತಡ ರೇಖೆಗಳನ್ನು ನಿರೀಕ್ಷಿಸಿ ಚಿತ್ರದಲ್ಲಿನ ಒತ್ತಡ ವಿತರಣಾ ಕ್ರಮವನ್ನು ತಿಳಿಯಲು ಹೇಳುವುದು. ಹಾಗೂ ಸಮಾನೋತ್ತಡ ರೇಖೆಗಳ ಮೌಲ್ಯಗಳನ್ನು ತಿಳಿದುಕೊಂಡು ಗರಿಷ್ಟ ಒತ್ತಡ ವಲಯ ಹಾಗೂ ಕನಿಷ್ಟ ಒತ್ತಡ ವಲಯಗಳನ್ನು ಚಿತ್ರದಲ್ಲಿ ಗುರುತಿಸಲು ಮಕ್ಕಳಲ್ಲಿ ಹೇಳುವುದು. ಇಂತಹ ಚಟುವಟಿಕೆಗಳ ಪ್ರತಿಯೊಂದು ಹಂತದಲ್ಲೂ ಅಧ್ಯಾಪಕರ ಸಮಯೋಚಿತ ವಾದ ಮಧ್ಯಪ್ರವೇಶ ಅಗತ್ಯವಾಗಿದೆ. ಮಕ್ಕಳು ಕೆಳಗೆ ನೀಡಿರುವಂತೆ ಚಿತ್ರದಲ್ಲಿ ಗುರುತಿಸುವರು.




**A** ವಾಯುಭಾರ ಹೆಚ್ಚು
ಗಾಳಿಯ ವೇಗ ಹೆಚ್ಚು




**B** ವಾಯುಭಾರ ಕಡಿಮೆ
ಗಾಳಿಯ ವೇಗ ಕಡಿಮೆ

ಗರಿಷ್ಠ/ಕನಿಷ್ಠ ಒತ್ತಡ ವಲಯಗಳ ಕುರಿತಾಗಿರುವ ಆಶಯ ಸ್ಪಷ್ಟತೆಯನ್ನು ಮಕ್ಕಳಲ್ಲಿ ಉಂಟು ಮಾಡಿದರೆ ಜಾಗತಿಕ ಒತ್ತಡ ವಲಯಗಳ ಬಗ್ಗೆ ವಿಶದೀಕರಿಸಬಹುದು.

### ಜಾಗತಿಕ ಒತ್ತಡ ವಲಯಗಳು

ಜಾಗತಿಕ ಒತ್ತಡ ವಲಯಗಳನ್ನು ತೋರಿಸುವ ಚಿತ್ರವನ್ನು ಚಾರ್ಟ್ ಪೇಪರಿನಲ್ಲಿ ತಯಾರಿಸಿ ತರಗತಿಯಲ್ಲಿ ಉಪಯೋಗಿಸುವುದು ಆಶಯದ ವರ್ಗಾವಣೆಗೆ ಸಹಾಯಕವಾಗಬಹುದು. ಈ ಚಿತ್ರವು ಜಾಗತಿಕ ಮಾರುತಗಳ ಕುರಿತಾಗಿರುವ ಪಾಠಭಾಗಕ್ಕೂ ಪ್ರಯೋಜನಕಾರಿ ಎಂಬುದರಲ್ಲಿ ಸಂಶಯವಿಲ್ಲ.

ಜಾಗತಿಕ ಒತ್ತಡ ವಲಯಗಳ ಬಗ್ಗೆ ಪಾಠಭಾಗದಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ಪ್ರತಿಯೊಂದು ಒತ್ತಡ ವಲಯಗಳನ್ನು ಪರಿಚಯಿಸುವಾಗ ಅವುಗಳ ಸ್ಥಾನವನ್ನು ಚಿತ್ರದ ಸಹಾಯದಿಂದ ತಿಳಿಸಿಕೊಡಬೇಕು. ಮಕ್ಕಳಲ್ಲಿ ವೈಯಕ್ತಿಕವಾಗಿ ಒತ್ತಡ ವಲಯಗಳ ಸ್ಥಾನವನ್ನು ಕಂಡುಕೊಳ್ಳಲು ಹೇಳುವುದರೊಂದಿಗೆ ನೋಟ್ಸ್ ಪುಸ್ತಕದಲ್ಲಿ ರಚಿಸಲು ಮಕ್ಕಳಲ್ಲಿ ಹೇಳುವುದು.

ಹಾಯಿಹಡಗಿನ ನಾವಿಕರಿಗೆ ದುಸ್ವಪ್ನವಾದ ನಿರ್ವಾತ ವಲಯಗಳು, ಕುದುರೆಗಳನ್ನು ಸಮುದ್ರಕ್ಕೆ ಎಸೆಯುತ್ತಿದ್ದ ಕುದುರೆ ಅಕ್ಷಾಂಶಗಳ ವಿವರಣೆಗಳನ್ನು ನೀಡುವ ಮೂಲಕ ಕಲಿಕೆಯನ್ನು ರಸವತ್ತಾಗಿಸಬಹುದು.

ಭೂಮಿಯ ಭ್ರಮಣ ಹಾಗೂ ಒತ್ತಡ ವಲಯಗಳೊಳಗಿನ ಸಂಬಂಧಗಳನ್ನು ಇಲ್ಲಿ ಸ್ಪಷ್ಟವಾಗಿ ಮಂಡಿಸಬೇಕಾಗಿದೆ. ಭೂಮಿಯು ಭ್ರಮಣ ಮಾಡದಿರುತ್ತಿದ್ದರೆ ಉಪಧ್ರುವೀಯ ಪ್ರದೇಶದಲ್ಲಿ ಕನಿಷ್ಟ ಒತ್ತಡ ಉಂಟಾಗುತ್ತಿರಲಿಲ್ಲ. ಹಾಗೂ ವಾಯುವಿನ ಸಂಚಾರ ದಿಶೆದಲ್ಲೂ ಸಹ ಬದಲಾವಣೆಗಳುಂಟಾಗುತ್ತಿತ್ತು. ಎಂದು ಮಗು ತಿಳಿಯಬೇಕು.

ಜಾಗತಿಕ ಒತ್ತಡ ವಲಯಗಳನ್ನು ತಿಳಿದುಕೊಂಡು ಕೆಳಗೆ ನೀಡಿರುವಂತೆ ಪಟ್ಟಿಯನ್ನು ಮಕ್ಕಳು ಪೂರ್ತಿಗೊಳಿಸುವರು. ಎಲ್ಲಾ ಮಕ್ಕಳ ಭಾಗವಹಿಸುವಿಕೆಯನ್ನು ಇಂತಹ ಚಟುವಟಿಕೆಗಳಲ್ಲಿ ಅಧ್ಯಾಪಕರು ದೃಢಪಡಿಸಬೇಕು.

| ಒತ್ತಡ ವಲಯಗಳು | ಅಕ್ಷಾಂಶದ ವ್ಯಾಪ್ತಿ |
|---|---|
| ಉತ್ತರ ಧ್ರುವೀಯ ಗರಿಷ್ಠ ಒತ್ತಡ ವಲಯ | 90° ಉತ್ತರ |
| ಉತ್ತರ ಉಪಧ್ರುವೀಯ ಕನಿಷ್ಟ ಒತ್ತಡ ವಲಯ | 60° ಉತ್ತರ |
| ಉತ್ತರ ಉಪ ಉಷ್ಣವಲಯದ ಗರಿಷ್ಟ ಒತ್ತಡ ವಲಯ | 30° ಉತ್ತರ |
| ಭೂಮಧ್ಯರೇಖಾ ಕನಿಷ್ಟ ಒತ್ತಡ ವಲಯ | 0° |

| | |
|---|---|
| ದಕ್ಷಿಣ ಉಷ್ಣ ವಲಯದ ಗರಿಷ್ಟ ಒತ್ತಡ ವಲಯ<br>ದಕ್ಷಿಣ ಉಪಧ್ರುವೀಯ ಕನಿಷ್ಟ ಒತ್ತಡ ವಲಯ | 30° ದಕ್ಷಿಣ<br>60° ದಕ್ಷಿಣ |
| ದಕ್ಷಿಣ ಧ್ರುವೀಯ ಗರಿಷ್ಟ ಒತ್ತಡ ವಲಯ | 90° ದಕ್ಷಿಣ |

ವಾತಾವರಣದ ಒತ್ತಡ ವ್ಯತ್ಯಾಸ, ಅವುಗಳಿಗಿರುವ ಕಾರಣಗಳು ಹಾಗೂ ಜಾಗತಿಕ ಒತ್ತಡ ವಲಯಗಳ ಕುರಿತಾಗಿ ಸ್ಪಷ್ಟವಾದ ತಿಳುವಳಿಕೆಗಳನ್ನು ರೂಪಿಸುವ ರೀತಿಯಲ್ಲಾಗಿರಬೇಕು ಈ ಪಾಠಭಾಗವನ್ನು ವಿನಿಮಯ ಮಾಡಬೇಕಾದುದು. ಈ ಸಂದರ್ಭದಲ್ಲಿ ಮಗು ಆರ್ಜಿಸಿದ ತಿಳುವಳಿಕೆಗಳನ್ನು ಪರಿಶೋಧಿಸಿದ ಬಳಿಕ ನಂತರದ ಪಾಠಭಾಗಕ್ಕೆ ಪ್ರವೇಶಿಸಬೇಕು.

### ಒತ್ತಡ ವಲಯಗಳು ಮತ್ತು ಮಾರುತಗಳು

ಮಕ್ಕಳಿಗೆ ನೇರವಾಗಿ ಅನುಭವ ವೇದ್ಯವಾಗುವ ಒಂದು ಪ್ರಾಕೃತಿಕ ವಿದ್ಯಮಾನವಾಗಿದೆ ಮಾರುತಗಳು. ಮಾರುತಗಳ ಕುರಿತಾಗಿ ಒಂದು ಲಘು ಚರ್ಚೆಯನ್ನು ತರಗತಿಯಲ್ಲಿ ನಡೆಸುವುದರಿಂದ ಕಲಿಕಾ ಪ್ರಕ್ರಿಯೆಯನ್ನು ರಸವತ್ತಾಗಿ ಮಾಡಬಹುದು. ತಂಗಾಳಿಯಿಂದ ತೊಡಗಿ ಸರ್ವನಾಶವನ್ನುಂಟುಮಾಡುವ ಬಿರುಗಾಳಿಯ ವರೆಗಿನ ವಿವಿಧ ಮಾರುತಗಳು ಈ ಭೂಮಿಯಲ್ಲಿದೆ ಎಂದು ವಿದ್ಯಾರ್ಥಿಗಳಿಗೆ ತಿಳಿಯಪಡಿಸಬೇಕು. ವಾತಾವರಣದ ಒತ್ತಡದಲ್ಲಿ ಉಂಟಾಗುವ ವ್ಯತ್ಯಾಸ ಮಾರುತಗಳು ರೂಪುಗೊಳ್ಳುವುದಕ್ಕೆ ಕಾರಣವಾಗುವುದು ಹಾಗೂ ಯಾವದಿಕ್ಕಿನಿಂದ ಬೀಸುತ್ತದೆ ಎಂಬುದರ ಆಧಾರದಲ್ಲಾಗಿದೆ ಎಂಬ ಪ್ರಧಾನ ವಿಷಯಗಳನ್ನು. ಈ ಪಾಠಭಾಗದಲ್ಲಿ ವಿನಿಮಯಗೊಳ್ಳಬೇಕಾಗಿದೆ. ಆನಂತರ ಗಾಳಿಯ ವೇಗ, ದಿಕ್ಕು ಎಂಬೀ ಆಶಯಗಳ ಕಡೆಗೆ ಮಗುವಿನ ಗಮನವನ್ನು ಸೆಳೆಯಬಹುದು.

### ಮಾರುತಗಳ ವೇಗ ಮತ್ತು ದಿಕ್ಕು

ಮಾರುತಗಳ ವೇಗ ಮತ್ತು ದಿಕ್ಕಿನ ಮೇಲೆ ಪ್ರಭಾವ ಬೀರುವ ಘಟಕಗಳು ಯಾವುವು ಎಂದು ಈ ಭಾಗದಲ್ಲಿ ವಿಶದೀಕರಿಸಬೇಕು. ವಾಯುಭಾರ ಪ್ರವಣತೆ ಎಂಬ ಭಾಗವನ್ನು ವಿಶದೀಕರಿಸುವಾಗ ಚಿತ್ರ 2.6ನ್ನು ವಿಶ್ಲೇಷಣೆ ಮಾಡಬೇಕು.

ಚಿತ್ರಗಳಲ್ಲಿರುವ ಒತ್ತಡ ರೇಖೆಗಳ ವಿತರಣಾ ಕ್ರಮವನ್ನು ಮಗು ತಿಳಿದುಕೊಳ್ಳುವುದರೊಂದಿಗೆ ಒತ್ತಡವು ಹೆಚ್ಚಾಗಿರುವ ಭಾಗದಿಂದ ಒತ್ತಡ ಕಡಿಮೆ ಇರುವ ಕಡೆಗೆ ವಾಯು ಸಂಚರಿಸುತ್ತದೆ ಎಂದು ಮಗು ತಿಳಿದುಕೊಂಡು ಬಾಣದ ಗುರುತುಗಳನ್ನುಪಯೋಗಿಸಿ ಗಾಳಿಯ ದಿಕ್ಕನ್ನು ಗುರುತಿಸುವಾಗ ಪಾಠಭಾಗ ವಿನಿಮಯವು ಅದರ ಉದ್ದೇಶವನ್ನು ತಲುಪಿದೆ ಎನ್ನಬಹುದು. ಇನ್ನು ವಾಯು ಭಾರವೆಂಬ ಆಶಯಕ್ಕೆ ದಾಟಬಹುದು. ಎರಡು ಚಿತ್ರಗಳಲ್ಲಿರುವ ಸಮಾನೋತ್ತಡ ರೇಖೆಗಳ ವಿತರಣಾ ಕ್ರಮವನ್ನು ವೈಯಕ್ತಿಕವಾಗಿ ವಿಶ್ಲೇಷಿಸಲು ಹೇಳುವುದು. ಒಂದನೇ ಚಿತ್ರದಲ್ಲಿ ರೇಖೆ ಬಹಳ ಸಮೀಪಗಳಲ್ಲಾಗಿಯು ಎರಡನೇಯು ಚಿತ್ರದಲ್ಲಿ ರೇಖೆಗಳ ಅಗಲ ಸಾಮಾನ್ಯವಾಗಿ ಹೆಚ್ಚಾಗಿರುವುದು ಎಂದು ಮಕ್ಕಳು ಕಂಡುಕೊಳ್ಳುವರು. ಇದರಿಂದ ಎ ಯಲ್ಲಿ ವಾಯು ಭಾರವು ಅಧಿಕ ಹಾಗೂ ಬಿ ಯಲ್ಲಿ ವಾಯು ಭಾರವು




**A** ವಾಯುಭಾರ ಪ್ರವಣತೆಯು ಹೆಚ್ಚಾಗಿದ್ದರೆ ಗಾಳಿಯವೇಗ ಅಧಿಕವಾಗಿರುವುದು.




**B** ವಾಯುಭಾರ ಪ್ರವಣತೆಯು ಕಡಿಮೆಯಾಗಿದ್ದರೆ ಗಾಳಿಯವೇಗ ಕಡಿಮೆಯಾಗಿರುವುದು.

ಕಡಿಮೆ ಎಂಬ ಆಶಯಕ್ಕೆ ಮಗುವನ್ನು ತಲುಪಿಸುವ ರೀತಿಯಲ್ಲಿರುವ ಪಾಠಭಾಗ ವಿನಿಮಯಕ್ಕೆ ಅಧ್ಯಾಪಕರು ಪ್ರಯತ್ನಿಸಬೇಕು. ಇಳಿಜಾರು ಹೆಚ್ಚಾಗುವಾಗ ವಾಯುಭಾರ ಪ್ರವಣತೆಯು ಕಡಿಮೆಯಾಗಿದ್ದರೆ ಗಾಳಿಯವೇಗ ಕಡಿಮೆಯಾಗಿರುವುದು.ಗಾಳಿಯ ವೇಗವು ಅಧಿಕವಾಗುವಾಗ ಮಗು ತಿಳಿಯಬೇಕು. ಈ ಆಶಯ ಸ್ಪಷ್ಟತೆಗಾಗಿ ಕೆಳಗೆ ನೀಡಿರುವ ಚಟುವಟಿಕೆಯನ್ನು ತರಗತಿಯಲ್ಲಿ ಮಾಡಿ ತೋರಿಸುವುದು ಸಹಕಾರವಾಗಬಹುದು. ಒಂದು ಪುಸ್ತಕವನ್ನು ಓರೆಯಾಗಿ ಹಿಡಿದು ಚೋಕ್ ಒಂದನ್ನು ಅದರ ಮೇಲಿಂದ ಉರುಳಿಸಬೇಕು. ಪುಸ್ತಕದ ಓರೆ (ವಾಲುವಿಕೆ)ಯನ್ನು ಹೆಚ್ಚಿಸಿದಾಗ ಚೋಕ್‌ನವೇಗ ಹೆಚ್ಚುವುದನ್ನು ಮಕ್ಕಳೂ ಗಮನಕ್ಕೆ ತರಬೇಕು. ಈ ಚಟುವಟಿಕೆಯನ್ನು ಕಲಿಕಾ ಪ್ರಕ್ರಿಯೆಯೊಂದಿಗೆ ಹೊಂದಿಸಿ ಪಾಠಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಮಕ್ಕಳಿಗೆ ಸಹಾಯ ನೀಡುವುದರೊಂದಿಗೆ ಚಿತ್ರಗಳಲ್ಲಿ ಗುರುತಿಸಲು ಮಕ್ಕಳನ್ನು ಸಮರ್ಥರಾಗಿರಸಬೇಕು.

## ಕೊರಿಯೋಲಿಸ್ ಶಕ್ತಿ



ಘರ್ಷಣೆ ಕಡಿಮೆ ವಾಯುಭಾರ ಅಧಿಕ
ಗಾಳಿಯ ವೇಗ ಹೆಚ್ಚು



ಘರ್ಷಣೆ ಅಧಿಕ ವಾಯುಭಾರ ಕಡಿಮೆ
ಗಾಳಿಯ ವೇಗ ಕಡಿಮೆ

ಕೋರಿಯೋಲಿಸ್ ಶಕ್ತಿಯ ಕುರಿತಾಗಿ ಚಿತ್ರ 2.7ರ ಸಹಾಯದಿಂದ ಮಕ್ಕಳಿಗೆ ತಿಳುವಳಿಕೆ ಉಂಟು ಮಾಡಬಹುದು. ಅರ್ಧಗೋಲಗಳಲ್ಲಿ ಸ್ವತಂತ್ರವಾಗಿ ಚಲಿಸುವ ವಸ್ತುಗಳ ದಿಶೆಯಲ್ಲಿ ಉಂಟಾಗುವ ಬದಲಾವಣೆಯನ್ನು ಚಿತ್ರದ ಸಹಾಯದೊಂದಿಗೆ ಕಂಡುಕೊಳ್ಳಲು ಹೇಳಬೇಕು. ಇದರ ಮೂಲಕ ಆಶಯ ವಿನಿಮಯವನ್ನು ಚಟುವಟಿಕಾಧಾರಿತವಾಗಿಸಬಹುದು. ಮುಂದೆ ಫೆರಲ್‌ನ ನಿಯಮವನ್ನು ಹಾಗೂ ಮಾರುತಗಳ ದಿಕ್ಪಲ್ಲಟಗಳನ್ನು ಮಕ್ಕಳಿಗೆ ಪರಿಚಯಿಸಬಹುದು.

## ಘರ್ಷಣೆ


ನೀಡಿರುವ ಚಿತ್ರಗಳನ್ನು ವಿಶ್ಲೇಷಿಸಿ ಯಾವ ಸನ್ನಿವೇಶದಲ್ಲಿ ಮಾರುತ ತಡೆಯಿಲ್ಲದೆ ಬೀಸುತ್ತದೆ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಹೇಳುವುದು. ಘರ್ಷಣೆಯು ಮಾರುತದ ವೇಗದ ಮೇಲೆ ಯಾವ ರೀತಿಯಲ್ಲಾಗಿ ಪ್ರಭಾವ ಬೀರುತ್ತದೆ ಎಂದು ಈ ಮೂಲಕ ಮಗುವಿನಲ್ಲಿ ತಿಳುವಳಿಕೆಯನ್ನು ದೃಢಗೊಳಿಸಿದ ಬಳಿಕ ಒತ್ತಡ ವಲಯಗಳು ಮತ್ತು ಮಾರುತಗಳು ಎಂಬ ಪಾಠಭಾಗದೆಡೆಗೆ ಮಕ್ಕಳನ್ನು ಮುನ್ನೆಡಸಬಹುದು.

## ಒತ್ತಡ ವಲಯಗಳು ಮತ್ತು ಮಾರುತಗಳು

ಜಾಗತಿಕ ಮಟ್ಟದಲ್ಲಿ ವಿವಿಧ ಅಕ್ಷಾಂಶ ವಲಯಗಳು ತಮ್ಮೊಳಗೆ ಒತ್ತಡ ವ್ಯತ್ಯಾಸಕ್ಕನುಸಾರವಾಗಿ ಬೀಸುವ ಮಾರುತಗಳ ಕುರಿತಾಗಿದೆ ಈ ಭಾಗವನ್ನು ಮಕ್ಕಳಿಗೆ ಪರಿಚಯಿಸಿದ ನಂತರ ಚಾರ್ಟನ್ನು ತಯಾರಿಸಿ ಪಾಠಭಾಗದ ಮಂಡನೆ ಮುಂದುವರಿಯುವುದರೊಂದಿಗೆ ಜಾಗತಿಕ ಮಾರುತಗಳು ಬೀಸುವ ದಿಕ್ಕನ್ನು ಅದರಲ್ಲಿ ಗುರುತಿಸುವುದರಿಂದ ಪಾಠಭಾಗದ ವಿನಿಮಯ ಸುಲಭವಾಗುವುದು. ಪ್ರತಿಯೊಂದು ಹಂತದಲ್ಲೂ ಮಕ್ಕಳ ಭಾಗವಹಿಸುವಿಕೆಯನ್ನು ಅಧ್ಯಾಪಕರು ದೃಢಪಡಿಸಬೇಕು.

ಚಿತ್ರ 2.5ರಿಂದ ವಿವಿಧ ಒತ್ತಡ ವಲಯಗಳ ಅಕ್ಷಾಂಶಗಳ ಸ್ಥಾನವನ್ನು ಕಂಡುಕೊಂಡು ಚಿತ್ರ 2.9ರಲ್ಲಿ ವೈಯಕ್ತಿಕವಾಗಿ ಗುರುತಿಸಲು ಹೇಳುವುದು. ಈ ಕೆಳಗೆ

ನೀಡಿರುವಂತೆ ಒತ್ತಡ ವಲಯಗಳನ್ನು ಗುರುತಿಸಿರುವರು ಎಂದು ಅಧ್ಯಾಪಕರು ಪರಿಶೀಲಿಸಿ ದೃಢಪಡಿಸಬೇಕು. ಒಂದೇ ದಿಕ್ಕಿಗೆ ವರ್ಷ ಪೂರ್ತಿ ಬೀಸುವ ಗಾಳಿ ಜಾಗತಿಕ ಮಾರುತಗಳಿಗೆ ಆಧಾರವಾಗುವುದು ಎಂಬ ವಿಚಾರವನ್ನು ಪ್ರತಿಯೊಂದು ಮಗುವಿಗೂ ತಲುಪಿಸಬೇಕಾಗಿದೆ. ಒತ್ತಡ ವಲಯಗಳನ್ನು ಗುರುತಿಸಿರುವ ಚಿತ್ರದಲ್ಲಿ ಜಾಗತಿಕ ಮಾರುತಗಳು ಬೀಸುವ ದಿಕ್ಕನ್ನು ಗುರುತಿಸಿರಿ. ಗರಿಷ್ಠ ಒತ್ತಡ ವಲಯದಿಂದ ಕನಿಷ್ಠ ಒತ್ತಡ ವಲಯದ ಕಡೆಗೆ ಜಾಗತಿಕ ಮಾರುತಗಳು ಬೀಸುತ್ತವೆ ಹಾಗೂ ಕೊರಿಯೋಲಿಸ್ ಶಕ್ತಿಯಿಂದಾಗಿ ಈ ಮಾರುತಗಳ ದಿಕ್ಕಿನಲ್ಲಿ ವ್ಯತ್ಯಾಸ ಉಂಟಾದುದು ಎಂದು ಚಿತ್ರದಲ್ಲಿ ಕಾಣಿಸುವ ರೀತಿಯಲ್ಲಿ ಬೀಸುತ್ತದೆ ಎಂದು ಮಕ್ಕಳು ತಿಳಿಯಬೇಕು. ಇವುಗಳ ದಿಕ್ಕು ಹಾಗೂ ಹೆಸರನ್ನು ವೈಯಕ್ತಿಕವಗಿ ನಿರೀಕ್ಷಿಸಿ ತಿಳಿದುಕೊಳ್ಳಲು ಹೇಳುವುದು. ಅನಂತರ ಭೂಮಿಯ ಡಯಗ್ರಾಂ ಬಿಡಿಸಿ ಅದರಲ್ಲಿ ಜಾಗತಿಕ ಒತ್ತಡ ವಲಯವನ್ನು ಗುರುತಿಸಲು ಹೇಳುಬೇಕು. ಅದರಲ್ಲಿ ಜಾಗತಿಕ ಮಾರುತಗಳ ದಿಕ್ಕು ಹಾಗೂ ಹೆಸರನ್ನು ಗುರುತಿಸಲು ಹೇಳುವುದು. ಈ ರೀತಿಯಾಗಿರುವ ಕಲಿಕಾ ಚಟುವಟಿಕೆಗಳು ಆಶಯ ಸ್ಪಷ್ಟತೆಗೆ ಹೆಚ್ಚು ಪ್ರಯೋಜನಕಾರಿಯಾಗಿದೆ.




## ನಿಯತಕಾಲಿಕ ಮಾರುತಗಳು

ಮಕ್ಕಳ ಗಮನವನ್ನು ನಿಯತಕಾಲಿಕ ಮಾರುತಗಳ ಕಡೆಗೆ ಸೆಳೆಯಿರಿ, ಕಾಲದ ಬದಲಾವಣೆಗಳಿಗನುಸಾರವಾಗಿ ಬೀಸುವ ಮಾರುತಗಳಾಗಿವೆ ನಿಯತ ಕಾಲಿಕ ಮಾರುತಗಳು ಎನ್ನುವ ಆಶಯ ಇಲ್ಲಿ ಮಕ್ಕಳಿಗೆ ತಲುಪಬೇಕಾದುದು. ವಿವಿಧ ರೀತಿಯ ನಿಯತ ಕಾಲಿಕ ಮಾರುತಗಳಿಗೆ ಉದಾಹರಣೆಯಾಗಿ ಮುನ್ಸೂನ್ ಗಾಳಿಯನ್ನು ಪರಿಚಯಿಸಿರಿ.

## ಮುನ್ಸೂನ್ ಮಾರುತಗಳು

ಕಾಳಿದಾಸನ ಮೇಘ ಸಂದೇಶ ಕಾವ್ಯ ಭಾಗವನ್ನು ಉದಾಹರಿಸಿಕೊಂಡು ಪಾಠಭಾಗವನ್ನು ಆರಂಭಿಸುವಾಗ ಪಾಠಭಾಗದ ಆರಂಭವು ಉತ್ತಮವಾಗುವುದು. ಕಾಲಕ್ಕನುಸಾರವಾಗಿ ದಿಕ್ಕನ್ನು ಬದಲಾಯಿಸಿ ಬೀಸುವ ಗಾಳಿಯು ಕೈಗಳಲ್ಲಿ ಸಂದೇಶವನ್ನು ಕೊಟ್ಟುಕಳುಹಿಸುವುದು ಎಂಬ ಕವಿ ಭಾವನೆಯು ಮಕ್ಕಳಲ್ಲಿ ಕೌತುಕ ಹುಟ್ಟಿಸಬಹುದು. ನಮ್ಮ ಪೂರ್ವಿಕರಿಗೆ ಮುನ್ಸೂನ್ ಮಾರುತಗಳ ಕುರಿತಾದ ಅರಿವಿತ್ತು ಎಂಬ ಅಭಿಮಾನವು ಉಂಟಾಗುವುದು.

ಮುನ್ಸೂನು ಮಾರುತಗಳು ರೂಪುಗೊಳ್ಳಲು ಕಾರಣ ಆಗ್ನೇಯ ವಾಣಿಜ್ಯ ಮಾರುತಗಳು ಭೂಮಧ್ಯ ರೇಖೆಯನ್ನು ದಾಟಿ ಬರುವಾಗ ಮುನ್ಸೂನ್ ಮಾರುತಗಳಾಗಿ ರೂಪಾಂತರಗೊಳ್ಳತ್ತದೆ ಎಂಬ ಆಶಯವನ್ನು ಪಾಠಭಾಗದ ಸಹಾಯದೊಂದಿಗೆ ವಿಶದೀಕರಿಸಬೇಕು. ಪಾಠಭಾಗದ ವಿವರಣೆ ಹಾಗೂ ಚಿತ್ರಗಳ ಸಹಾಯದಿಂದ ಮುನ್ಸೂನ್ ಮಾರುತಗಳ ಬಗ್ಗೆ ಮಕ್ಕಳಲ್ಲಿ ಆಶಯ ವಿನಿಮಯ ನಡೆಸಬೇಕು.


ಪಾಠಭಾಗದಲ್ಲಿ ನೀಡಿರುವ ಪ್ರಶ್ನೆಗಳೆಡೆಗೆ ಇನ್ನು ಮಕ್ಕಳ ಗಮನವನ್ನು ಸೆಳೆಯಿರಿ.


- ಉತ್ತರ ಯುರೋಪಿನಲ್ಲಿ ಮಾನ್ಸೂನ್ ಉಂಟಾಗುವುದಿಲ್ಲ. ಕಾರಣವೇನಾಗಿರಬಹುದು.
- ಗಾಮನಿಗೆ ಹಿಂತಿರುಗಿ ಮಲಿಂದಿಗೆ ತಲುಪಿಸಲು ಈ ಮಾರುತಗಳು ತುಂಬ ತೊಂದರೆಯ್ನುಂಟು ಮಾಡಿರಬಹುದು. ಯಾಕಾಗಿರಬಹದು?

ಮುನ್ಸೂನ್ ರೂಪುಗೊಳ್ಳುವುದುರ ಹಿಂದಿರುವ ಘಟಕಗಳಾದ ಸೂರ್ಯನ ಅಯನ, ಕೊರಿಯೋಲಿಸ್ ಪ್ರಭಾವ ಉಷ್ಣತೆ ವ್ಯತ್ಯಾಸ ಎಂಬಿವುಗಳನ್ನು ಸ್ಪಷ್ಟವಾಗಿ ತಿಳಿದುಕೊಂಡರೆ ಮಾತ್ರ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಸಾಧ್ಯ ಉತ್ತರ ಯುರೋಪಿನ ಪ್ರದೇಶಗಳಲ್ಲಿ ಬೀಸುವ ಮಾರುತಗಳು ವಿರುದ್ಧ ದಿಕ್ಕಿನಿಂದಾಗಿರುವುದು ಎಂದು ಭೂಪಟದ ಸಹಾಯದೊಂದಿಗೆ ವಿಶದೀಕರಿಸಿರಿ. ಈ ಮಾರುತಗಳು ಸಮುದಾಯ ಭಾಗದಿಂದ ಬೀಸುವವುಗಳಲ್ಲದ ಕಾರಣ ನೆಲ ಮತ್ತು ಕಡಲುಗಳೊಳಗಿನ ತಂಪಾದ ಮುನ್ಸೂನ್ ಪ್ರದೇಶದಂತೆ ಇಲ್ಲಿ ಕಂಡು ಬರುವುದಿಲ್ಲವೆಂದು ಮಕ್ಕಳಿಗೆ ತಿಳಿಸಿರಿ. ಮುನ್ಸೂನ್ ಮಾರುತಗಳ ಸಹಾಯದಿಂದ ಗಾಮನು ಕೇರಳ ತೀರಕ್ಕೆ ತಲುಪಿದ ಎಂದು ಮಕ್ಕಳು ಸ್ಪಷ್ಟವಾಗಿ ಅರಿತಿರಬೇಕು. ಇವುಗಳ ದಿಕ್ಕಿಗೆ ವಿರುದ್ಧವಾಗಿ ಹಾಯಿ ಹಡಗನ್ನು ಹುಟ್ಟುಹಾಕಿ ಮುನ್ನೆಡೆಸಿಕೊಂಡು ಹಿಂತಿರುಗುವುದು ಕಷ್ಟಕರವೆಂದು ಈ ಪಾಠಭಾಗದ ವಿನಿಯಮದ ಕೊನೆಗೆ ಮಕ್ಕಳು ಅರಿತಿರಬೇಕು. ಈ ರೀತಿಯಾಗಿ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಸಮರ್ಥರಾಗಿಸುವ ವಿಧದಲ್ಲಿ ಆಗಿರಬೇಕು ಪಾಠಭಾಗದ ವಿನಿಮಯ.

## ಕರೆಗಾಳಿ ಮತ್ತು ಕಡಲಗಾಳಿ

ಮುಂದೆ ಕರೆಗಾಳಿ ಮತ್ತು ಕಡಲಗಾಳಿ ರೂಪುಗೊಳ್ಳುವುದು ಹೇಗೆಂದು ಮಕ್ಕಳನ್ನು ಪರಿಚಯಿಸಲು ನೀಡಿರುವಂತಹ ಚಿತ್ರಗಳ ಸಹಾಯದೊಂದಿಗೆ ಈ ಪಾಠಭಾಗವನ್ನು ವಿನಿಮಯ





ಮಾಡುವುದು ಆಶಯ ಸ್ಪಷ್ಟತೆಗೆ ಸಹಾಯಕವಾಗಬಹುದು. ಚಿತ್ರವನ್ನು ಗಮನಿಸಿರಿ. ವಾತಾವರಣದ ಒತ್ತಡವು ಹಗಲು ಮತ್ತು ರಾತ್ರಿ ಕಾಲಗಳಲ್ಲಿ ವ್ಯತ್ಯಸ್ತವಾಗಿರುವುದೆಂದು ಮಕ್ಕಳಿಗೆ ತಿಳಿಯಪಡಿಸಬೇಕು. ನೆಲಭಾಗ ಕೂಡಲೇ ಬಿಸಿಯಾಗುವುದು ಹಾಗೂ ತಣಿಯುವುದು. ಆದರೆ ಕಡಲಿನ ಭಾಗವು ನಿಧಾನವಾಗಿ ಬಿಸಿಯಾಗುವುದು ಹಾಗೂ ತಣಿಯುವುದೆಂದು ವಿವರಿಸಿರಿ. ಈ ವಿಚಾರಗಳ ಆಧಾರದಲ್ಲಿ ಹಗಲು ರಾತ್ರಿಗಳಲ್ಲಿ ಉಂಟಾಗುವ ಒತ್ತಡ ವ್ಯತ್ಯಾಸವನ್ನು ಮಕ್ಕಳ ಸಹಾಯದೊಂದಿಗೆ ಕಂಡುಕೊಂಡು ಚಿತ್ರದಲ್ಲಿ ಗುರುತಿಸಿರಿ. ಒತ್ತಡ ವ್ಯತ್ಯಾಸಕ್ಕೆ ಅನುಸಾರವಾಗಿ ಗಾಳಿಯ ದಿಕ್ಕನ್ನು ಚಿತ್ರದಲ್ಲಿ ಸೇರಿಸಿರಿ. ಮಕ್ಕಳ ಭಾಗವಹಿಸುವಿಕೆಯನ್ನು ಪ್ರತಿಯೊಂದು ಹಂತದಲ್ಲೂ ದೃಢಪಡಿಸಬೇಕು.

## ಪ್ರಾದೇಶಿಕ ಮಾರುತಗಳು

ಈ ಪಾಠಭಾಗದ ವಿನಿಮಯಕ್ಕೆ ಅಟ್ಲಾಸನ್ನು ನಿರ್ಬಂಧವಾಗಿಯೂ ಉಪಯೋಗಿಸಬೇಕು. ಪ್ರಾದೇಶಿಕವಾದ ಒತ್ತಡ ವ್ಯತ್ಯಾಸಗಳಿಂದ ಸಣ್ಣ ಪ್ರದೇಶಗಳಲ್ಲಿ ಮಾತ್ರ ಅನುಭವಕ್ಕೆ ಬರುವ ಹಾಗೂ ಶಕ್ತಿ ಕಡಿಮೆ ಇರುವ ಗಾಳಿಗಳಾಗಿದೆ ಪ್ರಾದೇಶಿಕ ಮಾರುತಗಳು ಎಂದು ಮಕ್ಕಳಿಗೆ ತಿಳಿಯಪಡಿಸಿರಿ. ಮಕ್ಕಳಿಗೆ ಪ್ರಧಾನ ಪ್ರಾದೇಶಿಕ ಮಾರುತಗಳನ್ನು ಪರಿಚಯಿಸಿರಿ. ಅವುಗಳು ಬೀಸುವ ಪ್ರದೇಶವನ್ನು ಅಟ್ಲಾಸಿನ ಸಹಾಯದೊಂದಿಗೆ ಕಂಡುಕೊಳ್ಳಲು ಮಕ್ಕಳನ್ನು ಪ್ರೇರೇಪಿಸಬೇಕು.

ಭೂಮಿಯಲ್ಲಿನ ವಿವಿಧ ವಿಧದ ಮಾರುತಗಳನ್ನು ವಿವರಿಸುವ ಈ ಪಾಠಭಾಗದ ವಿನಿಮಯದ ಕೊನೆಗೆ ಮಾರುತಗಳ ವರ್ಗೀಕರಣವನ್ನು ಸ್ಪಷ್ಟಪಡಿಸುವ ಫ್ಲೋಟಾರ್ಟನ್ನು ಕೆಳಗೆ ನೀಡರುವಂತೆ ಮಕ್ಕಳು

ವೈಯಕ್ತಿಕವಾಗಿ ಪೂರ್ತಿಗೊಳಿಸುವಾಗ ಈ ಪಾಠಭಾಗದ ಉದ್ದೇಶ ಈಡೇರಿತು ಎನ್ನಬಹುದು. ಇದರೊಂದಿಗೆ ಭೂಮಿಯನ್ನು ಹಾಗೂ ಅದರ ವೈವಿಧ್ಯದ ಕುರಿತಾದ ಮುಂದಿನ ಅನ್ವೇಷಣೆಗಳಿಗೆ ಈ ಭಾಗದ ಮೂಲಕ ಮಕ್ಕಳನ್ನು ಸಮರ್ಥರಾಗಿಸಬೇಕು.




## ? ಮೌಲ್ಯಮಾಪನ ಪ್ರಶ್ನೆಗಳು

- ಹೊಂದಿಸಿ ಬರೆಯಿರಿ.


| | |
|---|---|
| ಉತ್ತರಾರ್ಧಗೋಲದ ವಾಣಿಜ್ಯ ಮಾರುತಗಳು | ಈಶಾನ್ಯ ಮುನ್ಸೂನ್ |
| ದಕ್ಷಿಣಾರ್ಧಗೋಲದ ವಾಣಿಜ್ಯ ಮಾರುತಗಳು | ಮುನ್ಸೂನ್ ಮಾರುತ |
| ಉತ್ತರಾರ್ಧಗೋಲದ ಪಶ್ಚಿಮ ಮಾರುತಗಳು | ನೈಋತ್ಯ ಮುನ್ಸೂನ್ |
| ದಕ್ಷಿಣಾರ್ಧ ಗೋಲದಲ್ಲಿ ಪಶ್ಚಿಮ ಮಾರುತಗಳು | ಆಗ್ನೇಯ ಮಾರುತ |
| ನಿಯತಕಾಲಿಕ ಮಾರತಗಳು | ಬಲಭಾಗಕ್ಕೆ |
| ಉತ್ತರಾರ್ಧಗೋಲದ ಕೊರಿಯೋಲಿಸ್ ಪ್ರಭಾವ | ಎಡಭಾಗಕ್ಕೆ |

- ಭಾರತದಲ್ಲಿ ಬೀಸುವ ಪ್ರಾದೇಶಿಕ ಮಾರುತಕ್ಕೆ ಉದಾಹರಣೆಯನ್ನು ಕಂಡುಕೊಂಡು ಇದರ ವಿಶೇಷತೆಗಳನ್ನು ಬರೆಯಿರಿ.
- ಕೆಳಗೆ ನೀಡಿರುವ ಸನ್ನಿವೇಶಗಳಲ್ಲಿ ವಾಯು ಭಾರ ಪ್ರವಣತೆಯು ಯಾವ ರೀತಿಯಲ್ಲಾಗಿರಬಹುದು?
  - ಸಮಾನ ಒತ್ತಡ ರೇಖೆಗಳು ಸಮೀಪಗಳಲ್ಲಾಗಿ ಬರುವಾಗ
  - ಸಮಾನ ಒತ್ತಡ ರೇಖೆಗಳು ಬಹಳ ದೂರದಲ್ಲಾಗಿ ಬರುವಾಗ
  - ಸಮೀಪ ಪ್ರದೇಶದ ಒತ್ತಡದಲ್ಲಿ ವ್ಯತ್ಯಾಸವಿಲ್ಲದಿರುವಾಗ
  - ಸಮೀಪ ಪ್ರದೇಶದ ಒತ್ತಡ ಸ್ಪಷ್ಟವಾದ ವ್ಯತ್ಯಾಸವಿದ್ದರೆ

## ಆಕಾರ ಗ್ರಂಥ


*Climatology : D.S. Lal*

*Climatology : Critch field*



# 3

# ಭಾರತದಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿ

ಅನೇಕ ವಸ್ತುಗಳು ಹಾಗೂ ಸೇವೆಗಳು ಜನಜೀವನವನ್ನು ಉತ್ತಮಪಡಿಸಲು ಅಗತ್ಯವಾಗಿವೆ. ಮಾನವ ಶ್ರಮ ಹಾಗೂ ಯಂತ್ರಗಳನ್ನು ಉಪಯೋಗಿಸಿ ಪ್ರಾಕೃತಿಕ ಸಂಪನ್ಮೂಲಗಳಿಂದ ವಸ್ತುಗಳನ್ನು ಹಾಗೂ ಸೇವೆಗಳನ್ನು ಉತ್ಪಾದಿಸುತ್ತಾರೆ. ಇದಕ್ಕೆ ಅಗತ್ಯವಾದ ಮಾನವ ಶ್ರಮವನ್ನು ಒದಗಿಸಿಕೊಡುವುದು ದೇಶದಲ್ಲಿ ವಾಸವಾಗಿರುವ ಜನರಾಗಿದ್ದಾರೆ. ಜನರು ದೇಶದ ಮಾನವ ಸಂಪನ್ಮೂಲವಾಗಿದ್ದಾರೆ. ಮಾನವ ಸಂಪನ್ಮೂಲದ ಲಭ್ಯತೆಯಲ್ಲಿ ಭಾರತವು ಎರಡನೇ ಸ್ಥಾನದಲ್ಲಿದೆ.

ಉತ್ಪಾದನೆ ಹಾಗೂ ಸೇವಾ ವಲಯಗಳಲ್ಲಿ ಉಪಯೋಗಿಸಲು ಅಗತ್ಯವಾದಷ್ಟು ನೈಪುಣ್ಯ ಹೊಂದಿದ ಮಾನವ ಸಂಪನ್ಮೂಲದ ಲಭ್ಯತೆಯನ್ನು ದೃಢಪಡಿಸಿದರೆ ಮಾತ್ರವೇ ದೇಶವು ಅಭಿವೃದ್ಧಿ ಹೊಂದುವುದು. ಆದುದರಿಂದ ದೇಶದಲ್ಲಿ ಲಭ್ಯವಾದ ಮಾನವ ಸಂಪನ್ಮೂಲದ ವಿಶೇಷತೆಗಳನ್ನು ಕಲಿಕೆಗೆ ಒಳಪಡಿಸುವುದರೊಂದಿಗೆ ಅವುಗಳ ಲಭ್ಯತೆಯನ್ನು ದೃಢಪಡಿಸಬೇಕು. ಈ ಉದ್ದೇಶವಿರಿಸಿಕೊಂಡು ಈ ಪಾಠಭಾಗವನ್ನು ತಯಾರಿಸಲಾಗಿದೆ.

ಮಾನವ ಸಂಪನ್ಮೂಲದ ಪರಿಮಾಣಾತ್ಮಕವಾದ ವಿಶೇಷತೆಗಳಾದ ಜನಸಂಖ್ಯೆಯ ಗಾತ್ರ, ಜನಸಂಖ್ಯಾ ಸಾಂದ್ರತೆ, ಸಂಖ್ಯಾ ಬೆಳವಣಿಗೆ, ಜನಸಂಖ್ಯಾ ರಚನೆ ಇತ್ಯಾದಿಗಳನ್ನು ವಿಶ್ಲೇಷಿಸುವುದರೊಂದಿಗೆ ಮಾನವ ಸಂಪನ್ಮೂಲವನ್ನು ಉತ್ತಮಪಡಿಸಲಿರುವ ಗುಣಾತ್ಮಕ ಘಟಕಗಳಾದ ಶಿಕ್ಷಣ, ಆರೋಗ್ಯ ಪರಿಪಾಲನೆ, ಸಾಮಾಜಿಕ ಬಂಡವಾಳ ಎಂಬಿವುಗಳನ್ನು ವಿವರವಾಗಿ ಪರಿಶೋಧಿಸುತ್ತೇವೆ. ಉಳಿದ ಉತ್ಪಾದನಾ ಘಟಕಗಳಿಂದ ಮಾನವ ಸಂಪನ್ಮೂಲವು ಪ್ರಾಧಾನ್ಯವನ್ನು ಹೊಂದಿದೆ ಎಂದೂ ಇವುಗಳನ್ನು ಸರಿಯಾದ ರೀತಿಯಲ್ಲಿ ಯೋಜನೆ ಮಾಡಿ ಅಬಿವೃದ್ಧಿಗೊಳಿಸಬೇಕೆಂದೂ ಈ ಯೂನಿಯನ್‌ನ ಮೂಲಕ ತಿಳುವಳಿಕೆ ಹೊಂದಬೇಕು. ಮಾನವ ಸಂಪನ್ಮೂಲದ ಭಾಗವೆಂಬ ಮನೋಭಾವಕ್ಕೆ ಬರಲು ಪಾಠಭಾಗವು ಪ್ರಯೋಜನಕಾರಿಯಾಗುವುದು.

# ಯೂನಿಟ್ ಫ್ರೇಂ

## 3. ಭಾರತದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಮಾನವ ಸಂಪನ್ಮೂಲ<br>- ಮಾನವ ಸಂಪನ್ಮೂಲ ಅಭಿವೃದ್ಧಿಯ ವಿವಿಧ ಹಂತಗಳು<br>• ಮಾನವ ಸಂಪನ್ಮೂಲದ ಪರಿಮಾಣಾತ್ಮಕ ವಿಶೇಷತೆಗಳು ಹಾಗೂ<br>• ಗುಣಾತ್ಮಕವಾದ ವಿಶೇಷತಗಳು<br>- ಜನಸಂಖ್ಯಾ ಗಾತ್ರ<br>- ಜಗತ್ತಿನ ಜನಸಂಖ್ಯೆಯಲ್ಲಿ ಭಾರತದ ಸ್ಥಾನ<br>- ಜನಸಾಂದ್ರತೆ ಹಾಗೂ ಮಾನವ ಸಂಪನ್ಮೂಲದ ಲಭ್ಯತೆ<br>- ಜನಸಂಖ್ಯೆಯ ಲಭ್ಯತೆಯಲ್ಲಿ ಬದಲಾವಣೆಯನ್ನು ಉಂಟುಮಾಡುವ ಘಟಕಗಳು<br>(ಜನನ ಪ್ರಮಾಣ, ಮರಣ ಪ್ರಮಾಣ, ವಲಸೆ<br>• ಜನಸಂಖ್ಯಾ ರಚನೆ ದುಡಿಯುವ ಸಾಮರ್ಥ್ಯ<br>- ಪಾಲ್ಗೊಳ್ಳುವಿಕೆಯ ಪ್ರಮಾಣ<br>- ಆಶ್ರಿತರ ಪ್ರಮಾಣ<br>• ಮಾನವ ಸಂಪನ್ಮೂಲದ ಗುಣಾತ್ಮಕವಾದ ವಿಶೇಷತೆಗಳು(ಶಿಕ್ಷಣ, ಆರೋಗ್ಯ, ತರಬೇತಿ ಸಾಮಾಜಿಕ ಬಂಡವಾಳ)<br>• ವಿದ್ಯಾಭ್ಯಾಸ ಮತ್ತು ಮಾನವ ಸಂಪನ್ಮೂಲದ ಅಭಿವೃದ್ಧಿ<br>• ಮಾನವ ಸಂಪನ್ಮೂಲದ ಅಭಿವೃದ್ಧಿಗಾಗಿ ಜಾರಿಗೊಳಿಸುತ್ತಿರುವ ಕಾರ್ಯಕ್ರಮಗಳು, ಪರಿಮಿತಿಗಳು<br>• ಮಾನವ ಸಂಪನ್ಮೂದ ಅಭಿವೃದ್ಧಿಗಾಗಿ ಆರೋಗ್ಯ ಕ್ಷೇತ್ರದಲ್ಲಿರುವ ವ್ಯವಸ್ಥೆಗಳು, ಕಾರ್ಯಕ್ರಮಗಳು<br>• ಆರೋಗ್ಯ ಪರಿಪಾಲನ ರಂಗದ ಕಾರ್ಯಕ್ರಮಗಳು | • ವಾಚನಾ ಸಾಮಗ್ರಿಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ, ಚರ್ಚೆ ನಡೆಸಿ ಟಿಪ್ಪಣಿ ತಯಾರಿ<br>• ಫ್ಲೋ ಚಾರ್ಟ್ ವಿಶ್ಲೇಷಿಸಿ ಪಟ್ಟಿ ತಯಾರಿ<br>• ವಾಚನಾ ಸಾಮಗ್ರಿಗಳಿಂದ ಜನಗಣತಿ ಪ್ರಕ್ರಿಯೆಯ ವಿಶ್ಲೇಷಣೆ ಮಾಡುವುದು<br>• ಭಾರತದ ಜನಸಂಖ್ಯೆಯನ್ನು ಜಗತ್ತಿನ ಜನ ಸಂಖ್ಯೆಯೊಂದಿಗೆ ಹೋಲಿಸಿ ಟಿಪ್ಪಣಿ ತಯಾರಿಸವುದು<br>• ಜನಸಾಂದ್ರತೆಯ ಭೂಪಟ, ಪಟ್ಟಿ ಎಂಬಿವುಗಳನ್ನು ವಿಶ್ಲೇಷಿಸಿ ಮಾನವ ಸಂಪನ್ಮೂಲದ ಲಭ್ಯತೆಯ ಬಗ್ಗೆ ಚರ್ಚಿಸುವುದು.<br>• ಪಟ್ಟಿ ಗ್ರಾಫ್ ಎಂಬಿವುಗಳನ್ನು ವಿಶ್ಲೇಷಿಸಿ ಜನ ಸಂಖ್ಯಾ ಬೆಳವಣಿಗೆಯ ದರವನ್ನು ಹೋಲಿಸುವುದು ಮತ್ತು ಇದರ ಮೇಲೆ ಪ್ರಭಾವ ಬೀರುವ ಘಟಕಗಳ ಟಿಪ್ಪಣಿ ತಯಾರಿ.<br>• ಗ್ರಾಫನ್ನು ವಿಶ್ಲೇಷಣೆ ಮಾಡಿ ವಯೋಮಿತಿ ರಚನೆ, ಉದ್ಯೋಗ ಪಾಲ್ಗೊಳ್ಳುವಿಕೆಯ ಪ್ರಮಾಣ, ಆಶ್ರಿತರ ಪ್ರಮಾಣಗಳನ್ನು ಕಂಡುಕೊಂಡು ಮಂಡನೆ, ಚರ್ಚೆ.<br>• ವಾಚನಾ ಸಾಮಗ್ರಿಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿ<br>• ಫ್ಲೋ ಚಾರ್ಟ್ ವಿಶ್ಲೇಷಿಸಿ ವಿದ್ಯಾಭ್ಯಾಸವು ಹೇಗೆ ಆರ್ಥಿಕ ಅಭಿವೃದ್ಧಿಯ ಮೇಲೆ ಪ್ರಭಾವ ಬೀರುತ್ತದೆ ಎಂಬುದರ ಕುರಿತು ಟಿಪ್ಪಣಿ ತಯಾರಿಸುವುದು<br>• ಓದು, ಸಂದರ್ಶನ ಎಂಬಿವುಗಳ ಮೂಲಕ ವಿದ್ಯಾಭ್ಯಾಸ ಕ್ಷೇತ್ರದ ಕಾರ್ಯಕ್ರಮಗಳು ಹಾಗೂ ಅವುಗಳ ಪರಿಮಿತಿಗಳನ್ನು ವಿಶ್ಲೇಷಿಸಿ ಚರ್ಚೆ ನಡೆಸುವುದು.<br>• ವಾಚನಾ ಸಾಮಗ್ರಿ ಹಾಗೂ ಐ.ಸಿ.ಟಿ.ಯ ಸಹಾಯದಿಂದ ಆರೋಗ್ಯ ಪರಿಪಾಲನಾ ವ್ಯವಸ್ಥೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ವಿಶ್ಲೇಷಿಸಿ ಇವು ಹೇಗೆ ಆರ್ಥಿಕ ಅಭಿವೃದ್ಧಿ ಸಹಾಯಕರವಾಗಿದೆ ಎಂದು ಕಂಡುಕೊಂಡು ಮಂಡಿಸುವುದು.<br>• ವಿದ್ಯಾಭ್ಯಾಸ–ಆರೋಗ್ಯ ಪರಿಪಾಲ ಕ್ಷೇತ್ರದ ವ್ಯವಸ್ಥೆಯಗಳು ಹಾಗೂ ಕಾರ್ಯಕ್ರಗಳು ಹೇಗೆ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಹಕಾರಿಯಾಗಿದೆ. ವಿಷಯದ ಕುರಿತು ಸೆಮಿನಾರನ್ನು ಆಯೋಜಿಸುವುದು. | • ಮಾನವ ಸಂಪನ್ಮೂಲಕ ಅಭಿವೃದ್ಧಿಯ ಆವಶ್ಯಕತೆಯನ್ನು ವಿಶ್ಲೇಷಿಸಿ ಮಂಡಿಸುವರು.<br>• ಮಾನವ ಸಂಪನ್ಮೂಲದ ಪರಿಮಾಣಾತ್ಮಕವಾದ ಮತ್ತು ಗುಣಾತ್ಮಕವಾದ ವಿಶೇಷತೆಗಳನ್ನು ಸ್ಪಷ್ಟಪಡಿಸುವ ಫ್ಲೋಚಾರ್ಟು ತಯಾರಿಸುವರು.<br>• ಭಾರತದ ಜನಸಂಖ್ಯೆಯನ್ನು ಜಗತ್ತಿನ ಜನಸಂಖ್ಯೆಯೊಂದಿಗೆ ತುಲನೆ ಮಾಡಿ ಗಾತ್ರ, ಸ್ಥಾನ ಎಂಬಿವುಗಳನ್ನು ಕಂಡುಕೊಂಡು ಮಂಡಿಸುವರು.<br>• ಜನಸಂಖ್ಯೆಯಲ್ಲಿ ಬದಲಾವಣೆಯನ್ನುಂಟುಮಾಡುವ ಘಟಕಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸಿ ಮಂಡಿಸುವರು.<br>• ಜನಸಂಖ್ಯಾ ವಯೋಮಿತಿ ವರ್ಗೀಕರಣ, ಉದ್ಯೋಗದಲ್ಲಿ ಪಾಲ್ಗೊಳ್ಳುವಿಕೆಯು ಪ್ರಮಾಣ, ಆಶ್ರಿತರ ಪ್ರಮಾಣ ಎಂಬವುಗಳನ್ನು ವಿಶ್ಲೇಷಿಸಿ ಮಂಡಿಸುವರು.<br>• ಭಾರತದಲ್ಲಿ ಸ್ತ್ರೀ–ಪುರುಷ ಅನುಪಾತ, ಆಯುಷ್ಕಾಲ, ಸಾಕ್ಷರತಾ ಪ್ರಮಾಣ ಎಂಬಿವುಗಳನ್ನು ವಿಶ್ಲೇಷಿಸಿ ದೇಶದ ಅಭಿವೃದ್ಧಿಗೆ ಅವು ಹೇಗೆ ಸಹಾಯಕವಾಗಿವೆ ಎಂದು ಚರ್ಚಿಸುವರು.<br>• ಮಾನವ ಸಂಪನ್ಮೂಲದ ಪರಿಮಾಣಾತ್ಮಕವಾದ ವಿಶೇಷತೆಗಳನ್ನು ಮಂಡಿಸುವರು.<br>• ಮಾನವ ಸಂಪನ್ಮೂಲದ ಅಭಿವೃದ್ಧಿಯಲ್ಲಿ ಶಿಕ್ಷಣ, ಆರೋಗ್ಯ ಸಂರಕ್ಷಣೆ ಎಂಬಿವುಗಳ ಪಾತ್ರದ ಕುರಿತು ಟಿಪ್ಪಣಿ ತಯಾರಿಸುವರು.<br>• ಶಿಕ್ಷಣ ಆರೋಗ್ಯ ಸಂರಕ್ಷಣೆ ಎಂಬಿವುಗಳಿಗಾಗಿ ಕಾರ್ಯಾಚರಿಸುವ ವ್ಯವಸ್ಥೆಗಳ ಕುರಿತು ಚರ್ಚೆ ಮಾಡಿ ಟಿಪ್ಪಣಿ ತಯಾರಿಸುವರು. |

## ಅಧ್ಯಾಯದೆಡೆಗೆ......

ಈ ಯೂನಿಟ್‌ನ್ನು ಮಾನವ ಸಂಪನ್ಮೂಲದ ಪರಿಮಾಣಾತ್ಮಕವಾದ ವಿಶೇಷತೆಗಳು ಮತ್ತು ಗುಣಾತ್ಮಕವಾದ ವಿಶೇಷತೆಗಳೆಂಬ ಎರಡು ಭಾಗಗಳಾಗಿ ಮಾಡಿ ವಿಶ್ಲೇಷಣೆ ಮಾಡುವ ಪಾಠಭಾಗ ಆರಂಭದಲ್ಲಿ ನೀಡಿದ ಚಿತ್ರಗಳನ್ನು ಆಧಾರವಾಗಿರಿಸಿರುವ ಚರ್ಚೆಯೊಂದಿಗೆ ಪಾಠಭಾಗವನ್ನು ಆರಂಭಿಸುವುದು.

- ಯಾರೆಲ್ಲಾ, ಯಾವೆಲ್ಲಾ ಕೆಲಸಗಳಲ್ಲಿ ನಿರಂತರಾಗಿರುವರು?
- ಇವರು ಉತ್ಪಾದಿಸುವ ವಸ್ತುಗಳು ಮತ್ತು ಸೇವೆಗಳು ಯಾವುವು?

ಕಿರು ಚರ್ಚೆಯ ಮೂಲಕ ಕೆಲವು ಕೆಲಸಗಳನ್ನು ಅವರು ಉತ್ಪಾದಿಸುವ ವಸ್ತುಗಳನ್ನು ಹಾಗೂ ಸೇವೆಗಳನ್ನು ಪಟ್ಟಿ ಮಾಡಿ ಮಂಡಿಸಬಹುದು. ಮಕ್ಕಳಿಗೆ ಪರಿಚಿತವಾದ ಕೆಲಸಗಳನ್ನು ಸೇರಿಸಿಕೊಂಡು ಪಾಠಭಾಗದ ಪಟ್ಟಿಯನ್ನು ಬೆಳೆಸುವುದು.

- ಕ್ರೋಡೀಕರಣ
- ವಿವಿಧ ರೀತಿಯ ಕೆಲಸಗಳಲ್ಲಿ ಜನರು ನಿರತರಾಗಿರುವರು.
- ಜನರಿಗೆ ಅಗತ್ಯವಾದ ಅನೇಕ ವಸ್ತುಗಳು ಹಾಗೂ ಸೇವೆಗಳನ್ನು ಉತ್ಪಾದಿಸುತ್ತಾರೆ.
- ಜನರು ಮಾನವ ಪರಿಶ್ರಮವನ್ನು ಒದಗಿಸುತ್ತಾರೆ.
- ದೇಶದ ಅಭಿವೃದ್ಧಿಗೆ ಮಾನವ ಶ್ರಮ ಹಾಗೂ ಮಾನವ ಸಂಪನ್ಮೂಲಗಳು ಅನಿವಾರ್ಯ ವಾಗಿವೆ.

### ಮಾನವ ಸಂಪನ್ಮೂಲ – ಮಾನವ ಸಂಪನ್ಮೂಲದ ಅಭಿವೃದ್ಧಿ

ಅಭಿವೃದ್ಧಿಯ ವಿವಿಧ ಹಂತಗಳು ಯಾವುವೆಂದು ಕೆಳಗೆ ನೀಡಿರುವ ಸೂಚಕಗಳ ಆಧಾರದಲ್ಲಿ ಪಾಠಭಾಗದ ಪುಟ ಸಂಖ್ಯೆ 38ನ್ನು ಓದಿ ಟಿಪ್ಪಣಿ ತಯಾರಿಸಿ ಮಂಡಿಸುವುದು.

- ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸಬೇಕಾದುದರ ಅಗತ್ಯ
- ಅದಕ್ಕಿರುವ ಮಾರ್ಗ
- ವ್ಯಕ್ತಿ, ಕುಟುಂಬ, ಸಂಸ್ಥೆ, ದೇಶ ಎಂಬಿವುಗಳು ಒದಗಿಸುವ ಸೌಕರ್ಯಗಳು.

## ಮಾನವ ಸಂಪನ್ಮೂಲದ ವಿಶೇಷತೆಗಳು

ಮಾನವ ಸಂಪನ್ಮೂಲವನ್ನು ಕಲಿಕೆಗೆ ಒಳಪಡಿಸಬೇಕಾದರೆ ಅವುಗಳ ವಿಶೇಷತೆಗಳನ್ನು ವಿಶ್ಲೇಷಿಸಬೇಕಾದ ಮಾನವ ಸಂಪನ್ಮೂಲದ ಪರಿಮಾಣಾತ್ಮಕವಾದ ಹಾಗೂ ಗುಣಾತ್ಮಕವಾದ ವಿಶೇಷತೆಗಳನ್ನು ಫ್ಲೋಚಾರ್ಟ್ (ಪುಟ 39)ನಿಂದ ಕಂಡುಕೊಂಡು ಪಟ್ಟಿ ತಯಾರಿಸಿ ಮಂಡಿಸುವುದು.

ಲಘು ಚರ್ಚೆ–ಕ್ರೋಡೀಕರಣ.

**ಪರಿಮಾಣಾತ್ಮಕ ವಿಶೇಷತೆಗಳು**

ಜನಸಂಖ್ಯೆಯ ಗಾತ್ರ

ಪುಟ ಸಂಖ್ಯೆ 39, 40ರಲ್ಲಿರುವ ಮಾಹಿತಿಗಳ ಆಧಾರದಲ್ಲಿ ಕೆಳಗೆ ನೀಡಿರುವವುಗಳನ್ನು ಚರ್ಚಿಸಿ ಮಂಡಿಸುವುದು.

- ಜನಸಂಖ್ಯೆಯ ಗಾತ್ರ
- ಜನಸಂಖ್ಯಾ ವಿಜ್ಞಾನ
- ಜನಗಣತಿ
- ಮಾನವ ಸಂಪನ್ಮೂಲವನ್ನು ಲೆಕ್ಕ ಹಾಕುವುದರಿಂದ ಇರುವ ಪ್ರಯೋಜನಗಳು ಯಾವುವು?
- ಜಾಗತಿಕ ಜನಸಂಖ್ಯೆ ಹಾಗೂ ಭಾರತದ ಜನಸಂಖ್ಯೆ
- ಪ್ರತಿಗುಂಪಿಗೂ ಒಂದೊಂದು ವಲಯವನ್ನು ನೀಡಬಹುದು.

ಐ.ಸಿ.ಟಿ.ಯ ಸಹಾಯದೊಂದಿಗೆ www.census india.com ಎಂಬ ವೆಬ್‌ಸೈಟ್‌ನ್ನು ಉಪಯೋಗಿಸಬಹುದು.

ಭಾರತದ ಜನಸಂಖ್ಯೆಯನ್ನು ಪ್ರಾಂತ್ಯದ ಆಧಾರದಲ್ಲಿ ಕಂಡುಹಿಡಿದು ಮಂಡಿಸುವುದು.

**ಜನಸಂಖ್ಯೆ–ಜನಗಣತಿ ಭಾರತ–2011 ಪ್ರಾಥಮಿಕ ಮಾಹಿತಿಗಳು**

| Sl. No. | State | Population Crore | Growth Rate % | Density Sq. Km | Sex Ratio | Literacy Rate (T) |
|---|---|---|---|---|---|---|
| 1 | ಉತ್ತರ ಪ್ರದೇಶ | 19.98 | 20.23 | 829 | 912 | 67.68 |
| 2 | ಮಹಾರಾಷ್ಟ್ರ | 11.24 | 15.99 | 365 | 929 | 82.34 |
| 3 | ಬಿಹಾರ | 10.4 | 25.42 | 1106 | 918 | 61.8 |
| 4 | ಪಶ್ಚಿಮ ಬಂಗಾಳ | 9.13 | 13.84 | 1028 | 950 | 76.26 |
| 5 | ಆಂಧ್ರಪ್ರದೇಶ | 8.46 | 10.98 | 308 | 993 | 67.02 |
| 6 | ಮಧ್ಯ ಪ್ರದೇಶ | 7.26 | 20.35 | 236 | 931 | 69.32 |
| 7 | ತಮಿಳುನಾಡು | 7.21 | 15.61 | 555 | 996 | 80.09 |
| 8 | ರಾಜಸ್ತಾನ | 6.85 | 21.31 | 200 | 928 | 66.11 |
| 9 | ಕರ್ನಾಟಕ | 6.11 | 15.6 | 319 | 973 | 75.36 |
| 10 | ಗುಜರಾತ | 6.04 | 19.28 | 308 | 919 | 78.03 |
| 11 | ಒರಿಸ್ಸಾ | 4.2 | 14.05 | 270 | 979 | 72.87 |
| 12 | ಕೇರಳ | 3.34 | 4.91 | 860 | 1084 | 94 |
| 13 | ಜಾರ್ಖಂಡ್ | 3.3 | 22.42 | 414 | 948 | 66.41 |
| 14 | ಅಸ್ಸಾಂ | 3.12 | 17.07 | 398 | 958 | 72.19 |
| 15 | ಪಂಜಾಬ್ | 2.77 | 13.89 | 551 | 895 | 75.84 |
| 16 | ಛತ್ತೀಸ್‌ಘಡ್ | 2.55 | 22.61 | 189 | 991 | 70.28 |
| 17 | ಹರಿಯಾಣ | 2.54 | 19.9 | 573 | 879 | 75.55 |
| 18 | ದೆಹಲಿ | 1.68 | 21.21 | 11320 | 868 | 86.21 |
| 19 | ಜಮ್ಮುಕಾಶ್ಮೀರ | 1.25 | 23.64 | 56 | 889 | 67.16 |
| 20 | ಉತ್ತರ | 1.01 | 19.81 | 189 | 963 | 78.82 |

| Sl. No. | State | Population Crore | Growth Rate % | Density Sq. Km | Sex Ratio | Literacy Rate (T) |
|---|---|---|---|---|---|---|
| 21 | ಹಿಮಾಚಲ ಪ್ರದೇಶ | 0.68 | 12.94 | 123 | 972 | 82.8 |
| 22 | ತ್ರಿಪುರ | 0.36 | 14.84 | 350 | 960 | 87.22 |
| 23 | ಮೇಘಾಲಯ | 0.29 | 27.95 | 132 | 989 | 74.43 |
| 24 | ಮಣಿಪುರ | 0.26 | 12.05 | 115 | 992 | 79.21 |
| 25 | ನಾಗಾಲೇಂಡ್ | 0.2 | 0.58 | 119 | 931 | 79.55 |
| 26 | ಗೋವ | 0.15 | 8.23 | 394 | 973 | 88.7 |
| 27 | ಅರುಣಾಚಲ ಪ್ರದೇಶ | 0.14 | 26.03 | 17 | 938 | 65.38 |
| 28 | ಪುದುಚೇರಿ | 0.12 | 28.08 | 2547 | 1037 | 85.85 |
| 29 | ಮಿಜೋರಾಂ | 0.11 | 2148 | 52 | 976 | 91.33 |
| 30 | ಚಂಡೀಘಡ್ | 0.11 | 17.19 | 9258 | 818 | 86.05 |
| 31 | ಸಿಕ್ಕಿಂ | 0.061 | 12.89 | 86 | 890 | 81.42 |
| 32 | ಅಂಡಮಾನ್ ನಿಕೋಬಾರ್ | 0.038 | 6.86 | 46 | 876 | 86.63 |
| 33 | ದಾದ್ರಾ-ನಗರ್ ಹವೇಲಿ | 0.034 | 55.88 | 700 | 774 | 76.24 |
| 34 | ದಾಮನ್-ದಿಯೂ | 0.024 | 53.76 | 2191 | 618 | 87.1 |
| 35 | ಲಕ್ಷದ್ವೀಪ | 0.0064 | 6.3 | 2149 | 946 | 91.85 |
| 36 | ಭಾರತ | 121.02 | 17.64 | 382 | 940 | 74.04 |

ರಷ್ಯಾ ಚೈನಾ, ಕೆನಡ, ಅಮೇರಿಕಾ ಮತ್ತು ಬ್ರೆಜಿಲ್‌ಗಳು ಭಾರತಕ್ಕಿಂತಲೂ ವಿಸ್ತೀರ್ಣದಲ್ಲಿ ದೊಡ್ಡದಾದ ದೇಶಗಳಾಗಿವೆ.


| ದೇಶ | ವಿಸ್ತೀರ್ಣ (ಶೇಕಡಾಮಾನದಲ್ಲಿ) | ಜನಸಂಖ್ಯೆ (%) |
|---|---|---|
| ರಷ್ಯಾ | 11.5 | 2 |
| ಅಮೇರಿಕಾ | 6.5 | 4.5 |
| ಚೈನಾ | 6.4 | 19.4 |
| ಬ್ರೆಜಿಲ್ | 5.7 | 2.8 |
| ಭಾರತ | 2.3 | 17.5 |

*Source : Maps.org*

ಈ ದೇಶಗಳ ಜನಸಂಖ್ಯೆಯೊಂದಿಗೆ ಭಾರತದ ಜನಸಂಖ್ಯೆಯನ್ನು ಹೋಲಿಸಲು ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿರುವ ಮಾಹಿತಿಗಳ ಪ್ರಯೋಜನವನ್ನು ಪಡೆಯಬಹುದು.

ಜನಸಂಖ್ಯೆಯಲ್ಲಿ ಹಾಗೂ ಭೂ ವಿಸ್ತೀರ್ಣದಲ್ಲಿನ ಭಾರತದ ಸ್ಥಾನವನ್ನು ಇತರ ದೇಶಗಳೊಂದಿಗೆ ಹೋಲಿಸಿ ಟಿಪ್ಪಣಿ ತಯಾರಿಸಲಿ.

## ಭಾರತದ ಜನಸಾಂದ್ರತೆ




ಜನಸಾಂದ್ರತೆಯ ಭೂಪಟ ನಿರೀಕ್ಷಿಸಿ ಚರ್ಚೆ ನಡೆಸುವುದು 2011ರ ಜನಗಣತಿಯ ಆಧಾರದಲ್ಲಿ ರಚಿಸಿದ ಈ ಭೂಪಟವನ್ನು ಗುಂಪಿನಲ್ಲಿ ಪರಿಶೋಧಿಸುವುದು. ಜನಸಾಂದ್ರತೆ ಹೆಚ್ಚು ಹಾಗೂ ಕಡಿಮೆ ಇರುವ ಪ್ರದೇಶಗಳು ಯಾವುವು?

ಕ್ರೋಡೀಕರಣ ಈ ರೀತಿಯಲ್ಲಾಗಿರಬಹುದು.

- ಉತ್ತರದ ಮಹಾಬಯಲಿನಲ್ಲಿರುವ ಪ್ರಾಂತ್ಯಗಳು ಹಾಗೂ ಕೇರಳವೇ ಮೊದಲಾದ ಪ್ರಾಂತ್ಯಗಳು ಜನಸಾಂದ್ರತೆ ಹೆಚ್ಚು ಇರುವ ಪ್ರದೇಶಗಳಾಗಿವೆ.
- ಮಧ್ಯಪ್ರದೇಶ, ರಾಜಸ್ಥಾನ ಮೊದಲಾದ ಪ್ರಾಂತ್ಯಗಳು ಜನವಾಸ ಕಡಿಮೆ ಇರುವ ಪ್ರದೇಶಗಳಾಗಿವೆ.
- ಭೌಗೋಳಿಕ ವಿಶೇಷತೆಗಳು, ಜಲ ಲಭ್ಯತೆ, ಉದ್ಯೋಗ ಲಭ್ಯತೆ ಸಾರಿಗೆ ಸೌಕರ್ಯಗಳು ಮೊದಲಾದವುಗಳು ಜನವಾಸ ಕೇಂದ್ರಗಳ ಮೇಲೆ ಪ್ರಭಾವವನ್ನು ಬೀರುತ್ತವೆ.
- ಜನ ಸಾಂದ್ರತೆಯು ಅತಿ ಹೆಚ್ಚಾಗುವುದು ಮತ್ತು ತುಂಬಾ ಕಡಿಮೆಯಾಗುವುದು ಒಳ್ಳೆಯದಲ್ಲ.

ದುಡಿಮೆಯ ಸಾಮರ್ಥ್ಯವಿರುವ ಜನರ ಸಂಖ್ಯೆಯು ಹೆಚ್ಚಾಗುವುದು ಉತ್ಪಾದನೆಯು ಹೆಚ್ಚಳಕ್ಕೆ ಕಾರಣವಾಗುತ್ತದೆ. ಇದರಿಂದ ದೇಶವು ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ.

### ಜನಸಂಖ್ಯಾ ಹೆಚ್ಚಳದ ಪ್ರಮಾಣ

- ಪಾಠಭಾಗದಲ್ಲಿ ನೀಡಿರುವ ಜನಸಂಖ್ಯಾ ಹೆಚ್ಚಳದ ಪ್ರಮಾಣವನ್ನು ಸೂಚಿಸುವ ಪಟ್ಟಿಯನ್ನು ವಿಶ್ಲೇಷಣೆ ಮಾಡುವುದು.
  ಜನಸಂಖ್ಯಾ ಹೆಚ್ಚಳದ ಪ್ರಮಾಣದಲ್ಲಿ ಬರುವ ಬದಲಾವಣೆಗಳು ಮಾನವ ಸಂಪನ್ಮೂಲದ ಲಭ್ಯತೆಯ ಮೇಲೆ ಹೇಗೆ ಪ್ರಭಾವ ಬೀರುತ್ತವೆ?
  ಜನನ ಪ್ರಮಾಣ, ಮರಣ ಪ್ರಮಾಣ, ವಲಸೆ ಎಂಬೀ ಘಟಕಗಳು ಜನ ಸಂಖ್ಯೆಯಲ್ಲಿ ಯಾವ ಬದಲಾವಣೆಯನ್ನುಂಟು ಮಾಡುತ್ತವೆ?
  ಪ್ರತಿಯೊಂದು ಘಟಕಗಳನ್ನು ಚರ್ಚಿಸಿ ಕ್ರೋಡೀಕರಿಸಬೇಕು.

### ಜನಸಂಖ್ಯಾ ರಚನೆ

2011ರ ವಯೋಮಿತಿಯ ಗ್ರಾಫನ್ನು ವಿಶ್ಲೇಷಣೆ ಮಾಡಲಿ. ಜನಸಂಖ್ಯೆಯನ್ನು ವಿವಿಧ ಪ್ರಾಯದ ಗುಂಪುಗಳಾಗಿ ವಿಂಗಡಿಸಿ ವಿಶ್ಲೇಷಣೆ ಮಾಡುತ್ತಾರೆ. ಹೀಗೆ ವಿಶ್ಲೇಷಣೆ ಮಾಡುವುದರಿಂದ ಇರುವ ಪ್ರಯೋಜನಗಳೇನೆಂದು ಚರ್ಚೆ ನಡೆಸುವುದು.

ಪ್ರತಿಯೊಂದು ವಿಭಾಗದಲ್ಲಿ ಎಷ್ಟು ಜನರಿರುವರು ಎಂದು ತಿಳಿಯಲು.
ಪ್ರತಿಯೊಂದು ವಿಭಾಗದ ಅಗತ್ಯಗಳನ್ನು ಕಂಡುಕೊಳ್ಳಲು.
ಮಾನವ ಸಂಪನ್ಮೂಲದ ಲಭ್ಯತೆಯನ್ನು ವಿಶ್ಲೇಷಣೆ ನಡೆಸಲು.
ಅದಕ್ಕನುಸಾರವಾಗಿ ದೇಶದ ಅಭಿವೃದ್ಧಿ ಕಾರ್ಯಗಳನ್ನು ತೀರ್ಮಾನಿಸುವುದು.
ಉದ್ಯೋಗ ಪಾಲ್ಗೊಳ್ಳುವಿಕೆಯ ಪ್ರಮಾಣ ಕಡಿಮೆಯಾಗುವುದು ಮತ್ತು ಆಶ್ರಿತರ ಪ್ರಮಾಣ ಹೆಚ್ಚುವುದರಿಂದ ಆರ್ಥಿಕ ಅಭಿವೃದ್ಧಿಗೆ ಉಂಟಾಗುವ ಸಮಸ್ಯೆಗಳನ್ನು ಚರ್ಚಿಸಿ ಕ್ರೋಡೀಕರಿಸಬೇಕು. ಕೆಳಗೆ ನೀಡಿದಂತೆ ಕ್ರೋಡೀಕರಣವನ್ನು ನೀಡುವುದು.

15ರಿಂದ 59 ವರ್ಷದೊಳಗಿನವರ ಸಂಖ್ಯೆ ಕಡಿಮೆಯಾಗುವುದಕ್ಕೆ ಅನುಸಾರವಾಗಿ ಲಭ್ಯವಾಗುವ ಶ್ರಮದ ಶಕ್ತಿ ಕಡಿಮೆಯಾಗುವುದರೊಂದಿಗೆ ಉತ್ಪಾದನೆಯು ಕಡಿಮೆಯಾಗುತ್ತದೆ.

ಆಶ್ರಿತರ ಪ್ರಮಾಣವು ಹೆಚ್ಚುತ್ತಿರುವುದು ತಲಾ ಆದಾಯ ಕಡಿಮೆಯಾಗುವುದಕ್ಕೆ ಕಾರಣವಾಗುತ್ತದೆ.

ಮಕ್ಕಳ ಹಾಗೂ ವೃದ್ಧರ ಸಂರಕ್ಷಣೆಯ ಖರ್ಚು ಹೆಚ್ಚಾಗುತ್ತದೆ.

ದೇಶದ ಒಟ್ಟು ಆದಾಯದ ಸಿಂಹಪಾಲು ಉತ್ಪಾದನೆ ಇಲ್ಲದ ಕಾರ್ಯಗಳಿಗೆ ವ್ಯಯ ಮಾಡುವುದರಿಂದಾಗಿ ಉತ್ಪಾದನೆ–ಅಭಿವೃದ್ಧಿ ಕಾರ್ಯಗಳಿಗಾಗಿ ಹಣದ ಕೊರತೆ ಉಂಟಾಗುತ್ತದೆ. ಇದರಿಂದಾಗಿ ಅಭಿವೃದ್ಧಿಯು ಕಡಿಮೆಯಾಗುತ್ತದೆ.

## ಮಾನವ ಸಂಪನ್ಮೂಲಗಳ ಗುಣಾತ್ಮಕವಾದ ವಿಶೇಷತೆಗಳು

ಮಾನವ ಸಂಪನ್ಮೂಲವನ್ನು ಉತ್ತಮಗೊಳಿಸುವ ಗುಣಾತ್ಮಕವಾದ ಘಟಕಗಳು ಯಾವುವು? ಕಿರು ಚರ್ಚೆ ನಡೆಸುವುದು.

ಮಾನವ ಸಂಪನ್ಮೂಲದ ಗುಣಮಟ್ಟವನ್ನು ಉತ್ತಮಗೊಳಿಸುವುದರಿಂದ ಯಾವೆಲ್ಲ ಪ್ರಯೋಜನಗಳಿವೆಯೆಂದು ಪಾಠಭಾಗದ ಚಿತ್ರೀಕರಣವನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸಬೇಕು.

ಉತ್ತಮಗೊಳಿಸಿದ ಮಾನವ ಸಂಪನ್ಮೂಲದಿಂದಾಗಿ ದುಡಿಯುವ ಸಾಮರ್ಥ್ಯದ ದಕ್ಷತೆಯು ಹೆಚ್ಚುತ್ತದೆ. ಪ್ರಾಕೃತಿಕ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಆರ್ಥಿಕ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು ಸಾಧ್ಯವೆಂದು ಕ್ರೋಡೀಕರಿಸಬೇಕು.

### ವಿದ್ಯಾಭ್ಯಾಸ ಮತ್ತು ಮಾನವ ಸಂಪನ್ಮೂಲದ ಅಭಿವೃದ್ಧಿ

ವಿದ್ಯಾಭ್ಯಾಸವು ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಆರ್ಥಿಕ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ? ಪಾಠಭಾಗದಿಂದ ಹಾಗೂ ಫ್ಲೋಚಾರ್ಟು ವಿಶ್ಲೇಷಣೆ ಮಾಡಿ ಮಂಡಿಸಬೇಕು.

- ಜನಸಂಖ್ಯೆಯು ವೃದ್ಧಿಯಾಗುವುದರಿಂದ ಮಾತ್ರ ಮಾನವ ಸಂಪನ್ಮೂಲವು ಉತ್ತಮಗೊಳ್ಳುವುದಿಲ್ಲ.
- ಪರಿಣತಿ ಹಾಗೂ ವಿದ್ಯಾಭ್ಯಾಸ ಹೊಂದಿದವರಾಗಿದ್ದರೆ ಉತ್ತಮ ಮಾನವ ಪರಿಶ್ರಮವನ್ನು ನೀಡುತ್ತಾರೆ.
- ಉತ್ತಮ ಮಾನವ ಶ್ರಮವು ಆರ್ಥಿಕ ಅಭಿವೃದ್ಧಿಗೆ ಅಗತ್ಯವಾಗಿದೆ.
- ವಿದ್ಯಾಭ್ಯಾಸ ಹೊಂದಿದವರ ಉದ್ಯೋಗ ಹಾಗೂ ಆದಾಯವು ಉತ್ತಮವಾಗಿರಬಹುದು.

  ವಿದ್ಯಾಭ್ಯಾಸ ಮತ್ತು ಉದ್ಯೋಗದ ನೈಪುಣ್ಯವನ್ನು ಉತ್ತಮ ಪಡಿಸುವುದಕ್ಕಾಗಿ ಯಾವೆಲ್ಲ ಕಾರ್ಯಕ್ರಮಗಳನ್ನು ಭಾರತದಲ್ಲಿ ನಡೆಸುತ್ತಾರೆ? ಈ ಕುರಿತು ಚರ್ಚಿಸುವುದು.

  ನಮ್ಮ ಶಾಲೆಯಲ್ಲಿ ಯಾವೆಲ್ಲ ಕಾರ್ಯಕ್ರಮಗಳು ಜಾರಿಗೊಳ್ಳುತ್ತಿವೆ ಎಂದು ಒಂದು ಅನ್ವೇಷಣೆ ನಡೆಸಿದರೇನು? ವಿವಿಧ ಯೋಜನೆಗಳ ಮೂಲಕ ಲಭಿಸುವ ನೆರವನ್ನು ಮುಖ್ಯೋಪಾಧ್ಯಾಯರಿಂದ ಅನ್ವೇಷಿಸಿ ಕಂಡುಕೊಳ್ಳುವುದು.

| ಯೋಜನೆ | ಲಭ್ಯವಾದ ಸಹಾಯ | ಉದ್ದೇಶ |
|---|---|---|
| SSA | | |
| RMSA | | |
| ಜಿಲ್ಲಾ ಪಂಚಾಯತ್ | | |
| ಶಿಕ್ಷಣ ಇಲಾಖೆ | | |
| ಇತರ | | |

- ಆರೋಗ್ಯ ಸಂರಕ್ಷಣೆಗಾಗಿ ಕಾರ್ಯಾಚರಿಸುತ್ತಿರುವ ಸಂಸ್ಥೆಗಳು ಹಾಗೂ ಕಾರ್ಯಕ್ರಮಗಳು ಯಾವುವು? ಪಾಠಭಾಗದ ವಿಶ್ಲೇಷಣೆ ಮಾಡುವುದು. ಹೆಚ್ಚಿನ ಮಾಹಿತಿಯನ್ನು ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಸಂದರ್ಶನ ನಡೆಸಿ ಸಂಗ್ರಹಿಸಬೇಕು.

### ಸೆಮಿನಾರ್

ಪಾಠಭಾಗದಿಂದ ಲಭಿಸಿದ ತಿಳುವಳಿಕೆಗಳನ್ನು ದೃಢಪಡಿಸಲು ಹಾಗೂ ಹೆಚ್ಚಿನ ಮಾಹಿತಿಗಳನ್ನು ಅನ್ವೇಷಣೆ ಮಾಡುವುದಕ್ಕೆ ಸಾಧ್ಯವಾಗುವ ರೀತಿಯಲ್ಲಿ ಸೆಮಿನಾರ್ ಯೋಜನೆಯನ್ನು ತಯಾರಿಸಬೇಕು.

ವಿಷಯ : ಮಾನವ ಸಂಪನ್ಮೂಲದ ಅಭಿವೃದ್ಧಿಯಲ್ಲಿ ಶಿಕ್ಷಣ ಹಾಗೂ ಆರೋಗ್ಯ ಸಂರಕ್ಷಣೆಯ ಪಾತ್ರ.

ಕೆಳಗೆ ನೀಡಿರುವಂತೆ ಉಪ ವಿಷಯಗಳಾಗಿ ಮಾಡಿ ಪ್ರತಿ ಗುಂಪುಗಳಿಗೆ ನೀಡಬೇಕು.

- ವಿದ್ಯಾಭ್ಯಾಸ ಮತ್ತು ಮಾನವ ಸಂಪನ್ಮೂಲ.
- ಶಿಕ್ಷಣರಂಗದಲ್ಲಿರುವ ಸಂಸ್ಥೆಗಳು ಮತ್ತು ಅವು ನೀಡುವ ಸೇವೆಗಳು.
- ಆರೋಗ್ಯ ಸಂರಕ್ಷಣೆ ಮತ್ತು ಮಾನವ ಸಂಪನ್ಮೂಲ.
- ಆರೋಗ್ಯ ರಂಗದ ಸಂಸ್ಥೆಗಳು ಮತ್ತು ಅವು ನೀಡುವ ಸೇವೆಗಳು.

  ಪ್ರತಿಯೊಂದು ಗುಂಪು ಸೆಮಿನಾರ್ ಪೇಪರ್ ತಯಾರಿಸಿ ಮಂಡಿಸಿ ಚರ್ಚೆ ನಡೆಸಿ ಕ್ರೋಢೀಕರಿಸಬೇಕು.

- ವಿವಿಧ ಸೌಕರ್ಯಗಳನ್ನು ಏರ್ಪಡಿಸಿದ್ದರೂ ಶಿಕ್ಷಣ ರಂಗದಲ್ಲಿ ಪರಿಹರಿಸಬೇಕಾದ ಸಮಸ್ಯೆಗಳಿವೆ.

### ಆರೋಗ್ಯ ಸಂರಕ್ಷಣೆ ಮತ್ತು ಮಾನವ ಸಂಪನ್ಮೂಲದ ಅಭಿವೃದ್ಧಿ

- ಆರೋಗ್ಯವೆಂದರೇನು?


  ಆರೋಗ್ಯವಂತ ಜನತೆಯು ಒಂದು ದೇಶದ ಸಂಪತ್ತಾಗಿದ್ದಾರೆ. ಮಾನವ ಸಂಪನ್ಮೂಲದ ಲಭ್ಯತೆಯನ್ನು ಖಚಿತಪಡಿಸಲು ಆರೋಗ್ಯ ಸಂರಕ್ಷಣೆಯು ಸರಕಾರದ ಪ್ರಧಾನ ಉದ್ದೇಶವಾಗಿದೆ. ದೇಶದ ಆರ್ಥಿಕ ಅಭಿವೃದ್ಧಿಗೆ ಆರೋಗ್ಯವಂತ ಜನತೆ ಹೇಗೆ ಸಹಾಯಕವಾ ಗುತ್ತಾರೆ? ಪಾಠ ಭಾಗವನ್ನು ಓದಿ ಟಿಪ್ಪಣಿ ತಯಾರಿಸಿ ಮಂಡಿಸುವುದು.

- ಆರೋಗ್ಯ ಸಂರಕ್ಷಣೆಗಾಗಿ ಯಾವೆಲ್ಲ ಸೌಕರ್ಯಗಳನ್ನು ಒದಗಿಸಬೇಕು?

  ತರಗತಿಯಲ್ಲಿ ಪಟ್ಟಿ ವಿಶ್ಲೇಷಣೆಯನ್ನು ನಡೆಸಬೇಕು.


## ? ಮೌಲ್ಯನಿರ್ಣಯಕ್ಕಿರುವ ಪ್ರಶ್ನೆಗಳು

- ಮಾನವ ಸಂಪನ್ಮೂಲ ಅಭಿವೃದ್ಧಿಯ ವಿವಿಧ ಹಂತಗಳು ಯಾವುವು?
  ಪ್ರಚಿಯೊಂದು ಹಂತದಲ್ಲೂ ನಡೆಯುವ ಚಟುವಟಿಕೆಗಳನ್ನು ಒಳಗೊಂಡ ಟಿಪ್ಪಣಿಯನ್ನು ತಯಾರಿಸಿರಿ.
- ಮಾನವ ಸಂಪನ್ಮೂಲದ ಪರಿಮಾಣಾತ್ಮಕವಾದ ಮತ್ತು ಗುಣಾತ್ಮಕವಾದ ವಿಶೇಷತೆಗಳನ್ನು ಸೇರಿಸಿ ಫ್ಲೋ ಚಾರ್ಟು ಪೂರ್ತಿಗೊಳಿಸಿರಿ.



- ಭಾರತದ ಜನಗಣತಿ ಚಟುವಟಿಕೆಗಳಿಗೆ ನೇತೃತ್ವವನ್ನೀಯುವ ಸಂಸ್ಥೆ ಯಾವುದು?
- ಜನ ಸಂಖ್ಯಾ ಕಲಿಕೆಯ ಉದ್ದೇಶಗಳನ್ನು ಪಟ್ಟಿ ಮಾಡಿರಿ.
- ಭಾರತದ ಮಾನವ ಸಂಪನ್ಮೂಲದ ಲಭ್ಯತೆಯ ಸ್ಥಾನಮಾನವನ್ನು ಜಾಗತಿಕ ಜನಸಂಖ್ಯೆಯೊಂದಿಗೆ ಹೋಲಿಸಿರಿ.
- ಒಂದು ಪ್ರದೇಶದ ಜನ ಸಾಂದ್ರತೆಯು ಅಲ್ಲಿನ ಮಾನವ ಸಂಪನ್ಮೂಲ ಲಭ್ಯತೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ.
- ಒಂದು ದೇಶದ ಜನನ ಪ್ರಮಾಣ, ಮರಣ ಪ್ರಮಾಣ, ವಲಸೆ ಎಂಬಿವುಗಳು ಜನಸಂಖ್ಯೆಯಲ್ಲಿ ಯಾವ ಬದಲಾವಣೆಯನ್ನುಂಟು ಮಾಡುವುದೆಂದು ಟಿಪ್ಪಣಿ ತಯಾರಿಸಿರಿ.
- 

**ಜನಸಂಖ್ಯಾ ವಯೋಮಿತಿ ವರ್ಗೀಕರಣ ಹಂಚಿಕೆ**



*ಕೃಪೆ : ಸೆನ್ಸಸ್ ಇಂಡಿಯ –2011*

ಗ್ರಾಫ್‌ನ್ನು ವಿಶ್ಲೇಷಣೆ ಮಾಡಿ ಭಾರತದಲ್ಲಿನ ಆಶ್ರಿತ ಪ್ರಮಾಣ ಹಾಗೂ ಉದ್ಯೋಗ ಪಾಲ್ಗೊಳ್ಳುವಿಕೆಯನ್ನು ಟಿಪ್ಪಣಿ ಮಾಡಿರಿ.

- ದುಡಿಯುವವರ ಪ್ರಮಾಣ ಕಡಿಮೆಯಾಗುವುದು ಮತ್ತು ಆಶ್ರಿತರ ಪ್ರಮಾಣ ಹೆಚ್ಚಾಗುವುದು ಆರ್ಥಿಕ ಅಭಿವೃದ್ಧಿಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ?
- ಮಾನವ ಸಂಪನ್ಮೂಲ ಅಭಿವೃದ್ಧಿಯು ದೇಶದ ಆರ್ಥಿಕ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ? ಟಿಪ್ಪಣಿ ತಯಾರಿಸಿರಿ.
- ಮಾನವ ಸಂಪನ್ಮೂಲದ ಗುಣಮಟ್ಟವನ್ನು ಉತ್ತಮಪಡಿಸುವ ಘಟಕಗಳು ಯಾವುವು?
- ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಉದ್ದೇಶವಾಗಿಟ್ಟುಕೊಂಡು ವಿದ್ಯಾಭ್ಯಾಸ ರಂಗದಲ್ಲಿ ಜಾರಿಗೊಳಿಸುವ ಯಾವುದಾದರು ಮೂರು ಕಾರ್ಯಕ್ರಮಗಳನ್ನು ಬರೆಯಿರಿ.
- ಆರೋಗ್ಯ ಸಂರಕ್ಷಣೆಗಾಗಿ ಸರಕಾರವು ವಿವಿಧ ಸಂಸ್ಥೆಗಳನ್ನು ಏರ್ಪಾಡು ಮಾಡಿದೆ. ಅವುಗಳು ಯಾವುವು?
- NRHM, NUHM ಎಂಬಿವುಗಳು ಗುಣಮಟ್ಟದ ಆರೋಗ್ಯ ಸೇವೆಗಳು ಎಲ್ಲರಿಗೂ ಲಭ್ಯವಾಗಲು ಸ್ಥಾಪಿಸಲಾದ ಎರಡು ಸಂಸ್ಥೆಗಳಾಗಿವೆ. ಇವುಗಳ ಕಾರ್ಯಚಟುವಟಿಕೆಗಳು ಯಾವುವು?
- ಶಿಕ್ಷಣ ಮತ್ತು ಆರೋಗ್ಯ ರಂಗಗಳಲ್ಲಿ ಇನ್ನು ಪರಿಹರಿಸಬೇಕಾದ ಕೆಲವು ಸಮಸ್ಯೆಗಳಿವೆ. ಅವುಗಳಲ್ಲಿ ಯಾವುದಾದರೂ ನಾಲ್ಕನ್ನು ಬರೆಯಿರಿ.
- ದುಡಿಮೆಯ ಸಾಮರ್ಥ್ಯದ ಅಭಿವೃದ್ಧಿಯಲ್ಲಿನ ವ್ಯತ್ಯಾಸವು ವಿವಿಧ ದೇಶಗಳ ಶ್ರೀಮಂತಿಕೆ ಮತ್ತು ಬಡತನಕ್ಕಿರುವ ಕಾರಣವಾಗಿದೆ. ಈ ಹೇಳಿಕೆಯನ್ನು ಸಮರ್ಥಿಸಿರಿ.


## ಆಕರ ಗ್ರಂಥಗಳು

*Economic Survey 2013 - 14 - Govt. of India*

*Census India Report - 2011*

*Text book of Economic Development - Sumen. K. Mukergee*

*India - Population and Economy - NCERT Class XII*




# 4

# ಭೂಪಟಗಳ ಮೂಲಕ ಭೂಮೇಲ್ಮೈ ವಿಶ್ಲೇಷಣೆ

ಮಾನವನ ಜೀವನದ ಸಮಸ್ತ ವಲಯಗಳಲ್ಲಿ ವಿವಿಧ ಅಗತ್ಯಗಳಿಗಾಗಿ ವ್ಯಾಪಕವಾಗಿ ಉಪಯೋಗಿಸಲ್ಪಡುವ ಭೌಗೋಳಿಕ ವಿಜ್ಞಾನದ ಕಲಿಕೋಪಕರಣವಾಗಿದೆ. ಭೂಪಟವು ಇಲ್ಲಿನ ಪಾಠಭಾಗವು ಸ್ಥಳ ಸ್ವರೂಪ ಭೂಪಟಗಳಿಗೆ ಸಂಬಂಧಿಸಿರುವುದಾಗಿದೆ. ಮಗುವನ್ನು ಭೂಪಟ ಓದಿಗೆ ಸಮರ್ಥನಾಗಿಸುವ ರೀತಿಯಲ್ಲಿ ಈ ಪಾಠಭಾಗವನ್ನು ತಯಾರಿಸಲಾಗಿದೆ.

ಸ್ಥಳ, ಸ್ವರೂಪ ಭೂಪಟಗಳನ್ನು ಭೌತಿಕ – ಸಾಂಸ್ಕೃತಿಕ ವಿಶೇಷತೆಗಳ ವಿಶ್ಲೇಷಣೆ, ನಗರ ಯೋಜನೆ, ಸೈನಿಕ – ಆರ್ಥಿಕ ಯೋಜನೆಗಳು ಮೊದಲಾದ ವಲಯಗಳಲ್ಲಿ ಉಪಯೋಗಿಸಬಹುದು ಎಂದು ಚಟುವಟಿಕಾಧಾರಿತವಾಗಿರುವ ಈ ಪಾಠಭಾಗದ ವಿನಿಮಯದಿಂದ ತಿಳಿಯಬಹುದು.

## ಯೂನಿಟ್ ಫ್ರೇಂ

# 4. ಭೂಪಟಗಳ ಮೂಲಕ ಭೂಮೇಲ್ಮೈ ವಿಶ್ಲೇಷಣೆ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆ |
|---|---|---|
| • ಸ್ಥಳ ಸ್ವರೂಪ ಭೂಪಟಗಳು<br>• ಸ್ಥಳ ಸ್ವರೂಪ ಭೂಪಟಗಳ ಉಪಯೋಗಗಳು<br>• ವಿನ್ಯಾಸ..... ಮತ್ತು ಕ್ರಮಸಂಖ್ಯೆ ನೀಡುವುದು<br>- ಮಿಲಿಯನ್ ಹಾಳಗಳು<br>- ಡಿಗ್ರಿ ಹಾಳೆಗಳು<br>• ಅಂಗೀಕೃತ ಗುರುತುಗಳು ಮತ್ತು ಚಿಹ್ನೆಗಳು<br>• ಗ್ರಿಡ್ ರೆಫರೆನ್ಸ್<br>- ಈಸ್ಟಿಂಗ್ಸ್<br>- ನೋರ್ತಿಂಗ್ಸ್<br>- 4 ಅಂಕೆಯ ಗ್ರಿಡ್‌ರೆಫರೆನ್ಸ್<br>- 6 ಅಂಕೆಯ ಗ್ರಿಡ್ ರೆಫರೆನ್ಸ್<br>• ಕೋಂಟೂರ್ ರೇಖೆಗಳು<br>- ಕೋಂಟೂರ್ ರೇಖೆಗಳಿಂದ ಸ್ಥಳದ - ಆಕೃತಿಯನ್ನು ಕಂಡುಕೊಳ್ಳುವುದು.<br>• ಅಂತರ್‌ಸಾದೃಶ್ಯ<br>• ಸ್ಥಳಸ್ವರೂಪ ಭೂಪಟಗಳ ವಿಶ್ಲೇಷಣೆ<br>- ಪ್ರಾಥಮಿಕ ಮಾಹಿತಿಗಳು<br>- ಭೌತಿಕ ವಿಶೇಷತೆಗಳು<br>- ಸಾಂಸ್ಕೃತಿಕ ವಿಶೇಷತೆಗಳು | • ಭೂಪಟಗಳನ್ನು ಹೋಲಿಸಿ ಚರ್ಚೆ ನಡೆಸುವುದು<br>• ಪಾಠಪುಸ್ತಕದ ಚಿತ್ರವನ್ನು ವಿಶ್ಲೇಷಣೆ ಮಾಡುವುದು.<br>• ಪಟ್ಟಿ ವಿಶ್ಲೇಷಣೆ<br>• ಗ್ರಿಡ್‌ರೆಫರೆನ್ಸ್‌ಗೆ ಸಂಬಂಧಿಸಿ ಚರ್ಚಿಸುವುದು.<br>• ಕೋಂಟೂರು ರೇಖೆಗಳ ವಿಶ್ಲೇಷಣೆ ಹಾಗೂ ಭೂಪಟದಲ್ಲಿ ಚಿತ್ರಿಸುವುದು.<br>• ಕೋಂಟೂರು ರೇಖೆಗಳನ್ನು ವಿಶ್ಲೇಷಿಸಿ ಅಂತರ್‌ಸಾದೃಶ್ಯವನ್ನು ಪರಿಶೋಧಿಸುವುದು.<br>• ಸ್ಥಳಸ್ವರೂಪ ಭೂಪಟಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸುವುದು. | • ಸ್ಥಳಸ್ವರೂಪ ಭೂಪಟಗಳೆಂದರೇನು ಎಂಬುದನ್ನೂ ಅವುಗಳನ್ನು ತಯಾರಿಸುವುದು ಹೇಗೆಂದೂ ಇವುಗಳ ಉಪಯೋಗವೇನೆಂಬುದನ್ನೂ ಇಂತಹ ಭೂಪಟಗಳ ವಿನ್ಯಾಸ... ಮತ್ತು ಕ್ರಮಸಂಖ್ಯೆಯನ್ನು ನೀಡುವುದು ಹೇಗೆಂದೂ ತಿಳಿದುಕೊಂಡು ವಿಶದೀಕರಿಸುವುದು.<br>• ಗ್ರಿಡ್‌ರೆಫರೆನ್ಸ್ ಕುರಿತು ತಿಳುವಳಿಕೆಯನ್ನು ರೂಪಿಸಿ ಸ್ಥಳಸ್ವರೂಪ ಭೂಪಟಗಳ ಭೌಗೋಳಿಕ ವಿಶೇಷತೆಗಳ ನಿಖರವಾದ ಸ್ಥಾನ ನಿರ್ಣಯವನ್ನು ಮಾಡುವುದು.<br>• ಸ್ಥಳಸ್ವರೂಪ ಭೂಪಟಗಳ ಅಂಗೀಕೃತ ಬಣ್ಣಗಳನ್ನು ಮತ್ತು ಚಿಹ್ನೆಗಳನ್ನು ವರ್ಗೀಕರಿಸಿ ತಿಳಿಯುವುದು ಮತ್ತು ಅವುಗಳ ಕುರಿತು ನಿಗಮನಗಳನ್ನು ರೂಪಿಸುವುದು.<br>• ಕೋಂಟೂರ್ ರೇಖೆಗಳ ಕುರಿತು ತಿಳುವಳಿಕೆಯನ್ನು ರೂಪಿಸಿ ಭೂಪ್ರದೇಶಗಳ ಸ್ಥಳದ ಆಕೃತಿ, ಅಂತರ್‌ಸಾದೃಶ್ಯ ಇತ್ಯಾದಿಗಳನ್ನು ಕಂಡುಹಿಡಿಯುವುದು.<br>• ಸ್ಥಳಸ್ವರೂಪ ಭೂಪಟಗಳನ್ನು ವಿಶ್ಲೇಷಿಸಿ ಪ್ರಾಥಮಿಕ ಮಾಹಿತಿಗಳನ್ನು ಕುರಿತು ಮತ್ತು ಭೌತಿಕ – ಸಾಂಸ್ಕೃತಿಕ ವಿಶೇಷತೆಗಳ ಕುರಿತು ಟಿಪ್ಪಣಿಗಳನ್ನು ತಯಾರಿಸುವುದು. |

# ಅಧ್ಯಾಯದೆಡೆಗೆ.........

## ಸ್ಥಳಸ್ವರೂಪ ಭೂಪಟ

ಈ ಪಾಠಭಾಗವನ್ನು ಚಟುವಟಿಕಾಧಾರಿತವಾಗಿ ತಯಾರಿಸಲಾಗಿದೆ ಎಂದು ಈ ಮೊದಲೇ ಸೂಚಿಸುವುದಲ್ಲವೇ? ಬಹಳ ಶ್ರದ್ಧೆಯೊಂದಿಗೆ ಪಾಠಭಾಗದಲ್ಲಿ ನೀಡಿರುವ ವಿವರಣೆಯನ್ನು ತರಗತಿಯಲ್ಲಿ ಮಂಡಿಸಿದರೆ ನಾವು ವಾಸವಾಗಿರುವ ಭೂಮಿಯ ಪ್ರತಿಯೊಂದು ಇಂಚನ್ನು ಅಳತೆ ಮಾಡಿ ಲೆಕ್ಕ ಮಾಡುವುದರಲ್ಲಿನ ಪ್ರಯತ್ನದ ಹಿಂದಿರುವ ಒಂದು ಗುಂಪು ಜನರ ಶ್ರಮವನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳುವರು. ಇದು ಮುಂದಿನ ಕಲಿಕೆಗೆ ಹೆಚ್ಚು ಪ್ರಯೋಜನಕಾರಿಯಾಗಬಹುದು. ಹಿಂದಿನ ತರಗತಿಗಳಲ್ಲಿ ಭೂಪಟಗಳ ಕುರಿತು ತಿಳಿದಿರಬಹುದಲ್ಲವೇ? ಈ ಪೂರ್ವಜ್ಞಾನವನ್ನು ಪಾಠಭಾಗದೊಂದಿಗೆ ಹೊಂದಿಸಿಕೊಳ್ಳಬೇಕು. ಒಂದು ಜಾಗತಿಕ ಭೂಪಟವನ್ನು ಹಾಗೂ ಸ್ಥಳಸ್ವರೂಪ ಭೂಪಟವನ್ನು ತೋರಿಸಿ ಇದರಲ್ಲಿ ಸ್ಥಳಸ್ವರೂಪ ಭೂಪಟ ಯಾವುದೆಂದು ಕಂಡುಕೊಳ್ಳಲು ಹೇಳಬೇಕು. ಸ್ಥಳಸ್ವರೂಪ ಭೂಪಟ ಯಾವುದೆಂದು ಗುರುತಿಸಿದ ಬಳಿಕ ಸ್ಥಳ ಸ್ವರೂಪ ಭೂಪಟಗಳ ವಿಶೇಷತೆಗಳನ್ನು ತರಗತಿಯಲ್ಲಿ ಮಂಡಿಸಿರಿ. ವೈಯಕ್ತಿಕವಾಗಿ ಭೂಪಟಗಳನ್ನು ಪರಿಶೋಧಿಸಲು ಮಕ್ಕಳಿಗೆ ಸಂದರ್ಭವಿರುವ ರೀತಿಯಲ್ಲಿ ವಿಷಯಗಳನ್ನು ಮಂಡಿಸಬೇಕು.

### ಸ್ಥಳಸ್ವರೂಪ ಭೂಪಟಗಳು (ಟೋಪೋಷೀಟ್) ವಿಶೇಷತೆಗಳು

ಇಂತಹ ಭೂಪಟಗಳನ್ನು ಅನೇಕ ಅಗತ್ಯಗಳಿಗಾಗಿ ಪ್ರಾಯೋಗಿಕ ಮಟ್ಟದಲ್ಲಿ ಉಪಯೋಗಿಸುತ್ತಾರೆ ಎಂಬ ಆಶಯವನ್ನು ಮಗು ತಿಳಿದುಕೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ಮಕ್ಕಳ ಪೂರ್ವಜ್ಞಾನವನ್ನು ಪರಿಶೋಧಿಸುವುದರೊಂದಿಗೆ ಸ್ಥಳಸ್ವರೂಪ ಭೂಪಟದ ಪ್ರತಿಯೊಂದು ವಲಯಗಳಲ್ಲಿರುವ ವಿಶೇಷತೆಗಳನ್ನು ಸ್ಪಷ್ಟವಾಗಿ ಹಾಗೂ ವಿಷಯಕ್ಕೆ ಸಂಬಂಧಿಸಿರುವಂತೆ ಮಂಡಿಸಲು ಪ್ರತ್ಯೇಕ ಗಮನಿಸಬೇಕು. ಸ್ಥಳಸ್ವರೂಪ ಭೂಪಟಗಳ ಉಪಯೋಗವನ್ನು ತರಗತಿಯಲ್ಲಿ ಚರ್ಚಿಸಿ ಕೆಳಗೆ ನೀಡಿರುವಂತೆ ಕ್ರೋಡೀಕರಿಸಬೇಕು.

### ಪ್ರಧಾನ ಉಪಯೋಗಗಳು

- ಭೂಪ್ರದೇಶದ ಭೌತಿಕ ಹಾಗೂ ಸಾಂಸ್ಕೃತಿಕ ವಿಶೇಷತೆಗಳನ್ನು ವಿಶ್ಲೇಷಿಸಲು.
- ಭೂಪ್ರದೇಶಗಳ ಭೌತಿಕ ಹಾಗೂ ಸಾಂಸ್ಕೃತಿಕ ವಿಶೇಷತೆಗಳನ್ನು ವಿಶ್ಲೇಷಿಸಲು.
- ಸೈನಿಕ ಕಾರ್ಯಾಚರಣೆಗಳಿಗೆ ಮತ್ತು ಸೈನಿಕ ಭೂಪಟಗಳ ತಯಾರಿಗೆ
- ಆರ್ಥಿಕ ಯೋಜನೆಗಳ ಭಾಗವಾಗಿ ಒಂದು ಪ್ರದೇಶದ ಭೂವಿನಿಯೋಗದ ಕುರಿತು ತಿಳಿಯಲು
- ಭೂಪ್ರಕೃತಿಯನ್ನು ತಿಳಿದುಕೊಳ್ಳಲು
- ಭೂಸ್ವರೂಪಗಳನ್ನು ತಿಳಿದುಕೊಳ್ಳಲು ಹಾಗೂ ಅದರ ಮುಂದುವರೆದ ಚಟುವಟಿಕೆಗಳಿಗೆ
- ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಸಂಪನ್ಮೂಲಗಳ ಯೋಜನೆಗೆ
- ಭೂಪಟಗಳ ಕಂಪ್ಯೂಟರೀಕೃತರೂಪ (ಡಿಜಿಟಲ್ ಮ್ಯಾಪ್) ವಾದ ಜಿ.ಪಿ.ಎಸ್ ತಂತ್ರಜ್ಞಾನಕ್ಕಾಗಿಯೂ ಬಳಸಬಹುದು.

ಸರಿಯಾದ ತರಬೇತಿ ಹಾಗೂ ಪ್ರಾಯೋಗಿಕ ಜ್ಞಾನವು ಇದಕ್ಕೆ ಅತ್ಯಗತ್ಯವಾಗಿದೆ ಎಂದು ಮಗು ತಿಳಿದುಕೊಳ್ಳಬೇಕು. ಪಾಠಭಾಗದಲ್ಲಿರುವ ಸ್ಥಳಸ್ವರೂಪ ಭೂಪಟದ ಭಾಗವನ್ನು ನಿರೀಕ್ಷಿಸಿ ಇತರ ಭೂಪಟಗಳಿಗಿಂತ ಹೇಗೆ ಭಿನ್ನವಾಗಿದೆ ಎಂದು ಕಂಡುಕೊಳ್ಳಲು ಹೇಳುವುದು. (45D/10)

ನೀಡಿರುವ ಸ್ಥಳಸ್ವರೂಪ ನಕ್ಷೆಯಲ್ಲಿರುವ ಕ್ರಮಸಂಖ್ಯೆ ಖಂಡಿತವಾಗಿಯೂ ಮಗುವಿನ ಗಮನದಲ್ಲಿ ಬಂದಿರಬಹುದು ಇದು ಏನನ್ನು ಸೂಚಿಸುತ್ತದೆ? ಎಂಬ ಪ್ರಶ್ನೆಯೊಂದಿಗೆ ಸ್ಥಳಸ್ವರೂಪ ಭೂಪಟಗಳ ವಿನ್ಯಾಸ ಹಾಗೂ ನಂಬರಿಂಗ್ ಎಂಬ ಭಾಗಕ್ಕೆ ಪ್ರವೇಶಿಸಬಹುದು. ಒಂದು ಸರಣಿಯ ಭಾಗವಾಗಿದೆ ಈ ರೀತಿಯ ಭೂಪಟ ಎಂಬ ನಿಜಾಂಶವು ಮಗುವಿಗೆ ತಲುಪಬೇಕು.

ಭಾರತದ ಮತ್ತು ನೆರೆ ದೇಶಗಳು ಸೇರಿರುವ ಭೂಪ್ರದೇಶಗಳನ್ನು ಪ್ರತಿನಿಧೀಕರಿಸುವ ಟೋಪೋ ಶೀಟುಗಳನ್ನು ಮೊದಲು ಮಿಲಿಯ ಹಾಳೆಗಳಾಗಿ ವಿಭಜಿಸಿ ಬಳಿಕ ಡಿಗ್ರಿ ಹಾಳೆಗಳಾಗಿ 15 ಮಿನಿಟ್ ವ್ಯಾಪ್ತಿಯಲ್ಲಿರುವ 16 ಭಾಗಗಳಾಗಿ ಮಾಡಿರುವುದರಲ್ಲಿ ಒಂದು ಭಾಗವಾಗಿದೆ 45D/10 ಎಂಬ ಟೋಪೋಶೀಟ್ ಎಂದು ಮಗುವಿಗೆ ತಿಳಿಯುವ ರೀತಿಯಲ್ಲಿ ಚಿತ್ರಗಳನ್ನು ಬಳಸಿಕೊಂಡು ಮಾತ್ರವೇ ಆಶಯ ವಿನಿಮಯವನ್ನು ನಡೆಸಬೇಕು.

ಕೆಳಗೆ ನೀಡಿರುವಂತೆ ಟೋಪೋಶೀಟ್‌ಗಳನ್ನು ಮೂರರ ಶ್ರೇಣಿಗಳಾಗಿ ವಿಭಜಿಸಲಾಗಿದೆ ಎಂಬ ಆಶಯವಾಗಿ ಲಭಿಸಬೇಕಾದದು.

ಕೆಳಗೆ ನೀಡಿರುವಂತೆ ಟೋಪೋಶೀಟ್‌ಗಳನ್ನು ಮೂರು ಶ್ರೇಣಿಗಳಾಗಿ ವಿಭಜಿಸಲಾಗಿದೆ ಎಂಬ ಆಶಯವಾಗಿ ಲಭಿಸಬೇಕಾದುದು.

- ಮಿಲಿಯ ಹಾಳೆಗಳು (ಉದಾ: 45)
- ಡಿಗ್ರಿ ಹಾಳೆಗಳು (ಉದಾ: D)
- 15′ ಅಕ್ಷಾಂಶ – ರೇಖಾಂಶ ವ್ಯಾಪ್ತಿ ಇರುವ ಹಾಳೆಗಳು

ಇನ್ನು ಕೆಳಗೆ ನೀಡಿರುವ ಉದಾಹರಣೆಯನ್ನು ಗಮನಿಸಿರಿ.

$45\frac{D}{10}$ ಎಂಬ ಟೋಪೋಶೀಟ್ 45 ಎಂಬ ಮಿಲಿಯನ್‌ಶೀಟ್‌ನ್ನು 16 ಭಾಗಗಳಾಗಿ ವಿಭಜಿಸಿರುವುದರಲ್ಲಿನ 'D' ಎಂಬ ಭಾಗವನ್ನು ಪುನಃ 16 ಭಾಗಗಳಾಗಿ ಮಾಡಿರುವುದರಲ್ಲಿ ಹತ್ತನೆಯ ದ್ದಾಗಿದೆ.

ಇನ್ನೊಂದು ಕಲಿಕಾ ಚಟುವಟಿಕೆಯನ್ನು ಸಹ ಮಕ್ಕಳಿಗೆ ನೀಡಿರಿ.

ಚಿತ್ರ 4.2ರಲ್ಲಿನ 55 ಎಂಬ ಮಿಲಿಯ ಶೀಟನ್ನು ವಿಭಜಿಸಿ ಯಥಾಕ್ರಮ ನಂಬರ್ ನೀಡುವಂತೆ ಸಮೀಪದ ಮಿಲಿಯ ಶೀಟುಗಳನ್ನು ವಿಭಜಿಸಿ ನಂಬ್ರ ನೀಡಲು ಹೇಳುವುದು. ಪಾಠಭಾಗದಲ್ಲಿ ನೀಡಿರುವ ಚಿತ್ರದಿಂದಲೇ ಈ ಚಟುವಟಿಕೆಯನ್ನು ನಡೆಸಬಹುದು. ಬಳಿಕ ಪಾಠಪುಸ್ತಕದಲ್ಲಿ ನೀಡಿರುವ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಹೇಳುವುದು.

ಗುಂಪುಗಳಾಗಿ ಉತ್ತರವನ್ನು ಕಂಡುಕೊಂಡು ಮಂಡಿಸಬೇಕು.

- ಟೋಪೋಶೀಟ್ ಸೂಚಕಸಂಖ್ಯೆ 45ರಲ್ಲಿ ಒಳಪಡುವ ಪ್ರಾಂತ್ಯಗಳ ಪ್ರದೇಶಗಳು.

  ರಾಜಸ್ಥಾನ್, ಗುಜರಾತ್, ಮಧ್ಯಪ್ರದೇಶ
- ಒಡಿಸ್ಸಾವನ್ನೊಳಗೊಂಡ ಟೋಪೋಶೀಟ್‌ನ ಸೂಚಕಸಂಖ್ಯೆಗಳು.

  64, 65, 73, 74
- ಟೋಪೋಶೀಟಿನ ಸೂಚಕಸಂಖ್ಯೆ 73ರಲ್ಲಿ ಒಳಗೊಂಡಿರುವ ಪ್ರಾಂತ್ಯಗಳು

  ಒಡಿಸ್ಸಾ, ಪಶ್ಚಿಮಬಂಗಾಳ, ಜಾರ್ಖಂಡ್, ಛತ್ತೀಸ್‌ಘಡ್
- ಕರ್ನಾಟಕವನ್ನೊಳಗೊಂಡ ಟೋಪೋಶೀಟ್‌ನ ಸೂಚಕಸಂಖ್ಯೆಗಳು

  47, 48, 56, 57, 58
- ಕೇರಳವನ್ನೊಳಗೊಂಡಿರುವ ಟೋಪೋ ಶೀಟ್‌ನ ಸೂಚಕಸಂಖ್ಯೆಗಳು

  48, 49, 58

## ಅಂಗೀಕೃತ ಬಣ್ಣಗಳು ಮತ್ತು ಚಿಹ್ನೆಗಳು

ಸ್ಥಳಸ್ವರೂಪ ಭೂಪಟವನ್ನು ಚಿತ್ರಿಸುವುದು. ಭೂಮಿಯ ಮೇಲ್ಮೈಯ ವಿವಿಧ ರೀತಿಯ ವಿಶೇಷತೆಗಳನ್ನು ವ್ಯತ್ಯಸ್ತಬಣ್ಣಗಳಿಂದ ಕೂಡಿದ ಗುರುತುಗಳು ಮತ್ತು ಚಿಹ್ನೆಗಳನ್ನು ನೀಡಿಕೊಂಡದ್ದಾಗಿದೆ ಎಂಬ ಪೂರ್ವಜ್ಞಾನವನ್ನು ಪಾಠಭಾಗದಲ್ಲಿ ಬಳಸಬೇಕು. ಪಾಠಭಾಗದಲ್ಲಿ ನೀಡಿರುವ ಗುರುತು ಮತ್ತು ಚಿಹ್ನೆಗಳ ಪಟ್ಟಿಯನ್ನು ಪರಿಶೋಧಿಸಲು ಹೇಳಬೇಕು.

ತರುವಾಯ ಲಭ್ಯವಾಗಿರುವ ಟೋಪೋಶೀಟ್‌ನಲ್ಲಿ ಇವುಗಳನ್ನು ಕಂಡುಕೊಳ್ಳಲು ಹೇಳುವುದು. ಗುರುತುಗಳು ಹಾಗೂ ಚಿಹ್ನೆ ಗಳೊಂದಿಗೆ ಸ್ಥಳಸ್ವರೂಪ ಭೂಪಟದಲ್ಲಿ ಬಳಸಲಾದ ವ್ಯತ್ಯಸ್ತಬಣ್ಣಗಳು ಯಾವುವೆಂದು ಕಂಡುಕೊಳ್ಳಲು ಹೇಳುವುದು. ಬಳಿಕ ಭೂಮಿಯ ಮೇಲ್ಮೈಯ ವಿವಿಧ ವಿಶೇಷತೆಗಳಿಗೆ ಯಾವೆಲ್ಲ ಬಣ್ಣಗಳನ್ನು ಉಪಯೋಗಿಸಬೇಕೆಂದು ಕಂಡುಕೊಳ್ಳಲು ಕೆಳಗೆ ನೀಡಿರುವಂತೆ ಪಟ್ಟಿ ಪೂರ್ತಿಗೊಳಿಸಿರಿ.

| ಭೂಮಿಯ ವಿಶೇಷತೆಗಳು | ಬಣ್ಣ |
|---|---|
| • ಅಕ್ಷಾಂಶ – ರೇಖಾಂಶ ರೇಖೆಗಳು<br>• ಬತ್ತಿಹೋದ ಜಲಾಶಯಗಳು<br>• ರೈಲುಹಳಿ, ಟೆಲಿಫೋನ್, ಟೆಲಿಗ್ರಾಫ್‌ಲೈನ್<br>• ಮೇರೆಗಳು | • ಕಪ್ಪು |
| • ಸಾಗರಗಳು, ನದಿಗಳು, ಕೆರೆಗಳು, ಬಾವಿಗಳು, ಕೊಳವೆ ಬಾವಿಗಳು (ಎಲ್ಲಾ ಕಾಲಗಳಲ್ಲೂ ನೀರಿರುವ ಜಲಾಶಯಗಳು) | • ನೀಲಿ |
| • ಕಾಡುಗಳು<br>• ಹುಲ್ಲುಗಾವಲುಗಳು<br>• ಮರಗಳು ಕುರುಚಲು ಗಿಡಗಳು<br>• ಫಲವೃಕ್ಷಗಳು ತೋಟಗಳು | • ಹಸಿರು |
| • ಕೃಷಿ ಸ್ಥಳಗಳು | • ಹಳದಿ |
| • ಬಂಜರು ಭೂಮಿ | • ಬಿಳಿ |
| • ಮನೆಗಳು, ರಸ್ತೆ, ಹಾದಿಗಳು<br>• ಗ್ರಿಡ್‌ಲೈನುಗಳು (ಈಸ್ಟಿಂಗ್ಸ್ ಹಾಗೂ ನೇರ್ತಿಂಗ್ಸ್ ಹಾಗೂ ಅವುಗಳ ಸಂಖ್ಯೆಗಳು) | • ಕೆಂಪು |
| • ಕೋಂಟೂರು ರೇಖೆಗಳು ಅವುಗಳ ಸಂಖ್ಯೆಗಳು<br>• ಮರಗಳು ಮತ್ತು ಮರಳು ಗುಡ್ಡಗಳು | • ಕಂದು |

## ಗ್ರಿಡ್ ರೆಫರೆನ್ಸ್

ನೀಡಿರುವ ಸ್ಥಳಸ್ವರೂಪ ಭೂಪಟದಲ್ಲಿ ಸಮಾವಾಗಿ ಹಾಗೂ ಲಂಬವಾಗಿ ಕೆಂಪು ಬಣ್ಣದಲ್ಲಿ ಎಳೆದಿರುವ ಗೆರೆಗಳ ಕಡೆಗೆ ಮಕ್ಕಳ ಗಮನವನ್ನು ಸೆಳೆಯಿರಿ. ಭೂಮಿಯ ಮೇಲ್ಮೈಯ ಸಣ್ಣ ವಿಶೇಷತೆಗಳ ಸ್ಥಾನನಿರ್ಣಯವನ್ನು ಬಹಳ ನಿಖರವಾಗಿ ಮಾಡಲು ಸಾಧ್ಯವಾಗುವುದು ಈ ರೀತಿಯ ಗೆರೆಗಳಿಂದಾಗಿದೆ ಎಂದು ಮಕ್ಕಳು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಉದಾಹರಣೆಗೆ ಮಕ್ಕಳಿಗೆ ಈಸ್ಟಿಂಗ್ಸ್ ಮತ್ತು ನೋರ್ತಿಂಗ್ಸ್‌ಗಳನ್ನು ಸ್ವಯಂ ಕಂಡುಕೊಳ್ಳಲು ಸಹಾಯಕವಾಗಬಹುದು.


ಪೂರ್ವ ಹಾಗೂ ಉತ್ತರ ದಿಕ್ಕುಗಳಿಗೆ ಹೋದಂತೆ ಮೌಲ್ಯವು ಹೆಚ್ಚುತ್ತಾ ಹೋಗುವ ಗೆರೆಗಳು ಯಾವುವು? ಎಂದು ಕಂಡುಕೊಳ್ಳಲು ಹೇಳುವುದು.

ಪೂರ್ವದಿಕ್ಕಿಗೆ ಹೋದಂತೆ ಮೌಲ್ಯ ಹೆಚ್ಚಾಗುವುದರಿಂದ ಈಸ್ಟಿಂಗ್ಸ್ ಎಂದು ಉತ್ತರಕ್ಕೆ ಹೋದಂತೆ ಮೌಲ್ಯವು ಹೆಚ್ಚಾಗುವುದರಿಂದ ನೋರ್ತಿಂಗ್ಸ್ ಎಂದು ಕರೆಯಲ್ಪಡುವುದು ಎಂಬ ತಿಳುವಳಿಕೆಯು ಮಗುವಿನಲ್ಲಿ ರೂಪುಗೊಳ್ಳುವುದು.

ಅವುಗಳ ವಿಶೇಷತೆಗಳನ್ನು ಮಕ್ಕಳು ವಿಶ್ಲೇಷಿಸಿ ನೋಟ್ಸ್ ಪುಸ್ತಕದಲ್ಲಿ ಬರೆಯಲಿ.

ಇಲ್ಲಿ ಉಪಯೋಗಿಸಿರುವ ಭೂಪಟದ ಮಾನವು 1 : 50000 ವಾಗಿರುವುದರಿಂದ 50,000 ಸೆಂಟಿಮೀಟರ್‌ಗೆ ಸಮವಾಗಿರುವುದು ಎಂದು ಮಗು ತಿಳಿಯಬೇಕು. ಉದಾ: ಭೂಪಟದ ಪ್ರದೇಶಗಳಾದ A ಮತ್ತು B ಗಳೊಳಗೆ ಒಂದು ಸೆಂಟಿಮೀಟರ್ ಆಗಿರುವುದಾದರೆ ಆ ಎರಡು ಪ್ರದೇಶಗಳೊಳಗಿನ ಸರಿಯಾದ ದೂರವು ಅರ್ಧ ಕಿಲೋ. ಮೀಟರ್‌ಗಳಾಗಿರುವುದು.

ಗ್ರಿಡ್ ಎಂದರೇನು ಎಂದು ಪಾಠಭಾಗದ ಸಹಾಯದೊಂದಿಗೆ ತಿಳಿಯಲು ಸಾಧ್ಯವಾದರೆ ಒಂದು ಗ್ರಿಡ್‌ನ್ನು ಸ್ಕೇಲ್ ಉಪಯೋಗಿಸಿ ಅದರ ಉದ್ದ ಮತ್ತು ಅಗಲವನ್ನು ಅಳೆಯಲು ಹೇಳುವುದು. ಅದು ಯಥಾಕ್ರಮ ಎರಡು ಸೆಂಟಿಮೀಟರ್‌ಗಳಾಗಿರುವುದು. ಹಾಗಾದರೆ ಒಂದು ಗ್ರಿಡ್‌ಎಷ್ಟು ಚದರ ಕಿಲೋಮೀಟರ್ ಪ್ರದೇಶ ವ್ಯಾಪ್ತಿಯದ್ದಾಗಿರುವುದು ಎಂದು ಕಂಡುಕೊಳ್ಳಲು ಮಕ್ಕಳಲ್ಲಿ ಹೇಳುವುದು. (ಒಂದು ಕಿಲೋಮೀಟರ್ ಅಗಲ $x$ ಒಂದು ಕಿಲೋಮೀಟರ್ ಉದ್ದ = ಚದರ ಕಿಲೋಮೀಟರ್) ಭೂಮಾಹಿತಿಗಳ ಸ್ಥಾನವನ್ನು ಹೇಗೆ ಗ್ರಿಡ್‌ರೆಫರೆನ್ಸ್‌ನ ಮೂಲಕ ಕಂಡುಕೊಳ್ಳುವುದೆಂದು ಪಾಠಭಾಗದಲ್ಲಿ ಸ್ಪಷ್ಟಪಡಿಸಲಾಗಿದೆ. ಇದಕ್ಕಾಗಿ ಪಾಠಭಾಗದಲ್ಲಿ ನೀಡಿರುವ ಮಾದರಿ ಗ್ರಿಡ್‌ನ ಸಹಾಯವನ್ನು ಬಳಸಬೇಕು, ಭೂಮಾಹಿತಿಗಳ ಗಾತ್ರಕ್ಕೆ ಹೊಂದಿಕೊಂಡಾಗಿದೆ. ನಾಲ್ಕು ಅಂಕೆ ಗ್ರಿಡ್‌ರೆಫರೆನ್ಸ್ ಅಥವಾ ಆರು ಅಂಕೆ ಗ್ರಿಡ್‌ರೆಫರೆನ್ಸ್ ರೀತಿಯನ್ನು ಆಯ್ಕೆ ಮಾಡುವುದು ಎಂಬ ಆಶಯವನ್ನು ಮಗುವಿನಲ್ಲಿ ದೃಢಗೊಳಿಸಬೇಕು. ಪ್ರತಿಯೊಂದು ಮಗುವಿನ ವೈಯಕ್ತಿಕ ಭಾಗವಹಿಸುವಿಕೆಯನ್ನು ಖಚಿತಪಡಿಸಲು ಅಧ್ಯಾಪಕರು ವಿಶೇಷವಾಗಿ ಗಮನಿಸಬೇಕು. ಮಾದರಿ ಗ್ರಿಡ್‌ನಲ್ಲಿ ಭೂಮಾಹಿತಿಗಳ ಸ್ಥಾನವನ್ನು ಮಕ್ಕಳು ಕೆಳಗೆ ನೀಡಿರುವಂತೆ ಕಂಡುಕೊಳ್ಳುವರು.




**ನಾಲ್ಕು ಅಂಕೆ ಗ್ರಿಡ್ ರೆಫರೆನ್ಸ್**

| | | |
|---|---|---|
| ಕೋಟೆ | - | 8134 |
| ಸ್ಮಶಾನ | - | 8535 |
| ಮನೆ | - | 8534 |

**ಆರು ಅಂಕೆ ಗ್ರಿಡ್ ರೆಫರೆನ್ಸ್**

| | | |
|---|---|---|
| ದೇವಸ್ಥಾನ | - | 847344 |
| ಬಾವಿ | - | 837352 |
| ಲೈಟ್‌ಹೌಸ್ | - | 853373 |
| ಸೇತುವೆ | - | 823364 |

## ಕೋಂಟೂರ್ ರೇಖೆಗಳು

ಚಿತ್ರ (4.13)ರ ಸಹಾಯದೊಂದಿಗೆ ಕೋಂಟೂರ್ ರೇಖೆಗಳು ಎಂದರೇನು? ಮತ್ತು ಅವುಗಳ ಪ್ರಧಾನ ವಿಶೇಷತೆಗಳನ್ನು ವಿಶದೀಕರಿಸಿರಿ. ಕೋಂಟೂರ್ ರೇಖೆಗಳು ಹಾಗೂ ಅವುಗಳ ಮೌಲ್ಯಗಳನ್ನು ನೀಡಿರುವ ಸ್ಥಳಸ್ವರೂಪ ಭೂಪಟದಿಂದ ಕಂಡುಕೊಳ್ಳಲು ಹೇಳಬೇಕು.

ಈ ಪಾಠಭಾಗದಲ್ಲಿ ಮಗು ತಿಳಿದುಕೊಳ್ಳಬೇಕಾದ ಪ್ರಧಾನ ವಿಚಾರಗಳನ್ನು ಕೆಳಗೆ ನೀಡಾಲಾಗಿದೆ.

- ಕೋಂಟೂರ್ ರೇಖೆಗಳು ಭೂಪ್ರಕೃತಿಯನ್ನು ಚಿತ್ರೀಕರಿಸಲಿರುವ ಕಾಲ್ಪನಿಕ ರೇಖೆಗಳಾಗಿವೆ.
- ಇವು ಸಮುದ್ರಮಟ್ಟದಿಂದ ಸಮಾನ ಎತ್ತರದಲ್ಲಿರುವ ಪ್ರದೇಶಗಳನ್ನು ಜೋಡಿಸಿ ಎಳೆದ ರೇಖೆಗಳಾಗಿವೆ.
- ಸಮುದ್ರಮಟ್ಟದಿಂದಿರುವ ಎತ್ತರವಾಗಿದೆ ಪ್ರತಿಯೊಂದು ರೇಖೆಯ ಮೌಲ್ಯ.
- ಸರಿಯಾದ ಅಂತರಗಳಲ್ಲಾಗಿದೆ ಇವುಗಳನ್ನು ರಚಿಸಿರುವುದು.

ನೀಡಿರುವ ಸ್ಥಳಸ್ವರೂಪ ಭೂಪಟದಲ್ಲಿ ಕೋಂಟೂರ್ ರೇಖೆಗಳ ಅಂತರಗಳು ಎಷ್ಟು ಮೀಟರ್‌ಗಳಾಗಿವೆ ಎಂದು ಕಂಡುಕೊಳ್ಳಲು ಮಕ್ಕಳಲ್ಲಿ ಹೇಳುವುದು. ಅವುಗಳನ್ನು 20m ಅಂತರಗಳಲ್ಲಿ ರಚಿಸಲಾಗಿದೆಯೆಂದು ಮಕ್ಕಳು ಕಂಡುಕೊಳ್ಳುವರು.


ಕೋಂಟೂರ್ ರೇಖೆಗಳನ್ನು ಉಪಯೋಗಿಸಿ ಎರಡು ವಿಧದಲ್ಲಿ ಸ್ಥಳಗಳ ಆಕೃತಿಯನ್ನು ಕಂಡುಕೊಳ್ಳುವ ರೀತಿಯನ್ನು ಪಾಠಭಾಗದಲ್ಲಿ ಸ್ಪಷ್ಟಪಡಿಸಲಾಗಿದೆ. ಕೋಂಟೂರ್‌ಗಳ ಒಂದು ಮಾದರಿ (4.15) ಅವು ಪ್ರತಿನಿಧೀಕರಿಸುವ ಭೂಸ್ವರೂಪದ ಆಕೃತಿಯನ್ನು ಕಂಡುಕೊಳ್ಳುವ ವಿಧಾನ ಮಕ್ಕಳಿಗೆ ಗೊತ್ತಾಗುವ ರೀತಿಯಲ್ಲಿ ಬೋರ್ಡಿನಲ್ಲಿ ರಚಿಸಬೇಕು. ನಂತರ ಭೂಸ್ವರೂಪದ ಆಕೃತಿಯನ್ನು ಕೋಂಟೂರ್ ರೇಖೆಗಳ ಆಧಾರದಲ್ಲಿ ಚಿತ್ರ (4.10)ರಲ್ಲಿ ರಚಿಸಲು ಹೇಳುವುದು ಇನ್ನು ಪಾಠಭಾಗದಲ್ಲಿ ನಿರ್ದೇಶಿಸಿರುವಂತೆ ಗ್ರಾಫ್ ಪೇಪರ್‌ನಲ್ಲಿ ವ್ಯತ್ಯಸ್ತ ಪ್ರದೇಶಗಳ ಭೂಪ್ರಕೃತಿಯನ್ನು ರಚಿಸಲು ಹೇಳುವುದು. ಇದು ಆಶಯ ಸ್ಪಷ್ಟತೆ ಹಾಗೂ ಪ್ರಾಯೋಗಿಕ ಜ್ಞಾನವನ್ನು ಹೆಚ್ಚಿಸಲು ತುಂಬಾ ಸಹಾಯಕವಾಗಬಹುದು.

## ಅಂತರ್‌ಸಾದೃಶ್ಯ

ಎರಡು ಪ್ರದೇಶಗಳು ತಮ್ಮೊಳಗೆ ಪರಸ್ಪರ ದೃಶ್ಯವಾದರೆ ಅವುಗಳೊಳಗೆ ಅಂತರ್‌ಸಾದೃಶ್ಯವಿದೆ ಎನ್ನಬಹುದು ಎಂಬ ಆಶಯುವನ್ನಾಗಿದೆ ಇಲ್ಲಿ ದೃಢಪಡಿಸಬೇಕಾದುದು. ವೈಯಕ್ತಿಕವಾಗಿ ಚಿತ್ರ 4.22 ಮತ್ತು 4.23ನ್ನು ವಿಶ್ಲೇಷಣೆ ಮಾಡಲು ಹೇಳಬೇಕು. ಇದರೊಂದಿಗೆ ಅಂತರ್‌ಸಾದೃಶ್ಯದ ಕುರಿತಾದ ಪ್ರಾಯೋಗಿಕತೆಯನ್ನು ಸಹ ಮಗು ತಿಳಿಯುವಾಗ ಮಾತ್ರ ಈ ಪಾಠಭಾಗವು ತನ್ನ ಉದ್ದೇಶವನ್ನು ತಲುಪುವುದು.

ಉದಾ: ಚಿತ್ರ 4.23ರಲ್ಲಿ ಗುರುತಿಸಿರುವ ಸ್ಥಳಗಳಲ್ಲಿ ವಿದ್ಯುತ್ ಕಂಬಗಳನ್ನು ಸ್ಥಾಪಿಸಲಾಗುತ್ತಿದೆಂದು ಭಾವಿಸಿರಿ. R, S ಎಂಬಿ ಸ್ಥಳಗಳಲ್ಲಿ ಸ್ಥಾಪಿಸಿರುವ ವಿದ್ಯುತ್ ಕಂಬಗಳನ್ನು ಮಾತ್ರವೇ ಪರಸ್ಪರ ಜೋಡಿಸಲು ಸಾಧ್ಯ. ಇದಕ್ಕೆ ಕಾರಣ ಈ ಪ್ರದೇಶಗಳೊಳಗೆ ಮಾತ್ರವೇ ಅಂತರ್‌ಸಾದೃಶ್ಯತೆ ಇರುವುದು.

ನೀಡಿರುವ ಕೋಂಟೂರ್ ರೇಖೆಗಳಿಂದ (ಚಿತ್ರ 4.24) ಸ್ಥಳದ ಆಕೃತಿಯನ್ನು ರಚಿಸಲು ಹೇಳಬೇಕು. ನಿರ್ದೇಶಿಸಿರುವ ಪ್ರದೇಶಗಳೊಳಗಿನ ಅಂತರ್‌ಸಾದೃಶ್ಯದ ಬಗ್ಗೆ ವಿಶ್ಲೇಷಿಸಲು ಆ ಬಳಿಕ ಹೇಳಬೇಕು. ಇದರೊಂದಿಗೆ ಮಕ್ಕಳು ಕೆಳಗೆ ನೀಡಿರುವಂತೆ ಪಟ್ಟಿ ಪೂರ್ತಿಗೊಳಿಸಬೇಕು. ಕಲಿಕಾ ಚಟುವಟಿಕೆಯಲ್ಲಿ ಪ್ರತಿಯೊಂದು ಮಗುವಿನ ಭಾಗವಹಿಸುವಿಕೆಯನ್ನು ಅಧ್ಯಾಪಕರು ದೃಢಪಡಿಸಲು ಪ್ರತ್ಯೇಕವಾಗಿ ಗಮನಿಸಬೇಕು.




| ಸ್ಥಳಗಳು | ಅಂತರ್‌ಸಾದೃಶ್ಯಇದೆ/ ಅಂತರ್‌ಸಾದೃಶ್ಯ ಇಲ್ಲ |
|---|---|
| • M ಮತ್ತು N ಗಳ ಮಧ್ಯೆ | • ಇದೆ |
| • N ಮತ್ತು O ಗಳ ಮಧ್ಯೆ | • ಇಲ್ಲ |
| • O ಮತ್ತು P ಗಳ ಮಧ್ಯೆ | • ಇದೆ |
| • M ಮತ್ತು O ಗಳ ಮಧ್ಯೆ | • ಇಲ್ಲ |
| • M ಮತ್ತು P ಗಳ ಮಧ್ಯೆ | • ಇಲ್ಲ |
| • N ಮತ್ತು P ಗಳ ಮಧ್ಯೆ | • ಇಲ್ಲ |

## ಸ್ಥಳಸ್ವರೂಪ ಭೂಪಟಗಳ ವಿಶ್ಲೇಷಣೆ

ಸ್ಥಳಸ್ವರೂಪ ಭೂಪಟಗಳು ಪ್ರಾಯೋಗಿಕ ಹಂತದಲ್ಲಿ ಉಪಯೋಗಿಸಲು ಸೂಕ್ತವಾದ ಭೂಮಿಶಾಸ್ತ್ರ ಉಪಕರಣವಾಗಿದೆ ಎಂಬ ತಿಳುವಳಿಕೆ ಪ್ರತಿಯೊಬ್ಬ ಮಗುವಿನಲ್ಲೂ ಉಂಟಾಗುವುದರೊಂದಿಗೆ ಇಲ್ಲಿಯ ತನಕ ಮಗು ಆರ್ಜಿಸಿದ ಪ್ರಾಯೋಗಿಕ ಜ್ಞಾನವನ್ನು ಬಳಸಿಕೊಂಡು ಭೂಪಟ ವಿಶ್ಲೇಷಣೆ ಎಂಬ ಉದ್ದೇಶದೆಡೆಗೆ ಮಗುವನ್ನು ಮುನ್ನಡೆಸಬೇಕು.

ಇದಕ್ಕಾಗಿ ಭೂಪಟಗಳ ಅಧ್ಯಯನ ಮತ್ತು ವಿಶ್ಲೇಷಣೆಯನ್ನು ಪ್ರಧಾನವಾಗಿ ಮೂರು ರೀತಿಯಲ್ಲಿ ವರ್ಗೀಕರಣ ನಡೆಸಬಹುದು ಎಂದು ಮಗು ತಿಳಿಯಬೇಕು.

ಚಿತ್ರ 4.25ರಲ್ಲಿ ನೀಡಿರುವ ಸ್ಥಳಸ್ವರೂಪ ಭೂಪಟವನ್ನು ವೈಯಕ್ತಿಕವಾಗಿ ವಿಶ್ಲೇಷಣೆ ಮಾಡಲು ಹೇಳಬೇಕು. ಪಾಠಭಾಗದಲ್ಲಿ ನೀಡಿರುವ ಸೂಚನೆಗಳಂತೆ ಮಕ್ಕಳು ಕೆಳಗೆ ಸೂಚಿಸಿರುವ ರೀತಿಯಲ್ಲಿ ಪ್ರಾಥಮಿಕ ಮಾಹಿತಿಗಳನ್ನು ದಾಖಲಿಸುತ್ತಾರೆ.

- ಸ್ಥಳಸ್ವರೂಪ ಭೂಪಟದ ಕ್ರಮಸಂಖ್ಯೆ: ಟೋಪೋಶೀಟ್
  - $56\frac{D}{11}$
- ಚಿತ್ರೀಕರಿಸಿದ ಸ್ಥಳದ ಹೆಸರು
  - ಕರ್ನಾಟಕ – ಗುಲ್ಬರ್ಗ – ರಾಯಚೂರು ಜಿಲ್ಲೆಗಳು
- ಅಕ್ಷಾಂಶಸ್ಥಾನ –
  - $16^o15'$ ಉತ್ತರದಿಂದ $16^o20'$ ಉತ್ತರದವರೆಗೆ
- ರೇಖಾಂಶ ಸ್ಥಾನ
  - $76^o30'$ ಪೂರ್ವದಿಂದ $76^o35'$ ಪೂರ್ವದವರೆಗೆ
- ಈಸ್ಟಿಂಗ್ಸ್
  - 93 to 02
- ನೋರ್ತಿಂಗ್ಸ್
  - 83 to 92
- ಭೂಪಟದ ಮಾನ
  - 1 : 50,000
- ಕೋಂಟೂರ್ ಅಂತರ
  - 20 ಮೀಟರ್
- ಸರ್ವೇ ನಡೆಸಿದ ವರ್ಷ
  - 1959 - 60
- ಪ್ರಕಟಿಸಿದ ವರ್ಷ
  - 2005
- ಸರ್ವೇಯ ಜವಾಬ್ದಾರಿ
  - ಡಾ. ಪ್ರೀತಿಷ್‌ನಾಗ್

ಇದೇ ರೀತಿಯಲ್ಲಿ ನೀಡಿರುವ ಇತರ ಭೂಪಟಗಳ ಪ್ರಾಥಮಿಕ ಮಾಹಿತಿಗಳನ್ನು ಗುಂಪುಗಳಲ್ಲಿ ಅಥವಾ ವೈಯಕ್ತಿಕವಾಗಿ ಕಂಡುಕೊಳ್ಳಲು ಹೇಳುವುದು. ಬಳಿಕ ಮಕ್ಕಳ ಗಮನವನ್ನು ಭೌತಿಕ ವಿಶೇಷತೆಗಳಡೆಗೆ ಸೆಳೆಯಿರಿ. ಅವು ಯಾವುದೆಂದು ಭೂಪಟದ ಹಾಗೂ

ಪಾಠಭಾಗದ ಸಹಾಯದೊಂದಿಗೆ ವಿಶದೀಕರಿಸಿರಿ.

ವೈಯಕ್ತಿಕವಾಗಿ ಭೂಪಟದ (4.25)ವನ್ನು ನಿರೀಕ್ಷಣೆ ಮಾಡಲು ಹೇಳುವುದು. ಉತ್ತರವನ್ನು ಕೆಳಗೆ ನೀಡಿರುವಂತೆ ಕ್ರೋಡೀಕರಿಸಬೇಕು.

- ಈ ಪ್ರದೇಶದ ಮೂಲಕ ಹರಿಯುವ ಪ್ರಧಾನ ನದಿ ಯಾವುದು?
  ಕೃಷ್ಣಾನದಿ
- ಈ ನದಿ ಹರಿಯುವ ದಿಕ್ಕು ಯಾವುದು?
  ನೈಋತ್ಯದಿಂದ ಈಶಾನ್ಯಕ್ಕೆ (ನದಿ ಹರಿಯುವ ದಿಶೆಯನ್ನು ಕಂಡುಕೊಳ್ಳಲು ನದಿಯ ಪ್ರವಾಹವನ್ನು ಸೂಚಿಸುವ ಗುರುತುಗಳನ್ನೋ ಅಥವಾ ಆ ಪ್ರದೇಶದ ಕೋಂಟೂರ್ ರೇಖೆಯ ಎತ್ತರ ವ್ಯತ್ಯಾಸವನ್ನು ಪರಿಗಣಿಸವುದು.
- ಈ ನದಿಯ ಯಾವ ದಡದೊಂದಿಗೆ ಸೇರಿಕೊಂಡು ವನಪ್ರದೇಶ ಕಂಡುಬರುವುದು?
  ನದಿಯ ಬಲದೆಡೆಯಲ್ಲಿ
- ಈ ಪ್ರದೇಶದಲ್ಲಿರುವ ರಕ್ಷಿತಾರಣ್ಯದ ಹೆಸರೇನು?
  ಲಿಂಗಸೂರು ರಿಸರ್ವ್ ವನ
- ಈ ಪ್ರದೇಶದಲ್ಲಿ ಎಷ್ಟು ನೀರೊರತೆಗಳು ಕಾಣಸಿಗುತ್ತವೆ? ಅವುಗಳನ್ನು ಸ್ಥಾನ ಮತ್ತು ದಿಕ್ಕಿನ ಆಧಾರದಲ್ಲಿ ಸ್ಪಷ್ಟಪಡಿಸಿರಿ.
  ಎರಡು ನೀರೊರತೆಗಳು – ಒಂದು ಈಶಾನ್ಯ ದಿಕ್ಕಿಗೆ, ಎರಡನೇಯದ್ದು ಆಗ್ನೇಯ ದಿಕ್ಕಿಗೆ
- ಕುರುಚಲು ಕಾಡುಗಳು (Open Scrub) ಈ ಪ್ರದೇಶದ ಯಾವೆಲ್ಲಾ ಕಡೆಗಳಲ್ಲಿ ಕಾಣಸಿಗುತ್ತದೆ?
  ನದಿಯ ಬಲಭಾಗದುದ್ದಕ್ಕೂ – ಈಶಾನ್ಯ, ಆಗ್ನೇಯ ಮತ್ತು ಮಧ್ಯಭಾಗದಲ್ಲಿ (ಗ್ರಿಡ್ ರೆಫರೆನ್ಸ್‌ನ್ನು ಉಪಯೋಗಿಸುವುದರ ಮೂಲಕ ಸ್ಥಾನ ನಿರ್ಣಯ ಮಾಡಬಹುದಾಗಿದೆ).
- ಕೆಳಗೆ ಕೊಟ್ಟಿರುವವುಗಳನ್ನು ಆರು ಅಂಕೆಯ ಗ್ರಿಡ್ ರೆಫರೆನ್ಸ್ ಮೂಲಕ ಕಂಡುಹಿಡಿಯಿರಿ.
  • 476A • 447 • ಪರಂಪುರ್ ಗ್ರಾಮದ ಉತ್ತರದಲ್ಲಿರುವ ನೀರೊರತೆ
  9444839
  016903

ಇನ್ನೂ ಸಾಂಸ್ಕೃತಿಕ ವಿಶೇಷತೆಗಳ ಭಾಗಕ್ಕೆ ಪ್ರವೇಶಿಸಬೇಕು. ಆಶಯ ಸ್ಪಷ್ಟತೆಗಾಗಿ ಭೂಪಟದ ಸಹಾಯದೊಂದಿಗೆ ವಿಷಯ ಮಂಡನೆ ನಡೆಸಬೇಕು. ಪ್ರತಿಯೊಬ್ಬ ಮಗುವಿಗೂ ವೈಯಕ್ತಿಕವಾಗಿ ಭೂಪಟ (.25)ವನ್ನು ನೀರಿಕ್ಷಣೆ ಮಾಡಲು ಸಂದರ್ಭವನ್ನುಂಟುಮಾಡಬೇಕು. ಕೊಟ್ಟಿರುವ ಪ್ರಶ್ನೆಗಳಿಗೆ ಕೆಳಗೆ ನೀಡಿರುವಂತೆ ಉತ್ತರಗಳನ್ನು ಕ್ರೋಡೀಕರಿಸಬೇಕು.

- ಇದು ಕರ್ನಾಟಕದ ಯಾವ ಯಾವ ಜಿಲ್ಲೆಗಳು ಒಳಪಡುವ ಪ್ರದೇಶಗಳಾಗಿವೆ?
  ಗುಲ್ಬರ್ಗ, ರಾಯಚೂರು
- ಭೂಸ್ವರೂಪದ ಯಾವ ವಿಶೇಷತೆಯ ಆಧಾರದಲ್ಲಿ ಜಿಲ್ಲೆಗಳ ಮೇರೆಯನ್ನು ನಿರ್ಣಯಿಸಲಾಗಿದೆ?
  ಕೃಷ್ಣಾ ನದಿಯ ಆಧಾರದಲ್ಲಿ
- ಕೃಷ್ಣಾನದಿಯ ಬಲಭಾಗದಲ್ಲಿರುವ ಜಿಲ್ಲೆ ಯಾವುದು?
  ರಾಯಚೂರು
- ಟಾರು ಹಾಕಿದ ರಸ್ತೆಯು ಎಲ್ಲಿ ಕಾಣಸಿಗುವುದು?
  ಈಶಾನ್ಯ ಭಾಗದಲ್ಲಿ
- ಗಡಲಮಾರಿ (Gadalamari) ಗ್ರಾಮವು ಈ ಪ್ರದೇಶದ ಯಾವ ಭಾಗದಲ್ಲಿದೆ?
  ವಾಯುವ್ಯ
- ಯಾವ ಯಾವ ಗ್ರಾಮಗಳಲ್ಲಿ ಅಂಚೆ ಕಛೇರಿಯಿದೆ?
  ಗಡಲಮಾರಿ, ಗಣವತಲಗ್ರಾಮಂ
- ನಾಲ್ಕು ಅಂಕೆಯ ಗ್ರಿಡ್ ರೆಫರೆನ್ಸ್‌ನ ಮೂಲಕ ಸ್ಥಾನವನ್ನು ಕಂಡುಹಿಡಿಯಿರಿ.
  * ಅಲ್ಡೋಬಾವಿ (Aldobhavi) ಗ್ರಾಮ – 0090
  * ಗಣವತಲ (Ganavathala) ಗ್ರಾಮ – 9386
  * ಈಶಾನ್ಯಮೂಲೆಯಲ್ಲಿರುವ ಕೋಟೆ – 0192
- ಆರು ಅಂಕೆಯ ಗ್ರಿಡ್ ರೆಫರೆನ್ಸ್‌ನ ಮೂಲಕ ಸ್ಥಾನವನ್ನು ಕಂಡುಹಿಡಿಯಿರಿ.
  * ಗಡಲಮಾರಿ ಗ್ರಾಮದ ಹತ್ತಿರವಿರುವ ದೇವಸ್ಥಾನ – 942917
  * ಲಿಂಗಸುಗರ್‌ರಕ್ಷಿತಾರಣ್ಯ ಒಳಗಿರುವ ದೇವಸ್ಥಾನ – 004864
  * ಗಡಲಮಾರಿ ಗ್ರಾಮದ ಅಂಚೆಕಛೇರಿ – 937863

ಪಾಠಭಾಗದಲ್ಲಿ ನೀಡಿರುವ ಸ್ಥಳಸ್ವರೂಪ ಭೂಪಟ. (45 D/10) ವನ್ನು ವಿಶ್ಲೇಷಿಸಿ ಭೌತಿಕ – ಸಾಂಸ್ಕೃತಿಕ ವಿಶೇಷತೆಗಳನ್ನು ಕಂಡುಕೊಳ್ಳಲು ಹೇಳಬೇಕು. ಕಲಿಕಾ ಪ್ರಕ್ರಿಯೆಯು ಪೂರ್ಣಗೊಳ್ಳುವಾಗ ಮಾನವ ಜೀವನದ ವಿವಿಧ ತಲಗಳಲ್ಲಿ ಸ್ಥಳಸ್ವರೂಪ ಭೂಪಟದ ಪ್ರಾಧಾನ್ಯ ಮತ್ತು ಪ್ರಾಯೋಗಿಕತೆಯ ಕುರಿತಾಗಿ ಪ್ರತಿಯೊಬ್ಬ ಮಗುವು ತಿಳಿದಿರಬೇಕು. ಅದಕ್ಕೆಒದಗುವ ರೀತಿಯಲ್ಲಿರುವ ಕ್ರಿಯಾತ್ಮಕವಾದ ಮಧ್ಯ ಪ್ರವೇಶಗಳು ಅಧ್ಯಾಪಕರ ಭಾಗದಿಂದಿರುವಂತೆ ಪ್ರತ್ಯೇಕವಾಗಿ ಗಮನಿಸಬೇಕು.


## ? ಮೌಲ್ಯಮಾಪನ ಪ್ರಶ್ನೆಗಳು

- ‘ಸ್ಥಳಸ್ವರೂಪ ಭೂಪಟಗಳು ಇತರ ಸಾಮಾನ್ಯ ಭೂಪಟಗಳಿಂದ ವ್ಯತ್ಯಸ್ತವಾಗಿವೆ’ ಸಮರ್ಥಿಸಿರಿ.
- ತಪ್ಪಾದ ಹೇಳಿಕೆಯನ್ನು ಕಂಡುಹಿಡಿಯಿರಿ

  ಸ್ಥಳ ಸ್ವರೂಪ ಭೂಪಟಗಳಲ್ಲಿ ಕೃಷಿ ಭೂಮಿಗಳನ್ನು ಹಸಿರು ಬಣ್ಣದಲ್ಲಿ ತೋರಿಸಲಾಗಿದೆ.
  ಸ್ಥಳಸ್ವರೂಪ ಭೂಪಟಗಳಲ್ಲಿ ರಸ್ತೆಗಳು ಕೆಂಪುಬಣ್ಣದಲ್ಲಿವೆ.
  ಸ್ಥಳಸ್ವರೂಪ ಭೂಪಟಗಳಲ್ಲಿ ಭೌತಿಕ ಮಾಹಿತಿಗಳು ಮತ್ತು ಸಾಂಸ್ಕೃತಿಕ ಮಾಹಿತಿಗಳು ಒಳಗೊಂಡಿವೆ.
  ಸ್ಥಳ ಸ್ವರೂಪ ಭೂಪಟಗಳಲ್ಲಿ ವನಗಳು ಹಸಿರು ಬಣ್ಣದಲ್ಲಿವೆ.
- ಅಂತರ್‌ಸಾದೃಶ್ಯ ವಿಶ್ಲೇಷಣೆಯನ್ನು ಬಳಸಬಹುದಾದ ವಲಯಗಳಿಗೆ ಉದಾಹರಣೆ ನೀಡಿರಿ.
- 155766 ಎಂಬ ಅಂಕೆಗಳ ಗ್ರಿಡ್ ರೆಫರೆನ್ಸ್‌ನ ಪ್ರಧಾನ ನೋರ್ತಿಂಗ್ಸ್‌ನ ಮೌಲ್ಯವೆಷ್ಟು?

## ಆಕರ ಗ್ರಂಥ

*Practical Geography : R. L. Singh*
*Fundamentals of Cartography : R.P. Mishra & A. Ramesh*
*Fundamentals of Practical Geography : NCERT*



# 5

# ಸಾರ್ವಜನಿಕ ವೆಚ್ಚ ಮತ್ತು ಸಾರ್ವಜನಿಕ ಆದಾಯ

ಸಾರ್ವಜನಿಕ ಹಣಕಾಸಿಗೆ ಸಂಬಂಧಿಸಿದ ಸಾರ್ವಜನಿಕ ವೆಚ್ಚ, ಸಾರ್ವಜನಿಕ ಆದಾಯ ಮತ್ತು ಸಾರ್ವಜನಿಕ ಖರ್ಚು ಎಂಬಿವುಗಳಿಗೆ ಸಂಬಂಧಿಸಿದ ಪ್ರಧಾನ ಆಶಯಗಳನ್ನು ಈ ಪಾಠಭಾಗದಲ್ಲಿ ಉಲ್ಲೇಖಿಸಲಾಗಿದೆ. ಸಾರ್ವಜನಿಕ ಆದಾಯ, ಸಾರ್ವಜನಿಕ ಆದಾಯದ ಮೂಲಗಳು, ಪ್ರತ್ಯಕ್ಷ, ಪರೋಕ್ಷ ತೆರಿಗೆಗಳು, ತೇರಿಗೆಯೇತರ ಆದಾಯಗಳು, ಸಾರ್ವಜನಿಕ ಸಾಲ, ಬಜೆಟ್, ಹಣಕಾಸು ನೀತಿ ಎಂಬೀ ವಲಯಗಳನ್ನು ಈ ಪಾಠಭಾಗವು ವಿನಿಮಯ ಮಾಡುತ್ತದೆ. ಈ ಮೂಲಕ ಸಾರ್ವಜನಿಕ ಆದಾಯವನ್ನು ಹೆಚ್ಚಿಸಬೇಕಾದ ಆಗತ್ಯವನ್ನು ಮಗು ತಿಳಿಯುತ್ತದೆ ಹಾಗೂ ಸಾರ್ವಜನಿಕ ಆದಾಯವನ್ನು ಹೆಚ್ಚಿಸುವ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾರೆ. ಇದಲ್ಲದೆ ಬಜೆಟ್ ದೇಶದ ಆರ್ಥಿಕ ಚಟುವಟಿಕೆಗಳ ಪ್ರತಿಫಲನವಾಗಿದೆ ಮತ್ತು ಅಭಿವೃದ್ಧಿಯ ಸೂಚಕವಾಗಿದೆ ಎಂದು ಗುರುತಿಸಲು ಮಕ್ಕಳಿಗೆ ಸಂದರ್ಭವನ್ನು ಒದಗಿಸಿ ಕೊಡುತ್ತದೆ. ದೇಶವನ್ನು ಆರ್ಥಿಕ ಬಿಕ್ಕಟ್ಟಿನಿಂದ ಸಂರಕ್ಷಿಸುವುದು ಉತ್ತಮ ಆರ್ಥಿಕ ಧೋರಣೆಯಾಗಿದೆ ಎಂದು ಮಕ್ಕಳಲ್ಲಿ ತಿಳುವಳಿಕೆಯನ್ನುಂಟುಮಾಡಲು ಈ ಯೂನಿಟ್ ಸಹಕಾರಿಯಾಗಿದೆ.

## ಯೂನಿಟ್‌ಫ್ರೇಂ

# 5. ಸಾರ್ವಜನಿಕ ವೆಚ್ಚ ಮತ್ತು ಸಾರ್ವಜನಿಕ ಆದಾಯ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಸಾರ್ವಜನಿಕ ವೆಚ್ಚ – ಪ್ರದಾನ ವಲಯಗಳು<br>• ಭಾರತದ ಸಾರ್ವಜನಿಕ ವೆಚ್ಚದ ರೀತಿ<br>• ಸಾರ್ವಜನಿಕ ವೆಚ್ಚದ ಹೆಚ್ಚಳಕ್ಕಿರುವ ಕಾರಣಗಳು<br>• ಸಾರ್ವಜನಿಕ ಆದಾಯ<br>• ತೆರಿಗೆಯು ಸರಕಾರದ ಒಂದು ಆದಾಯ ಮಾರ್ಗ ವಾಗಿದೆ<br>• ಪ್ರತ್ಯಕ್ಷ ತೆರಿಗೆಗಳು<br>- ವೈಯಕ್ತಿಕ ಆದಾಯ ತೆರಿಗೆ<br>- ಕೋರ್ಪರೇಟ್ ತೆರಿಗೆ<br>• ಪರೋಕ್ಷ ತೆರಿಗೆ<br>- ಅಬಕಾರಿ ತೆರಿಗೆ<br>- ಕಸ್ಟಮ್ಸ್ ತೆರಿಗೆ<br>- ಸೇವಾ ತೆರಿಗೆ<br>- ಸರ್ಚಾರ್ಜ್<br>- ಸೆಸ್ | • ಚಿತ್ರಗಳನ್ನು ನಿರೀಕ್ಷಿಸಿ ಸಾರ್ವಜನಿಕ ವೆಚ್ಚದ ವಿವಿಧ ವಲಯಗಳನ್ನು ಕಂಡುಕೊಳ್ಳುವುದು<br>• ಗ್ರಾಫ್ – ನಿರೀಕ್ಷಣೆ ಮಾಡಿ 2009 – 10 ರಿಂದ – 2015 ರಿಂದ 16ರ ಸಾರ್ವಜನಿಕ ವೆಚ್ಚದ ರೀತಿ ಮತ್ತು ಹೆಚ್ಚಳವನ್ನು ಕಂಡುಕೊಳ್ಳುವುದು<br>• ಸಾರ್ವಜನಿಕ ವೆಚ್ಚದ ಹೆಚ್ಚಳಕ್ಕಿರುವ ಕಾರಣಗಳ – ಚರ್ಚೆ<br>• ಸಾರ್ವಜನಿಕ ಆದಾಯದ ಮೂಲಗಳು – ಚಾರ್ಟ್ ವಿಶ್ಲೇಷಣೆ<br>• ವಾಚನಾ ಸಾಮಾಗ್ರಿಗಳು. ಚಿತ್ರಗಳು, ಪಟ್ಟಿ ಇತ್ಯಾದಿಗಳ ಸಹಾಯದೊಂದಿಗೆ ಪ್ರತ್ಯಕ್ಷ ತೆರಿಗೆ ಹಾಗೂ ಪರೋಕ್ಷ ತೆರಿಗೆಗಳನ್ನು ಹೋಲಿಸುವುದು. | • ಸಾರ್ವಜನಿಕ ಆದಾಯ ಮತ್ತು ಸಾರ್ವಜನಿಕ ವೆಚ್ಚ ಇವುಗಳ ವಿಶೇಷತೆಗಳನ್ನು ಮಂಡಿಸುತ್ತಾರೆ.<br>• ಪ್ರತ್ಯಕ್ಷ ತೆರಿಗೆ, ಪರೋಕ್ಷ ತೆರಿಗೆ ಇವುಗಳ ವಿಶೇಷತೆಗಳನ್ನು ವಿಶ್ಲೇಷಣೆ ಮಾಡಿ ಉದಾಹರಣೆಗಳನ್ನು ಪಟ್ಟಿ ಮಾಡಿ ಮಂಡಿಸುತ್ತಾರೆ. |

## ಯೂನಿಟ್‌ಫ್ರೇಂ

# 5. ಸಾರ್ವಜನಿಕ ವೆಚ್ಚ ಮತ್ತು ಸಾರ್ವಜನಿಕ ಆದಾಯ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಕೇಂದ್ರ ಸರಕಾರ ಹೊರಿಸುವ ತೆರಿಗೆಗಳು, ಪ್ರಾಂತ್ಯ ಸರಕಾರ ಹೊರಿಸುವ ತೆರಿಗೆಗಳು ಮತ್ತು ಸ್ಥಳೀಯಾಡಳಿತ ಸಂಸ್ಥೆಗಳು ಹೊರಿಸುವ ತೆರಿಗೆಗಳು. | • ಕೇಂದ್ರ – ಪ್ರಾಂತ್ಯ – ಸ್ಥಳೀಯಾಡಳಿತ ಸಂಸ್ಥೆಗಳು ಹೊರಿಸುವ ತೆರಿಗೆಗಳ ಪಟ್ಟಿಯನ್ನು ವಿಶ್ಲೇಷಿಸಿ ಪ್ರಾಂತ್ಯ ಸರಕಾರದ ಪ್ರಧಾನ ತೆರಿಗೆಗಳನ್ನು ಕಂಡುಕೊಳ್ಳುವುದು. | • ಕೇಂದ್ರ – ಪ್ರಾಂತ್ಯ – ಸ್ಥಳೀಯಾಡಳಿತ ಸರಕಾರಗಳ ತೆರಿಗೆಗಳ ಪಟ್ಟಿ ತಯಾರಿಸುತ್ತಾರೆ. |
| • ತೆರಿಗೆಯೇತರ ಆದಾಯ ಮೂಲಗಳು<br>- ಶುಲ್ಕಗಳು<br>- ದಂಡ ಮತ್ತು ದಂಡನಾ ಶುಲ್ಕಗಳು<br>- ಅನುದಾನ<br>- ಬಡ್ಡಿ<br>- ಲಾಭ | • ಸರಕಾರದ ತೆರಿಗೆಯೇತರ ಆದಾಯ ಮೂಲಗಳ ಕುರಿತಾದ ಸೆಮಿನಾರ್ ನಡೆಸುವುದು. | • ತೆರಿಗೆಯೇತರ ಆದಾಯ ಮೂಲಗಳನ್ನು ವರ್ಗೀಕರಿಸಿ ವಿಶದೀಕರಿಸುತ್ತಾರೆ. |
| • ಸಾರ್ವಜನಿಕ ಲಾಭ<br>- ಆಂತರಿಕ ಲಾಭ<br>- ವಿದೇಶಿ ಸಾಲ | • ಸಾರ್ವಜನಿಕ ಸಾಲ – ಚರ್ಚೆ | • ಆಂತರಿಕ ಸಾಲ, ವಿದೇಶಿ ಸಾಲ ಎಂಬಿವುಗಳ ವಿಶೇಷತೆಗಳನ್ನು ಮಂಡಿಸುತ್ತಾರೆ. |
| • ಸಾರ್ವಜನಿಕ ಹಣಕಾಸು | • ಸಾರ್ವಜನಿಕ ಹಣಕಾಸಿಗೆ ಸಂಬಂಧಿಸಿದ ಘಟಕಗಳ ಪಟ್ಟಿ ತಯಾರಿಸುವುದು. | • ಸಾರ್ವಜನಿಕ ಹಣಕಾಸು ಎಂದರೇನೆಂದು ವಿಶದೀಕರಿಸುತ್ತಾರೆ. |
| • ಬಜೆಟ್<br>- ಸಮತೋಲನ ಬಜೆಟ್<br>- ಮಿಗತೆ ಬಜೆಟ್<br>- ಕೊರತೆ ಬಜೆಟ್ | • ವಿವಿಧ ವಿಧದ ಬಜೆಟ್‌ಗಳ ಪ್ಲೋಚಾರ್ಟ್ ತಯಾರಿಸುವುದು. | • ವಿವಿಧ ಬಜೆಟ್‌ಗಳನ್ನು ಗುರುತಿಸುತ್ತಾರೆ. |

## ಅಧ್ಯಾಯದೆಡೆಗೆ....

ಪಾಠಭಾಗದ ಆರಂಭದಲ್ಲಿ ನೀಡಿರುವ ಚಿತ್ರಗಳನ್ನು ನಿರೀಕ್ಷಿಸಲು ಮಕ್ಕಳಿಗೆ ಸಂದರ್ಭವನ್ನು ನೀಡಬೇಕು. ಚಿತ್ರಗಳು ಸರಕಾರದ ಯಾವೆಲ್ಲಾ ಕೆಲಸಕಾರ್ಯಗಳಿಗೆ ಸಂಬಂಧಪಟ್ಟದ್ದಾಗಿದೆ ಎಂದು ಗುಂಪಿನಲ್ಲಿ ಚರ್ಚಿಸಿ ಪಟ್ಟಿ ತಯಾರಿಸುವುದು. ಸಮಾನವಾದ ಇತರ ಉದಾಹರಣೆಗಳನ್ನು ಕಂಡುಕೊಂಡು ಪಟ್ಟಿಯನ್ನು ಉತ್ತಮಪಡಿಸುವುದು.

- ಕುಡಿಯುವ ನೀರಿನ ವಿತರಣೆ
- ಪರಿಸರ ಸಂರಕ್ಷಣೆ
- ಕ್ಷೇಮ – ಪಿಂಚಣಿ ವಿತರಣೆ
- ಸೇತುವೆ ನಿರ್ಮಾಣ
- ಪರಿಸರ ಸಂರಕ್ಷಣೆ
- ಅಣೆಕಟ್ಟು ನಿರ್ಮಾಣ

ಆಶಯ ರೂಪೀಕರಣಕ್ಕಾಗಿ ಕೆಳಗೆ ನೀಡಿದ ಪ್ರಶ್ನೆಗಳನ್ನು ಕೇಳುವುದು.

- ಸಾರ್ವಜನಿಕ ವೆಚ್ಚ ಎಂದರೇನು?
- ಸರಕಾರವು ಈ ರೀತಿಯಾಗಿರುವ ವೆಚ್ಚವನ್ನು ಯಾಕಾಗಿ ಮಾಡುತ್ತದೆ?

ಪಾಠಭಾಗದಲ್ಲಿ ನೀಡಿರುವ ವಿಶದೀಕರಣವನ್ನು ಓದಿ ಪ್ರಶ್ನೆಗಳಿಗಿರುವ ಉತ್ತರಗಳನ್ನು ವೈಯಕ್ತಿಕವಾಗಿ ತಯಾರಿಸಿ ಮಂಡಿಸಲು ಹೇಳುವುದು.

ಕ್ರೋಡೀಕರಣದಲ್ಲಿರಬೇಕಾದುದು

- ಸರಕಾರದ ಖರ್ಚುಗಳನ್ನು ಸಾರ್ವಜನಿಕ ವೆಚ್ಚ ಎಂದು ಕರೆಯುತ್ತಾರೆ.
- ಸರಕಾರದ ಜನರ ಕ್ಷೇಮಕ್ಕಾಗಿ ಈ ರೀತಿ ವೆಚ್ಚಗಳನ್ನು ನಡೆಸುತ್ತದೆ.

ಪಾಠಪುಸ್ತಕದ ಪುಟ ಸಂಖ್ಯೆ 92ರಲ್ಲಿರುವ 2009 – 2010 ರಿಂದ 2015ರವರೆಗಿನ ಸಾರ್ವಜನಿಕ ವೆಚ್ಚವನ್ನು ತೋರಿಸುವ ಗ್ರಾಫ್ ಹಾಗೂ ಪಾಠಭಾಗವನ್ನು ಬಳಸಿ ಸಾರ್ವಜನಿಕ ವೆಚ್ಚದಲ್ಲಿ ಉಂಟಾದ ಬದಲಾವಣೆಯನ್ನು ಕಂಡುಹಿಡಿಯಲು ಪ್ರತಿ ವರ್ಷದ ಖರ್ಚನ್ನು ಕಂಡುಕೊಳ್ಳಲು ಹೇಳುವುದು. ವ್ಯತ್ಯಾಸವನ್ನು ಕಂಡುಕೊಂಡು ಮಂಡಿಸಲು ಸಂದರ್ಭವನ್ನೊದಗಿಸಬೇಕು. ಅನಂತರ ಚರ್ಚೆ ನಡೆಸಬೇಕು.

ಕ್ರೋಡೀಕರಣದಲ್ಲಿರಬೇಕಾದುದು

- ಪ್ರತಿ ವರ್ಷವೂ ಸಾರ್ವಜನಿಕ ಖರ್ಚು ಹೆಚ್ಚಾಗುತ್ತಿದೆ.
- ಸರಕಾರದ ಕ್ಷೇಮ ಚಟುವಟಿಕೆಗಳ ಸಾರ್ವಜನಿಕ ವೆಚ್ಚದ ಹೆಚ್ಚಳಕ್ಕೊಂದು ಕಾರಣವಾಗಿದೆ.

ಸಾರ್ವಜನಿಕ ವೆಚ್ಚವನ್ನು ಅಬಿವೃದ್ಧಿ ವೆಚ್ಚ ಮತ್ತು ಅಭಿವೃದ್ಧಿಯೇತರ ವೆಚ್ಚವೆಂದು ವಿಂಗಡಿಸಬಹುದು ಎಂದು ಅಧ್ಯಾಪಕರು ಸ್ಪಷ್ಟಪಡಿಸುತ್ತಾರೆ. ಇವುಗಳಿಗಿರುವ ಉದಾಹರಣೆಗಳನ್ನು ಮಕ್ಕಳು ಪಾಠಪುಸ್ತಕದಿಂದ ಕಂಡುಕೊಳ್ಳುತ್ತಾರೆ. ತಮ್ಮ ತಮ್ಮ ವಾರ್ಡುಗಳಲ್ಲಿ ಸರಕಾರವು ಮಾಡಿದ ವೆಚ್ಚವನ್ನು ವಿಂಗಡಿಸುವ ಚಟುವಟಿಕೆಯನ್ನು ಪಾಠಪುಸ್ತಕದಲ್ಲಿ ನೀಡಲಾಗಿದೆ. ಇದಕ್ಕೆ ಬೇಕಾದ ಮಾಹಿತಿಗಳನ್ನು ವಾರ್ಡು ಸದಸ್ಯರು/ಕೌನ್ಸಿಲರ್‌ಗಳಿಂದ ಸಂಗ್ರಹಿಸಲಿ. ಗುಂಪಿನಲ್ಲಿ ಇವುಗಳನ್ನು ವರ್ಗೀಕರಿಸಿ ಮಂಡಿಸಲಿ. ಪ್ರದೇಶದಲ್ಲಿನ ಸರಕಾರದ ವೆಚ್ಚವನ್ನು ಕಂಡುಕೊಂಡು ವರ್ಗೀಕರಿಸಿ ತರುವಂತೆ ಹೇಳುವುದು.

ಭಾರತದ ಸಾರ್ವಜನಿಕ ವೆಚ್ಚ ಹೆಚ್ಚಾಗುವುದಕ್ಕಿರುವ ಕಾರಣಗಳನ್ನು ಗುಂಪು ಚರ್ಚೆಗಳ ಮೂಲಕ ಕಂಡುಕೊಂಡು ಪಟ್ಟಿ ತಯಾರಿಸಲಿ.

- ಮಂಡನೆ, ಉತ್ತಮಪಡಿಸುವಿಕೆ, ದಾಖಲಿಸುವುದು
- ರಕ್ಷಣಾ ವೆಚ್ಚದ ಹೆಚ್ಚಳ
- ಸಾರ್ವಜನಿಕ ಕ್ಷೇಮ ಕಾರ್ಯಕ್ರಮಗಳು
- ನಗರೀಕರಿಣ
- ಜನಸಂಖ್ಯಾ ಹೆಚ್ಚಳ
- ಸರಕಾರದ ಸಬ್ಸಿಡಿಗಳು
- ಕೈಗಾರೀಕರಣ

- ಆರೋಗ್ಯ ಪರಿಪಾಲನೆ
- ಶಿಕ್ಷಣರಂಗ

ಬಳಿಕ ಸರಕಾರದ ಖರ್ಚು ಹೆಚ್ಚಾಗುವುದಕ್ಕೆ ಇವು ಪ್ರತಿಯೊಂದೂ ಹೇಗೆ ಕಾರಣವಾಗುವುದೆಂದು ಚರ್ಚಿಸಿ ಮಂಡಿಸುವರು. ಒಂದೊಂದು ವಲಯವನ್ನು ಒಂದೊಂದು ಗುಂಪಿಗೆ ನೀಡಬಹುದಾಗಿದೆ. ವಿವರವಾಗಿ ಚರ್ಚಿಸಿ ಟಿಪ್ಪಣಿ ತಯಾರಿಸಲು ಹೇಳಬೇಕು.

## ಸಾರ್ವಜನಿಕ ಆದಾಯ

ತೆರಿಗೆ ಆದಾಯದ ಪಾಠಭಾಗಕ್ಕೆ ಪ್ರವೇಶಿಸಲು ಕೆಳಗಿನ ಪ್ರಶ್ನೆಗಳ ಸಹಾಯವನ್ನು ಬಳಸಬಹುದು

- ಸಾರ್ವಜನಿಕ ಆದಾಯ ಮೂಲಗಳ ಕುರಿತಾಗಿ ನಿಮಗೆ ಗೊತ್ತಿರುವ ವಿಚಾರಗಳನ್ನು ಬರೆಯಿರಿ.
- ತೆರಿಗೆ ಎಂದರೇನು?
- ಯಾವೆಲ್ಲಾ ವಿಧದ ತೆರಿಗೆಗಳಿವೆ?

ಪಾಠಪುಸ್ತಕದ ಪುಟ ಸಂಖ್ಯೆ 78ರಲ್ಲಿರುವ ಚಿತ್ರಗಳನ್ನು ನಿರೀಕ್ಷಿಸಲಿ. ಅವುಗಳಿಂದ ಕಂಡುಕೊಳ್ಳಲು ಸಾಧ್ಯವಿರುವ ಗರಿಷ್ಠ ವಿಚಾರಗಳನ್ನು ಕಂಡುಹಿಡಿದು ಮಂಡಿಸಲಿ. ಚರ್ಚೆಗೆ ಸಹಾಯಕವಾಗುವ ರೀತಿಯ ಕೆಲವು ಪ್ರಶ್ನೆಗಳನ್ನು ಕೇಳಬೇಕು.

ಉದಾಹರಣೆ: ಒಂದನೆಯ ಚಿತ್ರವು ಯಾವ ತೆರಿಗೆಗೆ ಸಂಬಂಧಿಸಿರುವುದಾಗಿದೆ? ಇದನ್ನು ಇಲ್ಲಿ ಪಾವತಿಸುವುದು ಯಾರು?


ಎರಡನೆಯದು ಯಾವ ತೆರಿಗೆಯದ್ದು? ಪಾವತಿಸುವವರು ಯಾರು? ಬಳಿಕ ಪಾಠಭಾಗವನ್ನು ಓದಿ ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆಗಳೊಳಗಿನ ವ್ಯತ್ಯಾಸವನ್ನು ಪಟ್ಟಿ ಮಾಡಲು ಹೇಳಬೇಕು.

### ಕ್ರೋಢೀಕರಣದಲ್ಲಿರಬೇಕಾದುದು

- ತೆರಿಗೆಯನ್ನು ಯಾರ ಮೇಲೆ ಹೊರಿಸಲಾಗಿದೆಯೋ ಅವರೇ ಆ ತೆರಿಗೆ ಪಾವತಿಸುವುದನ್ನು ಪ್ರತ್ಯಕ್ಷ ತೆರಿಗೆ ಎಂದು ಕರೆಯುತ್ತಾರೆ.
  ಉದಾ: ಭೂ ತೆರಿಗೆ (Land Tax).
- ಒಬ್ಬರು ತೆರಿಗೆಯನ್ನು ಪಾವತಿಸಿ ಅದರ ಹೊರೆಯನ್ನು ಇನ್ನೊಬ್ಬರ ಮೇಲೆ ಹೇರುವುದನ್ನು ಪರೋಕ್ಷ ತೆರಿಗೆ ಎನ್ನುತ್ತಾರೆ.
  ಉದಾ: ಮಾರಾಟ ತೆರಿಗೆ

### ಭಾರತದ ಪ್ರಧಾನ ತೆರಿಗೆಗಳು ಮತ್ತು ಪರೋಕ್ಷ ತೆರಿಗೆಗಳು

ಪಾಠಪುಸ್ತಕದ ಪುಟ ಸಂಖ್ಯೆ 80ರ ಸಹಾಯದಿಂದ ತೆರಿಗೆಗೆ ಸಂಬಂಧಿಸಿದ ಫ್ಲೋಚಾರ್ಟ್ ತಯಾರಿಸಲು ಹೇಳಬೇಕು. ಗುಂಪುಗಳಲ್ಲಿ ಫ್ಲೋಚಾರ್ಟ್ ಮಂಡಿಸಲು ಮಕ್ಕಳನ್ನು ಆಮಂತ್ರಿಸಬೇಕು. ಹೆಚ್ಚಿನ ಮಾಹಿತಿಗಳನ್ನು ಸೇರಿಸಲು ಅಧ್ಯಾಪಕರು ಗಮನಿಸಬೇಕು. ಮಾದರಿ ಫ್ಲೋಚಾರ್ಟ್ ಕೆಳಗೆ ಕೊಡಲಾಗಿದೆ.



## ಸರಕು ಮತ್ತು ಸೇವಾ ತೆರಿಗೆ (Goods and Service Tax)

ಸರಕು ಮತ್ತು ಸೇವಾ ತೆರಿಗೆ ಮಸೂದೆಯನ್ನು ಡಿಸೆಂಬರ್ 18, 2014ರಂದು ಲೋಕಸಭೆಯಲ್ಲಿ ಮಂಡಿಸಲಾಯಿತು. ಆಮದು ಸುಂಕ, ಸ್ಟಾಂಪ್ ಡ್ಯೂಟಿ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬಕಾರಿ ಸುಂಕ ಎಂಬಿವುಗಳನ್ನು ಮೊದಲಿನಂತೆ ಮುಂದುವರಿಯುವುದರೊಂದಿಗೆ ಬಾಕಿ ಉಳಿದಿರುವ ಎಲ್ಲಾ ತೆರಿಗೆಗಳನ್ನು ಒಟ್ಟು ಸೇರಿಸಿ ಸರಕು ಮತ್ತು ಸೇವಾ ತೆರಿಗೆಯಾಗಿ ಗಣನೆ ಮಾಡಲಾಗುವುದು ಎಂಬುದು ಈಗ ಮಸೂದೆಯಲ್ಲಿದೆ. ಬಳಕೆಯ ವೆಚ್ಚ ಹೆಚ್ಚು ಇರುವ ಪ್ರಾಂತ್ಯಗಳಿಗೆ ಹೆಚ್ಚು ಆದಾಯವು ಈ ತೆರಿಗೆಯಿಂದ ಲಭಿಸಬಹುದೆಂದು ಅಂದಾಜಿಸಲಾಗಿದೆ. ಎರಡು ವಿಧದ ಸರಕು ಮತ್ತು ಸೇವಾ ತೆರಿಗೆಯನ್ನು ರೂಪಿಸಲಾಗಿದೆ. ಅದು ಪ್ರಾಂತ್ಯ ಸರಕು ಮತ್ತು ಸೇವಾ ತೆರಿಗೆ (SGST) ಮತ್ತು ಕೇಂದ್ರ ಸರಕು ಮತ್ತು ಸೇವಾ ತೆರಿಗೆಯಾಗಿದೆ. ಕೇಂದ್ರ ಸರಕು ಮತ್ತು ಸೇವಾ ತೆರಿಗೆಯು (CGST) ದೇಶದಾದ್ಯಂತ ಒಂದೇ ದರದಲ್ಲಿ ಮತ್ತು ಪ್ರಾಂತ್ಯ ಸರಕು ಮತ್ತು ಸೇವಾ ತೆರಿಗೆಯು ವ್ಯತ್ಯಸ್ತ ದರದಲ್ಲಿ ಆಗಿರುತ್ತದೆ.

ಜನರು ತೆರಿಗೆಯ ಹೆಚ್ಚಿನ ಅಂಶವನ್ನೂ ಪರೋಕ್ಷ ತೆರಿಗೆಯ ರೂಪದಲ್ಲಿ ಪಾವತಿಸುತ್ತಾರೆ. ಇದಕ್ಕಿರುವ ಕಾರಣಗಳನ್ನು ಕಂಡುಕೊಳ್ಳುವ ಮೂಲಕ ಜನಸಾಮಾನ್ಯರನ್ನು ಹೆಚ್ಚು ಬಾಧಿಸುವ ತೆರಿಗೆಯ ಬಗ್ಗೆ ಚರ್ಚಿಸಿ ಟಿಪ್ಪಣಿ ತಯಾರಿಸಬೇಕು. ಉದಾಹರಣೆಗೆ, ತೆರಿಗೆಯಿಂದಾಗಿ ನಿತ್ಯೋಪಯೋಗಿ ವಸ್ತುಗಳ ಬೆಲೆ ಏರಿಕೆಯು ಕಡಿಮೆ ಆದಾಯದವರನ್ನು ಹೆಚ್ಚು ಬಾಧಿಸುತ್ತದೆ ಎಂದು ಕಂಡುಕೊಳ್ಳುವುದರೊಂದಿಗೆ ಪರೋಕ್ಷ ತೆರಿಗೆಯು ಸಾಮಾಜಿಕ ಗೌರವವನ್ನು ಹೆಚ್ಚು ಮಾಡುವುದಕ್ಕೆ ಕಾರಣವಾಗುತ್ತಿದೆಯೆ? ಎಂಬ ಪ್ರಶ್ನೆಯನ್ನು ಕೇಳಿಕೊಂಡು ಚರ್ಚೆಯನ್ನು ಮುಂದುವರಿಸಬೇಕು. ಇದು ಜನಸಾಮಾನ್ಯರನ್ನು ಹೆಚ್ಚು ಬಾಧಿಸುವುದೆಂಬ ಕಂಡುಕೊಳ್ಳುವಿಕೆಯೊಂದಿಗೆ ಚರ್ಚೆಯನ್ನು ಪೂರ್ತಿಗೊಳಿಸಬೇಕು.

ಜನರು ನೀಡಿರುವ ತೆರಿಗೆಗಳಲ್ಲಿ ಹೆಚ್ಚಿನವುಗಳನ್ನೂ ಪರೋಕ್ಷ ತೆರಿಗೆಯ ರೂಪದಲ್ಲಾಗಿದೆ. ಪಾಠಪುಸ್ತಕದಲ್ಲಿ ಪುಟ ಸಂಖ್ಯೆ 80 ರಲ್ಲಿರುವ ಪಾಠಭಾಗದ ಸಹಾಯದೊಂದಿಗೆ ಸರ್ಚಾರ್ಜ್ ಮತ್ತು ಸೆಸ್‌ನ್ನು ಹೋಲಿಸಿ ಮಂಡಿಸಲು ಹೇಳಬೇಕು.

### ಕ್ರೋಢೀಕರಣದಲ್ಲಿರಬೇಕಾದುದು

- ಸರ್ಚಾರ್ಜ್ ಎಂಬುದು ತೆರಿಗೆಯ ಮೇಲೆ ವಿಧಿಸುವ ಅಧಿಕ ತೆರಿಗೆಯಾಗಿದೆ. ಒಂದು ನಿಶ್ಚಿತ ಕಾಲಾವಧಿಗೆ ಸಚಾರ್ಜನ್ನು ವಿಧಿಸುತ್ತಾರೆ.
- ಸೆಸ್ ಎಂಬುದು ಸರಕಾರವು ಕೆಲವು ಪ್ರತ್ಯೇಕ ಅಗತ್ಯಗಳಿಗೆ ಹಣ ಹೊಂದಿಸಲು ವಿಧಿಸುವ ಅಧಿಕ ತೆರಿಗೆಯಾಗಿದೆ. ಅಗತ್ಯವಿದ್ದಷ್ಟು ಹಣವು ಲಭಿಸಿದಾಗ ಸೆಸ್ಸನ್ನು ನಿಲ್ಲಿಸಲಾಗುತ್ತದೆ.

ಪಾಠಭಾಗವು ಹಾಗೂ ಪತ್ರಿಕಾ ಮಾಧ್ಯಮಗಳನ್ನು ಉಪಯೋಗಿಸಿ ಪ್ರಾಂತ್ಯ ಸರಕಾರದ ತೆರಿಗೆಯ ಪಟ್ಟಿಯನ್ನು ವೈಯಕ್ತಿಕವಾಗಿ ಉತ್ತಮಪಡಿಸಲು ಹೇಳಬೇಕು.

ಪ್ರಾಂತ್ಯ ಸರಕಾರ ವಿಧಿಸುವ ತೆರಿಗೆಗಳು:

- ಮೌಲ್ಯವರ್ಧಿತ ತೆರಿಗೆ
- ಮುದ್ರಾಂಕ ತೆರಿಗೆ
- ಪ್ರಾಂತ್ಯ ಅಬಕಾರಿ ತೆರಿಗೆ
- ಭೂ ತೆರಿಗೆ
- ಸೇವಾ ತೆರಿಗೆ

### ತೇರಿಗೆಯೇತರ ಆದಾಯದ ಮೂಲಗಳು

ತೆರಿಗೆಯೇತರ ಆದಾಯ ಮೂಲಗಳ ಕುರಿತಾಗಿ ಪಾಠಪುಸ್ತಕದ ಪುಟ ಸಂಖ್ಯೆ 81 ರಿಂದ ಮಾಹಿತಿಗಳನ್ನು ಸಂಗ್ರಹಿಸಲು ಹೇಳಬೇಕು.

ನಿಮ್ಮ ಪಂಚಾಯತು/ಮುನ್ಸಿಪಾಲಿಟಿ/ಕೋರ್ಪೋರೇಷನ್‌ನ್ನು ಸಂದರ್ಶಿಸಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಅವರಿಗೆ ಲಭಿಸುವ ವಿವಿಧ ಅನುದಾನಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕು. ತರಗತಿ ಚರ್ಚೆಯ ಆಧಾರದಲ್ಲಿ ವರದಿಯನ್ನು

ವೈಯಕ್ತಿಕವಾಗಿ ತಯಾರಿಸಲಿ. ಇದನ್ನು ಪೋರ್ಟ್‌ಫೋಲಿಯೋದಲ್ಲಿ ಸೇರಿಬಹುದಾಗಿದೆ.

**ಸಾರ್ವಜನಿಕ ಸಾಲ**

ಸಾರ್ವಜನಿಕ ಸಾಲ ಎಂಬ ಆಶಯದ ಕುರಿತಾಗಿ ಪುಟ ಸಂಖ್ಯೆ 81ರ ಮಾಹಿತಿಗಳ ಆಧಾರದಲ್ಲಿ ಚರ್ಚೆ.

ಸೂಚಕಗಳು : ಸಾರ್ವಜನಿಕ ಸಾಲ, ಆಂತರಿಕ ಸಾಲ, ವಿದೇಶಿ ಸಾಲ.

ಬಳಿಕ ಪಾಠಪುಸ್ತಕದ ಪುಟ 82ರಲ್ಲಿರುವ ಪಟ್ಟಿಯನ್ನು ವಿಶ್ಲೇಷಿಸಿ ಕಂಡುಕೊಳ್ಳುವಿಕೆಯನ್ನು ಮಂಡಿಸಲು ಹೇಳುವುದು.

ಕಂಡುಕೊಳ್ಳುವಿಕೆಯನ್ನು ಮಂಡಿಸಿ ಕ್ರೋಢೀಕರಿಸಬೇಕು.

ಭಾರತದಲ್ಲಿ ಸಾರ್ವಜನಿಕ ಸಾಲವು ಹೆಚ್ಚಾಗುವುದಕ್ಕಿರುವ ಕಾರಣಗಳನ್ನು ಕೆಳಗೆ ನೀಡಿದಂತಿರಲು ಅಧ್ಯಾಪಕರ ಮಧ್ಯಪ್ರವೇಶ ವಿರಬೇಕು.

- ರಕ್ಷಣಾ ವಲಯದ ಖರ್ಚಿನ ಹೆಚ್ಚಳ
- ಜನಸಂಖ್ಯೆಯ ಹೆಚ್ಚಳ
- ಸಾಮಾಜಿಕ ಕ್ಷೇಮ ಕಾರ್ಯಕ್ರಮಗಳು
- ಅಭಿವೃದ್ಧಿ ಕಾರ್ಯಕ್ರಮಗಳು
- ಆರೋಗ್ಯ ಪರಿಪಾಲನೆ
- ಸಾರಿಗೆ ವಲಯದ ಸುಧಾರಣೆಗಳು

ಪಾಠಪುಸ್ತಕದ ಪುಟ 82 ರಲ್ಲಿ ನೀಡಿರುವ ಪಟ್ಟಿಯಿಂದ ಪ್ರತಿ ವರ್ಷ ಒಟ್ಟು ಸಾಲವನ್ನು ಆ ವರ್ಷದ ಒಟ್ಟು ಜನಸಂಖ್ಯೆಯಿಂದ ಭಾಗಿಸಿದರೆ ಆ ವರ್ಷದ ತಲಾವಾರು ಸಾಲವನ್ನು ಕಂಡುಕೊಳ್ಳಲು ಸಾಧ್ಯ. ಜನಸಂಖ್ಯೆಗಾಗಿ ಜನಗಣತಿಯ ವರದಿಗಳನ್ನು ಬಳಸಬೇಕು.

ಸಾರ್ವಜನಿಕ ಸಾಲ ಹೆಚ್ಚಾಗುವುದು ಒಳ್ಳೆಯದೆ? ಎಂಬ ಪ್ರಶ್ನೆಯನ್ನು ಮಕ್ಕಳಲ್ಲಿ ಕೇಳಬೇಕು. ಲಭಿಸುವ ಪ್ರಕ್ರಿಯೆಯಿಂದ ಗುಣದೋಷವನ್ನು ವರ್ಗೀಕರಿಸಬೇಕು. ಉತ್ಪಾದನಾ ಸಾಮರ್ಥ್ಯವಿರುವ ಹಾಗೂ ಜನಕ್ಷೇಮಕ್ಕಾಗಿ ಹಣವನ್ನು ವಿನಿಯೋಗಿಸುವಾಗ ಸಾರ್ವಜನಿಕ ಸಾಲವು ಧನಾತ್ಮಕವಾಗುತ್ತದೆ ಎಂಬುದರ ಕುರಿತಾದ ಉದಾಹರಣೆಗಳನ್ನು ಕಂಡುಕೊಳ್ಳಲು ಹೇಳುವುದು. ಉತ್ಪಾದನಾ ಸಾಮರ್ಥ್ಯವಿಲ್ಲದ ಅಗತ್ಯಗಳಿಗಾಗಿ ಸಾಲವನ್ನು ಉಪಯೋಗಿಸಿ ಮುಂದಿನ ತಲೆಮಾರಿಗೆ ಬಾಧ್ಯತೆಯಾಗುವುದು ಎಂಬುದರ ಬಗ್ಗೆ ಉದಾಹರಣೆಗಳನ್ನು ಕಂಡುಕೊಳ್ಳಲು ಹೇಳುವುದು. ಸಾರ್ವಜನಿಕ ಸಾಲದ ಗುಣದೋಷಗಳ ಕುರಿತು ವೈಯಕ್ತಿಕವಾಗಿ ಟಿಪ್ಪಣಿ ತಯಾರಿಸಲು ಹೇಳುವುದು.

**ಮುಂಗಡ ಪತ್ರ (ಬಜೆಟ್)**

ಪಾಠಪುಸ್ತಕದ ಪುಟ ಸಂಖ್ಯೆ 83ನ್ನು ಹಾಗೂ ಇತರ ವಾಚನಾ ಸಾಮಗ್ರಿಗಳನ್ನು ಬಳಸಿಕೊಂಡು ಮುಂಗಡಪತ್ರ (ಬಜೆಟ್) ಎಂಬ ಆಶಯವನ್ನು ರೂಪಿಸಬೇಕು.

ಪಾಠಪುಸ್ತಕದ ಸಂಖ್ಯೆ 83ರಲ್ಲಿರುವ ಪಟ್ಟಿಯನ್ನು ವಿಶ್ಲೇಷಿಸಿ ಖರ್ಚಿಗೆ ಸಂಬಂಧಿಸಿದ ನಿಗಮನಗಳನ್ನು ರೂಪಿಸಿ ಮಂಡಿಸಬೇಕು.

ಪಾಠಪುಸ್ತಕದ ಪುಟ ಸಂಖ್ಯೆ 100ರಲ್ಲಿರುವ ಡಯಾಗ್ರಾಮ್‌ಗಳ ನಿರೀಕ್ಷಿಸಿ ನೀಡಿರುವ ಪ್ರಶ್ನೆಗಳ ಉತ್ತರಗಳನ್ನು ಚರ್ಚಿಸುವುದು.

ಕ್ರೋಢೀಕರಣವು ಕೆಳಗೆ ನೀಡಿರುವಂತಿರಬೇಕು.

- ತೆರಿಗೆಯೇತರ ಮೂಲದಿಂದ ಕೇಂದ್ರ ಸರಕಾರಕ್ಕೆ ಕೋರ್ಪರೇಟ್ ತೆರಿಗೆಯಿಂದ ಅತಿ ಹೆಚ್ಚು ತೆರಿಗೆ ಲಭಿಸುತ್ತದೆ.
- ಕೇಂದ್ರ ಸರಕಾರಕ್ಕೆ ಅತಿ ಹೆಚ್ಚು ಆದಾಯ ಲಭಿಸುವುದು ಲಾಭವಾಗಿದೆ.
- ತೆರಿಗೆ ಆದಾಯದಿಂದ ಕೇಂದ್ರ ಸರಕಾರವು ಹೆಚ್ಚಿನ ಆದಾಯವನ್ನು ಪಡೆಯುತ್ತದೆ.

ಕೇಂದ್ರ ಸರಾಕರದ ತೆರಿಗೆ ಮತ್ತು ತೆರಿಗೆಯೇತರ ಆದಾಯದ ಪಟ್ಟಿ ತಯಾರಿಸಲು ಹೇಳುವುದು.

### ಬಜೆಟ್

'BOUGETTE' ಎಂಬ ಫ್ರೆಂಚ್ ಪದದಿಂದಾಗಿದೆ ಬಜೆಟ್ ಎಂಬ ಪದ ರೂಪುಗೊಂಡದ್ದು 'ಚರ್ಮದ ಚೀಲ' ಎಂಬುದು ಇದರ ಅರ್ಥವಾಗಿದೆ.
ಬಜೆಟ್‌ಗೆ ಸಂಬಂಧಿಸಿದ ಕೆಲವು ಪ್ರಧಾನ ಆಶಯಗಳು:

- ಕಂದಾಯ ಬಜೆಟ್:
  ಕಂದಾಯ ಆಯವ್ಯಯ ಸೇರಿರುವುದಾಗಿದೆ ಕಂದಾಯ ಬಜೆಟ್
- ಬಂಡವಾಳ ಬಜೆಟ್:
  ಬಂಡವಾಳ ಬಜೆಟ್ ಎಂದರೆ ಸರಕಾರದ ಆಸ್ತಿಗಳು ಮತ್ತು ಸಾಲಗಳ ಲೆಕ್ಕ ಹಾಗೂ ಬಂಡವಾಳ ಆಯವ್ಯಯಗಳು ಸೇರಿರುವುದಾಗಿದೆ.
- ಕೊರತೆ ಬಜೆಟ್:
  ಪ್ರಸ್ತುತ ಕಾಲದ ಆದಾಯಗಳು ಹಾಗೂ ಒಟ್ಟು ಆಂತರಿಕ ಮತ್ತು ಬಾಹ್ಯಮೂಲ ಧನಾಗಮನಗಳನ್ನು ಸೇರಿಸಿ ಒಟ್ಟು ಖರ್ಚಿನಿಂದ ಕಳೆದಾಗ ಸಿಗುತ್ತದೆ.
- ಆಯ–ವ್ಯಯ ಕೊರತೆ:
  ಸರಕಾರದ ಕಂದಾಯ ಖರ್ಚಿನಿಂದ ಕಂದಾಯ ಆದಾಯುವನ್ನು ಕಡಿಮೆ ಮಾಡುವಾಗ ಲಭಿಸುವುದಾಗಿದೆ ಆಯ–ವ್ಯಯ ಕೊರತೆ.
- ವಿತ್ತೀಯ ಕೊರತೆ:
  ಸರಕಾರದ ಒಟ್ಟು ಖರ್ಚು ಮತ್ತು ಸಾಲವನ್ನು ಹೊರತುಪಡಿಸಿರುವ ಒಟ್ಟು ಆದಾಯದೊಳಗಿನ ವ್ಯತ್ಯಾಸವೇ ವಿತ್ತೀಯ ಕೊರತೆಯಾಗಿದೆ.
- ಪ್ರಾಥಮಿಕ ಕೊರತೆ:
  ವಿತ್ತೀಯ ಕೊರತೆಯಿಂದ ಬಡ್ಡಿಪಾವತಿಯನ್ನು ಕಳೆದರೆ ಸಿಗುವ ಸಂಖ್ಯೆಯಾಗಿದೆ ಪ್ರಾಥಮಿಕ ಕೊರತೆ.
- ಹಣದಿಂದ ತುಂಬಿಸುವ ಕೊರತೆ:
  ಕರೆನ್ಸಿ ನೋಟುಗಳನ್ನು ಮುದ್ರಿಸಿ ಕಡಿಮೆಯಾದ ಕೊರತೆಯ ಭಾಗವನ್ನು ತುಂಬಿಸುವುದನ್ನು ಹಣದಿಂದ ತುಂಬಿಸುವ ಕೊರತೆ ಎಂದು ಹೇಳುವರು. ಪ್ರಸ್ತುತ ಈ ವಿಧಾನವನ್ನು ಯಾವುದೇ ದೇಶಗಳು ಉಪಯೋಗಿಸುವುದಿಲ್ಲ.

ಮಾದರಿಯನ್ನು ಕೆಳಗೆ ನೀಡಲಾಗಿದೆ.

**ಹಣಕಾಸು ನೀತಿ**

| ತೆರಿಗೆ ಆದಾಯ | ತೆರಿಗೆಯೇತರ ಆದಾಯ |
|---|---|
| • ಕೋರ್ಪರೇಟ್ ತೆರಿಗೆ | • ಬಡ್ಡಿ |
| • ಆದಾಯ ತೆರಿಗೆ | • ಲಾಭ |
| • ಕಸ್ಟಮ್ಸ್ ತೆರಿಗೆ | • ಅನುದಾನಗಳು |
| • ಅಬಕಾರಿ ತೆರಿಗೆ | • ಇತರ ಆದಾಯಗಳು |
| • ಸೇವಾ ತೆರಿಗೆ | |
| • ಇತರ ತೆರಿಗೆಗಳು | |

ಹಣಕಾಸು ನೀತಿ ಎಂದರೇನೆಂದು ಹಾಗೂ ಅದರ ಉದ್ದೇಶಗಳನ್ನು ಪಾಠಪುಸ್ತಕದ ಪುಟ ಸಂಖ್ಯೆ 101ರ ಸಹಾಯದೊಂದಿಗೆ ಚರ್ಚಿಸುವುದರೊಂದಿಗೆ ಅಧ್ಯಾಪಕರು ಹೆಚ್ಚಿನ ಮಾಹಿತಿಗಳನ್ನು ಒದಗಿಸಿಬೇಕು.

ಸಾರ್ವಜನಿಕ ಆದಾಯ, ಸಾರ್ವಜನಿಕ ಸಾಲ ಮತ್ತು ಸಾರ್ವಜನಿಕ ವೆಚ್ಚಗಳು ರಾಷ್ಟ್ರಕ್ಕೆ ಹೇಗೆ ಸಹಕಾರಿಯಾಗುತ್ತವೆ? ಅಸೈನ್‌ಮೆಂಟ್ ತಯಾರಿ. ಅಸೈನ್‌ಮೆಂಟ್‌ನಲ್ಲಿರಬೇಕಾದ ಮಾಹಿತಿಗಳನ್ನು ವಿವರವಾಗಿ ತರಗತಿ ಮಟ್ಟದಲ್ಲಿ ಚರ್ಚಿಸಬೇಕು ಅನಂತರ ಅಸೈನ್‌ಮೆಂಟ್ ತಯಾರಿಸಬೇಕು.

**ಸೂಚಕಗಳು**


- ಸಾರ್ವಜನಿಕ ಆದಾಯುವನ್ನು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸಬೇಕು.
- ಸರಕಾರದ ಅಭಿವೃದ್ಧಿಯೇತರ ವೆಚ್ಚವನ್ನು ಕಡಿಮೆಗೊಳಿಸಬೇಕು.

ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಸಾರ್ವಜನಿಕ ವೆಚ್ಚದ ಹೆಚ್ಚಿನ ಭಾಗವನ್ನು ಉಪಯೋಗಿಸಬೇಕು.

- ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಸಾರ್ವಜನಿಕ ಆದಾಯದ ಸಿಂಹಪಾಲನ್ನು ಉಪಯೋಗಿಸಬೇಕು.
- ಸಾಲ ತೆಗೆಯುವುದನ್ನು ಕಡಿಮೆಮಾಡಬೇಕು.
- ಸಾರ್ವಜನಿಕ ಸಾಲಗಳು ಉತ್ಪಾದನಾ ಪರವಾಗಿರಬೇಕು.

## ? ಮೌಲ್ಯನಿರ್ಣಯಕ್ಕಿರುವ ಪ್ರಶ್ನೆಗಳು

- ಅಭಿವೃದ್ಧಿಪರ ಖರ್ಚುಗಳು ಹಾಗೂ ಅಭಿವೃದ್ಧಿಯೇತರ ಖರ್ಚುಗಳನ್ನು ಹೋಲಿಸಿರಿ.
- ಭಾರತದಲ್ಲಿ ಸಾರ್ವಜನಿಕ ಸಾಲವು ಹೆಚ್ಚಾಗುತ್ತಾ ಹೋಗಲು ಕಾರಣವೇನು?
- ಸರಕಾರದ ಎರಡು ಪ್ರಧಾನವಾದ ಆದಾಯದ ಮೂಲಗಳು ಯಾವುವು?
- ತೆರಿಗೆ ಎಂದರೇನು?
- ವಿವಿಧ ರೀತಿಯ ತೆರಿಗೆಗಳನ್ನು ವಿವರಿಸಿ.
- ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆಯನ್ನು ಹೋಲಿಸಿರಿ. ಪ್ರತಿಯೊಂದಕ್ಕೂ ಒಂದೊಂದು ಉದಾಹರಣೆಯನ್ನು ಬರೆಯಿರಿ.
- ಭಾರತದ ಪ್ರಧಾನ ಪ್ರತ್ಯಕ್ಷ ತೆರಿಗೆಗಳಾವುವು?
- ಪದಸೂರ್ಯವನ್ನು ಪೂರ್ತಿಗೊಳಿಸಿರಿ.





- ಪಟ್ಟಿಯನ್ನು ಪೂರ್ತಿಗೊಳಿಸಿರಿ.


| **ಪ್ರತ್ಯಕ್ಷ ತೆರಿಗೆ** | |
|---|---|
| | ತೆರಿಗೆಯ ಭಾರವನ್ನು ತೆರಿಗೆ ನೀಡುವವರು ತಿಳಿಯುತ್ತಾರೆ. |
| ತೆರಿಗೆಯ ಭಾರವನ್ನು ಒಬ್ಬರಿಂದ ಇನ್ನೊಬ್ಬರಿಗೆ ಕೈ ಬದಲಾಯಿಸಬಹುದು. | |
| | ತೆರಿಗೆ ಸಂಗ್ರಹಿಸುವ ಖರ್ಚು ತುಲನಾತ್ಮಕವಾಗಿ ಕಡಿಮೆ. |

- ಸೆಸ್ ಮತ್ತು ಸರ್ಚಾರ್ಜುಗಳನ್ನು ಹೋಲಿಸಿರಿ.
- ತೆರಿಗೆಗಳನ್ನು ರಾಜ್ಯ ಸರಕಾರ ಹೊರಿಸುವ ತೆರಿಗೆಗಳು, ಕೇಂದ್ರ ಸರಕಾರದ ತೆರಿಗೆಗಳು ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳ ತೆರಿಗೆಗಳೆಂದು ವರ್ಗೀಕರಿಸಿರಿ.


- ಪದಸೂರ್ಯವನ್ನು ಪೂರ್ತಿಗೊಳಿಸಿರಿ.




- ಶುಲ್ಕ (ಫೀಸ್) ಎಂದರೇನು?
- ಅನುದಾನ ಎಂದರೇನು?
- ದಂಡ, ದಂಡನಾ ಶುಲ್ಕಗಳನ್ನು ಹೋಲಿಸಿರಿ.
- ಸಾರ್ವಜನಿಕ ಸಾಲ ಎಂದರೇನು?
- ಆಂತರಿಕ ಸಾಲ ಮತ್ತು ವಿದೇಶಿ ಸಾಲಗಳನ್ನು ಹೋಲಿಸಿರಿ.
- ಬಜೆಟ್ ಎಂದರೇನು? ವಿವರಿಸಿರಿ.
- ಮಿಗತೆ ಬಜೆಟಿನ ವಿಶೇಷತೆಗಳಾವುವು?
- ಸಮತೋಲನ ಬಜೆಟನ್ನು ವಿವರಿಸಿರಿ.
- ಕೊರತೆ ಬಜೆಟಿನ ವಿಶೇಷತೆಗಳನ್ನು ಬರೆಯಿರಿ.




- ಆರ್ಥಿಕ ಧೋರಣೆ ಎಂದರೇನು?
- ಫ್ಲೋಚಾರ್ಟ್‌ನ್ನು ಪೂರ್ತಿಗೊಳಿಸಿರಿ.



- ಹಣಕಾಸು ಧೋರಣೆಯ ಉದ್ದೇಶಗಳು ಯಾವುವು?
- ಕೆಳಗೆ ಕೊಟ್ಟಿರುವವುಗಳನ್ನು ತೆರಿಗೆಗಳು, ತೆರಿಗೆಯೇತರ ಆದಾಯ ಎಂಬುದಾಗಿ ವರ್ಗೀಕರಿಸಿರಿ.

  ಕೋರ್ಪರೇಶನ್

  ಬಡ್ಡಿ

  ಆದಾಯ ತೆರಿಗೆ

  ಸೇವಾ ತೆರಿಗೆ

  ಲಾಭ

  ಅನುದಾನಗಳು

- ಪಟ್ಟಿಯನ್ನು ಪೂರ್ತಿಗೊಳಿಸಿರಿ.

| **ಕೇಂದ್ರ ಸರಕಾರ** | .................................. | .................................. |
|---|---|---|
| ................................ | ಮೌಲ್ಯವರ್ಧಿತ ತೆರಿಗೆ | ಉದ್ಯೋಗ ತೆರಿಗೆ |
| ................................ | | |

## ಆಕರ ಗ್ರಂಥಗಳು


*Public Finance - B.P.Tyagi*

*Union Budget - 2015 - 16 Govt. of India*

*Public Finance - Agarwall*

*Micro Economics - H.L.Ahuja*

*Economic survey - 2013 - 14*

*Public Finance - T.N.Hajela*



6

# ಆಕಾಶ ಕಣ್ಣುಗಳು ಮತ್ತು ಜ್ಞಾನದ ವಿಶ್ಲೇಷಣೆ

ನಮ್ಮ ಪರಿಸರದಲ್ಲಿ ದಿನನಿತ್ಯವು ಹಲವಾರು ಬದಲಾವಣೆಗಳಾಗುತ್ತಿರುತ್ತವೆ. ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆಗಿಂತಲು ಅವುಗಳ ಸಮತೋಲನದ ಉಪಭೋಗಕ್ಕೆ ಇಂದು ಪ್ರಾಧಾನ್ಯವನ್ನು ನೀಡುತ್ತಾರೆ. ಪರಿಸರದ ಸಮತೋಲನಕ್ಕೆ ಎಲ್ಲಾ ಜೀವಜಾಲಗಳ ಪರಸ್ಪರಾಶ್ರಯ ಅತ್ಯಗತ್ಯ. ಈ ವಿಷಯದಲ್ಲಿ ಯೋಜನಾಬದ್ಧವಾದ ಶ್ರಮ ಹಾಗೂ ಹೆಚ್ಚಿನ ತಿಳುವಳಿಕೆ ಇದ್ದರೆ ಮಾತ್ರ ಪರಿಸರ ಸಂರಕ್ಷಣೆ ಮತ್ತು ಸಂಪನ್ಮೂಲಗಳು ಉಪಭೋಗಗಳಲ್ಲಿ ಸೂಕ್ತವಾದ ಬದಲಾವಣೆಗಳನ್ನುಂಟು ಮಾಡಲಿರುವ ಹಾದಿಯನ್ನು ಸುಗಮಗೊಳಿಸಲು ಸಾಧ್ಯ. ಇದಕ್ಕಾಗಿ ಭೂಮಿಯ ಮೇಲ್ಮೈಗೆ ಸಂಬಂಧಿಸಿದ ನೂತನ ಹಾಗೂ ನಿಖರವಾದ ಮಾಹಿತಿಗಳು ವಿಜ್ಞಾನಿಗಳಿಗೆ, ಯೋಜನೆ ತಯಾರಕರಿಗೆ ಹಾಗೂ ಧೋರಣೆಗಳನ್ನು ರೂಪಿಸುವವರಿಗೆ ಲಭ್ಯವಾಗಬೇಕು. ಇಂತಹ ಮಾಹಿತಿಗಳು ನಿಶ್ಚಿತ ಸಮಯಗಳ ಅಂತರದಲ್ಲಿ ನಿರಂತರವಾಗಿ ಲಭ್ಯವಾಗಬೇಕು. ಇವುಗಳ ವಸ್ತುನಿಷ್ಠವಾದ ಸಂಗ್ರಹ ಹಾಗೂ ನಿಖರವಾದ ವಿಶ್ಲೇಷಣೆ ನಡೆದರೆ ಮಾತ್ರವೇ ನ್ಯಾಯೋಚಿತವಾದ ರೀತಿಯಲ್ಲಿ ಸಂಪನ್ಮೂಲಗಳ ಉಪಯೋಗ ಹಾಗೂ ಯೋಜನೆಗಳನ್ನು ಮಾಡಲು ಸಾಧ್ಯವಾಗುವುದು ಈ ಸಂದರ್ಭದಲ್ಲಿ ಭೂಗೋಳ ಶಾಸ್ತ್ರದ ನೂತನ ವಲಯಗಳಾದ ದೂರ ಸಂವೇದನೆ ಮತ್ತು ಭೂ ಮಾಹಿತಿ ವ್ಯವಸ್ಥೆಯ ಪ್ರಾಧಾನ್ಯವು ಹೆಚ್ಚುವುದು. ಈ ಆಶಯಗಳನ್ನು ಮಕ್ಕಳಿಗೆ ತಲುಪಿಸುವುದು ಪಾಠಭಾಗದ ಉದ್ದೇಶವಾಗಿದೆ.

## ಯೂನಿಟ್ ಫ್ರೇಂ

# 6. ಆಕಾಶದ ಕಣ್ಣುಗಳು ಮತ್ತು ಜ್ಞಾನದ ವಿಶ್ಲೇಷಣೆ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ದೂರ ಸಂವೇದನೆ<br>• ಸಂವೇದಕಗಳು<br>• ಪ್ರತ್ಯಕ್ಷ ದೂರ ಸಂವೇದನೆ ಹಾಗೂ ಪರೋಕ್ಷ ದೂರ ಸಂವೇದನೆ<br>• ವೇದಿಕೆ<br>• ಭೂತಲ ಛಾಯಗ್ರಹಣ<br>- ವ್ಯೋಮ ದೂರ ಸಂವೇದನೆ<br>-<br>- ಉಪಗ್ರಹ ದೂರ ಸಂವೇದನೆ<br>• ಓವರ್ ಲೇಪ್<br>• ಭೂಸ್ಥಿರ–ಸೌರಸ್ಥಿರ ಉಪಗ್ರಹಗಳು<br>• ಸ್ಪೆಕ್ಟ್ರಲ್ ಸಿಗ್ನೇಚರ್<br>• ಉಪಗ್ರಹ ಛಾಯಾಚಿತ್ರಗಳು<br>• ಸ್ಪೇಶಿಯಲ್ ರೆಸಲ್ಯೂಶನ್<br>• ದೂರ ಸಂವೇದನಾ ತಂತ್ರಜ್ಞಾನದ ಉಪಯೋಗಗಳು<br>• ಭೂಮಾಹಿತಿ ವ್ಯವಸ್ಥೆಯ ವಿಶ್ಲೇಷಣಾ ಸಾಧ್ಯತೆಗಳು<br>- ಜಾಲ ವಿಶ್ಲೇಷಣೆ<br>- ಆವೃತ್ತ ವಿಶ್ಲೇಷಣೆ<br>- ಓವರ್‌ಲೇ ವಿಶ್ಲೇಷಣೆ<br>• ಭೂಮಾಹಿತಿ ವ್ಯವಸ್ಥೆಯ ಉಪಯೋಗಗಳು ಉಪಗ್ರಹಾಧಾರಿತ ಸ್ಥಾನ ನಿರ್ಣಯ ವ್ಯವಸ್ಥೆ<br>- ಗ್ಲೋಬಲ್ ಪೋಸಿಶನಿಂಗ್ ಸಿಸ್ಟಂ | • ದೂರ ಸಂಯೋಜನೆ ಚರ್ಚೆ<br>• ಚಿತ್ರ ವಿಶ್ಲೇಷಣೆ<br>• ಉಪಗ್ರಹಗಳ ಬಗ್ಗೆ ಇಂಟರ್ನೆಟ್‌ನಿಂದ ಮಾಹಿತಿ ಸಂಗ್ರಹ ಮಾಡುವುದು<br>• ವಿವಿಧ ರೆಸಲ್ಯೂಶನ್‌ನಲ್ಲಿರುವ ಚಿತ್ರಗಳನ್ನು ಹೋಲಿಸುವುದು<br>• ಭೂಮಾಹಿತಿ ವ್ಯವಸ್ಥೆ–ಚರ್ಚೆ<br>• ವಿಕಿಮಾಪಿಯಾವನ್ನು ಉಪಯೋಗಿಸಿ ಮನೆಯ ಸ್ಥಾನವನ್ನು ಕಂಡುಕೊಳ್ಳುವುದು<br>• ಸಾಮಾನ್ಯ ಭೂಪಟಗಳನ್ನು ಹಾಳೆಗಳಾಗಿ ಬೇರ್ಪಡಿಸುವುದು<br>• ಚಿತ್ರ ವಿಶ್ಲೇಷಣೆ<br>• ಪಾಠಪುಸ್ತಕದಲ್ಲಿ ನೀಡಿರುವ GIS ವಿಶ್ಲೇಷಣಾ ಸಾಧ್ಯತೆಯನ್ನು ಮುಂದಿಟ್ಟುಕೊಂಡು ಹೆಚ್ಚಿನ ಉಪಯೋಗಗಳನ್ನು ಕಂಡುಹಿಡಿಯುವುದು<br>• ಜಿ.ಐ.ಎಸ್ ಚರ್ಚೆ<br>• ಜಿ.ಪಿ.ಎಸ್–ಪ್ರಾಯೋಗಿಕ ಜ್ಞಾನ | • ವಿವಿಧ ರೀತಿಯ ದೂರಸಂವೇದನಾ ವಿಧಾನಗಳನ್ನು ಹೋಲಿಸುವುದು<br>• ವೇದಿಕೆಯ ಆಧಾರದಲ್ಲಿ ದೂರ ಸಂವೇದನೆಯನ್ನು ವರ್ಗೀಕರಿಸುವುದು<br>• ವ್ಯೋಮ ಚಿತ್ರಗಳ ಓವರ್‌ಲೇಪಿನ ಪ್ರಾಧಾನ್ಯವನ್ನು ವಿವರಿಸುವುದು<br>• ವ್ಯೋಮ ದೂರಸಂವೇದನೆಯ ಗುಣ–ದೋಷಗಳನ್ನು ಪಟ್ಟಿ ಮಾಡುವುದು<br>• ಭೂಸ್ಥಿರ–ಸೌರಸ್ಥಿರ ಉಪಗ್ರಹಗಳನ್ನು ಹೋಲಿಸುವುದು<br>• ದೂರಸಂವೇದನಾ ತಂತ್ರಜ್ಞಾನವನ್ನು ಉಪಯೋಗಿಸುವ ವಲಯಗಳನ್ನು ತಿಳಿದುಕೊಂಡು ಪಟ್ಟಿ ತಯಾರಿಸುವುದು<br>• ಜಾಲ ವಿಶ್ಲೇಷಣೆ, ಆವೃತ್ತ ವಿಶ್ಲೇಷಣೆ, ಓವರ್‌ಲೇ ವಿಶ್ಲೇಷಣೆ ಎಂಬೀ ವಿಶ್ಲೇಷಣಾ ಸಾಧ್ಯತೆಗಳನ್ನು ವಿವರಿಸುವುದು<br>• ಭೂಮಾಹಿತಿ ವ್ಯವಸ್ಥೆಯ ಪ್ರಯೋಜನಗಳನ್ನು ಪಟ್ಟಿ ಮಾಡುವುದು.<br>• ವಿವಿಧ ಉಪಗ್ರಹಾಧಾರಿತ ಸ್ಥಾನ ನಿರ್ಣಯ ವ್ಯವಸ್ಥೆಗಳನ್ನು ತಿಳಿದುಕೊಂಡು ವಿಶದೀಕರಿಸುವುದು. |

## ಅಧ್ಯಾಯದೆಡೆಗೆ.......

ಆಕಾಶೀಯ ಚಿತ್ರಗಳಿಗಿಂತ ಮಿಗಿಲಾಗಿ ವಿವಿಧ ಬಣ್ಣಗಳಿಂದೊಡಗೂಡಿದ ಒಂದು ಸ್ಥಳದ ನಿಖರವಾದ ಚಿತ್ರಗಳನ್ನು ಸರಿಯಾದ ವೇಳಾಂತರವನ್ನಿಟ್ಟುಕೊಂಡು ನೀಡುವುದರಲ್ಲಿ ದೂರ ಸಂವೇದನ ತಾಂತ್ರಿಕತೆಯು ಉತ್ಕೃಷ್ಟವಾಗಿದೆ ಎಂಬ ಆಶಯವನ್ನು ವಿದ್ಯಾರ್ಥಿಗಳಿಗೆ ತಲುಪಿಸಲು ಪ್ರಯತ್ನಿಸಬೇಕು. ಸಂಪನ್ಮೂಲಗಳ ಉಪಭೋಗ, ಸಂರಕ್ಷಣೆ ಹಾಗೂ ಯೋಜನೆ ಎಂಬೀ ವಲಯಗಳಲ್ಲಿ ಅಭಿವೃದ್ಧಿ ಹೊಂದಲು ವಸ್ತು ನಿಷ್ಟವಾದ ಮಾಹಿತಿಗಳ ಸಂಗ್ರಹ ಹಾಗೂ ನಿಖರವಾದ ವಿಶ್ಲೇಷಣೆಯು ಆಧುನಿಕ ಕಾಲದಲ್ಲಿ ಅಗತ್ಯವಾಗಿದೆ. ಇದಕ್ಕಿರುವ ಎರಡು ತಾಂತ್ರಿಕತೆಗಳನ್ನು ಪಾಠಭಾಗದಲ್ಲಿ ಉಲ್ಲೇಖಿಸಲಾಗಿದೆ. ಮಾಹಿತಿ ಸಂಗ್ರಹದ ಭಾಗವಾಗಿ ದೂರ ಸಂವೇದನೆ ತಂತ್ರಜ್ಞಾನವನ್ನು ಹಾಗೂ ವಿಶ್ಲೇಷಣೆಗಾಗಿ ಭೂ ಮಾಹಿತಿ ವ್ಯವಸ್ಥೆಯನ್ನು ಯಾವ ವಿಧವಾಗಿ ಬಳಸಿಕೊಳ್ಳಬೇಕು ಎಂದು ಮಕ್ಕಳು ತಿಳಿದುಕೊಳ್ಳಬೇಕಾದ ಅಗತ್ಯವಿದೆ. ಪರಂಪರಾಗತ ಮಾರ್ಗಗಳಾದ ಭೂ ಸರ್ವೇಗಳ ಮೂಲಕ ನಿಖರವಾದ ಭೂಮಾಹಿತಿಗಳನ್ನು ಸಂಗ್ರಹಿಸಲು ಸಾಧ್ಯವಲ್ಲವೇ? ಎಂಬ ಸಂಶಯವು ಈ ಪಾಠಭಾಗವನ್ನು ವಿನಿಮಯ ಮಾಡುವಾಗ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮೂಡಿ ಬರಬಹುದು. ಆದರೆ ಪರಂಪರಾಗತ ರೀತಿಯ ಭೂ ಸರ್ವೇಗೆ ಕೆಳಗೆ ನೀಡಿರುವಂತಹ ಕೊರತೆಗಳಿರು ವುದೆಂದು ಈ ಸಂದರ್ಭಗಳಲ್ಲಿ ದೂರ ಸಂವೇದನೆಗೆ ಪ್ರಾಧಾನ್ಯವು ಹೆಚ್ಚುವುದು ಎಂಬ ಆಶಯ ವಿದ್ಯಾರ್ಥಿಗಳಿಗೆ ತಲುಪಬೇಕಾಗಿದೆ.

1. ಹವಾಮಾನದ ಘಟಕಗಳು ಅನುಕೂಲಕರ ವಲ್ಲದ ಸಂದರ್ಭಗಳಲ್ಲಿ ಮಾಹಿತಿ ಸಂಗ್ರಹವು ಅಸಾಧ್ಯವಾಗುವುದು.
2. ತಲುಪಲು ಪ್ರಯಾಸಕರವಾದ ಪ್ರದೇಶಗಳಿಂದಿ ರುವ ಮಾಹಿತಿ ಸಂಗ್ರಹವು ಸಾಧ್ಯವಿಲ್ಲ.
3. ಮಾಹಿತಿ ಸಂಗ್ರಹಕ್ಕಾಗಿ ಹೆಚ್ಚು ಸಮಯಾವಕಾಶ ಬೇಕಾಗಿರುವುದರಿಂದ ಕಾಲವಿಳಂಬ ಉಂಟಾಗುವುದು.
4. ಭೂಮಿಯ ಮೇಲ್ಮೈಯಲ್ಲಿ ಪ್ರತಿದಿನವು ನಡೆಯುತ್ತಿರುವ ಬದಲಾವಣೆಯನ್ನು ತಿಳಿಯಲು ಸಾಧ್ಯವಾಗುವುದಿಲ್ಲ.

ದೂರ ಸಂವೇದನ ತಂತ್ರಜ್ಞಾನವನ್ನುಪಯೋಗಿಸಿ ಪರಂಪರಾಗತ ಭೂಸರ್ವೇಯ ಮೂಲಕ ಮೇಲೆ ಸೂಚಿಸಿರುವ ಕೊರತೆಗಳನ್ನು ಸ್ವಲ್ಪ ಮಟ್ಟಿಗೆ ಪರಿಹರಿಸಬಹುದಾಗಿದೆ. ದೂರ ಸಂವೇದನ ತಂತ್ರಜ್ಞಾನದ ಒಳಿತುಗಳನ್ನು ಈ ಸಂದರ್ಭದಲ್ಲಿ ಮಗುವಿನ ಗಮನಕ್ಕೆ ತರಬೇಕಾಗಿದೆ.

1. ವಿಶಾಲವಾದ ಭೂ ಭಾಗದ ಚಿತ್ರವು ಲಭ್ಯವಾಗುವುದು.
2. ಸ್ಥಿರವಾಗಿ ನೆಲೆನಿಲ್ಲುವಂತಹ ರೀತಿಯಲ್ಲಿ ಮಾಹಿತಿಗಳು ದಾಖಲಿಸಲ್ಪಡುತ್ತದೆ.
3. ಒಂದೇ ಮಾಹಿತಿಯನ್ನು ವಿವಿಧ ವಿಷಯಗಳ ಕಲಿಕೆಗೆ ಉಪಯೋಗಿಸಲು ಸಾಧ್ಯವಾಗುವ ರೀತಿಯಲ್ಲಿ ಲಭಿಸುತ್ತದೆ.
4. ಮಾಹಿತಿಗಳ ಲಭ್ಯತೆ ಮತ್ತು ವಿಶ್ಲೇಷಣೆಗಳು ಶೀಘ್ರವಾಗಿ ನಡೆಯುವುದು.
5. ಉಪಗ್ರಹ ಚಿತ್ರಗಳು ಸರಿಯಾದ ಅಂತರಗಳಲ್ಲಿ ಲಭಿಸುವುದರಿಂದ ನಿರಂತರವಾಗಿ ಮಾಹಿತಿ ಗಳನ್ನು ನವೀಕರಿಸಲು ಹಾಗೂ ವ್ಯತ್ಯಾಸಗಳನ್ನು ಗುರುತಿಸಲು ಸಾಧ್ಯವಾ ಗುವುದು.
6. ಮನುಷ್ಯನ ಕಣ್ಣಿಗೆ ಕಾಣಲು ಅಸಾಧ್ಯವಾದ ಸಂಗತಿಗಳನ್ನು ಸಹ ನಿರೀಕ್ಷಣೆಗೊಳಪಡಿಸಲು ಸಾಧ್ಯವಾಗುತ್ತದೆ.

ವಿದ್ಯಾರ್ಥಿಗಳು ದೂರ ಸಂವೇದನೆಯ ಮೂಲಭೂತ ಘಟಕಗಳು ಯಾವುದೆಂದು ತಿಳಿದುಕೊಳ್ಳಬೇಕಾಗಿದೆ. ಇವುಗಳ ಕುರಿತಾಗಿ ಅಧ್ಯಾಪಕರು ಕೆಳಗೆ ನೀಡಿರುವಂತೆ ವಿವರಿಸಬೇಕು.


1. ಒಂದು ಚೈತನ್ಯದ ಮೂಲ
2. ದೂರದಲ್ಲಿರುವ ಒಂದು ಪ್ಲಾಟ್‌ಫೋರ್ಮ್(ಇದು ಒಂದು ಉಪಗ್ರಹ, ವಿಮಾನ ಅಥವಾ ಬಲೂನು ಆಗಬಹುದು)
3. ಒಂದು ಸಂವೇದಕ(ಉದಾ: ಕ್ಯಾಮರ, ಸೆನ್ಸರ್ ಇತ್ಯಾದಿ)

ಚೈತನ್ಯ ಮೂಲದ ಆಧಾರದಲ್ಲಿ ದೂರ ಸಂವದನೆಯನ್ನು ಎರಡಾಗಿ ವರ್ಗೀಕರಿಸಬಹುದೆಂದು ಪಾಠಭಾಗದಲ್ಲಿ ಪ್ರತಿಪಾದಿಸಲಾಗಿದೆ.

ಸೂರ್ಯನು ದೂರ ಸಂವೇದನೆಯಲ್ಲಿ ಉಪಯೋಗಿಸುವ ವಿದ್ಯುತ್ಕಾಂತೀಯ ಚೈತನ್ಯದ ಮೂಲವಾಗಿರುವುದು.

ಎಲ್ಲ ತರಂಗ ದೈರ್ಘ್ಯಗಳಲ್ಲಿರುವ ವಿಕಿರಣಗಳು ಸೂರ್ಯನಿಂದ ಹೊರಹೊಮ್ಮುತ್ತದೆ. ಒಟ್ಟು ಸೌರ ವಿಕಿರಣದ 46ಶೇ. ಮಾತ್ರವೇ 0.4–0.076 ಮೈಕ್ರೋಮೀಟರುಗಳೆಡೆಯಲ್ಲಿರುವ ಗೋಚರ (ದೃಶ್ಯ ಪ್ರಕಾಶ) ಪರಿಧಿಯಲ್ಲಿ ಒಳಪಡುವುದು. ಭೌಮ ತಾಪ, ರಡಾರ್, ವಿದ್ಯುತ್ ಲೈನುಗಳು, ರೇಡಿಯೊ ಪ್ರಸಾರ, ಲೇಸರ್ ಮೊದಲಾದವುಗಳು ವಿದ್ಯುತ್ಕಾಂತೀಯ ಚೈತನ್ಯದ ಇತರ ಮೂಲಗಳು

ತರಂಗದೂರಕ್ಕೆ ಅನುಸಾರವಾಗಿ ವಿದ್ಯುತ್ಕಾಂತೀಯ ಸ್ಪೆಕ್ಟ್ರಮನ್ನು (Electro Magnetic Spectrum) ಚಿತ್ರದಲ್ಲಿ ಕಾಣುವಂತೆ ವರ್ಗೀಕರಿಸಬಹುದು.




ದೃಶ್ಯ ಪ್ರಕಾಶವನ್ನು ಒಳಗೊಂಡ ಮೊದಲ ರೇಂಜನ್ನು ಒಪ್ಟಿಕಲ್ ವಿಂಡೊ ಎಂದೂ ಎರಡನೇಯದನ್ನು ಮೈಕ್ರೋವೇವ್ ವಿಂಡೋ ಎಂದು ಸೂಚಿಸಲಾಗುತ್ತದೆ. ಈ ಎರಡೂ ತರಂಗಗಳ ಬೆಳಕಿನಲ್ಲಿ ಎಲ್ಲಾ ದೂರ ಸಂವೇದನಾ ಉಪಕರಣಗಳು ಭೂಮಿಯನ್ನು ನಿರೀಕ್ಷಿಸುವುದು.

ಪ್ಲಾಟ್‌ಫೋರ್ಮ್‌ಗಳನ್ನು ಆಧಾರವಾಗಿಟ್ಟುಕೊಂಡಿರುವ ದೂರಸಂವೇದನೆಗಳ ಕುರಿತು ಕಲಿಯುವುದರ ಮುಂಚಿತವಾಗಿ ಪಾಠಭಾಗದಲ್ಲಿ ನೀಡಿರುವ ಚಿತ್ರಗಳನ್ನು(6.2, 6.3, 6.4) ಮಕ್ಕಳು ವೈಯಕ್ತಿಕವಾಗಿ ವಿಶ್ಲೇಷಣೆ ನಡೆಸಲು ಹೇಳಬೇಕು. ಚಿತ್ರಗಳನ್ನು ತೆಗೆದು ಕ್ಯಾಮರಗಳು ಯಾವ ಯಾವ ವೇದಿಕೆಗಳಲ್ಲಿರುವುದು ಎಂದು ಕಂಡುಕೊಳ್ಳಲು ಹೇಳಿವುದು. ತರುವಾಯ ವೇದಿಕೆಯ ಆಧಾರದಲ್ಲಿ ದೂರ ಸೇಂವೇದನೆಯನ್ನು ಹೇಗೆ ಮೂರಾಗಿ ವರ್ಗೀಕರಿಸಬಹುದು ಎಂಬ ಆಶಯದೆಡೆಗೆ ಮಕ್ಕಳ ಗಮನವನ್ನು ಸೆಳೆಯಬೇಕು. ಅವುಗಳನ್ನು ಕೆಳಗೆ ನೀಡಿರುವಂತೆ ಕ್ರೋಡೀಕರಿಸಬೇಕು.

1. ಭೂತಲ ಛಾಯಾಗ್ರಹಣ
2. ವ್ಯೋಮ ದೂರಸಂವೇದನೆ
3. ಉಪಗ್ರಹ ಸಂವೇದನೆ

ಚಿತ್ರ 5.3ನ್ನು ವಿಶ್ಲೇಷಿಸಲು ಮಕ್ಕಳಲ್ಲಿ ಹೇಳುವುದು. ವ್ಯೋಮ ಚಿತ್ರಗಳಲ್ಲಿ ಸಮೀಪದ ಚಿತ್ರಗಳ ಸುಮಾರು 60ಶೇ.ರಷ್ಟು ಪ್ರದೇಶದ ಚಿತ್ರ ಆವರ್ತಿಸಿ ಬರುವುದು ಸ್ಟೀರಿಯೋಪೇರ್ ಎಂದು ಕರೆಯುವ ಈ ರೀತಿಯ ಚಿತ್ರ ಜೋಡಿಗಳನ್ನು ಸ್ಟೀರಿಯೋಸ್ಕೋಪ್ ಎಂಬ ಉಪಕರಣದ ಸಹಾಯದೊಂದಿಗೆ ಭೂ ಪ್ರದೇಶದ ತ್ರಿಮಾನ ಚಿತ್ರವನ್ನಾಗಿ ಬದಲಾಯಿಸಿ ಮಕ್ಕಳಿಗೆ ತಿಳಿಸಬಹುದೆಂದು ವ್ಯೋಮಚಿತ್ರಗಳಿಗೆ ಕೆಲವು ಒಳಿತುಗಳಿರುವಂತೆ ಕೆಲವು ಕೊರತೆಗಳು ಇರುವುದೆಂದು ಮಗು ತಿಳಿಯಬೇಕಾಗಿದೆ. ಇದಕ್ಕಾಗಿ ಪಾಠಭಾಗದಲ್ಲಿ ನೀಡಿರುವ ಚಿತ್ರವನ್ನು ನಿರೀಕ್ಷಣೆ ಮಾಡಲು ಹೇಳಬೇಕು.ಚಿತ್ರದಿಂದ ಕಂಡುಕೊಳ್ಳುವ ಮಾಹಿತಿಗಳನ್ನು ತರಗತಿಯಲ್ಲಿ ಮಂಡಿಸಲಿ. ಆಶಯ ಸ್ಪಷ್ಟತೆಗಾಗಿ ಅಧ್ಯಾಪಕರ ಕ್ರಿಯಾತ್ಮಕವಾದ ಮಧ್ಯಪ್ರವೇಶವಿರಬೇಕು.

## ಉಪಗ್ರಹ ದೂರ ಸಂವೇದನೆ

ಉಪಗ್ರಹ ದೂರ ಸಂವೇದನೆಯಲ್ಲಿ ಕೃತಕ ಉಪಗ್ರಹಗಳನ್ನು ಪ್ಲಾಟ್‌ಫೋರ್ಮ್‌ಗಳಾಗಿ ಬಳಸಲಾಗುವುದೆಂದು ಪಾಠಭಾಗದಲ್ಲಿ ಸ್ಪಷ್ಟಪಡಿಸಲಾಗಿದೆ.

ಉಪಗ್ರಹಗಳನ್ನು ಅವುಗಳ ಭ್ರಮಣ ಪಥಕ್ಕನುಸಾರವಾಗಿ ಎರಡಾಗಿ ವಿಭಾಗಿಸಬಹುದು.

1. ಸೆರಸ್ಥಿರ ಭ್ರಮಣ ಪಥವಿರುವ ಉಪಗ್ರಹಗಳು
2. ಭೂಸ್ಥಿರ ಭ್ರಮಣ ಪಥವಿರುವ ಉಪಗ್ರಹಗಳು

ಪಾಠಭಾಗದಲ್ಲಿ ನೀಡಿರುವ ಚಿತ್ರಗಳ ಸಹಾಯದೊಂದಿಗೆ ಈ ಎರಡು ವಿಭಾಗ ಉಪಗ್ರಹಗಳು ಹಾಗೂ ಅವುಗಳ ಭ್ರಮಣಪಥಗಳನ್ನು ಮಕ್ಕಳಿಗೆ ಸ್ಪಷ್ಟಪಡಿಸಿಕೊಡಬೇಕು.

ಭೂಸಂಪನ್ಮೂಲ ಸರ್ವೇ, ಪರಿಸರಕ್ಕೆ ತೊಂದರೆಯುಂಟುಮಾಡುವ ಘಟಕಗಳು ಹವಾಮಾನ ಮುನ್ಸೂಚನೆ, ಸಾಗರಗಳಿಗೆ ಸಂಬಂಧಿಸಿರುವ ಕಲಿಕೆ ಮುಂತಾದ ಹಲವು ವಲಯಗಳಲ್ಲಿ ಅನೇಕ ದೇಶಗಳು ಇಂದು ದೂರ ಸಂವೇದನಾ ಉಪಗ್ರಹಗಳನ್ನು ಅಭಿವೃದ್ಧಿಪಡಿಸುತ್ತಿವೆ. ಯು.ಎಸ್.ಎ, ರಷ್ಯಾ ಎಂಬೀ ರಾಷ್ಟ್ರಗಳು ಈ ವಲಯದಲ್ಲಿ ಉತ್ತಮ ಸಾಧನೆ ಮಾಡುತ್ತಿವೆ. METSAT (1960 ರಿಂದ) LANDSAT (1972 ರಿಂದ) ಇವುಗಳು ಜಗತ್ತಿನಾದ್ಯಂತ ಉತ್ತಮ ಗುಣಮಟ್ಟದ ದೂರ ಸಂವೇದನಾ ಮಾಹಿತಿಗಳನ್ನು ನೀಡುತ್ತದೆ.

ಫ್ರಾನ್ಸ್‌ನ SPOT ಉಪಗ್ರಹ ಶ್ರೇಣಿ, ಜಪಾನಿನ MOS ಉಪಗ್ರಹ ಶೇಣಿ ಯುರೋಪಿಯನ್ ಏಜೆನ್ಸಿಯ ERS ಉಪಗ್ರಹ ಶೇಣಿ ಎಂಬಿವುಗಳನ್ನು ಈ ಕ್ಷೇತ್ರದಲ್ಲಿ ಗಳಿಸಿದ ಸಾಧನೆಗಳಲ್ಲಿ ಶ್ರೇಷ್ಠವಾದವುಗಳಾಗಿವೆ.

IRS - IA, IRS IB, IRS P2, IRS- IC ಎಂಬೀ ಉಪಗ್ರಹಗಳು ಈ ಕ್ಷೇತ್ರದಲ್ಲಿ ಭಾರತ ಗಳಿಸಿದ ಮಹತ್ತರವಾದ ಸಾಧನೆಗಳಿಗೆ ಉದಾಹರಣೆಗಳಾಗಿವೆ. ಈ ಮಾಹಿತಿಗಳನ್ನು ಪಾಠಭಾಗದೊಂದಿಗೆ ಮಂಡಿಸುವ ಮೂಲಕ ಮಕ್ಕಳಲ್ಲಿ ನಮ್ಮ ರಾಷ್ಟ್ರದ ಕುರಿತು ಅಭಿಮಾನವನ್ನುಂಟುಮಾಡಲು ಪ್ರಚೋದನೆಯನ್ನು ನೀಡಬಹುದು.

ಉಪಗ್ರಹ ದೂರ ಸಂವೇದನೆಯಲ್ಲಿ ಭಾರತವು ಸಾಧಿಸಿದ ಪ್ರಧಾನ ಸಾಧನೆಗಳು ಭಾಸ್ಕರ–1 (1979), ಭಾಸ್ಕರ–2 (1981) ಎಂಬೀ ಉಪಗ್ರಹಗಳ ಉಡ್ಡಯನ ಮತ್ತು ಕೃಷಿ, ಜಲವಿಜ್ಞಾನ ಭೂಗರ್ಭ ಶಾಸ್ತ್ರ, ವನವಿಜ್ಞಾನ ಮೊದಲಾದವುಗಳ ವೈವಿಧ್ಯತೆಯಿಂದ ಕೂಡಿದ ಕಲಿಕೆಗಾಗಿರುವ ಭಾರತೀಯ ರಿಮೋಟ್ ಸೆನ್ಸಿಂಗ್(IRS)-ಉಪಗ್ರಹಗಳ ಉಡ್ಡಯನಗಳಾಗಿವೆ.

1. ಭೂಸ್ಥಿರ ಉಪಗ್ರಹಗಳು – INSAT - 2A, 2B, 2C, 2E
2. ಸೌರಸ್ಥಿರ ಉಪಗ್ರಹಗಳು – IRS - ID, IC & ID

ಎಂಬೀ ಉಪಗ್ರಹಗಳಿಂದಿರುವ ದೂರ ಸಂವೇದನ ಮಾಹಿತಿಗಳನ್ನು ಇಂದು ಭಾರತದಲ್ಲಿ ಉಪಯೋಗಿಸಲ್ಪಡುವ ಮಾಹಿತಿಗಳಲ್ಲಿ ಹೆಚ್ಚಿನವುಗಳು.

ವಸ್ತುಗಳಿಂದಿರುವ ವಿಕಿರಣ ಚೈತನ್ಯವನ್ನು ಪಡೆದುಕೊಂಡು ಸಿಗ್ನಲುಗಳಾಗಿ ಬದಲಾವಣೆ ಮಾಡುವ ಉಪಕರಣಗಳಾಗಿವೆ ಸಂವೇದಕಗಳು.

ಎರಡು ರೀತಿಯ ಸೆನ್ಸರುಗಳ ಕುರಿತಾಗಿ ಪಾಠಭಾಗದಲ್ಲಿ ಸ್ಪಷ್ಟಪಡಿಸಲಾಗಿದೆಯಲ್ಲವೇ?

1. ಪರೋಕ್ಷ ಸಂವೇದಕಗಳು (ಸೌರ ವಿಕಿರಣಗಳ ಸಹಾಯದೊಂದಿಗೆ ಕಾರ್ಯಾಚರಿಸುವುದು)
2. ಪ್ರತ್ಯಕ್ಷ ಸಂವೇದಕಗಳು (ಕೃತಕ ಚೈತನ್ಯದ ಸಹಾಯದೊಂದಿಗೆ ಕಾರ್ಯಾಚರಿಸುವವು)

ಇವುಗಳೆಡರ ವ್ಯತ್ಯಾಸವನ್ನು ಮಗು ಗುರುತಿಸಿಕೊಳ್ಳಬೇಕಾಗಿದೆ. ನಿರೀಕ್ಷಣಾ ತಲದಿಂದ ಪಸರಿಸುವ ಅಥವಾ ಪ್ರತಿಫಲಿಸುವ ಚೈತನ್ಯದ ವಿಕಿರಣಗಳನ್ನು ಬಸಿಕೊಂಡು ಕಾರ್ಯಾ ಚರಿಸುವವುಗಳಾಗಿವೆ. ಒಂದನೇಯದ್ದು (ಉದಾ: ಸೌರ ವಿಕಿರಣಗಳು) ರಾತ್ರಿ ಕಾಲಗಳಲ್ಲಿ ಉಪಯೋಗಿಸಲು ಸಾಧ್ಯವಿಲ್ಲವೆನ್ನುದಾಗಿದೆ ಇವುಗಳ ಕೊರತೆ. ಥರ್ಮಲ್ (ಉಷ್ಣ) ಸಂವೇದಕಗಳು ರಾತ್ರಿ ಕಾಲದಲ್ಲೂ ಉಪಯೋಗಿಸಬಹುದು. ಆದರೆ ಪ್ರತ್ಯಕ್ಷ ಸಂವೇದಕಗಳು ಕೃತಕ ಚೈತನ್ಯದ ಸಹಾಯದೊಂದಿಗೆ ಮಾಹಿತಿ ಸಂಗ್ರಹಕ್ಕೆ ಒದಗುವವುಗಳಾಗಿವೆ.

ಸಂವೇದಕಗಳ ಪ್ರಧಾನ ವಿಶೇಷತೆಗಳನ್ನು ಈ ಸಂದರ್ಭದಲ್ಲಿ ಮಕ್ಕಳ ಗಮನಕ್ಕೆ ತರಬೇಕಾಗಿದೆ.

**1. ಸ್ಪೇಶಿಯಲ್ ರೆಸಲ್ಯೂಶನ್**

ಸಂವೇದಕಕ್ಕೆ ಗುರುತಿಸಲು ಸಾಧ್ಯವಾಗುವ ಅತ್ಯಂತ ಸಣ್ಣ ವಸ್ತುವಿನ ಗಾತ್ರವಾಗಿದೆ.

**2. ಸ್ಪೆಕ್ಟ್ರಲ್ ಸಿಗ್ನೇಚರ್**

ವಿಕಿರಣ ರಶ್ಮಿಗಳಿರುವ ಪ್ರತಿಬಿಂಬವು ರೂಪುಗೊಳ್ಳುವ ರೇಂಜ್ ಆಗಿದೆ.

**3. ಸ್ಪೆಕ್ಟ್ರಲ್ ಬೇಂಡ್‌ಗಳ ಸಂಖ್ಯೆ**

ಸೌರವರ್ಣ ರಶ್ಮಿಗಳಿಂದ ಪಸರಿಸುವ ಕಿರಣಗಳನ್ನು ಹಲವು ಬಾಂಡ್‌ಗಳಾಗಿ ವಿಭಾಗಿಸಲಾಗಿದೆ. ಬಾಂಡುಗಳ ಸಂಖ್ಯೆ ಹೆಚ್ಚುವುದಕ್ಕನುಸಾರವಾಗಿ ವಸ್ತುವಿನ ಸ್ಪಷ್ಟತೆಯು ಹೆಚ್ಚಾಗುವುದು. (ಉದಾ: ಹೆಚ್ಚು ಪ್ರಕಾಶವಿರುವಾಗ ವಸ್ತುವು ಹೆಚ್ಚು ಸ್ಪಷ್ಟವಾಗುವುದು)

**4. ರೇಡಿಯೋಮೆಟ್ರಿಕ್ ಸೆನ್ಸಿಟಿವಿಟಿ**

ಕಪ್ಪು ಬಿಳುಪುಗಳೆಡೆಯಲ್ಲಿ ಸಂವೇದಕಗಳಿಗೆ ಗುರುತಿಸಲು ಸಾಧ್ಯವಾಗುವ ಬಣ್ಣಗಳ ಸಂಖ್ಯೆಯಾಗಿದೆ. ಕೆಲವು ಪ್ರಧಾನ ಸಂವೇದಕಗಳ ಹೆಸರುಗಳನ್ನು ಕೆಳಗೆ ನೀಡಲಾಗಿದೆ.

1. LISS

2. PAN

3. WiFs

ಈ ಪಾಠಭಾಗವು ವಿನಿಮಯವಾದಾಗ ಮಾನವನಿಗೆ ಬಹಳ ಪ್ರಯೋಜನಕಾರಿಯಾದ ಮಾಹಿತಿಗಳನ್ನು ಈ ತಂತ್ರಜ್ಞಾನದ ಮೂಲಕ ತನ್ನದಾಗಿಸಿಕೊಳ್ಳಲು ಸಾಧ್ಯವಾಗುವುದು ಎಂಬ ಅರಿವನ್ನು ಮಗು ಪಡೆದಿರಬೇಕು. ಪ್ರಧಾನ ಉಪಯೋಗಗಳನ್ನು ಪಾಠಭಾಗದಲ್ಲಿ ಮಗುವಿಗೆ ತಿಳಿಯುವಂತೆ ತರಗತಿಯಲ್ಲಿ ಮಂಡಿಸುವುದು. ಈ ಕ್ಷೇತ್ರದಲ್ಲಿ ಅವನ ತಿಳುವಳಿಕೆ ಯನ್ನು ಉತ್ತಮ ಪಡಿಸಲು ಸಹಾಯಕವಾಗಬಹುದು.

- ವನಗಳ ವರ್ಗೀಕರಣ, ಜೈವ ವೈವಿಧ್ಯಗಳ ಸಂರಕ್ಷಣೆ
- ಯೋಜನಾಬದ್ಧವಾದ ವನ ಪರಿಪಾಲನೆ
- ಅರಣ್ಯೀಕರಣ ಯೋಜನೆಗಳ ನಿರೀಕ್ಷಣೆ
- ನಗರೀಕರಣದ ಕುರಿತಾದ ಕಲಿಕೆಗಳು
- ಕೃಷಿ ಉತ್ಪಾದನೆಯ ಕುರಿತಾದ ಪ್ರವಚನ.
- ಸಂಯೋಜಿತ ಕೀಟ ನಿಯಂತ್ರಣ
- ಹವಾಮಾನ ವರದಿ.
- ಮಲಿನೀಕರಣದ ನಿರೀಕ್ಷಣೆ

## ಭೂಮಾಹಿತಿ ವ್ಯವಸ್ಥೆ (GIS)

ಭೂಮಿಶಾಸ್ತ್ರದ ವಿನೂತನ ವಲಯವಾದ ಭೂಮಾಹಿತಿ ವ್ಯವಸ್ಥೆಯ ಕುರಿತಾದ ಪ್ರಾಥಮಿಕ ಆಶಯಗಳು ಮಗುವಿನಲ್ಲಿ ರೂಪುಗೊಳ್ಳಬೇಕಾಗಿದೆ. ಈ ಭಾಗವನ್ನು ಮಗುವಿನೊಂದಿಗೆ ಚರ್ಚಿಸುವಾಗ ಈ ವಲಯವು ಎಷ್ಟರ ಮಟ್ಟಿಗೆ ಮಾನವ ಸ್ಪರ್ಶಿಯಾಗಿದೆ ಎಂಬ ಅರಿವು ಅವನಿಗಾಗಬೇಕಾಗಿದೆ. ಇದಕ್ಕಾಗಿ ಕೆಳಗೆ ನೀಡಿರುವಂತಹ ರೀತಿಯ ಕಥೆಯ ಮಂಡನೆ ಯೊಂದಿಗೆ ಈ ಪಾಠಭಾಗವನ್ನು ರಸವತ್ತಾಗಿ ಅವಿಷ್ಕರಿಸಬಬಹುದು.

ನವದೆಹಲಿಗೆ ಔದ್ಯೋಗಿಕ ಸಂದರ್ಶನಕ್ಕಾಗಿ ಸಂಯುಕ್ತ ಅಮೇರಿಕಾದ ಸೈನ್ಯದ ಓರ್ವ ಉನ್ನತ ಉದ್ಯೋಗಸ್ಥರು ತಲುಪಿದರು. ತುರ್ತು ಔದ್ಯೋಗಿಕ ಕಾರ್ಯಕ್ರಮ ವಾದುದರಿಂದ ವಿಮಾನ ನಿಲ್ದಾಣದಿಂದ ಸೈನ್ಯದ ಕಚೇರಿಗೆ ತಲುಪಿಸಬೇಕೆನ್ನುವುದು ದೆಹಲಿ ಪೊಲೀಸರಿಗೆ ಲಭಿಸಿದ ನಿರ್ದೇಶವಾಗಿತ್ತು. ಕೂಡಲೇ ಟ್ರಾಫಿಕ್ ಕಂಟ್ರೋಲ್ ಯೂನಿಟ್‌ನೊಂದಿಗೆ ಅವರು ಸಂಪರ್ಕ ಬೆಳೆಸಿದರು. ದೂರ ಕಡಿಮೆ ಇರುವ ಹಾಗೂ ಆ ಭಾಗದ ವಾಹನ ದಟ್ಟಣೆಯ ಕುರಿತಾದ ನಿಖರವಾದ ಮಾಹಿತಿಗಳನ್ನು ಭೂಸ್ಥಿರ ವ್ಯವಸ್ಥೆಯ ಸಹಾಯದೊಂದಿಗೆ ಅವರು ನೀಡಿದರು. ಒಂದು ನಿಶ್ಚಿತ

ವೇಗದಲ್ಲಿ ಈ ದಾರಿಯಾಗಿ ಸಂಚರಿಸಿದರೆ ಲಕ್ಷ್ಯಸ್ಥಾನವನ್ನು ಇಷ್ಟು ಸಮಯದಲ್ಲಿ ತಲುಪಿಸಬಹುದೆಂದು ತಿಳಿಸಿದರು.

ಇಂತಹ ಉದಾಹರಣಗಳು ಈ ಪಾಠಭಾಗದೊಂದಿಗೆ ಪೂರ್ಣವಾಗಿ ತಲ್ಲೀನರಾಗಲು ಮಕ್ಕಳಿಗೆ ಪ್ರಚೋದಕವಾಗುವುದು.

ಐ.ಟಿ. @ ಸ್ಕೂಲ್ ನೀಡಿರುವ Ubundu OS ನಲ್ಲಿ Q'gis ಎಂಬ ಭೂಮಾಹಿತಿ ಸಾಫ್ಟ್‌ವೇರ್‌ನ್ನು ಈ ಸಂದರ್ಭ ಮಕ್ಕಳಿಗೆ ಪರಿಚಯಿಸಬಹುದಾಗಿದೆ. ಈ ಪಾಠಭಾಗಕ್ಕೆ ಕಂಪ್ಯೂಟರ್ ಆಧಾರಿತ ಕಲಿಕಾ ರೀತಿಯು ಅತ್ಯಂತ ಸೂಕ್ತವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ವಾಣಿಜ್ಯ, ವಾರ್ತಾವಿನಿಮಯ, ಸಂಪನ್ಮೂಲ ಪರಿಪಾಲನೆ ಮುಂತಾದವುಗಳಲ್ಲೂ ವಿಶೇಷವಾಗಿ ಯೋಜನೆ ಹಾಗೂ ಅಭಿವೃದ್ಧಿಗಳಲ್ಲಿ ಬಹಳಷ್ಟು ಪ್ರಯೋಜನಕಾರಿಯಾದ ತಂತ್ರಜ್ಞಾನ ವಾಗಿದೆ ಎಂದು ಸಷ್ಪವಾದ ರೀತಿಯಲ್ಲಿ ಮಗು ತಿಳಿದಿರಬೇಕು. GIS ನ ಘಟಕಗಳು ಯಾವುದೆಂದು ಈ ಭಾಗದಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಅವುಗಳನ್ನು ಕೆಳಗೆ ನೀಡಲಾಗಿದೆ.

1. ಕಂಪ್ಯೂಟರ್ ಹಾರ್ಡ್‌ವೇರ್
2. ಸಾಫ್ಟ್‌ವೇರ್
3. ಮಾಹಿತಿಗಳು
4. ಉಪಯೋಗಿಸುವವ

ಭೂಮಾಹಿತಿ ವ್ಯವಸ್ಥೆಯಲ್ಲಿ ಮಾಹಿತಿ ವಿಶ್ಲೇಷಣೆ ಮಾಡಲು ಎರಡು ರೀತಿಯಲ್ಲಿರುವ ಮಾಹಿತಿಗಳು ಅಗತ್ಯವಿರುವುದೆಂದು ತಿಳಿದಿರುವಿರಲ್ಲವೇ?

**1. ಸ್ಥಾನೀಯ ಮಾಹಿತಿಗಳು**

ವಿಕ್ಕಿ ಮಾಫಿಯಾದ ಸಹಾಯದಿಂದ ಸ್ಥಾನೀಯ ಮಾಹಿತಿಗಳ ಬಗ್ಗೆ ಪ್ರಾಥಮಿಕ ತಿಳುವಳಿಕೆ ಯನ್ನು ಮಗುವಿನಲ್ಲಿ ಉಂಟುಮಾಡಲು ಸಾಧ್ಯ. ಇದಕ್ಕಾಗಿ ಮಕ್ಕಳು ವಾಸವಾಗಿರುವ ಪ್ರದೇಶ, ಮನೆ ಎಂಬಿವುಗಳ ಅಕ್ಷಾಂಶ ಮತ್ತು ರೇಖಾಂಶಗಳ ಸ್ಥಾನವನ್ನು ವಿಕ್ಕಿ ಮಾಫಿಯದಿಂದ ಕಂಡುಕೊಳ್ಳಲು ಹೇಳಬೇಕು.

**2. ವಿಶೇಷತೆಗಳು**

ಈ ಪಾಠಭಾಗವನ್ನು ಮಗುವಿಗೆ ತಲುಪಿಸುವುದಕ್ಕಾಗಿ ವಿಕ್ಕಿ ಮಾಫಿಯಾದ ಮೂಲಕ ಕಂಡುಕೊಂಡ ಅಂಶಗಳ ಪ್ರದೇಶಗಳ ಅಕ್ಷಾಂಶ ರೇಖಾಂಶ ಸ್ಥಾನಗಳೊಂದಿಗೆ ಅವುಗಳ ವಿಶೇಷತೆಗಳನ್ನು ಸಹ ಬರೆಯಲು ಹೇಳಬೇಕು. ಉದಾ: ಶಾಲೆ.

| ಸ್ಥಾನೀಯ ಮಾಹಿತಿ | ವಿಶೇಷತೆಗಳು |
|---|---|
| ಅಕ್ಷಾಂಶ<br>ರೇಖಾಂಶ | ಇರುವ ಸ್ಥಳ :<br>ಶಾಲೆಯ ಹೆಸರು :<br>ವಿಭಾಗ :<br>ಡಿವಿಷನುಗಳು :<br>ಮಕ್ಕಳ ಸಂಖ್ಯೆ :<br>ಮೊದಲಾದವುಗಳು : |

**ಹಾಳೆಗಳು**

GIS ತಂತ್ರಜ್ಞಾನದ ಸಹಾಯದಿಂದ ಸ್ಥಾನೀಯ ಮಾಹಿತಿಗಳನ್ನು ಹಾಗೂ ವಿಶೇಷತೆಗಳನ್ನು ವಿವಿಧ ಹಾಳೆಗಳನ್ನಾಗಿ ಮಾಡಬಹುದು ಎಂಬ ಆಶಯವನ್ನು ಮಗು ತಿಳಿಯಬೇಕಾಗಿದೆ.

ಉದಾಹರಣೆಗೆ ಈ ತಂತ್ರಜ್ಞಾನದ ಮೂಲಕ ಭಾರತದ ರಾಜಕೀಯ–ಭೌತಿಕ ಭೂಪಟವನ್ನು ಕೆಳಗೆ ನೀಡಿರುವಂತೆ ಹಾಳೆಗಳಾಗಿ ಪರಿವರ್ತಿಸಬಹುದು.

ಹಾಳೆ 1 ಭಾರತದ ಬಾಹ್ಯ ರೇಖಾಚಿತ್ರ
ಹಾಳೆ 2 ಪ್ರಾಂತ್ಯಗಳ ಮೇರೆಗಳು

ಹಾಳೆ 3 ಭಾರತದಲ್ಲಿರುವ ಪರ್ವತಗಳು
ಹಾಳೆ 4 ಪೀಠಭೂಮಿಗಳು
ಹಾಳೆ 5 ಸಮತಲಗಳು
ಹಾಳೆ 6 ತೀರ ಪ್ರದೇಶಗಳು
ಹಾಳೆ 7 ಮರುಭೂಮಿ
ಹಾಳೆ 8 ರಸ್ತೆಗಳು
ಹಾಳೆ 9 ನದಿಗಳು
ಹಾಳೆ 10 ವನಗಳು

ಇವುಗಳಿಂದ ಅಗತ್ಯಕ್ಕನುಸಾರವಾಗಿ ಹಾಳೆಗಳನ್ನು ಆಯ್ಕೆ ಮಾಡಿ ಭೂಪಟದಲ್ಲಿ ಸೇರಿಸಬಹುದು. ಉದಾಹರಣೆಗೆ ಭಾರತದ ರಸ್ತೆ ಜಾಲ ಹಾಗೂ ಭೂಪ್ರಕೃತಿಗಳೊಳಗಿನ ಸಂಬಂಧವನ್ನು ವಿಶ್ಲೇಷಣೆ ಮಾಡಲು ಅವುಗಳನ್ನು ಪ್ರತಿನಿಧಿಕರಿಸುವ ಹಾಳೆಯನ್ನು ಮಾತ್ರ ಸೇರಿಸಿದರೆ ಸಾಧ್ಯವಾಗಬಹುದು.

## ಭೂಮಾಹಿತಿ ವ್ಯವಸ್ಥೆಯ ವಿಶ್ಲೇಷಣಾ ಸಾಧ್ಯತೆಗಳು

ವಿಭಿನ್ನ ಅಗತ್ಯಗಳಿಗಾಗಿ ಭೂಮಿಯ ಮೇಲ್ಮೈಯ ವಿಶೇಷತೆಗಳನ್ನು ವಿಶ್ಲೇಷಣೆ ಮಾಡಲು ಭೂಮಮಾಹಿತಿ ವ್ಯವಸ್ಥೆಗೆ ಸಾಧ್ಯವಿದೆ ಎಂದು ವಿದ್ಯಾರ್ಥಿಯು ತಿಳಿಯಬೇಕು. ಇದಕ್ಕಾಗಿ ಪಾಠಭಾಗದಲ್ಲಿರುವ ಉದಾಹರಣೆಗಳನ್ನು ಅಧ್ಯಾಪಕರು ವಿಶದೀಕರಿಸಬೇಕು. ಹೀಗಾದಲ್ಲಿ ಮಾತ್ರವೇ ಮಾನವನ ಜೀವನದಲ್ಲಿ GIS ಪ್ರಯೋಜನಕಾರಿ ಎಂದು ಅದರ ಪ್ರಾಯೋಗಿಕ ಹಂತವು ವಿಶಾಲವಾಗಿರುವುದೆಂದು ವಿದ್ಯಾರ್ಥಿಗಳು ತಿಳಿದುಕೊಳ್ಳುವರು.

ಕೆಳಗೆ ನೀಡಿರುವ ತರಗತಿ ಚಟುವಟಿಕೆಗಳನ್ನು ಸಹ ಈ ಭಾಗ ಮಂಡಿಸುವಾಗ ಪರಿಗಣಿಸಬಹುದು. ಮಕ್ಕಳನ್ನು ಗುಂಪುಗಳಾಗಿ ಮಾಡಿ ನೀಡಿರುವ ಭೂಪಟಗಳಿಂದ ವಿವಿಧ ಮಾಹಿತಿಗಳನ್ನು ಸಂಗ್ರಹಿಸಲು ಹೇಳಬೇಕು. ಉದಾ: ಒಂದು ಪ್ರದೇಶದಲ್ಲಿರುವ ನದಿಗಳ ಹಾಗೂ ಪೋಷಕ ನದಿಗಳ ಸಂಖ್ಯೆ, ಅವುಗಳ ಉದ್ದ, ರಸ್ತೆಗಳ ಒಟ್ಟು ಉದ್ದ, ವನ ಪ್ರದೇಶದ ವಿಸ್ತೀರ್ಣ, ಎರಡು ಪ್ರದೇಶಗಳನ್ನು ತಮ್ಮೊಳಗೆ ಜೋಡಿಸಿಕೊಂಡು ಒಂದು ರಸ್ತೆ ನಿರ್ಮಿಸುವುದಾದರೆ ಆ ರಸ್ತೆ ಹಾಗೂ ಹೋಗಲು ಸಾಧ್ಯತೆ ಇರುವ ಪ್ರದೇಶಗಳು ಈ ರೀತಿಯಲ್ಲಿರುವ ಚಟುವಟಿಕೆಗಳನ್ನು ಪ್ರತಿಗುಂಪಿಗೆ ನೀಡಬೇಕು. ಸ್ಕೇಲ್, ಪೆನ್ಸಿಲ್, ನೂಲು ಎಂಬಿವುಗಳನ್ನು ಉಪಯೋಗಿಸಿ ಇವುಗಳನ್ನು ಕಂಡುಕೊಳ್ಳಲು ಪ್ರಾಯೋಗಿಕ ತಲದಲ್ಲಿ ಬಹಳಷ್ಟು ತೊಂದರೆ ಹಾಗೂ ಹೆಚ್ಚು ಸಮಯವು ಅಗತ್ಯವಾಗಿರುವುದೆಂದು ಮಕ್ಕಳ ಗಮನಕ್ಕೆ ತರಬೇಕು. ಆದರೆ ಇದು GIS ನ ಸಹಾಯದೊಂದಿಗೆ ಒಂದು ಮೌಸ್ ಕ್ಲಿಕ್‌ನ ಮೂಲಕ ಇಂದು ಸಾಧ್ಯವೆಂಬ ಸತ್ಯಾಂಶವನ್ನು ಮಗು ತಿಳಿಯುವಾಗ ಈ ಪಾಠಭಾಗ ಅದರ ಉದ್ದೇಶವನ್ನು ತಲುಪುವುದು.

## ಭೂಮಾಹಿತಿ ವ್ಯವಸ್ಥೆಯ ಪ್ರಯೋಜನಗಳು

GIS ನ ಪ್ರಯೋಜನಗಳನ್ನು ಕ್ರೋಡೀಕರಿಸುವಾಗ ಅವುಗಳನ್ನು ಮಕ್ಕಳಿಂದಲೇ ಸಂಗ್ರಹಿಸಲು ಪ್ರಯತ್ನಿಸಬೇಕು. ಈ ಮೂಲಕ ಈ ಪಾಠಭಾಗವನ್ನು ಅವಿಷ್ಕರಿಸಿದ ರೀತಿಯು ಎಷ್ಟರ ಮಟ್ಟಿಗೆ ಯಶಸ್ವಿಯಾಯಿತು ಎಂದು ಸ್ವಯಂ ಮೌಲ್ಯ ನಿರ್ಣಯ ಮಾಡಲು ಅಧ್ಯಾಪಕರಿಗೆ ಸಂದರ್ಭ ಲಭಿಸುವುದು.

ಭೂಮಾಹಿತಿ ವ್ಯವಸ್ಥೆಗೆ ಸಂಬಂಧಿಸಿ ಕೆಳಗೆ ನೀಡಿರುವ ಮಾಹಿತಿಗಳನ್ನು ಸಹ ಮಕ್ಕಳಿಗೆ ತಿಳಿಸಬಹುದಾಗಿದೆ.

- ಸ್ಥಳ ವಿವರ, ಭೂಸ್ವರೂಪ, ದಾತುಗಳ ಮೂಲಗಳು, ಭೂವಿನಿಯೋಗ, ಬಂಜರು ಭೂಮಿ, ವನಭೂಮಿಗಳು, ಮಣ್ಣು ರಸ್ತೆ ಎಂಬಿವುಗಳ ಮಾಹಿತಿಗಳನ್ನು ಕಂಪ್ಯೂಟರ್‌ನಲ್ಲಿ ಸಂಗ್ರಹಿಸಬಹುದು.
- ಬಂಜರು ಭೂಮಿಯ ಅಭಿವೃದ್ಧಿ ಹಾಗೂ ಭೂ ವಿನಿಯೋಗಗಳಿಗೆ GIS ನ್ನು ಉಪಯೋಗಿಸಬಹುದು.

- ದೂರ ಸಂವೇದನೆಯನ್ನು ಹಾಗೂ GIS ನ್ನು ಉಪಯೋಗಿಸಿ ಪರಿಸರ ಸಂರಕ್ಷಣೆಗಾಗಿರುವ ಮಾರ್ಗಗಳನ್ನು ಕಂಡುಕೊಳ್ಳಬಹುದು.

ನಗರ ಯೋಜನೆ, ರೈಲ್ವೇ, ಟೆಲಿಫೋನ್, ಪ್ರಾಕೃತಿಕ ದುರಂತ, ಚಟುವಟಿಕೆಗಳು, ಟ್ರಾಫಿಕ್, ಯೋಜನೆ ಮೊದಲಾದ ವಲಯಗಳಲ್ಲಿ GIS ನ ಸೇವೆ ಬಹಳ ಕಿರಿದಾದುದು.

ಸೆಟಲೈಟ್ ಚಿತ್ರಗಳು ಹಾಗೂ GIS ಸಂಜ್ಞೆಗಳನ್ನು ಉಪಯೋಗಿಸಿ ದುರಂತ ವಲಯಗಳನ್ನು ಕಂಡು ಹಿಡಿಯಲು ಮತ್ತು ಸಹಾಯವನ್ನು ಒದಗಿಸಲು ಸಾಧ್ಯವಾಗುವುದು.

## ಉಪಗ್ರಹಾಧಾರಿತ ಸ್ಥಾನ ನಿರ್ಣಯ ವ್ಯವಸ್ಥೆಗಳು

ಮಾನವ ಜೀವನದಲ್ಲಿ ಬಹಳ ಪ್ರಯೋಜನಕಾರಿಯಾದ ತಂತ್ರಜ್ಞಾನ ಉಪಾಧಿಯು ಉಪಗ್ರಹಾಧಾರಿತ ಸ್ಥಾನ ನಿರ್ಣಯ ವ್ಯವಸ್ಥೆಯಾಗಿದೆ. ಈ ವಲಯವು ಹೆಚ್ಚಿನ ಮಕ್ಕಳಿಗೆ ಸುಪರಿಚಿತವಾಗಿರುವುದು. ವಾಹನಗಳಲ್ಲಿ ಹಾಗೂ ಫೋನುಗಳಲ್ಲಿರುವ ಉಪಗ್ರಹಾಧಾರಿತ ಸ್ಥಾನ ನಿರ್ಣಯ.

## ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ

ಒಂದು ವಸ್ತುವಿನ ಸ್ಥಾನ, ಎತ್ತರ, ಸಮಯ ಎಂಬಿವುಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುವ ಒಂದು ಉಪಾಧಿ. ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ ಎಂಬ ಆಶಯವಾಗಿದೆ. ಆಶಯದ ಸ್ಪಷ್ಟತೆಗಾಗಿ ಉದಾಹರಣೆಗಳನ್ನು ನೀಡುವುದು ಹೆಚ್ಚು ಪ್ರಯೋಜನಕಾರಿಯಾಗಬಹುದು.

ಒಬ್ಬ ವ್ಯಕ್ತಿ GPS ಉಪಕರಣದೊಂದಿಗೆ ಒಂದು ಕಟ್ಟಡದ ಮೆಟ್ಟಲುಗಳನ್ನೇರುತ್ತಿರುವನು ಎಂದು ಭಾವಿಸಿರಿ. ಆ ವ್ಯಕ್ತಿ ಪ್ರತಿಯೊಂದು ಮೆಟ್ಟಲಿಗಳನ್ನೇರುತ್ತಿರುವಾಗ ಇರುವ ಎತ್ತರ ವ್ಯತ್ಯಾಸವನ್ನು GPS ಉಪಕರಣವು ದಾಖಲಿಸುವುದು. ಕಟ್ಟಡವಿರುವ ಎತ್ತರ ಅಥವಾ ಬೆಟ್ಟ ಪ್ರದೇಶದ ಎತ್ತರವನ್ನು ಬಹಳ ನಿಖರವಾಗಿ ಮತ್ತು ಸುಲಭವಾಗಿ ಈ ಉಪಕರಣದ ಸಹಾಯದಿಂದ ಕಂಡುಕೊಳ್ಳಬಹುದು. ಒಂದು ವಿಮಾನ ಎಷ್ಟು ಮೀಟರ್ ಎತ್ತರದಲ್ಲಿರುವುದು ಹಾಗೂ ಯಾವ ದಿಶೆಗೆ ಸಂಚರಿಸುತ್ತಿದೆ ಎಂಬ ಮಾಹಿತಿಯನ್ನು ದಾಖಲಿಸುವುದು ವಿಮಾನದಲ್ಲಿ ಅಳವಡಿಸಿದ GPS ಉಪಕರಣದ ಸಹಾಯದಿಂದಾಗಿದೆ.

GPS ನ ಪ್ರಯೋಜನಗಳನ್ನು ಸಹ ಮಕ್ಕಳ ಗಮನಕ್ಕೆ ತರಬಹುದು.

1. ರಸ್ತೆ ಸಾರಿಗೆ–ವಾಹನದ ಸ್ಥಾನ, ಸಂಚಾರದ ದಿಕ್ಕು ಇತ್ಯಾದಿ
2. ವ್ಯೋಮಯಾನ
3. ಸಮುದ್ರ ಸಾರಿಗೆ
4. ಸುರಕ್ಷೆ : ಬೆಲೆ ಬಾಳುವ ವಸ್ತುಗಳ ಸಾಗಾಟದ ಸಾರಿಗೆಗೆ ಅವುಗಳ ಸ್ಥಾನ ನಿರ್ಣಯಿಸಲು
   : ಗಣ್ಯ ವ್ಯಕ್ತಿಗಳ ವಾಹನ ವ್ಯೂಹ ಸಂಚರಿಸಲಿರುವ ಮಾರ್ಗವನ್ನು ಮುಂಚಿತವಾಗಿ ನಿಶ್ಚಯಿಸಲು ನಿರೀಕ್ಷಣೆ ಮಾಡಲು – ಇತ್ಯಾದಿಗಳಿಗೆ.
   : ಸರ್ವೇ, ಭೂಪಟ ನಿರ್ಮಾಣ ವಾರ್ತಾ ವಿನಿಮಯ ಮೊದಲಾದವುಗಳಿಗೆ

ಒಂದು GPS ಉಪಕರಣವನ್ನು ಖರೀದಿಸಿ ಬಳಸಿಕೊಂಡು ಪಾಠಭಾಗದ ವಿನಿಮಯವನ್ನು ಸಮಾಜವಿಜ್ಞಾನ ಪ್ರಯೋಗಾಲಯದಲ್ಲಿರಿಸಿ ಅದನ್ನು ಫಲಪ್ರದಗೊಳಿಸಬಹುದು.

## ? ಮೌಲ್ಯಮಾಪನ ಪ್ರಶ್ನೆಗಳು


- ದೂರ ಸಂವೇದನೆಗೆ ಸಂಬಂಧಿಸಿದ ಕೆಲವು ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ. ಪ್ರತಿಯೊಂದು ಮಾಹಿತಿಯು ಏನನ್ನು ಸೂಚಿಸುತ್ತದೆ ಎಂದು ಬರೆಯಿರಿ. (ಮಾದರಿಯನ್ನು ಪರಿಗಣಿಸಬೇಕು.)
  a. ವಿಮಾನ ಮೇಲಕ್ಕೇರಲು ಹಾಗೂ ಕೆಳಕ್ಕಿಳಿಯಲು ವಿಶಾಲವಾದ ಸ್ಥಳದ ಅಗತ್ಯವಿದೆ.
  b. ಓವರ್‌ಲೇಪಿನಿಂದೊಡಗೂಡಿದ ಛಾಯಾಚಿತ್ರಗಳು.
  c. ಸಂಚಾರ ಪಥವು ಭೂಮಿಯಿಂದ ಸುಮಾರು 36000 ಕಿಲೋ ಮೀಟರ್ ಎತ್ತರದಲ್ಲಿ
  d. ಒಂದು ಪ್ರದೇಶದ ಆವರ್ತಿತ ಮಾಹಿತಿ ಸಂಗ್ರಹ.

  ಮಾದರಿ :

  a. ವ್ಯೋಮ ದೂರ ಸಂವೇದನೆಯ ಕೊರತೆಗಳನ್ನು ಸೂಚಿಸುತ್ತದೆ.
- ಭೂಸ್ಥಿರ ಉಪಗ್ರಹಗಳು ಹಾಗೂ ಸೌರಸ್ಥಿರ ಉಪಗ್ರಹಗಳನ್ನು ಆಧಾರವಾಗಿರಿಸಿ ಪಟ್ಟಿ ಪೂರ್ತಿ ಮಾಡಿರಿ.

| | **ಭೂಸ್ಥಿರ ಉಪಗ್ರಹ** | **ಸೌರಸ್ಥಿರ ಉಪಗ್ರಹ** |
|---|---|---|
| ಸಂಚಾರದ ಪಥ | | |
| ಸಂಚಾರದ ಪ್ರತ್ಯೇಕತೆ | | |
| ಉಪಯೋಗ | | |
| ವಿಶೇಷತೆಗಳು | | |

- ಉಪಗ್ರಹ ಛಾಯಾಚಿತ್ರಗಳನ್ನು ತಯಾರಿಸುವುದರಲ್ಲಿ ಸ್ಪೆಕ್ಟ್ರಲ್ ವಿಶೇಷತೆಗಳು ಹಾಗೂ ಸ್ಪೇಶಿಯಲ್ ರೆಸಲ್ಯೂಶನ್‌ಗಳು ವಹಿಸುವ ಪಾತ್ರವನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸಿರಿ.
- ಕೆಳಗೆ ಸೂಚಿಸಿರುವ ವಲಯಗಳಲ್ಲಿ ಉಪಗ್ರಹ ದೂರ ಸಂವೇದನೆ ಹಾಗೂ ಭೂಮಾಹಿತಿ ವ್ಯವಸ್ಥೆಗಳಂತಹ ತಂತ್ರಜ್ಞಾನವನ್ನು ಯಾವ ರೀತಿಯಾಗಿ ಬಳಸಿಕೊಳ್ಳಬಹುದು?
  a. ಕೃಷಿ ವಲಯ
  b. ವನ ಪರಿಪಾಲನೆ
  c. ಭೂಪಟ ನಿರ್ಮಾಣ
- ಫ್ಲೋಚಾರ್ಟಿನಲ್ಲಿ ಪೂರ್ತಿಗೊಳಿಸಿದ ಭಾಗಗಳನ್ನು ಪೂರ್ತಿಗೊಳಿಸಿರಿ.



## ಆಕರ ಗ್ರಂಥಗಳು


- Remote Sensing and its application - Narayan L. R. A
- GIS work book - Murai. S
- Introduction to Georgraphic Information System - Chong.K
- Introduction to Remote sensing- Compell . J.B



# 7

# ವೈವಿಧ್ಯಗಳ ಭಾರತ

ಮೇರು ಪರ್ವತಗಳು, ವಿಶಾಲವಾದ ಪೀಠಭೂಮಿಗಳು, ಸಮತಲಗಳು, ಉದ್ದಕ್ಕೆ ಚಾಚಿರುವ ಕರಾವಳಿಯಿಂದೊಡಗೂಡಿದ ಭೂಪ್ರಕೃತಿ ಹಾಗೂ ಪ್ರದೇಶಗಳು, ಕಾಲಗಳಿಗನುಸರಿಸಿ ಬದಲಾವಣೆ ಹೊಂದುವ ಹವಾಮಾನ ಎಂಬಿವುಗಳು ಒಟ್ಟು ಸೇರಿರುವ ವೈವಿಧ್ಯಪೂರ್ಣವಾದ ನಾಡಾಗಿದೆ ಭಾರತ. ಏಷ್ಯಾಖಂಡದಲ್ಲಿರುವುದಾದರೂ ಭಾರತವು ಏಷ್ಯಾದ ಇತರ ಪ್ರದೇಶಗಳಿಗಿಂತ ವಿಭಿನ್ನತೆಯನ್ನು ಹೊಂದಿದೆ. ಭಾರತದ ಉತ್ತರ ಭಾಗದಲ್ಲಿ ದೊಡ್ಡ ಗೋಡೆಯಂತಿರುವ ಹಿಮಾಲಯ ಪರ್ವತಶ್ರೇಣಿಗಳು ಮಧ್ಯೇಶ್ಯಾದ ಶೈತ್ಯ ಹವಾಮಾನದಿಂದ ಭಾರತವನ್ನು ಸಂರಕ್ಷಿಸುತ್ತದೆ. ಹಿಮಾಲಯ ಪರ್ವತ ಶ್ರೇಣಿ ಮತ್ತು ಸಮುದ್ರ ಭಾಗಗಳ ಪ್ರಭಾವವು ಭಾರತದ ಸ್ವಂತಿಕೆಯ ಸಂಸ್ಕೃತಿ ಹಾಗೂ ಹವಾಮಾನ ರೂಪುಗೊಳ್ಳಲು ಸಹಕಾರಿಯಾಗಿದೆ. ಕೃಷಿ ಆಧಾರಿತ ದೇಶವಾದ ಭಾರತದ ಬೆಳವಣಿಗೆ ಹಾಗೂ ಅಭಿವೃದ್ಧಿಯ ಆಧಾರವು ಇಲ್ಲಿನ ವೈವಿಧ್ಯತೆಯಿಂದೊಡಗೂಡಿದ ಭೂಪ್ರಕೃತಿ, ಹವಾಮಾನ, ಮಣ್ಣಿನ ವಿಧಗಳು ಹಾಗೂ ನದಿಗಳಾಗಿವೆ. ವಿಸ್ತೀರ್ಣದಲ್ಲಿ ಏಳನೆಯ ಸ್ಥಾನದಲ್ಲಿರುವ ಭಾರತದಲ್ಲಿ ವಿವಿಧ ಭಾಷೆಗಳು, ಮತಗಳು ಮತ್ತು ಆಚಾರಗಳೊಳಗೆ ಪ್ರಾದೇಶಿಕವಾದ ಭೌತಿಕ ಭಿನ್ನತೆಗಳಿದ್ದರೂ ಭಾರತದ ಸಂಸ್ಕೃತಿಯ ರೂಪುಗೊಳ್ಳುವಿಕೆ, ಮನ್ಸೂನ್ ಹವಾಮಾನ, ಸಾರಿಗೆ ಮತ್ತು ವಾರ್ತಾವಿನಿಮಯ ವ್ಯವಸ್ಥೆಗಳು ಭಾರತದಲ್ಲಿ ಏಕತೆಯನ್ನು ನೆಲೆ ನಿಲ್ಲಿಸಲು ಸಹಾಯಕವಾಗಿದೆ. ಈ ಆಶಯವನ್ನು ಸ್ಪಷ್ಟವಾಗಿ ಮಗುವಿಗೆ ತಲುಪಿಸುವುದರೊಂದಿಗೆ ಭಾರತದ ಅರಿವು ಮೂಡಿಸುವುದು ಹಾಗೂ ಭಾರತದ ಅಭಿವೃದ್ಧಿ ಮತ್ತು ಏಕತೆಯಲ್ಲಿ ಕ್ರಿಯಾತ್ಮಕವಾಗಿ ಪಾತ್ರ ವಹಿಸಲಿರುವ ಮನೋಭಾವ ಮಕ್ಕಳಲ್ಲಿ ಬೆಳೆಯುವುದು ಎಂಬೀ ಉದ್ದೇಶಗಳೊಂದಿಗೆ 'ವೈವಿಧ್ಯಗಳ ಭಾರತ', 'ಭಾರತದ ಸಂಪನ್ಮೂಲಗಳು' ಎಂಬ ಯೂನಿಟ್‌ಗಳನ್ನು ತಯಾರಿಸಿರುವುದು. ಭಾರತದಲ್ಲಿನ ವಿವಿಧ ಪ್ರಾಂತ್ಯಗಳ ಕುರಿತಾಗಿ ರಾಜಕೀಯ ಭೂಪಟದ ಸಹಾಯದೊಂದಿಗೆ ಸ್ಪಷ್ಟವಾದ ಅರಿವನ್ನು ನೀಡಿದ ಬಳಿಕ ಭಾರತದ ಭೌತಿಕ– ಸಾಂಸ್ಕೃತಿಕ ವಿಶೇಷತೆಗಳನ್ನು ಕಂಡುಕೊಳ್ಳಲು ಮಕ್ಕಳಿಗೆ ಸಂದರ್ಭವನ್ನುಂಟುಮಾಡಿಕೊಡಬೇಕು. ಪ್ರಪಂಚದ ಭೂಪಟ, ಭಾರತದ ರಾಜಕೀಯ ಭೂಪಟ, ಪ್ರಾಕೃತಿಕ ಭೂಪಟ, ನದಿಗಳ ಭೂಪಟ ಹಾಗೂ ಹವಾಮಾನ ಭೂಪಟ ಎಂಬಿವುಗಳನ್ನು ಕಡ್ಡಾಯವಾಗಿ ಈ ಪಾಠಭಾಗದ ವಿನಿಮಯದಲ್ಲಿ ಉಪಯೋಗಿಸಬೇಕು.

| ಯೂನಿಟ್ ಫ್ರೇಂ | 7. ವೈವಿಧ್ಯಗಳ ಭಾರತ | |
|---|---|---|
| **ಆಶಯಗಳು/ತಿಳುವಳಿಕೆಗಳು** | **ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು** | **ಕಲಿಕಾ ಸಾಧನೆಗಳು** |
| • ಭಾರತದ ಸ್ಥಾನ<br>• ಭಾರತ–ಭೂಪ್ರಕೃತಿ<br>• ಭಾರತ–ನದಿಗಳು<br>• ಭಾರತ–ಮಣ್ಣಿನ ವಿಧಗಳು<br>• ಭಾರತ–ಹವಾಮಾನ | • ಅಟ್ಲಾಸಿನ ಸಹಾಯದೊಂದಿಗೆ ಭಾರತದ ಸ್ಥಾನ ಮತ್ತು ನೆರೆ ರಾಷ್ಟ್ರಗಳನ್ನು ಕಂಡುಕೊಳ್ಳುವುದು.<br>• ಭೂಪಟಗಳಿಂದ ಭಾರತದ ಪ್ರಾಕೃತಿಕ ವಿಶೇಷತೆಗಳನ್ನು ಕಂಡುಕೊಳ್ಳುವುದು.<br>• ಉತ್ತರದ ಮಹಾಬಯಲಿನ ಪ್ರಭಾವವನ್ನು ಆಧಾರವಾಗಿಟ್ಟುಕೊಂಡು ಸೆಮಿನಾರ್.<br>• ವಿವಿಧ ಮಾಹಿತಿಗಳು ಮತ್ತು ಭಾರತದ ಭೂಪಟದ ಸಹಾಯದಿಂದ ಭಾರತದ ಪ್ರಧಾನ ನದಿಗಳ ವಿಶೇಷತೆಗಳನ್ನು ಪಟ್ಟಿ ಮಾಡುವರು.<br>• ವೈವಿಧ್ಯಮಯವಾದ ಭೂಪ್ರಕೃತಿಯ ವಿಶೇಷತೆಗಳ ವಿವರಣೆಗಳಿಂದ ವ್ಯತ್ಯಸ್ತ ಮಣ್ಣಿನ ವಿಧವನ್ನು ಕಂಡುಕೊಳ್ಳುವುದು.<br>• ಚಿತ್ರಗಳು, ವಿವರಣೆಗಳು, ಭೂಪಟಗಳು ಎಂಬಿವುಗಳ ಸಹಾಯದೊಂದಿಗೆ ಭಾರತದ ಹವಾಮಾನ ಹಾಗೂ ಮಳೆಯ ವಿತರಣೆಯನ್ನು ವಿಶ್ಲೇಷಣೆ ಮಾಡುವುದು. | • ಭಾರತದ ವೈವಿಧ್ಯಮಯವಾದ ಭೂ ಸ್ವರೂಪದ ವಿಶೇಷತೆಗಳನ್ನು ತಿಳಿದುಕೊಂಡು ವಿಶ್ಲೇಷಿಸುವುದು.<br>• ಭಾರತದ ನದಿಗಳನ್ನು ಹಿಮಾಲಯದ ನದಿಗಳು ಮತ್ತು ಪರ್ಯಾಯ ದ್ವೀಪದ ನದಿಗಳೆಂದು ವರ್ಗೀಕರಿಸಿ ಪಟ್ಟಿ ಮಾಡುವರು.<br>• ಭಾರತದ ಹವಾಮಾನದ ಮೇಲೆ ಹಿಮಾಲಯ ಪರ್ವತ ಸಾಲುಗಳು ಮತ್ತು ಮನ್ಸೂನು ಮಾರುತಗಳು ಬೀರುವ ಪ್ರಭಾವಗಳನ್ನು ವಿಶದೀಕರಿಸುವರು.<br>• ಭಾರತದ ಋತುಗಳ ವಿಶೇಷತೆಗಳನ್ನು ವಿವರಿಸುವರು.<br>• ಹವಾಮಾನ ಮತ್ತು ಭೂಸ್ವರೂಪಗಳೊಳಗಿನ ವೈವಿಧ್ಯಗಳು, ಮಣ್ಣಿನ ವಿಧ ಹಾಗೂ ಸಸ್ಯಜಾಲಗಳ ಮೇಲೆ ಬೀರುವ ಪ್ರಭಾವವನ್ನು ವಿಶ್ಲೇಷಿಸುವರು. |

## ಅಧ್ಯಾಯದೆಡೆಗೆ.....

ಭಾರತದ ಸ್ಥಾನ, ಪ್ರಾಂತ್ಯಗಳು, ಭೂಪ್ರಕೃತಿ, ನದಿಗಳು, ಹವಾಮಾನ, ಮಣ್ಣಿನ ವಿಧಗಳು, ಮಳೆಯ ವಿತರಣೆ, ನೈಸರ್ಗಿಕ ಸಸ್ಯಜಾಲ ಎಂಬಿವುಗಳ ಬಗ್ಗೆ ಹಿಂದಿನ ತರಗತಿಗಳಲ್ಲಿ ಮಕ್ಕಳಿಗೆ ಸಾಮಾನ್ಯ ತಿಳುವಳಿಕೆಯು ಲಭಿಸಿರುವುದು. ಭಾರತದ ಭೌತಿಕ ವಿಶೇಷತೆಗಳ ಕುರಿತು ಅದರಲ್ಲೂ ಪ್ರಧಾನವಾಗಿ ಭೂಪ್ರಕೃತಿ ನದಿ ವ್ಯೂಹಗಳು, ಮಣ್ಣಿನ ವಿಧ ಹವಾಮಾನ ಎಂಬಿವುಗಳ ಕುರಿತು ಮಕ್ಕಳಲ್ಲಿ ಸ್ಪಷ್ಟವಾದ ತಿಳುವಳಿಕೆಯ ನ್ನುಂಟುಮಾಡುವ ಉದ್ದೇಶದೊಂದಿಗೆ 'ವೈವಿಧ್ಯಗಳ ಭಾರತ' ಎಂಬ ಈ ಯೂನಿಟ್‌ನ್ನು ತಯಾರಿಸಿರುವುದು. ಕಲಿಕಾ ಸೌಕರ್ಯಕ್ಕಾಗಿ ಈ ಯೂನಿಟ್‌ನ್ನು ಐದು ಉಪಯೂನಿಟುಗಳಾಗಿ ವಿಭಜಿಸಬಹುದಾಗಿದೆ.

- ಭಾರತದ ಸ್ಥಾನ
- ಭಾರತ–ಭೂಪ್ರಕೃತಿ
- ಭಾರತ–ನದಿಗಳು
- ಭಾರತ–ಮಣ್ಣಿನ ವಿಧಗಳು
- ಭಾರತ–ಹವಾಮಾನ

- ಭಾರತ ಉಪಖಂಡ ಹಾಗೂ ಭಾರತದ ಉಪದ್ವೀಪ
- ಭಾರತದ ನೆರೆ ರಾಷ್ಟ್ರಗಳು

ಭಾರತದ ಸ್ಥಾನದ ಕುರಿತಾಗಿರುವ ಸಾಮಾನ್ಯ ಮಾಹಿತಿಗಳನ್ನು ಮಕ್ಕಳು ತಿಳಿದಿರಬೇಕಾದುದು ಅತ್ಯಗತ್ಯವಾಗಿದೆ. ಇದಕ್ಕಾಗಿ ಕೆಳಗೆ ನೀಡಿರುವ 'ಭಾರತ–ಸ್ಥಾನ' ಎಂಬ ಭೂಪಟವನ್ನು ಮಕ್ಕಳಿಗೆ ಪರಿಚಯಿಸುವುದರೊಂದಿಗೆ ಭಾರತದ ಅಕ್ಷಾಂಶ ಮತ್ತು ರೇಖಾಂಶೀಯ ಸ್ಥಾನ, ಭೂವಿಸ್ತೀರ್ಣ, ಭಾರತದೊಂದಿಗೆ ಹೊಂದಿಕೊಂಡಿರುವ ರಾಷ್ಟ್ರಗಳು, ಸಮುದ್ರ ಭಾಗಗಳು ಎಂಬಿವುಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆಗಳನ್ನು ನೀಡಬೇಕು.


**ಉಪಖಂಡ ಹಾಗೂ ಉಪದ್ವೀಪ**

### ಭಾರತದ ಸ್ಥಾನ

ಯೂನಿಟ್‌ನ ಆರಂಭದಿಂದ ಭಾರತದ ನೆರೆರಾಷ್ಟ್ರಗಳನ್ನು ಅಟ್ಲಾಸಿನ ಸಹಾಯದೊಂದಿಗೆ ಕಂಡುಕೊಳ್ಳಲಿರುವ ಚಟುವಟಿಕೆಯ ವರೆಗಿನ ಪಾಠಭಾಗವಾಗಿದೆ ಈ ಉಪಯೂನಿಟಿನಲ್ಲಿ ರುವುದು. ಪಾಠಭಾಗವು ಉದ್ದೇಶಿಸಿದ ತಿಳುವಳಿಕೆಗಳು ಪೂರ್ಣವಾಗಿ ಲಭ್ಯವಾಗಲು ಚರ್ಚೆ, ಭೂಪಟ ವಿಶ್ಲೇಷಣೆ ಎಂಬೀ ಚಟುವಟಿಕೆಗಳ ಮೂಲಕ ಹೆಚ್ಚಿನ ಮಾಹಿತಿ ಸಂಗ್ರಹಿಸಲು ಮಕ್ಕಳನ್ನು ಪ್ರೇರೇಪಿಸಬೇಕು.

ಈ ಉಪಯೂನಿಟಿನ ಮೂಲಕ ಮಕ್ಕಳಲ್ಲಿ ರೂಪುಗೊಳ್ಳಬೇಕಾದ ಆಶಯಗಳು ಹಾಗೂ ತಿಳುವಳಿಕೆಗಳು ಈ ಕೆಳಗೆ ನೀಡಿರುವಂತಿದೆ.

- ಭಾರತದ ಅಕ್ಷಾಂಶ–ರೇಖಾಂಶ ಸ್ಥಾನ




ಭಾರತ

ಒಂದು ಭೂಖಂಡದಿಂದ ಸ್ಪಷ್ಟವಾಗಿ ಬೇರ್ಪಟ್ಟಿರುವುದರೊಂದಿಗೆ ಭೌಗೋಳಿಕವಾಗಿ ಬಹಳ ಪ್ರಾಮುಖ್ಯತೆ ಹೊಂದಿರುವ ದೊಡ್ಡ ಭೂಭಾಗಗಳನ್ನು ಉಪಖಂಡಗಳೆಂದು ಕರೆಯುತ್ತಾರೆ. ಏಷ್ಯಾಖಂಡದ ದಕ್ಷಿಣಭಾಗದಲ್ಲಿರುವ ಭಾರತ ಉಪಖಂಡವನ್ನು ಏಷ್ಯಾಖಂಡದಿಂದ ಬೇರ್ಪಡಿಸುವುದು ಹಿಮಾಲಯ ಪರ್ವತಗಳಾಗಿವೆ. ಭಾರತ ಉಪಖಂಡದಲ್ಲಿ ಭಾರತ ಮಾತ್ರವಲ್ಲದೆ ಪಾಕಿಸ್ತಾನ, ನೇಪಾಳ, ಭೂತಾನ್, ಬಾಂಗ್ಲಾದೇಶ್, ಎಂಬೀ ರಾಷ್ಟ್ರಗಳಿವೆ.

ಭೂಭಾಗವು ಸಮುದ್ರಕ್ಕೆ ತಳ್ಳಲ್ಪಟ್ಟಿರುವಂತೆಯೂ, ಮೂರು ಭಾಗಗಳಿಂದ ಸಮುದ್ರವು ಸುತ್ತುವರಿದಿರುವ ಭೂಭಾಗವನ್ನು ಉಪದ್ವೀಪವೆಂದು ನಿರ್ವಚಿಸಬಹುದು. ಹಿಂದೂ ಮಹಾಸಾಗರಕ್ಕೆ ತಾಗಿ ನಿಂತಿರುವಂತಹ ಭಾರತದ ದಕ್ಷಿಣ ಭಾಗವು ಭಾರತದ ಉಪದ್ವೀಪವಾಗಿದೆ.

## ನೆರೆ ದೇಶಗಳು

ಭಾರತದ ನೆರೆ ರಾಷ್ಟ್ರಗಳ ಕುರಿತಾಗಿ ಸ್ಪಷ್ಟವಾದ ತಿಳುವಳಿಕೆಯನ್ನು ಮಕ್ಕಳಲ್ಲಿ ಉಂಟುಮಾಡಲಿಕ್ಕಾಗಿ ಪಾಠಭಾಗದಲ್ಲಿ ಚಟುವಟಿಕೆಯನ್ನು ನೀಡಿರುವುದು. ಅಟ್ಲಾಸ್ ಅಥವಾ ಭಿತ್ತಿ ಭೂಪಟ (ಭಾರತ– ರಾಜಕೀಯ ಭೂಪಟ)ದ ಸಹಾಯದಿಂದ ಈ ಚಟುವಟಿಕೆಯನ್ನು ನಡೆಸಲು ಮಕ್ಕಳಲ್ಲಿ ಹೇಳಬೇಕು. ಮಕ್ಕಳು ತಲುಪಬೇಕಾದ ನಿಗಮನಗಳು ಕೆಳಗೆ ನೀಡಿದಂತಿರಬೇಕು.

- ಭಾರತ ಉಪಖಂಡದಲ್ಲಿರುವ ದೇಶಗಳು– ಭಾರತ, ಪಾಕಿಸ್ತಾನ್, ನೇಪಾಳ, ಭೂತಾನ್, ಬಾಂಗ್ಲಾದೇಶ.
- ಭಾರತದೊಂದಿಗೆ ಭೂ ಮೇರೆಗಳನ್ನು ಹಂಚಿಕೊಂಡಿರುವ ದೇಶಗಳು–ಪಾಕಿಸ್ತಾನ, ಅಫಘಾನಿಸ್ತಾನ, ಚೈನಾ, ನೇಪಾಳ, ಭೂತಾನ್, ಬಾಂಗ್ಲಾದೇಶ, ಮ್ಯಾನ್ಮಾರ್.
- ಭಾರತದೊಂದಿಗೆ ಸಮುದ್ರ ಮೇರೆಗಳನ್ನು ಹಂಚಿಕೊಂಡಿರುವ ದೇಶಗಳು–ಶ್ರೀಲಂಕಾ, ಇಂಡೋನೇಶ್ಯಾ, ಮಾಲಿದ್ವೀಪ.

ಭಾರತದ ಭೌತಿಕ– ಸಾಂಸ್ಕೃತಿಕ ವಿಶೇಷತೆಗಳ ಕುರಿತಾಗಿರುವ ಅಧ್ಯಾಯಗಳನ್ನು ವಿನಿಮಯ ಮಾಡಲು ಭಾರತದ ಪ್ರಾಂತ್ಯಗಳು ಅವುಗಳ ರಾಜಧಾನಿಗಳು, ಕೇಂದ್ರಾಡಳಿತ ಪ್ರದೇಶಗಳು, ಅವುಗಳ ರಾಜಧಾನಿಗಳು ಎಂಬಿವುಗಳ ಕುರಿತಾಗಿ ಮಕ್ಕಳಿಗೆ ಸ್ಪಷ್ಟವಾದ ತಿಳುವಳಿಕೆ ಲಭಿಸಬೇಕಾಗಿದೆ. ಇದಕ್ಕಾಗಿ ಕೆಳಗೆ ನೀಡಿರುವ ವಿವರಣೆ ಮತ್ತು ಭೂಪಟವನ್ನು ಉಪಯೋಗಿಸಬಹುದಲ್ಲವೆ.

ಜಾಗತಿಕ ರಾಷ್ಟ್ರಗಳ ವಿಸ್ತೀರ್ಣದಲ್ಲಿ ಏಳನೇ ಸ್ಥಾನದಲ್ಲಿರುವ ಭಾರತವನ್ನು 29 ಪ್ರಾಂತ್ಯಗಳಾಗಿಯೂ, ಆರು ಕೇಂದ್ರಾಡಳಿತ ಪ್ರದೇಶಗಳು ಮತ್ತು ಒಂದು ರಾಷ್ಟ್ರೀಯ ರಾಜಧಾನಿ ಪ್ರದೇಶವಾಗಿಯೂ ವಿಂಗಡಿಸಲಾಗಿದೆ. 2014 ಜೂನ್ ಎರಡರಂದು 29ನೇ ಪ್ರಾಂತ್ಯವಾಗಿ ತೆಲಂಗಾನವು ಜಾರಿಗೆ ಬಂತು. ತೆಲಂಗಾನದ ರಾಜಧಾನಿಯು ಹೈದರಾಬಾದ್ ಆಗಿದೆ.

ಭಾರತದ ಆರು ಕೇಂದ್ರಾಡಳಿತ ಪ್ರದೇಶಗಳು, ರಾಷ್ಟ್ರೀಯ ರಾಜಧಾನಿ ಪ್ರದೇಶ ಮತ್ತು ಅವುಗಳ ರಾಜಧಾನಿಗಳನ್ನು ಕೆಳಗೆ ನೀಡಲಾಗಿದೆ.

| ಕೇಂದ್ರಾಡಳಿತ ಪ್ರದೇಶ | ರಾಜಧಾನಿ |
|---|---|
| • ಚಂಡೀಘಡ | • ಚಂಡೀಘಡ |
| • ದಾಮನ್ ದಿಯು | • ದಾಮನ್ |
| • ದಾದ್ರಾ ನಗರ್ ಹಲೇಲಿ | • ಸಿಲ್‌ವಾಸ |
| • ಪೊಂಡಿಚೇರಿ | • ಪೊಂಡಿಚೇರಿ |
| • ಲಕ್ಷದ್ವೀಪ | • ಕವರತ್ತಿ |
| • ಅಂಡಮಾನ್ ನಿಕೋಬಾರ್ | • ಪೋರ್ಟ್‌ಬ್ಲೇಯರ್ |

| ರಾಷ್ಟ್ರೀಯ ರಾಜಧಾನಿ ಪ್ರದೇಶ | ರಾಜಧಾನಿ |
|---|---|
| • ದೆಹಲಿ | • ನವದೆಹಲಿ |

## ಭಾರತ – ಭೂಪ್ರಕೃತಿ


ಅಧ್ಯಾಯದಲ್ಲಿರುವ "ಹಿಮವಂತನ ಭೂಮಿಯಿಂದ" ಆರಂಭಿಸಿ 'ನಮ್ಮ ಸ್ವಂತ ದ್ವೀಪಗಳಿಗೆ' ವರೆಗಿನ ಪಾಠಭಾಗವನ್ನು (ಮಣ್ಣಿನ ವಿಧಗಳು ಹಾಗೂ ನದಿಗಳನ್ನು ಹೊರತುಪಡಿಸಿ) ಈ ಉಪಯೂನಿಟಿನ ಮಾಹಿತಿ ಸಂಗ್ರಹಕ್ಕಾಗಿ ಮಕ್ಕಳು ಉಪಯೋಗಿಸಬೇಕು. ಈ ಉಪಯೂನಿಟ್‌ನಲ್ಲಿ ಮಕ್ಕಳು ಆರ್ಜಿಸಿಕೊಳ್ಳಬೇಕಾದ ಆಶಯಗಳನ್ನು ಹಾಗೂ ತಿಳುವಳಿಕೆಗಳನ್ನು ಕೆಳಗೆ ಕೊಡಲಾಗಿದೆ.

- ಭಾರತದ ಭೌಗೋಳಿಕ ವಿಶೇಷತೆಗಳು, ಪ್ರಾಕೃತಿಕ ವಿಭಾಗಗಳು
- ಉತ್ತರ ಪರ್ವತ ವಲಯ –
  ವಿಶೇಷತೆಗಳು–ಉಪವಿಭಾಗಗಳು–ಒಳಗೊಂಡಿರುವ ಪ್ರಾಂತ್ಯಗಳು
- ಪರ್ಯಾಯ ದ್ವೀಪದ ಪೀಠಭೂಮಿ –
  ವಿಶೇಷತೆಗಳು – ಉಪವಿಭಾಗ – ಒಳಗೊಂಡಿರುವ ಪ್ರಾಂತ್ಯಗಳು
- ಕರಾವಳಿ ಬಯಲು –
  ವಿಶೇಷತೆಗಳು – ವಿಭಾಗ ಗಳು – ಹೋಲಿಕೆ, ಒಳಗೊಂಡಿರುವ ಪ್ರಾಂತ್ಯ ಗಳು.
- ದ್ವೀಪಗಳು –
  ವಿಶೇಷತೆಗಳು ಒಳಗೊಂಡಿರುವ ಸಾಗರ ಪ್ರದೇಶಗಳು

### ಹಿಮಾವೃತ ಭೂಮಿಯಿಂದ (ಉತ್ತರ ಪರ್ವತ ವಲಯ)

ಉತ್ತರ ಪರ್ವತ ವಲಯ ಹಾಗೂ ಅವುಗಳ ಉಪವಿಭಾಗಗಳ ಕುರಿತಾಗಿ ಸವಿವರವಾಗಿ ಪಾಠಭಾಗದಲ್ಲಿ ಪ್ರತಿಪಾದಿಸಲಾಗಿದೆ. ಇವುಗಳ ಬಗ್ಗೆ ಇರುವ ತಿಳುವಳಿಕೆಯನ್ನು ಮಕ್ಕಳಲ್ಲಿ ದೃಢಗೊಳಿಸಲು ವಿಶೇಷವಾಗಿ ಗಮನಿಸಬೇಕು.

ಪಟ್ಟಿಯಲ್ಲಿ (ಪಟ್ಟಿ 8.1) ನೀಡಿರುವ ಉತ್ತರ ಪರ್ವತ ವಲಯದಲ್ಲಿರುವ ಪರ್ವತ ಶ್ರೇಣಿಗಳ ಹೆಸರುಗಳನ್ನೂ ನೀಡಿರುವ ಭೂಪಟದ (ಚಿತ್ರ 8.1) ಸೂಕ್ತವಾದ ಸ್ಥಳದಲ್ಲಿ ಗುರುತಿಸುವ ಒಂದು ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಈ ಚಟುವಟಿಕೆಯನ್ನು ಎಲ್ಲಾ ಮಕ್ಕಳು ಮಾಡಿರುವರು ಎಂದು ದೃಢಗೊಳಿಸಬೇಕು. ಪೂರ್ತಿಗೊಳಿಸಿರುವ ಭೂಪಟವನ್ನು ಕೆಳಗೆ ನೀಡಲಾಗಿದೆ.




ಉತ್ತರ ಪರ್ವತ ವಲಯ

ಯಾವೆಲ್ಲಾ ಪ್ರಾಂತ್ಯಗಳಲ್ಲಿ ಪೂರ್ವದ ಪರ್ವತ ಸಾಲುಗಳಿರುವುದೆಂದು ಭೂಪಟದ ಸಹಾಯದೊಂದಿಗೆ ಕಂಡುಕೊಳ್ಳಲಿರುವ ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಇದಕ್ಕಾಗಿ ಮಕ್ಕಳಿಗೆ ಉತ್ತರ ಪರ್ವತ ವಲಯದ ಭೂಪಟ ಮತ್ತು ಭಾರತದ ರಾಜಕೀಯ ಭೂಪಟವನ್ನು ವಿಶ್ಲೇಷಣೆಗಾಗಿ ನೀಡಬೇಕು. ಮಕ್ಕಳ ಕಂಡುಕೊಳ್ಳುವಿಕೆಗಳು ಕೆಳಗೆ ನೀಡಿರುವಂತಿರಬೇಕು.

**ಪೂರ್ವದ ಪರ್ವತ ಸಾಲುಗಳು**

- ಪಟ್‌ಕಾಯಿ ಭೂಂ – ನಾಗಾಲೇಂಡ್
- ನಾಗಾ ಬೆಟ್ಟಗಳು – ನಾಗಾಲೇಂಡ್
- ಗಾರೊ ಖಾಸಿ, ಜಯಂತಿಯಾ ಬೆಟ್ಟಗಳು – ಮೇಘಾಲಯ
- ಮಿಜೋ ಬೆಟ್ಟಗಳು – ಮಿಸೋರಂ

ಇದೇ ರೀತಿಯಾಗಿ ಟ್ರಾನ್ಸ್ ಹಿಮಾಲಯ ಹಾಗೂ ಹಿಮಾಲಯ ಪರ್ವತ ವಿಭಾಗಗಳು ಒಳಗೊಂಡಿರುವ ಪ್ರಾಂತ್ಯಗಳು ಯಾವುದೆಂದು ಕಂಡುಕೊಳ್ಳಲಿರುವ ಚಟುವಟಿಕೆಯನ್ನು ಮಕ್ಕಳಿಗೆ ನೀಡಬಹುದು.

**ಟ್ರಾನ್ಸ್ ಹಿಮಾಲಯ**

- ಕಾರಕೋರಂ – ಜಮ್ಮು ಕಾಶ್ಮೀರ
- ಲಡಾಖ್ – ಜಮ್ಮು ಕಾಶ್ಮೀರ
- ಸಸ್ಕರ್ – ಜಮ್ಮು ಕಾಶ್ಮೀರ

**ಹಿಮಾಲಯ**

- ಹಿಮಾದ್ರಿ – ಜಮ್ಮು ಕಾಶ್ಮೀರ, ಹಿಮಾಚಲ, ಉತ್ತರಾಖಂಡ್, ಸಿಕ್ಕಿಂ, ಅರುಣಾಚಲ ಪ್ರದೇಶ.
- ಹಿಮಾಚಲ – ಜಮ್ಮು ಕಾಶ್ಮೀರ, ಹಿಮಾಚಲ, ಉತ್ತರಾಖಂಡ್, ಪಶ್ಚಿಮ ಬಂಗಾಳ
- ಸಿವಾಲಿಕ್ – ಜಮ್ಮು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ್, ಪಶ್ಚಿಮ ಬಂಗಾಳ.

ಉತ್ತರ ಪರ್ವತ ವಲಯದ ವಿಶೇಷತೆಗಳು, ಉಪವಿಭಾಗಗಳು ಹಾಗೂ ಅವುಗಳು ಒಳಗೊಂಡಿರುವ ಪ್ರಾಂತ್ಯಗಳ ಬಗ್ಗೆ ಮಗುವಿಗೆ ಸ್ಪಷ್ಟವಾದ ತಿಳುವಳಿಕೆ ಲಭಿಸಿದೆ ಎಂದು ದೃಢಪಡಿಸಬೇಕು. ಪಾಠಭಾಗದ ಕೊನೆಯಲ್ಲಿ ನೀಡಿರುವ ಭಾರತದ ರೂಪರೇಷೆಯಲ್ಲಿ ಉತ್ತರದ ಪರ್ವತ ವಲಯದಲ್ಲಿರುವ ಪರ್ವತ

ಶ್ರೇಣಿಗಳನ್ನು ಹಾಗೂ ಬೆಟ್ಟ ಗುಡ್ಡಗಳನ್ನು ಗುರುತಿಸಲು ಹೇಳಬೇಕು. ಈ ಚಟುವಟಿಕೆಯನ್ನು ಎಲ್ಲಾ ಮಕ್ಕಳು ಮಾಡಿರುವರು ಎಂದು ಸಹ ದೃಢಪಡಿಸಬೇಕು.

### ಸಮತಲಗಳ ಮೂಲಕ (ಉತ್ತರದ ಮಹಾ ಬಯಲು)

ಉತ್ತರದ ಮಹಾಬಯಲನ್ನು ನಾಲ್ಕು ಉಪವಿಭಾಗಗಳಾಗಿ (ಪಂಜಾಬ್-ಹರ್ಯಾನ ಸಮತಲ, ರಾಜಸ್ತಾನದ ಮರಸ್ತಲೀಬಾಗರ್ ಸಮತಲ, ಗಂಗಾ ಸಮತಲ, ಅಸ್ಸಾಮಿನ ಬ್ರಹ್ಮಪುತ್ರ ಸಮತಲ) ವಿಭಾಗಿಸಲಾಗಿದೆ. ಉತ್ತರ ಸಮತಲದ ಸ್ಥಾನ ಹಾಗೂ ಅವು ಒಳಪಡುವ ಪ್ರಾಂತ್ಯಗಳನ್ನು ಭೂಪಟದ (ಚಿತ್ರ 8.3) ಸಹಾಯದೊಂದಿಗೆ ಕಂಡುಕೊಂಡು ಬರೆಯುವ ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಮಕ್ಕಳು ಕಂಡುಕೊಳ್ಳುವ ಉತ್ತರಗಳನ್ನು ಕೆಳಗೆ ನೀಡಿರುವಂತೆ ಕ್ರೋಡೀಕರಿಸಬೇಕು.

- ಉತ್ತರ ಪರ್ವತ ವಲಯಕ್ಕೆ ಹೊಂದಿಕೊಂಡು ಅದರ ದಕ್ಷಿಣ ಭಾಗದಲ್ಲಿ ಕಂಡುಬರುವ ಭೂ ವಿಭಾಗವಾಗಿದೆ ಉತ್ತರದ ಮಹಾಬಯಲು.
- ಉತ್ತರದ ಮಹಾಬಯಲಿನಲ್ಲಿ ಒಳಪಡುವ ಪ್ರಾಂತ್ಯಗಳಾಗಿವೆ.
    - ಪಶ್ಚಿಮ ಬಂಗಾಳ
    - ಬಿಹಾರ
    - ಉತ್ತರಪ್ರದೇಶ
    - ಹರಿಯಾಣ
    - ರಾಜಸ್ತಾನ್
    - ಆಸ್ಸಾಂ

ಉತ್ತರದ ಸಮತಲ ಪ್ರದೇಶಗಳಲ್ಲಿಯಲ್ಲದೆ ಭಾರತದ ಉಪದ್ವೀಪದ ನದಿ ತೀರಗಳು, ಡೆಲ್ಟಾ ಪ್ರದೇಶಗಳು ಹಾಗೂ ಕರಾವಳಿ ಪ್ರದೇಶಗಳಲ್ಲಿ ಮೆಕ್ಕಲು ಮಣ್ಣು ಕಂಡುಬರುತ್ತದೆ.

ಯಾವೆಲ್ಲಾ ಭೂ ಪ್ರಾಕೃತಿಕ ವಿಭಾಗಗಳೆಡೆಯಲ್ಲಾಗಿದೆ ಉತ್ತರದ ಮಹಾಬಯಲಿರುವುದು ಎಂದು ಅಟ್ಲಾಸನ್ನು ನಿರೀಕ್ಷಿಸಿ ಕಂಡುಕೊಳ್ಳಲಿರುವ ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ.

ಉತ್ತರದ ಸಮತಲವು ಇರುವುದು ಉತ್ತರದ ಪರ್ವತ ವಲಯ ಹಾಗೂ ಪರ್ಯಾಯ ದ್ವೀಪದ ಪೀಠಭೂಮಿಯ ಮಧ್ಯೆಯಾಗಿದೆ.

ಉತ್ತರದ ಪರ್ವತ ವಲಯದ ಸ್ಥಾನವನ್ನು ಪಾಠಪುಸ್ತಕದ ಕೊನೆ ಭಾಗದಲ್ಲಿ ನೀಡಿರುವ ಭಾರತದ ರೂಪುರೇಖೆಯಲ್ಲಿ ಗುರುತಿಸಿದಂತೆ ಉತ್ತರದ ಮಹಾಬಯಲಿನ ನಾಲ್ಕು ಉಪವಿಭಾಗಗಳ ಸ್ಥಾನವನ್ನು ಗುರುತಿಸಲು ಮಕ್ಕಳಲ್ಲಿ ಹೇಳಬೇಕು. ಈ ಚಟುವಟಿಕೆಯನ್ನು ಎಲ್ಲಾ ಮಕ್ಕಳು ಮಾಡಿರುವರು ಎಂದು ದೃಢಪಡಿಸಬೇಕು.

ಅತಿ ವಿಶಾಲವು ಸಮತಲವೂ ಆದ ಭೂ ಸ್ವರೂಪದ ವಿಶೇಷತೆಯನ್ನು ಹೊಂದಿರುವುದರಿಂದ ಉತ್ತರದ ಮಹಾಬಯಲಿನಲ್ಲಿ ರೈಲು, ರಸ್ತೆ ಹಾಗೂ ಕಾಲುವೆಗಳ ಜಾಲವು ಹೆಚ್ಚಾಗಿ ಕಂಡುಬರುವುದು.

ಅತ್ಯುಷ್ಣ, ಕಡಿಮೆ ಪ್ರಮಾಣದಲ್ಲಿ ಲಭ್ಯವಾಗುವ ಮಳೆ ಹಾಗೂ ಲವಣಾಂಶವಿರುವ ಮರುಭೂಮಿ ಮಣ್ಣು ಎಂಬೀ ಕಾರಣಗಳಿಂದ ಈ ಪ್ರದೇಶದಲ್ಲಿ ಜನವಾಸವು ಕಡಿಮೆಯಾಗಿರುವುದು.

### ಸೆಮಿನಾರ್

'ಭಾರತದ ಕೃಷಿ ಅರ್ಥವ್ಯವಸ್ಥೆಯಲ್ಲಿ ಉತ್ತರದ ಮಹಾಬಯಲಿನ ಪ್ರಭಾವ' ಎಂಬ ವಿಷಯದ ಕುರಿತಾಗಿ ಸೆಮಿನಾರ್ ಪೇಪರ್ ತಯಾರಿಸಿ ಮಂಡಿಸಲಿರುವೊಂದು ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಇದಕ್ಕೆ ಬೇಕಾಗಿ ಪಾಠಭಾಗದ ವಿವರಣೆಗಳಿಂದ, ವಾಚನಾ ಸಾಮಾಗ್ರಿಗಳು ಹಾಗೂ ವಾರ್ತಾ ಮಾಧ್ಯಮಗಳೇ ಮೊದಲಾದವುಗಳಿಂದ ಮಾಹಿತಿ ಸಂಗ್ರಹ ನಡೆಸಲು ಮಕ್ಕಳಲ್ಲಿ ಹೇಳಬೇಕು. ಎಲ್ಲಾ ಮಕ್ಕಳು ಸೆಮಿನಾರ್ ಪೇಪರ್ ಸಿದ್ಧಪಡಿಸಿದರೆಂದು ದೃಢಪಡಿಸಿ ಅವರಿಂದ ಒಂದೋ ಎರಡೊ ಮಂದಿಯನ್ನು ಸೆಮಿನಾರ್ ಪೇಪರ್ ಮಂಡಿಸಲು ಆಯ್ಕೆ ಮಾಡಬೇಕು. ಸೆಮಿನಾರ್ ಮಂಡನೆ ಕಳೆದ ಬಳಿಕ ಮೋಡರೇಟರ್ (ಅಧ್ಯಾಪಕರ) ನೇತೃತ್ವದಲ್ಲಿ ಈ ವಿಷಯದ ಕುರಿತಾಗಿ ಚರ್ಚೆಯನ್ನು ತರಗತಿಯಲ್ಲಿ ನಡೆಸಬೇಕು. ಮಂಡನೆ

ಹಾಗೂ ಚರ್ಚೆಗಳ ಬಳಿಕ ಸೆಮಿನಾರ್ ವರದಿಯನ್ನು ಪ್ರತಿಯೊಬ್ಬ ಮಗುವು ಬರೆದಿರಿಸಬೇಕು. ಈ ಸೆಮಿನಾರ್ ವರದಿಯನ್ನು ಮೌಲ್ಯಮಾಪನಕ್ಕೆ ಒಳಪಡಿಸಬೇಕು.

### ಪರ್ಯಾಯ ದ್ವೀಪದ ಪೀಠಭೂಮಿ

ಭಾರತದ ಭೂಪ್ರಕೃತಿಗಳಲ್ಲೇ ಅತಿ ಹೆಚ್ಚು ವೈವಿಧ್ಯ ವಿರುವ ಹಾಗೂ ವಿಶಾಲವಾದ ಭೂ ವಿಭಾಗವಾಗಿದೆ ಪರ್ಯಾಯ ಪೀಠಭೂಮಿ ಪ್ರದೇಶ. ಈ ಭೂ ವಿಭಾಗದ ಕೆಲವು ವಿಶೇಷತೆಗಳನ್ನು ಪಾಠಭಾಗದಲ್ಲಿ ನೀಡಲಾಗಿದೆ.

ಪರ್ಯಾಯ ಪೀಠಭೂಮಿಯ ವೈವಿಧ್ಯತೆಯಿಂದಿರುವ ವಿಶೇಷತೆಗಳನ್ನು ಭೂಪಟದಿಂದ (ಚಿತ್ರ 8.5) ಕಂಡುಕೊಂಡು ದಾಖಲಿಸಲಿರುವ ಚಟುವಟಿಕೆಯು ಪಾಠಭಾಗದಲ್ಲಿರುವುದು. ಅವುಗಳನ್ನು ಈ ಕೆಳಗೆ ನೀಡಲಾಗಿದೆ.

- ಅರಾವಳಿ ಬೆಟ್ಟಗಳು
- ಮಾಳ್ವ ಪೀಠಭೂಮಿ
- ವಿಂಧ್ಯಾ ಪರ್ವತ ಸಾಲು
- ಸಾತ್ಪುರ ಪರ್ವತ ಸಾಲು
- ಪಶ್ಚಿಮ ಘಟ್ಟ
- ಪೂರ್ವ ಘಟ್ಟ
- ದಖ್ಖಣದ ಪೀಠಭೂಮಿ
- ಚೋಟಾನಾಗಪುರ ಪೀಠಭೂಮಿ
- ಕಾಥೇವಾಡ್, ಕಚ್ಛ್ ಉಪದ್ವೀಪ

ಪಾಠಪುಸ್ತಕ ಕೊನೆಯ ಭಾಗದಲ್ಲಿ ನೀಡಿರುವ ಭಾರತ ರೂಪರೇಖೆಯಲ್ಲಿ ಉತ್ತರ ಪರ್ವತ ವಲಯ ಹಾಗೂ ಉತ್ತರದ ಮಹಾಬಯಲನ್ನು ಗುರುತಿಸಿದಂತೆ ಪರ್ಯಾಯ ದ್ವೀಪದ ಪೀಠಭೂಮಿ ಭೌತಿಕ ವಿಶೇಷತೆಗಳನ್ನು ಗುರುತಿಸಿ ಹೆಸರುಗಳನ್ನು ಬರೆಯಲು ಹೇಳಬೇಕು.

### ಸುಂದರ ತೀರಗಳ ಮೂಲಕ

ಕರಾವಳಿ ಪ್ರದೇಶ ಪರ್ಯಾಯ ಪೀಠಭೂಮಿ ಪ್ರದೇಶದ ಮೇರೆಯಂತೆ ಗುಜರಾತ್‌ನ ರಾಣ್ ಆಫ್ ಕಚ್ಛ್‌ನಿಂದ ಆರಂಭಿಸಿ ಪಶ್ಚಿಮ ಬಂಗಾಳದ ಸುಂದರ ಬನ ಪ್ರದೇಶದ ವರೆಗೆ ಪರ್ಯಾಯ ದ್ವೀಪವನ್ನು ಸುತ್ತಿ ಬಳಸಿ ಉದ್ದಕ್ಕೆ ಚಾಚಿಕೊಂಡಿರುವ ತೀರ ಪ್ರದೇಶವಾಗಿದೆ ಭಾರತಕ್ಕಿರುವುದು.

ತೀರ ಪ್ರದೇಶಗಳ ಮೂಲಕ ಪಶ್ಚಿಮ ಬಂಗಾಳದಿಂದ ಗುಜರಾತಿನ ವರೆಗೆ ನೀವೂ ಸಂಚರಿಸುವಿರಾದರೆ. ಕೆಳಗೆ ನೀಡಿರುವ ಪ್ರಾಂತ್ಯಗಳಲ್ಲಿ ಹಾದು ಹೋಗಬೇಕು.

- ಪಶ್ಚಿಮ ಬಂಗಾಳ
- ಒಡಿಶಾ
- ಆಂಧ್ರಪ್ರದೇಶ
- ತಮಿಳುನಾಡು
- ಕೇರಳ
- ಕರ್ನಾಟಕ
- ಗೋವ
- ಮಹಾರಾಷ್ಟ್ರ
- ಗುಜರಾತ್

ಪರ್ಯಾಯ ದ್ವೀಪದ ದೊಡ್ಡ ನದಿಗಳಾದ ಮಹಾನದಿ, ಗೋದಾವರಿ, ಕೃಷ್ಣಾ, ಕಾವೇರಿ ಎಂಬಿವುಗಳು ಪೂರ್ವಕ್ಕೆ ಹರಿದು ಬಂಗಾಳಕೊಲ್ಲಿಯನ್ನು ಸೇರುವವುಗಳಾಗಿವೆ. ಇವು ಸಾಗಿಸಿಕೊಂಡು ಬರುವ ದೊಡ್ಡ ಪ್ರಮಾಣದ ಅವಶಿಷ್ಟಗಳನ್ನು ಪೂರ್ವ ತೀರಗಳಲ್ಲಿ ನಿಕ್ಷೇಪಿಸಿ ದುದರಿಂದ ಅಲ್ಲಿ ಡೆಲ್ಟಾಗಳು ರೂಪುಗೊಳ್ಳುವುದು. ಆದರೆ ಸಾಮಾನ್ಯವಾಗಿ ಸಣ್ಣ ನದಿಗಳು ಪಶ್ಚಿಮಕ್ಕೆ ಹರಿದು ಅರಬಿ ಸಮುದ್ರವನ್ನು ಸೇರುತ್ತವೆ. ಈ ನದಿಗಳು ಕಡಿಮೆ ಪ್ರಮಾಣದ ಅವಶಿಷ್ಟಗಳನ್ನು ಪಶ್ಚಿಮ ತೀರದಲ್ಲಿ ನಿಕ್ಷೇಪಿಸುವುದು. ಈ ನಿಕ್ಷೇಪಗಳನ್ನು ಅರಬಿ ಸಮುದ್ರದ ಸಾಗರ ಜಲಪ್ರವಾಹಗಳು ತೀರ ಪ್ರದೇಶಗಳಿಂದ ಒಳಸಮುದ್ರಕ್ಕೆ ಸೆಳೆದುಕೊಂಡು ಹೋಗುವುದರಿಂದಾಗಿ ಪಶ್ಚಿಮ ತೀರಗಳಲ್ಲಿ ಡೆಲ್ಟಾಗಳು ಉಂಟಾಗುವುದಿಲ್ಲ.


ಪಾಠಪುಸ್ತಕದ ಕೊನೆಯ ಭಾಗದಲ್ಲಿ ನೀಡಿರುವ ಭಾರತದ ರೂಪರೇಖೆಯಲ್ಲಿ ಉತ್ತರದ ಪರ್ವತ ವಲಯ, ಉತ್ತರದ ಮಹಾಬಯಲು ಹಾಗೂ ಪರ್ಯಾಯ ದ್ವೀಪದ ಪೀಠಭೂಮಿ ಪ್ರದೇಶಗಳನ್ನು ಗುರುತಿಸಿದಂತೆ ತೀರ ಸಮತಲಗಳನ್ನು, ಅವುಗಳ ವಿವಿಧ ವಿಭಾಗಗಳನ್ನು ಗುರುತಿಸಿ ಹೆಸರುಗಳನ್ನು ಬರೆಯಲು ಮಕ್ಕಳಲ್ಲಿ ಹೇಳಬೇಕು.

## ನಮ್ಮ ಸ್ವಂತ ದ್ವೀಪಗಳಿಗೆ (ದ್ವೀಪಗಳು)

ಭಾರತದ ಭಾಗವಾಗಿರುವ ಅನೇಕ ದ್ವೀಪಗಳು ಬಂಗಾಳ ಕೊಲ್ಲಿ, ಅರಬಿ ಸಮುದ್ರ ಹಾಗೂ ಭಾರತ ಮತ್ತು ಶ್ರೀಲಂಕಾಗಳೆಡೆಯಲ್ಲಿರುವ ಗಲ್ಫ್ ಆಫ್ ಮನ್ನಾರಿನಲ್ಲಿರುವುದು. ಈ ದ್ವೀಪಗಳ ಕುರಿತಾದ ಸ್ಪಷ್ಟವಾದ ತಿಳುವಳಿಕೆ ಮಕ್ಕಳಿಗೆ ಲಭಿಸಬೇಕಾಗಿದೆ. ಇದಕ್ಕಾಗಿ ಪಾಠಭಾಗದ ವಿವರಣೆ ಹಾಗೂ ಚಟುವಟಿಕೆಗಳನ್ನು ಸರಿಯಾಗಿ ವಿನಿಮಯ ಮಾಡಬೇಕಾದ ಅಗತ್ಯವಿದೆ.

ಪಾಠಪುಸ್ತಕದ ಕೊನೆಯ ಭಾಗದಲ್ಲಿ ನೀಡಿರುವ ಭಾರತದ ರೂಪರೇಖೆಯಲ್ಲಿ ಉತ್ತರದ ಪರ್ವತ ವಲಯ, ಉತ್ತರದ ಮಹಾಬಯಲು, ಪರ್ಯಾಯ ದ್ವೀಪದ ಪೀಠಭೂಮಿ ಹಾಗೂ ತೀರಪ್ರದೇಶಗಳನ್ನು ಗುರುತಿಸಿದ ರೀತಿಯಲ್ಲಿ ಭಾರತದ ಪ್ರಧಾನ ದ್ವೀಪಸಮೂಹಗಳಾದ ಲಕ್ಷದ್ವೀಪ ಹಾಗೂ ಅಂಡಮಾನ್ ನಿಕೋಬಾರ್ ದ್ವೀಪಗಳನ್ನು ಗುರುತಿಸಿ ಹೆಸರುಗಳನ್ನು ಬರೆಯಲು ಮಕ್ಕಳಲ್ಲಿ ಹೇಳಬೇಕು. ವಿವಿಧ ಹಂತಗಳಾಗಿ ಮಕ್ಕಳು ಪೂರ್ತಿಗೊಳಿಸಿದ ಭೂಪಟಕ್ಕೆ 'ಭಾರತ–ಭೂಪ್ರಕೃತಿ' ಎಂಬ ಹೆಸರನ್ನು ನೀಡಲು ಹೇಳಬೇಕು. ಮಕ್ಕಳು ತಯಾರಿಸುವ ಭೂಪಟದ ಮಾದರಿಯನ್ನು ಕೆಳಗೆ ನೀಡಲಾಗಿದೆ.

ಭಾರತ–ಭೂ ಪ್ರಕೃತಿ



## ಭಾರತದ ನದಿಗಳು

ಉತ್ತರದ ಪರ್ವತ ವಲಯಗಳ ವಿವರಣೆಗಳ ಬಳಿಕ ನೀಡಿರುವ ಹಿಮಾಲಯದ ನದಿಗಳ ವಿವರಣೆ ಮತ್ತು ಪರ್ಯಾಯ ಪೀಠಭೂಮಿಯ ವಿವರಣೆಯೊಂದಿಗೆ ನೀಡಿರುವ ಪರ್ಯಾಯ ದ್ವೀಪದ ನದಿಗಳ ವಿವರಣೆಗಳಾಗಿದೆ ಈ ಯೂನಿಟಿನಲ್ಲಿರುವುದು. ಭಾರತದ ಪ್ರಧಾನ ನದಿಗಳ ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನು ಮಕ್ಕಳಿಗೆ ನೀಡುವುದು ಎಂಬ ಗುರಿಯೊಂದಿಗೆ ಈ ಪಾಠಭಾಗವನ್ನು ತಯಾರಿಸಲಾಗಿದೆ. ಈ ಉಪಯೂನಿಟ್‌ನ ಮೂಲಕ ಮಕ್ಕಳಲ್ಲಿ ರೂಪುಗೊಳ್ಳಬೇಕಾದ ಆಶಯಗಳನ್ನು ಹಾಗೂ ತಿಳುವಳಿಕೆಗಳನ್ನು ಕೆಳಗೆ ನೀಡಲಾಗಿದೆ.

- ಹಿಮಾಲಯದ ನದಿಗಳ ವಿಶೇಷತೆಗಳು (ಉದ್ಭವ, ಉದ್ದ, ಪೋಷಕ ನದಿಗಳು, ಹರಿಯುವ ಪ್ರಾಂತ್ಯ, ಸಂಗಮಿಸುವ ಸಾಗರ ಭಾಗ)
- ಪರ್ಯಾಯ ದ್ವೀಪದ ನದಿಗಳ ವಿಶೇಷತೆಗಳು (ಉದ್ಭವ, ಉದ್ದ, ಪೋಷಕ ನದಿಗಳು, ಹರಿಯುವ ಪ್ರಾಂತ್ಯಗಳು, ಸಂಗಮಿಸುವ ಸಾಗರ ಭಾಗ)
- ಹಿಮಾಲಯ ನದಿಗಳು ಮತ್ತು ಪರ್ಯಾಯ ದ್ವೀಪದ ನದಿಗಳೊಳಗೆ ಸಾಮಾನ್ಯವಾಗಿ ಕಂಡುಬರುವ ವ್ಯತ್ಯಾಸಗಳು.

### ಹಿಮಾಲಯದ ನದಿಗಳು

ಪ್ರಧಾನ ಹಿಮಾಲಯದ ನದಿಗಳು, ಅವು ಹರಿಯುವ ಪ್ರಾಂತ್ಯಗಳು ಹಾಗೂ ಪೋಷಕ ನದಿಗಳು ಎಂಬಿವುಗಳನ್ನು ನೀಡಿರುವ ಭೂಪಟದ (ಚಿತ್ರ 8.2) ಸಹಾಯದೊಂದಿಗೆ ಕಂಡುಕೊಂಡು ಪಟ್ಟಿ 8.2 ನ್ನು ಪೂರ್ತಿಗೊಳಿಸಬೇಕಾದ ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಇದನ್ನು ಎಲ್ಲಾ ಮಕ್ಕಳು ಪೂರ್ತಿಗೊಳಿಸಿರುವರು ಎಂದು ಅಧ್ಯಾಪಕರು ದೃಢಪಡಿಸಬೇಕು.

ಪೂರ್ತಿಗೊಳಿಸಿರುವ ಪಟ್ಟಿಯನ್ನು ಕೆಳಗೆ ನೀಡಲಾಗಿದೆ.

| ಹಿಮಾಲಯದ ನದಿಗಳು | ಉದ್ಭವ ಸ್ಥಳ | ಉದ್ದ | ಪೋಷಕ ನದಿ | ಹರಿಯುವ ಪ್ರಾಂತ್ಯಗಳು | ಸಂಗಮಿಸುವ ಸಾಗರ |
|---|---|---|---|---|---|
| ಸಿಂಧೂ | ಟಿಬೇಟಿನ ಮಾನಸ ಸರೋವರ | ಸುಮಾರು 2280 ಕಿ.ಮೀ. (ಭಾರತದಲ್ಲಿ) 709 ಕಿ.ಮೀ. ಮಾತ್ರ ಹರಿಯುತ್ತದೆ) | • ಝೀಲಂ<br>• ಚೀನಾಬ್<br>• ರಾವಿ<br>• ಬಿಯಾಸ್<br>• ಸಟ್ಲೇಜ್ | • ಜಮ್ಮು ಕಾಶ್ಮೀರ<br>• ಹಿಮಾಚಲ ಪ್ರದೇಶ<br>• ಪಂಜಾಬ್ | ಅರಬಿ ಸಮುದ್ರ |
| ಗಂಗಾ | ಗಂಗೋತ್ರಿ ಹಿಮನದಿಯ ಗೋಮುಖ ಗುಹೆ | ಸುಮಾರು 2500 ಕಿ.ಮೀ. | • ಯಮುನ<br>• ಸೋನ್<br>• ಘಾಘ್ರ<br>• ಕೋಸಿ<br>• ಗಂಡಕಿ | • ಉತ್ತರಾಂಚಲ<br>• ಉತ್ತರಪ್ರದೇಶ<br>• ರಾಜಸ್ತಾನ್<br>• ಮಧ್ಯಪ್ರದೇಶ<br>• ಬಿಹಾರ<br>• ಪಶ್ಚಿಮ ಬಂಗಾಳ<br>• ಛತ್ತೀಸ್‌ಘಡ<br>• ಝಾರ್ಖಂಡ್ | ಬಂಗಾಳ ಕೊಲ್ಲಿ |
| ಬ್ರಹ್ಮಪುತ್ರಾ | ಟಿಬೇಟಿನ ಚೆಮಾ–ಯುಂಗ್–ದುಂಗ್ | ಸುಮಾರು 2900 ಕಿ.ಮೀ ಭಾರತದಲ್ಲಿ 725ಕಿ.ಮೀ. | • ತೀಸ್ತಾ<br>• ಮಾನಸ್<br>• ಲೂನಿ<br>• ಸುವಾನ್‌ಸಿರಿ | • ಅರುಣಾಚಲ ಪ್ರದೇಶ<br>• ಅಸ್ಸಾಂ<br>• ಸಿಕ್ಕಿಂ<br>• ಪಶ್ಚಿಮ ಬಂಗಾಳ | ಬಂಗಾಳ ಕೊಲ್ಲಿ |

## ಪರ್ಯಾಯ ದ್ವೀಪದ ನದಿಗಳು

ಪರ್ಯಾಯ ದ್ವೀಪದ ಪೀಠಭೂಮಿಯಲ್ಲಿ ಹರಿಯುವ ಪ್ರಧಾನ ನದಿಗಳು ಯಾವುವು ಎಂದು ಭೂಪಟ (ಚಿತ್ರ 8.2) ವನ್ನು ನಿರೀಕ್ಷಿಸಿ ಕೊಂಡುಕೊಳ್ಳಬೇಕಾದ ಒಂದು ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಅವುಗಳು ಕೆಳಗಿನಂತಿರುವುದು.

- ಮಹಾನದಿ
- ಗೋದಾವರಿ
- ಕೃಷ್ಣ
- ಕಾವೇರಿ
- ನರ್ಮದ
- ತಪತಿ

ಭೂಪಟ (8.2)ವನ್ನು ನಿರೀಕ್ಷಿಸಿ ಪರ್ಯಾಯ ದ್ವೀಪದ ನದಿಗಳನ್ನು ಅವು ಹರಿಯುವ ದಿಕ್ಕಿನಾಧಾರದಲ್ಲಿ ವರ್ಗೀಕರಿಸಿ ಪಟ್ಟಿ ಪೂರ್ತಿಗೊಳಿಸಬೇಕಾದೊಂದು ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಪೂರ್ತಿಗೊಳಿಸಿದ ಪಟ್ಟಿಯನ್ನು ಕೆಳಗೆ ನೀಡಲಾಗಿದೆ.

| ಪಶ್ಚಿಮಕ್ಕೆ ಹರಿಯುವ ನದಿಗಳು | ಪೂರ್ವಕ್ಕೆ ಹರಿಯುವ ನದಿಗಳು |
|---|---|
| • ನರ್ಮದ<br>• ತಪತಿ | • ಮಹಾನದಿ<br>• ಗೋದಾವರಿ<br>• ಕೃಷ್ಣ<br>• ಕಾವೇರಿ |

ಪರ್ಯಾಯ ದ್ವೀಪದ ಕೆಲವು ನದಿಗಳು ಹಿಮಾಲಯದ ನದಿಗಳಾದ ಗಂಗಾ, ಯಮುನ ಎಂಬೀ ನದಿಗಳ ಪೋಷಕ ನದಿಗಳಾಗಿವೆ. ಅವುಗಳು ಯಾವುದೆಲ್ಲ ಎಂದು ಭೂಪಟ(8.3)ದಿಂದ ಕಂಡುಕೊಳ್ಳಲು ಪಾಠಭಾಗದಲ್ಲಿ ಹೇಳಲಾಗಿದೆ. ಅವುಗಳನ್ನು ಕೆಳಗೆ ನೀಡಲಾಗಿದೆ.

- ಚಂಬಲ್
- ಬೆಟ್ವಾ
- ಕೆನ್
- ಸೋನ್

ಇವುಗಳಲ್ಲಿ ಚಂಬಲ್, ಬೆಟ್ವಾ, ಕೆನ್ ಎಂಬೀ ನದಿಗಳು ಯಮುನಾ ನದಿಯ ಪೋಷಕ ನದಿಗಳಾಗಿವೆ ಹಾಗೂ ಸೋನ್ ನದಿಯು ಗಂಗಾ ನದಿಯ ಪೋಷಕನದಿ ಯಾಗಿರುವುದು.

ಪರ್ಯಾಯ ದ್ವೀಪದ ಪ್ರಧಾನ ನದಿಗಳ ಉದ್ಭವ, ಉದ್ದ ಹಾಗೂ ಪೋಷಕ ನದಿಗಳನ್ನು ತಿಳಿದುಕೊಳ್ಳಲು ಮತ್ತು ಅವುಗಳು ಯಾವೆಲ್ಲ ಪ್ರಾಂತ್ಯಗಳಲ್ಲಿ ಹರಿಯುವುದೆಂದು ಕಂಡುಕೊಂಡು ಪೂರ್ತಿಗೊಳಿಸಬೇಕಾದ ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಈ ಚಟುವಟಿಕೆಯನ್ನು ಎಲ್ಲಾ ಮಕ್ಕಳು ಪೂರ್ತಿಗೊಳಿಸಿರುವರು ಎಂದು ಖಾತರಿಪಡಿಸಬೇಕು.

ಪೂರ್ತಿಗೊಳಿಸಿದ ಪಟ್ಟಿಯನ್ನು ಕೆಳಗೆ ನೀಡಲಾಗಿದೆ.

| ನದಿ | ಉದ್ಭವ | ಸುಮಾರು ಉದ್ದ | ಪ್ರಧಾನ ಪೋಷಕ ನದಿಗಳು | ಪ್ರಾಂತ್ಯಗಳು | ಸಂಗಮಿಸುವ ಸಮುದ್ರ |
|---|---|---|---|---|---|
| ಮಹಾನದಿ | ಮೈಕಲ್ ಪರ್ವತ ಸಾಲುಗಳು (ಮಧ್ಯಪ್ರದೇಶ) | 857ಕಿ.ಮೀ. | ಇಬ್, ಟೆಲ್ | • ಮಧ್ಯಪ್ರದೇಶ<br>• ಛತ್ತೀಸ್‌ಘಡ<br>• ಒಡಿಶಾ | • ಬಂಗಾಳ ಕೊಲ್ಲಿ |
| ಗೋದಾವರಿ | ಪಶ್ಚಿಮ ಘಟ್ಟ (ಮಹಾರಾಷ್ಟ್ರದ ನಾಸಿಕ್) | 1465ಕಿ.ಮೀ. | ಇಂದ್ರಾವತಿ, ಶಬರಿ | • ಮಹಾರಾಷ್ಟ್ರ<br>• ಆಂಧ್ರಪ್ರದೇಶ | • ಬಂಗಾಳ ಕೊಲ್ಲಿ |

| | | | | | |
|---|---|---|---|---|---|
| ಕೃಷ್ಣ | ಪಶ್ಚಿಮ ಘಟ್ಟ (ಮಹಾರಾಷ್ಟ್ರದ ಮಹಾಬಲೇಶ್ವರ ಬೆಟ್ಟಗಳು) | 1400 ಕಿ.ಮೀ. | ಭೀಮ, ತುಂಗಭದ್ರ | • ಮಹಾರಾಷ್ಟ್ರ<br>• ಆಂಧ್ರಪ್ರದೇಶ | • ಬಂಗಾಳ ಕೊಲ್ಲಿ |
| ಕಾವೇರಿ | ಪಶ್ಚಿಮ ಘಟ್ಟದ ಬ್ರಹ್ಮಗಿರಿ ಪರ್ವತ ಸಾಲುಗಳು | 800 ಕಿ.ಮೀ. | ಕಬನಿ, ಅಮರಾವತಿ | • ಕರ್ನಾಟಕ<br>•<br>•<br>• | • ಬಂಗಾಳ ಕೊಲ್ಲಿ |
| ನರ್ಮದ | ಮೈಕಲ್ ಪರ್ವತ ಸಾಲುಗಳು (ಛತ್ತೀಸ್‌ಗಢ್) | 1312 ಕಿ.ಮೀ. | ಹಿರಣ್, ಭನ್‌ಜನ್ | • ಛತ್ತೀಸ್‌ಗಡ್<br>• ಮಧ್ಯಪ್ರದೇಶ<br>• ಮಹಾರಾಷ್ಟ್ರ<br>• ಗುಜರಾತ | • ಅರಬಿ ಸಮುದ್ರ |
| ತಪತಿ | ಮುನ್ತಾಯಿ ಪೀಠ ಭೂಮಿ(ಮಧ್ಯಪ್ರದೇಶದ ಬೈತುಲ್ ಜಿಲ್ಲೆ) | 724 ಕಿ.ಮೀ. | ಆನರ್, ಗಿರ್ನಾ | • ಮಧ್ಯಪ್ರದೇಶ<br>• ಮಹಾರಾಷ್ಟ್ರ | • ಅರಬಿ ಸಮುದ್ರ |

ಪರ್ಯಾಯ ದ್ವೀಪದ ಹೆಚ್ಚಿನ ನದಿಗಳು ಜಲಪಾತವನ್ನು ಸೃಷ್ಟಿಸಿಕೊಂಡು ಸಮತಲಗಳಲ್ಲಿ ಹರಿಯುವುದರ ಕಾರಣಗಳನ್ನು ಕೆಳಗೆ ನೀಡಲಾಗಿದೆ.

- ಪರ್ಯಾಯ ಪೀಠಭೂಮಿಯ ಮೇರೆಗಳು ಸುತ್ತುಮುತ್ತಲಿನ ಪ್ರದೇಶಗಳಿಗಿಂತ ಕಡಿದಾಗಿ ಎತ್ತರವಾಗಿರುವುದು.
- ಪರ್ಯಾಯ ಪೀಠಭೂಮಿಯ ಮೂಲಕ ಪರ್ಯಾಯ ದ್ವೀಪದ ನದಿಗಳು ಹರಿಯುವುದು.
- ಸಾಮಾನ್ಯವಾಗಿ ಎತ್ತರದ ಪೀಠಭೂಮಿಯಿಂದ ಸಮತಲವನ್ನು ಪ್ರವೇಶಿಸುವ ನದಿಗಳು ಜಲಪಾತಗಳನ್ನುಂಟುಮಾಡುತ್ತದೆ.

ಯಾವೆಲ್ಲಾ ನದಿ ತೀರಗಳಲ್ಲಾಗಿದೆ ಭಾರತದ ಪ್ರಧಾನ ನದಿ ತೀರ ನಗರಗಳಿರುವುದೆಂಬ ಪಟ್ಟಿಯನ್ನು ಪೂರ್ತಿಗೊಳಿಸುವ ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಪೂರ್ತಿಗೊಳಿಸಿದ ಪಟ್ಟಿಯನ್ನು ಕೆಳಗೆ ನೀಡಲಾಗಿದೆ.

| ನದಿತೀರ ನಗರಗಳು | ನದಿಗಳು |
|---|---|
| • ನವದೆಹಲಿ | • ಯಮುನಾ |
| • ಆಗ್ರಾ | • ಯಮುನ |
| • ದೇವಪ್ರಯಾಗ | • ಗಂಗಾ |
| • ವಾರಣಾಸಿ | • ಗಂಗಾ |
| • ಅಲಹಬಾದ್ | • ಗಂಗಾ |
| • ಪಾಟ್ನಾ | • ಗಂಗಾ |
| • ಗೌಹಾಟಿ | • ಬ್ರಹ್ಮಪುತ್ರಾ |
| • ಕೋಲ್ಕತ್ತ | • ಹೂಗ್ಲಿ |
| • ಲೂಧಿಯಾನ | • ಸಾಟ್ಲೇಜ್ |
| • ಶ್ರೀನಗರ | • ಝೀಲಂ |
| • ಅಹಮ್ಮದಾಬಾದ್ | • ಸಬರ್‌ಮತಿ ನದಿ |
| • ಸೂರತ್ | • ತಪತಿ |
| • ವಿಜಯವಾಡ | • ಗೋದಾವರಿ |
| • ತಿರುಚಿರಪಳ್ಳಿ | • ಕಾವೇರಿ |
| • ತಂಜಾವೂರು | • ಕಾವೇರಿ |
| • ಕೊಡಗು | • ಕಾವೇರಿ |

ಈ ನಗರಗಳ ಸ್ಥಾನವನ್ನು ಪಾಠಪುಸ್ತಕದ ಕೊನೆಯ ಭಾಗದಲ್ಲಿ ನೀಡಿರುವ ಭಾರತದ ರೂಪುರೇಷೆಯಲ್ಲಿ ಗುರುತಿಸಲು ಮಕ್ಕಳಲ್ಲಿ ಹೇಳಬೇಕು.

### ಭಾರತ : ಮಣ್ಣಿನ ವಿಧಗಳು

ಮೆಕ್ಕಲು ಮಣ್ಣು, ಕಪ್ಪು ಮಣ್ಣು, ಕೆಂಪು ಮಣ್ಣು, ಮುರಕಲ್ಲು ಮಣ್ಣು ಹಾಗೂ ಪರ್ವತ ಮಣ್ಣು ಎಂಬಿವುಗಳು ಭಾರತದ ಪ್ರಧಾನ ಮಣ್ಣಿನ ವಿಧಗಳಾಗಿವೆ. ಈ ಮಣ್ಣಿನ ವಿಧಗಳ ವಿಶೇಷತೆಗಳನ್ನು ಕೆಳಗೆ ಸೇರಿಸಲಾಗಿದೆ.

ಪಟ್ಟಿ 6.2

| ಮಣ್ಣಿನ ವಿಧಗಳು | ವಿಶೇಷತೆಗಳು |
|---|---|
| ಮೆಕ್ಕಲು ಮಣ್ಣು (Alluvial Soil) | • ಅಧಿಕ ಫಲವತ್ತತೆ<br>• ಹಳೆಯ ಮೆಕ್ಕಲು ಮಣ್ಣನ್ನು 'ಬಂಗಾರ್' ಎಂದೂ, ಹೊಸತಾಗಿ ರೂಪುಗೊಳ್ಳುವವುಗಳನ್ನು 'ಖಾದರ್' ಎಂದೂ ಕರೆಯುತ್ತಾರೆ.<br>• ನದಿ ತೀರಗಳಲ್ಲಿ ಮತ್ತು ಡೆಲ್ಟಾ ಪ್ರದೇಶಗಳಲ್ಲಿ ಕಂಡುಬರುವುದು. |
| ಕಪ್ಪು ಮಣ್ಣು (ಹತ್ತಿಕರಿ ಮಣ್ಣು) (Black Cotton Soil) | • ಕಪ್ಪು ಬಣ್ಣದಿಂದಿರುವುದು<br>• ಹತ್ತಿ ಕೃಷಿಗೆ ಉತ್ತಮವಾಗಿರುವುದು<br>• ರಿಗರ್ ಎಂಬ ಹೆಸರಿನಲ್ಲಿಯೂ ಕರೆಯಲ್ಪಡುತ್ತದೆ.<br>• ಲಾವಾ ಶಿಲೆಗಳು ಹುಡಿಯಾಗಿ ಇವು ರೂಪುಗೊಳ್ಳುತ್ತದೆ.<br>• ಫಲವತ್ತತೆ ಅಧಿಕವಾಗಿದೆ ಮತ್ತು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಗುಣವಿರುವ ಮಣ್ಣು. |
| ಕೆಂಪು ಮಣ್ಣು (Red Soil) | • ಅಗ್ನಿ ಶಿಲೆಗಳು ಹಾಗೂ ರೂಪಾಂತರ ಶಿಲೆಗಳು ಹುಡಿಯಾಗಿ ರೂಪುಗೊಳ್ಳುತ್ತದೆ.<br>• ತುಲನಾತ್ಮಕವಾಗಿ ಫಲವತ್ತತೆ ಕಡಿಮೆ.<br>• ಕಬ್ಬಿಣದ ಅಂಶವು ಇದಕ್ಕೆ ಕೆಂಪು ಬಣ್ಣವನ್ನು ನೀಡುತ್ತದೆ. |
| ಕೆಂಪು ಮುರಕಲ್ಲು ಮಣ್ಣು (ಲೆಟರೈಟ್) (Laterite Soil) | • ಅತ್ಯಂತ ಕಡಿಮೆ ಫಲವತ್ತತೆ ಇರುವುದು<br>• ಮುನ್ಸೂನು ಹವಾಮಾನ ಪ್ರದೇಶಗಳಲ್ಲಿ ರೂಪುಗೊಳ್ಳುವುದು.<br>• ಕೆಸರು ಮತ್ತು ಕೆಂಪು ಮರಳಿನ ಮಿಶ್ರಣವಾಗಿರುತ್ತದೆ. |
| ಮರುಭೂಮಿ ಮಣ್ಣು (Desert Soil) | • ಕಡಿಮೆ ತೇವಾಂಶವಿರುವುದು<br>• ನೀರಾವರಿ ಲಭ್ಯವಾದರೆ ಇವುಗಳಿಗೆ ಹೆಚ್ಚಿನ ಫಸಲು ನೀಡಲು ಸಾಧ್ಯವಿದೆ. |
| ಪರ್ವತ ಮಣ್ಣು (Mountain Soil) | • ಕರಗುವ ಲವಣಗಳು ಕಂಡುಬರುತ್ತವೆ<br>• ಜೈವಿಕಾಂಶವು ಧಾರಾಳವಾಗಿ ಕಂಡುಬರುತ್ತದೆ.<br>• ಕಪ್ಪಾದ ಕಂದು ಬಣ್ಣ ಅಥವಾ ಕಪ್ಪು ಬಣ್ಣದಲ್ಲಿ ಕಂಡುಬರುವುದು.<br>• ತುಲನಾತ್ಮಕವಾಗಿ ಫಲವತ್ತತೆ ಕಡಿಮೆ. |

ಭೂ ಪ್ರಾಕೃತಿಕ ವಿಭಾಗಗಳೊಂದಿಗೆ ಜೋಡಿಸಿ ಕೊಂಡಾಗಿದೆ ಮಣ್ಣಿನ ವಿಧಗಳನ್ನು ಯೂನಿಟಿನಲ್ಲಿ ವಿವರಿಸಿರುವುದು. ಪ್ರತಿಯೊಂದು ಭೂ ಪ್ರಾಕೃತಿಕ ವಿಭಾಗಗಳಲ್ಲಿ ಕಂಡುಬರುವ ವಿವಿಧ ಮಣ್ಣಿನ ವಿಧಗಳು ಯಾವುದೆಂದು ಕಂಡುಕೊಳ್ಳಲಿರುವ ಚಟುವಟಿಕೆಯನ್ನು ಮಕ್ಕಳಿಗೆ ನೀಡಬಹುದು.

ಕೆಳಗೆ ನೀಡಿರುವ ಮಾಹಿತಿಗಳನ್ನು ಆಧಾರವಾಗಿ ಟ್ಟುಕೊಂಡು ಈ ಚಟುವಟಿಕೆಯನ್ನು ಕ್ರೋಡೀಕರಿಸಬೇಕು.

| ಭೂಪ್ರಕೃತಿ | ಮಣ್ಣಿನ ವಿಧಗಳು |
|---|---|
| • ಉತ್ತರದ ಪರ್ವತ ವಲಯ | • ಪರ್ವತ ಮಣ್ಣು |
| • ಉತ್ತರದ ಮಹಾಬಯಲು | • ಮೆಕ್ಕಲು ಮಣ್ಣು |
| • ಪರ್ಯಾಯ ದ್ವೀಪದ ಪೀಠಭೂಮಿ | • ಕಪ್ಪು ಮಣ್ಣು, ಕೆಂಪು ಮಣ್ಣು, ಮರುಭೂಮಿ ಮಣ್ಣು, ಲೆಟರೈಟ್ (ಕೆಂಪು ಮುರುಕಲ್ಲು ಮಣ್ಣು) |
| • ತೀರ ಪ್ರದೇಶ | • ಮೆಕ್ಕಲು ಮಣ್ಣು |

## ಭಾರತ – ಹವಾಮಾನ

'ಹವಾಮಾನ' ಎಂಬ ಶೀರ್ಷಿಕೆಯಿಂದ ಯೂನಿಟಿನ ಕೊನೆಯ ತನಕದ ಭಾಗವನ್ನಾಗಿದೆ ಈ ಉಪಯೂನಿಟಿನಲ್ಲಿ ಸೇರಿಸಿರುವುದು. ಭಾರತದ ಹವಾಮಾನದಲ್ಲಿ ಪ್ರಾದೇಶಿಕವಾಗಿ ವೈವಿಧ್ಯಗಳಿದ್ದರೂ ಸಾಮಾನ್ಯವಾಗಿ ಭಾರತದ ಹವಾಮಾನವನ್ನು ಮುನ್ಸೂನು ಹವಾಮಾನವೆಂದು ಕರೆಯಲ್ಪಡುತ್ತದೆ.

ಈ ಪಾಠಭಾಗದಿಂದ ಮಕ್ಕಳಿಗೆ ಲಭಿಸಬೇಕಾದ ಆಶಯಗಳು ಹಾಗೂ ತಿಳುವಳಿಕೆಗಳನ್ನು ಕೆಳಗೆ ನೀಡಲಾಗಿದೆ.

- ಭಾರತದ ಪ್ರಾದೇಶಿಕ ಹವಾಮಾನದಲ್ಲಿ ವೈವಿಧ್ಯಗಳಿವೆ
- ಭಾರತದ ಹವಾಮಾನದ ಮೇಲೆ ಪ್ರಭಾವ ಬೀರುವ ಅನೇಕ ಘಟಕಳಿವೆ.
- ಭಾರತದ ನಾಲ್ಕು ಋತುಗಳು – ಚಳಿಗಾಲ, ಬೇಸಿಗೆ ಕಾಲ, ನೈಋತ್ಯ ಮುನ್ಸೂನು ಕಾಲ, ಈಶಾನ್ಯ ಮುನ್ಸೂನು ಕಾಲ
- ಭಾರತದಲ್ಲಿನ ಮಳೆಯ ವಿತರಣೆ

### ಚಳಿಗಾಲ

ಭಾರತದಲ್ಲಿ ಚಳಿಗಾಲವು ಅನುಭವಕ್ಕೆ ಬರುವುದು ಡಿಸಂಬರ್ ತಿಂಗಳಿನಿಂದ ಫೆಬ್ರವರಿ ತಿಂಗಳ ತನಕವಾಗಿರುವುದು.

### ನೈಋತ್ಯ ಮುನ್ಸೂನ್ ಕಾಲ

ಭಾರತದಲ್ಲಿ ನೈಋತ್ಯ ಮುನ್ಸೂನ್ ಕಾಲವು ಅನುಭವಕ್ಕೆ ಬರುವುದು ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಾಗಿದೆ.

ನೈಋತ್ಯ ದಿಕ್ಕಿನಿಂದ ಬೀಸುವ ಮುನ್ಸೂನು ಮಾರುತವನ್ನು ಪಶ್ಚಿಮ ಘಟ್ಟವು ತಡೆಯುವುದರಿಂದ ಈ ಪರ್ವತ ಸಾಲುಗಳ ಪಶ್ಚಿಮ ಭಾಗದಲ್ಲಿ ಅತ್ಯಧಿಕ ಮಳೆ ಲಭಿಸುವುದು. ಆದರೆ ಪರ್ವತ ಸಾಲುಗಳ ಪೂರ್ವಭಾಗದಲ್ಲಿ ನೈಋತ್ಯ ಮನ್ಸೂನು ಮಾರುತವು ತಲುಪುವಾಗ ಗಾಳಿಯಲ್ಲಿರುವ ತೇವಾಂಶವು ಕಡಿಮೆಯಾಗುವುದರಿಂದ ಪಶ್ಚಿಮ ಘಟ್ಟದ ಪೂರ್ವಭಾಗದಲ್ಲಿ ಕಡಿಮೆ ಮಳೆ ಲಭಿಸುವುದು.

ಕೇರಳದಲ್ಲಿ ನೈಋತ್ಯ ಮುನ್ಸೂನು ಮಳೆಯನ್ನು ಇಡವಪ್ಪಾದಿ (ಮುಂಗಾರುಮಳೆ) ಎಂದು ಕರೆಯುತ್ತಾರೆ.

ನೈಋತ್ಯ ಮನ್ಸೂನು ಮಾರುತದ ಬಂಗಾಳಕೊಲ್ಲಿಯ ಶಾಖೆಯನ್ನು ಮೇಘಾಲಯದ ಪೂರ್ವದ ಪರ್ವತ ಸಾಲುಗಳಾದ ಖಾಸಿ, ಗಾರೊ ಜಯಂತಿಯ ಬೆಟ್ಟಗಳು ತಡೆದು ಈಶಾನ್ಯ ಪ್ರಾಂತ್ಯಗಳಲ್ಲಿ ಧಾರಾಳ ಮಳೆ ಲಭಿಸುವಂತೆ ಮಾಡುತ್ತದೆ.

### ಈಶಾನ್ಯ ಮನ್ಸೂನು ಕಾಲ

ಬಂಗಾಳ ಕೊಲ್ಲಿಯಲ್ಲಿ ಒಕ್ಟೋಬರ್–ನವಂಬರ್ ತಿಂಗಳುಗಳಲ್ಲಿ ರೂಪುಗೊಳ್ಳುವ ಕನಿಷ್ಠ ಒತ್ತಡದೆಡೆಗೆ ಉತ್ತರ ಭಾಗದಿಂದ ಬೀಸುವ ಗಾಳಿಯು ಆಕರ್ಷಿಸಲ್ಪಡುವುದು. ಸಮುದ್ರ ಭಾಗಕ್ಕೆ ಬೀಸುವ ಈ ಮಾರುತವು ನೀರಾವಿ ಭರಿತ ಚಂಡಮಾರುತವಾಗುವುದು. ಪರಿಣಾಮವಾಗಿ ಇದು ಪೂರ್ವತೀರಗಳಲ್ಲಿ ಬೀಸುವುದು.

ತುಲಾವರ್ಷಂ (ಹಿಂಗಾರುಮಳೆ) ಎಂಬ ಹೆಸರಿನಲ್ಲಾಗಿದೆ ಈಶಾನ್ಯ ಮನ್ಸೂನ್ ಮಳೆಗಾಲವು ಕೇರಳದಲ್ಲಿ ತಿಳಿಯಲ್ಪಡುವುದು.

### ಭಾರತ–ಮಳೆಯ ವಿತರಣೆ

ಮಳೆಯ ಆಧಾರದಲ್ಲಿ ತಯಾರಿಸಲಾದ ಭೂಪಟ (ಚಿತ್ರ 8.13) ವನ್ನು ವಿಶ್ಲೇಷಿಸಿ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲಿರುವ ಒಂದು ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಇದರ ಕ್ರೋಡೀಕರಣಕ್ಕಾಗಿ ಕೆಳಗೆ ನೀಡಿರುವವುಗಳನ್ನು ಬಳಸಿಕೊಳ್ಳಬಹುದು.

- 200 ಸೆ.ಮೀಟರಿಗಿಂತ ಅಧಿಕ ಮಳೆ ಲಭಿಸುವ ಪ್ರದೇಶಗಳು – ಪಶ್ಚಿಮ ತೀರಪ್ರದೇಶಗಳು (ಕೇರಳ, ಕರ್ನಾಟಕ, ಗೋವ, ಮಹಾರಾಷ್ಟ್ರ) ಈಶಾನ್ಯ ಪ್ರಾಂತ್ಯಗಳಲ್ಲಿರುವ ಕೆಲವು ಪ್ರದೇಶಗಳು, ಉತ್ತರದ ಮಹಾಬಯಲಿನ ಈಶಾನ್ಯ ಭಾಗಗಳು.

- 60 ಸೆ.ಮೀಟರಿಗಿಂತ ಕಡಿಮೆ ಮಳೆ ಲಭಿಸುವ ಪ್ರದೇಶಗಳು – ರಾಜಸ್ತಾನ, ಗುಜರಾತಿನ ಪಶ್ಚಿಮ ಭಾಗಗಳು, ದಕ್ಕಣ ಪೀಠಭೂಮಿಯ ಮಧ್ಯಭಾಗಗಳು, ಜಮ್ಮು ಕಾಶ್ಮೀರದ ಉತ್ತರ ಭಾಗಗಳು.

ಮಳೆಯ ವಿತರಣೆಯ ಅಸಮಾನತೆಗೆ ಕಾರಣಗಳನ್ನು ಕೆಳಗೆ ನೀಡಲಾಗಿದೆ.

- ಭೂ ಪ್ರಕೃತಿ
- ಸಮುದ್ರ ಸಾಮೀಪ್ಯ
- ಸಮುದ್ರದಿಂದಿರುವ ದೂರ
- ಪರ್ವತ ಸಾಲುಗಳ ಸ್ಥಾನ
- ಗಾಳಿಯ ದಿಕ್ಕು
- ಭೂಭಾಗದ ವಿಸ್ತೀರ್ಣ

## ? ಮೌಲ್ಯನಿರ್ಣಯಕ್ಕಿರುವ ಪ್ರಶ್ನೆಗಳು

- ಭಾರತದ ಸಂಸ್ಕೃತಿ ಹಾಗೂ ಜನಜೀವನದ ಮೇಲೆ ಉತ್ತರದ ಪರ್ವತ ವಲಯಗಳ ಪಾತ್ರವನ್ನು ಸ್ಪಷ್ಟಗೊಳಿಸಿರಿ.
- ಪರ್ಯಾಯ ದ್ವೀಪದ ನದಿಗಳನ್ನು ಪೂರ್ವಕ್ಕೆ ಹರಿಯುವವುಗಳು ಹಾಗೂ ಪಶ್ಚಿಮಕ್ಕೆ ಹರಿಯುವವುಗಳೆಂದು ವರ್ಗೀಕರಿಸಿ ಅವುಗಳ ವಿಶೇಷತೆಗಳನ್ನು ವಿಶದೀಕರಿಸಿರಿ.
- ಭಾರತದಲ್ಲಿ ಲಭಿಸುವ ಮಳೆ ವಿತರಣೆಯಲ್ಲಿರುವ ಪ್ರಾದೇಶಿಕ ವ್ಯತ್ಯಾಸಗಳೇನು? ಇದಕ್ಕಿರುವ ಕಾರಣಗಳನ್ನು ವಿವರಿಸಿರಿ..
- ಭಾರತದ ಕೆಲವು ಪೋಷಕ ನದಿಗಳನ್ನಾಗಿದೆ ಕೆಳಗೆ ನೀಡಿರುವುದು.
  ಇವುಗಳ ಆಧಾರದಲ್ಲಿ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

  - ಚಂಬಲ್
  - ರಾವಿ
  - ತೀಸ್ತ
  - ಗೋಮತಿ
  - ತುಂಗಭದ್ರಾ
  - ಪೆನುಗಂಗಾ
  - ಸಟ್ಲೇಜ್
  - ಮಾನಸ್
  - ಇಬ್

ಎ) ಯಾವುದೆಲ್ಲಾ ಹಿಮಾಲಯದ ನದಿಗಳ ಪೋಷಕ ನದಿಗಳಾಗಿದೆ?

ಬಿ) ಯಾವುದೆಲ್ಲಾ ಪರ್ಯಾಯ ದ್ವೀಪದ ನದಿಗಳ ಪೋಷಕ ನದಿಗಳಾಗಿದೆ?

ಸಿ) ಪರ್ಯಾಯ ಪೀಠಭೂಮಿಯಿಂದ ಉದ್ಭವಿಸಿ ಗಂಗೆಯನ್ನು ಸೇರುವ ಪೋಷಕ ನದಿಗಳು ಯಾವುವು?

ಡಿ) ಹಿಮಾಲಯದಿಂದ ಉದ್ಭವಿಸಿ ಗಂಗೆಯನ್ನು ಸೇರುವ ಪೋಷಕ ನದಿಗಳು ಯಾವುವು?

ಇ) ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಸಿಂಧೂ ನದಿಯ ಪೋಷಕ ನದಿಗಳು | ಗಂಗಾ ನದಿಯ ಪೋಷಕ ನದಿಗಳು | ಬ್ರಹ್ಮಪುತ್ರಾ ನದಿಯ ಪೋಷಕ ನದಿಗಳು |
|---|---|---|
| | | |

- ಹಿಮಾಲಯವನ್ನು ಆಧಾರವಾಗಿರಿಸಿ ತಯಾರಿಸಿದ ಟಿಪ್ಪಣಿಯನ್ನಾಗಿದೆ ಕೆಳಗೆ ನೀಡಿರುವುದು. ಟಿಪ್ಪಣಿಯಲ್ಲಿ ತಪ್ಪುಗಳಿದ್ದರೆ ಸರಿಪಡಿಸಿ ಬರೆಯಿರಿ.

  *ಹಿಮಾಲಯ ಪರ್ವತ ಸಾಲುಗಳ ಸರಾಸರಿ ಉದ್ದವು 2400 ಕಿ.ಮೀ. ಆಗಿದೆ. ಇದರ ಅಗಲವು ಕಾಶ್ಮೀರದಲ್ಲಿ ಸುಮಾರು 150 ಕಿ.ಮೀ. ಹಾಗೂ ಅರುಣಾಚಲ ಪ್ರದೇಶದಲ್ಲಿ 400 ಕಿ.ಮೀ. ಮೀಟರಾಗಿದೆ. ಈ ವಲಯವು ಮೂರು ಸಮಾನಾಂತರ ಪರ್ವತ ಶ್ರೇಣಿಗಳಿಂದ ಕೂಡಿದೆ. ಇದರ ಉತ್ತರದಂಚಿನಲ್ಲಿ ಸಿವಾಲಿಕ್ ಶ್ರೇಣಿಗಳು, ಅದರ ದಕ್ಷಿಣದಲ್ಲಿ ಹಿಮಾಚಲವು ಹಾಗೂ ಅತ್ಯಂತ ದಕ್ಷಿಣದಲ್ಲಿ ಹಿಮಾದ್ರಿ ಶ್ರೇಣಿಗಳಿರುವುದು.*

- ಪರ್ಯಾಯ ದ್ವೀಪದ ಪೀಠಭೂಮಿಯ ಕೆಲವು ಭೂ ಮಾಹಿತಿಗಳನ್ನಾಗಿದೆ ಕೆಳಗೆ ನೀಡಿರುವುದು. ಅವುಗಳನ್ನು ಪರ್ವತಗಳು ಹಾಗೂ ಪೀಠಭೂಮಿಗಳೆಂದು ವರ್ಗೀಕರಿಸಿ ಬರೆಯಿರಿ.
  - ಮಾಳ್ವ
  - ವಿಂದ್ಯಾ
  - ಪಶ್ಚಿಮ ಘಟ್ಟ
  - ಚೋಟಾನಾಗ್ಪುರ
  - ಸಾತ್ಪುರ
  - ದಖ್ಖಣ

- ಸ್ಥಾನ ಹಾಗೂ ವಿಶೇಷತೆಗಳ ಆಧಾರದಲ್ಲಿ ಪಶ್ಚಿಮ ಕರಾವಳಿ ತೀರ ಮತ್ತು ಪೂರ್ವ ಕರಾವಳಿ ತೀರಗಳನ್ನು ಹೋಲಿಸಿ ಟಿಪ್ಪಣಿ ಬರೆಯಿರಿ.

- ತಿರುವನಂತಪುರ ಹಾಗೂ ದೆಹಲಿಯಲ್ಲಿ ಬೇಸಗೆ ಕಾಲದಲ್ಲಿ ಹಾಗೂ ಚಳಿಗಾಲದಲ್ಲಿ ಹವಾಗುಣವು ಒಂದೇ ರೀತಿಯಾಗಿದೆಯೇ ಅನುಭವಕ್ಕೆ ಬರುವುದು? ಯಾಕಾಗಿ? ಸ್ಪಷ್ಟಪಡಿಸಿರಿ.

## ಆಕರ ಗ್ರಂಥಗಳು


*India - People and Economy- Textbook for Std XI - NCERT*

*India - Physical Environment Textbook for Std XI - NCERT*

*India - A comprehensive Geography - D.R.Khullar*

*Economic and Commercial Geography of India - T.C Sharma, O. Countinho*

*Physical Geography of India - Saroj.K.Pal*

ಇಂಡ್ಯಾಯಿಲೆ ನದಿಗಳ್ – ಕೇರ್ಣಲ್ ಎಲ್.ಬಿ. ನಾಯರ್



# 8

# ಭಾರತದ ಸಂಪನ್ಮೂಲಗಳು

ಹೆಚ್ಚು ಭೂವಿಸ್ತಾರ ಹೊಂದಿದ ದೇಶಗಳಲ್ಲೊಂದಾದ ಭಾರತವು ವೈವಿಧ್ಯಮಯವಾದ ಸಂಪನ್ಮೂಲಗಳಿಂದ ಅನುಗ್ರಹಿಸಲ್ಪಟ್ಟಿರುವ ದೇಶವಾಗಿದೆ. ದೇಶದ ಅಭಿವೃದ್ಧಿಯ ಆಧಾರವು ಸಂಪನ್ಮೂಲಗಳ ಲಭ್ಯತೆ ಹಾಗೂ ಸಂಪನ್ಮೂಲಗಳ ವಿನಿಯೋಗವು ಆಗಿದೆ. ಸಂಪನ್ಮೂಲಗಳು ಧಾರಾಳವಾಗಿರುವುದಾದರೂ ಅವುಗಳನ್ನು ಯಥೋಚಿತವಾಗಿ ವಿನಿಯೋಗಿಸಿದರೆ ಮಾತ್ರವೇ ದೇಶದ ಅಭಿವೃದ್ಧಿಗೆ ಸಹಾಯಕವಾಗಬಹುದು. ಪ್ರಾಚೀನ ಕಾಲದಿಂದಲೇ ಭಾರತದ ಸಂಪನ್ಮೂಲಗಳ ಹಾಗೂ ಅವುಗಳ ಬಳಕೆಯ ಕುರಿತಾಗಿ ಭಾರತೀಯರಿಗೆ ಸ್ಪಷ್ಟವಾದ ತಿಳುವಳಿಕೆ ಇತ್ತು. ಆದರೆ ಯುರೋಪಿಯನರ ವಸಾಹತೀಕರಣದ ಭಾಗವಾಗಿ ಭಾರತದ ಸಂಪನ್ಮೂಲಗಳು ಯುರೋಪಿಗೆ ಸಾಗಿಸಲ್ಪಟ್ಟು ಅವುಗಳಿಂದ ತಯಾರಿಸಿದ ಕೈಗಾರಿಕಾ ಉತ್ಪನ್ನಗಳ ಮಾರಾಟಕ್ಕಿರುವ ಒಂದು ಮಾರುಕಟ್ಟೆಯಾಗಿ ಭಾರತವು ಬದಲಾಯಿತು. ಸಾರ್ವಜನಿಕ ವಲಯದ ಹಾಗೂ ಖಾಸಗಿ ವಲಯದ ಅನೇಕ ಸಂಸ್ಥೆಗಳು ಸ್ವಾತಂತ್ರ್ಯಾನಂತರ ಭಾರತದಲ್ಲಿ ಸಂಪನ್ಮೂಲಗಳನ್ನು ಫಲಪ್ರದವಾಗಿ ಉಪಯೋಗಿಸಿದ ಪರಿಣಾಮವಾಗಿ ಭಾರತದ ಆರ್ಥಿಕ ವ್ಯವಸ್ಥೆಯು ಅಭಿವೃದ್ಧಿಯನ್ನು ಹೊಂದಿತು. ಕಡಿಮೆ ಖರ್ಚಿನ ಹಾಗೂ ಫಲಪ್ರದವಾದ ಸಾರಿಗೆ, ವಾರ್ತಾವಿನಿಮಯ ವ್ಯವಸ್ಥೆಗಳು ಹೆಚ್ಚು ಭೂ ವಿಸ್ತಾರ ಹೊಂದಿದ ಭಾರತದ ಅಭಿವೃದ್ಧಿಗೆ ಅನಿವಾರ್ಯವಾಗಿವೆ. ಈ ದೃಷ್ಟಿಕೋನದೊಂದಿಗೆ ದೇಶದ ಉತ್ಪಾದಕರನ್ನು ಹಾಗೂ ಗ್ರಾಹಕರನ್ನು ತಮ್ಮೊಳಗೆ ಜೋಡಿಸುವ ಉತ್ತಮ ರೀತಿಯ ಸಾರಿಗೆ – ವಾರ್ತಾವಿನಿಮಯ ವ್ಯವಸ್ಥೆಗಳನ್ನು ವಿವಿಧ ಕಾಲಗಳಲ್ಲಾಗಿ ಭಾರತದಲ್ಲಿ ನಿರ್ಮಿಸಲಾಗಿದೆ. ಭಾರತದ ಆರ್ಥಿಕ ವ್ಯವಸ್ಥೆಯ ಅಡಿಪಾಯವಾಗಿರುವ ಪ್ರಧಾನ ವಲಯಗಳಾದ ಕೃಷಿ, ಖನಿಜ, ಕೈಗಾರಿಕೆ ಹಾಗೂ ಸಾರಿಗೆ ಮೊದಲಾದವುಗಳ ಬಗ್ಗೆ ಈ ಯೂನಿಟ್‌ನಲ್ಲಿ ಪ್ರತಿಪಾದಿಸಲಾಗಿದೆ.

## ಯೂನಿಟ್ ಫ್ರೇಂ

# 8. ಭಾರತದ ಸಂಪನ್ಮೂಲಗಳು

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಕೃಷಿ ಮತ್ತು ಕೃಷಿಯಾಧಾರಿತ ಕೈಗಾರಿಕೆಗಳು<br>• ಖನಿಜಗಳು ಹಾಗೂ ಖನಿಜಾಧಾರಿತ ಕೈಗಾರಿಕೆಗಳು<br>• ಸಾರಿಗೆ | • ಭೂಪಟ, ಪಟ್ಟಿ, ಫ್ಲೋಚಾರ್ಟ್ ಎಂಬಿವುಗಳನ್ನು ವಿಶ್ಲೇಷಿಸುವ ಹಾಗೂ ಭೂಪಟಗಳನ್ನು ತಯಾರಿಸುವ ಮೂಲಕ ಭಾರತದ ಕೃಷಿ ಕಾಲಗಳು, ಪ್ರಧಾನ ಬೆಳೆಗಳು ಕೃಷಿಯಾಧಾರಿತ ಕೈಗಾರಿಕೆಗಳನ್ನು ಕಂಡುಕೊಳ್ಳುತ್ತಾರೆ.<br>• ಫ್ಲೋಚಾರ್ಟ್, ಪಟ್ಟಿ ಇತ್ಯಾದಿಗಳನ್ನು ವಿಶ್ಲೇಷಿಸಿ ಮತ್ತು ಭೂಪಟಗಳನ್ನು ತಯಾರಿಸಿ ಭಾರತದ ಪ್ರಧಾನ ಖನಿಜಾಧಾರಿತ ಕೈಗಾರಿಕೆಗಳ ಕುರಿತು ತಿಳಿದುಕೊಳ್ಳುವರು.<br>• ಪಟ್ಟಿ ವಿಶ್ಲೇಷಣೆ, ಭೂಪಟ ಪೂರ್ತಿಗೊಳಿಸುವುದು ಇತ್ಯಾದಿಗಳ ಮೂಲಕ ಭಾರತದ ಪ್ರಧಾನ ಸಾರಿಗೆ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ. | • ಭಾರತದ ಕೃಷಿ ವಲಯದ ಮೇಲೆ ಭೌಗೋಳಿಕ ವಿಶೇಷತೆಗಳಿಗಿರುವ ಪ್ರಭಾವವನ್ನು ಅವಲೋಕಿಸುತ್ತಾರೆ.<br>• ಭಾರತದ ಕೃಷಿ ಕಾಲಗಳಿಗನುಸರಿಸಿ ಕೃಷಿ ಬೆಳೆಗಳನ್ನು ವರ್ಗೀಕರಿಸುತ್ತಾರೆ.<br>• ಕೃಷಿ ಬೆಳೆಗಳನ್ನು ಆಹಾರ ಬೆಳೆಗಳು ಹಾಗೂ ವಾಣಿಜ್ಯ ಬೆಳೆಗಳೆಂದು ವರ್ಗೀಕರಿಸುತ್ತಾರೆ.<br>• ಭಾರತದ ಪ್ರಧಾನ ಕೃಷಿ ಬೆಳೆಗಳಿಗೆ ಅಗತ್ಯವಿರುವ ಭೌಗೋಳಿಕ ಸನ್ನಿವೇಶಗಳನ್ನು ವಿಶ್ಲೇಷಿಸುತ್ತಾರೆ.<br>• ಕೃಷಿಯಾಧಾರಿತ ಮತ್ತು ಖನಿಜಾಧಾರಿತ ಕೈಗಾರಿಕೆಗಳ ಪಟ್ಟಿ ತಯಾರಿಸುತ್ತಾರೆ.<br>• ಖನಿಜಗಳನ್ನು ವರ್ಗೀಕರಿಸಿ ಉದಾಹರಣೆ ಸಹಿತ ಫ್ಲೋಚಾರ್ಟ್ ತಯಾರಿಸುತ್ತಾರೆ.<br>• ಖನಿಜಗಳ ವಿತರಣಾ ಭೂಪಟವನ್ನು ತಯಾರಿಸುತ್ತಾರೆ.<br>• ಭಾರತದ ಪ್ರಧಾನ ಸಾರಿಗೆ ಮಾರ್ಗಗಳಿಗೆ ಸಂಬಂಧಿಸಿದ ವಿವರಣೆಯನ್ನು ತಯಾರಿಸುತ್ತಾರೆ.<br>• ರಾಷ್ಟ್ರದ ಅಭಿವೃದ್ಧಿಯಲ್ಲಿ ಸಾರಿಗೆಯ ಪಾತ್ರವನ್ನು ಅವಲೋಕಿಸುತ್ತಾರೆ.<br>• ಪ್ರಧಾನ ಬಂದರುಗಳನ್ನು ಭಾರತದ ಬಾಹ್ಯ ರೇಖಾಚಿತ್ರದಲ್ಲಿ ಗುರುತಿಸುತ್ತಾರೆ. |

## ಅಧ್ಯಾಯದೆಡೆಗೆ.....

ಭಾರತದ ಪ್ರಧಾನ ಭೌತಿಕ ವಿಶೇಷತೆಗಳಾದ ಭೂಪ್ರಕೃತಿ, ನದಿ ವ್ಯೂಹಗಳು, ಮಣ್ಣಿನ ವಿಧಗಳು ಹಾಗೂ ಹವಾಮಾನ ಇತ್ಯಾದಿಗಳ ಕುರಿತಾಗಿ ಮಕ್ಕಳಿಗೆ ಈ ಮೊದಲಿನ ಅಧ್ಯಾಯದಿಂದ ಸ್ಪಷ್ಟವಾದ ತಿಳುವಳಿಕೆ ಲಭಿಸಿರಬಹುದಲ್ಲವೇ? ಈ ಭೌತಿಕ ವಿಶೇಷತೆ ಗಳೊಂದಿಗೆ ಸೇರಿಕೊಂಡು ರೂಪುಗೊಂಡಿ ರುವ ಕೃಷಿ, ಖನನ(ಖನಿಜಗಳು), ಕೈಗಾರಿಕೆ ಹಾಗೂ ಸಾರಿಗೆ ಎಂಬೀ ಸಾಂಸ್ಕೃತಿಕ ವಿಶೇಷತೆಗಳ ಕುರಿತಾಗಿ ಮಕ್ಕಳಲ್ಲಿ ಸ್ಪಷ್ಟವಾದ ತಿಳುವಳಿಕೆಯನ್ನು ರೂಪಿಸುವ ಉದ್ದೇಶದೊಂದಿಗೆ 'ಭಾರತದ ಸಂಪನ್ಮೂಲಗಳು' ಎಂಬ ಈ ಯೂನಿಟ್‌ನ್ನು ತಯಾರಿಸಲಾಗಿದೆ. ಕಲಿಕೆ ಹಾಗೂ ಬೋಧನ ಸೌಕರ್ಯಕ್ಕಾಗಿ ಈ ಯೂನಿಟನ್ನು ಮೂರು ವಿಭಾಗಗಳಾಗಿ ವರ್ಗೀಕರಿಸಬಹುದು.

- ಕೃಷಿ ಹಾಗೂ ಕೃಷಿಯಾಧಾರಿತ ಕೈಗಾರಿಕೆಗಳು
- ಖನಿಜಗಳು ಹಾಗೂ ಖನಿಜಾಧಾರಿತ ಕೈಗಾರಿಕೆಗಳು
- ಸಾರಿಗೆ

### ಕೃಷಿ ಹಾಗೂ ಕೃಷಿಯಾಧಾರಿತ ಕೈಗಾರಿಕೆಗಳು

ಕೃಷಿ ಹಾಗೂ ಕೃಷಿಯಾಧಾರಿತ ಕೈಗಾರಿಕೆಗಳು ಎಂಬ ಶೀರ್ಷಿಕೆಯಿಂದಾರಂಭಿಸಿ ಭಾರತದ ಪ್ರಧಾನ ಕೃಷಿಯಾಧಾರಿತ ಕೈಗಾರಿಕೆಗಳ ಪಟ್ಟಿ ತಯಾರಿಸಲಿರುವ ಚಟುವಟಿಕೆಯ ವರೆಗಿನ ಪಾಠಭಾಗವನ್ನು ಈ ಉಪವಿಭಾಗದಲ್ಲಿ ಸೇರಿಸಲಾಗಿದೆ. ಭೂಪಟ ವಿಶ್ಲೇಷಣೆ, ಪಟ್ಟಿ ವಿಶ್ಲೇಷಣೆ ಹಾಗೂ ಚರ್ಚೆಗಳ ಮೂಲಕ ಹೆಚ್ಚಿನ ಮಾಹಿತಿ ಸಂಗ್ರಹಕ್ಕಾಗಿ ಮಕ್ಕಳನ್ನು ಪ್ರೇರೇಪಿಸಬೇಕು.

ಈ ಉಪಯೂನಿಟಿನ ಮೂಲಕ ಮಕ್ಕಳಲ್ಲಿ ರೂಪುಗೊಳ್ಳಬೇಕಾದ ಆಶಯಗಳನ್ನು ಹಾಗೂ ತಿಳುವಳಿಕೆಗಳನ್ನು ಕೆಳಗೆ ಕೊಡಲಾಗಿದೆ.

- ಭಾರತದಲ್ಲಿ ವಿವಿಧ ಕೃಷಿ ಬೆಳೆಗಳನ್ನು ಬೆಳೆಸುವುದಕ್ಕೆ ಸಹಾಯಕವಾದ ಭೌಗೋಳಿಕ ಘಟಕಗಳು.
- ಭಾರತದ ಕೃಷಿಕಾಲಗಳು
- ಕೃಷಿ ಬೆಳೆಗಳು – ಆಹಾರ ಬೆಳೆಗಳು– ವಾಣಿಜ್ಯ ಬೆಳೆಗಳು
- ಭಾರತದ ಪ್ರಧಾನ ಆಹಾರ ಬೆಳೆಗಳಾದ ಭತ್ತ, ಗೋಧಿ, ಜೋಳ ಎಂಬೀ ಬೆಳೆಗಳ ವಿತರಣೆ ಹಾಗೂ ಇವುಗಳ ಕೃಷಿಗೆ ಅಗತ್ಯವಾದ ಭೌಗೋಳಿಕ ಘಟಕಗಳು.
- ವಾಣಿಜ್ಯ ಬೆಳೆಗಳನ್ನು ವರ್ಗೀಕರಿಸುವುದು.
- ಹತ್ತಿ ಕೃಷಿ ಮತ್ತು ಹತ್ತಿ ಬಟ್ಟೆ ಕೈಗಾರಿಕೆ
- ಸೆಣಬಿನ ಕೃಷಿ ಮತ್ತು ಸೆಣಬಿನ ಕೈಗಾರಿಕೆ
- ಚಾ, ಕಾಫಿ, ಸಾಂಬಾರು ಜೀನಸುಗಳು
- ಕಬ್ಬಿನ ಕೃಷಿ ಮತ್ತು ಸಕ್ಕರೆ ಕೈಗಾರಿಕೆ
- ರಬ್ಬರ್ ಕೃಷಿ

ಭಾರತದಲ್ಲಿ ವಿವಿಧ ಕೃಷಿ ಬೆಳೆಗಳನ್ನು ಬೆಳೆಸಲು ಸಹಾಯಕವಾದ ಭೌಗೋಳಿಕ ಘಟಕಗಳು ಯಾವುವೆಂದು ಕಂಡುಕೊಳ್ಳಲಿರುವ ಚಟುವಟಿಕೆ ಯೊಂದನ್ನು ಪಾಠಭಾಗದಲ್ಲಿ ನೀಡಲಾಗಿದೆ. ಕೆಳಗೆ ನೀಡಿರುವಂತೆ ಚಟುವಟಿಕೆಯನ್ನು ಕ್ರೋಡೀಕರಿಸಬೇಕು.

- ಭೂ ಪ್ರಕೃತಿಯ ವೈವಿಧ್ಯತೆ
- ವರ್ಷಪೂರ್ತಿ ಕಂಡುಬರುವ ಸೂಕ್ತವಾದ ಕೃಷಿ ಹವಾಮಾನ
- ವಿಸ್ತಾರವಾದ ಮತ್ತು ಸಮತಟ್ಟಾದ ಕೃಷಿ ಸ್ಥಳಗಳು

- ವೈವಿಧ್ಯದಿಂದೊಡಗೂಡಿದ ಫಲವತ್ತಾದ ಮಣ್ಣು
- ಮನ್ಸೂನು ಮಳೆ ಹಾಗೂ ನೀರಾವರಿಯ ಮೂಲಕ ಜಲದ ಲಭ್ಯತೆ ಇರುವುದು.
- ಬೆಳೆಗಳ ಬೆಳವಣಿಗೆಗೆ ಸೂಕ್ತವಾದ ದೀರ್ಘ ಕೃಷಿ ಕಾಲಗಳಿರುವುದು.
-

**ಆಹಾರ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳು**

ಭಾರತದಲ್ಲಿ ವಾಣಿಜ್ಯ ಬೆಳೆಗಳಿಗಿಂತ ಹೆಚ್ಚಾಗಿ ಆಹಾರ ಬೆಳೆಯನ್ನು ಬೆಳೆಸಲಾಗುತ್ತದೆ. ಯಾವುದಾದರೊಂದು ಆಹಾರ ಬೆಳೆಯನ್ನು ಬೆಳೆಸದ ಪ್ರದೇಶ ಭಾರತದಲ್ಲಿ ಇಲ್ಲವೆಂದೇ ಹೇಳಬಹುದು. ಭಾರತದ ಒಟ್ಟು ಕೃಷಿ ಭೂಮಿಯ ಸುಮಾರು 75 ಶೇಕಡಾ ದಲ್ಲಿ ಆಹಾರ ಬೆಳೆಗಳನ್ನಾಗಿದೆ ಕೃಷಿ ಮಾಡುವುದು. ಉತ್ತರ ಭಾರತದ ಪ್ರಾಂತ್ಯಗಳಲ್ಲಿ ಗೋಧಿ, ಭತ್ತ, ಜೋಳ, ಬಾಜ್ರ ಕಬ್ಬು ಇತ್ಯಾದಿ ಕೃಷಿ ಬೆಳೆಗಳನ್ನು ಪ್ರಧಾನವಾಗಿ ಕೃಷಿ ಮಾಡುವಾಗ ಹತ್ತಿ, ನೆಲಕಡಲೆ, ಹೊಗೆಸೊಪ್ಪು, ಜೋವರ್, ಸುಗಂಧ ದ್ರವ್ಯ ಇತ್ಯಾದಿಗಳನ್ನು ದಕ್ಷಿಣ ಭಾರತ ರಾಜ್ಯಗಳಲ್ಲಿ ಕೃಷಿ ಬೆಳೆಯಾಗಿ ಬೆಳೆಸುತ್ತಾರೆ.

### ಕೃಷಿ ಬೆಳೆಗಳು

ಭಾರತದ ಕೃಷಿ ಬೆಳೆಗಳನ್ನು ಉಪಯೋಗದ ಆಧಾರದಲ್ಲಿ ಆಹಾರ ಬೆಳೆ (Food crops) ಹಾಗೂ ವಾಣಿಜ್ಯ (Cash crops) ಬೆಳೆಗಳೆಂದು ಎರಡಾಗಿ ವರ್ಗೀಕರಿಸಲಾಗಿದೆ.

### ಭತ್ತ

ಭಾರತದಲ್ಲಿ ಭತ್ತದ ಬೆಳೆಯನ್ನು ಬೆಳೆಸುವ ಪ್ರದೇಶಗಳನ್ನು ಚಿತ್ರಿಸಿರುವ ಭೂಪಟದಿಂದ (ಚಿತ್ರ 8.2) ಭತ್ತದ ಕೃಷಿ ಮಾಡುವ ಪ್ರಾಂತ್ಯಗಳು ಯಾವುವೆಂದು ಕಂಡುಕೊಳ್ಳುವ ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಮಕ್ಕಳು ಈ ಚಟುವಟಿಕೆಯನ್ನು ಮಾಡಿದರು ಎಂದು ದೃಢಪಡಿಸಿದ ಮೇಲೆ ಈ ಕೆಳಗಿನಂತೆ ಕ್ರೋಡೀಕರಿಸಬೇಕು.

ಭಾರತದಲ್ಲಿ ಸುಮಾರು 23 ಶೇಕಡಾ ಕೃಷಿ ಭೂಮಿಯಲ್ಲಿ ಭತ್ತದ ಕೃಷಿಯನ್ನು ಮಾಡುತ್ತಾರೆ. ಭಾರತದ ಪ್ರಧಾನ ಭತ್ತ ಉತ್ಪಾದನಾ ಪ್ರದೇಶಗಳನ್ನು ಕೆಳಗೆ ನೀಡಲಾಗಿದೆ.

- ಗಂಗಾ ಬಯಲು ಹಾಗೂ ಡೆಲ್ಟಾ ಪ್ರದೇಶಗಳು
- ಪೂರ್ವದ ಕರಾವಳಿ ತೀರಗಳು
- ಪಶ್ಚಿಮದ ಕರಾವಳಿ ತೀರಗಳು
- ಪೂರ್ವದ ಪರ್ಯಾಯ ಪೀಠಭೂಮಿ
- ಈಶಾನ್ಯದ ಬೆಟ್ಟ ಪ್ರದೇಶಗಳು

ಭಾರತದಲ್ಲಿ ಅತ್ಯಂತ ಹೆಚ್ಚು ಭತ್ತವನ್ನು ಉತ್ಪಾದಿಸುವ ಪ್ರಾಂತ್ಯ ಪಶ್ಚಿಮ ಬಂಗಾಳವಾಗಿದೆ. ಉತ್ತರಪ್ರದೇಶ ಹಾಗೂ ಆಂಧ್ರಪ್ರದೇಶಗಳು ಯಥಾ ಪ್ರಕಾರ ಭತ್ತದ ಕೃಷಿಯಲ್ಲಿ ಎರಡು ಮತ್ತು ಮೂರನೆಯ ಸ್ಥಾನದಲ್ಲಿದೆ.

ಭಾರತದ ಪಶ್ಚಿಮ ಬಂಗಾಳ, ಉತ್ತರಪ್ರದೇಶ, ಆಂಧ್ರಪ್ರದೇಶ, ತಮಿಳುನಾಡು, ಬಿಹಾರ, ಅಸ್ಸಾಂ, ಒಡಿಶ್ಯಾ, ಛತ್ತೀಸ್‌ಗಢ, ಹರಿಯಾಣ, ಕರ್ನಾಟಕ, ಝಾರ್ಖಂಡ್, ಮಹಾರಾಷ್ಟ್ರ, ಮಧ್ಯಪ್ರದೇಶ, ಕೇರಳ, ಗೋವ, ಗುಜರಾತ್ ಮತ್ತು ಉತ್ತರಾಖಂಡ್ ಎಂಬೀ ಪ್ರಾಂತ್ಯಗಳಲ್ಲಿ ಭತ್ತದ ಕೃಷಿಯನ್ನು ಮಾಡುತ್ತಾರೆ.

### ಗೋಧಿ

ಗೋಧಿ ಕೃಷಿ ಮಾಡುವ ಪ್ರದೇಶಗಳನ್ನು ಚಿತ್ರಿಸಿರುವ ಭೂಪಟದಿಂದ (ಚಿತ್ರ 8.3) ಭಾರತದಲ್ಲಿ ಗೋಧಿ ಕೃಷಿ ಮಾಡುವ ಪ್ರಾಂತ್ಯಗಳು ಯಾವುವೆಂದು ಕಂಡು ಕೊಳ್ಳಲಿರುವ ಚಟುವಟಿಕೆಯನ್ನು ನೀಡಲಾಗಿದೆ. ಕೆಳಗೆ ನೀಡಿರುವವುಗಳನ್ನು ಇದರ ಕ್ರೋಡೀಕರಣಕ್ಕೆ ಬಳಸಿಕೊಳ್ಳಬಹುದು. ಮಕ್ಕಳೆಲ್ಲರು ಈ ಚಟುವ ಟಿಕೆಯನ್ನು ಪೂರ್ತಿಗೊಳಿಸಿದರೆಂದು ದೃಢಪಡಿ ಸಬೇಕು.

ಭಾರತದಲ್ಲಿ ಭತ್ತದ ಬಳಿಕ ಗೋಧಿ ಕೃಷಿ ವಿಸ್ತೀರ್ಣದಲ್ಲಿ ಹಾಗೂ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಭಾರತದಲ್ಲಿ ಗೋಧಿ ಕೃಷಿ ಮಾಡುವ ಪ್ರದೇಶವನ್ನು ಎರಡಾಗಿ ವರ್ಗೀಕರಿಸಬಹುದು.

- ಗಂಗಾ – ಸಟ್ಲೇಜ್ ಪ್ರದೇಶ
- ದಖ್ಖಣದ ಕಪ್ಪು ಮಣ್ಣು ಪ್ರದೇಶ

ಭಾರತದಲ್ಲಿ ಅತೀ ಹೆಚ್ಚು ಗೋಧಿ ಉತ್ಪಾದಿಸುವ ಪ್ರಾಂತ್ಯ ಉತ್ತರಪ್ರದೇಶವಾಗಿದೆ. ಪಂಜಾಬ್ ಎರಡನೇ ಸ್ಥಾನದಲ್ಲಿದೆ. ಪಂಜಾಬ್ ಮತ್ತು ಹರಿಯಾಣ ಪ್ರಾಂತ್ಯಗಳನ್ನು 'ಗೋಧಿಯ ನಾಡು' ಎಂದು ಕರೆಯುತ್ತಾರೆ.

ಭಾರತದ ಉತ್ತರಪ್ರದೇಶ, ಮಧ್ಯಪ್ರದೇಶ, ಬಿಹಾರ, ಗುಜರಾತ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಹಿಮಾಚಲ ಪ್ರದೇಶ, ಜಮ್ಮುಕಾಶ್ಮೀರ, ಉತ್ತರಾಖಂಡ ಎಂಬೀ ಪ್ರಾಂತ್ಯಗಳಲ್ಲಿ ಗೋಧಿ ಕೃಷಿಯನ್ನು ಮಾಡುತ್ತಾರೆ.

ಕೇರಳದಲ್ಲಿ ಗೋಧಿ ಕೃಷಿಗೆ ಸೂಕ್ತವಾದ ಭೌಗೋಳಿಕ ಘಟಕಗಳು ಇಲ್ಲದಿರುವುದರಿಂದ ಕೇರಳದಲ್ಲಿ ಗೋಧಿ ಕೃಷಿ ಮಾಡುವುದಿಲ್ಲ.

**ಜೋಳ**

ಭಾರತದಲ್ಲಿ ಹದಿನೇಳನೇ ಶತಮಾನದಲ್ಲಿ ಜೋಳದ ಕೃಷಿಯನ್ನು ಪ್ರಥಮವಾಗಿ ಆರಂಭಿಸಲಾಯಿತು. ಇದಕ್ಕೆ ಅಗತ್ಯವಾದ ಜೋಳವನ್ನು ಅಮೇರಿಕಾದಿಂದಾಗಿದೆ ತರಲಾಯಿತು. ಉತ್ತರ ಭಾರತದ ಪರ್ವತಗಳು ಹಾಗೂ ಉತ್ತರದ ಪರ್ವತ ವಲಯಗಳಲ್ಲಿ ಜೋಳವು ಒಂದು ಪ್ರಧಾನ ಆಹಾರವಾಗಿದೆ. ಇದಲ್ಲದೆ ಜೋಳವನ್ನು ಜಾನುವಾರುಗಳ ಆಹಾರವಾಯೂ ಕೆಲವು ಕೈಗಾರಿಕೆಗಳಿಗಾಗಿಯೂ (ಸ್ಟಾರ್ಚ್, ಗ್ಲುಕೋಸ್ ನಿರ್ಮಾಣ) ಉಪಯೋಗಿಸುತ್ತಾರೆ. ಉತ್ತರಪ್ರದೇಶ, ರಾಜಸ್ತಾನ್, ಆಂಧ್ರಪ್ರದೇಶ, ಹಿಮಾಚಲ ಪ್ರದೇಶ, ಕರ್ನಾಟಕ, ಜಮ್ಮುಕಾಶ್ಮೀರ, ಗುಜರಾತ್ ಹಾಗೂ ಒಡಿಶ್ಯಾ ಜೋಳವನ್ನು ಕೃಷಿ ಮಾಡುವ ಪ್ರಧಾನ ಪ್ರಾಂತ್ಯಗಳಾಗಿವೆ.

**ಹತ್ತಿ ಕೃಷಿ ಮತ್ತು ಹತ್ತಿ ಬಟ್ಟೆ ಕೈಗಾರಿಕೆ**

ಭಾರತದಲ್ಲಿ ಹತ್ತಿ ಕೃಷಿ ಮಾಡುವ ಪ್ರಾಂತ್ಯಗಳು ಯಾವುವೆಂದು ನೀಡಿರುವ ಭೂಪಟದಿಂದ (ಚಿತ್ರ 9.4) ಕಂಡುಕೊಳ್ಳಲಿರುವ ಚಟುವಟಿಕೆಯುನ್ನು ಗಮನಿಸಿದಿರಲ್ಲವೇ. ಈ ಕೆಳಗೆ ನೀಡಿರುವವುಗಳನ್ನು ಈ ಪಾಠಭಾಗದ ಕ್ರೋಡೀಕರಣಕ್ಕೆ ಉಪಯೋಗಿಸಬೇಕಾದುದು.

ಭಾರತದಲ್ಲಿ ಹತ್ತಿ ಉತ್ಪಾದನೆಯಲ್ಲಿ ಒಂದನೆಯ ಸ್ಥಾನವು ಮಹಾರಾಷ್ಟ್ರಕ್ಕಾಗಿದೆ. ಗುಜರಾತ್ ಎರಡನೆಯ ಸ್ಥಾನದಲ್ಲಿದೆ. ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ, ಪಂಜಾಬ್, ಹರಿಯಾನ ಪ್ರಾಂತ್ಯಗಳಲ್ಲಿ ಪ್ರಧಾನವಾಗಿ ಹತ್ತಿ ಕೃಷಿಯನ್ನು ಮಾಡುತ್ತಾರೆ.

ಹತ್ತಿ ಉತ್ಪಾದನೆಯಲ್ಲಿ ಚೈನಾ, ಅಮೇರಿಕಾ ಸಂಯುಕ್ತ ರಾಷ್ಟ್ರಗಳು, ರಷ್ಯಾ ಎಂಬಿವುಗಳ ಬಳಿಕ ನಾಲ್ಕನೇ ಸ್ಥಾನದಲ್ಲಿರುವುದು ಭಾರತವಾಗಿದೆ.

ಭಾರತದ ಪ್ರಧಾನ ಹತ್ತಿ ಬಟ್ಟೆ ಕೈಗಾರಿಕಾ ಕೇಂದ್ರಗಳು ಯಾವುವೆಂದು ಭೂಪಟ (ಚಿತ್ರ 8.4)ನ್ನು ನಿರೀಕ್ಷಿಸಿ ಕಂಡುಕೊಳ್ಳಲಿರುವ ಚಟುವಟಿಕೆಯುನ್ನು ಪಾಠಭಾಗದಲ್ಲಿ ನೀಡಲಾಗಿದೆ. ಅವುಗಳನ್ನು ಕೆಳಗೆ ನೀಡಲಾಗಿದೆ.

- ಮಹಾರಾಷ್ಟ್ರ –
  ಮುಂಬೈ, ಪೂನಾ, ಸೋಲಾಪುರ, ಕೋಲಾಪುರ, ಸಾಂಗೂಲಿ, ಔರಂಗಾಬಾದ್, ಜಾಲ್‌ಗೋನ್, ನಾಗ್‌ಪುರ, ವಾರ್ದ
- ಗುಜರಾತ್ –
  ಅಹಮ್ಮದಾಬಾದ್, ರಾಜ್‌ಕೋಟ್, ವಡೋದರ, ಪೋರ್‌ಬಂದರ್, ಸೂರತ್.
- ಆಂಧ್ರಪ್ರದೇಶ –
  ಹೈದರಾಬಾದ್, ವಾರಂಗಲ್, ಗುಂಡೂರ್
- ಮಧ್ಯಪ್ರದೇಶ –
  ಉಜ್ಜೈನಿ, ದೇವಾಸ್, ಇಂಡೋರ್, ಗ್ವಾಲಿಯೊರ್, ಬೂರ್ಹಲ್‌ಪುರ

- ಕರ್ನಾಟಕ –
  ಬೆಂಗಳೂರು, ಮೈಸೂರು, ದಾವಣಗೆರೆ, ಬಳ್ಳಾರಿ, ಹುಬ್ಬಳ್ಳಿ
- ತಮಿಳುನಾಡು –
  ಚೆನ್ನೈ, ಸೇಲಂ, ಕೊಯಂಬತ್ತೂರು, ಮಧುರೈ, ತೂತುಕುಡಿ, ನೈವೇಲಿ
- ಉತ್ತರಪ್ರದೇಶ –
  ಲಕ್ನೋ, ಕಾನ್ಪುರ, ವಾರಣಾಸಿ, ಆಗ್ರಾ, ಆಲಿಘಡ್, ಔರಂಗಾಬಾದ್, ಸಹರಾಂಪುರ್
- ಪಶ್ಚಿಮ ಬಂಗಾಳ –
  ಕೋಲ್ಕತ್ತ, ಹೌರ, ಹೂಗ್ಲಿ, ಮೂರ್ಷಿದಾಬಾದ್
- ದಿಲ್ಲಿ (ದೆಹಲಿ)

### ಸೆಣಬಿನ ಕೃಷಿ ಮತ್ತು ಸೆಣಬಿನ ಕೈಗಾರಿಕೆ

ಸೆಣಬಿನ ಉತ್ಪಾದನೆಯಲ್ಲಿ ಬಾಂಗ್ಲಾದೇಶದ ಬಳಿಕ ಎರಡನೇ ಸ್ಥಾನದಲ್ಲಿರುವುದು ಭಾರತವಾಗಿದೆ. 'ಸ್ವರ್ಣ ನಾರು' (golden fibre) ಎಂದು ಕರೆಯಲ್ಪಡುವ ಸೆಣಬು ಹತ್ತಿಯಂತೆ ವಿದೇಶ ನಾಣ್ಯವನ್ನು ಗಳಿಸುವ ವಾಣಿಜ್ಯ ಬೆಳೆಯಾಗಿದೆ.

ಪಾಠಪುಸ್ತಕದ ಕೊನೆಯ ಭಾಗದಲ್ಲಿ ನೀಡಿರುವ ಭಾರತದ ರೂಪರೇಶೆಯಲ್ಲಿ ಸೆಣಬನ್ನು ಉತ್ಪಾದಿಸುವ ಪ್ರಾಂತ್ಯಗಳಾದ ಪಶ್ಚಿಮ ಬಂಗಾಳ, ಆಸ್ಸಾಂ, ಒಡಿಶ್ಶಾದ ಕೆಲವು ಭಾಗ (ಕಟಕ್, ಪುರಿ, ಬೋಲಂಗೀರ್)ಗಳನ್ನು ಗುರುತಿಸಿ ಭೂಪಟ ಸಂಗ್ರಹದಲ್ಲಿ ಸೇರಿಸಲು ಮಕ್ಕಳಲ್ಲಿ ಹೇಳಬೇಕು.

ಕೃಷಿಯಾಧಾರಿತ ಕೈಗಾರಿಕೆಗಳಲ್ಲಿ ಹತ್ತಿ ಬಟ್ಟೆಯ ಕೈಗಾರಿಕೆಯ ನಂತರದ ಸ್ಥಾನವು ಸೆಣಬಿನ ಕೈಗಾರಿಕೆಗಾಗಿದೆ. ದೇಶಕ್ಕೆ ವಿದೇಶಿ ನಾಣ್ಯ ಗಳಿಸಿಕೊಡುವುದರಲ್ಲಿ ಈ ಕೈಗಾರಿಕೆಗೆ ನಿರ್ಣಾಯಕ ಸ್ಥಾನವಿದೆ. 1947ಕ್ಕಿಂತ ಮೊದಲು ಇಂದಿನ ಬಾಂಗ್ಲಾದೇಶದ ಢಾಕ್ಕ, ಮೈಮೆನ್‌ಸಿಂಗ್, ಟಿಪ್ಪೆರ, ಹರಿತ್‌ಪುರ್ ಜಿಲ್ಲೆಗಳಿಂದ ಹೆಚ್ಚಿನ ಕಚ್ಛಾ ಸೆಣಬಿನ ಬಹುಪಾಲು ಲಭಿಸುತ್ತಿತ್ತು. ಆದರೆ ಈಗ ಕಚ್ಛಾ ಸೆಣಬಿನ ಪ್ರಧಾನ ಕೇಂದ್ರಗಳು ಭಾರತದಲ್ಲೇ ಇರುವ ಮುರ್ಷಿದಾಬಾದ್ ನಾದಿಯಾ, ಪಶ್ಚಿಮ ದಿನಾಜ್‌ಪುರ್, ಕುಚ್‌ಬಿಹಾರ್, ಹೂಗ್ಲಿ ಎಂಬೀ ಜಿಲ್ಲೆಗಳಾಗಿವೆ. ಭಾರತದಲ್ಲಿ ಸುಮಾರು 105 ಸೆಣಬಿನ ಮಿಲ್ಲುಗಳು ಕಾರ್ಯಾಚರಿಸುತ್ತಿವೆ. ಅವುಗಳಲ್ಲಿ 95 ಮಿಲ್ಲುಗಳು ಇರುವುದು ಪಶ್ಚಿಮ ಬಂಗಾಳದಲ್ಲಾಗಿದೆ.

ಸೆಣಬಿನ ನೂಲು/ಹಗ್ಗ, ಸೆಣಬಿನ ಗೋಣಿಗಳು, ಸೆಣಬಿನ ಬ್ಯಾಗುಗಳು ಹಾಗೂ ಸೆಣಬಿನ ಬಟ್ಟೆಬರೆ ಇತ್ಯಾದಿಗಳು ಸೆಣಬಿನಿಂದ ಉತ್ಪಾದಿಸುವ ಪ್ರಧಾನ ಉತ್ಪನ್ನಗಳಾಗಿವೆ.

> ಕಚ್ಛಾ ಸೆಣಬಿನ ಮಾರುಕಟ್ಟೆ ಬೆಲೆ ಕುಸಿತವನ್ನು ತಡೆಗಟ್ಟಲು ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸೆಣಬಿನ ಉತ್ಪನ್ನಗಳ ವ್ಯಾಪಾರವನ್ನು ಪ್ರೋತ್ಸಾಹಿಸುವುದಕ್ಕಾಗಿ 1971ರಲ್ಲಿ ಕೋಲ್ಕತ್ತಾವನ್ನು ಕೇಂದ್ರೀಕರಿಸಿ 'ಜೂಟ್ ಕೋರ್ಪರೇಷನ್ ಓಫ್ ಇಂಡಿಯಾ' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು.

### ಚಾ ಸೊಪ್ಪು

ಭಾರತದಲ್ಲಿ ಪ್ರಥಮವಾಗಿ 1823ರಲ್ಲಿ ಆಸ್ಸಾಮಿನಲ್ಲಿ ಚಾ ಸೊಪ್ಪು ಕೃಷಿಯನ್ನು ಆರಂಭಿಸಲಾಯಿತು. ಭಾರತದ ಪ್ರಧಾನ ಚಾ ಸೊಪ್ಪು ಉತ್ಪಾದಕ ಪ್ರಾಂತ್ಯಗಳಾದ ಆಸ್ಸಾಂ, ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು ಎಂಬೀ ಪ್ರಾಂತ್ಯಗಳನ್ನು ಪಾಠಪುಸ್ತಕದ ಕೊನೆಯ ಭಾಗದಲ್ಲಿ ನೀಡಿರುವ ಭಾರತದ ರೂಪುರೇಶೆಯಲ್ಲಿ ಗುರುತಿಸಿ ಭೂಪಟಗಳ ಸಂಗ್ರಹದಲ್ಲಿ ಸೇರಿಸಲು ಮಕ್ಕಳಲ್ಲಿ ಹೇಳಬೇಕು.

ಕೇರಳದ ಇಡುಕ್ಕಿ ಮತ್ತು ವಯನಾಡು ಜಿಲ್ಲೆಗಳಲ್ಲಿ ಚಾ ಸೊಪ್ಪು ಕೃಷಿಗೆ ಸೂಕ್ತವಾದ ಭೌಗೋಳಿಕ ಘಟಕಗಳಾದ 200ರಿಂದ 250 ಸೆಂಟಿಮೀಟರ್ ವರೆಗಿನ ವಾರ್ಷಿಕ ಮಳೆಯೂ $25^{o}$ ಯಿಂದ $30^{o}$ ಸೆಲ್ಶಿಯಸ್‌ನ ವರೆಗಿನ ಉಷ್ಣತೆ ಇರು ಬೆಟ್ಟದ ಇಳಿಜಾರು ಹಾಗೂ ಜೈವಿಕಾಂಶವಿರುವ ನೀರು ಇಂಗಿ

ಹೋಗುವಂತಹ ಮಣ್ಣಿರುವುದರಿಂದ ವ್ಯಾಪಕವಾಗಿ ಇಲ್ಲಿ ಚಾ ಸೊಪ್ಪು ಕೃಷಿ ಮಾಡುತ್ತಾರೆ.

**ಕಾಫಿ**

ಬ್ರಿಟಿಷರು 1826 ರಲ್ಲಿ ಕರ್ನಾಟಕದಲ್ಲಿ ಪ್ರಥಮವಾಗಿ ಕಾಫಿ ಕೃಷಿಯನ್ನು ಆರಂಭಿಸಿದರು. ಭಾರತದಲ್ಲಿ ಕೃಷಿ ಮಾಡುವುದು ಮೂರು ವಿಧದ ಕಾಫಿ ತಳಿಗಳನ್ನಾಗಿದೆ. ಅವು ಅರಬಿಕ್, ರೊಬಾಸ್ಟ, ಅಬಾರಿಕ್ ಎಂಬಿವುಗಳಾಗಿವೆ.

ಕಾಫಿಯ ಉತ್ಪಾದಕ ಪ್ರಾಂತ್ಯಗಳಾದ ಕರ್ನಾಟಕ, ಕೇರಳ, ತಮಿಳ್ನಾಡು ಎಂಬಿವುಗಳನ್ನು ಭಾರತದ ರೂಪುರೇಶೆಯಲ್ಲಿ ಗುರುತಿಸಿ ಭೂಪಟ ಸಂಗ್ರಹದಲ್ಲಿ ಸೇರಿಸಲು ಹೇಳಬೇಕು.

**ಸುಗಂಧದ್ರವ್ಯಗಳು**

ಭಾರತವು ಸುಗಂಧದ್ರವ್ಯಗಳ ರಫ್ತುನಲ್ಲಿ ಅಗ್ರಸ್ಥಾನದಲ್ಲಿದೆ. ಸುಗಂಧದ್ರವ್ಯಗಳನ್ನು ಪ್ರಧಾನವಾಗಿ ಉತ್ಪಾದಿಸುವುದು ಕೇರಳ, ತಮಿಳ್ನಾಡು, ಕರ್ನಾಟಕ ಎಂಬೀ ಪ್ರಾಂತ್ಯಗಳಲ್ಲಾಗಿದೆ.

ಸುಗಂಧ ದ್ರವ್ಯಗಳನ್ನು ಆಹಾರ ಪದಾರ್ಥಗಳಿಗೆ ಪರಿಮಳ ಹಾಗೂ ರುಚಿಯನ್ನು ನೀಡುವುದಕ್ಕೆ ಮತ್ತು ಔಷಧಿಗಳ ನಿರ್ಮಾಣಕ್ಕೆ ಉಪಯೋಗಿಸುತ್ತಾರೆ.

ಭಾರತದಿಂದ ಪ್ರಾಚೀನ ಕಾಲದಿಂದಲೇ ಸುಗಂಧ ದ್ರವ್ಯಗಳನ್ನು ಇತರ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಯುರೋಪಿಯನ್ನರನ್ನು ಭಾರತದೆಡೆಗೆ ಆಕರ್ಷಿಸಲಿರುವ ಒಂದು ಕಾರಣ ಸುಗಂಧ ದ್ರವ್ಯಗಳ ಪ್ರಾಧಾನ್ಯ ಹಾಗೂ ಭಾರತದಲ್ಲಿ ಅವುಗಳ ಲಭ್ಯತೆಯಾಗಿತ್ತು.

**ಕಬ್ಬಿನ ಕೃಷಿ ಮತ್ತು ಸಕ್ಕರೆ ಕೈಗಾರಿಕೆ**

ಬಿದಿರು ವರ್ಗಕ್ಕೆ ಸೇರಿದ ಉಷ್ಣವಲಯದ ಸಸ್ಯವಾದ ಕಬ್ಬಿನ ತಾಯ್ನಾಡು ಭಾರತವಾಗಿದೆ. ಸಕ್ಕರೆ ಉತ್ಪಾದನೆಯಲ್ಲಿ ಜಾಗತಿಕ ಮಟ್ಟದಲ್ಲಿ ಪ್ರಥಮ ಸ್ಥಾನ ಬ್ರೆಜಿಲಿಗೆ ಹಾಗೂ ಎರಡನೆಯ ಸ್ಥಾನವು ಭಾರತಕ್ಕಾಗಿದೆ. ಸಕ್ಕರೆ ಉತ್ಪಾದನೆಗೆ ಬಳಸುವ ಪ್ರಧಾನ ಕಚ್ಚಾವಸ್ತುವಾದ ಕಬ್ಬನ್ನುಪಯೋಗಿಸಿಕೊಂಡು ಪಾನೀಯಗಳನ್ನು ಹಾಗೂ ಆಹಾರ ವಸ್ತುಗಳನ್ನೂ ತಿಂಡಿಗಳನ್ನೂ ತಯಾರಿಸುತ್ತಾರೆ. ಕಬ್ಬಿನ ರಸದಿಂದ ಉತ್ಪಾದಿಸುವ ಇನ್ನೊಂದು ಉತ್ಪನ್ನವಾಗಿದೆ ಬೆಲ್ಲ. ಕಬ್ಬನ್ನು ಕಟಾವು ಮಾಡಿದ ಕೂಡಲೇ ಅದರಿಂದ ರಸವನ್ನು ತೆಗೆಯಬೇಕು. ಅಲ್ಲದಿದ್ದರೆ ಅದರಲ್ಲಿರುವ ರಸದ ಪ್ರಮಾಣ ಹಾಗೂ ರಸದಲ್ಲಡಕವಾಗಿರುವ ಸುಕ್ರೋಸ್‌ನ ಪ್ರವಮಾಣವು ಗಣನೀಯವಾಗಿ ಕಡಿಮೆಯಾಗುತ್ತದೆ. ಆದುದರಿಂದ ಕಬ್ಬಿನ ಬೆಳೆಯ ಕಟಾವಾದ ಕೂಡಲೇ ಕಬ್ಬನ್ನು ಸಕ್ಕರೆ ಮಿಲ್ಲುಗಳಿಗೆ ತಲುಪಿಸಿ ಅವುಗಳಿಂದ ರಸವನ್ನು ಬೇರ್ಪಡಿಸಿ ತೆಗೆಯುತ್ತಾರೆ. ಇದಕ್ಕಾಗಿ ಕಬ್ಬು ಉತ್ಪಾದಕ ವಲಯದಲ್ಲೇ ಸಕ್ಕರೆ ಕೈಗಾರಿಕೆಗಳನ್ನು ಸ್ಥಾಪಿಸಲಾಗುತ್ತದೆ.

ಪಾಠಭಾಗದಲ್ಲಿ ನೀಡಿರುವ ಭೂಪಟ (ಚಿತ್ರ 8.5) ವನ್ನು ವಿಶ್ಲೇಷಿಸಿ ಭಾರತದಲ್ಲಿ ಕಬ್ಬು ಉತ್ಪಾದಿಸುವ ಪ್ರಾಂತ್ಯಗಳನ್ನು ಕಂಡುಕೊಳ್ಳಲಿರುವ ಚಟುವಟಿಕೆಯನ್ನು ನೀಡಲಾಗಿದೆ. ಇದರ ಕ್ರೋಡೀಕರಣಕ್ಕೆ ಕೆಳಗೆ ನೀಡಿರುವವುಗಳನ್ನು ಉಪಯೋಗಿಸಬಹುದು.

- ಉತ್ತರ ಭಾರತದ ಸಮತಲ ಹಾಗೂ ದಖ್ಖಣ ಪೀಠಭೂಮಿ ಪ್ರದೇಶಗಳಲ್ಲಿ ಕಬ್ಬನ್ನು ವ್ಯಾಪಕವಾಗಿ ಕೃಷಿ ಮಾಡುತ್ತಾರೆ.
- ಕಬ್ಬು ಉತ್ಪಾದನೆಯಲ್ಲಿ ಉತ್ತರಪ್ರದೇಶ ಒಂದನೆಯ ಸ್ಥಾನದಲ್ಲಿರುವ ಪ್ರಾಂತ್ಯವಾಗಿದೆ. ನಂತರದ ಸ್ಥಾನಗಳಲ್ಲಿ ಸರದಿಯಂತೆ ಮಹಾರಾಷ್ಟ್ರ, ಕರ್ನಾಟಕ ಹಾಗೂ ತಮಿಳ್ನಾಡು ಎಂಬೀ ಪ್ರಾಂತ್ಯಗಳಿವೆ.
- ಉತ್ತರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ತಮಿಳ್ನಾಡು, ಆಂಧ್ರಪ್ರದೇಶ, ಗುಜರಾತ್, ಪಂಜಾಬ್, ಹರ್ಯಾನ, ಉತ್ತರಾಖಂಡ್, ಬಿಹಾರ್ ಮೊದಲಾದವುಗಳು ಪ್ರಧಾನ ಕಬ್ಬು ಉತ್ಪಾದಕ ಪ್ರಾಂತ್ಯಗಳಾಗಿವೆ.

**ರಬ್ಬರ್**

1895ರಲ್ಲಿ ಪ್ರಥಮವಾಗಿ ಕೇರಳದಲ್ಲಿ ರಬ್ಬರನ್ನು ತೋಟಗಾರಿಕಾ ಬೆಳೆಯಾಗಿ ಆರಂಭಿಸಲಾಯಿತು.

ಭಾರತದ ಒಟ್ಟು ರಬ್ಬರ್ ಉತ್ಪಾದನೆಯ 9 ಶೇಕಡಾವನ್ನು ಉತ್ಪಾದಿಸುವುದು ಕೇರಳದಲ್ಲಾಗಿದೆ. ಈ ಕಾರಣದಿಂದಲೇ ಕೇರಳವನ್ನು ರಬ್ಬರ್‌ನ ಬೆಲೆ ಕುಸಿತವು ಹೆಚ್ಚಾಗಿ ಬಾಧಿಸುವುದು.

'ಕೃಷಿ ಹಾಗೂ ಕೃಷಿಯಾಧಾರಿತ ಕೈಗಾರಿಕೆಗಳು' ಎಂಬ ಈ ಉಪಯೂನಿಟ್‌ನ ಕೊನೆಯ ಭಾಗದಲ್ಲಿ ಭಾರತದ ಪ್ರಧಾನ ಕೃಷಿಯಾಧಾರಿತ ಕೈಗಾರಿಕೆಗಳ ಪಟ್ಟಿಯನ್ನು ತಯಾರಿಸುವ ಚಟುವಟಿಕೆಯನ್ನು ನೀಡಲಾಗಿದೆ. ಅದರ ಕ್ರೋಢೀಕರಣಕ್ಕೆ ಕೆಳಗೆ ನೀಡಿರುವ ಪಟ್ಟಿಯನ್ನು ಬಳಸಿಕೊಳ್ಳಬಹುದು.

| ಕೃಷಿ | **ಕೃಷಿಯಾಧಾರಿತ ಕೈಗಾರಿಕೆ** |
|---|---|
| •ಹತ್ತಿ | •ಹತ್ತಿ ಬಟ್ಟೆಯ ಕೈಗಾರಿಕೆ |
| •ಕಬ್ಬು | •ಸಕ್ಕರೆ ಕೈಗಾರಿಕೆ |
| •ಸೆಣಬು | •ಸೆಣಬಿನ ಕೈಗಾರಿಕೆ |

## ಖನಿಜಗಳು ಮತ್ತು ಖನಿಜ ಆಧಾರಿತ ಕೈಗಾರಿಕೆಗಳು

ಖನಿಜಗಳು ಮತ್ತು ಖನಿಜಾಧಾರಿತ ಕೈಗಾರಿಕೆಗಳು ಎಂಬ ಶೀರ್ಷಿಕೆಯಿಂದ ಆರಂಭಿಸಿ 'ಪರಂಪರಾಗತವಲ್ಲದ ಚೈತನ್ಯದ ಮೂಲಗಳು' ಎಂಬ ಸೆಮಿನಾರ್ ಪೇಪರ್ ತಯಾರಿಸಿ ತರಗತಿಯಲ್ಲಿ ಮಂಡಿಸಲಿರುವ ಚಟುವಟಿಕೆಯ ವರೆಗಿನ ಪಾಠಭಾಗವನ್ನು ಈ ಉಪಯೂನಿಟ್‌ನಲ್ಲಿ ಅಳವಡಿಸಿಕೊಳ್ಳಲಾಗಿದೆ. ಚರ್ಚೆ, ಪಟ್ಟಿ ವಿಶ್ಲೇಷಣೆ ಮೊದಲಾದ ಚಟುವಟಿಕೆಗಳ ಮೂಲಕ ಹೆಚ್ಚಿನ ಮಾಹಿತಿ ಸಂಗ್ರಹಕ್ಕಾಗಿ ಮಕ್ಕಳನ್ನು ಪ್ರೇರೇಪಿಸಬೇಕು.

ಈ ಉಪಯೂನಿಟ್‌ನ ಮೂಲಕ ಮಕ್ಕಳಲ್ಲಿ ರೂಪುಗೊಳ್ಳಬೇಕಾದ ಆಶಯಗಳು ಹಾಗೂ ತಿಳುವಳಿಕೆಗಳನ್ನು ಕೆಳಗೆ ನೀಡಲಾಗಿದೆ.

- ಖನಿಜಗಳ ವರ್ಗೀಕರಣ
- ಕಬ್ಬಿಣದ ನಿಕ್ಷೇಪಗಳು ಮತ್ತು ಕಬ್ಬಿಣ-ಉಕ್ಕು ಕೈಗಾರಿಕೆಗಳು
- ಮೇಂಗನೀಸ್
- ಖನಿಜ ಇಂಧನಗಳು – ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಅಣು ಖನಿಜಗಳು ಹಾಗೂ ಪರಂಪರಾಗತವಲ್ಲದ ಚೈತನ್ಯದ ಮೂಲಗಳು.

ಖನಿಜಗಳು ಘನ-ದ್ರವ-ಅನಿಲ ರೂಪದಲ್ಲಿ ಕಂಡುಬರುವುದು. ಭಾರತದಲ್ಲಿ ಹೆಚ್ಚಿನ ಎಲ್ಲಾ ಖನಿಜಗಳ ನಿಕ್ಷೇಪಗಳು ಇವೆ. ಆದರೆ ಅವುಗಳ ಪ್ರಮಾಣ ಹಾಗೂ ಗುಣಮಟ್ಟದಲ್ಲಿ ವ್ಯತ್ಯಾಸವಿದೆ. ಖನಿಜಗಳನ್ನು ಪ್ರಧಾನವಾಗಿ ಲೋಹ ಖನಿಜಗಳು (Metallic Minerals) ಮತ್ತು ಅಲೋಹ ಖನಿಜಗಳು (Non-metallic Minerals) ಎಂದು ಎರಡಾಗಿ ವರ್ಗೀಕರಿಸಬಹುದು.

**ಕಬ್ಬಿಣದ ಅದಿರು ನಿಕ್ಷೇಪಗಳು ಮತ್ತು ಕಬ್ಬಿಣ – ಉಕ್ಕು ಕೈಗಾರಿಕೆಗಳು**

ಕಬ್ಬಿಣವು ಜಾಗತಿಕ ಮಟ್ಟದಲ್ಲಿ ವ್ಯಾಪಕವಾಗಿ ಉಪಯೋಗಿಸಲ್ಪಡುವ ಖನಿಜವಾಗಿದೆ. ಕಬ್ಬಿಣದಿಂದಿರುವ ಯಂತ್ರ ಸಾಮಾಗ್ರಿಗಳನ್ನು ಉಪಯೋಗಿಸುವುದರಿಂದ ಈ ಲೋಹವನ್ನು ಎಲ್ಲಾ ಕೈಗಾರಿಕೆಗಳ ಆಧಾರವಾಗಿ ಪರಿಗಣಿಸಲಾಗುತ್ತದೆ. ಒಂದು ದೇಶದ ಜೀವನ ಮಟ್ಟವನ್ನು ಕಂಡುಕೊಳ್ಳಲು ಆ ದೇಶದಲ್ಲಿ ಬಳಸುವ ಕಬ್ಬಿಣದ ಪ್ರಮಾಣವನ್ನು ಸಹ ಗಣನೆ ಮಾಡಲಾಗುತ್ತದೆ.

ವಾಹನ ನಿರ್ಮಾಣ, ಯಂತ್ರೋಪಕರಣ, ಹಡಗು ನಿರ್ಮಾಣ, ಕಟ್ಟಡ ನಿರ್ಮಾಣ, ಗೃಹೋಪಕರಣಗಳು, ಇತ್ಯಾದಿ ವಲಯಗಳಲ್ಲೆಲ್ಲಾ ಕಬ್ಬಿಣದ ಪ್ರಾಧಾನ್ಯತೆ ಬಹಳ ಹೆಚ್ಚಾಗಿದೆ. ಅಧಿಕ ಭಾರವಿರುವ ಕಚ್ಚಾವಸ್ತುಗಳನ್ನೊಳಗೊಂಡಿರುವ ಕೈಗಾರಿಕೆಯಾಗಿರುವುದರಿಂದ ಭಾರತದ ಕಬ್ಬಿಣ-ಉಕ್ಕು ಕೈಗಾರಿಕೆಗಳೆಲ್ಲವೂ ಅವುಗಳ ಕಚ್ಚಾವಸ್ತುಗಳು

ಸುಲಭವಾಗಿ ಲಭ್ಯವಾಗುವ ಪ್ರದೇಶಗಳಲ್ಲೇ ಕೇಂದ್ರೀಕರಿಸಿರುತ್ತವೆ.

ಭಾರತದ ಪ್ರಧಾನ ಕಬ್ಬಿಣ–ಉಕ್ಕು ಕೈಗಾರಿಕೆಗಳನ್ನು ಭಾರತದ ರೂಪುರೇಖೆಯಲ್ಲಿ ಗುರುತಿಸಿ ಭೂಪಟ ಸಂಗ್ರಹದಲ್ಲಿ ಸೇರಿಸಲು ಮಕ್ಕಳಲ್ಲಿ ಹೇಳಬೇಕು.

ಭಾರತದ ರೂಪರೇಖೆಯಲ್ಲಿ ಚಿನ್ನ, ಬೆಳ್ಳಿ, ತಾಮ್ರ, ಬೋಕ್ಸೈಟ್, ಅಬ್ರಕ ಇತ್ಯಾದಿ ಖನಿಜಗಳು ಕಂಡುಬರುವ ಪ್ರಾಂತ್ಯಗಳನ್ನು ವಿವಿಧ ಚಿಹ್ನೆಗಳನ್ನುಪ ಯೋಗಿಸಿಕೊಂಡು ಗುರುತಿಸಿ ಭೂಪಟ ಸಂಗ್ರಹದಲ್ಲಿ ಸೇರಿಸಲು ಮಕ್ಕಳಲ್ಲಿ ಹೇಳಬೇಕು.

**ಖನಿಜ ಇಂಧನಗಳು**

ಅವಶಿಷ್ಟ ಶಿಲೆಗಳಲ್ಲಿ ಸಾಮಾನ್ಯವಾಗಿ ಪೆಟ್ರೋಲಿಯಂ ನಿಕ್ಷೇಪಗಳು ರೂಪುಗೊಳ್ಳುತ್ತವೆ. ಅವಶಿಷ್ಟಗಳು ಒಂದು ಸೇರುವ ಸಮುದ್ರ, ತಟಾಕ, ಇತ್ಯಾದಿಗಳ ತಳಭಾಗದಲ್ಲಿ ರೂಪುಗೊಳ್ಳುವ ಅವಶಿಷ್ಟ ಶಿಲೆಗಳಲ್ಲಿ ಪೆಟ್ರೋಲಿಯಂ, ನೈಸರ್ಗಿಕ ಅನಿಲ ಮೊದಲಾದವುಗಳ ನಿಕ್ಷೇಪಗಳು ರೂಪುಗೊಳ್ಳುತ್ತವೆ. ಪೆಟ್ರೋಲಿಯಂ ನಿಕ್ಷೇಪಗಳು ಸಮುದ್ರದ ಸಮೀಪಗಳಲ್ಲಿ ಕಂಡುಬರುವುದು ಈ ಕಾರಣದಿಂದಾಗಿದೆ.

**ಪರಂಪರಾಗತವಲ್ಲದ ಚೈತನ್ಯದ ಮೂಲಗಳು – ಸೆಮಿನಾರ್**

'ಪರಂಪರಾಗತವಲ್ಲದ ಚೈತನ್ಯದ ಮೂಲಗಳು' ಎಂಬ ವಿಷಯದ ಕುರಿತಾಗಿ ಸೆಮಿನಾರ್ ತಯಾರಿಸಿ ತರಗತಿಯಲ್ಲಿ ಮಂಡಿಸಲಿರುವ ಚಟುವಟಿಕೆಯೊಂದನ್ನು ಪಾಠಭಾಗದಲ್ಲಿ ನೀಡಲಾಗಿದೆ. ಸೆಮಿನಾರಿಗೆ ಅಗತ್ಯವಾದ ಮಾಹಿತಿಗಳನ್ನು ಪಾಠಭಾಗ ವಾಚನಾ ಸಾಮಾಗ್ರಿಗಳು, ವಾರ್ತಾ ಮಾಧ್ಯಮಗಳು ಇತ್ಯಾದಿಗಳಿಂದ ಸಂಗ್ರಹಿಸಲು ಮಕ್ಕಳಲ್ಲಿ ಹೇಳಬೇಕು. ಎಲ್ಲಾ ಮಕ್ಕಳು ಪೇಪರ್‌ನ್ನು ತಯಾರಿಸಿದರೆಂದು ದೃಢಪಡಿಸಿದ ಬಳಿಕ ಒಂದೋ ಎರಡೋ ಮಂದಿ ಮಕ್ಕಳನ್ನು ಸೆಮಿನಾರ್ ಪೇಪರ್ ಮಂಡಿಸಲು ಆಯ್ಕೆ ಮಾಡಬೇಕು. ಸೆಮಿನಾರ್ ಪೇಪರ್ ಮಂಡನೆಯ ಬಳಿಕ ಮೋಡರೇಟರ (ಅಧ್ಯಾಪಕರ) ನೇತೃತ್ವದಲ್ಲಿ ಈ ವಿಷಯದಲ್ಲಿ ತರಗತಿ ಮಟ್ಟದಲ್ಲಿ ಚರ್ಚೆ ಮಾಡಬೇಕು. ಮಂಡನೆ ಹಾಗೂ ಚರ್ಚೆಗಳ ಬಳಿಕ ಪ್ರತಿಯೊಬ್ಬ ಮಗುವೂ ಸೆಮಿನಾರ್ ವರದಿಯನ್ನು ಬರೆದಿಡಬೇಕು. ಈ ಸೆಮಿನಾರ್ ವರದಿಯನ್ನು ಮೌಲ್ಯಮಾಪನಕ್ಕೆ ಬಳಸಬೇಕಾಗಿದೆ.

## ಸಾರಿಗೆ

ಸಾರಿಗೆ ಎಂಬ ಶೀರ್ಷಿಕೆಯಿಂದಾರಂಭಿಸಿ ಯೂನಿಟ್ಟಿನ ಕೊನೆಯ ತನಕದವರೆಗಿರುವ ಪಾಠಭಾಗವನ್ನು ಈ ಉಪಯೂನಿಟ್‌ನಲ್ಲಿ ಸೇರಿಸಿರುವುದು. ಪಟ್ಟಿ ವಿಶ್ಲೇಷಣೆ, ಭೂಪಟ ಚಟುವಟಿಕೆಗಳು, ಚರ್ಚೆ ಮಾಡಲಾದ ಚಟುವಟಿಕೆಗಳ ಮೂಲಕ ಹೆಚ್ಚಿನ ಮಾಹಿತಿ ಸಂಗ್ರಹಕ್ಕೆ ಮಕ್ಕಳನ್ನು ಪ್ರೇರೇಪಿಸಬೇಕು.

ಈ ಉಪಯೂನಿಟ್‌ನ ವಿನಿಮಯದ ಮೂಲಕ ಮಕ್ಕಳಲ್ಲಿ ರೂಪುಗೊಳ್ಳಬೇಕಾದ ಆಶಯಗಳನ್ನು ಹಾಗೂ ತಿಳುವಳಿಕೆಗಳನ್ನು ಕೆಳಗೆ ಸೇರಿಸಲಾಗಿದೆ.

- ರಸ್ತೆ ಸಾರಿಗೆ –
  ವರ್ಗೀಕರಣ
- ರೈಲು ಸಾರಿಗೆ –
  ರೈಲ್ವೆಯ ವರ್ಗೀಕರಣ
- ಜಲ ಸಾರಿಗೆ –
  ಒಳಿತುಗಳು, ವರ್ಗೀಕರಣ, ಭಾರತದಲ್ಲಿನ ಜಲಮಾರ್ಗಗಳು, ಭಾರತದ ಬಂದರುಗಳು
- ವಾಯು ಸಾರಿಗೆ –
  ಕೇರಳದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು

**ರಸ್ತೆ ಸಾರಿಗೆ**

ರಾಷ್ಟ್ರೀಯ ಹೆದ್ದಾರಿ 47 (ಸೇಲಂ–ಕೊಯಂಬತ್ತೂರು–ತಿರುವನಂತಪುರ–ಕನ್ಯಾಕುಮಾರಿ) ರಾಷ್ಟ್ರೀಯ ಹೆದ್ದಾರಿ 49 (ಕೊಚ್ಚಿ–ಮಧುರೈ–ಧನುಷ್‌ಕೋಟಿ) ರಾಷ್ಟ್ರೀಯ ಹೆದ್ದಾರಿ 17 (ಪನವೇಲ್–ಮಂಗಳೂರು–ಇಡಪ್ಪಳ್ಳಿ) ಎಂಬೀ

ಮೂರು ರಾಷ್ಟ್ರೀಯ ಹೆದ್ದಾರಿಗಳು ಕೇರಳದ ಮೂಲಕ ಹಾದು ಹೋಗುತ್ತವೆ.

ಸಮತಟ್ಟಾದ ಸಮತಲ ಪ್ರದೇಶವಾದುದರಿಂದ ರಸ್ತೆ ನಿರ್ಮಾಣದ ವೆಚ್ಚ ಬಹಳ ಕಡಿಮೆ ಹಾಗೂ ವೇಗವಾಗಿ ಕೆಲಸ ಮಾಡಿ ಮುಗಿಸಲು ಸಾಧ್ಯವಾದುದರಿಂದ ಮತ್ತು ಜನವಾಸ ಕೇಂದ್ರಗಳು ಅಧಿಕವಾಗಿರುವುದರಿಂದ ಉತ್ತರದ ಬಯಲಿನಲ್ಲಿ ರಸ್ತೆಗಳ ಸಾಂದ್ರತೆ ಹೆಚ್ಚಾಗಿ ಕಂಡುಬರುವುದು. ಆದರೆ ಈಶಾನ್ಯ ಪ್ರಾಂತ್ಯಗಳ ಎತ್ತರ–ತಗ್ಗುಗಳಿರುವ ಭೂಪ್ರಕೃತಿ, ನಿಬಿಡ ವನಗಳು ಹಾಗೂ ಕಡಿಮೆ ಜನ ಸಾಂದ್ರತೆಯ ಕಾರಣದಿಂದಾಗಿ ಈ ಪ್ರದೇಶಗಳಲ್ಲಿ ರಸ್ತೆ ಸಾಂದ್ರತೆ ಕಡಿಮೆಯಾಗಿ ಕಂಡುಬರುವುದು.

## ರೈಲು ಸಾರಿಗೆ

ಭಾರತೀಯ ರೈಲ್ವೆ ಜಾಲವನ್ನು 16 ರೈಲ್ವೆ ವಲಯಗಳಾಗಿ ವಿಂಗಡಿಸಲಾಗಿದೆ. ಇದರಲ್ಲಿ ಕೇರಳದ ರೈಲ್ವೆ ಜಾಲವು ದಕ್ಷಿಣ ರೈಲ್ವೆ ವಲಯದಲ್ಲಿ ಸೇರಿರುವುದು. ದಕ್ಷಿಣ ರೈಲ್ವೆಯ (Southern Railway) ಕೇಂದ್ರವು ಚೆನ್ನೈಯಾಗಿದೆ.

ಕೊಚ್ಚಿ ಮೆಟ್ರೋ ರೈಲು ಯೋಜನೆಯು ಕೇರಳದ ಏಕ ಮೆಟ್ರೋ ರೈಲು ಯೋಜನೆಯಾಗಿದೆ.

## ಜಲ ಸಾರಿಗೆ

ಕೇರಳದ ಪ್ರವಾಸೋದ್ಯಮ ವಲಯದಲ್ಲಿ ಒಳನಾಡ ಜಲಾಶಯಗಳ ಪ್ರಾಧಾನ್ಯವನ್ನು ಆಧಾರವಾಗಿರಿಸಿ ತರಗತಿಯಲ್ಲಿ ಚರ್ಚೆ ನಡೆಸಿ ಟಿಪ್ಪಣಿ ತಯಾರಿಸಲಿರುವ ಒಂದು ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಅಧ್ಯಾಪಕರ ನೇತೃತ್ವದಲ್ಲಿ ಚರ್ಚೆಯನ್ನು ಆಯೋಜಿಸಬೇಕು. ಚರ್ಚೆಯಲ್ಲಿ ಎಲ್ಲಾ ಮಕ್ಕಳ ಸಹಭಾಗಿತ್ವವನ್ನು ದೃಢಪಡಿಸಬೇಕು. ಚರ್ಚೆಯ ಮೂಲಕ ಲಭ್ಯವಾಗುವ ಮಾಹಿತಿಗಳನ್ನು ಸೇರಿಸಿ ಚರ್ಚಾ ಟಿಪ್ಪಣಿಗಳನ್ನು ಮಕ್ಕಳು ತಯಾರಿಸಬೇಕು. ಭಾರತದ ಪ್ರಧಾನ ಬಂದರುಗಳ ಸ್ಥಾನವನ್ನು ಗುರುತಿಸುವ ಭೂಪಟದಲ್ಲಿ (ಚಿತ್ರ 8.6) ಬಂದರುಗಳ ಹೆಸರನ್ನು ಬರೆಯುವುದಕ್ಕಾಗಿರುವ ಒಂದು ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಎಲ್ಲಾ ಮಕ್ಕಳು ಈ ಚಟುವಟಿಕೆಯನ್ನು ಮಾಡಿ ಮುಗಿಸಿರುವರು ಎಂದು ದೃಢಪಡಿಸಬೇಕು.

## ವ್ಯೋಮ ಸಾರಿಗೆ

ಭಾರತದಲ್ಲಿ ಹೆಚ್ಚು ಕಡಿಮೆ ಎಲ್ಲಾ ಪ್ರಾಂತ್ಯಗಳಲ್ಲಿ ವಿಮಾನ ನಿಲ್ದಾಣಗಳಿವೆಯಾದರೂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು ತುಲನಾತ್ಮಕವಾಗಿ ಕಡಿಮೆ ಯಾಗಿದೆ.

ಕೇರಳದಲ್ಲಿ ಮೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳಿವೆ. ಅವುಗಳನ್ನು ಕೆಳಗೆ ನೀಡಲಾಗಿದೆ.

- ತಿರುವನಂತಪುರಂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ – ತಿರುವನಂತಪುರಂ.
- ಕೊಚ್ಚಿ (ನೆಡುಂಬಾಶೇರಿ) ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ – ಎರ್ನಾಕುಲಂ.
- ಕರಿಪ್ಪೂರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ – ಕೋಯಿಕ್ಕೋಡ್.

ಭಾರತದಲ್ಲಿ ಜನರ ಸಹಭಾಗಿತ್ವದೊಂದಿಗೆ ನಿರ್ಮಿಸಿದ ಪ್ರಥಮ ವಿಮಾನ ನಿಲ್ದಾಣವಾಗಿದೆ ಕೊಚ್ಚಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ. ಇದನ್ನು ಸಾರ್ವಜನಿಕರಿಗಾಗಿ 1999 ಮೇ 25ರಂದು ತೆರೆದುಕೊಡಲಾಯಿತು. 30ಕ್ಕೂ ಅಧಿಕ ರಾಷ್ಟ್ರಗಳಲ್ಲಿರುವ ವಿದೇಶಿ ಭಾರತೀಯರ ಸಹಿತ 10000ಕ್ಕು ಹೆಚ್ಚು ಹೂಡಿಕೆದಾರರು ಈ ವಿಮಾನ ನಿಲ್ದಾಣದ ಸ್ಥಾಪನೆಗೆ ಸಹಕರಿಸಿದರು.

## ? ಮೌಲ್ಯನಿರ್ಣಯಕ್ಕಿರುವ ಪ್ರಶ್ನೆಗಳು


- ಭಾರತದ ಪ್ರಧಾನ ಕಬ್ಬಿಣ–ಉಕ್ಕು ಕೈಗಾರಿಕೆಗಳು ಕಚ್ಚಾ ವಸ್ತುಗಳು ಲಭ್ಯವಾಗುವ ಪ್ರದೇಶಗಳಲ್ಲಿ ಇವೆ. ವಿಶದೀಕರಿಸಿರಿ.
- ಭಾರತದ ಎಲ್ಲಾ ಪ್ರದೇಶಗಳಲ್ಲೂ ವಾಣಿಜ್ಯ ಬೆಳೆಗಳನ್ನು ಬೆಳೆಸಲಾಗುವುದಿಲ್ಲ ಯಾಕೆ?
- ನಿರ್ಮಾಣ – ನಿರ್ವಹಣಾ ವ್ಯವಸ್ಥೆಯನ್ನು ಆಧಾರವಾಗಿಟ್ಟುಕೊಂಡು ಭಾರತದ ರಸ್ತೆಗಳನ್ನು ವಿವಿಧ ರೀತಿಯಲ್ಲಿ ವಿಂಗಡಿಸಲಾಗಿದೆ. ವಿಶದೀಕರಿಸಿರಿ.

## ಆಕರ ಗ್ರಂಥಗಳು


India - A Comprehensive Geography - D.R.Khullar

India - People and Economy - Textbook for Std XI - NCERT

Economic and Commercial Geography of India- T.C.Sharma, O.Countinho




# 9

# ಆರ್ಥಿಕ ಸಂಸ್ಥೆಗಳು ಮತ್ತು ಸೇವೆಗಳು

ಧನದೊಂದಿಗೆ ವ್ಯವಹರಿಸುವ ಸಂಸ್ಥೆಗಳು ಹಾಗೂ ಅವು ನಿರ್ವಹಿಸುತ್ತಿರುವ ಸೇವೆಗಳು ಯಾವುವೆಂಬ ತಿಳುವಳಿಕೆಯನ್ನು ಮಕ್ಕಳಲ್ಲಿ ದೃಢಗೊಳಿಸುವ ಉದ್ದೇಶದೊಂದಿಗೆ ಈ ಯೂನಿಟ್‌ನ್ನು ತಯಾರಿಸಲಾಗಿದೆ.

ಹಣಕಾಸು ಸಂಸ್ಥೆಗಳನ್ನು ನಿಯಂತ್ರಿಸುವ ರಿಸರ್ವ್ ಬ್ಯಾಂಕ್‌ನ ಕಾರ್ಯಕಲಾಪಗಳು, ನೂತನ ಒಲವುಗಳು ಇತ್ಯಾದಿಗಳ ಕುರಿತಾದ ತಿಳುವಳಿಕೆಯು ಈ ಪಾಠಭಾಗದ ಮೂಲಕ ಮಕ್ಕಳಿಗೆ ಲಭಿಸಬೇಕು. ಬ್ಯಾಂಕ್‌ಗಳ ಚಟುವಟಿಕೆಗಳ ಮೇಲೆ ಒಲವು ಉಂಟಾಗುವ ರೀತಿಯ ಮನೋಭಾವವನ್ನು ತಳೆಯಲು ಮಕ್ಕಳಿಗೆ ಸಹಕಾರಿಯಾಗುವುದು, ಉಳಿತಾಯಗಳಂತಹ ಮೌಲ್ಯಗಳನ್ನು ಬೆಳೆಸಲು ಈ ಪಾಠಭಾಗದಿಂದ ಸಾಧ್ಯವಾಗಬೇಕು.

## ಯೂನಿಟ್ ಫ್ರೇಂ

# 9. ಆರ್ಥಿಕ ಸಂಸ್ಥೆಗಳು ಮತ್ತು ಸೇವೆಗಳು

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ಭಾರತೀಯ ರಿಸರ್ವ್ ಬ್ಯಾಂಕ್‌ನ ಕಾರ್ಯ ಕಲಾಪಗಳು<br>• ಹಣಕಾಸು ಸಂಸ್ಥೆಗಳು<br>- ಬ್ಯಾಂಕುಗಳು<br>- ಬ್ಯಾಂಕುಗಳ ಬೆಳವಣಿಗೆ ಭಾರತದಲ್ಲಿ<br>• ವಾಣಿಜ್ಯ ಬ್ಯಾಂಕುಗಳು<br>- ಕಾರ್ಯಕಲಾಪಗಳು<br>• ಬ್ಯಾಂಕುಗಳು ನೀಡುವ ಇತರ ಸೇವೆಗಳು ಹಾಗೂ ಸೌಕರ್ಯಗಳು<br>• ಬ್ಯಾಂಕಿಂಗ್ ವಲಯದ ಒಲವುಗಳು<br>• ಸಹಕಾರಿ ಬ್ಯಾಂಕುಗಳು<br>• ಅಭಿವೃದ್ಧಿ ಬ್ಯಾಂಕುಗಳು<br>• ವಿಶೇಷ ಬ್ಯಾಂಕುಗಳು<br>• ಬ್ಯಾಂಕೇತರ ಹಣಕಾಸು ಸಂಸ್ಥೆಗಳು<br>• ಮೈಕ್ರೋಫೈನಾನ್ಸ್ | • ಚಿತ್ರ ವಿಶ್ಲೇಷಣೆ<br>• ಫ್ಲೋ ಚಾರ್ಟ್ ವಿಶ್ಲೇಷಣೆ<br>• ಚರ್ಚೆ<br>- ರಿಸರ್ವ್ ಬ್ಯಾಂಕ್‌ನ ಕಾರ್ಯಕಲಾಪಗಳು<br>• ಟಿಪ್ಪಣಿ ತಯಾರಿಸುವುದು<br>• ಗುಂಪಿನಲ್ಲಿ ಚರ್ಚೆ<br>- ಠೇವಣಿ ಸ್ವೀಕರಿಸುವುದು.<br>- ಸಾಲ ನೀಡುವುದು<br>• ಪಟ್ಟಿ ಪೂರ್ತಿಗೊಳಿಸುವುದು<br>• ಚರ್ಚೆ<br>- ಬ್ಯಾಂಕಿಂಗ್ ರಂಗದ ನೂತನ ಒಲವುಗಳು<br>• ಫ್ಲೋ ಚಾರ್ಟ್ ವಿಶ್ಲೇಷಣೆ<br>• ಪಟ್ಟಿ ನಿರೀಕ್ಷಣೆ<br>• ಚರ್ಚೆ<br>- ಬ್ಯಾಂಕೇತರ ಹಣಕಾಸು ಸಂಸ್ಥೆಗಳು<br>- ಮ್ಯೂಚವಲ್ ಫಂಡ್ ಸಂಸ್ಥೆಗಳು<br>- ವಿಮಾ ಕಂಪೆನಿಗಳು<br>• ಗುಂಪಿನಲ್ಲಿ ಚರ್ಚಿಸುವುದು<br>• ಬಯಲು ಪ್ರವಾಸ | • ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯ ಕಲಾಪಗಳನ್ನು ವಿಶದೀಕರಿಸುವರು.<br>• ಭಾರತದಲ್ಲಿ ಬ್ಯಾಂಕುಗಳು ರೂಪೀಕರಣಗೊಳ್ಳಲು ಉಂಟಾದ ಸಂದರ್ಭಗಳನ್ನು ವಿವಿಧ ದೃಷ್ಟಿಕೋನಗಳಿಂದ ಮಂಡಿಸುವರು.<br>• ಭಾರತದಲ್ಲಿ ಭಾರತದಲ್ಲಿರುವ ವಿವಿಧ ಹಣಕಾಸು ಸಂಸ್ಥೆಗಳ ಬಗ್ಗೆ ಅರಿತುಕೊಳ್ಳುವರು.<br>• ವಾಣಿಜ್ಯ ಬ್ಯಾಂಕುಗಳ ಪ್ರಧಾನ ಕಾರ್ಯ ಕಲಾಪಗಳನ್ನು ವಿಶದೀಕರಿಸುವರು.<br>• ಮೂಲಭೂತ ಕಾರ್ಯಗಳ ಹೊರತಾಗಿ ಬ್ಯಾಂಕುಗಳು ನೀಡುವ ಇತರ ಸೇವೆಗಳನ್ನು ಪಟ್ಟಿ ಮಾಡುವರು.<br>• ಬ್ಯಾಂಕಿಂಗ್ ವಲಯದಲ್ಲಿ ಬರುತ್ತಿರುವ ನೂತನ ಒಲವುಗಳನ್ನು ವಿಶದೀಕರಿಸುವರು.<br>• ಸಹಕಾರಿ ಬ್ಯಾಂಕುಗಳ ಕಾರ್ಯ ನಿರ್ವಹಣೆ, ಕಾರ್ಯಕಲಾಪಗಳು ಎಂಬಿವುಗಳನ್ನು ವಿವರಿಸುವರು.<br>• ಅಭಿವೃದ್ಧಿ ಬ್ಯಾಂಕುಗಳ ಕಾರ್ಯನಿರ್ವಹಣೆ, ಕಾರ್ಯಕಲಾಪಗಳು ಎಂಬುವುಗಳನ್ನು ವಿವರಿಸುವರು.<br>• ಅಭಿವೃದ್ಧಿ ಬ್ಯಾಂಕುಗಳು, ನೂತನ ತಲೆಮಾರಿನ ಬ್ಯಾಂಕುಗಳು, ವಿಶೇಷ ಬ್ಯಾಂಕುಗಳು ಎಂಬಿವುಗಳ ವಿಶೇಷತೆಗಳನ್ನು ವಿಂಗಡಿಸಿ ಪಟ್ಟಿ ಮಾಡುವರು.<br>• ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಯಾವುವೆಲ್ಲ ಎಂದೂ ಅವುಗಳು ಬ್ಯಾಂಕುಗಳಿಂದ ಹೇಗೆ ವಿಭಿನ್ನವಾಗಿವೆಯೆಂದೂ ವಿಶದೀಕರಿಸುವರು.<br>• ಮೈಕ್ರೋಫೈನಾನ್ಸ್, ಸ್ವಸಹಾಯ ಸಂಘಗಳು ಎಂಬವುಗಳ ಕಾರ್ಯನಿರ್ವಹಣೆಯನ್ನು ವಿಶದೀಕರಿಸುವರು. |

## ಅಧ್ಯಾಯದೆಡೆಗೆ....

### ಭಾರತೀಯ ರಿಸರ್ವ್ ಬ್ಯಾಂಕ್

ಪಾಠಪುಸ್ತಕದಲ್ಲಿ ನೀಡಿರುವ ಭಾರತೀಯ ರಿಸರ್ವ್ ಬ್ಯಾಂಕ್‌ನ ಚಿಹ್ನೆಯನ್ನುಪಯೋಗಿಸಿಕೊಂಡು ಪಾಠಭಾಗವನ್ನು ಪ್ರವೇಶಿಸಬಹುದು. ಕೆಳಗೆ ನೀಡಿದ ಪ್ರಶ್ನೆಗಳನ್ನು ಕೇಳುವ.

- ಈ ಚಿತ್ರವನ್ನು ಎಲ್ಲೆಲ್ಲಾ ನೀವು ಕಂಡಿರುವಿರಿ?
- ಇದು ಯಾವ ಸಂಸ್ಥೆಯನ್ನು ಸೂಚಿಸುತ್ತದೆ?
- ಈ ಸಂಸ್ಥೆಯ ಶಾಖೆಗಳು ಕೇರಳದ ಯಾವೆಲ್ಲಾ ಸ್ಥಳಗಳಲ್ಲಿವೆ?

ತಿರುವನಂತಪುರಂ, ಎರ್ನಾಕುಳಂ ಎಂಬೀ ಸ್ಥಳಗಳಲ್ಲಿವೆ. ನಾವು ಉಪಯೋಗಿಸುವ ಎಲ್ಲ ಕರೆನ್ಸಿ ನೋಟುಗಳಲ್ಲಿ ಮತ್ತು ರಿಸರ್ವ್ ಬ್ಯಾಂಕ್‌ನ ಎಲ್ಲಾ ದಾಖಲೆಗಳಲ್ಲಿ ಈ ಚಿತ್ರವಿರುವುದೆಂದು ನೆನಪಿಸಬೇಕು.
ಗುಂಪಿನಲ್ಲಿ ರಿಸರ್ವ್ ಬ್ಯಾಂಕ್‌ನ ಕಾರ್ಯಕಲಾಪಗಳ ಕುರಿತು ಪಾಠಭಾಗದಲ್ಲಿ ನೀಡಿರುವ ಸೂಚಕಗಳನ್ನು ಬಳಸಿಕೊಂಡು ಚರ್ಚೆಗೆ ಸಂದರ್ಭವನ್ನುಂಟು ಮಾಡಬೇಕು.

***ಸೂಚಕಗಳು***

- ನೋಟುಗಳ ಮುದ್ರಣ ಹಾಗೂ ನಿಯಂತ್ರಣ
- ಸಾಲದ ನಿಯಂತ್ರಣ
- ಸರಕಾರದ ಬ್ಯಾಂಕ್
- ಬ್ಯಾಂಕುಗಳ ಬ್ಯಾಂಕ್

ಬ್ಯಾಂಕುಗಳ ಕಾರ್ಯಕಲಾಪಗಳ ಕುರಿತು ಮಕ್ಕಳು ನೋಟ್‌ಪುಸ್ತಕದಲ್ಲಿ ದಾಖಲಿಸಬಹುದು.

### ಹಣಕಾಸು ಸಂಸ್ಥೆಗಳು

ಪುಟ 159ರಲ್ಲಿ ನೀಡಿರುವ ಫ್ಲೋಚಾರ್ಟು ನಿರೀಕ್ಷಣೆ ಮಾಡಿ ಪ್ರಧಾನ ಹಣಕಾಸು ಸಂಸ್ಥೆಗಳನ್ನು ಪಟ್ಟಿ ಮಾಡಿ ನೋಟ್ಸ್ ಪುಸ್ತಕದಲ್ಲಿ ಮಕ್ಕಳು ಬರೆಯಲಿ.

ಅನಂತರ ಬ್ಯಾಂಕುಗಳ ಮುಖ್ಯ ಕಾರ್ಯಕಲಾಪಗಳನ್ನು ಪಾಠಪುಸ್ತಕದ ಸಹಾಯದೊಂದಿಗೆ ಚರ್ಚಿಸಲಿ.

ಚರ್ಚಾ ಟಿಪ್ಪಣಿಯನ್ನು ನೋಟ್‌ಪುಸ್ತಕದಲ್ಲಿ ದಾಖಲಿಸಬಹುದು.

ತನ್ನ ಪ್ರದೇಶದಲ್ಲಿರುವ ಬ್ಯಾಂಕ್‌ನ್ನು ಸಂದರ್ಶಿಸಿ ಅಥವಾ ಬ್ಯಾಂಕ್‌ನ ಕಾರ್ಯನಿರ್ವಹಣೆಯನ್ನು ವಿವರಿಸಲು ಯೋಗ್ಯವಾದ ವ್ಯಕ್ತಿಯನ್ನು ಶಾಲೆಗೆ ಆಮಂತ್ರಿಸಿ ಬ್ಯಾಂಕಿನ ಕಾರ್ಯಕಲಾಪಗಳನ್ನು ವಿವರಿಸಲು ಸಂದರ್ಭ ವನ್ನುಂಟುಮಾಡುವುದು ಉತ್ತಮ. ಇದಕ್ಕಾಗಿರುವ ಪ್ರಶ್ನಾವಳಿಗಳನ್ನು ಮುಂಚಿತವಾಗಿ ತಯಾರಿಸಲು ಮಕ್ಕಳಿಗೆ ಸಹಾಯ ನೀಡಬೇಕು. ವರದಿ ತಯಾರಿಸಿ ಪೋರ್ಟ್ ಫೋಲಿಯೋದ ಭಾಗವಾಗಿಸಬೇಕು.

### ಭಾರತದಲ್ಲಿ ಬ್ಯಾಂಕುಗಳ ಬೆಳವಣಿಗೆ

1770ರಿಂದ 1980ರ ವರೆಗಿರುವ ಬ್ಯಾಂಕುಗಳ ಬೆಳವಣಿಗೆ ಹಾಗೂ 1991ರ ಬಳಿಕ ಬ್ಯಾಂಕಿಂಗ್ ವಲಯದಲ್ಲಿ ಬಂದ ನೂತನ ಸುಧಾರಣೆಗಳನ್ನು ವಿವರಿಸುವ ಟಿಪ್ಪಣಿಯನ್ನು ತಯಾರಿಸಲು ಸಹಾಯ ನೀಡಬೇಕು.

**ವಾಣಿಜ್ಯ ಬ್ಯಾಂಕುಗಳು**

ಪುಟ 162ರಲ್ಲಿ ನೀಡಿರುವ ವಾಣಿಜ್ಯ ಬ್ಯಾಂಕುಗಳ ಫ್ಲೋಚಾರ್ಟನ್ನು ವಿಶ್ಲೇಷಣೆ ಮಾಡಿ ವಿವಿಧ ವಾಣಿಜ್ಯ ಬ್ಯಾಂಕುಗಳನ್ನು ಕಂಡುಕೊಳ್ಳಲು ಸಂದರ್ಭವನ್ನುಂಟು ಮಾಡಬೇಕು.

ವಾಣಿಜ್ಯ ಬ್ಯಾಂಕುಗಳ ಕಾರ್ಯಕಲಾಪಗಳನ್ನು ಚರ್ಚೆಗೊಳಪಡಿಸಬೇಕು. ಇದಕ್ಕಾಗಿ ಮಕ್ಕಳನ್ನು ಎರಡು ಗುಂಪುಗಳನ್ನಾಗಿ ಮಾಡಿ ಸೂಚಕಗಳ ಆಧಾರದಲ್ಲಿ ಮಕ್ಕಳಿಗೆ ಚರ್ಚೆ ನಡೆಸಲು ಸಂದರ್ಭವನ್ನು ಒದಗಿಸಿಕೊಡಬೇಕು.

***ಸೂಚಕಗಳು***

- ಉಳಿತಾಯ ಠೇವಣಿ
- ಪ್ರಚಲಿತ ಠೇವಣಿ
- ಸ್ಥಿರ ಠೇವಣಿ
- ಆವರ್ತಿತ ಠೇವಣಿ

ಉಳಿದೆರಡು ಗುಂಪುಗಳಿಗೆ ಸಾಲವನ್ನು ನೀಡುವುದು ಎಂಬ ವಿಷಯಕ್ಕೆ ಸಂಬಂಧಿಸಿದ ಚರ್ಚೆಗೆ ಅವಕಾಶ ನೀಡಬೇಕು. ಗುಂಪುಗಳ ಮಂಡನೆಯ ಬಳಿಕ ವಾಣಿಜ್ಯ ಬೇಂಕುಗಳ ಕಾರ್ಯಕಲಾಪಗಳು ಎಂಬುದರ ಕುರಿತು ಟಿಪ್ಪಣಿ ತಯಾರಿಸಿ ನೋಟ್‌ಪುಸ್ತಕದಲ್ಲಿ ಮಕ್ಕಳು ದಾಖಲಿಸಲಿ. ಬಳಿಕ ಪಾಠಪುಸ್ತಕದಲ್ಲಿ ನೀಡಿರುವ ಪಟ್ಟಿ ಪೂರ್ತಿಗೊಳಿಸಲು ಮಕ್ಕಳಿಗೆ ಸಂದರ್ಭವನ್ನು ಒದಗಿಸಿಕೊಡಬೇಕು.

## ಬ್ಯಾಂಕುಗಳು ನೀಡುವ ಇತರ ಸೇವೆಗಳು

ಸೂಚಕಗಳ ಆಧಾರದಲ್ಲಿ ಚರ್ಚಿಸಿ ಟಿಪ್ಪಣಿ ತಯಾರಿಸಬಹುದಾಗಿದೆ.

ಸೂಚಕಗಳು

- ಲಾಕರ್ ಸೌಲಭ್ಯ
- ಮೈಲ್ ಟ್ರಾನ್ಸ್‌ಫರ್
- ಕ್ರೆಡಿಟ್ ಕಾರ್ಡ್
- ಡಿಮಾಂಡ್ ಡ್ರಾಫ್ಟ್
- ಎ.ಟಿ.ಎಂ
- ಇತರ ಸೌಲಭ್ಯಗಳು

ಪಾಠಭಾಗದ ಮೂಲಕ ಆಶಯ ರೂಪೀಕರಣ ನಡೆಸಿ ಮಂಡಿಸಬಹುದು.

- ವಿವಿಧ ರೀತಿಯ ಬಿಲ್‌ಗಳನ್ನು ಪಾವತಿಸಲು ಸಹಾಯ ಮಾಡುವುದು.
- ಮೊಬೈಲ್ ರೀಚಾರ್ಜು ಮಾಡಲು ಸಹಾಯವೊದಗಿಸುವುದು
- ಪ್ರಯಾಣಕ್ಕೆ ಬೇಕಾದ ಟಿಕೇಟುಗಳನ್ನು ಪಡೆಯಲು ಸಹಾಯ ಮಾಡುವುದು.
- ನಿವೃತ್ತಿ ವೇತನವನ್ನು ಒದಗಿಸುವ ಸಹಾಯ ಮಾಡುವುದು

ಇತ್ಯಾದಿಗಳಲ್ಲದೆ ಇತರ ಸೇವೆಗಳನ್ನು ಒಳಪಡಿಸಬಹುದು.

## ಬೇಂಕಿಂಗ್ ರಂಗದ ನೂತನ ಒಲವುಗಳು

ಬ್ಯಾಂಕಿಂಗ್ ರಂಗದಲ್ಲಿ ಉಂಟಾದ ನೂತನ ಬದಲಾವಣೆಯಾಗಿದೆ. ಇಲೆಕ್ಟ್ರಾನಿಕ್ ಬ್ಯಾಂಕಿಂಗ್ ಎಂಬುದು ಇದರ ಕುರಿತಾದ ಕೆಲವು ಪ್ರಶ್ನೆಗಳ ಆಧಾರದಲ್ಲಿ ಚರ್ಚೆ ನಡೆಸಲು ಸಂದರ್ಭವನ್ನು ನೀಡಬೇಕು.

- ಇ–ಬ್ಯಾಂಕಿಂಗ್ ಎಂದರೇನು?
- ಇದರ ಅಂಗವಾಗಿ ಯಾವೆಲ್ಲಾ ಬ್ಯಾಂಕಿಂಗ್ ಸೌಕರ್ಯಗಳಿವೆ?
- ಇದು ಯಾವೆಲ್ಲಾ ರೀತಿಯಲ್ಲಿ ಜನರಿಗೆ ಸಹಕಾರಿಯಾಗಿದೆ?
- ಕೋರ್ ಬ್ಯಾಂಕಿಂಗ್ ಎಂದರೇನು?
- ಕೋರ್ ಬ್ಯಾಂಕಿಂಗ್‌ನ ವಿಶೇಷತೆಗಳೇನು?

ಪಾಠಪುಸ್ತಕದ ಸಹಾಯದೊಂದಿಗೆ ಇವುಗಳ ಉತ್ತರವನ್ನು ಚರ್ಚಿಸಿ ಟಿಪ್ಪಣಿ ತಯಾರಿಸಬೇಕು.

## ಸಹಕಾರಿ ಬ್ಯಾಂಕುಗಳು

ಪಾಠಪುಸ್ತಕದಲ್ಲಿ ನೀಡಿರುವ ವಿವಿಧ ಹಂತಗಳಲ್ಲಿರುವ ಸಹಕಾರಿ ಬ್ಯಾಂಕಿನ ಫ್ಲೋಚಾರ್ಟ್‌ನ್ನು ಮಂಡಿಸಿ ಚರ್ಚೆಯನ್ನು ಆರಂಭಿಸುವ. ಅನಂತರ ಸಹಕಾರಿ ಬ್ಯಾಂಕುಗಳು ಎಂಬ ಪಾಠಭಾಗವನ್ನು ಓದಲು ನೀಡಿ ಕೆಲವು ಸೂಚಕಗಳಿಗೆ ಉತ್ತರವನ್ನು ಕಂಡುಕೊಳ್ಳಲು ಸಂದರ್ಭವನ್ನು ನೀಡಬೇಕು.

- ಸಹಕಾರಿ ಬ್ಯಾಂಕುಗಳ ಕಾರ್ಯಚಟುವಟಿಕೆಗಳ ತತ್ವ.
- ಸಹಕಾರಿ ಬ್ಯಾಂಕುಗಳ ಸೇವೆಯ ಪ್ರಯೋಜನ ಪಡೆಯುವವರು.

- ಸಹಕಾರಿ ಬ್ಯಾಂಕುಗಳ ಪ್ರಧಾನ ಉದ್ದೇಶಗಳು

ಮಕ್ಕಳು ಕಂಡುಕೊಂಡ ಆಶಯಗಳನ್ನು ಮಂಡಿಸುವುದರೊಂದಿಗೆ ಅಗತ್ಯವಾದ ಮಾಹಿತಿಗಳನ್ನು ಸೇರಿಸಿಕೊಂಡು ಆಶಯ ರೂಪೀಕರಣ ಮಾಡುವುದು.

ತನ್ನ ಪ್ರದೇಶದ ಒಂದು ಸಹಕಾರಿ ಬ್ಯಾಂಕನ್ನು ಸಂದರ್ಶಿಸಿ ಆಶಯ ರೂಪೀಕರಣ ಸಾಧ್ಯವಾದರೆ ಪ್ರತ್ಯಕ್ಷವಾಗಿ ಲಭ್ಯವಾಗುವ ಜ್ಞಾನವು ಹೆಚ್ಚು ಪ್ರಯೋಜನಕಾರಿಯಾಗಬಹುದು.

## ಅಭಿವೃದ್ಧಿ ಬ್ಯಾಂಕುಗಳು
## ವಿಶೇಷ ಬ್ಯಾಂಕುಗಳು

ಇವು ಪ್ರಧಾನವಾದ ಇತರ ಎರಡು ಬ್ಯಾಂಕುಗಳಾಗಿವೆ. ಮಕ್ಕಳಿಗೆ ಲಭಿಸಬೇಕಾದ ಪ್ರಧಾನ ಆಶಯಗಳು:

- ಯಾವೆಲ್ಲಾ ಬ್ಯಾಂಕುಗಳು ಇದರಲ್ಲಿ ಒಳಪಡುತ್ತವೆ?
- ಈ ರೀತಿಯ ಬ್ಯಾಂಕುಗಳ ವಿಶೇಷತೆಗಳೇನು?

ಸಣ್ಣ ಗುಂಪುಗಳಲ್ಲಿ ಮೇಲೆ ಹೇಳಿರುವ ಸೂಚಕಗಳನ್ನು ನೀಡಿ ಪುಸ್ತಕ ಓದಿ ಉತ್ತರವನ್ನು ಕಂಡುಕೊಳ್ಳಲು ಹೇಳುವುದು. ಮಂಡನೆಯ ವೇಳೆ ಬೇಕಾದ ವಿಧದಲ್ಲಿ ಮಧ್ಯ ಪ್ರವೇಶಿಸಿ ಆಶಯ ರೂಪೀಕರಣವನ್ನು ಬಲಗೊಳಿಸಬೇಕು.

ಇವು ಬ್ಯಾಂಕಿಂಗ್ ರಂಗಕ್ಕೆ ಹೊಸತಾಗಿ ಬಂದ ಇತರ ಮೂರು ಬ್ಯಾಂಕುಗಳಾಗಿವೆ.

- ಮಹಿಳಾ ಬ್ಯಾಂಕು
- ಪೇಮೆಂಟ್ಸ್ ಬ್ಯಾಂಕುಗಳು
- ಮುದ್ರಾ ಬ್ಯಾಂಕುಗಳು

ಇವುಗಳ ವಿಶೇಷತೆಗಳನ್ನು ಕಂಡುಕೊಂಡು ಪಾಠಪುಸ್ತಕದಲ್ಲಿ ನೀಡಿರುವ ಪಟ್ಟಿ ನಿರೀಕ್ಷಿಸಿ ಟಿಪ್ಪಣಿ ತಯಾರಿಸಬೇಕು.

## ಬ್ಯಾಂಕೇತರ ಹಣಕಾಸು ಸಂಸ್ಥೆಗಳು

ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಬ್ಯಾಂಕುಗಳಿಗಿಂತ ಹೇಗೆ ಭಿನ್ನವಾಗಿವೆ ಎಂಬುದನ್ನು ಮಕ್ಕಳು ತಿಳಿಯಬೇಕಾಗಿದೆ. ಅದೇ ರೀತಿಯಲ್ಲಿ ಬ್ಯಾಂಕೇತರ ಸಂಸ್ಥೆಗಳಾದ

- ಬ್ಯಾಂಕೇತರ ಹಣಕಾಸು ಕಂಪೆನಿಗಳು
- ಮ್ಯೂಚುವಲ್ ಫಂಡ್ ಸಂಸ್ಥೆಗಳು
- ವಿಮಾ ಕಂಪೆನಿಗಳು

ಎಂಬಿವುಗಳ ಕಾರ್ಯನಿರ್ವಹಣೆಯ ವಿಧಾನ, ಅವುಗಳನ್ನು ಒಳಗೊಳ್ಳುವ ಬ್ಯಾಂಕುಗಳು ಮುಂತಾದವುಗಳನ್ನು ಗುಂಪಿನಲ್ಲಿ ಚರ್ಚಿಸಲು ಸಂದರ್ಭವನ್ನೊದಗಿಸಬೇಕು.

ಚರ್ಚೆಯಲ್ಲಿ ಲಘು ಟಿಪ್ಪಣಿ ತಯಾರಿಸಿ ನೋಟುಬುಕ್‌ನಲ್ಲಿ ದಾಖಲಿಸುವುದು

## ಮೈಕ್ರೋ ಫೈನಾನ್ಸ್

ಜನ ಸಾಮಾನ್ಯರಿಗೆ ಕಿರು ಸಾಲವು ಸೇರಿದಂತೆ ವಿವಿಧ ರೀತಿಯ ಆರ್ಥಿಕ ಸೇವೆಯನ್ನು ನೀಡುವುದು ಎಂಬ ಉದ್ದೇಶದೊಂದಿಗೆ ಆರಂಭಿಸಿರುವ ಈ ಸಂಸ್ಥೆಯು ಇಂದು ಸರಕಾರಿ ಮತ್ತು ಖಾಸಗಿ ವಲಯದಲ್ಲಿಯೂ ಕಾರ್ಯಾಚರಿಸುತ್ತಿದೆ.

ಕುಟುಂಬಶ್ರೀ, ಪುರುಷ ಸ್ವಸಹಾಯ ಸಂಘಗಳು ಕೇರಳದಲ್ಲಿ ಸರಕಾರದ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವ ಈ ವಿಧದ ಸಂಸ್ಥೆಗಳಾಗಿವೆ. ಗುಂಪಿನಲ್ಲಿ ಇವುಗಳ ಉದ್ದೇಶಗಳನ್ನು ಚರ್ಚೆ ಮೂಲಕ

ಕಂಡುಕೊಂಡು ಮಂಡಿಸಲು ಸಂದರ್ಭ ನೀಡಬೇಕು. ಕ್ರೋಡೀಕರಣದಲ್ಲಿ ಈ ಸಂಸ್ಥೆಗಳ ಕಾರ್ಯವೈಖರಿ, ಬಂಡವಾಳ ಸಂಗ್ರಹ ಎಂಬಿವುಗಳನ್ನು ವಿಶದೀಕರಿಸಲು ಗಮನಿಸಬೇಕು.

ಈ ಸಂಸ್ಥೆಗಳು ಹಲವು ವಿಧದ ಉತ್ಪಾದನಾ ಘಟಕಗಳನ್ನು ಆರಂಭಿಸುತ್ತವೆ. ತನ್ನ ಪ್ರದೇಶದಲ್ಲಿರುವ ಇಂತಹ ಘಟಕಗಳ ಕುರಿತಾದ ಮಾಹಿತಿಗಳನ್ನು ಹೇಳಲು ಅವಕಾಶ ನೀಡಬೇಕು.

ತನ್ನ ಪ್ರದೇಶದಲ್ಲಿರುವ ಕುಟುಂಬಶ್ರೀ ಯೂನಿಟ್‌ನ್ನು ಸಂದರ್ಶಿಸಲು ಸಂದರ್ಭವನ್ನು ಒದಗಿಸಿಕೊಡಬೇಕು.

ಯಾರಿಂದೆಲ್ಲ ಮಾಹಿತಿಗಳನ್ನು ಸಂಗ್ರಹಿಸಬೇಕು?

ಯಾವುದನ್ನೆಲ್ಲಾ ಸಂಗ್ರಹಿಸಬೇಕು?

ಮಾಹಿತಿ ಸಂಗ್ರಹಕ್ಕಿರುವ ಫೋರ್ಮೇಟ್ ತಯಾರಿಸುವುದು.

ಯಾವುದನ್ನೆಲ್ಲಾ ಯೋಜನೆ ಮಾಡಬೇಕು?


ಕುಟುಂಬಶ್ರೀ, ಪುರುಷ ಸ್ವಸಹಾಯ ಸಂಘಗಳು ಎಂಬಿವುಗಳ ಎಲ್ಲಾ ಚಟುವಟಿಕೆಗಳನ್ನು ತಿಳಿಯಲಿರುವ ಸಂದರ್ಭಗಳಿರಬೇಕು. ಮಾಹಿತಿ ಸಂಗ್ರಹ ಮಾಡಿದ ನಂತರ ವರದಿ ತಯಾರಿಸಿ ಪೋರ್ಟ್‌ಫೋಲಿಯೊದ ಭಾಗವಾಗಿರಿಸಬೇಕು.

## ? ಮೌಲ್ಯಮಾಪನ ಪ್ರಶ್ನೆಗಳು

- ಭಾರತೀಯ ರಿಸರ್ವ್ ಬ್ಯಾಂಕ್‌ನ ಕಾರ್ಯಕಲಾಪವಲ್ಲದುದು ಯಾವುದು?
  (ನೋಟುಗಳ ಮುದ್ರಣ, ಸಾಲದ ನಿಯಂತ್ರಣ, ಠೇವಣಿ ಸ್ವೀಕರಿಸುವುದು, ಬ್ಯಾಂಕುಗಳ ಬ್ಯಾಂಕ್)
- ಪ್ರಚಲಿತ ಠೇವಣಿಯ ವಿಶೇಷತೆಗಳು ಯಾವುವು?
  (ಬಡ್ಡಿ ಲಭಿಸದ ಠೇವಣಿ, ಎಲ್ಲಾ ತಿಂಗಳುಗಳಲ್ಲೂ ಠೇವಣಿ ಮಾಡಬಹುದು. ಬಡ್ಡಿ ದರ ಹೆಚ್ಚು, ಬಡ್ಡಿದರ ಕಡಿಮೆ )
- ಮುದ್ರಾ ಬ್ಯಾಂಕಿನ ಉದ್ದೇಶವೇನು?
  (ವನಿತಾ ಸಬಲೀಕರಣ, ಕಿರು ಸಾಲ ನೀಡುವುದು, ಹೆಚ್ಚು ಬಡ್ಡಿ ನೀಡುವುದು)
- ಮೈಕ್ರೋ ಫೈನಾನ್ಸ್‌ಗೆ ಉದಾಹರಣೆ ಯಾವುದು?
  (ಎಲ್‌ಐಸಿ, ಕೆಎಸ್‌ಎಫ್‌ಇ, ಯುಟಿಐ, ಕುಟುಂಬಶ್ರೀ)
- ಭಾರತೀಯ ರಿಸರ್ವ್ ಬ್ಯಾಂಕ್‌ನ್ನು 'ಬ್ಯಾಂಕುಗಳ ಬ್ಯಾಂಕ್' ಎಂದು ಕರೆಯಲು ಕಾರಣವೇನು? ಸ್ಪಷ್ಟಪಡಿಸಿರಿ.
- ವಾಣಿಜ್ಯ ಬ್ಯಾಂಕುಗಳು ಸ್ವೀಕರಿಸುವ ನಾಲ್ಕು ವಿಧದ ಠೇವಣಿಗಳು ಯಾವುವು? ವಿಶದೀಕರಿಸಿರಿ.
- ಸಾರ್ವಜನಿಕರಿಗೆ ವಾಣಿಜ್ಯ ಬ್ಯಾಂಕುಗಳು ನೀಡುವ ಮೂರು ವಿಧವಾದ ಸೇವೆಗಳನ್ನು ಬರೆಯಿರಿ.
- ಪೇಮೆಂಟ್ ಬ್ಯಾಂಕುಗಳ ನಾಲ್ಕು ವಿಶೇಷತೆಗಳನ್ನು ಬರೆಯಿರಿ.
- ಇನ್ಶೂರೆನ್ಸ್ ಕಂಪೆನಿಗಳ ಸೇವೆಯು ಸಮಾಜಕ್ಕೆ ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿದೆ ಎಂದು ಸ್ಪಷ್ಟಪಡಿಸಿರಿ.

- ಮೈಕ್ರೋ ಫೈನಾನ್ಸ್‌ನ ಪ್ರಧಾನ ಉದ್ದೇಶಗಳೇನು?
- ಹೊಂದಿಸಿ ಬರೆಯಿರಿ

| | | |
|---|---|---|
| a. ವಾಣಿಜ್ಯ ಬ್ಯಾಂಕುಗಳು | - | ರಫ್ತು ಮಾಡಲು ಸಾಲ ನೀಡುತ್ತದೆ |
| b. ಎಕ್ಸಿ ಬ್ಯಾಂಕ್ ಆಫ್ ಇಂಡಿಯಾ | - | ಸಾಲ ನೀಡುವುದಿಲ್ಲ |
| c. ಪೇಮೆಂಟ್ ಬ್ಯಾಂಕುಗಳು | - | ಆವರ್ತಿತ ಠೇವಣಿಗಳು |
| d. ಮ್ಯೂಚುವಲ್ ಫಂಡ್ ಸಂಸ್ಥೆಗಳು | - | ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೋರೇಶನ್ |
| e. ಅಭಿವೃದ್ಧಿ ಬ್ಯಾಂಕುಗಳು | - | ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ |




10

# ಬಳಕೆಗಾರ; ಸಂತೃಪ್ತಿ ಮತ್ತು ಸಂರಕ್ಷಣೆ

ದೈನಂದಿನ ಜೀವನದಲ್ಲಿ ಅನೇಕ ವಸ್ತುಗಳನ್ನು ಹಾಗೂ ಸೇವೆಗಳನ್ನು ನಾವು ಪ್ರತಿಯೊಬ್ಬರೂ ಉಪಯೋಗಿಸುತ್ತೇವೆಯಲ್ಲವೇ. ಬಳಕೆಗಾರರು ವಸ್ತುಗಳನ್ನು ಮತ್ತು ಸೇವೆಗಳನ್ನು ಬಳಸುವವರಾಗಿದ್ದಾರೆ. ಬಳಕೆಗಾರರು ಕೆಲವು ಸಂದರ್ಭಗಳಲ್ಲಿ ಮೋಸ ಹೋಗುವಿಕೆ ಹಾಗೂ ಶೋಷಣೆಗೆ ಗುರಿಯಾಗುತ್ತಾರೆ. ಇಂತಹ ಸಂದರ್ಭಗಳನ್ನು ಹಾಗೂ ಯಾವೆಲ್ಲಾ ಶೋಷಣೆಗಳಿಂದ ಯಾವೆಲ್ಲಾ ರೀತಿಯಲ್ಲಿ ಸಂರಕ್ಷಣೆ ಬಳಕೆಗಾರನಿಗೆ ಲಭಿಸುತ್ತದೆ, ಅದಕ್ಕಾಗಿ ಬಳಕೆಗಾರನು ಕೈಗೊಳ್ಳಬೇಕಾದ ಕ್ರಮಗಳೇನು? ಎಂಬಿವುಗಳನ್ನು ಈ ಯೂನಿಟ್‌ನಲ್ಲಿ ವಿಶದೀಕರಿಸಲಾಗಿದೆ. ಬಳಕೆಗಾರರಿಗಿರುವ ಗ್ರಾಹಕ ನ್ಯಾಯಾಲಯಗಳ ರಚನೆ, ಗ್ರಾಹಕರು ದೂರು ನೀಡಬಹುದಾದ ಸಂದರ್ಭಗಳು, ಕ್ರಮಗಳು, ಗ್ರಾಹಕನ ಹಕ್ಕುಗಳು, ಗ್ರಾಹಕ ಶಿಕ್ಷಣದ ಪ್ರಾಧಾನ್ಯ ಎಂಬಿವುಗಳ ಕುರಿತಾಗಿ ಸ್ಪಷ್ಟವಾದ ತಿಳುವಳಿಕೆಗಳು ಮಕ್ಕಳಲ್ಲಿ ರೂಪುಗೊಳ್ಳುವ ರೀತಿಯಲ್ಲಿ ಈ ಯೂನಿಟ್‌ನ್ನು ಕ್ರಮೀಕರಿಸಲಾಗಿದೆ.

## ಯೂನಿಟ್ ಫ್ರೇಂ

# 10. ಬಳಕೆಗಾರ; ಸಂತೃಪ್ತಿ ಮತ್ತು ಸಂರಕ್ಷಣೆ

| ಆಶಯಗಳು/ತಿಳುವಳಿಕೆಗಳು | ಕಲಿಕಾ ಚಟುವಟಿಕೆಗಳು/ಕಲಿಕಾ ತಂತ್ರಗಳು | ಕಲಿಕಾ ಸಾಧನೆಗಳು |
|---|---|---|
| • ವಸ್ತುಗಳು ಮತ್ತು ಸೇವೆಗಳು ಮಾನವನ ಆವಶ್ಯಕತೆಗಳನ್ನು ಪೂರೈಸುತ್ತವೆ.<br>• ಬಳಕೆ, ಬಳಕೆಗಾರ<br>• ಹಲವು ಸಂದರ್ಭಗಳಲ್ಲಿ ಬಳಕೆಗಾರ ವಂಚನೆಗೊಳಗಾಗುತ್ತಾನೆ.<br>• ಗ್ರಾಹಕರ ಸಂರಕ್ಷಣೆಗಾಗಿ 1986ರಲ್ಲಿ ಗ್ರಾಹಕ ಸಂರಕ್ಷಣಾ ಕಾನೂನು ಜಾರಿಗೆ ಬಂತು.<br>• ಗ್ರಾಹಕರ ಹಕ್ಕು ಸಂರಕ್ಷಣೆಗಾಗಿ ಗ್ರಾಹಕ ನ್ಯಾಯಾಲಯಗಳ ಹಲವು ಹಂತಗಳಾಗಿ ಕಾರ್ಯ ನಿರ್ವಹಿಸುತ್ತಿವೆ.<br>• ಗ್ರಾಹಕ ನ್ಯಾಯಾಲಯಗಳಿಗೆ ಅದರದ್ದೇ ಆದ ರಚನೆ ಮತ್ತು ಅಧಿಕಾರಗಳಿವೆ.<br>• ಗ್ರಾಹಕ ನ್ಯಾಯಾಲಯಗಳ ಮೂಲಕ ಗ್ರಾಹಕರ ಸಮಸ್ಯೆಗಳನ್ನು ಪರಿಹರಿಸಬಹುದು.<br>• ಗ್ರಾಹಕ ಶಿಕ್ಷಣದ ಮೂಲಕ ಗ್ರಾಹಕರ ಹಕ್ಕುಗಳ ಕುರಿತಾಗಿ ಜಾಗೃತಿ ಮೂಡಿಸಲು ಸಾಧ್ಯ.<br>• ಗ್ರಾಹಕ ಶಿಕ್ಷಣಕ್ಕೆ ಇಂದು ಬಹಳ ಪ್ರಾಧಾನ್ಯವಿದೆ.<br>• ಪ್ರತಿಯೊಬ್ಬ ಗ್ರಾಹಕನೂ ಉತ್ಪನ್ನಗಳನ್ನು ಖರೀದಿಸುವಾಗ ಕೆಲವು ವಿಷಯಗಳನ್ನು ಗಮನಿಸಬೇಕಾಗಿದೆ. | • ವಸ್ತು ಹಾಗೂ ಸೇವೆಗಳನ್ನು ಪೂರೈಸುವುದರ ಮೂಲಕ ಮಾನವನ ವಿವಿಧ ಆವಶ್ಯಕತೆಗಳು ಪೂರೈಸಲಾಗುತ್ತವೆ ಎಂಬುದನ್ನು ವಿಶದೀಕರಿಸುವುದು.<br>• ಬಳಕೆ, ಬಳಕೆಗಾರ ಎಂಬಿವುಗಳನ್ನು ವಿಶದೀಕರಿಸುವುದು<br>• ಗ್ರಾಹಕನು ವಂಚನೆ ಹಾಗೂ ಶೋಷಣೆಗೆ ಗುರಿಯಾಗುವ ಸಂದರ್ಭಗಳನ್ನು ಕಂಡುಕೊಳ್ಳುವುದು.<br>• 1986ರ ಗ್ರಾಹಕ ಸಂರಕ್ಷಣಾ ಕಾನೂನು ಖಚಿತ ಪಡಿಸುವ ಗ್ರಾಹಕ ಹಕ್ಕುಗಳನ್ನು ವಿಶದೀಕರಿಸುವುದು.<br>• ಗ್ರಾಹಕ ನ್ಯಾಯಾಲಯಗಳ ರಚನೆ, ಅಧಿಕಾರಗಳನ್ನು ವಿವಿಧ ವಿಧದಲ್ಲಿ ವಿಶದೀಕರಿಸುವುದು.<br>• ಗ್ರಾಹಕ ದೂರು ನೀಡಬೇಕಾಗಿ ಬರುವ ಸಂದರ್ಭ, ಕ್ರಮ, ರೀತಿಗಳನ್ನು ತಿಳಿದು ದೂರಿನ ಮಾದರಿಯನ್ನು ತಯಾರಿಸುವುದು.<br>• ಗ್ರಾಹಕರಿಗೆ ನ್ಯಾಯಾಲಯಗಳ ಮೂಲಕ ಲಭಿಸುವ ಪರಿಹಾರಗಳೇನೆಂದು ತಿಳಿಯುವುದು.<br>• ಗ್ರಾಹಕ ಶಿಕ್ಷಣದ ಪ್ರಾಧಾನ್ಯವನ್ನು ತಿಳಿದು ಅದಕ್ಕಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು.<br>• ಉತ್ಪನ್ನಗಳನ್ನು ಖರೀದಿಸುವಾಗ ಗಮನಿಸಬೇಕಾದ ವಿಷಯಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಕಾರ್ಯವೆಸಗುವುದು. | • ವಸ್ತು ಮತ್ತು ಸೇವೆಗಳ ಲಭ್ಯತೆಯ ಮೂಲಕ ಮಾನವನ ವಿವಿಧ ರೀತಿಯ ಬೇಡಿಕೆಗಳು ಈಡೇರಿಸಲ್ಪಡುತ್ತವೆಯೆಂಬುದನ್ನು ವಿಶದೀಕರಿಸುತ್ತಾರೆ.<br>• ಬಳಕೆ, ಬಳಕೆಗಾರ ಎಂಬಿವುಗಳನ್ನು ವಿಶದೀಕರಿಸುತ್ತಾರೆ.<br>• ಬಳಕೆಗಾರರು ವಂಚನೆ ಹಾಗೂ ಶೋಷಣೆಗಳಗಾಗುವ ಸನ್ನಿವೇಶಗಳನ್ನು ತಿಳಿದುಕೊಳ್ಳುತ್ತಾರೆ.<br>• 1986ರ ಗ್ರಾಹಕ ಸಂರಕ್ಷಣಾ ಕಾನೂನು ಪ್ರತಿಪಾದಿಸುವ ಬಳಕೆಗಾರರ ಹಕ್ಕುಗಳನ್ನು ವಿವರಿಸುತ್ತಾರೆ.<br>• ಗ್ರಾಹಕ ನ್ಯಾಯಾಲಯಗಳ ರಚನೆ ಮತ್ತು ಅಧಿಕಾರಗಳನ್ನು ವಿವಿಧ ರೀತಿಯಲ್ಲಿ ಮಂಡಿಸುತ್ತಾರೆ.<br>• ಬಳಕೆಗಾರನಿಗೆ ದೂರನ್ನು ನೀಡಲಿರುವ ಸನ್ನಿವೇಶ ಮತ್ತು ಅದರ ಕಾರ್ಯವಿಧಾನವನ್ನು ಅರ್ಥೈಸಿ ದೂರಿನ ಮಾದರಿಯನ್ನು ತಯಾರಿಸುತ್ತಾರೆ.<br>• ಗ್ರಾಹಕರ ವಿವಾದಗಳಿಗೆ ನ್ಯಾಯಾಲಯಗಳ ಮೂಲಕ ಲಭಿಸುವ ಪರಿಹಾರಗಳು ಯಾವುವೆಂದು ವಿವರಿಸುತ್ತಾರೆ.<br>• ಗ್ರಾಹಕರ ಹಕ್ಕುಗಳನ್ನು ಖಾತರಿಪಡಿಸಲು ಜಾರಿಯಲ್ಲಿರುವ ಪ್ರಧಾನ ಕಾನೂನುಗಳು ಮತ್ತು ಇಲಾಖೆಗಳ ಕುರಿತು ತಿಳಿಯುತ್ತಾರೆ.<br>• ಗ್ರಾಹಕ ಶಿಕ್ಷಣದ ಪ್ರಾಧಾನ್ಯವನ್ನು ತಿಳಿದು ಅದಕ್ಕೆ ಅಗತ್ಯವಾದ ಚಟುವಟಿಕೆಗಳಲ್ಲಿ ನಿರತರಾಗುತ್ತಾರೆ.<br>• ಉತ್ಪನ್ನಗಳನ್ನು ಪಡೆದುಕೊಳ್ಳುವಾಗ ಗಮನಿಸಬೇಕಾದ ವಿಚಾರಗಳನ್ನು ತಿಳಿದುಕೊಂಡು ಕಾರ್ಯನಿರತರಾಗುತ್ತಾರೆ. |

## ಅಧ್ಯಾಯದೆಡೆಗೆ....

ಆರಂಭದಲ್ಲಿ ನೀಡಿರುವ ಚಿತ್ರಗಳನ್ನು ಉಪಯೋಗಿಸಿಕೊಂಡು ಪಾಠ ಪ್ರವೇಶ ಮಾಡಬೇಕು. ಇದಕ್ಕಾಗಿ ಕೆಲವು ಪ್ರಶ್ನೆಗಳನ್ನು ಕೇಳಬಹುದು.

- ಪ್ರತಿಯೊಂದು ಚಿತ್ರವು ಏನನ್ನು ಸೂಚಿಸುತ್ತವೆ?
- ನಾವು ವಸ್ತುಗಳಿಗಾಗಿ ಇದರಲ್ಲಿ ಯಾವೆಲ್ಲಾ ಸಂಸ್ಥೆಗಳನ್ನು ಆಶ್ರಯಿಸುತ್ತೇವೆ?
- ಸೇವೆಗಾಗಿ ಆಶ್ರಯಿಸುವ ಸಂಸ್ಥೆಗಳು ಯಾವುವು?
- ನಮ್ಮ ಯಾವೆಲ್ಲಾ ಆವಶ್ಯಕತೆಗಳು ಇವುಗಳ ಮೂಲಕ ಪೂರೈಸಲ್ಪಡುತ್ತವೆ?

ಮಕ್ಕಳು ವೈಯಕ್ತಿಕವಾಗಿ ಹಾಗೂ ಗುಂಪಾಗಿ ಮುಂದಿಡುವ ಅಭಿಪ್ರಾಯಗಳನ್ನು ಕರಿಹಲಗೆಯಲ್ಲಿ ಪಟ್ಟಿ ಮಾಡಬೇಕು.

ನಮಗೆ ಅವಶ್ಯಕವಾದ ಎಲ್ಲಾ ವಸ್ತುಗಳನ್ನು ನಾವು ಬೆಲೆ ನೀಡಿ ಖರೀದಿಸುತ್ತೇವೆಯೇ? ಎಲ್ಲಾ ಸೇವೆಗಳಿಗೂ ಪ್ರತಿಫಲವನ್ನು ನೀಡಬೇಕಾಗಿದೆಯೇ? ಈ ಪ್ರಶ್ನೆಗಳ ಉತ್ತರವನ್ನು ವೈಯಕ್ತಿವಾಗಿ ಕಂಡುಕೊಳ್ಳುತ್ತಾರೆ.

- ವಾಯು ಮತ್ತು ಜಲಕ್ಕೆ ಹಣ ನೀಡಿ ಖರೀದಿಸಬೇಕಾಗಿ ಬರುವುದು ಯಾಕಾಗಿ ಎಂದು ಚರ್ಚೆ ನಡೆಸಬೇಕು. ಪ್ರಕೃತಿಯ ವರದಾನಗಳಾದ ಸಂಪನ್ಮೂಲಗಳನ್ನು ವ್ಯಾಪಾರದ ಸರಕಾಗಿ ಮಾಡಬೇಕಾಗಿ ಬರುವ ಅವಸ್ಥೆಯ ಕುರಿತು ಜಾಗೃತಿಯುಂಟುಮಾಡುವ ರೀತಿಯಲ್ಲಿ ಚರ್ಚೆ ನಡೆಯಬೇಕು.

### ಬಳಕೆ, ಬಳಕೆಗಾರ

ಬಳಕೆ, ಬಳಕೆಗಾರ (ಗ್ರಾಹಕ) ಎಂಬೀ ಆಶಯಗಳು ಸರಿಯಾಗಿ ಮಗುವಿನಲ್ಲಿ ರೂಪುಗೊಳ್ಳಬೇಕಿದೆ. ಇದಕ್ಕಾಗಿ ಮಗುವಿನ ಅನುಭವದ ಕೆಲವು ಉದಾಹರಣೆಗಳನ್ನು ಮಂಡಿಸಲು ಗಮನಿಸಬೇಕು. ವಸ್ತುಗಳನ್ನು ಮತ್ತು ಸೇವೆಗಳನ್ನು ಖರೀದಿಸುವಾಗ ಒಬ್ಬ ಬಳಕೆಗಾರನು ಯಾವೆಲ್ಲಾ ವಿಚಾರಗಳನ್ನು ಬಯಸುತ್ತಾನೆ ಎಂಬುದನ್ನು ಚರ್ಚೆಯ ಮೂಲಕ ಕಂಡುಕೊಂಡು ಕೆಳಗೆ ನೀಡಿರುವಂತೆ ಆಶಯಗಳನ್ನು ರೂಪಿಸಬೇಕು.

- ಉತ್ತಮ ಗುಣಮಟ್ಟ
- ವಿಶ್ವಾಸಾರ್ಹತೆ
- ಸರಿಯಾದ ಅಳತೆ ಮತ್ತು ತೂಕ
- ಮಾರಾಟ ನಂತರದ ಸೇವೆ
- ನ್ಯಾಯ ಬೆಲೆ
- ವಸ್ತು ಅಥವಾ ಸೇವೆಯನ್ನು ನೀಡುವ ವ್ಯಕ್ತಿಗಳ ವರ್ತನೆ

ಬಳಕೆಗಾರ ಎಂಬ ಶೀರ್ಷಿಕೆಯಡಿಯಲ್ಲಿ ಬಳಕೆಗಾರನ ಪರಮಾಧಿಕಾರದ ಕುರಿತಾಗಿರುವ ಗಾಂಧೀಜಿಯವರ ಮಾತುಗಳನ್ನು ನೀಡಲಾಗಿದೆ. ಇಂದು ಬಳಕೆಗಾರನಿಗೆ ಲಭಿಸುವ ಪರಿಗಣನೆ ಯಾವ ವಿಧದಲ್ಲಾಗಿದೆ ಎಂದು ಗಾಂಧೀಜಿಯವರ ಮಾತುಗಳ ಆಧಾರದಲ್ಲಿ ಚರ್ಚೆ ನಡೆಸುವ ಸಂದರ್ಭವನ್ನು ಒದಗಿಸಿಕೊಡಬೇಕು. ಮಕ್ಕಳ ಅನುಭವವನ್ನು ಹಾಗೂ ಅಧ್ಯಾಪಕರ ಅನುಭವಗಳನ್ನು ಹಂಚಿಕೊಳ್ಳಬೇಕು.

ಅನು ಮತ್ತು ವಿನು ಕೊಡೆ ಖರೀದಿಸಿದ ಅನುಭವವನ್ನು ಪಾಠಭಾಗದಲ್ಲಿ ನೀಡಲಾಗಿದೆ. ಅನುವಿಗೆ ಗುಣಟ್ಟವಿಲ್ಲದ ಕೊಡೆಯನ್ನು ವ್ಯಾಪಾರಿಯು ಮಾರಿದ್ದಾನೆ. ಇದು ಗ್ರಾಹಕನ ಹಕ್ಕುಗಳ ನಿಷೇಧವಾಗಿದೆ ಎಂದು ಮಗು ಗುರುತಿಸಬೇಕು. ಮಗುವಿನ ಅಥವಾ ಅವರ ಪರಿಚಿತರ ಜೀವನದಲ್ಲಿ ಈ ರೀತಿಯಾಗಿರುವ ಅನುಭವಗಳಿದ್ದಲ್ಲಿ ಅದನ್ನು ವಿವರಿಸಲಿರುವ ಸಂದರ್ಭವನ್ನು ಮಕ್ಕಳಿಗೆ ನೀಡಬೇಕು.

ಗ್ರಾಹಕರು ಶೋಷಣೆ ಹಾಗೂ ವಂಚನೆಗೊಳಗಾಗುವ ಕೆಲವು ಸಂದರ್ಭಗಳನ್ನು ಪಾಠಭಾಗದಲ್ಲಿ ನೀಡಲಾಗಿದೆ. ಇನ್ನೂ ಕೆಲವು ಸಂದರ್ಭಗಳನ್ನು ಸೇರಿಸಿ ಪಟ್ಟಿ ಮಾಡಲಿ. ಇದಕ್ಕಾಗಿ ಅನುಭವಗಳನ್ನು ಹಂಚುವ ವಾರ್ತಾ ಪತ್ರಿಕೆಗಳ ತುಣುಕುಗಳನ್ನು ಬಳಸಬಹುದು.

## 1956ರ ಗ್ರಾಹಕ ಸಂರಕ್ಷಣಾ ಕಾನೂನು

1986ರ ಗ್ರಾಹಕ ಸಂರಕ್ಷಣಾ ಕಾನೂನು ಖಚಿತಪಡಿಸುವ ಗ್ರಾಹಕರ ಹಕ್ಕುಗಳ ಯಾವುವೆಲ್ಲವೆಂದು ಮಕ್ಕಳು ಅರಿತುಕೊಳ್ಳಬೇಕಾಗಿದೆ. ಅದಕ್ಕಾಗಿ ಕೆಳಗೆ ನೀಡಿರುವ ಸೂಚಕಗಳ ಕರಿಹಲಗೆಯಲ್ಲಿ ಬರೆಯಬೇಕು. ಸೂಚಕಗಳ ಆಧಾರದಲ್ಲಿ ಯಾವೆಲ್ಲಾ ಹಕ್ಕುಗಳಿವೆ ಎಂದು ಕಂಡುಕೊಳ್ಳಲಿ.

**ಸೂಚಕಗಳು**

- ಜೀವ ಮತ್ತು ಆಸ್ತಿಗಿರುವ ಸಂರಕ್ಷಣೆ
- ಗುಣಮಟ್ಟ
- ನ್ಯಾಯವಾದ ಬೆಲೆ
- ವಿವಾದ ಪರಿಹಾರ
- ಗ್ರಾಹಕ ಶಿಕ್ಷಣ

ಭಾರತದಲ್ಲಿ ಗ್ರಾಹಕರು ಯಾವುದಾದರೂ ರೀತಿಯಲ್ಲಿ ಶೋಷಣೆಗೊಳಗಾದರೆ ಗ್ರಾಹಕ ನ್ಯಾಯಾಲಯಗಳ ಸೇವೆಯನ್ನು ಫಲಪ್ರದವಾಗಿ ಬಳಸಿಕೊಳ್ಳಬಹುದೆಂಬ ಅರಿವು ಮಕ್ಕಳಿಗೆ ಲಭಿಸಬೇಕು. ಗ್ರಾಹಕ ನ್ಯಾಯಾಲಯಗಳು ಯಾವುವು? ಅವುಗಳ ರಚನೆ ಹೇಗೆ? ಪ್ರತಿಯೊಂದರ ಅಧಿಕಾರವೇನು? ಇತ್ಯಾದಿ ವಿಷಯಗಳನ್ನು ಪಾಠಭಾಗದಿಂದ ಲಭಿಸುವ ರೀತಿಯಲ್ಲಿ ಚಟುವಟಿಕೆಗಳ ಯೋಜನೆಯನ್ನು ಮಾಡಬೇಕು. ದೂರು ನೀಡಲಿರುವ ಮಾದರಿ ಅರ್ಜಿಯನ್ನು ಪರಿಶೋಧಿಸಿ ದೂರಿನ ಅರ್ಜಿಯಲ್ಲಿ ಒಳಪಡಿಸಬೇಕಾದ ವಿಚಾರಗಳೇನೆಂದು ಕಂಡುಕೊಳ್ಳಲಿರುವ ಒಂದು ಚಟುವಟಿಕೆಯನ್ನು ಪಾಠಭಾಗದಲ್ಲಿ ನೀಡಲಾಗಿದೆ. ಇದಕ್ಕಾಗಿ ಕಾಗದದಲ್ಲಿ ಅರ್ಜಿಯ ನಮೂನೆಯನ್ನು ತಯಾರಿಸಲಿ. ಅನಂತರ ಮಕ್ಕಳ ಅನುಭವದ ಆಧಾರದಲ್ಲಿ ಒಂದು ದೂರಿನ ಅರ್ಜಿಯನ್ನು ತಯಾರಿಸಲು ಸಹಾಯ ಮಾಡಬೇಕು.

- ಜಾಹೀರಾತುಗಳು ವರವೋ ಶಾಪವೋ ಎಂಬ ವಿಷಯಕ್ಕೆ ಸಂಬಂಧಿಸಿ ಸಂವಾದವನ್ನು ನಡೆಸುವುದು.

ವಾರ್ತಾ ಪತ್ರಿಕೆಗಳಲ್ಲಿ ಹಾಗೂ ದೂರದರ್ಶನದಲ್ಲಿ ಬರುವ ಜಾಹೀರಾತುಗಳ ಆಧಾರದಲ್ಲಿ ಚಟು ವಟಿಕೆಗಳನ್ನು ಕೈಗೆತ್ತಿಕೊಳ್ಳಲಿ.

- ಗ್ರಾಹಕ ನ್ಯಾಯಾಲಯಗಳ ತೀರ್ಪುಗಳಿಗೆ ಸಂಬಂಧಿಸಿದ ವಾರ್ತೆಗಳನ್ನು ವಾರ್ತಾ ಮಾಧ್ಯಮಗಳಿಂದ ಸಂಗ್ರಹಿಸಿ ಚಾರ್ಟು ಪೇಪರಿನಲ್ಲಿ ಅಂಟಿಸಿ ತರಗತಿಯಲ್ಲಿ ಪ್ರದರ್ಶಿ ಸುವುದು.
- ಗ್ರಾಹಕ ನ್ಯಾಯಾಲಯಗಳು ಗ್ರಾಹಕರ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ಎಷ್ಟರ ಮಟ್ಟಿಗೆ ಪರ್ಯಾಪ್ತವಾಗಿವೆ ಎಂಬುದನ್ನು ಗುಂಪಿನಲ್ಲಿ ಚರ್ಚೆಯ ಮೂಲಕ ಕಂಡುಕೊಂಡು ಮಂಡಿಸಲಿ.

1986ರ ಗ್ರಾಹಕ ಸಂರಕ್ಷಣಾ ಕಾನೂನಿನ ಹೊರತಾಗಿ ಗ್ರಾಹಕ ಹಕ್ಕುಗಳ ಸಂರಕ್ಷಣೆಗಾಗಿ ಜಾರಿಯಲ್ಲಿರುವ ಪ್ರಧಾನ ಕಾನೂನುಗಳು ಯಾವುವು ಎಂಬುದನ್ನು ಮಕ್ಕಳು ಅರಿತುಕೊಳ್ಳಬೇಕು.

1930 1937 1955 1976

ಇದಕ್ಕಾಗಿ ಪಟ್ಟಿಯಲ್ಲಿ ನೀಡಿರುವ ವರ್ಷಗಳಲ್ಲಿ ನಿರ್ಮಿಸಿದ ಕಾನೂನುಗಳನ್ನು ಸೇರಿಸಿ ಪಟ್ಟಿ ತಯಾರಿಸಲು ಸಂದರ್ಭ ನೀಡುವುದು.

| ವರ್ಷಗಳು | ಕಾನೂನುಗಳು |
|---|---|
| 1930 | |
| 1937 | |
| 1955 | |
| 1976 | |

- ಬಳಕೆಗಾರರ ಆಸಕ್ತಿಗಳನ್ನು ಸಂರಕ್ಷಿಸಲು ವಿವಿಧ ಇಲಾಖೆಗಳು ಹಾಗೂ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತವೆ ಎಂಬುದನ್ನು ಪಾಠಭಾಗವು ಸ್ಪಷ್ಟಪಡಿಸುತ್ತದೆ. ಅವು ಯಾವುದೆಂದು ತಿಳಿಯಲು ಕೆಳಗೆ ನೀಡಿರುವ ಚಟುವಟಿಕೆಯನ್ನು ನೀಡಿರಿ.

ಬಳಕೆಗಾರ ಹಿತಾಸಕ್ತಿಗಳನ್ನು ಸಂರಕ್ಷಿಸುವುದಕ್ಕಾಗಿ ಕಾರ್ಯಾಚರಿಸುತ್ತಿರುವ ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಗುರುತಿಸಿ ಸಂಸ್ಥೆಗಳ ಹೆಸರನ್ನು ಬರೆದು ಪೂರ್ತಿಗೊಳಿಸಿರಿ.

| ಹೊಣೆಗಾರಿಕೆ | ಸಂಸ್ಥೆಗಳು |
|---|---|
| ಅಳತೆ ಮತ್ತು ತೂಕದ ನಿಖರತೆಯನ್ನು ಖಾತರಿಪಡಿಸುತ್ತದೆ. | |
| ಆಹಾರ ವಸ್ತುಗಳ ಗುಣಮಟ್ಟವನ್ನು ದೃಢಪಡಿಸುತ್ತದೆ. | |
| ಔಷಧಿಗಳ ಬೆಲೆಯನ್ನು ನಿಯಂತ್ರಿಸುತ್ತದೆ. | |
| ಔಷಧಿಗಳ ಗುಣಮಟ್ಟ ಮತ್ತು ಭದ್ರತೆಯನ್ನು ಖಾತರಿಪಡಿಸುತ್ತದೆ. | |
| ಉತ್ಪಾದನೆ, ವಿತರಣೆ, ದಾಸ್ತಾನು, ಮಾರಾಟ, ಆಮದು ಇತ್ಯಾದಿ ಹಂತಗಳಲ್ಲಿ ಆಹಾರ ವಸ್ತುಗಳ ಗುಣಮಟ್ಟವನ್ನು ದೃಢಪಡಿಸುತ್ತದೆ. | |

- ವಸ್ತುಗಳ ಮತ್ತು ಸಂಸ್ಥೆಗಳ ಗುಣಮಟ್ಟವನ್ನು ಮೌಲ್ಯಮಾಪನಕ್ಕೊಳಪಡಿಸಿ ಅದರ ಆಧಾರದಲ್ಲಿ ಕೆಲವು ಚಿಹ್ನೆಗಳನ್ನು ನೀಡಲಾಗುತ್ತಿದೆ. ಅವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಪಾಠಭಾಗದಲ್ಲಿ ನೀಡಲಾಗಿದೆ. ಇದರ ಆಧಾರದಲ್ಲಿ ಚರ್ಚೆ ನಡೆಸಬೇಕು. ಯಾವೆಲ್ಲಾ ಉತ್ಪನ್ನಗಳಲ್ಲಿ ಈ ರೀತಿಯ ಚಿಹ್ನೆಗಳನ್ನು ಕಂಡಿರುವರು ಎಂದು ಮಕ್ಕಳು ಹೇಳುವುದರೊಂದಿಗೆ ಅಧ್ಯಾಪಕರು ಉದಾಹರಣೆಗಳನ್ನು ಸೇರಿಸುವುದು.

**ಸಮಾಜದ ಹಸ್ತಕ್ಷೇಪ**

ಔಪಚಾರಿಕ ವ್ಯವಸ್ಥೆ ಮತ್ತು ಕಾನೂನುಗಳಿಂದ ಮಾತ್ರವೇ ಬಳಕೆಗಾರರ ತೃಪ್ತಿಯನ್ನು ಪೂರ್ಣವಾಗಿ ಖಾತರಿಪಡಿಸಲು ಸಾಧ್ಯವಿಲ್ಲ. ಜಾಗೃತಿಯಿಂದ ಕೂಡಿದ ಒಂದು ಸಮೂಹದ ಪಾಲ್ಗೊಳ್ಳುವಿಕೆಯು ಇದಕ್ಕೆ ಅತ್ಯಗತ್ಯವಾಗಿದೆ ಎಂದು ಪಾಠಭಾಗದಲ್ಲಿ ನಿರ್ದೇಶಿಸಲಾಗಿದೆ. ಯಾವೆಲ್ಲ ರೀತಿಯಲ್ಲಿ ಸಾಮಾಜಿಕ ಪಾಲ್ಗೊಳ್ಳುವಿಕೆ ಸಾಧ್ಯವೆಂಬುದನ್ನು ಚರ್ಚೆಯ ಮೂಲಕ ಕ್ರೋಡೀಕರಿಸಬೇಕು.

**ಗ್ರಾಹಕ ಶಿಕ್ಷಣ**

ಗ್ರಾಹಕ ಶಿಕ್ಷಣಕ್ಕೆ ಯಾವೆಲ್ಲ ಮಾರ್ಗಗಳನ್ನು ಉಪಯೋಗಿಸಬಹುದು. ಗ್ರಾಹಕ ಶಿಕ್ಷಣವು ಯಾವೆಲ್ಲ ವಿಧದಲ್ಲಿ ಬಳಕೆಗಾರರನ್ನು ಸಬಲಗೊಳಿಸುತ್ತದೆ ಎಂದು ಚರ್ಚೆಗಳ ಮೂಲಕ ಕ್ರೋಡೀಕರಿಸಬೇಕು.

ಗ್ರಾಹಕರಲ್ಲಿ ಪ್ರಜ್ಞೆಯನ್ನು ಮೂಡಿಸಿ ಜಾಗೃತಿ ಯನ್ನುಂಟು ಮಾಡಲು ಭಿತ್ತಿಪತ್ರಿಕೆಯನ್ನು ತಯಾರಿಸಲು ಮಕ್ಕಳಿಗೆ ನಿರ್ದೇಶಿಸಬೇಕು. ಭಿತ್ತಿ ಪತ್ರಿಕೆ ತಯಾರಿಸುವಾಗ ಗಮನಿಸಬೇಕಾದ ವಿಚಾರಗಳು.

- ಅನುಭವ ಟಿಪ್ಪಣಿಗಳು
- ಪತ್ರಿಕಾ ವಾರ್ತೆಗಳು
- ನ್ಯಾಯಾಲಯಗಳ ತೀರ್ಪುಗಳಿಗೆ ಸಂಬಂಧಿಸಿದ ವಾರ್ತೆಗಳು
- ಚಿತ್ರಗಳು
- 

## ? ಮೌಲ್ಯಮಾಪನ ಪ್ರಶ್ನೆಗಳು

- ಗ್ರಾಹಕರು ಯಾವೆಲ್ಲಾ ರೀತಿಯಾಗಿ ವಂಚನೆಗೊಳಗಾಗುತ್ತಾರೆ?
- 1986ರ ಗ್ರಾಹಕರ ಸಂರಕ್ಷಣಾ ಕಾನೂನಿನಲ್ಲಿರುವ ವ್ಯವಸ್ಥೆಗಳನ್ನು ಬರೆಯಿರಿ.
- ಜಿಲ್ಲಾ ಗ್ರಾಹಕ ವಿವಾದ ಪರಿಹಾರ ವೇದಿಕೆ, ರಾಜ್ಯಗ್ರಾಹಕ ವಿವಾದ ಪರಿಹಾರ ವೇದಿಕೆ ಮತ್ತು ರಾಷ್ಟ್ರೀಯ ಗ್ರಾಹಕ ವಿವಾದ ಪರಿಹಾರ ಕಮಿಷನ್‌ಗಳ ರಚನೆಯಲ್ಲಿನ ವ್ಯತ್ಯಾಸವನ್ನು ಬರೆಯಿರಿ.
- ಯಾವೆಲ್ಲಾ ಸಂದರ್ಭಗಳಲ್ಲಿ ಗ್ರಾಹಕ ವಿವಾದಗಳ ದೂರುಗಳನ್ನು ನೀಡಬಹುದು?
- ಕೆಳಗೆ ನೀಡಿರುವ ಸಂದರ್ಭಗಳಲ್ಲಿ ತೀರ್ಮಾನಗಳನ್ನು ಕೈಗೊಳ್ಳಲು ಅಧಿಕಾರವಿರುವ ಇಲಾಖೆ ಅಥವಾ ಸಂಸ್ಥೆಗಳು ಯಾವುವು?

  ಔಷಧಿಗಳ ಬೆಲೆಗಳನ್ನು ನಿಶ್ಚಯಿಸುವಲ್ಲಿ ಹಸ್ತಕ್ಷೇಪ ನಡೆಸುತ್ತದೆ.

  ಅಳತೆ ಮತ್ತು ತೂಕಗಳಲ್ಲಿ ಮೋಸ ಮಾಡುವ ಸಂದರ್ಭಗಳಲ್ಲಿ ಮಧ್ಯಪ್ರವೇಶಿಸುತ್ತದೆ.

  ಆಹಾರ ವಸ್ತುಗಳಲ್ಲಿ ಕಲಬೆರಕೆ ಮಾಡುವ ಸಂದರ್ಭಗಳಲ್ಲಿ ಹಸ್ತಕ್ಷೇಪ ನಡೆಸುತ್ತದೆ.